ತುಮಕೂರು ಜಿಲ್ಲೆಯ
ಕೋಟೆ-ಕೊತ್ತಲಗಳ [illegible]ದೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ [illegible]

ಸಂಶೋಧಕ

[illegible] ಮುದ್ದ [illegible]

ಮಾರ್ಗದರ್ಶಕರು

ಡಾ. ರಾ. ವೆಂಕಟೇಶ ಇಂದ್ವಾಡಿ

ಅಧ್ಯಾಪಕರು

ಕನ್ನಡ ಸಾಹಿತ್ಯಾಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೪

ತುಮಕೂರು ಜಿಲ್ಲೆಯ

ಕೋಟೆ-ಕೊತ್ತಲಗಳ ಜಾನಪದೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ

ಕೆ.ವಿ.ಮುದ್ದವೀರಪ್ಪ

ಮಾರ್ಗದರ್ಶಕರು

ಡಾ. ರಾ. ವೆಂಕಟೇಶ ಇಂದ್ವಾಡಿ

ಅಧ್ಯಾಪಕರು

ಕನ್ನಡ ಸಾಹಿತ್ಯಾಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೪

ಸಂಶೋಧಕರ ಪ್ರಮಾಣ ಪತ್ರ

ತುಮಕೂರು ಜಿಲ್ಲೆಯ ಕೋಟೆ-ಕೊತ್ತಲಗಳ ಜಾನಪದೀಯ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ರಾ. ವೆಂಕಟೇಶ್ ಇಂದ್ವಾಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

K.V. Mudd...

ಕೆ.ವಿ.ಮುದ್ದವೀರಪ್ಪ
ಸಂಶೋಧಕ
ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30.06.2004
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ಕೆ.ವಿ.ಮುದ್ದವೀರಪ್ಪ ಅವರು **ತುಮಕೂರು ಜಿಲ್ಲೆಯ ಕೋಟೆ-ಕೊತ್ತಲಗಳ ಜಾನಪದೀಯ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ರಾ.ವೆಂಕಟೇಶ್ ಇಂದ್ವಾಡಿ
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30.06.2004
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಪಿಎಚ್.ಡಿ.ಅಧ್ಯಯನ ಮಾಡಲು ವಿಶ್ವವಿದ್ಯಾಲಯದಲ್ಲಿ ಅವಕಾಶ ಮಾಡಿಕೊಟ್ಟ ಅಂದಿನ ಕುಲಪತಿಗಳಾದ ಡಾ.ಎಂ.ಎಂ.ಕಲಬುರ್ಗಿ ಅವರಿಗೆ, ಕುಲಸಚಿವರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಪ್ರೊ.ಹಿ.ಚಿ.ಬೋರಲಿಂಗಯ್ಯ ಅವರಿಗೆ ನಂತರ ಬಂದ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ,

ನನ್ನ ಪಿಎಚ್.ಡಿ.ಸಂಶೋಧನೆಗೆ ಮಾರ್ಗದರ್ಶಕರಾಗಿ ಸಲಹೆ ಸೂಚನೆಗಳನ್ನು ನೀಡಿ ಅಧ್ಯಯನದ ಅರಿವು ಹೆಚ್ಚಿಸಿದ ಡಾ.ರಾ.ವೆಂಕಟೇಶ್ ಇಂದ್ವಾಡಿಯವರಿಗೆ, ವಿಭಾಗದ ಮುಖ್ಯಸ್ಥರಾದ ಡಾ.ಅಮರೇಶ ನುಗಡೋಣಿ, ಡಾ.ರಹಮತ್ ತರೀಕೆರೆ, ಡಾ.ಬಿ.ಎಂ.ಪುಟ್ಟಯ್ಯ, ಡಾ.ಶಿವಾನಂದ ವಿರಕ್ತಮಠ ಅವರನ್ನು ಮತ್ತು ನನಗೆ ಆಡಳಿತಾತ್ಮಕವಾಗಿ ಸಹಕಾರ ನೀಡಿದ ವಿಭಾಗದ ಸಿಬ್ಬಂದಿಯವರಾದ ಶ್ರೀಮತಿ ಪಾರ್ವತಮ್ಮ, ಶ್ರೀ ಕೋಳೂರು ಶಿವಪ್ಪ, ಶ್ರೀ ಭೀಮೇಶ್, ಶ್ರೀ ಭೀಮಣ್ಣ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಾಗಿನಿಂದ ಪಿಎಚ್.ಡಿ. ಮಹಾಪ್ರಬಂಧ ಸಿದ್ಧಪಡಿಸುವವರೆಗೆ ಎಲ್ಲಾ ಹಂತದಲ್ಲೂ ನನಗೆ ಸಲಹೆ, ಸಹಕಾರ ನೀಡುತ್ತಾ ಸಹೋದರ ಪ್ರೀತಿಯನ್ನು ತೋರಿಸಿದ ಶ್ರೀ ರಾಜಪ್ಪ ದಳವಾಯಿ, ಶ್ರೀಮತಿ ಮಂಜುಳ ದಳವಾಯಿ ಅವರಿಗೆ ಹಾಗೂ ಅವರ ಮನೆಯವರಿಗೆಲ್ಲರಿಗೂ ನಾನು ಯಾವತ್ತೂ ಚಿರಋಣಿ.

ಅಧ್ಯಯನ ಕುರಿತು ಚರ್ಚಿಸಿದಾಗಲೆಲ್ಲ ಸೂಕ್ತ ಸಲಹೆಗಳನ್ನು ನೀಡಿದ ಪ್ರೊ.ಬರಗೂರು ರಾಮಚಂದ್ರಪ್ಪ, ಪ್ರೊ.ಕಿ.ರಂ.ನಾಗರಾಜ, ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಡಾ.ಸಿ.ಬಿ.ಹೊನ್ನಯ್ಯ, ಶ್ರೀ ಕೃಷ್ಣನಾಯಕ, ಶ್ರೀ ವೆಂಕಟರೆಡ್ಡಿ ರಾಮರೆಡ್ಡಿ, ಡಾ.ಕೆ.ಎಲ್.ಎನ್.ಮೂರ್ತಿ, ಶ್ರೀ ಶೇಖರ್ ಅವರುಗಳಿಗೆ,

ಪ್ರೀತಿಯಿಂದ ಸಹೋದರನಂತೆ ಕಂಡು ನನ್ನ ಅಧ್ಯಯನದ ಸಂದರ್ಭದಲ್ಲಿ ಸಹಕರಿಸಿದ ಡಾ.ಕೇಶವನ್ ಪ್ರಸಾದ್, ಶ್ರೀ ಸುಜ್ಞಾನಮೂರ್ತಿ, ಶ್ರೀ ಕೆ.ಕೆ.ಮಕಾಳಿ ಹಾಗೂ ಅವರ ಮನೆಯವರಿಗೆ, ಹಾಗೂ ಅತ್ಯಂತ ಪ್ರೀತಿಯಿಂದ ಕಂಡ ಕಮಲಾಪುರದ ಅಗಸರ ನಾಗೇಶಪ್ಪ ಮತ್ತು ಮನೆಯವರಿಗೆ,

ಅಧ್ಯಯನ ಕುರಿತು ಚರ್ಚಿಸಿದಾಗಲೆಲ್ಲ ಹೊಸ ಹೊಸ ಹೊಳವುಗಳನ್ನು ಕೊಟ್ಟು, ಬರವಣಿಗೆಗೆ ಸಹಕರಿಸಿದ ಪ್ರೊ.ಲಕ್ಷ್ಮಣ್ ತೆಲಗಾವಿ, ಡಾ.ಮೊಗಳ್ಳಿ ಗಣೇಶ್, ಡಾ.ಪರಮಶಿವಮೂರ್ತಿ, ಡಾ.ರವೀಂದ್ರ ನಾಥ್, ಡಾ.ಎಫ್.ಟಿ.ಹಳ್ಳಿಕೆರೆ, ಶ್ರೀ ಎ.ಎಸ್.ಪ್ರಭಾಕರ್, ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಡಾ.ಚಲುವರಾಜು, ಶ್ರೀ ಎ.ಶ್ರೀಧರ್, ಡಾ.ಮಾಧವ ಪೆರಾಜೆ, ಡಾ.ಸುಬ್ಬಣ್ಣ ರೈ ಅವರುಗಳಿಗೆ,

ನನ್ನ ಅಧ್ಯಯನಕ್ಕೆ ಪೂರಕ ಗ್ರಂಥ ಹಾಗೂ ಮಾಹಿತಿಗಳನ್ನು ಒದಗಿಸಿ ಸಹಕರಿಸಿದ ಗ್ರಂಥಾಲಯದ ಡಾ.ರಾಧಾಕೃಷ್ಣ, ಡಾ.ಎಚ್.ನಾಗವೇಣಿ, ಮಲ್ಲಿಕಾರ್ಜುನ, ಗುಡಿಮನಿ, ಸುಹಾಸ್ ಹಾಗೂ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೆ,

ಅಧ್ಯಯನ ಸಂದರ್ಭದಲ್ಲಿ ಆಡಳಿತಾತ್ಮಕವಾಗಿ ಸಹಕರಿಸಿದ ಡಾ.ಪ್ರೇಮಕುಮಾರ್, ಡಾ.ಎ.ವೆಂಕಟೇಶ್, ಡಿ.ವಿ.ಪ್ರಕಾಶ್, ವಿಜಯೇಂದ್ರ, ಶಿವಕುಮಾರ, ಗ್ಯಾನಪ್ಪ ಬಡಿಗೇರ, ಮಗಡೇರ ಹನುಮಂತಪ್ಪ, ಶಂಕರ್, ಗಾದಿಲಿಂಗಪ್ಪ, ನಾರಾಯಣ್‌ನಾಯಕ್, ಬೋರಯ್ಯ ಅವರುಗಳಿಗೆ ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿ ವರ್ಗದವರಿಗೆ,

ಗೆಳೆಯರಾದ ಸತೀಶ್ ಪಾಟೀಲ, ಎಚ್.ಎಂ.ಮಲ್ಲಿನಾಥ್, ಡಾ.ಮಾರುತಿ, ಡಾ.ಉಮೇಶ್, ಮುತ್ತು, ಡಾ. ಯರ್ರಿಸ್ವಾಮಿ, ಡಾ.ದುರುಗಪ್ಪ, ಡಾ.ಸಿದ್ದಪ್ಪ, ಡಾ.ಕರಿಬಸಪ್ಪ, ಡಾ.ದೇವೇಂದ್ರಪ್ಪ, ಡಾ.ಮಹೇಶ ಹಾಗೂ ತುಮಕೂರಿನ ಗೆಳೆಯರಾದ ಡಾ.ಕೆ.ನಾಗಭೂಷಣ್, ಮಹಮದ್ ಫಯಾಜ್, ತಂಬ್ಡಿಹಳ್ಳಿ ಕೃಷ್ಣಮೂರ್ತಿ, ರವಿಕುಮಾರ್‌ನೀಹ, ಒಗ್ಗನಡು ನಾಗಭೂಷಣ, ಶಿವಪ್ರಕಾಶ್, ಗಂಗಭೈರಯ್ಯ ಹನುಮಂತರಾಯ ಜಿ. ಪಿ.ಜಿ.ಹನುಮಂತರಾಯಪ್ಪ, ತಿಪ್ಪೇಸ್ವಾಮಿ, ಮುಕುಂದ, ಗಂಗಾಧರ, ಈಶ್ವರಯ್ಯ, ಪೋಲಿಸ್ ಮಂಜುನಾಥ, ತಿಮ್ಮಯ್ಯ, ಹೆಚ್.ಲಿಂಗಣ್ಣ, ಅರುಣ್ ಅವರುಗಳಿಗೆ, ಗೆಳತಿಯರಾದ ಶ್ರೀಮತಿ ಲಾವಣ್ಯ, ರತ್ನಮಂಜರಿ, ಪಾವಗಡದ ಜಯಲಕ್ಷ್ಮಿ, ಉಷಾರಾಣಿ ಎಂ. ಅವರಿಗೆ,

ನನ್ನ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಸಲಹೆ ಸೂಚನೆಗಳನ್ನು ನೀಡಿದ ಪಾವಗಡದ ಶ್ರೀ ಚಲುವರಾಜನ್, ಶ್ರೀ ಸಣ್ಣನಾಗಪ್ಪ, ಡಾ.ಯೋಗೀಶ್ವರಪ್ಪ, ಡಾ.ಅರುಣಿ, ಡಾ.ಚಿತ್ತಯ್ಯ ಪೂಜಾರ್ ಅವರಿಗೆ ಹಾಗೂ ಮಾಹಿತಿ ನೀಡಿದ ತುಮಕೂರಿನ ಜಿಲ್ಲೆಯ ವಕ್ತೃ ಸಮಸ್ತರಿಗೆ,

ಕುಟುಂಬ ನಿರ್ವಹಣೆಯ ಕಷ್ಟದ ದಿನಗಳಲ್ಲಿಯೂ ನನ್ನ ಅಧ್ಯಯನಕ್ಕೆ ಯಾವುದೇ ಕೊರತೆಯಾಗದಂತೆ ನೋಡಿಕೊಂಡ ನನ್ನ ತಂದೆ ವೀರಣ್ಣ ತಾಯಿ ತಿಮ್ಮಕ್ಕ, ಚಿಕ್ಕಪ್ಪ ದೊಡ್ಡಣ್ಣ, ಅಣ್ಣಂದಿರಾದ ವೀರನಾಗಪ್ಪ, ನಾಗರಾಜು ಅತ್ತಿಗೆಯರಾದ ಮುದ್ದೀರಮ್ಮ, ಲಲಿತಮ್ಮ ಅವರಿಗೆ ಹಾಗೂ ನನ್ನನ್ನು ಪ್ರೀತಿಯಿಂದ ಕಾಣುವ ಅತ್ತೆ ಮಾವಂದಿರಿಗೆ,


ನನ್ನ ಎಲ್ಲಾ ಕೆಲಸಗಳಿಗೆ ಸ್ನೇಹಪೂರ್ವಕವಾಗಿ ಸಹಕರಿಸಿದ ಪ್ರೀತಿಯ ಪತ್ನಿ ಪವಿತ್ರ ಮಾಲಾರವರಿಗೆ, ಅತ್ತೆ ಕಮಲಮ್ಮ, ಮಾವ ನಾರಾಯಣ್, ಲೀಲಾ-ನಾಗಾರಜ್, ಮೋಹನ್, ದಿಲೀಪ್ ಅವರಿಗೆ ಹಾಗೂ ಸ್ನೇಹಿತರಾದ ಸಿದ್ಧಗಂಗಮ್ಮ-ನಾಗರಾಜ್‌ರವರಿಗೆ ಪುಟಾಣಿಗಳಾದ ಕಲಾ, ಗೌಡ, ಶಿಲ್ಪಾ ಜಯಂತ್, ಮನು, ಧ್ರುವ, ನಂದನ್‌ರಿಗೆ

ಪಿಎಚ್.ಡಿ. ಮಹಾಪ್ರಬಂಧವನ್ನು ಸಹನೆಯಿಂದ ಅಕ್ಷರ ಸಂಯೋಜಿಸಿ ಕೊಟ್ಟ ಶ್ರೀಮತಿ ರಶ್ಮಿಕೃಪಾಶಂಕರ್ ದಂಪತಿಗಳಿಗೆ ಹಾಗೂ ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ

ಕೃತಜ್ಞತೆಗಳು

ಕೆ.ವಿ.ಮುದ್ದವೀರಪ್ಪ

ಪರಿವಿಡಿ



1. ನಿಡುಗಲ್ಲು
2. ಪಾವಗಡ
3. ಯಲ್ಲಪ್ಪನಾಯಕನ ಹೊಸಕೋಟೆ
4. ಬಂಗಾರನಾಯಕನ ದುರ್ಗ
5. ದೇವರಬೆಟ್ಟ
6. ಸಿದ್ದಾಪುರ
7. ಬಿಜ್ಜಾವರ
8. ಮಧುಗಿರಿ
9. ಮಿಡಿಗೇಶಿ
10. ಚನ್ನರಾಯನ ದುರ್ಗ
11. ಭಸ್ಮಾಂಗಿ
12. ಕೊರಟಗೆರೆ
13. ಸಿರಾ
14. ದೇವರಾಯನ ದುರ್ಗ
15. ಹಾಗಲವಾಡಿ
16. ಚೇಳೂರು
17. ಚಿಕ್ಕನಾಯಕನಹಳ್ಳಿ
18. ಹುಲಿಯೂರು ದುರ್ಗ
19. ಹುತ್ರಿ ದುರ್ಗ

◎ ಜಿಲ್ಲಾ ಕೇಂದ್ರ
● ತಾಲ್ಲೂಕು ಕೇಂದ್ರ
▲ ಗಿರಿದುರ್ಗ
□ ನೆಲದುರ್ಗ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ಪದ್ಧತಿ ಪ್ರಭಾವದಿಂದ ನಮ್ಮ ಪ್ರಾಚೀನ 'ಜ್ಞಾನ ಮಾದರಿ'ಗಳನ್ನು ವ್ಯಾಖ್ಯಾನಕ್ಕೆ ಒಳಪಡಿಸಿ, 'ರಾಷ್ಟ್ರೀಯ ಚರಿತ್ರೆ'ಯನ್ನು ಪುನರ್‌ರಚಿಸುವ ಪ್ರಯತ್ನಗಳು ನಡೆದವು. ಆದರೆ ಚರಿತ್ರೆಯ ಈ ತರದ ಪುನರ್‌ರಚನೆಗೆ ಬ್ರಿಟಿಷರು ಲಿಖಿತವಾದದ್ದೇ ಅಧಿಕೃತ ಎಂಬ ಗ್ರಹಿಕೆಯನ್ನು ಒಳಗೊಂಡಿದ್ದರು. ಈ ತರದ ತೀರ್ಮಾನಕ್ಕೆ ಬರಲು ಅದರದೇ ಆದ ಚರಿತ್ರೆಯಿದೆ. ಸ್ವತಂತ್ರಪೂರ್ವದಲ್ಲಿ ದೇಶೀಯ ರಾಜರು ಹಾಗೂ ಪುರೋಹಿತಶಾಹಿಗಳು ಸಂಸ್ಕೃತಿ ನಿರ್ಮಾಣಕ್ಕೆ ಬರಹ ಪರಂಪರೆಯನ್ನೇ ಅವಲಂಬಿಸಿದ್ದರು. ದೇಶೀ ಪ್ರಭುತ್ವ ಹಾಗೂ ಬ್ರಿಟಿಷ್ ಪ್ರಭುತ್ವ ಬರಹ ಪರಂಪರೆಗೆ ಮಾತ್ರ ಹೆಚ್ಚಿನ ಆದ್ಯತೆ ಕೊಟ್ಟಿತು. ಬ್ರಿಟಿಷರು ತಮ್ಮ ಆಡಳಿತವನ್ನು ನಡೆಸಲು ಕೋರ್ಟ್, ಕಚೇರಿ, ಅಂಚೆ, ರೈಲ್ವೆ ಮುಂತಾದ ಆಧುನಿಕ ಶಾಖೆಗಳನ್ನು ಉತ್ಪನ್ನ ಮಾಡಿ ಹೊಸ ನೌಕರಶಾಹಿ ವರ್ಗವನ್ನು ಹುಟ್ಟು ಹಾಕಿದರು. ಈ ವರ್ಗದಲ್ಲಿ ಮೇಲ್ವರ್ಗದವರ ಸಂಖ್ಯೆ ಅಧಿಕವಾಯಿತು. ಸಮಗ್ರ ಭಾರತದ ಸಂಸ್ಕೃತಿಯ ಅರ್ಥೈಸುವಿಕೆಯಲ್ಲಿ ಮೌಖಿಕ ಧಾರೆಗಳನ್ನು ಪ್ರಧಾನ ನೆಲೆಗೆ ತಂದು ನಿರ್ವಚಿಸುವಲ್ಲಿ ಮೊದಲಿಗೆ ಪ್ರಯತ್ನಿಸಿದವರು ಬ್ರಿಟಿಷರೇ. ಆದರೆ ಇದು ಸಮರ್ಥವಾಗಿ ಬೆಳೆಯಲು ಅಧಿಕಾರಿ, ನೌಕರಶಾಹಿಗಳಿಂದ ಹೆಚ್ಚಿನ ಪ್ರೋತ್ಸಾಹ ಸಿಗಲಿಲ್ಲ. ನಮ್ಮ ಕಾಲದ ಬಹುದೊಡ್ಡ ಒತ್ತಡವೆಂದರೆ, ಈ ಮೌಖಿಕ ಹಾಗೂ ಬರಹ ಪರಂಪರೆಗಳಲ್ಲಿ ಉಂಟಾಗಿರುವ ಕಂದಕಗಳನ್ನು ಹೊಡೆದು ಹಾಕುವುದು. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಜನಪದೀಯ ಅಧ್ಯಯನಗಳಿಗೆ ಹೆಚ್ಚಿನ ಮಹತ್ವ ಒದಗಿ ಬಂದಿದೆ. ಚರಿತ್ರೆಯೆಂದರೆ ರಾಜ ಮಹಾರಾಜರ ಆಳ್ವಿಕೆಗಳು, ಅವರು ಸೃಷ್ಟಿಸಿದ ಬರಹ ಉತ್ಪನ್ನಗಳು(ಶಾಸನ, ನಾಣ್ಯ, ಹಸ್ತಪ್ರತಿ, ವಿದೇಶಿ ಬರಹಗಳು, ಸಾಹಿತ್ಯದ ಬರಹಗಳು) ಮುಂತಾದವಷ್ಟೇ ಅಲ್ಲ, ಜನಸಮುದಾಯಗಳು ಸೃಷ್ಟಿಸಿರುವ ಪುರಾಣ, ದಂತಕಥೆ, ಐತಿಹ್ಯ, ಆಚರಣೆಗಳ ಮೂಲಕವೂ ಒಂದು ಇತಿಹಾಸವನ್ನು ರಚಿಸಬೇಕಿದೆ. ಅದರಿಂದ ಭಾರತದ ಇತಿಹಾಸವೆಂದರೆ ಇವೆರಡೂ ಧಾರೆಗಳನ್ನು ಪರಿಶೀಲಿಸುವ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ೧೯ನೇ ಶತಮಾನದ ಪ್ರಾರಂಭದಲ್ಲಿ ಜನಪದ ಅಧ್ಯಯನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ಮೂಲತಃ ಭಾರತದಲ್ಲಿ ಜಾನಪದ ಅಧ್ಯಯನಕ್ಕೆ ಪ್ರಾರಂಭದಲ್ಲಿ ನಾಂದಿ ಹಾಡಿದವರು ಬ್ರಿಟೀಷರೇ. ಈ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಅವರು ಬ್ರಿಟಿಷ್ ಮೂಲದ ಶಿಕ್ಷಣ ತಜ್ಞರನ್ನು ಭಾರತ ಮತ್ತು ಕರ್ನಾಟಕಕ್ಕೆ ಕಳುಹಿಸಿಕೊಟ್ಟರು. ಇವರ ಜೊತೆಯಲ್ಲಿ ಜರ್ಮನ್ ಮಿಷನರಿಯ ಅಧಿಕಾರಿಗಳು ಸೇರಿದ್ದಾರೆ. ಅಂತವರಲ್ಲಿ ಕಿಟೆಲ್, ಕರ್ನಲ್ ಮೆಕೆಂಜೆ, ಜಾನ್ ಲೇಡನ್, ಚಾರ್ಲ್‌ಗೋವರ್,

ಅಬೆದುಬಾಯ್, ಫ್ರಾನ್ಸಿಸ್ ಬುಖಾನನ್, ಜಾನ್‌ಫ್ಲೀಟ್, ಪೋಗ್ಲಿಂಗ್ ಮುಂತಾದವರು ಕರ್ನಾಟಕದಲ್ಲಿ ಮೌಖಿಕ ಮತ್ತು ಬರಹ ಪರಂಪರೆಯ ಆಕರಗಳನ್ನು ಶೋಧಿಸಲು ಪ್ರಾರಂಭಿಸಿದರು. ಈ ಪ್ರಯತ್ನದ ಫಲವಾಗಿ ಜಾನಪದ ಒಂದು ಅಧ್ಯಯನ ಶಿಸ್ತಾಗಿ ಪರಿಚಯವಾದರೂ ಅದೊಂದು ಸ್ವರೂಪ ಪಡೆದುಕೊಳ್ಳುವುದಕ್ಕೆ ತುಂಬಾ ತಡವಾಯಿತು. ಈಗಲೂ ಕರ್ನಾಟಕದಲ್ಲಿ ಜಾನಪದ ವಿಷಯಗಳಿಗೆ ಸಂಬಂಧಿಸದಂತೆ ಸಂಪೂರ್ಣ ಮಾಹಿತಿಗಳ ಸಂಗ್ರಹವೇ ನಡೆದಿಲ್ಲ. ಕರ್ನಾಟಕದ ಹೊಸ ಕಾಲದ ಜಾನಪದ ವಿದ್ವಾಂಸರು ಈ ಕ್ಷೇತ್ರದಲ್ಲಿ ಮಾಹಿತಿ ಸಂಗ್ರಹಣೆಗೆ ಹೆಚ್ಚಿನ ಆದ್ಯತೆ ಕೊಟ್ಟರು. ಇದೂವರೆಗೂ ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಆಗಿರುವ ಹೆಚ್ಚು ಅಧ್ಯಯನಗಳು ಮಾಹಿತಿ ಸಂಗ್ರಹಣೆಯ ಹಂತದಲ್ಲಿಯೇ ಇವೆ. ಈ ಮಾಹಿತಿಗಳಿಗೆ ಒಂದು ತಾತ್ವಿಕವಾದ ಚೌಕಟ್ಟನ್ನು ಕೊಟ್ಟು ವಿಶ್ಲೇಷಿಸುವುದು ಇಂದಿನ ಕಾಲದ ಒತ್ತಡವಾಗಿದೆ. ಚರಿತ್ರೆ ನಿರ್ಮಾಣದಲ್ಲಿ ಸಾಮ್ರಾಜ್ಯಗಳ ಹಾಗೂ ಪ್ರಬಲವಾದ ರಾಜರುಗಳ ಆಡಳಿತ ವಿಧಾನವನ್ನೇ ಮುಖ್ಯವಾಗಿ ಗಮನಕ್ಕೆ ತಂದುಕೊಳ್ಳಲಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕರ್ನಾಟಕದಲ್ಲಿ ಒಂದು ಅಖಂಡ ಸಾಮ್ರಾಜ್ಯದ ಪರಿಕಲ್ಪನೆ ಬಿದ್ದು ಹೋಗಿದೆ. ಚರಿತ್ರೆಯೆಂದರೆ ವಿಜಯನಗರದ ನಂತರ ರಾಜರುಗಳಾದ ಕೆಳದಿ ಮತ್ತು ಮೈಸೂರು ಸಂಸ್ಥಾನದ ಟಿಪ್ಪುವಿನ ಆಡಳಿತವನ್ನಷ್ಟೇ ಗಮನಿಸುತ್ತೇವೆ. ಆದರೆ ವಿಜಯನಗರದ ಪತನದ ನಂತರ ಅಧಿಕಾರದ ವಿಕೇಂದ್ರೀಕರಣವುಂಟಾಗಿ ವಿಜಯನಗರಕ್ಕೆ ಅಧೀನವಾಗಿದ್ದ ಅನೇಕ ಪಾಳೆಯಪಟ್ಟುಗಳು, ಸಂಸ್ಥಾನಗಳು ನಡೆಸಿದ ಆಡಳಿತದ ಬಗ್ಗೆ ಮತ್ತು ಅವರು ಸೃಷ್ಟಿಸಿದ ಉತ್ಪನ್ನಗಳ ಬಗ್ಗೆ ನಮ್ಮಲ್ಲಿ ಹೆಚ್ಚಿನ ತಿಳಿವಳಿಕೆ ಇಲ್ಲ. ಪ್ರಸ್ತುತ ಅಧ್ಯಯನದಲ್ಲಿ ಕೋಟೆ ಕೊತ್ತಲಗಳನ್ನೇ ಮುಖ್ಯವಾಗಿಸಿಕೊಳ್ಳುವಲ್ಲಿ ಈ ಕಾಲದ ಒತ್ತಡಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಉಳಿದೆಲ್ಲ ರಾಜ ಮಹಾರಾಜರುಗಳಿಗಿಂತ ಪಾಳೇಗಾರರು ಹೆಚ್ಚು ಜನಸಮುದಾಯದ ಸಂಬಂಧಗಳನ್ನು ಹೊಂದಿದ್ದವು. ವಿಜಯನಗರ ಸಾಮ್ರಾಜ್ಯ ಎಷ್ಟೇ ಪ್ರಬಲವಾದ ಸಾಮ್ರಾಜ್ಯವೆಂದು ಚರಿತ್ರೆಕಾರರು ಹೇಳಿದರೂ ಅಲ್ಲಿರುವ ಯಾವ ರಾಜನ ಮೇಲೂ ಸಣ್ಣ ಕಥನವಿಲ್ಲ. ಸಣ್ಣ ಸಾಮಂತನಾದ ಮತ್ತು ಜನಸಾಮಾನ್ಯರಿಗೆ ಹತ್ತಿರವಿದ್ದ ಕುಮಾರರಾಮನ ಬಗ್ಗೆ ಕಾವ್ಯಗಳು ಸೃಷ್ಟಿಯಾಗಿವೆ. ಇಲ್ಲಿ ಮುಖ್ಯವಾಗಿ ಕಂಡುಬರುವ ಸಂಗತಿಯೇನೆಂದರೆ ಪ್ರಭುತ್ವ ಜನಸಮುದಾಯಕ್ಕೆ ಹತ್ತಿರ ಇದ್ದಾಗ ಸಮುದಾಯಗಳು ತಮ್ಮ ಅಭಿವ್ಯಕ್ತಿ ಮಾಧ್ಯಮಗಳ ಮೂಲಕ ಆಯಾ ಪ್ರಭುತ್ವವನ್ನು ಗಮನಿಸಿದೆ. ಆ ಮೂಲಕ ಅವುಗಳು ಒಂದು ಚರಿತ್ರೆಯನ್ನು ನಿರ್ಮಾಣ ಮಾಡಿವೆ. ಪ್ರಸ್ತುತ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಕೋಟೆ ಕೊತ್ತಲುಗಳಲ್ಲಿ ಅಥವಾ ಆ ಕಾಲದ ಪಾಳೇಗಾರರ ಪ್ರಭುತ್ವದ ಬಗ್ಗೆ ಜನಪದರ ಗ್ರಹಿಕೆಗಳೇನು? ಎಂಬುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಜಾನಪದ ಅಧ್ಯಯನವು ಯಾವುದೋ ಒಬ್ಬ ವ್ಯಕ್ತಿಯನ್ನು ಕುರಿತ ರಚನೆಯಾಗಿರುವುದಿಲ್ಲ. ಅದು ಸಮಷ್ಟಿಯ ರಚನೆಯನ್ನು ಒಳಗೊಂಡಿರುತ್ತದೆ. ಜನಪದ ಸಾಹಿತ್ಯವು ವ್ಯಕ್ತಿಯ ಸೃಷ್ಟಿಯಾದರೂ

ಅದರೊಳಗೆ ಸಮಷ್ಟಿಯು ಸೇರಿರುತ್ತದೆ. ಜಾನಪದ ಅಧ್ಯಯನ ಮಾಡುವಾಗ ಸಮುದಾಯಗಳ ಪರಿಸರ, ಸಂದರ್ಭ ಮತ್ತು ಅರ್ಥ ಇವು ಬಹಳ ಮುಖ್ಯವಾಗಿರುತ್ತವೆ. ಜೊತೆಗೆ ಪರಂಪರಾಗತ ವ್ಯವಸ್ಥೆಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಅಧ್ಯಯನದ ಸಂದರ್ಭದಲ್ಲಿ ನೋಡಬೇಕಾಗುತ್ತದೆ. ಒಂದು ಸಾಂಸ್ಕೃತಿಕ ಸಮುದಾಯದ ಪರಂಪರೆಯ ನೆಲೆಯುಳ್ಳ ಸೃಷ್ಟಿಗಳು ಆ ಸಮುದಾಯವು ಹೊತ್ತಿರುವ ನಿರೀಕ್ಷೆಗಳ ಸುತ್ತ ನಿರ್ಮಾಣಗೊಂಡಿರುತ್ತವೆ. ಈ ಸಮುದಾಯಗಳ ನಿರೀಕ್ಷೆಗಳನ್ನು ಜಾನಪದವು ಕೇಂದ್ರವಾಗಿಟ್ಟುಕೊಂಡು ಅಧ್ಯಯನಗಳನ್ನು ಮಾಡಬೇಕಾಗಿರುವುದು ಇಂದಿನ ಮುಖ್ಯ ಸವಾಲಾಗಿದೆ. ಈಗಿರುವ ಜನಸಮುದಾಯದ ದೃಷ್ಟಿಕೋನದ ಮೂಲಕ ಮತ್ತು ಕ್ರಿಯಾತ್ಮಕತೆಯ ಮೂಲಕ ಆ ಜನಸಮುದಾಯದ ಅನನ್ಯತೆಯನ್ನು ಮತ್ತು ಅದರ ಮೌಲ್ಯಗಳನ್ನು ಗುರುತಿಸುವುದು, ಅರ್ಥಮಾಡಿ ಕೊಳ್ಳುವುದು ಇಂದಿನ ಅಧ್ಯಯನಗಳ ಮುಖ್ಯ ಉದ್ದೇಶವಾಗಿದೆ.

ಇತ್ತೀಚಿನ ಜಾನಪದ ಅಧ್ಯಯನವು ಏಕ ಮಾದರಿಯ ಅಧ್ಯಯನವಾಗಿರದೇ ಹಲವು ಮಾದರಿಗಳ ಅಧ್ಯಯನಗಳನ್ನು ಒಳಗೊಂಡಂತೆ ಅಂತರಶಿಸ್ತೀಯ ಅಧ್ಯಯನ ಮಾದರಿಯಾಗಿ ರೂಪುಗೊಂಡಿರುವುದು ಕಾಣಬಹುದು. ಈ ಅಧ್ಯಯನವು ಅನ್ಯಜ್ಞಾನಶಿಸ್ತುಗಳ ಜೊತೆಯಲ್ಲಿ ಗುರುತಿಸಿಕೊಂಡು ಎಲ್ಲಾ ಶಾಸ್ತ್ರಗಳ ಮೂಲ ನೆಲೆಯಾಗಿ ತನ್ನ ಮಹತ್ವವನ್ನು ಹೆಚ್ಚಿಸಿಕೊಂಡಿದೆ ಎನ್ನಬಹುದು. ಹೀಗಾಗಿ ಜಾನಪದವೆಂಬುದು ಮೌಖಿಕ ಮೂಲದ ಸಾಹಿತ್ಯ ರೂಪಗಳಿಗೆ ಮಾತ್ರ ಸೀಮಿತಗೊಳ್ಳದೆ ಮಾನವ ಸಂಸ್ಕೃತಿಯ ಸಮಸ್ತ ಸ್ತರಗಳಲ್ಲೂ ಪರಿಚಯಿಸಲ್ಪಟ್ಟು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಆದ್ದರಿಂದ ಜಾನಪದ ಅಧ್ಯಯನದ ಅನನ್ಯತೆಯನ್ನು ಗುರುತಿಸಲು ಒಂದು ಸೀಮಿತ ಚೌಕಟ್ಟಿಗೆ ಒಳಪಡಿಸಿಕೊಳ್ಳದೆ ಸಮಗ್ರ ನೆಲೆಯಲ್ಲಿ ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮೌಖಿಕ ಸಾಹಿತ್ಯವೆಂದರೆ ಕೇವಲ ಗೀತೆಗಳ ಸಾಹಿತ್ಯವೆನ್ನುವ ಸಂಕುಚಿತ ಮನೋಭಾವ ತೊಡೆದು ಹಾಕಿ, ಇಡೀ ಮಾನವ ಸಂಸ್ಕೃತಿಯ ಅಧ್ಯಯನವೇ ಜಾನಪದ ಅಧ್ಯಯನವೆನ್ನುವ ವಿಶಾಲ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ.

ಚರಿತ್ರೆಯನ್ನು ಕಟ್ಟುವಲ್ಲಿ ಲಿಖಿತ ಮೂಲ ಆಧಾರಗಳೊಂದಿಗೆ ಭೌತಿಕ ವಸ್ತುಗಳನ್ನೇ ಆಶ್ರಯಿಸಿರುವ ಚರಿತ್ರಾಕಾರರು ಮೌಖಿಕ ಆಕರಗಳ ಕಡೆಗೆ ಗಮನಹರಿಸುವುದು ಕಂಡುಬರುವುದಿಲ್ಲ. ಉಳಿದೆಲ್ಲಾ ಆಕರಗಳಿಂದ ಇತಿಹಾಸದ ಕೆಲವು ಸಂಗತಿಗಳು ಹೊರಬೀಳದೆ ಮೌನವಾದಲ್ಲಿ ಮೌಖಿಕ ಪರಂಪರೆಯು ನೆರವಿಗೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ಪ್ರಾದೇಶಿಕ ಅಥವಾ ಸ್ಥಳೀಯ ಚರಿತ್ರೆ ಮತ್ತು ಕೆಳವರ್ಗಗಳ ಚರಿತ್ರೆಯ ರಚನೆಗೆ ಮೌಖಿಕ ಚರಿತ್ರೆಯು ಪ್ರಮುಖ ಆಕರವಾಗುತ್ತದೆಂಬುದು ಗಮನಾರ್ಹ ಸಂಗತಿಯಾಗಿದೆ. ಆ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ಜಾನಪದೀಯ ಅಧ್ಯಯನಕ್ಕೆ ಮೌಖಿಕ, ಸ್ಥಳೀಯ ಚರಿತ್ರೆಯನ್ನೇ ಗಂಭೀರವಾಗಿ ಗಮನಿಸಲಾಗಿದೆ.

ಪ್ರಸ್ತುತ ಅಧ್ಯಯನವು ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಜಾನಪದೀಯ ಅಧ್ಯಯನವಾಗಿರುವುದರಿಂದ ಇಲ್ಲಿನ ರಾಜಕೀಯ ಇತಿಹಾಸವನ್ನು ತಿಳಿಯುವುದು ಅಗತ್ಯವಾಗಿದೆ. ತುಮಕೂರು ಜಿಲ್ಲೆಯ ಪ್ರದೇಶವು ಇತಿಹಾಸಪೂರ್ವಕಾಲದಿಂದಲೂ ವಸತಿ ತಾಣಗಳನ್ನು ಹೊಂದಿತ್ತೆಂದು ಹಲವಾರು ವಿದ್ವಾಂಸರು ದೃಢಪಡಿಸಿದ್ದಾರೆ. ತುಮಕೂರು ಜಿಲ್ಲೆಯ ಇತಿಹಾಸವನ್ನು ಎರಡು ರೀತಿ ವಿಂಗಡಿಸಬಹುದು. ಒಂದು ಹೊರಗಿನಿಂದ ಆಳ್ವಿಕೆ ಮಾಡಿದ ರಾಜಮನೆತನಗಳ ಇತಿಹಾಸ. ಇನ್ನೊಂದು ಪಾಳೆಯಪಟ್ಟುಗಳ ಆಳ್ವಿಕೆಯ ಇತಿಹಾಸ. ಈ ಎರಡು ವಿಚಾರವು ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದಲ್ಲಿನ ಕುರಿತ ಇತಿಹಾಸವನ್ನು ಒಳಗೊಂಡಿವೆ. ಎರಡು ಕಾಲದಲ್ಲಿಯೂ ಕೋಟೆಕೊತ್ತಲಗಳು ನಿರ್ಮಾಣಗೊಂಡಿವೆ. ಈ ಹಿನ್ನೆಲೆಯಲ್ಲಿ ಆ ಕಾಲದ ರಾಜಕೀಯ ಇತಿಹಾಸ ತಿಳಿಯುವುದು ಮುಖ್ಯವಾಗಿದೆ.

ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚೆ ತುಮಕೂರು ಜಿಲ್ಲೆಯಲ್ಲಿ ನೊಳಂಬರು, ಗಂಗರು, ಚೋಳರು, ಹೊಯ್ಸಳರು ಹಲವು ವರ್ಷಗಳ ಕಾಲ ಬಹುಭಾಗ ಪ್ರದೇಶವನ್ನು ತಮ್ಮ ಆಡಳಿತದ ಸಂದರ್ಭದಲ್ಲಿ ಸೇರಿಸಿಕೊಂಡು ಆಳ್ವಿಕೆ ಮಾಡಿದರು. ವಿಜಯನಗರವು ಉದಯವಾದ ನಂತರ ಇದ್ದ ರಾಜ ಮನೆತನಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡವು. ಕೆಲವು ಮನೆತನಗಳ ಮಾಂಡಲೀಕರು ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನವಾಗಿ ಅಧೀನರಾದರು. ಆ ಸಂದರ್ಭದಲ್ಲಿ ಜಿಲ್ಲೆಯ ಪ್ರದೇಶವು ಸಂಪೂರ್ಣವಾಗಿ ವಿಜಯನಗರದ ಅರಸರ ಅಧೀನದಲ್ಲಿಯೇ ಉಳಿಯುವಂತಾಯಿತು. ಅರಸರು ಕೇಂದ್ರೀಕೃತವಾಗಿದ್ದ ಆಡಳಿತವನ್ನು ವಿಕೇಂದ್ರೀಕರಣಗೊಳಿಸುವ ಉದ್ದೇಶದಿಂದ ಒಂದೊಂದು ಪ್ರದೇಶಗಳಿಗೆ ನಿಷ್ಠ ಅಧಿಕಾರಿಗಳನ್ನು ನೇಮಿಸಿ ಅವರಿಂದ ಆಳ್ವಿಕೆ ನಡೆಸಿದರು. ಆಳ್ವಿಕೆಯ ಸಂದರ್ಭದಲ್ಲಿ ಕೋಟೆ ಹಾಗೂ ಸ್ಮಾರಕಗಳ ನಿರ್ಮಾಣ ಮಾಡುವ ಕಾಲಕ್ಕೆ ಸಾಮ್ರಾಜ್ಯದ ಅರಸರ ಒಪ್ಪಿಗೆ ಪಡೆಯಬೇಕಿತ್ತು. ವಿಜಯನಗರದ ಅವನತಿಯ ನಂತರ ತುಮಕೂರು ಜಿಲ್ಲೆಯ ಪ್ರದೇಶಕ್ಕೆ ಅರಸರಿಂದ ನೇಮಕಗೊಂಡಿದ್ದ ಅಧಿಕಾರಿಗಳೆಲ್ಲರೂ ಸ್ವತಂತ್ರಗೊಂಡು ಪಾಳೇಗಾರರೆಂಬ ಪದನಾಮ ಹೊಂದಿದರು. ನಂತರ ಪಾಳೇಗಾರರು ತಮ್ಮ ಭೌಗೋಳಿಕ ಎಲ್ಲೆಗಳನ್ನು ಗುರುತಿಸಿಕೊಂಡು ಇದ್ದ ಕೋಟೆಕೊತ್ತಲಗಳನ್ನು ಪುನರ್‌ನಿರ್ಮಿಸಿ, ಜನಸಮುದಾಯಗಳ ರಕ್ಷಣೆಯೇ ತಮ್ಮ ರಕ್ಷಣೆಯೆಂದು ಭಾವಿಸಿ ಆಳ್ವಿಕೆ ಮಾಡಿದರು.

ತುಮಕೂರು ಜಿಲ್ಲೆಯಲ್ಲಿ ಕೋಟೆ ನಿರ್ಮಾಣದ ಸಂದರ್ಭದಲ್ಲಿ ಪ್ರಕೃತಿಕ ದತ್ತವಾದ ಗುಡ್ಡ ಬೆಟ್ಟಗಳನ್ನೇ ತಮ್ಮ ರಕ್ಷಣೆಯಲ್ಲಿ ಸಹಕಾರಿಯಾಗುವಂತೆ ಮಾರ್ಪಾಡು ಮಾಡಿಕೊಂಡಿರುವುದು ಪ್ರಮುಖ ಅಂಶವಾಗಿದೆ. ರಾಜಕೀಯ ಇತಿಹಾಸದ ದೃಷ್ಟಿಯಿಂದ ನೋಡಿದರೆ ಇಲ್ಲಿನ ಪಾಳೇಗಾರರು ತಾಂತ್ರಿಕವಾದ ರಕ್ಷಣಾತ್ಮಕ ಕೋಟೆ ಕೊತ್ತಲಗಳನ್ನು ಹೊಂದಿ, ಸಮರ್ಥವಾಗಿ ಉತ್ತರದ ಮುಸ್ಲಿಮರನ್ನು, ಮರಾಠರನ್ನು, ಮೈಸೂರಿನ ಅರಸರನ್ನು, ಚಿತ್ರದುರ್ಗದ ಪಾಳೇಗಾರರನ್ನು ಹಾಗೂ ತಮಗೆ ಶತ್ರುವೆನಿಸಿದ ಪಾಳೇಗಾರರನ್ನು ಎದುರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಲ್ಲದೆ ತಮ್ಮ ತಮ್ಮಲ್ಲಿನ ಆಂತರಿಕ ಕಲಹಗಳಿಂದ ಇತರರ

ನೆರವು ಪಡೆಯಲು ಹೋಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ. ನಾಲ್ಕನೇ ಮೈಸೂರಿನ ಯುದ್ಧದಲ್ಲಿ ಟಿಪ್ಪುಸುಲ್ತಾನನ್ನು ಪತ್ತಿಕ್ಕಲು ಬ್ರಿಟಿಷರಿಗೆ ಇಲ್ಲಿನ ಪಾಳೇಗಾರರು ಸಹಾಯ ಮಾಡಲು ಹೋಗಿ ಇರುವ ನೆಲೆಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಇಡೀ ಪ್ರದೇಶವು ಬ್ರಿಟಿಷರ ವಶವಾಯಿತು. ಕೊನೆಗೆ ಬ್ರಿಟಿಷರು ಮೈಸೂರು ಒಡೆಯರಿಗೆ ಆಡಳಿತವನ್ನು ಬಿಟ್ಟುಕೊಟ್ಟಾಗ ತುಮಕೂರು ಜಿಲ್ಲೆಯ ಪ್ರದೇಶವು ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡಿತು.

ವಿಜಯನಗರದ ಅರಸರು ಹಾಕಿಕೊಟ್ಟ ವಿಕೇಂದ್ರೀಕರಣದ ಬುನಾದಿಯಲ್ಲೇ ಸ್ವತಂತ್ರಗೊಂಡ ಪಾಳೇಗಾರರು ಮುಂದುವರಿದರು. ವಿಕೇಂದ್ರೀಕರಣ ವ್ಯವಸ್ಥೆಯಿಂದ ಪಾಳೇಗಾರರು ಜನಸಮುದಾಯಗಳ ಕಷ್ಟಸುಖಗಳಲ್ಲಿ ಭಾಗಿಯಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಇದರಿಂದ ಜನ ಸಮುದಾಯಗಳು ತಮ್ಮ ಪಾಳೇಗಾರರನ್ನು ಸಾಮ್ರಾಜ್ಯದ ರಾಜ ಮಹಾರಾಜರಿಗೆ ಸಮೀಕರಿಸಿದರು. ಅಲ್ಲದೆ ಪಾಳೇಗಾರರು ನಿರ್ಮಿಸುತ್ತಿದ್ದ ಕೋಟೆ, ದೇವಾಲಯ, ಕೆರೆ-ಬಾವಿ, ಕಟ್ಟಡಗಳಲ್ಲಿ ಜನ ಸಮುದಾಯಗಳು ಭಾಗವಹಿಸಿ ಸಹಾಯ, ಸಹಕಾರ ನೀಡಿರುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಜನಸಮುದಾಯಗಳನ್ನು ಇನ್ನೂ ಹತ್ತಿರಕ್ಕೆ ಒಳಗು ಮಾಡಿಕೊಳ್ಳಲು ಹಲವು ಧಾರ್ಮಿಕ ಆಚರಣೆಗಳನ್ನು ಹುಟ್ಟು ಹಾಕಿದರು. ಇದರಿಂದ ಪಾಳೇಗಾರರು ಜನಸಮುದಾಯಗಳು ಆಚರಣೆಯ ಸಂದರ್ಭದಲ್ಲಿ ಭಾವಾನಾತ್ಮಕವಾಗಿ ಭಾಗಿಯಾಗಲು ಸಾಧ್ಯವಾಯಿತು. ಈ ರೀತಿಯ ಸಂಬಂಧದಿಂದ ಪಾಳೇಗಾರರು ಸಮುದಾಯಗಳ ಸ್ಮೃತಿಯಲ್ಲಿ ಉಳಿಯುವಂತಾದರು. ಇದರಿಂದ ಪಾಳೇಗಾರರಿಗೂ ಅಲ್ಲಿನ ಜನಸಮುದಾಯ ಗಳಿಗೂ ಸಾಂಸ್ಕೃತಿಕ ಸಂಬಂಧಗಳು ಗಾಢವಾಗಿ ಬೆಳೆಯ ತೊಡಗಿದವು. ಈ ಹಿನ್ನೆಲೆಯಲ್ಲಿ ಜನಸಮುದಾಯ ಗಳು ಪಾಳೆಯ ಪಟ್ಟುಗಳಲ್ಲಿ ಪ್ರಾರಂಭದಿಂದಲೂ ನೋಡಿದ, ಕೇಳಿದ, ಅನುಭವಿಸಿದ ಘಟನೆಗಳು ಜನಪದರ ಮೌಖಿಕ ಕಥನಗಳಿಗೆ ವಸ್ತುವಾದವು. ಅಂದು ಸೃಷ್ಟಿಯಾದ ಮೌಖಿಕ ಕಥನಗಳು ತಲೆಮಾರಿ ನಿಂದ ತಲೆಮಾರುಗಳಿಗೆ ಮುಂದುವರಿಯುತ್ತ ಬಂದಿವೆ. ಆ ಹಿನ್ನೆಲೆಯಲ್ಲಿ ಕೋಟೆ ಮತ್ತು ಅದರ ಸ್ಮಾರಕಗಳ ಬಗೆಗೆ ಸುತ್ತಮುತ್ತಲಿನ ಸಮುದಾಯಗಳು ಇಂದು ಯಾವ ಗ್ರಹಿಕೆಯನ್ನು ಹೊಂದಿವೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳುವುದು ಮುಖ್ಯ ಉದ್ದೇಶವಾಗಿದೆ.

ಕರ್ನಾಟಕದ ಕೆಲವು ಕೋಟೆಗಳನ್ನು ಚರಿತ್ರೆ ಮತ್ತು ಪುರಾತತ್ವ ನೆಲೆಯಲ್ಲಿ ಗಂಭೀರವಾದ ಅಧ್ಯಯನಗಳು ನಡೆದಿವೆ. ಆದರೆ ಕೋಟೆ ಕೊತ್ತಲಗಳ ಜಾನಪದೀಯ ಅಧ್ಯಯನವು ನಡದೇ ಇಲ್ಲ ಎನ್ನಬಹುದು. ತುಮಕೂರು ಜಿಲ್ಲೆಯಲ್ಲಿನ ಕೋಟೆ ಕೊತ್ತಲಗಳ ಬಗೆಗೆ ಚರಿತ್ರೆ ಮತ್ತು ಪುರಾತತ್ವದ ನೆಲೆಯಲ್ಲಿ ಅಧ್ಯಯನಗಳು ನಡೆದಿಲ್ಲ. ಆದರೆ ಕೆಲವು ಸಣ್ಣಪುಟ್ಟ ಲೇಖನಗಳು ಮಾತ್ರ ರಚನೆಗೊಂಡಿವೆ. ಪುರಾತತ್ವ ಮತ್ತು ಚರಿತ್ರೆ ನೆಲೆಯಲ್ಲಿರುವ ಕೋಟೆಕೊತ್ತಲಗಳನ್ನು ಜಾನಪದೀಯ ನೆಲೆಯಲ್ಲಿ ಅಧ್ಯಯನ ಮಾಡಲು ಕೋಟೆಯ ಬಗೆಗೆ ಅಲ್ಲಿನ ಪರಿಸರದಲ್ಲಿ ಜನಸಮುದಾಯಗಳು ಹೇಳುವ ಮೌಖಿಕ ಅಂಶಗಳು

ಹಾಗೂ ಕೋಟೆಯ ಸ್ಮಾರಕಗಳಲ್ಲಿ ನಡೆಯುವ ಆಚರಣೆಗಳೇ ಕಾರಣವಾಗಿವೆ. ಆ ಹಿನ್ನೆಲೆಯಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವೆನ್ನಬಹುದು.

ತುಮಕೂರು ಜಿಲ್ಲೆಯಲ್ಲಿ ಲಿಖಿತ ಚರಿತ್ರೆಗೆ ಹೊರತಾದ ಹಲವಾರು ಮೌಖಿಕ ಕಥನಗಳು ದೊರೆಯುತ್ತವೆ. ಅವುಗಳ ಸಹಾಯದಿಂದ ಚರಿತ್ರೆಯ ಹೊಸ ದಿಕ್ಕನ್ನು ಕಾಣಬಹುದು. ಅಲ್ಲದೆ ಇಲ್ಲಿನ ಜನಸಾಮಾನ್ಯರ ಚಾರಿತ್ರಿಕ ಪ್ರಜ್ಞೆಯನ್ನು ಅರ್ಥಮಾಡಿಕೊಂಡು ಪ್ರಾದೇಶಿಕ ಅಥವಾ ಸ್ಥಳೀಯ ಮತ್ತು ಶ್ರಮಿಕ ವರ್ಗಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ಸಮಕಾಲೀನ ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ಕಂಡುಕೊಳ್ಳುವ ಉದ್ದೇಶವಾಗಿದೆ.

ಚರಿತ್ರೆ ಮತ್ತು ಪುರಾತತ್ವ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಕೋಟೆಗಳ ಬಗೆಗೆ ಇತಿಹಾಸ ಬಿಟ್ಟು ಹೋದ ಎಷ್ಟೋ ವಿಷಯಗಳನ್ನು ಮೌಖಿಕ ಚರಿತ್ರೆಯು ಒದಗಿಸುತ್ತದೆ. ಹಾಗಾಗಿ ಕಂಠಸ್ಥ ಸಂಪ್ರದಾಯದ ಮೂಲಕ ಸಿಗುವ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ಇತಿಹಾಸಕ್ಕೆ ಸಂಬಂಧಿಸಿದಂತೆ ಮೌಖಿಕ ಪರಂಪರೆಯು ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಗಮನಿಸುತ್ತಾ, ಜನಪದ ಸಾಹಿತ್ಯದಲ್ಲಿ ಅಡಗಿರುವ ಅಥವಾ ಅಂತರ್ಗತವಾಗಿ ಉಳಿದುಕೊಂಡು ಬಂದಿರುವ ಚಾರಿತ್ರಿಕ ಅಂಶಗಳನ್ನು ಅನ್ವೇಷಿಸುವ, ವಿಶ್ಲೇಷಿಸುವ, ಸ್ಪಷ್ಟಪಡಿಸುವ ಹಾಗೂ ಸಂಯೋಜಿಸುವ ಕಾರ್ಯ ಅನಿವಾರ್ಯವಾಗಿ ನಡೆಯಬೇಕಿದೆ. ಆ ಹಿನ್ನೆಲೆಯಲ್ಲಿ ಇದು ನನ್ನ ಅಧ್ಯಯನದ ಪ್ರಮುಖ ಉದ್ದೇಶವೂ ಹೌದು.

ಅಧ್ಯಯನದ ಪ್ರಮುಖ ಉದ್ದೇಶಗಳನ್ನು ಈ ರೀತಿ ಸಂಕ್ಷಿಪ್ತಗೊಳಿಸಬಹುದು.

೧. ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆ ನಿರ್ಮಾಣಕ್ಕೆ ಪಾಳೇಗಾರರು ಸೃಷ್ಟಿಸಿದ ಚರಿತ್ರೆಗಳು, ಜನಸಮುದಾಯಗಳು ಸೃಷ್ಟಿಸಿದ ಚರಿತ್ರೆಗಳು ಸಂಘರ್ಷಾತ್ಮಕವಾಗಿದ್ದು, ಆ ಮೂಲಕ ಹುಟ್ಟುವ ಹೊಸ ಸಾಂಸ್ಕೃತಿಕ ನಿರ್ವಚನಗಳನ್ನು ಇಲ್ಲಿ ವಿಶ್ಲೇಷಿಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕೋಟೆಯ ಸ್ಮಾರಕಗಳಿಗೆ ಸಂಬಂಧಿಸಿದ ಮೌಖಿಕ ಸಾಹಿತ್ಯವನ್ನು ಇಲ್ಲಿ ಸಂಗ್ರಹಿಸಿ ಚರ್ಚಿಸಲಾಗುವುದು.

೨. ಲಿಖಿತ ಸಾಹಿತ್ಯದ ಆಕರಗಳು ಕೋಟೆ ಕೊತ್ತಲಗಳ ಬಗೆಗೆ ಯಾವ ರೀತಿಯ ಅರ್ಥವಿವರಣೆ ನೀಡಿವೆ. ಮತ್ತು ಮೌಖಿಕ ಆಕರಗಳು ಯಾವ ರೀತಿಯ ಅರ್ಥವಿವರಣೆ ನೀಡಿವೆ ಎಂಬುದನ್ನು ಇವೆರಡೂ ಆಕರಗಳ ಹಿನ್ನೆಲೆಯಲ್ಲಿ ಮುಖಾಮುಖಿಯಾಗಿಸಿ ನಿರ್ವಚಿಸಲಾಗಿದೆ.

೩. ಲಿಖಿತ ಚರಿತ್ರೆ ಮತ್ತು ಮೌಖಿಕ ಚರಿತ್ರೆಯ ಎರಡೂ ಸಾಕ್ಷಿಗಳನ್ನು ಆಧುನಿಕ ಕಾಲದ ನಿರ್ವಚನಕ್ಕೆ ಹೊಂದಿಸಿ ಇವೆರಡರ ಮಿತಿಯನ್ನು ಗುರುತಿಸುವುದು. ಇವೆರಡೂ ಚರಿತ್ರೆಯ ಬಗೆಗೆ ನಾಡಿನ ವಿದ್ವಾಂಸರು ಹೇಗೆ ಪ್ರತಿಕ್ರಿಯಿಸಿದ್ದಾರೆ ಎನ್ನುವ ಅಂಶವನ್ನು ಸ್ಥೂಲವಾಗಿ ಪರಿಶೀಲಿಸುವುದು.

೪. ಕೋಟೆಕೊತ್ತಲಗಳನ್ನು ನಿರ್ಮಿಸಿ, ಆಳ್ವಿಕೆ ಮಾಡಿದ ಪಾಳೇಗಾರರ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುವುದು. ಜೊತೆಗೆ ಕೋಟೆಕೊತ್ತಲಗಳ ಲಕ್ಷಣ, ಸ್ವರೂಪ, ಮಹತ್ವವನ್ನು ಅರಿಯುವುದು. ಅಲ್ಲದೆ ಆ ಕೋಟೆಯೊಳಗಿರುವ ಸ್ಮಾರಕಗಳ ಸ್ವರೂಪವನ್ನು ಗುರುತಿಸುವುದು.

೫. ಕೋಟೆಕೊತ್ತಲ ನಿರ್ಮಿಸಿ, ಆಳ್ವಿಕೆ ಮಾಡಿದ ಪಾಳೇಗಾರರ ಚರಿತ್ರೆಯ ಸಿದ್ಧ ಮಾದರಿಗಳಿಗಿಂತ ಕಥನಗಳ ಅರ್ಥನಿರೂಪಣೆ ಗಮನಿಸುವುದು.

೬. ಸ್ಮಾರಕಗಳ ಸಂರಕ್ಷಣೆಯಲ್ಲಿ ಆ ಪರಿಸರದಲ್ಲಿರುವ ಜನಸಮುದಾಯಗಳು ಕ್ರಿಯಾತ್ಮಕವಾಗಿ ಆಚರಿಸುತ್ತಿರುವ ಆಚರಣೆಗಳ ಪಾತ್ರ ಏನು ಎಂಬುದು ಅರಿಯುವುದು. ಆ ಮೂಲಕ ಅವುಗಳ ರಕ್ಷಣೆ ಹೇಗೆ ನಡೆಯುತ್ತಿವೆ ಎಂಬುದನ್ನು ಗುರುತಿಸುವುದಾಗಿದೆ.

ಹೀಗೆ ಪ್ರಸ್ತುತ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಪರಿಸರದಲ್ಲಿ ಆದಿಕಾಲದಿಂದಲೂ ಎಲ್ಲಾ ರೀತಿಯ ಜನಸಮುದಾಯಗಳು ಜೀವಿಸುತ್ತಾ ಬಂದಿದ್ದಾರೆ. ಇವರೆಲ್ಲರೂ ಪಾಳೇಗಾರರು ನಿರ್ಮಿಸಿರುವ ಕೋಟೆಯ ಸ್ಮಾರಕಗಳಲ್ಲಿ ನಿತ್ಯಪೂಜೆ, ಉತ್ಸವ, ಜಾತ್ರೆಗಳಂತಹ ಹಲವಾರು ಆಚರಣೆಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ. ಹೀಗೆ ನೆರವೇರಿಸಿಕೊಂಡು ಬರಲು ರಾಜಕೀಯಾರ್ಥಿಕ ಕಾರಣಗಳೇನು? ಇದರಲ್ಲಿ ಪಾಳೇಗಾರರು ವಹಿಸಿದ ಪಾತ್ರ ಎಂತಹದು? ಈ ಬಗ್ಗೆ ಹಿಂದಿನ ಮತ್ತು ಸಮಕಾಲೀನ ಸಂದರ್ಭದ ಒತ್ತಡಗಳೇನು? ಎಂಬುದನ್ನು ಈ ಅಧ್ಯಯನದಲ್ಲಿ ಮೊದಲ ಬಾರಿಗೆ ಕೈಗೊಳ್ಳಲಾಗಿದೆ. ಪಾಳೇಗಾರರು ನಿರ್ಮಿಸಿದ ಕೋಟೆಯ ಸ್ಮಾರಕಗಳ ಬಗೆಗೆ ಅಲ್ಲಿನ ಜನ ಸಮುದಾಯಗಳು ಹೇಗೆ ಚಾರಿತ್ರಿಕ ಅಂಶಗಳನ್ನು ಗ್ರಹಿಸಿಕೊಂಡಿವೆ ಎಂಬುದರ ಹಿನ್ನೆಲೆಯಲ್ಲಿ ಪಾಳೇಗಾರರ ಕಾಲದ ಮತ್ತು ಸಮಕಾಲೀನ ಸಂದರ್ಭದ ಸಮುದಾಯಗಳ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹಿನ್ನೆಲೆಯನ್ನು ತಿಳಿಯಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಲ್ಲದೆ ಈಗಾಗಲೇ ಹಲವಾರು ಜನಪದ ಕಾವ್ಯಗಳು ಸಂಗ್ರಹಗೊಂಡಿವೆ. ಇವುಗಳ ಹಿನ್ನೆಲೆಯಲ್ಲಿ ಲಿಖಿತ ರೂಪದಲ್ಲಿರುವ ಆಕರಗಳನ್ನು ಸಹ ಬಳಸಿಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಜಾನಪದೀಯ ಅಧ್ಯಯನವೆಂಬುದು ಸಾಹಿತ್ಯಾಭ್ಯಾಸದ ಒಂದು ಶಾಖೆಯಾಗಿ, ಅಧ್ಯಯನದ ಹಲವಾರು ಕ್ಷೇತ್ರಗಳಲ್ಲಿ ಕವಲೊಡೆದು, ವಿಸ್ತಾರಗೊಂಡು ಒಂದು ಶಿಸ್ತಾಗಿ ರೂಪುಗೊಂಡಿದೆ. ಇದು ವ್ಯಷ್ಟಿ ರಚನೆಯಲ್ಲಿ ಸಮಷ್ಟಿ ರಚನೆಯನ್ನು ಒಳಗೊಂಡಿರುವಂತದ್ದು. ಜಾನಪದವು ಜನಸಮುದಾಯಗಳ ಸಾಂಸ್ಕೃತಿಕ ವಿಚಾರವನ್ನು ಅಭಿವ್ಯಕ್ತಿಸುತ್ತದೆ. ಜಾನಪದವು ಎಲ್ಲಾ ಶಾಸ್ತ್ರಗಳಿಗೂ ಮೂಲ ನೆಲೆಯಾಗಿರುತ್ತದೆ. ಆ ಶಾಸ್ತ್ರಗಳಲ್ಲಿ ಜಾನಪದ ಯಾವುದೋ ಒಂದು ಮೂಲೆಯಲ್ಲಿ ಸೇರ್ಪಡೆಗೊಂಡಿರುತ್ತದೆ. ಆದರೆ ಅದರ ರೂಪ ಮಾತ್ರ ಕಾಲಕಾಲಕ್ಕೆ ಬದಲಾಗುತ್ತದೆಯೇ ಹೊರತು ಅದರ ಸತ್ವಾಂಶ ಮಾತ್ರ ಪರೋಕ್ಷವಾಗಿ ಎಲ್ಲೋ ಒಂದು ಕಡೆ ಅಡಗಿಕೊಂಡು ಹೊಳೆಯುತ್ತಿರುತ್ತದೆ. ಇಂತಹ ಜಾನಪದೀಯ ಅಧ್ಯಯನಗಳಲ್ಲಿ ಪಾಳೇಗಾರರು ನಿರ್ಮಿಸಿದ ಕೋಟೆಕೊತ್ತಲಗಳು ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ

ಹೇಗೆ ಭಿನ್ನ ರೀತಿಗಳಲ್ಲಿ ಜಾನಪದೀಯ ಅಂಶಗಳನ್ನು ಹೊಂದಿವೆ ಎಂಬುದನ್ನು ವಿವಿಧ ಆಯಾಮಗಳ ಮೂಲಕ ಈ ಅಧ್ಯಯನದಲ್ಲಿ ಕೈಗೊಳ್ಳುವ ಪ್ರಯತ್ನ ಮಾಡಲಾಗಿದೆ.

ತುಮಕೂರು ಜಿಲ್ಲೆಯ ಪಾಳೇಗಾರರು ಪಾಳೆಯಪಟ್ಟುಗಳನ್ನು ಸ್ಥಾಪಿಸುವಾಗ ಹಲವಾರು ಸ್ಮಾರಕಗಳನ್ನು ನಿರ್ಮಿಸಿದರು. ಈ ಸ್ಮಾರಕಗಳಲ್ಲಿ ಕೋಟೆಕೊತ್ತಲಗಳು ಒಂದು. ಕೋಟೆಗಳನ್ನು ನಿರ್ಮಿಸುವಾಗ, ಜನಸಮುದಾಯಗಳಿಗೂ ಮತ್ತು ಪಾಳೇಗಾರರಿಗೂ ಸಾಂಸ್ಕೃತಿಕ ಸಂಬಂಧವಿತ್ತು. ಇಂತಹ ಸಂದರ್ಭದಲ್ಲಿ ಜನಸಮುದಾಯಗಳು ಕಂಡುಂಡ ಅನುಭವಗಳನ್ನು ಮೌಖಿಕ ರೂಪದಲ್ಲಿ ಪರಂಪರಾಗತವಾಗಿ ಉಳಿಸಿಕೊಂಡು ಬಂದಿದ್ದಾರೆ. ಈ ಮೌಖಿಕವಾಗಿ ಉಳಿದುಕೊಂಡಿರುವ ಅಂಶಗಳು ಚರಿತ್ರೆಯ ಪುನರ್‌ರಚನೆಯ ಸಂದರ್ಭ ದಲ್ಲಿ ಪೂರಕ ಆಕರಗಳಾಗಿ ಹೇಗೆ ಬಳಕೆಯಾಗುತ್ತವೆಂಬುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಕೋಟೆಗಳ ನಿರ್ಮಾಣದ ಕಾಲಘಟ್ಟ, ಪ್ರದೇಶ, ಪರಿಸರ, ಐತಿಹಾಸಿಕ ಸಂದರ್ಭ, ಆಳುವವರ ಮನೋಧರ್ಮ, ಆಳಿಸಿಕೊಳ್ಳುವವರ ಮನೋಧರ್ಮ, ಇವರಿಬ್ಬರ ನಡುವಿನ ಸಾಂಸ್ಕೃತಿಕ ಸಂಬಂಧ ಇವೆಲ್ಲವನ್ನು ಕಣ್ಣಾರೆ ಕಂಡುಂಡ ಜನಪದ ಮನಸ್ಸಿನಲ್ಲಿರುವ ಸಾಹಿತ್ಯವನ್ನು ಕಟ್ಟಿದುದರ ಉದ್ದೇಶ, ಭೂತಕಾಲದ ಮೌಖಿಕ ಅಂಶಗಳನ್ನು ವರ್ತಮಾನದಲ್ಲಿ ಅಭಿವ್ಯಕ್ತಿಸುವಲ್ಲಿ ಬಳಸಿಕೊಂಡ ಕಥನ ಮಾರ್ಗ, ಪ್ರೇರಣೆ, ಶೈಲಿ, ಭಾಷೆಗಳ ವಿಶೇಷತೆಗಳು ಬದುಕಿನ ಗ್ರಹಿಕೆಯಲ್ಲಿ ವಿಭಿನ್ನ, ಸಮಾನ ದೃಷ್ಟಿಗಳು, ಇತರೆ ಪ್ರಭಾವಗಳು, ಅದರ ಪರಿಣಾಮಗಳು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂದರ್ಭಾನುಸಾರ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮಾನವ ಸಂಸ್ಕೃತಿಯ ನಿಜವಾದ ಚಿತ್ರಣ ಅರ್ಥವಾಗಬೇಕಾದರೆ ಜನಸಮುದಾಯಗಳು ಉಳಿಸಿಕೊಂಡು ಬಂದಿರುವ ಜನಪದ ಸಾಹಿತ್ಯವು ಪ್ರತಿಯೊಬ್ಬರ ಅಧ್ಯಯನಕ್ಕೆ ದಾರಿದೀಪವಾಗಲಿದೆ. ಈ ಹಿನ್ನೆಲೆಯಲ್ಲಿ ಕೋಟೆಗಳ ಮೇಲೆ ಅದರಲ್ಲಿರುವ ಸ್ಮಾರಕಗಳ ಮೇಲೆ, ಇವನ್ನು ನಿರ್ಮಿಸಿದ ಪಾಳೇಗಾರರ ಮೇಲೆ ಹುಟ್ಟಿಕೊಂಡ ಜಾನಪದೀಯ ಅಂಶಗಳು ಆಧುನಿಕ ಕಾಲದ ಬದುಕಿನಲ್ಲಿಯೂ ಒಂದಲ್ಲಾ ಒಂದು ರೂಪದಲ್ಲಿ ಗೋಚರಿಸುತ್ತವೆ. ಕೋಟೆಗಳನ್ನು ಇತಿಹಾಸದ ನೆರಳಿನಲ್ಲಿ ಅಧ್ಯಯನ ಮಾಡುವಾಗ ಸಿಗುವ ಆಕರಗಳಿಗಿಂತ ತಮ್ಮ ಪ್ರದೇಶದಲ್ಲಿಯೇ ಇರುವ ಸ್ಮಾರಕಗಳು ಮತ್ತು ಇವನ್ನು ನಿರ್ಮಿಸಿದ ವ್ಯಕ್ತಿಗಳನ್ನೇ ತಮ್ಮ ಜನಪದ ಸಾಹಿತ್ಯಕ್ಕೆ ವಸ್ತುವಾಗಿಸಿಕೊಂಡು ಐತಿಹ್ಯ, ಕಥೆ, ಗಾದೆ, ನಂಬಿಕೆ, ಆಚರಣೆ ಇತ್ಯಾದಿಯಾಗಿ ತಮ್ಮದೇ ಆದ ಭಾವನೆಗಳ ಮೂಲಕ ಬದುಕಿಗೆ ಹತ್ತಿರ ಮಾಡಿಕೊಂಡು ಜನಪದರು ಅಭಿವ್ಯಕ್ತಿಸುತ್ತಾರೆ. ಇವೆಲ್ಲವೂ ಜನಸಂಸ್ಕೃತಿಯ ಪರಂಪರೆಯ ಪಳೆಯುಳಿಕೆಗಳೆಂದು ಕರೆಯಬಹುದು.

ಈ ಜನಪದ ಸಂಸ್ಕೃತಿಯು ಸಮಕಾಲೀನತೆ ಹಾಗೂ ಸಾರ್ವಕಾಲೀನತೆಯನ್ನು ಗರ್ಭೀಕರಿಸಿಕೊಂಡಿರುವ ಸತ್ವವುಳ್ಳ ವಿಚಾರವಾಗಿದ್ದು, ಅದು ನಿತ್ಯವೂ ಪರಿವರ್ತನೆಗೊಳ್ಳುತ್ತದೆಂದು ಹೇಳಲು ಅಡ್ಡಿಯಿಲ್ಲ.

ಸ್ಮರಣೆಯ ಭಾಗವಾಗಿ ಉಳಿದುಕೊಂಡು ಬಂದಿರುವ ಎಷ್ಟೋ ವಿಚಾರಗಳು ದಾಖಲಾದ ವಿಚಾರಗಳಿಗಿಂತ ಭಿನ್ನವಾಗಿರುತ್ತವೆ. ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಬಗೆಗೆ ಕಂಠಸ್ಥ ಪರಂಪರೆಯಲ್ಲಿ ಜನಪದರ ಸ್ಮರಣೆಯ ಭಾಗವಾಗಿ ಉಳಿದುಕೊಂಡು ಬಂದಿದ್ದು, ಅವುಗಳನ್ನು ಸಂಗ್ರಹಿಸುವ ಅಧ್ಯಯನಕ್ಕೆ ಒಳಪಡಿಸುವ ಅಗತ್ಯ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹಲವು ಶಾಸ್ತ್ರಗಳಲ್ಲಿ ನೆಲೆಯನ್ನು ಹೊಂದಿರುವ ಜಾನಪದ ಅಧ್ಯಯನವು ಚಾರಿತ್ರಿಕವಾಗಿರುವ ಕೋಟೆಕೊತ್ತಲಗಳನ್ನು ಜಾನಪದೀಯ ನೆಲೆಯಲ್ಲಿ ಅಧ್ಯಯನ ಮಾಡಲು ಅನುಕೂಲ ಮಾಡಿಕೊಡುತ್ತದೆ.

ಒಟ್ಟಾರೆಯಾಗಿ ಈ ಸಾಂಸ್ಕೃತಿಕ ಇತಿಹಾಸದ ವಿವಿಧ ಘಟ್ಟಗಳಲ್ಲಿ ನಾನಾ ಕಾರಣಗಳಿಗಾಗಿ ಹುಟ್ಟಿಕೊಂಡ ಜನಪದ ಸಾಹಿತ್ಯವು ತುಮಕೂರು ಜಿಲ್ಲೆ ಕೋಟೆಗಳ ವೈವಿಧ್ಯಮಯ ಭೌಗೋಳಿಕತೆ, ಚಾರಿತ್ರಿಕತೆ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಭಿನ್ನ ರೂಪಗಳನ್ನು ಪಡೆದಿದ್ದು, ಆಯಾ ಪ್ರದೇಶದ ಜನಸಮುದಾಯಗಳ ಆಶೋತ್ತರಗಳನ್ನು ಬಿಂಬಿಸುತ್ತವೆ. ಇಂತಹ ಸಂಶೋಧನೆಯಿಂದ ಬಹುತೇಕ ಅಲಕ್ಷಿತರ ಮೌಖಿಕ ಚರಿತ್ರೆಯನ್ನು ನಿಜಸ್ವರೂಪದಲ್ಲಿ ಅರ್ಥೈಸಿಕೊಳ್ಳಲು ಸಾಧ್ಯ. ಅಲ್ಲದೆ ಈ ಮೂಲಕ ಚರಿತ್ರೆಯನ್ನು ಸ್ಥಳೀಯ ಚರಿತ್ರೆ, ಮೌಖಿಕ ಚರಿತ್ರೆಗಳ ಆಧಾರದಿಂದ ಪೂರಕ ಅಂಶಗಳನ್ನು ಬಳಸಿಕೊಂಡು ಪುನರ್ ರೂಪಿಸಬಹುದಾಗಿದೆ. ಆ ಕಾರಣಕ್ಕಾಗಿ ಈ ಅಧ್ಯಯನವು ಮಹತ್ವದ್ದಾಗಿರುತ್ತದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಸುಸ್ಥಿತಿಯಲ್ಲಿರುವ ಕೋಟೆಕೊತ್ತಲಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಪ್ರಾಚೀನ ಕಾಲದಿಂದಲೂ ತುಮಕೂರು ಜಿಲ್ಲೆಯಲ್ಲಿ ಕೋಟೆಗಳು ಪ್ರಚಲಿತದಲ್ಲಿದ್ದವು ಎಂಬುದಕ್ಕೆ ಶಾಸನಗಳು ಉಲ್ಲೇಖಿಸಿದರೂ ಅವು ಕಾಲಾನಂತರ ಸಂಪೂರ್ಣವಾಗಿ ನಾಶ ಹೊಂದಿವೆ. ಅಂತಹ ಕೋಟೆಗಳಲ್ಲಿ ನಿಡುಗಲ್ಲು ದುರ್ಗದ ಕೋಟೆ ಮಾತ್ರ ಹಲವು ರಾಜರಿಂದ, ಪಾಳೇಗಾರರಿಂದ ಪುನರ್ ನಿರ್ಮಾಣಗೊಳ್ಳುತ್ತಾ ಬಂದಿದೆ. ಈ ಕೋಟೆಯನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಈಗಿರುವ ಕೋಟೆಕೊತ್ತಲಗಳು ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡಿವೆ. ಇದರಲ್ಲೂ ಸಹ ಅನೇಕ ಕೋಟೆಗಳು ನಾಶ ಹೊಂದಿವೆ. ಕೆಲವು ಕೋಟೆಗಳು ಹೈದರ್-ಟಿಪ್ಪುವಿನ ಕಾಲದಲ್ಲಿ ಪುನರ್ ನಿರ್ಮಾಣಗೊಂಡಿವೆ. ಅಲ್ಲದೆ ಪಾಳೇಗಾರರಿಂದ, ಮೈಸೂರು ಒಡೆಯರಿಂದ, ಮರಾಠರಿಂದ, ಮುಸ್ಲಿಂ ಸುಬೇದಾರರಿಂದಲೂ ಪುನರ್ ನಿರ್ಮಾಣಗೊಂಡಿವೆ. ಒಟ್ಟಾರೆ ಪ್ರಸ್ತುತ ಸಂದರ್ಭದಲ್ಲಿ ಸುಸ್ಥಿತಿಯಲ್ಲಿರುವ ಕೋಟೆಗಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಗು ಮಾಡಿಕೊಳ್ಳಲಾಗಿದೆ. ಜೊತೆಗೆ ಅಧ್ಯಯನದ ವ್ಯಾಪ್ತಿಗೆ ಬರುವ ಕೋಟೆಗಳನ್ನು ವೀಕ್ಷಿಸಿ, ಆ ಪರಿಸರದಲ್ಲಿ ಬದುಕುವ ಜನಸಮುದಾಯಗಳನ್ನು ಸಂದರ್ಶಿಸಿ, ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ ಇದಕ್ಕೆ ಪೂರಕವಾದ ಲಿಖಿತ ಆಕರಗಳನ್ನು ಸಹ ಬಳಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವಿಧಾನ

ತುಮಕೂರು ಜಿಲ್ಲೆಯ ಬಹುತೇಕ ಕೋಟೆಕೊತ್ತಲಗಳು ೧೬, ೧೭, ೧೮ನೇ ಶತಮಾನದಲ್ಲಿ ನಿರ್ಮಾಣವಾಗಿವೆ. ಜೊತೆಗೆ ಇದೇ ಕಾಲದಲ್ಲಿಯೇ ಪುನರ್ ನಿರ್ಮಾಣಗೊಂಡಿವೆ. ಇಂತಹ ಕೋಟೆ ಮತ್ತು ಸ್ಮಾರಕಗಳೊಂದಿಗೆ ಆ ಪರಿಸರದ ಜನಸಮುದಾಯಗಳು ಪ್ರಾರಂಭದಿಂದಲೂ ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡು ಬದುಕುತ್ತಿದ್ದಾರೆ. ಕೋಟೆಗಳನ್ನು ಈ ಸಮುದಾಯಗಳು ಬರೀ ಭೌತಿಕ ವಸ್ತುಗಳನ್ನಾಗಿ ನೋಡದೆ, ಅವುಗಳಿಗೆ ಜೀವ ತುಂಬುವುದರ ಮೂಲಕ ಅನೇಕ ಹಾಡು, ಕಥೆ, ಐತಿಹ್ಯಗಳನ್ನು ವ್ಯಕ್ತಪಡಿಸುತ್ತಾರೆ. ಅಲ್ಲದೆ ಕೋಟೆಯಲ್ಲಿನ ಸ್ಮಾರಕಗಳಲ್ಲಿ ದೈವತ್ವದ ಕಲ್ಪನೆಯನ್ನು ಆರೋಪಿಸಿ ಪೂಜೆ, ಜಾತ್ರೆ, ಉತ್ಸವಗಳಂತಹ ಆಚರಣೆಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ. ಇಂತಹ ಪೂಜಾಚರಣೆಗಳಿಂದ ಸ್ಮಾರಕಗಳು ನಾಶಗೊಳ್ಳದೆ ಪುನರ್ ನಿರ್ಮಾಣಗೊಳ್ಳುತ್ತಾ ಅಭಿವೃದ್ಧಿ ಹೊಂದುತ್ತಾ ಬಂದಿವೆ.

ಒಟ್ಟಾರೆಯಾಗಿ ಶಿಷ್ಟ ಸಾಹಿತ್ಯದಲ್ಲಿ ಕೋಟೆಗಳು ರಕ್ಷಣೆ, ಶೌರ್ಯದ ಪರಾಕ್ರಮದ ಸಂಕೇತವಾಗಿ ಚಿತ್ರಿತವಾಗಿದ್ದರೆ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮೌಖಿಕ ಅಂಶಗಳು ಸಮುದಾಯದ ಜೀವನದ ಭಾಗವಾಗಿ ಚಿತ್ರಣಗೊಂಡಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಲಿಖಿತ ಆಕರಗಳನ್ನು ಬಳಸಿಕೊಂಡಿದ್ದರೂ ಸಹ ಮೌಖಿಕ ಆಕರಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿದ್ದು, ಮೊದಲನೆಯ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಕುರಿತು ವಿವರಿಸಲಾಗಿದೆ. ಅಲ್ಲದೆ ಅಧ್ಯಯನಕ್ಕೆ ಸಂಬಂಧಿಸಿದಂತೆ ಆಕರ ಸಾಮಗ್ರಿಗಳ ಸಮೀಕ್ಷೆಯನ್ನು ಮಾಡಲಾಗಿದೆ. ಎರಡನೇ ಅಧ್ಯಾಯದಲ್ಲಿ 'ಕೋಟೆಗಳು: ಲಿಖಿತ ಮತ್ತು ಮೌಖಿಕ ಸಾಹಿತ್ಯ ಚರ್ಚೆಗಳ' ಕುರಿತ ಅಧ್ಯಯನ ಕೈಗೊಳ್ಳಲಾಗಿದೆ. ಲಿಖಿತ ಸಾಹಿತ್ಯದಲ್ಲಿ ಕೋಟೆಗಳ ಅರ್ಥವಿವರಣೆ, ಕರ್ನಾಟಕದ, ಭಾರತದ, ಜಗತ್ತಿನ ಅತೀ ಪ್ರಾಚೀನ ಕೋಟೆಗಳ ಸ್ವರೂಪವನ್ನು ಚರ್ಚಿಸಲಾಗಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದಲ್ಲಿನ ಕವಿಗಳು ತಮ್ಮ ಸಾಹಿತ್ಯದಲ್ಲಿ ಕೋಟೆಗಳ ಮಹತ್ವ, ಲಕ್ಷಣಗಳನ್ನು ಯಾವ ರೀತಿಯಲ್ಲಿ ವರ್ಣಿಸಿದ್ದಾರೆ ಎಂಬುದನ್ನು ಕಾವ್ಯದಲ್ಲಿ ನಿರೂಪಿತವಾಗಿರುವುದನ್ನು ಚರ್ಚಿಸಲಾಗಿದೆ. ಲಿಖಿತ ಸಾಹಿತ್ಯದಂತೆ ಮೌಖಿಕ ಸಾಹಿತ್ಯದಲ್ಲಿಯೂ ಕೋಟೆಗಳ ವರ್ಣನೆ, ಮಹತ್ವ, ನಾಶದ ಕುರಿತು ಅಭಿವ್ಯಕ್ತಿಗೊಂಡಿರುವುದು ಕಂಡುಬರುತ್ತದೆ. ಮಧ್ಯಕಾಲೀನ ಚರಿತ್ರೆಯ ಸಂದರ್ಭದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯನ್ನು ಒಳಗು ಮಾಡಿಕೊಂಡು ಆಳ್ವಿಕೆ ಮಾಡಿದ ಪಾಳೇಗಾರರ ಬಗೆಗೆ ಸಮುದಾಯಗಳು ಹಲವಾರು ಚರಿತ್ರೆಯ ಘಟನೆಗಳನ್ನು ಭೌತಿಕ ವಸ್ತುವಿಗೆ ಆರೋಪಿಸಿ, ಕಾವ್ಯ-ಕಥನಗಳನ್ನು ಹೇಳುತ್ತಾರೆ. ಅಂತಹ ಐತಿಹಾಸಿಕ ಮೌಖಿಕ ಕಾವ್ಯಗಳು ದಾಖಲುಗೊಂಡಿವೆ.

ಇವುಗಳನ್ನು ಅಧ್ಯಯನ ಮಾಡಿ, ಕೋಟೆಗಳ ಸ್ಥಾಪನೆ ಹಂತದಿಂದ, ಕೋಟೆಯ ನಾಶದವರೆಗಿನ ಹಲವು ಮಜಲುಗಳನ್ನು ತಾತ್ವಿಕವಾಗಿ ಚರ್ಚಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳ ಒಳಸಂಬಂಧಗಳನ್ನು ಮತ್ತು ವೈರುಧ್ಯಗಳನ್ನು ತಾತ್ವಿಕವಾಗಿ ಚರ್ಚಿಸಲಾಗಿದೆ. ಇತಿಹಾಸಕ್ಕೂ ಮತ್ತು ಜಾನಪದಕ್ಕೂ ಒಂದು ತಾತ್ವಿಕ ಸಂಬಂಧವಿದೆ. ಇವೆರಡರ ಕೊಳುಕೊಡುವಿಕೆಯಲ್ಲಿ ಯಾವ್ಯಾವ ಸಮಸ್ಯೆಗಳಿವೆ ಮತ್ತು ತೊಡಕುಗಳಿವೆ ಎಂಬುದನ್ನು ವಿದ್ವಾಂಸರ ಹೇಳಿಕೆಯೊಂದಿಗೆ ವಿವರಿಸಲಾಗಿದೆ ಪುರಾವಸ್ತುಗಳನ್ನು ಅಧ್ಯಯನ ಮಾಡುವಾಗ ಸ್ಥಳೀಯವಾಗಿ ಹೇಳುವ ಮೌಖಿಕ ಅಂಶಗಳನ್ನು ಸಂಗ್ರಹಿಸಿ ಚರ್ಚಿಸಬೇಕಾಗುತ್ತದೆ. ಅದರಂತೆ ಪುರಾವಸ್ತು ಮತ್ತು ಜಾನಪದದ ಪರಿಕಲ್ಪನೆಯಲ್ಲಿ ತಾತ್ವಿಕವಾಗಿ ಚರ್ಚಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ 'ತುಮಕೂರು ಜಿಲ್ಲೆಯ ಕೋಟೆಗಳ ರಾಜಕೀಯ ಇತಿಹಾಸ'ದ ಸ್ವರೂಪವನ್ನು ದೊರೆತ ಲಿಖಿತ ಮತ್ತು ಮೌಖಿಕ ಆಕರಗಳಿಂದ ಚರ್ಚಿಸಲಾಗಿದೆ. ಕಾರಣ ಯಾವುದೇ ಒಂದು ನಿರ್ದಿಷ್ಟ ಪ್ರದೇಶವನ್ನು ಅಧ್ಯಯನ ಮಾಡುವಾಗ ಅಲ್ಲಿನ ಭೌಗೋಳಿಕ ಪರಿಸರ ಮತ್ತು ಆ ಪ್ರದೇಶದ ಇತಿಹಾಸವನ್ನು ತಿಳಿಯುವುದು ಅಗತ್ಯವಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಯಾವುದೇ ಸಾಮ್ರಾಜ್ಯಗಳು ನಿರ್ಮಾಣಗೊಂಡು ಆಳ್ವಿಕೆ ಮಾಡಿಲ್ಲ. ಇಲ್ಲಿನ ಆಡಳಿತ ಹಿಡಿತವನ್ನು ಹೊಂದಿದ್ದ ಸಾಮ್ರಾಜ್ಯಗಳು ಅವನತಿ ಹೊಂದಿದ ನಂತರ ರಾಜಕೀಯ ವಿಕೇಂದ್ರೀಕರಣದ ವ್ಯವಸ್ಥೆಯಿಂದ ಸಮುದಾಯಗಳನ್ನು ಅನುಲಕ್ಷಿಸಿ ಪಾಳೇಗಾರರು ಆಳ್ವಿಕೆ ಮಾಡಿದ್ದಾರೆ. ಅವರ ರಾಜಕೀಯ ಇತಿಹಾಸವನ್ನು ತಿಳಿಯುವುದರೊಂದಿಗೆ ಅವರ ಕಾಲದಲ್ಲಿ ನಿರ್ಮಾಣ ಗೊಂಡ ಕೋಟೆಗಳ ಲಕ್ಷಣ, ಮಹತ್ವ, ಸ್ಮಾರಕಗಳ ಸ್ವರೂಪವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಐದನೇ ಅಧ್ಯಾಯದಲ್ಲಿ 'ತುಮಕೂರು ಜಿಲ್ಲೆಯ ಕೋಟೆಗಳ ಮೌಖಿಕ ಕಥನಗಳು' ಎಂಬುದನ್ನು ಕುರಿತು ಐದು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ ಕೋಟೆಯ ನಿರ್ಮಾಣದ ಪೂರ್ವ, ನಿರ್ಮಾಣ, ಬಲಿ, ಅಲ್ಲಿನ ಸ್ಥಳನಾಮ ಮತ್ತು ಕೋಟೆಯಲ್ಲಿನ ಸ್ಮಾರಕಗಳ ಐತಿಹ್ಯಗಳು ಒಳಗೊಂಡಿವೆ. ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳು ವಿಜಯನಗರೋತ್ತರ ಕಾಲದಲ್ಲಿ ಸ್ವತಂತ್ರಗೊಂಡು ತಮ್ಮ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಕೋಟೆ ಕೊತ್ತಲ ಮತ್ತು ಇನ್ನಿತರೆ ಸ್ಮಾರಕಗಳನ್ನು ನಿರ್ಮಿಸಿಕೊಂಡು, ಜನಸಮುದಾಯಗಳಿಗೆ ರಕ್ಷಣೆ ಒದಗಿಸುವುದರ ಜೊತೆಗೆ ಎಲ್ಲಾ ರೀತಿಯ ಸಹಕಾರಗಳನ್ನು ಕೊಟ್ಟರು. ಇಂತಹ ಸಂದರ್ಭದಲ್ಲಿ ಸಮುದಾಯಗಳು ಪಾಳೆಯಪಟ್ಟುಗಳಲ್ಲಿ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದರೆನ್ನಬಹುದು. ಈ ಹಿನ್ನೆಲೆಯಲ್ಲಿ ಪಾಳೇಗಾರರ ಕಾಲದ ಒಂದೊಂದು ಘಟನೆ, ವಸ್ತು, ವ್ಯಕ್ತಿಗಳು ಸಮುದಾಯಗಳ ಮೌಖಿಕ ಸಾಹಿತ್ಯಕ್ಕೆ ವಸ್ತುವಾದವು. ಹಾಗಾಗಿ ಕೋಟೆ ಕೊತ್ತಲಗಳ ಬಗೆಗೆ, ಅದರಲ್ಲಿರುವ ಸ್ಮಾರಕಗಳ ಬಗೆಗೆ ಇಂದು ಅವುಗಳ ಸುತ್ತಮುತ್ತ ಬದುಕುವ ಜನಸಮುದಾಯಗಳು ಹಲವಾರು ಮೌಖಿಕ ಪರಂಪರೆಯ ವಿಷಯಗಳನ್ನು ಹೇಳುತ್ತಾರೆ. ಇಂತಹ ಅಂಶಗಳಿಂದ ಚರಿತ್ರೆಯ ಹೊಸ ದಿಕ್ಕನ್ನು ಕಂಡುಕೊಳ್ಳಬಹುದು. ಅಲ್ಲದೆ ಇಲ್ಲಿನ ಜನಸಾಮಾನ್ಯರ ಚಾರಿತ್ರಿಕ ಪ್ರಜ್ಞೆಯನ್ನು ಅರ್ಥಮಾಡಿಕೊಂಡು ಸ್ಥಳೀಯ ಮತ್ತು ಶ್ರಮಿಕ ವರ್ಗಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ಸಮಕಾಲೀನ ಸಮುದಾಯಗಳ ಸಾಂಸ್ಕೃತಿಕ

ಬದುಕನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಆರನೇ ಅಧ್ಯಾಯದಲ್ಲಿ 'ನಂಬಿಕೆ, ಆಚರಣೆಗಳಿಂದ ಕೋಟೆಯ ಸ್ಮಾರಕಗಳು ಸಂರಕ್ಷಣೆ'ಗೊಂಡಿವೆ ಎಂಬುದನ್ನು ಪ್ರತಿಪಾದಿಸುವುದಾಗಿದೆ. ಪಾಳೇಗಾರರ ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಿಸಿದ ಕೋಟೆಕೊತ್ತಲಗಳು ಮತ್ತು ಅದರೊಳಗಿರುವ ಸ್ಮಾರಕಗಳಲ್ಲಿ ಪರಂಪರೆಯಿಂದಲೂ ಸಮುದಾಯಗಳು ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ಪೂರೈಸಿಕೊಂಡು ಬಂದಿದ್ದಾರೆ. ಅಲ್ಲದೆ ಬದಲಾಗುತ್ತಿರುವ ಸಂದರ್ಭದಲ್ಲಿ ಯಾವುದೋ ಕಾಲದಲ್ಲಿ ನಿರ್ಮಿಸಿದ ಕೋಟೆ ಮತ್ತು ಅದರೊಳಗಿರುವ ಇತರೆ ಸ್ಮಾರಕಗಳ ಬಗೆಗೆ ಭಾವನಾತ್ಮಕ ಸಂಬಂಧ ಇಟ್ಟುಕೊಂಡು ನಂಬಿಕೆ, ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದಾರೆ. ಈ ನಂಬಿಕೆ, ಆಚರಣೆಗಳಿಂದ ಕೋಟೆಯ ಸ್ಮಾರಕಗಳು ನಾಶಗೊಳ್ಳದೆ ಹೇಗೆ ಅಭಿವೃದ್ಧಿ ಹೊಂದುತ್ತಾ ಬಂದಿವೆ ಎಂಬುದನ್ನು ನಂಬಿಕೆ, ಆಚರಣೆಗಳನ್ನು ವಿವರಿಸುತ್ತಾ ಅವುಗಳ ಹಿಂದಿನ ತಾತ್ವಿಕತೆಯನ್ನು ಚರ್ಚಿಸಲಾಗಿದೆ. ಅಲ್ಲದೆ ಪುರಾತತ್ವ ಇಲಾಖೆಯು ಯಾವ ರೀತಿಯಾಗಿ ಸ್ಮಾರಕಗಳನ್ನು ಸಂರಕ್ಷಿಸುತ್ತಿದೆ ಎಂಬುದನ್ನು ಚರ್ಚಿಸಲಾಗಿದೆ. ಏಳನೇ ಅಧ್ಯಾಯ 'ಸಮಾರೋಪ'. ಇಲ್ಲಿ ಒಟ್ಟು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರಿಸಲಾಗಿದೆ. ಹಾಗೂ ಅನುಬಂಧದಲ್ಲಿ ಕೋಟೆ ಮತ್ತು ಪಾಳೇಗಾರರಿಗೆ ಸಂಬಂಧಿಸಿದ ಲಾವಣಿಗಳನ್ನು ಕೊಡಲಾಗಿದೆ. ಅಲ್ಲದೆ, ವಕ್ತೃಗಳ ವಿವರ, ಪರಾಮರ್ಶನ ಗ್ರಂಥಗಳು ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಅಧ್ಯಯನದ ಆಕರ ಸಾಮಗ್ರಿಗಳ ಸಮೀಕ್ಷೆ

ಪುರಾತತ್ವ ಮತ್ತು ಇತಿಹಾಸ ನೆಲೆಗಟ್ಟಿನಲ್ಲಿ ಕೋಟೆಕೊತ್ತಲಗಳು ಕಂಡುಬರುವಂತವುಗಳಾಗಿವೆ. ಇಂತಹ ಕೋಟೆಕೊತ್ತಲಗಳನ್ನು ಕುರಿತ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ಇದುವರೆಗೂ ಕೋಟೆಕೊತ್ತಲಗಳನ್ನು ಕುರಿತ ಎರಡು ಕೃತಿಗಳು ಮಾತ್ರ ಪ್ರಕಟಗೊಂಡಿವೆ. ಅವುಗಳಲ್ಲಿ ನೀಕೃ. ರಾಮಶೇಷನ್‌ರ 'ಕರ್ನಾಟಕದ ಕೋಟೆಕೊತ್ತಲಗಳು'(೧೯೮೦) ಮತ್ತು ಚನ್ನಬಸಪ್ಪ ಎಸ್. ಪಾಟೀಲರ 'ಕರ್ನಾಟಕದ ಕೋಟೆಗಳು'(೧೯೯೯) ಮುಖ್ಯವಾಗಿವೆ. ಇವೆರಡು ಕೃತಿಗಳಲ್ಲಿ ಕರ್ನಾಟಕದ ಕೆಲವು ಕೋಟೆ ಕೊತ್ತಲಗಳ ಲಕ್ಷಣ, ಸ್ವರೂಪ, ಮಹತ್ವವನ್ನು ಚರ್ಚಿಸಿದ್ದಾರೆ. ಇತ್ತೀಚಿಗೆ ಕರ್ನಾಟಕದ ಕೋಟೆ ಕೊತ್ತಲಗಳನ್ನು ಜಿಲ್ಲೆಯ ವ್ಯಾಪ್ತಿ ಇಟ್ಟುಕೊಂಡು ಪಿಎಚ್.ಡಿ. ಸಂಶೋಧನೆಗಳು ನಡೆದಿವೆ. ಮತ್ತು ನಡೆಯುತ್ತಿವೆ. ಇವೆಲ್ಲವೂ ಪುರಾತತ್ವ ಮತ್ತು ಇತಿಹಾಸವನ್ನು ಕುರಿತ ಅಧ್ಯಯನಗಳಾಗಿವೆ.

ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳನ್ನು ಕುರಿತ ಸಂಶೋಧನಾತ್ಮಕ ಅಧ್ಯಯನಗಳು ನಡೆದಿಲ್ಲ. ಆದರೆ ಕೆಲವು ಕೋಟೆಕೊತ್ತಲಗಳನ್ನು ಕುರಿತ ಲೇಖನಗಳು ಮಾತ್ರ ಪುರಾತತ್ವ ಮತ್ತು ಚರಿತ್ರೆಯ ನೆಲೆಯಲ್ಲಿ ರಚನೆಗೊಂಡಿವೆ. ಇನ್ನು ಕೋಟೆಕೊತ್ತಲಗಳನ್ನು ಜಾನಪದೀಯ ನೆಲೆಯಲ್ಲಿ ಅಧ್ಯಯನ ಕೈಗೊಂಡಿಲ್ಲವೆನ್ನಬಹುದು. ಇಲ್ಲಿ ಮುಖ್ಯವಾಗಿ ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳನ್ನು ಕುರಿತ ಲಿಖಿತ ಆಕರಗಳನ್ನು ಚರ್ಚಿಸುತ್ತಾ ಜೊತೆಗೆ ಮೌಖಿಕ ಆಕರ ಗ್ರಂಥಗಳನ್ನು ಚರ್ಚಿಸಲಾಗುವುದು..

ನಿಡುಗಲ್ಲು ಸಂಸ್ಥಾನಕ್ಕೆ ಸಂಬಂಧಿಸಿದಂತೆ ದಿವಂಗತ ಆರ್.ನರಸಿಂಹಚಾರ್ಯರು 'ನಿಡುಗಲ್ಲು ಅರಸುಗಳ ವಂಶಾವಳಿ'(೧೯೩೧) ಪ್ರಕಟಿಸಿದ್ದಾರೆ. ಇದರಲ್ಲಿ ತಿಪ್ಪರಾಜನೆಂಬುವನು ಕೃಷ್ಣದೇವರಾಯರಿಂದ ಮೆಚ್ಚುಗೆ ಪಡೆದು ಹರತಿಯಲ್ಲಿ ಬಂದು ನೆಲೆಸುತ್ತಾನೆ. ಮುಂದೆ ಈತನ ಮಕ್ಕಳು ನಿಡುಗಲ್ಲು, ಸಿರಾ, ರತ್ನಗಿರಿ, ಮಿಡಿಗೇಶಿ, ಯಲ್ಲಪ್ಪನಾಯಕನ ಹೊಸಕೋಟೆಯಲ್ಲಿ ಆಳ್ವಿಕೆ ಮಾಡಿದರು ಎಂದು ವ್ಯಕ್ತವಾಗುತ್ತದೆ. ದಿವಂಗತ ಉಮಾಪತಿಯವರು(ಜಯಕರ್ನಾಟಕ ಪತ್ರಿಕೆ) 'ನಿಡುಗಲ್ಲಿನ ಕೈಫಿಯತ್ತ'ನ್ನು ಪ್ರಕಟಿಸಿದ್ದಾರೆ. ಇದರಲ್ಲಿ ನಿಡುಗಲ್ಲು ದುರ್ಗದ ಭೌಗೋಳಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ವಿವರಿಸಿದ್ದಾರೆ. ವೀರಣ್ಣ ರಾಜೂರರು ಚನ್ನಪ್ಪ ಕವಿಯ 'ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ'ಯನ್ನು ವೀರಶೈವ ತಾರಾವಳಿಯ ಸಂಪುಟದಲ್ಲಿ ಸಂಪಾದಿಸಿದ್ದಾರೆ. ಇದರಲ್ಲಿ ಚನ್ನಪ್ಪ ಕವಿಯ ಕಾಲದಲ್ಲಿ ನಡೆಯುತ್ತಿದ್ದ ಶಿಖರದ ಜಾತ್ರೆಯ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ಡಾ.ವಸುರವರು ಸಂಪಾದಿಸಿರುವ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು'(೨೦೦೧) ಕೃತಿಯಲ್ಲಿ ನಿಡುಗಲ್ಲು ಸಂಸ್ಥಾನದಲ್ಲಿ ಆಳ್ವಿಕೆ ಮಾಡಿದ ಚೋಳರ ಮತ್ತು ಹರತಿ ಪಾಳೇಗಾರರನ್ನು ಕುರಿತ ಲೇಖನಗಳಿವೆ. ಅವು 'ನಿಡುಗಲ್ಲು ಚೋಳರು' (ಕೆ.ಬಿ.ಶಿವತಾರಕ್) 'ನಿಡಗಲ್ಲು ನಾಯಕರು'(ಡಿ.ಎನ್.ಯೋಗೀಶ್ವರಪ್ಪ)ಗಳನ್ನು ಕುರಿತ ಲೇಖನಗಳಾಗಿವೆ. ಡಿ.ವಿ.ಪರಮಶಿವಮೂರ್ತಿಯವರು 'ಸಂಶೋಧನಾ ಸಿರಿ'(೧೯೯೬)ಯಲ್ಲಿ ನಿಡುಗಲ್ಲು ಪಾಳೇಗಾರರನ್ನು ಕುರಿತು ಶಾಸನಗಳ ಆಧಾರದಿಂದ ಚರ್ಚಿಸಿದ್ದಾರೆ. ನಿಡುಗಲ್ಲು ದುರ್ಗವನ್ನು ಕುರಿತ ಎರಡು ಕಾದಂಬರಿಗಳು ಸಹ ರಚಿತವಾಗಿರುವುದು ವಿಶೇಷವಾಗಿದೆ.

'ನಿಡುಗಲ್ಲು: ಒಂದು ಸಾಂಸ್ಕೃತಿಕ ಅಧ್ಯಯನ' ಎನ್ನುವ ಪ್ರೌಢ ಪ್ರಬಂಧವನ್ನು ಚಿತ್ತಯ್ಯ ಪೂಜಾರ್‌ರವರು (೨೦೦೨) ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇವರು ನಿಡುಗಲ್ಲು ದುರ್ಗದ ಭೌಗೋಳಿಕ, ರಾಜಕೀಯ ಹಿನ್ನೆಲೆ, ಸಾಮಾಜಿಕ-ಆರ್ಥಿಕ ಸ್ಥಿತಿಗತಿ, ಅಲ್ಲಿನ ಸ್ಮಾರಕಗಳ ಅವಲೋಕನ ಮತ್ತು ಆ ಪ್ರದೇಶದ ಜನಪದ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅಲ್ಲದೆ 'ಜೋಳಿಗೆ ಹೊನ್ನು' (೨೦೦೩) ಎನ್ನುವ ಕೃತಿಯಲ್ಲಿ ನಿಡುಗಲ್ಲು ದುರ್ಗದ ಮೌಖಿಕ ಕಾವ್ಯಗಳನ್ನು ಸಂಗ್ರಹಿಸಿ ಮಾಹಿತಿ ಒದಗಿಸಿದ್ದಾರೆ.

ಹಾಗಲವಾಡಿ ಸಂಸ್ಥಾನಕ್ಕೆ ಸಂಬಂಧಿಸಿದಂತೆ ಎಂ.ಎಸ್.ಪುಟ್ಟಣ್ಣ ಅವರು 'ಹಾಗಲವಾಡಿ ಪಾಳೇಗಾರರು' (೧೯೩೧) ಎನ್ನುವ ಕೃತಿ ರಚಿಸಿದ್ದಾರೆ. ಇದರಲ್ಲಿ ಹಾಗಲವಾಡಿ ನಾಯಕರ ಮೂಲ ಮತ್ತು ಕ್ರಮವಾಗಿ ಆಳ್ವಿಕೆ ಮಾಡಿದ ಪಾಳೇಗಾರರ ವಂಶಾವಳಿಯನ್ನು ವಿವರಿಸಲಾಗಿದೆ. ಡಿ.ಎನ್.ಯೋಗೀಶ್ವರಪ್ಪ 'ಹಾಗಲವಾಡಿ ನಾಯಕರು'(೧೯೯೯) ಕುರಿತು ಪಿಎಚ್.ಡಿ.ಸಂಶೋಧನೆ ಮಾಡಿದ್ದಾರೆ. ಇವರು ತಮ್ಮ ಅಧ್ಯಯನದಲ್ಲಿ ನಾಯಕರ ಮೂಲ, ರಾಜಕೀಯ ಹಿನ್ನೆಲೆ, ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಹಾಗೂ ಇನ್ನಿತರ ಸಾಂಸ್ಕೃತಿಕ ವಿಚಾರಧಾರೆಗಳನ್ನು ಚರ್ಚಿಸಿದ್ದಾರೆ. ಅಲ್ಲದೆ ಇವರು 'ಹಾಗಲವಾಡಿ ಅಮರನಾಯಕರು' (ದಕ್ಷಿಣ ಕರ್ನಾಟಕದ ಅರಸು ಮನೆತನಗಳು)ಎನ್ನುವ ಲೇಖನವನ್ನು ಸಹ ರಚಿಸಿದ್ದಾರೆ. ವೆಂಕಟರತ್ನಂರವರ

‘ಚಿಕ್ಕನಾಯಕನಹಳ್ಳಿ ಪಾಳೇಗಾರರು’(೧೯೩೧)ಎನ್ನುವ ಕೃತಿಯಲ್ಲಿಯೂ ಸಹ ಹಾಗಲವಾಡಿ ಪಾಳೇಗಾರರನ್ನು ಕುರಿತ ಮಾಹಿತಿ ಕಾಣಬಹುದಾಗಿದೆ.

ಮಧುಗಿರಿ ಮಹಾನಾಡ ಪ್ರಭುಗಳನ್ನು ಕುರಿತ ಪ್ರಮುಖ ಆಕರವೆಂದರೆ ಎಂ.ಎಂ.ಕಲಬುರ್ಗಿಯವರು ಸಂಪಾದಿಸಿರುವ ‘ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ’(೧೯೭೭)ವಾಗಿದೆ. ಇದರಲ್ಲಿ ಚಿಕ್ಕಭೂಪಾಲನ (ಇಮ್ಮಡಿ ಚಿಕ್ಕಪ್ಪಗೌಡ) ಕಾಲದ ರಾಜಕೀಯ ಚಿತ್ರಣವನ್ನು ನೀಡುವ ಕೃತಿಯಾಗಿದೆ. ಕೆ.ನಾರಾಯಣಚಾರ್ ಅವರ ‘ಮಧುಗಿರಿ ಚರಿತ್ರೆ’(೧೯೪೫) ಕೃತಿಯಲ್ಲಿ ಮಹಾನಾಡ ಪ್ರಭುಗಳ ಮೂಲ ಹಾಗೂ ಅವರ ರಾಜಕೀಯ ಹಿನ್ನೆಲೆಯನ್ನು ಚರ್ಚಿಸಿದ್ದಾರೆ. ಎಂ.ಡಿ.ಶ್ರೀನಿವಾಸ ಅವರು ‘ಮಧುಗಿರಿ ಇತಿಹಾಸ’ (೧೯೮೭) ಕೃತಿಯಲ್ಲಿ ಮಧುಗಿರಿಯ ಭೌಗೋಳಿಕ ಚರಿತ್ರೆಯನ್ನು ಹೇಳುತ್ತಲೇ ಮಹಾನಾಡ ಪ್ರಭುಗಳ ರಾಜಕೀಯ ಇತಿಹಾಸವನ್ನು ವಿವರಿಸಿದ್ದಾರೆ. ಅಲ್ಲದೆ ಶ್ರೀನಿವಾಸರು ಇಮ್ಮಡಿ ಚಿಕ್ಕಪ್ಪಗೌಡ ಮತ್ತು ಮುಮ್ಮಡಿ ಚಿಕ್ಕಪ್ಪಗೌಡರನ್ನು ಕುರಿತ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ. ಕೆ.ಬಸವರಾಜು ಮತ್ತು ಪರಶಿವಮೂರ್ತಿ ಯವರು ಸಂಪಾದಿಸಿರುವ ‘ಮಹಾನಾಡ ಪ್ರಭುಗಳು’(೧೯೯೫)ಕೃತಿಯಲ್ಲಿ ಹಲವಾರು ವಿದ್ವಾಂಸರಿಂದ ತಾತ್ವಿಕವಾದ ಲೇಖನಗಳನ್ನು ಬರೆಯಿಸಿದ್ದಾರೆ. ಈ ಲೇಖನಗಳು ಮಹಾನಾಡ ಪ್ರಭುಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಆರ್.ಕಾವಲಮ್ಮ ಅವರು ‘ಬಿಜ್ಜಾವರದ ಮಹಾನಾಡ ಪ್ರಭುಗಳು’ (ದಕ್ಷಿಣ ಕರ್ನಾಟಕದ ಅರಸು ಮನೆತನಗಳು) ಎಂಬ ಲೇಖನವನ್ನು ಬರೆದಿದ್ದಾರೆ. ಅಲ್ಲದೆ ಮಧುಗಿರಿ ಮಹಾನಾಡ ಪ್ರಭುಗಳಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೈಫಿಯತ್ತನ್ನು ಸಹ ಇವರೇ ಇತಿಹಾಸ ದರ್ಶನದಲ್ಲಿ ಪ್ರಕಟಿಸಿದ್ದಾರೆ.

ಮಿಡಿಗೇಶಿ ಪಾಳೇಗಾರರಿಗೆ ಸಂಬಂಧಿಸಿದ ಇತಿಹಾಸವನ್ನು ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯದಲ್ಲಿ ಮತ್ತು ಕೆ.ನಾರಾಯಣಚಾರ್‌ರವರ ‘ಮಧುಗಿರಿ ಚರಿತ್ರೆ’ಯಲ್ಲಿ ಉಲ್ಲೇಖಿಸಿರುವುದು ಕಾಣಬಹುದು. ಶಾಸನ ಮತ್ತು ಇನ್ನಿತರೆ ಆಕರಗಳನ್ನು ಬಳಸಿ ಡಾ.ವಸುರವರು ‘ಮಿಡಿಗೇಶಿ ಪಾಳೇಗಾರರು’ (ದಕ್ಷಿಣ ಕರ್ನಾಟಕ ಅರಸು ಮನೆತನಗಳು)ಎಂಬ ಲೇಖನವನ್ನು ಬರೆದಿದ್ದಾರೆ. ಇವರು ‘ಮಿಡಿಗೇಶಿ’ಯ ಸ್ಥಳನಾಮದ ಬಗ್ಗೆ ಚರ್ಚಿಸಿ, ಈ ಪ್ರದೇಶದಲ್ಲಿ ಯಾವ್ಯಾವ ಪಾಳೇಗಾರರು ಆಳ್ವಿಕೆ ಮಾಡಿದರು ಎಂಬ ವಿಚಾರವನ್ನು ಈ ಲೇಖನದಲ್ಲಿ ಒದಗಿಸಿದ್ದಾರೆ.

ಸಿರಾದ ಪಾಳೇಗಾರರ ಬಗೆಗೆ ಲಿಖಿತ ಆಕರಗಳಲ್ಲಿ ಮತ್ತು ಮೌಖಿಕ ಆಕರಗಳಲ್ಲಿ ಹಲವು ತೊಡಕುಗಳಿವೆ. ಅದರೂ ಹಲವು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಎಂ.ಎನ್.ಪ್ರಭಾಕರ್‌ರವರು ‘ಸಿರಾ ಪಾಳೇಗಾರರ’(ದಕ್ಷಿಣ ಕರ್ನಾಟಕ ಅರಸು ಮನೆತನಗಳು)ಬಗೆಗೆ ಲೇಖನ ಬರೆದಿದ್ದಾರೆ. ಇವರು ಸಿರಾದ ಉಗಮ, ವಿಕಾಸ ಮತ್ತು ಅಲ್ಲಿ ಆಳ್ವಿಕೆ ಮಾಡಿದ ಪಾಳೇಗಾರರ ರಾಜಕೀಯ ಇತಿಹಾಸವನ್ನು ಚರ್ಚಿಸಿದ್ದಾರೆ. ಜೊತೆಗೆ ಇಲ್ಲಿನ ಪಾಳೇಗಾರರ ವಂಶವೃಕ್ಷವನ್ನು ದಾಖಲಿಸಿದ್ದಾರೆ. ಸಿರಾದ ಪಾಳೇಗಾರರು ಹರತಿ ಮೂಲದವರಾಗಿದ್ದರಿಂದ ಎಂ.ವಿ.ಚಿತ್ರಲಿಂಗಯ್ಯರವರ ‘ಹರತಿ ಪಾಳೇಗಾರರ ಮೂಲ ವಂಶಾವಳಿ:

ಒಂದು ವ್ಯಾಸಂಗ'(ಹರತಿಸಿರಿ) ಲೇಖನವು ಪ್ರಮುಖ ಆಕರವಾಗುತ್ತದೆ. ಸಿರಾದ ಪಾಳೇಗಾರರು ಉತ್ತರದ ಮುಸ್ಲಿಂ ದೊರೆಗಳ ದಾಳಿಯಲ್ಲಿ ಚರಿತ್ರೆಯಿಂದ ಹೇಗೆ ಹಿಂದೆ ಸರಿದರು ಎಂಬುದನ್ನು ಎರಡು ಲೇಖನಗಳು ವ್ಯಕ್ತಪಡಿಸಿವೆ. ಡಾ.ಯೋಗೀಶ್ವರಪ್ಪ ಅವರ 'ಸಿರಾದ ನವಾಬರು'(ದಕ್ಷಿಣ ಕರ್ನಾಟಕ ಅರಸು ಮನೆತನಗಳು) ಲೇಖನವು ಉತ್ತರದ ಮುಸ್ಲಿಂ ದೊರೆಗಳು ಯಾವ್ಯಾವ ಸುಬೇದಾರರನ್ನು ನೇಮಿಸಿ ಆಳ್ವಿಕೆ ನಡೆಸಿದರು. ಮತ್ತು ಅವರ ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಯಾವುವು ಎಂಬುದನ್ನು ಈ ಲೇಖನದಲ್ಲಿ ಕಾಣಬಹುದು. ಇದೇ ಮಾಹಿತಿಯನ್ನು ಡಾ.ವಸುರವರು ಅನುವಾದಿಸಿರುವ 'ಸಿರಾದ ಸುಬೇದಾರರು'(ದಕ್ಷಿಣ ಕರ್ನಾಟಕ ಅರಸು ಮನೆತನಗಳು) ಲೇಖನದಲ್ಲಿ ಕಾಣಬಹುದು.

ಸಿರಾದ ಪಾಳೇಗಾರರ ಬಗೆಗೆ ಲಿಖಿತ ಆಕರಗಳಿಗಿಂತ ಮೌಖಿಕ ಆಕರಗಳು ಹೇರಳವಾಗಿ ದೊರೆಯುತ್ತವೆ. ಅದರಲ್ಲಿ ಎಚ್.ವಿ.ವೀರನಾಯಕರ 'ಗುಮ್ಮಳ್ಳಿ ಕದನ'(೧೯೮೩) ಕೃತಿಯಲ್ಲಿ ರಂಗಣ್ಣನಾಯಕ ಮತ್ತು ಪೂವ್ವಲ ಕೆಂಗನಿಗೆ ನಡೆದ ಘರ್ಷಣೆಯನ್ನು ಇದರಲ್ಲಿ ಕಾಣಬಹುದು. ಎಚ್.ವಿ.ವೀರನಾಯಕರು ಜನಪದ ಕಾವ್ಯವನ್ನು ಸಂಗ್ರಹಿಸಿ, ಈ ಕಾವ್ಯದ ಹಿನ್ನೆಲೆಯಲ್ಲಿ ಸುದೀರ್ಘ ವಿಮರ್ಶೆ ಮಾಡಿದ್ದಾರೆ. ಈ ಮೇಲಿನ ವಸ್ತುವನ್ನೇ(ಮಾಹಿತಿಯನ್ನೇ) ಹೇಳುವ ಇನ್ನೆರಡು ಲಾವಣಿಗಳನ್ನು ಕಾಣಬಹುದು. 'ಸಿರಾ ರಂಗಪ್ಪರಾಜರ ಯುದ್ಧದ ಲಾವಣಿ', 'ಸೀರ್‍ಯಾದ ರಂಗಣ್ಣನಾಯಕನ ಲಾವಣಿ' ಇವು ಮುಖ್ಯ ಮೌಖಿಕ ಆಕರಗಳಾಗಿವೆ. ಸಿರಾದ ಪಾಳೇಗಾರರ ಇತಿಹಾಸವನ್ನು ಕುರಿತ ಮೌಖಿಕ ಆಕರಗಳ ಹಿನ್ನೆಲೆಯಲ್ಲಿ ಸಾವಿತ್ರಮ್ಮ ಜಯಣ್ಣರವರು ಒಂದು ಲೇಖನವನ್ನು ಬರೆದಿದ್ದಾರೆ.

ಪಾವಗಡದ ಪಾಳೇಗಾರರಿಗೆ ಸಂಬಂಧಿಸಿದಂತೆ ವಿ.ಆರ್.ಚಲುವರಾಜನ್‌ರವರು 'ಪಾವಗಡ ತಾಲ್ಲೂಕು ದರ್ಶನ'(೧೯೮೭)ದಲ್ಲಿ ಪಾವಗಡದ ಕೋಟೆ ಕೊತ್ತಲಗಳನ್ನು ಸ್ಥಾಪಿಸಿ, ಆಳ್ವಿಕೆ ಮಾಡಿದ ಪಾಳೇಗಾರರ ಬಗೆಗೆ ಮಾಹಿತಿ ಒದಗಿಸಿದ್ದಾರೆ. ಎಸ್.ನಾಗರತ್ನಮ್ಮರವರು 'ಪಾವಗಡದ ಪಾಳೇಗಾರರು'(ದಕ್ಷಿಣ ಕರ್ನಾಟಕ ಅರಸು ಮನೆತನಗಳು)ಎಂಬ ಲೇಖನದಲ್ಲಿ ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಮತ್ತು ಆ ಪರಿಸರದಲ್ಲಿ ದೊರೆಯುವ ಮೌಖಿಕ ಅಂಶಗಳ ಹಿನ್ನೆಲೆಯಲ್ಲಿ ಪಾವಗಡದ ಪಾಳೇಗಾರರ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿ ಕೊಡುತ್ತಾರೆ.

ಯಲ್ಲಪ್ಪನಾಯಕನ ಹೊಸಕೋಟೆಗೆ ಸಂಬಂಧಿಸಿದಂತೆ ಎಂ.ಎನ್.ನಾಯಕ್‌ರವರು ವಾಲ್ಮೀಕಿ ವಾಣಿ ಪತ್ರಿಕೆಯಲ್ಲಿ 'ರಾಜ ಕಸ್ತೂರಿ ಬೊಬ್ಬುಲಿ ಯಲ್ಲಪ್ಪನಾಯಕ' ಎಂಬ ಲೇಖನ ಪ್ರಕಟಿಸಿದ್ದಾರೆ. ಈ ಲೇಖನವು ಹೆಚ್ಚು ಮೌಖಿಕ ಅಂಶಗಳನ್ನು ಅವಲಂಬಿಸಿ, ಯಲ್ಲಪ್ಪನಾಯಕನ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಅಲ್ಲದೆ ಯಲ್ಲಪ್ಪನಾಯಕನು ಕುಂದುರ್ಪಿಯ ಮೂಲದವನೆಂದು ಹೇಳುತ್ತಾರೆ. ಈಗಲೂ ಪಾಳೇಗಾರರ ವಂಶಸ್ಥರು ಮತ್ತು ಇಲ್ಲಿ ಜನಸಮುದಾಯಗಳು ಆಚರಿಸುವ ದಸರಾ ಮೆರವಣಿಗೆಯ ಮಾಹಿತಿಯನ್ನು ಒದಗಿಸುತ್ತಾರೆ.

ಕೊರಟಗೆರೆ ಪಾಳೇಗಾರರ ಬಗೆಗೆ ಮಾಹಿತಿ ನೀಡುವ ಎರಡು ಲೇಖನಗಳು ಎನ್.ಪದ್ಮನಾಭರಿಂದ ರಚಿತಗೊಂಡಿವೆ. 'ಕೊರಟಗೆರೆ ಪಾಳೇಗಾರ ರಣಭೈರೇಗೌಡ ಹಾಗೂ ಮಧುಗಿರಿ ಚಿಕ್ಕಪ್ಪಗೌಡನ ನಡುವಿನ

ಕಾಳಗ' ಮತ್ತು 'ಕೊರಟಗೆರೆ ಪಾಳೇಗಾರ ರಣಭೈರೇಗೌಡನ ಅವಸಾನದ ದಿನಗಳು' ಎಂಬ ಲೇಖನಗಳಲ್ಲಿ ಕೊರಟಗೆರೆ ಪಾಳೇಗಾರ ಹಾಗೂ ಮಧುಗಿರಿ ಚಿಕ್ಕಪ್ಪಗೌಡನ ಕಾಳಗದಲ್ಲಿ ಕೊರಟಗೆರೆ ಪಾಳೇಗಾರನಿಗೆ ಜಯ ಮತ್ತು ಕೊರಟಗೆರೆ ಪಾಳೇಗಾರನ ಕೊನೆಯ ಅವಸಾನದ ದಿನಗಳನ್ನು ತಾನು ಸಾಕಿದ ಲಿಂಗಣ್ಣ ಗೌಡನಿಂದಲೇ ಕಾಣಬೇಕಾಯಿತು ಎನ್ನುವ ವಿಚಾರಗಳನ್ನು ಒದಗಿಸುತ್ತಾರೆ.

ದೇವರಾಯನ ದುರ್ಗದ ಇತಿಹಾಸ ಹೇಳುವ ಆಕರ ಸಾಮಗ್ರಿಗಳು ವಿರಳವೆನ್ನಬಹುದು. ಆದರೂ ಬಹಳ ಮುಖ್ಯವಾದ ಮೂರು ಲೇಖನಗಳಿವೆ. ಅದರಲ್ಲಿ ಡಾ.ಅರುಣಿಯವರು ಬರೆದಿರುವ 'ದೇವರಾಯನ ದುರ್ಗ' ಎಂಬ ಲೇಖನದಲ್ಲಿ ಇತಿಹಾಸದ ಮಾಹಿತಿ ಕೊಡುತ್ತಲೇ ಅಲ್ಲಿನ ಕೋಟೆಕೊತ್ತಲಗಳ ಸ್ವರೂಪವನ್ನು ಚರ್ಚಿಸಿದ್ದಾರೆ. ಶ್ರೀಮತಿ ಗಾಯಿತ್ರಿಸ್ವಾಮಿಯವರು 'ದೇವರಾಯನ ದುರ್ಗದ ಇತಿಹಾಸ ಮತ್ತು ಧಾರ್ಮಿಕ ಹಿನ್ನೆಲೆ'(ಪದ್ಮಶಾಲಿ ಪತ್ರಿಕೆ)ಯನ್ನು ಕುರಿತ ಲೇಖನವನ್ನು ರಚಿಸಿದ್ದಾರೆ. ಇವರು ಈ ದುರ್ಗದ ಇತಿಹಾಸವನ್ನು ಹೇಳುತ್ತಾ ಅಲ್ಲಿ ನಡೆಯುವ ಜಾತ್ರೆ, ಉತ್ಸವಗಳನ್ನು ಸಹ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ಕೆ.ಎಲ್. ಶ್ರೀರಂಗಯ್ಯರವರು 'ದೇವರಾಯನ ದುರ್ಗದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಕಲ್ಯಾಣೋತ್ಸವ'(ಪದ್ಮಶಾಲಿ ಪತ್ರಿಕೆ)ಕುರಿತ ವಿವರವನ್ನು ತಮ್ಮ ಲೇಖನದಲ್ಲಿ ಒದಗಿಸಿದ್ದಾರೆ.

ಹುಲಿಯೂರು ದುರ್ಗಕ್ಕೆ ಸಂಬಂಧಿಸಿದಂತೆ ಹು.ಪು.ಸದಾಶಿವಪ್ಪರವರು 'ಹುಲಿಯೂರು ದುರ್ಗ' ಕೃತಿಯಲ್ಲಿ ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಂಡು, ಇಲ್ಲಿನ ಭೌಗೋಳಿಕ ಮತ್ತು ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸಿದ್ದಾರೆ. ಅಲ್ಲದೆ ಹುತ್ರಿದುರ್ಗ, ಬಂಗಾರನಾಯಕನ ದುರ್ಗ ಹಾಗೂ ಇನ್ನಿತರೆ ಕೋಟೆಗಳ ಬಗೆಗೆ ಸಿ.ಎನ್.ಭಾಸ್ಕರ್‌ರವರ ಕೃತಿಯಾದ 'ತುಮಕೂರು ಜಿಲ್ಲಾ ದರ್ಶನ'ವು ಮಾಹಿತಿಯನ್ನು ಒದಗಿಸುತ್ತದೆ. ಇವಲ್ಲದೆ ಶಾಸನಗಳು, ಜಿಲ್ಲಾ ಗೆಜೆಟಿಯರ್‌ಗಳು, ರಾಜ್ಯ ಗೆಜೆಟಿಯರ್, ಎಂ.ಎ.ಆರ್. ಹಾಗೂ ತಾಲ್ಲೂಕು ದರ್ಶನಗಳು ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳ ಬಗೆಗೆ ಮತ್ತು ಅವರು ನಿರ್ಮಿಸಿದ ಕೋಟೆಗಳ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ.

ಈ ಮೇಲಿನ ಎಲ್ಲಾ ಆಕರಗಳು ಬರಹರೂಪದಲ್ಲಿದ್ದರೆ, ಇನ್ನೂ ಹಲವಾರು ಜನಪದರ ಮಿಥ್‌ಗಳು, ಹಾಡುಗಳು, ಬರಹರೂಪದಲ್ಲಿ ಪ್ರಕಟವಾಗಿರದ ಆಕರ ಸಾಮಗ್ರಿಗಳಾಗಿವೆ. ಇವಲ್ಲದೆ ನಿಡುಗಲ್ಲು, ಪಾವಗಡ, ಯಲ್ಲಪ್ಪನಾಯಕನ ಹೊಸಕೋಟೆ, ದೇವರಾಯನ ದುರ್ಗ, ಮಧುಗಿರಿ, ಕೊರಟಗೆರೆ, ಮಿಡಿಗೇಶಿ, ಭಸ್ಮಾಂಗಿ, ಹುತ್ರಿದುರ್ಗ, ಹುಲಿಯೂರು ದುರ್ಗ, ಹಾಗಲವಾಡಿ ಇತ್ಯಾದಿ ಕೋಟೆಯ ಸ್ಮಾರಕಗಳಲ್ಲಿ ನಡೆಯುವ ನಿತ್ಯಪೂಜೆಗಳು, ಕಲ್ಯಾಣೋತ್ಸವ, ಜಾತ್ರೆ ಮುಂತಾದ ವೈಶಿಷ್ಟ್ಯಪೂರ್ಣ ಆಚರಣೆಗಳು ಮತ್ತು ನಂಬಿಕೆಗಳು ಮುಖ್ಯವಾಗುತ್ತವೆ. ಇಂತಹ ಹಲವಾರು ವಕ್ತೃಗಳ ಹೇಳಿಕೆಗಳು ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಇರುವ ಪ್ರಮುಖ ಆಕರ ಸಾಮಗ್ರಿಗಳಾಗುತ್ತವೆ. ಇವುಗಳೆಲ್ಲವನ್ನು ನನ್ನ ಅಧ್ಯಯನದ ಸಂದರ್ಭದಲ್ಲಿ ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಾಯ ೨

ಕೋಟೆಗಳು : ಲಿಖಿತ ಮತ್ತು ಮೌಖಿಕ ಸಾಹಿತ್ಯ ಚರ್ಚೆಗಳು

೨.೧. ಕೋಟೆಗಳು : ಲಿಖಿತ ಸಾಹಿತ್ಯ

೨.೧.೧. ಪೀಠಿಕೆ

೨.೧.೨. ಅರ್ಥವಿವರಣೆ

೨.೧.೩. ವಿಶ್ವದ ಅತಿ ಪ್ರಾಚೀನ ಕೋಟೆಗಳು

೨.೧.೪. ಭಾರತದ ಪ್ರಾಚೀನ ಕೋಟೆಗಳು

೨.೧.೫. ಕರ್ನಾಟಕದ ಪ್ರಾಚೀನ ಕೋಟೆಗಳು

೨.೧.೬. ಸಾಹಿತ್ಯದಲ್ಲಿ ಕೋಟೆಗಳು

೨.೧.೭. ಕೊತ್ತಲಗಳು

೨.೨. ಕೋಟೆಗಳು : ಮೌಖಿಕ ಸಾಹಿತ್ಯ (ಕಾವ್ಯ)

೨.೨.೧. ಪೀಠಿಕೆ

೨.೨.೨. ಪುರಾಣಗಳಲ್ಲಿ ಕೋಟೆಗಳ ಉಲ್ಲೇಖ

೨.೨.೩. ಕೋಟೆಯ ನಿರ್ಮಾಣದ ಪೂರ್ವ

೨.೨.೪. ಕೋಟೆಯ ನಿರ್ಮಾಣ

೨.೨.೫. ಕೋಟೆಗೆ ಬಲಿ

೨.೨.೬. ಕೋಟೆ ಕಟ್ಟಿಸಿದ ವ್ಯಕ್ತಿಯ ಉಲ್ಲೇಖ

೨.೨.೭. ಕೊತ್ತಲಗಳು

೨.೨.೮. ಕೋಟೆಯ ಅಭೇಧ್ಯತೆ

೨.೨.೯. ಫಿರಂಗಿಯ ನಿರ್ಮಾಣ

೨.೨.೧೦. ಕೋಟೆಗಳ ನಾಶ

ಕೋಟೆಗಳು : ಲಿಖಿತ ಮತ್ತು ಮೌಖಿಕ ಸಾಹಿತ್ಯದಲ್ಲಿ ಕೋಟೆಗಳು

೨.೧. ಕೋಟೆಗಳು : ಲಿಖಿತ ಸಾಹಿತ್ಯ

೨.೧.೧.ಪೀಠಿಕೆ

ಕೋಟೆಗಳು ಪ್ರಾಚೀನ ಪೂರ್ವಕಾಲದಲ್ಲೇ ರಚನೆಗೊಂಡಿದ್ದವು ಎಂಬುದನ್ನು ಅನೇಕ ಲಿಖಿತ ದಾಖಲೆಗಳು ದೃಢಪಡಿಸುತ್ತವೆ. ಆ ದಾಖಲೆಗಳಲ್ಲಿ ಪ್ರಮುಖವಾಗಿ ಕೌಟಿಲ್ಯನ ಅರ್ಥಶಾಸ್ತ್ರ ಪ್ರಮುಖ ವಾದುದು. ಅದು ರಾಜ, ರಾಜ್ಯ, ಆತನ ಆಡಳಿತ, ಆರ್ಥಿಕತೆ, ಆತನು ನಿರ್ಮಿಸುವ ಸ್ಮಾರಕಗಳ ಬಗೆಗೆ ಸವಿಸ್ತಾರವಾಗಿ ವಿವರಿಸುತ್ತದೆ. ಈ ಪ್ರಾಚೀನ ದಾಖಲೆಯಲ್ಲಿ ಕೋಟೆಗಳ ರಚನೆಯ ಪ್ರಮುಖ ಉದ್ದೇಶವೇನು? ಅವುಗಳ ನಿರ್ಮಾಣದ ಬಗೆ ಹೇಗೆ? ಕೋಟೆಗಳಲ್ಲಿ ಎಷ್ಟುವಿಧ? ಕೋಟೆಯ ರಕ್ಷಣೆಯ ದೃಷ್ಟಿಯಿಂದ ಕೊತ್ತಲಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗುತ್ತಿತ್ತು? ಈ ಅಂಶಗಳನ್ನು ವಿವರವಾಗಿ ತಿಳಿಸಲಾಗಿದೆ. ಇದೇ ರೀತಿ ರಾಜಾಶ್ರಯವನ್ನು ಅವಲಂಬಿಸಿ ಸಾಹಿತ್ಯವನ್ನು ಬರೆಯುತ್ತಿದ್ದ ಹಲವಾರು ಪ್ರಾಚೀನ, ಮಧ್ಯಕಾಲೀನ ಕವಿಗಳು ಕೋಟೆಗಳ ಮಹತ್ವ, ಕೋಟೆಗಳ ವರ್ಣನೆ, ಕೋಟೆಗಳ ಆಕ್ರಮಣದ ಸಂದರ್ಭದಲ್ಲಿ ಅವುಗಳ ಪಾತ್ರ ಕುರಿತು ಉಲ್ಲೇಖಿಸಿರುವುದು ಕಾಣಬಹುದು. ಇಲ್ಲಿಯವರೆಗೂ ಲಿಖಿತ ಸಾಹಿತ್ಯದಲ್ಲಿ ಕೋಟೆಗಳ ಮಹತ್ವವು ಹೇಗೆ ಚರ್ಚಿತವಾಗಿರುವ ರೀತಿಯನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗುವುದು.

ಲಿಖಿತ ಸಾಹಿತ್ಯದಂತೆ ಮೌಖಿಕ ಸಾಹಿತ್ಯವೂ ಕೋಟೆಗಳ ಬಗೆಗೆ ತನ್ನದೇ ಆದ ವಿಚಾರಗಳನ್ನು ಕಥನಗಳಲ್ಲಿ ಅಭಿವ್ಯಕ್ತಿಸಿದೆ. ಇದರಲ್ಲಿ ಕೋಟೆಗಳ ಸ್ಥಾಪನೆ, ಕೋಟೆಗಳ ನಿರ್ಮಾಣ, ನಿರ್ಮಾಣದ ಹಂತದಲ್ಲಿ ಬಲಿಕೊಟ್ಟ ಸಂದರ್ಭಗಳು, ಕೋಟೆಗಳ ವರ್ಣನೆ, ಕೋಟೆಗಳ ಆಕ್ರಮಣ ಮತ್ತು ಕೋಟೆಗಳ ನಾಶವನ್ನು ಕುರಿತು ದಾಖಲೆಗಳು ದೊರೆಯುತ್ತವೆ. ಹೀಗೆ ಈ ದಾಖಲುಗೊಂಡ ಮೌಖಿಕ ಸಾಹಿತ್ಯವನ್ನು ಆಧಾರವಾಗಿರಿಸಿಕೊಂಡು ಕೋಟೆಗಳ ಪ್ರಸ್ತಾಪ ಚರ್ಚಿಸಲಾಗುವುದು.

೨.೧.೨. ಅರ್ಥವಿವರಣೆ

ಪ್ರಾಚೀನ ಕಾಲದಲ್ಲಿ ಭದ್ರತೆ ಮತ್ತು ರಕ್ಷಣೆಯ ದೃಷ್ಟಿಯಿಂದ ಕೋಟೆ ಕೊತ್ತಲಗಳು ಮಹತ್ವದ ಪಾತ್ರವಹಿಸಿದ್ದವು. ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಎಲ್ಲಾ ಜನರು ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ತಮ್ಮ ಸಂಪತ್ತನ್ನು ಕಳ್ಳರಿಂದ, ವೈರಿಗಳಿಂದ, ಕಾಡು

ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಅವರು ಊರುಗಳ ಸುತ್ತಲೂ ಎತ್ತರವಾದ ಗೋಡೆ ಕಟ್ಟುತ್ತಿದ್ದರು. ಇದನ್ನು ಸುತ್ತುಗೋಡೆ ಅಥವಾ ಕಾವಲು ಗೋಡೆ ಎಂದು ಕರೆಯಲಾಗಿದೆ. ಈ ಗ್ರಾಮಗಳು ಬೆಳೆದು ಪಟ್ಟಣಗಳಾಗಿ, ಇವೆಲ್ಲಾ ಒಟ್ಟುಗೂಡಿ ರಾಜ್ಯ ಸ್ಥಾಪನೆಯಾದ ಮೇಲೆ ಆಳುವ ರಾಜರುಗಳು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಮತ್ತು ಗಡಿಪ್ರದೇಶದಲ್ಲಿ ಬಲವಾದ ಕೋಟೆಗಳನ್ನು ಕಟ್ಟಲಾರಂಭಿಸಿದರು.[೧] ಕೋಟೆಯ ಒಳಗೆ ಇರುವ ವ್ಯಕ್ತಿಗಳಿಗೆ ಜೀವನಾವಶ್ಯವಾದ ವಸ್ತುಗಳನ್ನು ಸಂಗ್ರಹಿಸಿಟ್ಟು ಕೊಳ್ಳುತ್ತಿದ್ದರು. ಇದರಿಂದ ಕೋಟೆಯಿಂದ ರಕ್ಷಣೆಗೊಳಗಾದವರು ಹಲವು ದಿನಗಳವರೆಗೆ ಆಕ್ರಮಣಕಾರರಿಂದ ಯಾವುದೇ ತೊಂದರೆಯಿಲ್ಲದೆ ಸುರಕ್ಷಿತವಾಗಿರುತ್ತಿದ್ದರು.

ಕೋಟೆಗೆ ಹಳಗನ್ನಡದಲ್ಲಿ ಕೋಂಟೆ(ಗುಣವರ್ಮನ ಪುಷ್ಪದಂತಪುರಾಣ ೧೨೩೦) ಎಂಬ ಮೂಲ ರೂಪವನ್ನು ಕಾಣಬಹುದು. ಶಬ್ದಕೋಶದಲ್ಲಿ ಕೋಟೆಗೆ ಕಿಲ್ಲೆಯೆಂತಲೂ, ಕೋಟೆಯ ಗೋಡೆಯೆಂತಲೂ ಅರ್ಥವಿವರಣೆ ನೀಡಿದ್ದಾರೆ.[೨] ಕೋಟೆಯೆಂದರೆ ಸುತ್ತಲೂ ಗೋಡೆಯಿಂದ ಕೂಡಿದ್ದು, ಒಳಗಡೆ ಆವರಣವುಳ್ಳ ಪ್ರದೇಶವೆಂದರ್ಥ. ಇದನ್ನು ಸಂಸ್ಕೃತದಲ್ಲಿ ದುರ್ಗ, ದುಗ್ಗವೆಂದು ಕರೆಯಲಾಗಿದೆ. ಕೋಟೆಗೆ ದುರ್ಗ, ಪುರ, ಕಿಲ್ಲೆ, ವಾಡಿ, ಗಡ, ಪ್ರಾಕಾರ ಎಂಬ ಹಲವಾರು ಪದಗಳು ಬಳಸಲಾಗುತ್ತದೆ. ವೈದಿಕ ಸಾಹಿತ್ಯದಲ್ಲಿ ಪುರದ ಉಲ್ಲೇಖ ದೊರೆಯುತ್ತದೆ. ಇದರ ಅರ್ಥ ಭದ್ರವಾದಂತಹ ಕೋಟೆಯನ್ನು ಹೊಂದಿರುವ ಪಟ್ಟಣವೆಂದಾಗುತ್ತದೆ.

ಕೋಟೆ-ಕೊತ್ತಲ ಎಂಬ ಜೋಡಿ ಪದಗಳು ಬೇರೆ ಬೇರೆ ಅರ್ಥಗಳನ್ನು ಒಳಗೊಂಡಿದೆ. ಆದರೂ ಈ ಜೋಡಿಪದ ಒಂದೇ ಪದದ ಹಾಗೆ ಬಳಕೆಯಾಗುತ್ತದೆ. ಕೊತ್ತಲವನ್ನು ಉರ್ದುವಿನಲ್ಲಿ 'ಬುರುಜು' ಎಂದು ಕರೆಯಲಾಗುತ್ತದೆ. ಕೊತ್ತಲಗಳನ್ನು ಕೋಟೆಯ ಜೊತೆಗೆ ಕೂಡಿಸಿಕಟ್ಟಿರುತ್ತಾರೆ. ಇವು ಕೋಟೆಯ ಸಂರಕ್ಷಣೆಯ ದೃಷ್ಟಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಕೋಟೆಯ ಗೋಡೆಗೆ ಆಸರೆಯನ್ನು ಕೊತ್ತಲಗಳು ಒದಗಿಸುತ್ತವೆ. ಸೈನಿಕರು ಯುದ್ಧದ ಸಂದರ್ಭದಲ್ಲಿ ಈ ಕೊತ್ತಲಗಳ ಮೇಲೆ ನಿಂತು ಕಾದಾಡಿ ಕೋಟೆಯನ್ನು ಸಂರಕ್ಷಿಸುತ್ತಿದ್ದರು. ಇದರ ಮೇಲೆ ಸೈನಿಕರು ಉಳಿದುಕೊಳ್ಳಲು ಅಗತ್ಯವಾದ ಸೌಕರ್ಯವನ್ನು ಮಾಡಿರುತ್ತಿದ್ದುದು ಹಲವಾರು ಕೋಟೆಗಳಲ್ಲಿ ಕಾಣಬಹುದು. ಕೊತ್ತಲಗಳ ಹಾಗೆ ಕಂದಕವೂ ಕೋಟೆಯ ಸಂರಕ್ಷಣೆಯಲ್ಲಿ ಬಹಳ ಮುಖ್ಯ ಪಾತ್ರವಹಿಸಿದೆ. ಕೋಟೆಯ ಸುತ್ತಲೂ ಆಳವಾದ, ಅಗಲವಾದ ಕಂದಕ ತೆಗೆದಿರುತ್ತಿದ್ದರು. ಈ ಕಂದಕದಲ್ಲಿ ನೀರು, ವಿಷಜಂತುಗಳು, ಕಳ್ಳೆ, ಜಂಡು ಇನ್ನು ಮುಂತಾದವನ್ನು ಹಾಕಿರುತ್ತಿದ್ದರು. ಇದರಿಂದ ಕೋಟೆಯನ್ನು ಆಕ್ರಮಣದಿಂದ ಪಾರು ಮಾಡಲು ಸಾಧ್ಯವಾಗುತ್ತಿತ್ತು.

೨.೧.೩. ವಿಶ್ವದ ಅತಿ ಪ್ರಾಚೀನ ಕೋಟೆಗಳು

ವಿಶ್ವದ ಚರಿತ್ರೆಯಲ್ಲಿ ಕೋಟೆಗಳ ರಚನೆಯ ಕಾಲವು ಕ್ರಿ.ಪೂರ್ವಕ್ಕೆ ಕೊಂಡೊಯ್ಯುತ್ತದೆ. ಕ್ರಿ.ಪೂ. ೨೦೦ಕ್ಕೂ ಹಿಂದಿನದೆಂದು ಹೇಳಲಾದ ನಿನೆವ ಮತ್ತು ಬೇಬಿಲೋನಿಯ(ಗ್ರೀಸ್) ನಾಗರಿಕತೆಯ

ಸ್ಮಾರಕಗಳಲ್ಲಿ ರಕ್ಷಣಾ ಗೋಡೆಗಳು ೫೦ ಮೈಲಿ ಸುತ್ತಳತೆ, ೧೫೦ ಅಡಿ ಎತ್ತರ, ೩೦ ಅಡಿ ದಪ್ಪವಿರುವುದು ನಿನೆವಾದ ಕೋಟೆ ಗೋಡೆಯ ಮೇಲೆ ೧೫೦೦ ರಕ್ಷಣಾ ಗೋಡೆಗಳಿದ್ದುವೆಂದು ಇತಿಹಾಸದ ಪುಟಗಳಲ್ಲಿ ಹೇಳಲಾಗುತ್ತದೆ. ಇಲ್ಲಿನ ಭೂಮಧ್ಯ ಸಮುದ್ರದ ಜನರು ಕ್ರಿ.ಪೂ. ೬೦೦ರಲ್ಲೇ ಇಟ್ಟಿಗೆ, ಮಣ್ಣು ಬೆರಸಿ ಕೋಟೆ ಕಟ್ಟುವ ವಿಧಾನ ತಿಳಿದಿದ್ದರೆಂದು ತಿಳಿದುಬರುತ್ತದೆ.[೩] ಇದರ ಹಾಗೆ ಮತ್ತೊಂದು ಅಪೂರ್ವವಾದ ಕೋಟೆ ಕ್ರಿ.ಪೂ.೨೨೧ಕ್ಕೆ ಸೇರಿದ್ದು, ಇದು ಚೀನಾದ ಉದ್ದವಾದ ರಕ್ಷಣಾಗೋಡೆಯಾಗಿದೆ. ಇದನ್ನು ಮಂಗೋಲಿಯನ್ನರ ಆಕ್ರಮಣ ತಡೆಯಲು ರಕ್ಷಣೆಯ ಗೋಡೆಯಾಗಿ ನಿರ್ಮಿಸಲಾಗಿದೆ. ಇದು ಪೂರ್ಣಗೊಳ್ಳಲು ೧೦ ವರ್ಷ ಅವಧಿ ತೆಗೆದುಕೊಳ್ಳಲಾಗಿದೆ. ಇದು ೨೫ ಅಡಿ ಅಗಲ, ೨೦ ಅಡಿ ಎತ್ತರವಿರುವ ಸುಮಾರು ೨೦೦೦ ಮೈಲಿಯುಳ್ಳದಾಗಿದೆ.[೪] ಕೋಟೆಗಳಲ್ಲಿ ಬೃಹದಾಕಾರದ ಕೋಟೆ ರೋಮನ್ ಸಾಮ್ರಾಜ್ಯಗಳದ್ದು. ಇಲ್ಲಿನ ಕೋಟೆಗಳನ್ನು ವಾಸ್ತುಶಾಸ್ತ್ರದ ಹಿನ್ನೆಲೆಯಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯ ಸುತ್ತಲೂ ಕಂದಕ, ಪಹರೆದುರ್ಗ, ಕಾವಲಿನವರಿಗೆ ವಿಶ್ರಾಂತಿ ತಾಣ, ಮರೆಯಿಂದ ಆಯುಧಗಳನ್ನು ಎಸೆದು ಶತ್ರುಗಳನ್ನು ತಡೆಯಲು ನೆರವಾಗುವ ಕಿಂಡಿಗಳು ಮೊದಲಾದವನ್ನು ನಿರ್ಮಿಸಲಾಗಿತ್ತು. ಇದೊಂದು ತಂತ್ರಜ್ಞಾನದಿಂದ ನಿರ್ಮಿತವಾದ ಕೋಟೆಯೆನ್ನಬಹುದಾಗಿದೆ.[೫] ಅಂತಹದೇ ಮತ್ತೊಂದು ಪ್ರಾಚೀನ ಕೋಟೆ ಇಂಕಾ ಸಾಮ್ರಾಜ್ಯದಲ್ಲಿದ್ದುದು ಕಂಡುಬರುತ್ತದೆ. ಇಲ್ಲಿನ ಕೋಟೆಯು ದೈತ್ಯಕಾರದ್ದಾಗಿದ್ದು, ಅದಕ್ಕೆ ಬಳಸಿದ ಒಂದೊಂದು ಕಲ್ಲು ೨೦ ಅಡಿ ಎತ್ತರದ್ದು, ೧೦೦ ಟನ್‌ಗೂ ಮೀರಿದ ಭಾರವಿತ್ತೆಂದು ಊಹಿಸಲಾಗಿದೆ. ಇಂಥ ಬೃಹತ್ ಶಿಲೆಗಳನ್ನು ಒಂದೇ ಆಕಾರದಲ್ಲಿ ಕತ್ತರಿಸಿ ಒಂದರ ಮೇಲೊಂದು ಜೋಡಿಸಿ ಸಂದು ಬಿಡದೇ ನಿರ್ಮಿಸಿರುವ ಬಗ್ಗೆ ಆಶ್ಚರ್ಯ ವ್ಯಕ್ತವಾಗಿದೆ.[೬] ಈ ಬಗೆಯ ವಿವರಗಳು ಪ್ರಾಚೀನ ಕಾಲದಲ್ಲಿ ಕೋಟೆಗಳನ್ನು ಅತಿ ಚಾತುರ್ಯದಿಂದ ನಿರ್ಮಾಣ ಮಾಡಲಾಗುತ್ತಿತ್ತು ಎಂಬ ಅಂಶವನ್ನು ಮನವರಿಕೆ ಮಾಡಿ ಕೊಡುತ್ತದೆ.

೨.೧.೪. ಭಾರತದ ಪ್ರಾಚೀನ ಕೋಟೆಗಳು

ಭಾರತದ ಚರಿತ್ರೆಯಲ್ಲಿ ಕೋಟೆಗಳ ನಿರ್ಮಾಣವು ಅತೀ ಪ್ರಾಚೀನ ಕಾಲದಿಂದಲೇ ಆಗಿದೆಯೆಂಬುದನ್ನು ಕಾಣಬಹುದು. ಪುರಾತನ ದೆಹಲಿಯು ೧೫ ಉಪನಗರಗಳಿಂದ ಕೂಡಿದ್ದು, ಅದರ ಸುತ್ತಲೂ ಬೃಹತ್ ಶಿಲಾಭಿತ್ತಿಗಳಿದ್ದವೆಂದು ತಿಳಿದುಬರುತ್ತದೆ. ಇಂದ್ರಪ್ರಸ್ಥದಲ್ಲಿದ್ದ ಪಾಂಡವರ ಕೋಟೆ ಜಾಗದಲ್ಲಿ ಹುಮಾಯೂನ್ ಕಟ್ಟಿದ ಹಳೇ ಕೋಟೆಯಿದೆ[೭] ಎಂಬ ಪ್ರಸ್ತಾಪ ಕನ್ನಡ ವಿಶ್ವಕೋಶದಲ್ಲಿದೆ. ವಾಲ್ಮೀಕಿಯ ರಾಮಾಯಣದಲ್ಲಿ ಮತ್ತು ವ್ಯಾಸರ ಮಹಾಭಾರತದಲ್ಲಿಯೂ ಕೋಟೆಗಳ ಉಲ್ಲೇಖ ಬರುತ್ತದೆ. ಹರಪ್ಪ-ಮೊಹೆಂಜದಾರೋಗಳಲ್ಲಿ ಕೋಟೆಗಳಿದ್ದುದು ಉತ್ಖನನ ವರದಿಗಳಿಂದ ತಿಳಿಯುತ್ತದೆ. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಗ್ರೀಕರ ರಾಯಭಾರಿಯಾಗಿ ಮೊದಲನೆ ಚಂದ್ರಗುಪ್ತನ ಆಸ್ಥಾನಕ್ಕೆ ಬಂದಿದ್ದ ಮೆಗಾಸ್ತನೀಸನು ಪಾಟಲಿಪುತ್ರ ನಗರದ ಕೋಟೆಯನ್ನು ವರ್ಣಿಸಿದ್ದಾನೆ.[೮] ಷಹಜಹಾನ್ ೧೬೨೪ರಲ್ಲಿ

ಕಟ್ಟಲಾರಂಭಿಸಿದ ಕೆಂಪುಕೋಟೆ ಮುಗಿಯಲು ೩೦ ವರ್ಷಗಳು ಓಡಿಯಿತೆಂದು ಹೇಳಲಾಗಿದೆ. ಆಗ್ರದ ಕೋಟೆಗೆ ಆಕ್ಬರ್‌ನು ಅದರ ಡೆಲ್ಲಿ ದ್ವಾರವನ್ನೂ, ಷಹಜಹಾನನು ಅಮರ್‌ಸಿಂಗ್ ದ್ವಾರವನ್ನು ಕಟ್ಟಿಸಿದ ಬಗ್ಗೆ ಇತಿಹಾಸದಲ್ಲಿ ನಿರೂಪಿಸಲಾಗಿದೆ.[೯] ಈ ನಂತರದ ಹಂತದಲ್ಲಿ ಕೋಟೆಯ ನಿರ್ಮಾಣದ ವಿಧಾನದಲ್ಲಿ ಅನೇಕ ಬದಲಾವಣೆಗಳು ಜರುಗಿದವು. ಕೋಟೆಗಳು ಫಿರಂಗಿಯ ಹೊಡೆತಕ್ಕೆ ಸಿಕ್ಕಿ ನಾಶವಾಗದ ಹಾಗೆ ಅವನ್ನು ಕಲ್ಲಿನಿಂದ, ಇಟ್ಟಿಗೆಯಿಂದ, ಮಣ್ಣಿನಿಂದ, ಗಾರೆಯಿಂದ ಬೃಹತ್ ಆಗಿ ನಿರ್ಮಿಸಲಾಗುತ್ತಿತ್ತು.

೨.೧.೫. ಕರ್ನಾಟಕದ ಪ್ರಾಚೀನ ಕೋಟೆಗಳು

ಕನ್ನಡದ ಪ್ರದೇಶಗಳನ್ನು ಆಳಿದ ರಾಜರು ಕೋಟೆಗಳನ್ನು ಬೆಟ್ಟ-ಗುಡ್ಡಗಳಲ್ಲಿ, ಅರಣ್ಯದಲ್ಲಿ, ನೀರಿನ ನಡುವೆ ನಿರ್ಮಿಸಿರುತ್ತಿದ್ದುದು ಕಾಣಬಹುದು. ಎತ್ತರವಾದ, ಕಡಿದಾದ, ದುರ್ಗಮವಾದ ಅನೇಕ ಗಿರಿದುರ್ಗಗಳಲ್ಲಿ ರಾಜರು, ಪಾಳೇಗಾರರು ಕೋಟೆಗಳನ್ನು ಕಟ್ಟಿ ವಾಸಿಸಿದ ನಿದರ್ಶನಗಳು ದೊರೆಯುತ್ತವೆ. ಮೊದಲಿಗೆ ಕ್ರಿ.ಶ.೨ನೇ ಶತಮಾನದಲ್ಲಿ ಕೋಟೆ ನಿರ್ಮಾಣ ಮಾಡಿದುದು ತಿಳಿದುಬರುತ್ತದೆ. ಶಾತವಾಹನರು ರಕ್ಷಣಾ ವಾಸ್ತುಶಿಲ್ಪದಲ್ಲಿ ನಿರ್ದಿಷ್ಟಪಡಿಸಿದ ಆಕಾರದ ಇಟ್ಟಿಗೆಗಳನ್ನು(೫೦.ಸೆ.ಮೀ×೩೦.ಸೆ.ಮೀ ೧೦.ಸೆ.ಮೀ) ಕೋಟೆ ನಿರ್ಮಾಣದಲ್ಲಿ ಬಳಸುತ್ತಿದ್ದರು.[೧೦] ಈ ಕಾಲಘಟ್ಟದಲ್ಲಿ ನಿರ್ಮಾಣವಾದ ಕೋಟೆಗಳು ಎಂದರೆ ಗೋದಾವರಿ ತೀರಿದ ಪ್ರತಿಷ್ಠಾನಪುರ(ಪೈಠಣ) ಮಂಗಳವೀಡು(ಇವೆರಡೂ ಈಗ ಮಹಾರಾಷ್ಟ್ರದಲ್ಲಿವೆ), ಸನ್ನತಿ, ಮಾನ್ಯಖೇಟ(ಮಳಖೇಡ), ಐಹೊಳೆ(ಆರ್ಯಪುರ), ಬನವಾಸಿ, ವಡಗಾಂವ್<ಮಾಧವಪುರ, ಚಂದ್ರವಳ್ಳಿ, ಬ್ರಹ್ಮಗಿರಿ ಇನ್ನೂ ಮುಂತಾದವು. ಇವು ಶಾತವಾಹನರ ಕಾಲಕ್ಕೆ ಸೇರಿದ್ದೆಂದು ಎಸ್.ಕೆ. ಜೋಶಿಯವರು ತಮ್ಮ ಮಹಾಪ್ರಬಂಧದಲ್ಲಿ ದೃಢಪಡಿಸಿದ್ದಾರೆ.[೧೧]

ಬಾದಾಮಿ ಚಾಲುಕ್ಯರ ೧ನೇ ಪುಲಕೇಶಿಯ ಕಾಲದ ಶಿಲಾಶಾಸನಗಳಲ್ಲಿ ಕರ್ನಾಟಕದ ಪ್ರಾಚೀನ ಕೋಟೆಯ ಕುರಿತು ಉಲ್ಲೇಖವಿದೆ. ಇದರ ಕಾಲವನ್ನು ಕ್ರಿ.ಶ.೫೪೩ ಎಂದು ಗುರುತಿಸಲಾಗಿದೆ.

ಸ್ವಸ್ತಿ ಶಕವರ್ಷೇಷು ಚತುಶ್ಯತೇಷು ಪಂಚಷಷ್ಠಿಯುತೇಷು,
ಅಶ್ವಮೇಧಾವಿ ಯಜ್ಞಾನಾಂ ಯಜ್ವಾ ಶ್ರೌತವಿಧಾನತಃ ಹಿರಣ್ಯಗರ್ಭ
ಸಂಭೂತಸ್ಚಲಿಕ್ಯೋ ವಲ್ಲಭೇಶ್ವರ॥ ಧರಾ ಧರೇಂದ್ರ ವಾತಾಪಿ ಮಜೇಯಂ
ಭೂತಯೇ ಭುವಃ | ಅಧಸ್ತಾದು ಪರಿಷ್ಟಾಚ್ಚ ದುರ್ಗಮೇತ ದಚೀಕರತ್॥[೧೨]

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಪಾಳೇಗಾರರ ಕಾಲದವರೆಗೂ ಕೋಟೆಗಳ ನಿರ್ಮಾಣ ವಿನ್ಯಾಸ, ರಚನಾಕ್ರಮ ಹಾಗೂ ಅವಶ್ಯಕತೆಗಳು ಹಿಂದೂ ಪದ್ಧತಿಯದಾಗಿದ್ದವು. ನಂತರ ಅವು ಇಸ್ಲಾಮಿಯರು, ಇಂಗ್ಲೀಷರು, ಫ್ರೆಂಚರು, ಪೋರ್ಚುಗೀಸರ ಪ್ರಭಾವದಿಂದಾಗಿ ಅವರ ವಾಸ್ತುಶೈಲಿಯನ್ನು ಅನುಸರಿಸಿ ನಿರ್ಮಾಣವಾಗಿರುವುದು ಕಾಣಬಹುದು. ಯುದ್ಧದಲ್ಲಿ ಬಳಸುತ್ತಿದ್ದ ಆಯುಧಗಳು ಬದಲಾದವು. ಈ

ಅಂಶ ಕೋಟೆಗಳ ರಚನಾ ವಿನ್ಯಾಸ, ವಿಸ್ತಾರಗಳ ಮೇಲೆ ಪರಿಣಾಮ ಬೀರಿತು. ಆಯುಧಗಳ ಸ್ವರೂಪ ಬದಲಾದ ಹಾಗೆ ಅಭೇದ್ಯ ಕೋಟೆಗಳ ನಿರ್ಮಾಣ ನಡೆಯಿತು. ಮೊದಲು ಮಣ್ಣು, ಕಲ್ಲು ಬಳಸಿ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತು. ನಂತರ ಇಟ್ಟಿಗೆ, ಕಲ್ಲು, ಗಾರೆಯಿಂದ ಕೋಟೆಗಳ ನಿರ್ಮಾಣ ಕಾರ್ಯ ನಡೆಯಿತು. ಈ ವಿವರಗಳು ಕರ್ನಾಟಕದಲ್ಲಿ ಶಾತವಾಹನರ ಕಾಲದಿಂದ ಪ್ರಾಚೀನ ಕೋಟೆಗಳ ನಿರ್ಮಾಣ ಆಗುತ್ತಿತ್ತೆಂದು ತಿಳಿಸುತ್ತವೆ.

೨.೧.೬. ಸಾಹಿತ್ಯದಲ್ಲಿ ಕೋಟೆಗಳು

ಕೋಟೆ ಕೊತ್ತಲಗಳು ರಾಜ್ಯ ವ್ಯವಸ್ಥೆಯ ಸಂದರ್ಭದಲ್ಲಿ ರಕ್ಷಣೆಯನ್ನು ಒದಗಿಸುತ್ತಿದ್ದವು. ಕೋಟೆಯ ಬಗೆಗೆ ಹೆಚ್ಚು ತಿಳಿಯಬೇಕೆಂದರೆ ನಾವು ಸಾಹಿತ್ಯ ಮತ್ತು ಶಾಸನಗಳನ್ನೇ ಮೊರೆಹೋಗ ಬೇಕಾಗುತ್ತದೆ. ಪ್ರಾಚೀನ ಕಾಲದ ಕೋಟೆ ಕೊತ್ತಲಗಳ ರಚನೆಯ ವಿನ್ಯಾಸವನ್ನು ಮಾನಸಾರ, ಮಯಾಮತ, ವಿಶ್ವಕರ್ಮ ವಾಸ್ತು ಹಾಗೂ ಶಿಲ್ಪರತ್ನ ಪುರಾಣಗಳಾದ ಮತ್ಸ್ಯಪುರಾಣ, ಮಾರ್ಕಂಡೇಯ ಪುರಾಣ, ವಿಷ್ಣುಪುರಾಣ, ರಾಜನೀತಿ ಸಾಹಿತ್ಯ ಕೃತಿಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನೀತಿಸಾರ, ಬೃಹತ್ ಸಂಹಿತಾ ಇತ್ಯಾದಿ ಕೃತಿಗಳಿಂದ ಕಾಣಬಹುದು.

ಕೌಟಿಲ್ಯನ ರಾಜನೀತಿ ಗ್ರಂಥವಾದ ಅರ್ಥಶಾಸ್ತ್ರದಲ್ಲಿ ಒಂದು ರಾಜ್ಯಕ್ಕೆ ಪ್ರಮುಖವಾಗಿ ಸಪ್ತಾಂಗಗಳಿರ ಬೇಕು ಅವುಗಳೆಂದರೆ ರಾಜ, ಅಮಾತ್ಯ, ರಾಜಧಾನಿ, ಕೋಶ, ದುರ್ಗ, ಮಿತ್ರ ಮತ್ತು ಸೈನ್ಯ ಇವುಗಳಲ್ಲಿ ದುರ್ಗ(ಕೋಟೆ) ಮುಖ್ಯವಾದುದು. ಹೀಗೆ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಗಡಿಯ ನಾಲ್ಕು ದಿಕ್ಕುಗಳಲ್ಲೂ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ಹೇಳಿದ್ದಾನೆ.[೧೩] ಮನುವಿನ ಅಭಿಪ್ರಾಯದಂತೆ ಒಬ್ಬ ಬಿಲ್ಲುಗಾರ ಕೋಟೆ ಗೋಡೆಯ ಮರೆ(ರಕ್ಷಣೆಯಲ್ಲಿ) ನೂರಾರು ಶತ್ರುಗಳೊಂದಿಗೆ ಹೋರಾಡಬಹುದು. ಮತ್ತು ನೂರಾರು ಬಿಲ್ಲಾರರು ಹತ್ತು ಸಾವಿರ ಶತ್ರುಗಳೊಂದಿಗೆ ಹೋರಾಟ ನಡೆಸಬಹುದು ಎಂದು ಹೇಳುತ್ತಾ ಕೋಟೆಗಳನ್ನು ಕಟ್ಟುವುದನ್ನು ಸಮರ್ಥಿಸಿಕೊಳ್ಳುತ್ತಾನೆ.[೧೪] ಪಂಚತಂತ್ರದ ಕೃತಿಯಲ್ಲಿ ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಯುದ್ಧದಲ್ಲಿ ನಿರ್ವಹಿಸಲಾದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ನಿರ್ವಹಿಸಬಲ್ಲನು ಎಂದು ಹೇಳಲ್ಪಟ್ಟಿದೆ.[೧೫] ಬೃಹಸ್ಪತಿಯ ರಾಜನೀತಿ ಪ್ರಕಾಶದಲ್ಲಿ ''ರಾಜನು ತನ್ನ ಪರಿವಾರ, ಜನರು ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಬೇಕು'' ಎಂದು ಹೇಳುತ್ತದೆ.[೧೬] ಕಾಮಂದಕನ ನೀತಿ ಸಾರದಲ್ಲಿನ ಸಂಸ್ಕೃತದ ಶ್ಲೋಕವನ್ನು ಡಾ.ಎಂ.ಚಿದಾನಂದಮೂರ್ತಿಯವರು ಈ ರೀತಿ ವಿವರಿಸಿದ್ದಾರೆ.'' ದುರ್ಗಹೀನೋ ನರಪತಿಃ ವಾತಾಭ್ರಾವಯ ವೈಸ್ಸಮಃ'' -ಅಂದರೆ ಭದ್ರವಾದ ಕೋಟೆಯಿಲ್ಲದ ರಾಜನು ಬಿರುಗಾಳಿಯ ಮುಂದಿನ ಮೋಡದ

ತುಂಡುಗಳಿಗೆ ಸಮ ಎಂದರ್ಥ.[೧೭] ಶುಕ್ರನೀತಿಸಾರದಲ್ಲಿ ಅನೇಕ ರೀತಿಯ ಗಿಡಮರಗಳ ಪೊದರುಗಳಿಂದ ಕೂಡಿದ ದನಕರುಗಳು, ಹಕ್ಕಿಗಳು ಮತ್ತಿತರ ಪ್ರಾಣಿಗಳಿಂದ ಸಮೃದ್ಧವಾಗಿರುವ, ಧಾನ್ಯಸಮೃದ್ಧಿ ಇರುವ, ಬೆಟ್ಟ ನೀರುಗಳಿಂದ ಆವೃತವಾಗಿರುವ ಪ್ರದೇಶಗಳಲ್ಲಿ ಕೋಟೆಗಳನ್ನು ನಿರ್ಮಿಸಬೇಕು[೧೮] ಎಂದು ಉಲ್ಲೇಖವಿದೆ.

ಕನ್ನಡ ಕಾವ್ಯಗಳಲ್ಲಿ ಕೋಟೆಯ ಮಹತ್ವವನ್ನು ಕುರಿತಕೃತಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಜನ್ನ ಕವಿಯ 'ಅನಂತನಾಥ ಪುರಾಣ'ದಲ್ಲಿ "ಕೋಟೆ ಬೀಳುವ ಸ್ಥಿತಿ ಬಂದಿದೆ ಎಂದು ವಸ್ತ್ರ ಬೀಸುತ್ತಾ ಬೊಬ್ಬೆ ಹೊಡೆದರಂತೆ" ಇಲ್ಲಿ ಸೋಲನ್ನೊಪ್ಪಿಕೊಳ್ಳುವಾಗ ವಸ್ತ್ರ ಬೀಸುವ ಗುರುತಾಗಿರಬಹುದು.

ಸೂರ್ಯನು ಓಡುವ ರಥವು ಕೋಟೆ ಕೊತ್ತಲದಲ್ಲಿ
ಅಲ್ಲಿಯೇ ಕೆಚ್ಚಿ ಬಿಟ್ಟಂತೆ ನಿಂತುಕೊಳ್ಳಲು
ಅರುಣನು ಗಾಲಿಯನ್ನು ಮುಂದೆ ನೂಕುವುದಕ್ಕೆಂದು
ಹೋಗಿ ಕೋಟೆಯ ತೆನೆಗಳನ್ನು ಎತ್ತಿ
ಸೂರ್ಯನನ್ನು ನಗಿಸುವನು.[೧೯]

ಕೋಟೆ ಕೊತ್ತಲಗಳನ್ನು ಮತ್ತು ಕೋಟೆಯ ತೆನೆಗಳನ್ನು ಇಲ್ಲಿ ಜನ್ನನು ವರ್ಣಿಸಿದ್ದಾನೆ. ಕೋಟೆಗಳಲ್ಲಿ ತೆನೆಗಳು ಬಹಳ ಮುಖ್ಯವಾಗಿದ್ದವೆಂದು ಇಲ್ಲಿ ಅರಿಯಬಹುದಾಗಿದೆ.

ಹರಿಹರನ 'ಗಿರಿಜಾ ಕಲ್ಯಾಣ'ದಲ್ಲಿ ಕೋಟೆಯ ವರ್ಣನೆ, ಕೋಟೆಯೊಳಗೆ ಇರುವ ಅಂಗಾಂಗಳ ವರ್ಣನೆ, ಇವು ರಕ್ಷಕರಿಂದ ಯಾವ್ಯಾವ ರೀತಿಯ ಬಳಕೆಯಾಗುತ್ತಿದ್ದವು ಎಂಬುದನ್ನು ಇಲ್ಲಿ ಉಲ್ಲೇಖಿಸಿದೆ.

ಪಳಕಿ(ಸ್ಪಟಿಕ)ನ ಕೋಂಟೆ ಬಟ್ಟದೆನೆ ಬೇವಿನದಂಡೆ ನಭಕ್ಕೆ ಮೀರುವ
ಟ್ಟಳೆ ನಿಮಿರ್ದೇರು ಪಾರುವ ಪತಾಕೆ ವಿರಾಜಿತಗೊಂಟು ಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿಪಾಳ್ವೆರಿ ಡೆಂಕಣಿ ಸಾರಾಮಾರಿಯ
ಗ್ಗಳಲಿಸುವ ಗೋಪುರಂ ಪುಲಿಮೊಗಂ ಮೆರುಗುಂ ಪುರದೊಳ್ ನಿರಂತರ||[೨೦]

ಹಳಗನ್ನಡದ ಕೊಂಟೆಯೇ ಹೊಸಗನ್ನಡ ಕೋಟೆ. ಪಳಕಿನ ಕೋಂಟೆ ಎಂದರೆ ಸ್ಪಟಿಕದ ಕೋಟೆ ಎಂಬುದು ಕವಿಯ ಕಲ್ಪನೆಯಾಗಿದೆ. ನಂಜುಂಡ ಕವಿಯು 'ರಾಮನಾಥ ಚರಿತೆ'ಯಲ್ಲಿ ಕಂಪಿಲರಾಮನ ಆಸ್ಥಾನದ ದಂಡನಾಯಕನಾದ ಬೈಚಪ್ಪನು ಕೋಟೆಯನ್ನು ನಿರ್ಮಾಣ ಮಾಡಿದ ಬಗೆಯನ್ನು ಈ ಕೆಳಗಿನಂತೆ ಹೇಳಿದ್ದಾನೆ.

ದಳವಾಡ ಸಹಿತ ಬೈಚಪ್ಪ ದುರ್ಗವ ಹೊಕ್ಕು
ತಳದವರ ಬಲಿಕೆಯನು

ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ
ದಲಸದೆ ಮಿಗೆ ಮೂಡಿಸಿದನು
ಅಗಳಾಳ್ವೇರಿ ಕೋಟೆ ಕೊತ್ತಳ ನೆಲದಿಡ್ಡಿ
ಮುಗಿಲಟ್ಟಣೆ ನೆಲಗಮ್ಮ
ಪ್ರಗಿಸಿ ಕೊಯೊಳಗಾಗಿಸಿಕೊಂಬ ಪುಲಪುಲಿ
ಮೊಗಗಳನನು ಮೂಡಿಸಿದನು.[೨೧]

ಕೆಳದಿಯ ಲಿಂಗಣ್ಣ ಕವಿಯು 'ಶಿವತತ್ವ ರತ್ನಾಕರ'ದಲ್ಲಿ ಕೋಟೆಯಿಲ್ಲದ ರಾಜನನ್ನು ವಿಷರಹಿತವಾದ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ ಅದನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದು ಎಂದಿದ್ದಾನೆ.

ವಿಷ ಹೀನೋ ಯಥನಾಗೋ ಮದಹೀನೋ ಯಥಾಗಜಃ|
ಸರ್ವೇಕ್ಷಾಂ ವಶ್ಯತಾಂ ಯಾತಿ ದುರ್ಗಹೀನಸ್ಥಧಾನೃಪಃ||[೨೨]

ಕನಕದಾಸರ 'ಮೋಹನ ತರಂಗಿಣಿ'ಯಲ್ಲಿನ ಕೋಟೆಯ ಮಹತ್ವವನ್ನು ಹೇಳುವ ಒಂದು ಪದ್ಯ ಹೀಗಿದೆ.

ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆ
ರ್ಗದ ವಜ್ರಲಾಳವಿಂಡಿಗೆಯ
ಅದಟನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿ
ಗಳಿ ಗೋಚರವು

"ಮದ್ದಾನೆಯ ಸೊಂಡಿಲ ಸಹಾಯದಿಂದ ನೂಕಿ ಬಂಧಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತ ಕವಿಗಳಿಗೂ ಅಸಾಧ್ಯವಾದುದು" ಎಂದು "ಮೋಹನ ತರಂಗಿಣಿ'ಯ ಗದ್ಯವನ್ನು ಎಸ್.ಎಸ್.ಕೋತಿನ ಅನುವಾದಿಸಿದ್ದಾರೆ.[೨೩]

ಅಲ್ಲದೆ ಕನಕದಾಸರು 'ಮೋಹನ ತರಂಗಿಣಿ'ಯಲ್ಲಿ ಕೋಟೆ, ಕೊತ್ತಳ, ಹುಲಿಮೊಗ, ಕೋಟೆಯ ಕದ, ಮುಗಿಲಟ್ಟಣೆ, ಕಳಸ, ಅಗಳು, ಡೆಂಕಣಿ, ಮರುಳ್ ಗೈ, ಲಾಳಿ, ಬಿಲ್ಲು, ಪೆಟಿಲು, ಪೆರ್ಗದ, ಲಾಳವಿಂಡಿಗೆ, ದ್ವಾರಾಷ್ಟಕಕ, ದಿಡ್ಡಿ, ಬಿಲದ್ವಾರ, ಆಳ್ವೇರಿ ಇತ್ಯಾದಿ ಕೋಟೆ ಮತ್ತು ಅದರ ಅಂಗಾಂಗಗಳನ್ನು ವರ್ಣಿಸಲಾಗಿದೆ.[೨೪]

ಗೋವಿಂದ ವೈದ್ಯನು (೧೬೪೮) ತನ್ನ 'ಕಂಠೀರವ ನರಸರಾಜೇಂದ್ರ ವಿಜಯ' ಎಂಬ ಐತಿಹಾಸಿಕ ಕಾವ್ಯದಲ್ಲಿ ವಿವರಿಸಿದ ಕೋಟೆಯ ಬಣ್ಣನೆಯು ಹೀಗಿದೆ.

"ಅಗಲಕೆ ಭೂಮಂಡಲಕಿಂದು, ಉಬ್ಬಲು
ಮಿಗೆ ಕಾಳವೆಂಟು ದಿಕ್ಕಂದು

ನಗುತಾಗ ಮೇಲಕ್ಕೆ ಬಳೆದೋಲು ಹೊಂಗೋಂಟೆ
ಗಗನ ಮಂಡಲವ ಮುಟ್ಟಿಹುದು"

ಬೆಟಗೇರಿ ಕೃಷ್ಣಶರ್ಮರು ಕೋಟೆಕಾಳಗದಲ್ಲಿ ಕೋಟೆ ಮತ್ತು ಅದರ ಅಂಗಾಂಗಗಳುಳ್ಳ ಪದ್ಯಗಳನ್ನು ಇಲ್ಲಿ ಉದಾಹರಣೆಯಾಗಿ ಕೊಟ್ಟಿದ್ದಾರೆ.[೨೫]

ರಾಜವಂಶಗಳ ಆಸ್ಥಾನದಲ್ಲಿದ್ದ ಕವಿವರ್ಯರು ಕಾವ್ಯ ರಚನೆಯ ಸಂದರ್ಭದಲ್ಲಿ ವಾಸ್ತವದಲ್ಲಿದ್ದ ಕೋಟೆ ಕೊತ್ತಲಗಳನ್ನು ಮತ್ತು ಅದರ ಅಂಗಾಂಗಳನ್ನು ವರ್ಣನೆಯ ಮೂಲಕ ಗ್ರಂಥಗಳಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ರಾಜ್ಯಗಳಿಗೆ ಕೋಟೆಗಳ ಪಾತ್ರ, ಅವುಗಳ ಮಹತ್ವ ಮತ್ತು ಪ್ರಕಾರಗಳ ಬಗ್ಗೆ ಗ್ರಂಥಗಳ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

೨.೧.೭. ಕೊತ್ತಲಗಳು

ಕೊತ್ತಲಗಳು ಕೋಟೆಯ ಗೋಡೆಗೆ ಸೇರಿಸಿಕೊಂಡು ಕಟ್ಟಲಾಗಿರುತ್ತದೆ. ಇದರ ಮೇಲೆ ಸೈನಿಕರು ನಿಂತು ಕಾದಾಡಬಹುದಾದ ಎತ್ತರ ಪ್ರದೇಶ, ಇದಕ್ಕೆ ಬುರುಜು, ಕೊತ್ತೆಲ, ಕೊತ್ತಲ ಮತ್ತು ಕಾವಲು ಗೋಪುರಗಳೆಂದು ಕರೆಯುತ್ತಾರೆ. ಕೋಟೆ ಮತ್ತು ಕೊತ್ತಲಗಳನ್ನು ಒಂದೇ ಪದದಲ್ಲಿ ಸೇರಿಸಿ ಹೇಳಲಾಗುತ್ತದೆ. ಇವನ್ನು ಬೇರ್ಪಡಿಸುವುದೆಂದರೆ ಶರೀರದಿಂದ ಅಂಗಾಂಗಳನ್ನು ಬೇರ್ಪಡಿಸಿದಂತಾಗುತ್ತದೆ. ಕೊತ್ತಲವು ಎರಡು ಗೋಡೆಗಳನ್ನು ಜೋಡಿಸುವುದರ ಜೊತೆಗೆ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ಇದಕ್ಕೆ ಕೌಟಿಲ್ಯನು "ಅರ್ಥಶಾಸ್ತ್ರದಲ್ಲಿ ಕೋಟೆಗೆ ಅಂಟಿಕೊಂಡು ಕೊತ್ತಲಗಳಿರಬೇಕು, ಅವುಗಳಿಗೆ ಮೇಲೇರಲು ಮೆಟ್ಟಿಲುಗಳಿರಬೇಕು, ಕಾದಾಡಲು ಮತ್ತು ಸೈನಿಕರಿಗೆ ಪಹರೆ ಮಾಡಲು ಜಾಗವಿರಬೇಕು, ಎರಡು ಕೊತ್ತಲಗಳ ಅಂತರ ಮೂವತ್ತು ದಂಡಗಳು ಇರಬೇಕು. ಕೊತ್ತಲಕ್ಕೆ ಮೇಲೆ ಛಾವಣಿ ಹಾಕಿರಬೇಕೆಂದು ಹೇಳಿದ್ದಾನೆ."[೨೬]

ಕೊತ್ತಲಗಳಲ್ಲಿ ವೃತ್ತಾಕಾರದ ಕೊತ್ತಲಗಳು, ಚೌಕಕಾರದ ಕೊತ್ತಲಗಳು, ಅರ್ಧವೃತ್ತಕಾರದ ಕೊತ್ತಲಗಳೆಂದು ವಿಂಗಡಿಸಬಹುದು. ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ವೃತ್ತಾಕಾರದ ಕೊತ್ತಲಗಳು, ಚೌಕಕಾರದ ಕೊತ್ತಲಗಳನ್ನು ಕಾಣಬಹುದಾಗಿದೆ. ಇಲ್ಲಿನ ಕೆಲವು ಕೊತ್ತಲಗಳಿಗೆ ಅಲಂಕಾರಿಕವಾಗಿ ಗಾರೆಯಿಂದ ಕೆತ್ತನೆ ಮಾಡಿರುವುದನ್ನು ಕಾಣಬಹುದು. ಕೊತ್ತಲಗಳ ಮೇಲ್ಭಾಗದಲ್ಲಿ ಮುಂಚಾಚಿದ ಕಿಡಕಿ ಮಾಡಲಾಗಿದ್ದು, ಆ ಕಿಡಕಿಗಳ ನೆರವಿನಿಂದ ತೋಪುಗಳನ್ನು ಇಟ್ಟುಕೊಂಡು ಶತ್ರುಗಳ ಪಡೆಯನ್ನು ನಾಶಮಾಡಲು ಬಳಕೆ ಮಾಡುತ್ತಿದ್ದರು. ಕೊತ್ತಲಗಳ ಮೇಲೆ ತೋಪುಗಳನ್ನು ಸಾಗಿಸಲು ಇಳಿಜಾರಾಗಿ ಕಟ್ಟಡ ನಿರ್ಮಿಸಿದ್ದು, ಇದರಿಂದ ಕೊತ್ತಲಗಳ ಮೇಲಕ್ಕೆ ಹೊಯ್ಯಬಹುದಾಗಿದೆ. ಸೈನಿಕರು ಅದರ ಮೇಲೆ ನಿಲ್ಲಲು ಅನುಕೂಲಕರವಾದ ಜಾಗ ಮತ್ತು ಫಿರಂಗಿ, ತೋಪುಗಳನ್ನು ಇನ್ನಿತರ ಯುದ್ಧ ಸಾಮಾಗ್ರಿಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ಸ್ಥಳಾವಕಾಶವಿರುತ್ತದೆ.

ಕೋಟೆಯಷ್ಟೇ ಕೊತ್ತಲಗಳು ಪ್ರಾಮುಖ್ಯತೆಯನ್ನು ಹೊಂದಿದ್ದು, ರಕ್ಷಣ ಕಾರ್ಯದಲ್ಲಿ ಇವುಗಳ ಪಾತ್ರವು ಮಹತ್ವದ್ದಾಗಿದೆ. ಕೋಟೆ-ಕೊತ್ತಲಗಳನ್ನು ಜೊತೆ ಜೊತೆಯಾಗಿಯೇ ಹೇಳುತ್ತೇವೆ, ಕೇಳುತ್ತೇವೆ, ಅವುಗಳನ್ನು ಬರೆಯುತ್ತೇವೆ. ಆದುದರಿಂದ ಕೋಟೆಗಳು ಕೊತ್ತಲಗಳು ಒಂದೇ ಎಂಬಂತೆ ನಮಗನಿಸುತ್ತವೆ. ಕೋಟೆ ಬಿಟ್ಟು ಕೊತ್ತಲಗಳಿಲ್ಲ. ಕೊತ್ತಲ ಬಿಟ್ಟು ಕೋಟೆಗಳಿಲ್ಲ ಎನ್ನಬಹುದು.

ಒಟ್ಟಾರೆಯಾಗಿ ಕೋಟೆಗಳ ಬಗೆಗಿನ ಸಂಸ್ಕೃತ ಮತ್ತು ಕನ್ನಡ ಶಿಷ್ಟಪಠ್ಯಗಳನ್ನು ಗಮನಿಸಿದರೆ ಕೋಟೆಗಳ ಚಿತ್ರಣವು ಒಂದು ರಾಜಕೀಯ ಯುದ್ಧದ ಭಾಗವಾಗಿ ವರ್ಣಿತವಾಗಿರುವುದು ಕಂಡುಬರುತ್ತದೆ. ಒಬ್ಬ ರಾಜ ಪ್ರಬಲನಾಗಲು, ಸಾಮ್ರಾಜ್ಯವನ್ನು ಸುರಕ್ಷಿತವಾಗಿಟ್ಟುಕೊಳ್ಳಲು ಕೈಗೊಳ್ಳಬೇಕಾದ ಎಚ್ಚರವನ್ನು, ಅದು ಯುದ್ಧದ ಸಂದರ್ಭದಲ್ಲಿ ವಹಿಸುವ ಪಾತ್ರವನ್ನು ಕುರಿತು ವಿವರಿಸುವುದನ್ನು ಈಗಾಗಲೇ ನೋಡಲಾಗಿದೆ. ಆದರೆ ಇದರಾಚೆಯೂ ಸಮುದಾಯದ ಜನಜೀವನ ಭಾಗವಾಗಿ ಕೋಟೆಗಳು ಇದ್ದವು ಎನ್ನುವ ಕುರಿತು ಶಿಷ್ಟ ಪಠ್ಯಗಳು ಗಮನಿಸುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಕೋಟೆಗಳ ಸುತ್ತಮುತ್ತ ಇರುವ ಜನಸಮುದಾಯಗಳ ಕಥೆ, ಹಾಡು, ನಂಬಿಕೆ, ಆಚರಣೆ ಇನ್ನಿತರ ಅಂಶಗಳು ಬಹುತೇಕವಾಗಿ ದೊರೆಯುತ್ತವೆ. ಇವು ಶಿಷ್ಟ ಸಾಹಿತ್ಯದಿಂದ ಬಹುದೂರ ಉಳಿದಿವೆ. ಇದಕ್ಕೆ ಮುಖ್ಯವಾಗಿ ನಮ್ಮ ಪ್ರಾಚೀನ ಸಾಹಿತ್ಯವೆಲ್ಲ ರಾಜಾಶ್ರಯದಲ್ಲಿದ್ದ ಪಂಡಿತರ ಮಧ್ಯದಲ್ಲಿಯೇ ಬೆಳೆದು ಬಂದಿರುವುದು ಕಾರಣವಾಗಿದೆ. ಅಲ್ಲದೆ ಕೋಟೆಗಳ ಸ್ಥಾಪನೆ, ನಿರ್ಮಾಣ, ನಾಶ ಎನ್ನುವುದು ಶಿಷ್ಟ ಸಾಹಿತ್ಯದಲ್ಲಿ ಶೌರ್ಯದ ಪರಾಕ್ರಮದ ಸಂಕೇತವಾಗಿ ಚಿತ್ರಿತವಾಗಿದ್ದರೆ ಮೌಖಿಕ ಸಾಹಿತ್ಯದಲ್ಲಿ ಜೀವನದ ಭಾಗವಾಗಿ ಚಿತ್ರಣಗೊಂಡಿರುವುದನ್ನು ಮುಂದಿನ ಮೌಖಿಕ ಸಾಹಿತ್ಯದ ಅಧ್ಯಯನದಲ್ಲಿ ಗಮನಿಸಬಹುದಾಗಿದೆ.

೨.೨. ಕೋಟೆಗಳು : ಮೌಖಿಕ ಸಾಹಿತ್ಯದಲ್ಲಿ (ಕಾವ್ಯ)

೨.೨.೧. ಪೀಠಿಕೆ

ಕೋಟೆಗಳಿಗೆ ಸಂಬಂಧಿಸಿದಂತೆ ಶಿಷ್ಟ ಮತ್ತು ಮೌಖಿಕ ಸಾಹಿತ್ಯದಲ್ಲಿ ಅಪಾರವಾದ ಭಿನ್ನತೆಯನ್ನು ಕಾಣಬಹುದು. ಮೌಖಿಕ ಸಾಹಿತ್ಯವು ಕೋಟೆಯನ್ನು ಜನಜೀವನದ ಭಾಗವಾಗಿ ದಾಖಲಿಸಿರುವುದನ್ನು ಕಾಣಬಹುದು. ಕೋಟೆಯ ಸ್ಥಾಪನೆ, ನಿರ್ಮಾಣ, ನಾಶದ ಕುರಿತ ಹಾಡುಗಳನ್ನು ಗಮನಿಸಿದರೆ ಜನಪದರು ಈ ಕೋಟೆಗಳೊಂದಿಗೆ ಹೊಂದಿರುವ ಅಂತಃಸಂಬಂಧ ಅರಿವಾಗುತ್ತದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಮೌಖಿಕ ಪಠ್ಯಗಳೆಲ್ಲ ೧೫-೧೬-೧೭ನೇ ಶತಮಾನಗಳಲ್ಲಿ ರಾಜ್ಯಭಾರ ನಡೆಸಿದ ಮಾಂಡಲೀಕರು, ಪಾಳೇಗಾರರು, ಅಮರನಾಯಕರಿಗೆ ಸಂಬಂಧಿಸಿದ್ದಾಗಿವೆ. ಅದರಲ್ಲೂ ದೊಡ್ಡ ಸಾಮ್ರಾಜ್ಯದ ಕೋಟೆಗಳ ವರ್ಣನೆಗಿಂತ ಚಿಕ್ಕಪುಟ್ಟ ಪಾಳೇಗಾರರು ಕಟ್ಟಿಸಿದ ಕೋಟೆಗಳಿಗೆ ಸಂಬಂಧಿಸಿದಂತೆಯೇ ಹೆಚ್ಚು ಮೌಖಿಕ ಕಾವ್ಯಗಳು ಬಂದಿವೆ. ಸಮುದಾಯವು ಚಿಕ್ಕಪುಟ್ಟ ಎನ್ನುವ

ಕೋಟೆಗಳನ್ನು ಕುರಿತು ಕಾಳಜಿ ವಹಿಸಿ ಮೌಖಿಕ ಕಾವ್ಯಗಳನ್ನು ಕಟ್ಟಲು ಕಾರಣವೇನು? ಎಂಬ ಪ್ರಶ್ನೆ ಏಳುತ್ತದೆ. ಚಿಕ್ಕಪುಟ್ಟ ಕೋಟೆಗಳು ಸಮುದಾಯದ ಭಾಗವಾಗಿಯೇ ಇದ್ದವು. ಈ ಕೋಟೆಗಳನ್ನು ರಕ್ಷಿಸುವುದೆಂದರೆ ಅದನ್ನು ನಂಬಿದ ಸಮುದಾಯದ ಬದುಕನ್ನು ರಕ್ಷಿಸುವುದೇ ಅಗಿತ್ತು. ಕೋಟೆಯ ನಾಶವೆಂದರೆ ಅದರೊಂದಿಗೆ ಬದುಕೇ ನಾಶವೆಂದೇ ಬಗೆದಿದ್ದರು. ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳಿಂದಾಗಿ ಕೋಟೆಗಳ ಸ್ಥಾಪನೆ, ನಿರ್ಮಾಣದ ಅವಶ್ಯಕತೆಯನ್ನು ಜನಪದರು ಅರಿತಿದ್ದರು. ಆದ್ದರಿಂದ ತಮ್ಮ ಕೋಟೆಗಳನ್ನು ಅತಿಮಾನುಷವಾಗಿಯೇ ಅಲೌಕಿಕ ಶಕ್ತಿಯಿಂದ ಕೂಡಿರುವುದೆಂತಲೂ ಜನಪದರು ಚಿತ್ರಿಸಿದ್ದಾರೆ. ದೇವಾನುದೇವತೆಗಳು ಕೋಟೆಯ ಬಗ್ಗೆ ಅಚ್ಚರಿ, ಮೆಚ್ಚುಗೆ ಹೊಂದಿದರೆಂತಲೂ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಶಿಷ್ಟ ಸಾಹಿತ್ಯದಲ್ಲಿ ಕೋಟೆಗಳನ್ನು ಕುರಿತ ಹಲವಾರು ಕಾವ್ಯಗಳಿವೆ. ಅದನ್ನು ಗುರುತಿಸುವ ಕಾರ್ಯವೂ ನಡೆದಿದೆ. ಆದರೆ ಜನಪದ ಸಾಹಿತ್ಯದಲ್ಲಿ ಕೋಟೆಗಳನ್ನು ಉಲ್ಲೇಖಿತ ಮಾಡಿರುವ ಕಾವ್ಯಗಳನ್ನು ಅನುಲಕ್ಷಿಸಿ ಗುರುತಿಸುವ ಪರಿಪಾಠ ಆಗಿಲ್ಲವೆಂದೇ ಹೇಳಬಹುದು. ಇತಿಹಾಸ ಮತ್ತು ಶಿಷ್ಟಸಾಹಿತ್ಯದಲ್ಲಿ ಕೋಟೆಯೆಂದರೆ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಗೊಂಡಿರುವ ಸಪ್ತಾಂಗಗಳಲ್ಲಿ ಕೋಟೆಯು ಒಂದು ಅಂಗವೆಂದು ಹೇಳುವುದೇ ಹೆಚ್ಚು. ಶಾಸನಗಳಲ್ಲಿಯೂ ಕೋಟೆಗಳ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ. ಇದೇ ರೀತಿ ಕನ್ನಡ ಸಾಹಿತ್ಯದಲ್ಲಿ ಗಿರಿಜಾ ಕಲ್ಯಾಣ, ಶಿವತತ್ವ ರತ್ನಾಕರ, ಮೋಹನ ತರಂಗಿಣಿ ಹಾಗೂ ಇನ್ನಿತರ ಐತಿಹಾಸಿಕ ಕೃತಿಗಳನ್ನು ಆಶ್ರಯಿಸುವುದು ಕಾಣುತ್ತೇವೆ. ಹಾಗೆಯೇ ಮೌಖಿಕ ಸಾಹಿತ್ಯದಲ್ಲಿ ಕೂಡ ಕೋಟೆಗಳ ಮಹತ್ವವನ್ನು ಪ್ರಸ್ತಾಪಿಸಿರುವುದು ಕಾಣಬಹುದು. ಈ ಹಿನ್ನೆಲೆಯಲ್ಲಿ ಮೌಖಿಕ ಸಾಹಿತ್ಯದಲ್ಲಿನ ಕಥನಗೀತೆ ಆಧಾರದಿಂದ ಇಲ್ಲಿ ಚರ್ಚಿಸಲಾಗಿದೆ.

ಜನಪದ ಸಾಹಿತ್ಯದಲ್ಲಿ ಕೋಟೆಯನ್ನು ಕ್ಯಾಟೆ, 'ಕ್ಯಾಟಿ'[೨೭] 'ಕೋಟೆ' ಎಂದು ಬಳಸಿರುವುದು ಕಾಣಬಹುದು. ಕೋಟೆಗಳ ಪ್ರಸ್ತಾಪವನ್ನು ಜನಪದ ಸಾಹಿತ್ಯದಲ್ಲಿ ಪಾಳೇಗಾರರು ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಿ, ಸಂಸ್ಥಾನಗಳನ್ನು ಆಳ್ವಿಕೆ ಮಾಡಿದ ಸಂದರ್ಭಗಳಲ್ಲಿ ಕಾಣಬಹುದು. ಆದರೆ ಪಾಳೇಗಾರರು ಜನಸಮುದಾಯಗಳ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಅವರ ಹಿತವನ್ನೇ ಕಾಪಾಡಿಕೊಂಡು ಬಂದಿದ್ದರಿಂದ ಅವರ ಒಂದೊಂದು ಘಟನೆ, ವಸ್ತು ಕೂಡ ಜನರ ಸ್ಮೃತಿಯಲ್ಲಿ ಉಳಿಯುವಂತಾಯಿತು. ಈ ಹಿನ್ನೆಲೆಯಲ್ಲಿ ಜನಪದರು ಪಾಳೇಗಾರರು ನಿರ್ಮಿಸಿದ ಕೋಟೆ ಮತ್ತು ಇನ್ನಿತರ ಸ್ಮಾರಕಗಳ ಬಗೆಗೆ ಉಲ್ಲೇಖ ಮಾಡಿರುವುದು ಕಾಣಬಹುದು.

ವಿಜಯನಗರದ ಸಾಮ್ರಾಜ್ಯದ ಪೂರ್ವ ಕಾಲದಿಂದಲೇ ಪಾಳೇಗಾರರು ಪ್ರಬುದ್ಧಮಾನಕ್ಕೆ ಬಂದಿದ್ದಾರೆ. ಅದರಲ್ಲಿ ಕಂಪಲಿಯ ಕುಮಾರರಾಮನೇ ಮೊದಲಿಗನಾಗಿದ್ದಾನೆ. ಈತನಿಂದಲೇ ಮೊದಲುಗೊಂಡು ಜನಪದ ಸಾಹಿತ್ಯವು ದೊರೆತಿದೆ. ಈ ಜನಪದ ಸಾಹಿತ್ಯದಲ್ಲಿ ಕೋಟೆಗಳ ನಿರ್ಮಾಣ, ನಿರ್ಮಾಣದ

ಸಂದರ್ಭದಲ್ಲಿ ಬಲಿಕೊಡುವುದು, ಕೋಟೆಗಳ ಆಕ್ರಮಣ, ಕೋಟೆಗಳ ವರ್ಣನೆ, ಕೋಟೆಗಳ ನಾಶವನ್ನು ಕುರಿತು ಉಲ್ಲೇಖವಿದೆ. ಈ ಉಲ್ಲೇಖವನ್ನು ಇಟ್ಟುಕೊಂಡು ಇದುವರೆಗೂ ಕೋಟೆಗಳ ಬಗೆಗೆ ಜನಪದ ಸಾಹಿತ್ಯದಲ್ಲಿ ಯಾವ್ಯಾವ ರೀತಿ ಕೋಟೆಗಳಿದ್ದವು ಎಂಬುದನ್ನು ಮತ್ತು ಅವುಗಳ ಬಗ್ಗೆ ಜನಪದರು ಕಂಡುಕೊಂಡಿರುವ ಬಗೆ ಹೇಗೆ ಎಂಬುದನ್ನು ಈ ಕೆಳಗೆ ಕಾಣಬಹುದಾಗಿದೆ.

೨.೨.೨. ಪುರಾಣಗಳಲ್ಲಿ ಕೋಟೆಗಳ ಉಲ್ಲೇಖ

ಕೋಟೆಗಳು ರಾಜ್ಯ ಮತ್ತು ರಾಜನ ರಕ್ಷಣೆಗಾಗಿ ಹುಟ್ಟಿಕೊಂಡವುಗಳು ಎಂದು ಇದುವರೆಗೂ ಚರಿತ್ರೆಯಲ್ಲಿ ಉಲ್ಲೇಖಗೊಂಡಿರುವುದು ಕಾಣಬಹುದು. ಆದರೆ ಜನಪದರು ಇತಿಹಾಸ ಪುರಾತತ್ವದ ಹಿಂದಿನ ಕಾಲಘಟ್ಟಕ್ಕೆ ಹೋಗಿ ಕೋಟೆಗಳು ಪುರಾಣದ ಕಾಲದಲ್ಲಿಯೇ ಪ್ರಚಲಿತವಿದ್ದವು ಎಂದು ಅಭಿಪ್ರಾಯಪಡುವುದು ಇಲ್ಲಿ ಕಾಣಬಹುದಾಗಿದೆ.

ಗರುಡಾನ ವಾನವ ಏರಿದನು ನಾರಾಯಣ
ಪರಶಿವನ ಜೊತೆಯಲ್ಲಿ ಕೂರ್ಸಿಕೊಂಡುss
ಭಾರಿ ಕಂದಕವದಾಟಿದನು ನಾರಾಯಣ
ಕೋಟೆಯ ಬಾಗಿಲಿಗೆ ಬರುತಾರೆss[೨೮]

ನಾರಾಯಣನು(ವಿಷ್ಣು) ಶಿವನನ್ನು ತನ್ನ ವಾಹನವಾದ ಗರುಡನ ಮೇಲೆ ಕುಳ್ಳಿರಿಸಿಕೊಂಡು ಕೋಟೆಗೆ ಇದ್ದ ಕಂದಕವನ್ನು ದಾಟಿ ಕೋಟೆಯ ಬಾಗಿಲಿಗೆ ಬರುತ್ತಾರೆಂದು ಉಲ್ಲೇಖವಿದೆ.'ಕಂದಕ'ವೆಂದರೆ ಶಿಷ್ಟ ಸಾಹಿತ್ಯದಲ್ಲಿ ಕೋಟೆ ಹೊರಭಾಗದಲ್ಲಿ ಸುತ್ತಲೂ ಆಳವಾದ ಕಂದಕವನ್ನು ತೆಗೆದು ಅದರಲ್ಲಿ ನೀರು ತುಂಬಿರಿಸುತ್ತಿದ್ದರು. ನೀರಿನಲ್ಲಿ ಕಳ್ಳೆ, ಹಾವು, ಜಂಡು ಇತ್ಯಾದಿ ಅಪಾಯಕಾರಿ ವಸ್ತುಗಳನ್ನು ತುಂಬಿರುತ್ತಿದ್ದರು. ಇದನ್ನು ದಾಟಿದರೆ ಕೋಟೆಯನ್ನು ಆಕ್ರಮಿಸಲು ಸುಲಭವಾಗಿರುತ್ತಿತ್ತು ಈ ಕೋಟೆಯ ಒಂದು ಅಂಗವಾದ ಕಂದಕ ಮತ್ತು ಕೋಟೆಯ ಬಾಗಿಲು ಉಲ್ಲೇಖಗೊಂಡಿರುವುದು ಈ ಸಾಹಿತ್ಯದಿಂದ ಕಾಣಬಹುದು.

ಜನಸಮುದಾಯಗಳು ತಮ್ಮ ಪ್ರಿಯ ಪಾತ್ರವಾದವುಗಳನ್ನು ಆರಾಧಿಸುವುದು ಇಲ್ಲವೆ ಅಲೌಕಿಕ ಶಕ್ತಿಗೆ ಆರೋಪಿಸುವುದನ್ನು ಮಾಡುತ್ತಾರೆ. ಕೋಟೆಗಳಿಗೆ ಸಂಬಂಧಿಸಿದಂತೆಯೂ ಜನಪದರು ಅವುಗಳಿಗೆ ಅಲೌಕಿಕ ಶಕ್ತಿಯನ್ನು ಆರೋಪಿಸಿರುವುದನ್ನು ಮೇಲಿನ ಪದ್ಯದಿಂದ ಕಾಣಬಹುದು.

೨.೨.೩. ಕೋಟೆಯ ನಿರ್ಮಾಣದ ಪೂರ್ವ

ಕೋಟೆಯನ್ನು ಸ್ಥಾಪಿಸುವಾಗ ಸ್ಥಳದ ಆಯ್ಕೆಯು ಬಹಳ ಮುಖ್ಯವಾಗುತ್ತದೆ. ಸ್ಥಳವನ್ನು ಆಯ್ಕೆ ಮಾಡಬೇಕೆಂದರೆ ಹಲವಾರು ದಿನಗಳವರೆಗೆ ಅದರ ಶೋಧನೆ ನಡೆಯಬೇಕಾಗುತ್ತದೆ. ಶೋಧಿಸಿದ ಸ್ಥಳ,

ಸಂರಕ್ಷಣೆಯ ದೃಷ್ಟಿಯಿಂದ ಅನುಕೂಲವಾಗಿದೆಯೋ, ಮೂಲಭೂತ ಸೌಕರ್ಯವನ್ನು ಒಳಗೊಂಡಿದೆಯೋ ಮತ್ತು ವೀರತ್ವದ ಗುಣವನ್ನು ಹೊಂದಿದ ಗಂಡು ಭೂಮಿಯಾಗಿದೆಯೋ ಎಂಬುದನ್ನು ಅವಲಂಬಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಒಂದು ಜನಪದ ಕಥನವನ್ನು ಕಾಣಬಹುದು.

ಮುದ್ದು ಮುಖದ ರಾಮ ಬೆನ್ನಟ್ಟಿ ಬರಲಾಗ
ಎದ್ದಿತು ಮೊಲನು ಕಮ್ಮಟದಿ ।
ಇದ್ದಂತ ನಾಯಿಗಳ ಹಾಸವ ಬ(ಹ)ಳ ಬಲು
ಗುದ್ದಿತು ನಾಯಿ ಮೇಲ್ಬಂದು ॥
ದಿಟ್ಟ ಚೆನ್ನಿಗರಾಮ ಅದಕಂಡು ಕೋಯೆನೆ
ಅಟ್ಟಿತು ಜುಣಗಿಯೆಲ್ಲರನು ।
ಬಿಟ್ಟಲ್ಲಿ ಬಿಡದೆ ಹುಯ್ಯಲ ಕುಮ್ಮ(ಟ)ಕಾಗಿ
ನೆಟ್ಟನೆ ಬೆನ್ನಟ್ಟಿ ನಡೆಯೆ ॥
ಮಂಡಲೇಶ್ವರ ರಾಮಕಂಡನು ದುರ್ಗ(ವ)
ಕಂಡು ಬೆರಗು ವಟ್ಟನಾಗ ।
ತಂಡತಂಡದ ಪರಿವಾರವು ಸಹವಾಗಿ
ಹಿಂಡು ಮಾವಿನ ತೋಪಿನಡಿಯ ॥
ಜೈನರು ಕುಮ್ಮಟ ದುರ್ಗದಿಂದಲಿ ಮತ್ತೆ
ಚೆನ್ನರಾಮನ ಬಳಿಗೈದಿ
ಚೆನ್ನಾಗಿ ಉಲುಪಿಯ ತಂದು ಕಾಣಿಕೆಯಿಟ್ಟು
ಇನ್ನು ರಾಯನ ಕರೆದೊಯಿದು ॥
ಉನ್ನತ ಹರುಷದಿ ಕುಮ್ಮಟವನು ಹತ್ತಿ
ಚೆನ್ನಾಗಿ ದುರ್ಗ ನೋಡಿದನು ।
ಮನೆಯ ರಾಮನು ನುಡಿದ ಮತ್ತೆ(ಮತ್ತೆಯು)
ಇನ್ನು ರಾಯರಿಗಳವಲ್ಲ ॥
ಗಂಡು ಭೂಮಿಯುಯಿದು ನಾಯಿ ಕಚ್ಚಿತು ಮೊಲ
ತಂಡ ತಂಡದ ಜನನೋಡೆ
ಮಂಡಲದೊಳು ಕಮ್ಮಟ ನೋಡಿ ರಾಮಯ್ಯ
ಕಂಡು ಹಿಗ್ಗಿದ ಮನದೊಳಗೆ ॥ ....
....
ಬಿಟ್ಟರು ಕಮ್ಮಟವನು ಕೊ(ಪ್ಪ)ಳಕಾಗ

ನೆಟ್ಟನೆ ಕಟ್ಟಿ ಪಟ್ಟಣವ
ಕೋಟೆ ಕುಮ್ಮಟದಲ್ಲಿ ಚೆನ್ನಿಗರಾಮ
ದಿಟ್ಟ ಕಾಮಾಟಿಗರ ಕರೆಸಿ||[೨೯]

ಸಾಮಾನ್ಯವಾಗಿ ನಾಯಿಯು ಮೊಲವನ್ನು ಅಟ್ಟಿಸಿಕೊಂಡು ಹೋಗುವ ವಿಚಾರ ಸಹಜವಾಗಿ ಎಲ್ಲಾ ಭಾಗದಲ್ಲೂ ಕಂಡುಬರುತ್ತದೆ. ಆದರೆ ಮೊಲವೇ ನಾಯಿಯನ್ನು ಅಟ್ಟಿಸಿಕೊಂಡು ಹೋಗಿ ನಾಯಿಯನ್ನು ಕಚ್ಚಿದ ಮೇಲೆ ಈ ಘಟನೆ ನಡೆದ ಭೂಮಿಯು ಗಂಡು ಭೂಮಿಯೇ ಆಗಿರುತ್ತದೆ. ದುರ್ಬಲ ವ್ಯಕ್ತಿಯು ಬಲಿಷ್ಠ ವ್ಯಕ್ತಿಯನ್ನು ಸೋಲಿಸುವ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ. ಒಟ್ಟಾರೆಯಾಗಿ ಕೋಟೆಯನ್ನು ಸ್ಥಾಪಿಸುವಾಗ ಅಲ್ಲಿನ ಸ್ಥಳವು ವೀರತ್ವದ ಗುಣವನ್ನು ಹೊಂದಿದ ಗಂಡು ಭೂಮಿಯಾಗಿರಬೇಕೆಂದು; ಅಂತಹ ಜಾಗದಲ್ಲಿ ಮಾತ್ರ ಕೋಟೆ ಸ್ಥಾಪಿಸಬೇಕೆಂಬುದು ಕಥನದ ಆಶಯವಾಗಿದೆ.

ಈ ಮೇಲಿನ ಪದ್ಯದಲ್ಲಿ ಕಂಡುಬರುವ ಮೊಲ ನಾಯಿಯನ್ನು ಅಟ್ಟಿಸಿಕೊಂಡು ಹೋದ ಬಗೆಗಿನ ಸತ್ಯಾಸತ್ಯತೆ ಏನೇ ಇರಲಿ. ಆದರೆ ಜನಪದರು ಈ ಹಾಡನ್ನು ಕಟ್ಟಿರುವುದರ ಹಿಂದಿನ ಉದ್ದೇಶವೇನು? ಎಂಬುದನ್ನು ತಿಳಿಯಬೇಕಿದೆ

ಮುಖ್ಯವಾಗಿ ಈ ತರಹದ ಕಥನಗಳು ಕೋಟೆಗಳನ್ನು ಸ್ಥಾಪಿಸುವಾಗ ಎಲ್ಲಾ ಭಾಗದಲ್ಲೂ ಕಂಡು ಬರುತ್ತವೆ. ಜನಸಮುದಾಯಗಳು ತಾವು ನೆಲೆ ನಿಲ್ಲುವ ಸ್ಥಳವನ್ನು ಈ ಪದ್ಯಗಳ ಮೂಲಕ ಪವಿತ್ರಿಕರಿಸುತ್ತಿದ್ದಾರೆ. ಇನ್ನು ಕೋಟೆಗಳ ಸ್ಥಾಪನೆಯ ಉದ್ದೇಶವೇ ಯುದ್ಧಗಳಿಂದ ರಕ್ಷಿಸುವುದಾಗಿರುವುದರಿಂದ ಈ ನೆಲವನ್ನು ವೀರತ್ವದ ನೆಲವನ್ನಾಗಿ ಜನಸಮುದಾಯದಲ್ಲಿ ಬಿಂಬಿಸುವ ಮೂಲಕ, ಈ ನೆಲದಲ್ಲಿ ಅಥವಾ ಕೋಟೆಯಲ್ಲಿ ಬದುಕುವ ಚೈತನ್ಯವನ್ನು, ಆತ್ಮವಿಶ್ವಾಸವನ್ನು ತುಂಬುತ್ತಿದ್ದಾರೆ.

೨.೨.೪. ಕೋಟೆ ನಿರ್ಮಾಣ

ಯಾಕೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ೧೫-೧೬-೧೭ನೇ ಶತಮಾನಗಳ ಕೋಟೆಗಳ ನಿರ್ಮಾಣ ಹೆಚ್ಚಾದವು? ಇದ್ದಕ್ಕಿದ್ದಂತೆ ರಾಜಕೀಯ ಒತ್ತಡಗಳೇನು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡರೆ ಕೋಟೆಗಳ ಸ್ಥಾಪನೆ, ನಿರ್ಮಾಣ, ಕರ್ನಾಟಕದ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಎಲ್ಲವೂ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಅಧಿಕಾರವು ವಿಕೇಂದ್ರಿಕರಣಗೊಂಡಿತ್ತು. ಈ ಸಾಮ್ರಾಜ್ಯದಲ್ಲಿದ್ದ ಪಾಳೇಗಾರರು ಕೇಂದ್ರಕ್ಕೆ ಅಧೀನವಾಗಿದ್ದರೂ, ಅವರು ತಮ್ಮ ಪ್ರದೇಶಕ್ಕೆ ಸಂಬಂಧಿಸಿದ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೇಂದ್ರದ ಅನುಮತಿ ಬೇಕಿತ್ತು. ಹೀಗಾಗಿ

ಮಾಂಡಲೀಕರು, ಅಮರನಾಯಕರು ವಿಜಯನಗರ ಸಾಮ್ರಾಜ್ಯವು ತಾಳೀಕೋಟೆ ಯುದ್ಧದಲ್ಲಿ(೧೫೬೫) ಸೋತ ಬೆನ್ನಲ್ಲೇ ಸ್ವತಂತ್ರವನ್ನು ಘೋಷಿಸಿಕೊಂಡರು. ಪ್ರತಿಯೊಂದು ಚಿಕ್ಕ ಚಿಕ್ಕ ಪ್ರಾಂತ್ಯಗಳು ಸ್ವತಂತ್ರ ಅಧಿಕಾರವನ್ನು ಹೊಂದಿ ತಮ್ಮ ಪ್ರದೇಶ ವಿಸ್ತರಣೆಗಾಗಿ ಯುದ್ಧಕ್ಕಿಳಿದವು. ಚಿತ್ರದುರ್ಗ, ಕೆಳದಿ. ಹರಪನಹಳ್ಳಿ, ನಿಡುಗಲ್ಲು, ಹಾಗಲವಾಡಿ, ರಾಯದುರ್ಗ, ಹರತಿ, ಜರ್ಮಲೆ, ಉಮ್ಮತ್ತೂರು ಹೀಗೆ ಹತ್ತು ಹಲವು ಸ್ಥಳಗಳಲ್ಲಿನ ಪಾಳೇಗಾರರು ಸ್ವತಂತ್ರಗೊಂಡು ನಿರಂತರ ಯುದ್ಧಗಳಲ್ಲಿ ತೊಡಗಿಕೊಂಡರು. ಈ ನಿರಂತರ ಯುದ್ಧಗಳಿಂದಾಗಿ ೧೬-೧೭ನೇ ಶತಮಾನದಲ್ಲಿ ಪ್ರತಿಯೊಂದು ಅಧಿಕಾರ ಕೇಂದ್ರವೂ ಕೋಟೆಗಳ ನಿರ್ಮಾಣಕ್ಕೆ ತೊಡಗಿದವು. ಯುದ್ಧ ಸಂದರ್ಭದಲ್ಲಿ ಉಂಟಾಗುತ್ತಿದ್ದ ದರೋಡೆ, ಅತ್ಯಾಚಾರ, ದೌರ್ಜನ್ಯಗಳಿಂದ ಸಂರಕ್ಷಿಸಿಕೊಳ್ಳಲು ಜನಸಮುದಾಯವು ಕೋಟೆಗಳ ನಿರ್ಮಾಣ ಕಾರ್ಯದಲ್ಲಿ ಉತ್ಸಾಹದಿಂದ ಪಾಲ್ಗೊಂಡವು. ಕೋಟೆಗಳನ್ನು ತಮ್ಮ ಜೀವನದ ಒಂದು ಭಾಗವನ್ನಾಗಿಸಿಕೊಂಡರು. ಈ ಜನರ ಹಾಡು, ಕಥೆ, ನಂಬಿಕೆ-ಆಚರಣೆಗಳನ್ನು ಗಮನಿಸಿದರೆ ಇವರು ಕೋಟೆಯೊಂದಿಗೆ ಹೊಂದಿರುವ ಆತ್ಮೀಯತೆಯನ್ನು ನಿಕಟ ಸಂಬಂಧವನ್ನು ಅರಿಯಬಹುದಾಗಿದೆ.

ಕೋಟೆಯ ನಿರ್ಮಾಣದ ಹಂತವನ್ನು ಈ ಕಥನ ಹೀಗೆ ವ್ಯಕ್ತಪಡಿಸಿದೆ.

ಆನೆಯ ಕೈಲಿ ಅದಿಯ ತುಳ್ಸಿದರು
ದಳವಾಯಿಯವರು
ಏಳು ಸುತ್ತಿನ ಕೋಟೆ ಕಟ್ಟಿದರು
ಕ್ಯಾಟೆ ಸುತ್ತ ಕಾವಲ ಮಡಗಿದರು
ದಳವಾಯಿಯವರು
ರಾಣ್ಯನೆಲ್ಲ ಒಕ್ಕಡೆ ನಿಲ್ಸಿದರು||[೩೦]

ಒಂದು ಕೋಟೆಯನ್ನು ಕಟ್ಟಬೇಕೆಂದರೆ ಸ್ಥಳವು ಬಹಳ ಮುಖ್ಯವಾಗುತ್ತದೆ. ಅದು ವೀರ ಅಥವಾ ಗಂಡು ಭೂಮಿಯಾಗಿದ್ದು, ರಾಜ್ಯವಾಳಲು ಯೋಗ್ಯವಾಗಿರಬೇಕೆನ್ನುವುದು ರಾಜರ ಅಥವಾ ಪಾಳೇಗಾರರ ಆಶಯವಾಗಿತ್ತು. ಸ್ಥಳದ ಆಯ್ಕೆ ಮಾಡಿದ ತರುವಾಯ ಅಲ್ಲಿನ ಉಬ್ಬುತಗ್ಗುಗಳನ್ನು ಸರಿಮಾಡಿ ಕೋಟೆ ಕಟ್ಟುತ್ತಿದ್ದರು. ಕೋಟೆಯ ಸಂರಕ್ಷಣೆಯ ದೃಷ್ಟಿಯಿಂದ ಸುತ್ತಲೂ ಸೈನ್ಯಪಡೆಯನ್ನು ನೇಮಕ ಮಾಡಿರುತ್ತಿದ್ದರು ಎಂದು ಉಲ್ಲೇಖಿಸುತ್ತದೆ.

ಅದೇ ರೀತಿ ಕೋಟೆಯ ನಿರ್ಮಾಣದ ಬಗೆಗೆ ಹಲವು ಪದ್ಯಗಳನ್ನು ಇಲ್ಲಿ ಕಾಣಬಹುದು.

ಹುಟ್ಟಿತು ಹುಟ್ಟಿತು ಕೋಟೆ
ಹುಟ್ಟೀತು ಸೀರ್‍ಯಾದ ಪೇಟೆ
ಅಕ್ಕಿ ಇಟ್ಟೀಲಿ ನೆಲಗಾರೆ| ಕೊಟ್ಟಯಿತೆ
ಸಿಕ್ಕ ಸೀರ್‍ಯಾದ ಕೊನೆ ಪೇಟ್ಗೆ||

ಮೂಡಿತು ಮೂಡಿತು ಕೋಟೆ
ಮೂಡೀತು ಸೀರ್ಯಾದ ಪೇಟೆ
ಗೋದಿ ಇಟ್ಟೀಲಿ ನೆಲಗಾರೆ| ಕೊಟ್ಟಯಿತೆ
ರಾಯ ಸೀರ್ಯಾದ ಕೊನೆ ಪೇಟ್ಗೆ||[೩೧]

ಕೋಟೆಯ ನಿರ್ಮಾಣದ ಸಮಯದಲ್ಲಿ ಆ ಕೋಟೆಗೆ ಅಕ್ಕಿ, ಗೋದಿಯ ಹಿಟ್ಟನ್ನು ಬಳಸಿ ಕಲ್ಲುಗಳ ಸಂಧಿಗೆ ಗಿಲಾವ್ ಮಾಡಲಾಗಿದೆ ಎಂಬುದನ್ನು ಹೇಳಲಾಗಿದೆ. ಕೋಟೆಯ ಜೊತೆಗೆ ಪೇಟೆಯ ನಿರ್ಮಾಣಗೊಂಡಿದ್ದನ್ನು ಇಲ್ಲಿ ಉಲ್ಲೇಖಿಸುತ್ತದೆ. ೧೬, ೧೭, ೧೮ನೇ ಶತಮಾನದಲ್ಲಿ ಕೋಟೆಗಳ ನಿರ್ಮಾಣದ ಸಂದರ್ಭದಲ್ಲಿ ಕಲ್ಲಿನಿಂದ ನಿರ್ಮಿಸಿದ ಕೋಟೆಗಳಿಗೆ ಸುಣ್ಣದ ಗಾರೆಯನ್ನು ಹಾಕಿ, ಕೋಟೆಯನ್ನು ಅಭೇದ್ಯಗೊಳಿಸಲಾಗುತ್ತಿತ್ತೆಂಬುದು ಇಲ್ಲಿನ ಕಥನದ ಆಶಯ.

ಹತ್ತಿ ಹತ್ತೀತು ಈ ಕೋಟೆ ಚಕ್ರದಿಮ್ಮನ ಕೋಟೆ
ಹತ್ತೀತು ಈ ಕೋಟೆ ಗಗನಾಕೆ| ತಿಮ್ಮಾಜಮ್ಮನ
ಒಪ್ಪದ ಮಗನ ಬಸಿರಾಲಿ||
ಏರಿ ಏರೀತು ಈ ಕೋಟೆ ದಾರಿದಿಮ್ಮನ ಕೋಟೆ
ಏರೀತು ಈ ಕೋಟೆ ಗಗನಾಕೆ| ತಿಮ್ಮಾಜಮ್ಮನ
ಮೋಹದ ಮಗನ ಬಸಿರಾಲಿ||[೩೨]

ಕೋಟೆಗಳು ಎಷ್ಟೊಂದು ರಭಸವಾಗಿ ನಿರ್ಮಾಣಗೊಂಡು, ಗಗನವನ್ನು ತಲುಪುವಂತೆ ಕಾಣುತ್ತಿದ್ದವು ಎಂಬುದನ್ನು ಇಲ್ಲಿ ಕಾಣಬಹುದು. ಇದರಿಂದ ಜನಸಮುದಾಯಗಳು ಕೋಟೆಗಳ ನಿರ್ಮಾಣದ ಸಂದರ್ಭದಲ್ಲಿ ಭಾಗಿಯಾಗಿ ಈ ಘಟನೆಗಳನ್ನು ಅನುಭವಿಸಿ, ಸವಿದು, ಈ ರೀತಿ ಕಥನಗಳನ್ನು ನಿರ್ಮಿಸುತ್ತಿದ್ದರು ಎಂಬುದಕ್ಕೆ ಈ ಕಾವ್ಯ ಉದಾಹರಣೆಯಾಗಿದೆ.

ಏಳು ಸುತ್ತಿನ ಕೋಟೆ ಹೇಳಿಕಟ್ಟಿಸಿದನಯ್ಯ
ಚಿತ್ರಕಲ್ಲು ದುರುಗದ ನಾಡ | ಮೆದಕೇರಪ್ಪ
ಅವನು ಏಳು ಸುತ್ತೀನ ಕೋಟೆ ಒಳಗವ್ವನೆ||[೩೩]

ಕೋಟೆಗಳನ್ನು ನಿರ್ಮಾಣ ಮಾಡುವಾಗ ಪ್ರಭುತ್ವ ಹೊಂದಿದವರು ಜನಸಾಮಾನ್ಯರಿಗೆ ಹೇಳಿಕಟ್ಟಿಸುವುದು ರೂಢಿ. ಆ ಕೆಲಸವನ್ನು ಈ ಪಾಳೇಗಾರ ಮಾಡಿದ್ದಾನೆ. ಕೋಟೆಗಳನ್ನು ಕಟ್ಟುವಾಗ ಜನಸಮುದಾಯಗಳ ಸಹಕಾರವನ್ನು ಪಡೆಯುತ್ತಿದ್ದರು ಎಂಬುದನ್ನು ಕಾಣಬಹುದು. ಇಲ್ಲಿ ಏಳುಸುತ್ತಿನ ಕೋಟೆಯ ಉಲ್ಲೇಖಬಂದಿದೆ. ರಕ್ಷಣೆಯ ದೃಷ್ಟಿಯಿಂದ ಹಲವು ಸುತ್ತಿನ ಕೋಟೆಗಳನ್ನು ಕಟ್ಟುತ್ತಿದ್ದರು. ಒಂದು ಸುತ್ತಿನ ಕೋಟೆಯಿಂದ ಏಳು ಸುತ್ತಿನ(ಜನಪದ ಸಾಹಿತ್ಯದಲ್ಲಿ ಉಲ್ಲೇಖದಂತೆ) ಕೋಟೆಯವರೆಗೆ ಕೋಟೆಗಳ ನಿರ್ಮಾಣಗೊಂಡಿರುವುದನ್ನು ಕಾಣಬಹುದು.

೨.೨.೫. ಕೋಟೆಗೆ ಬಲಿ

ನಮ್ಮ ಜನಪದರ ಸಂಪ್ರದಾಯ, ಆಚರಣೆ, ನಂಬಿಕೆಗಳು, ತುಂಬಾ ಸಂಕೀರ್ಣವಾದವುಗಳು. ಭಯ ಭಕ್ತಿ, ವಿಸ್ಮಯಗಳಿಂದ ಹುಟ್ಟಿರುವ ಇವುಗಳ ಹಿನ್ನೆಲೆಯಲ್ಲಿ ಅನೇಕ ನಿಷ್ಪಾಪಿ ಜೀವಿಗಳು ಬಲಿಯಾಗಿರುವುದನ್ನು ಕಾಣುತ್ತೇವೆ. ಅದರಲ್ಲಿ ಹೆಚ್ಚಾಗಿ ಮಹಿಳೆಯರೇ ಬಲಿಯಾಗಿರುವುದು ಸಹ ಕಾಣಬಹುದು. ಬಲಿಯ ಉದ್ದೇಶವು ಒಂದನ್ನು ಹಾಳು ಮಾಡುವುದರಿಂದ ಇನ್ನೊಂದನ್ನು ಉಳಿಸುವ ಕೆಲಸವಾಗಿರುತ್ತದೆ. ಅಲ್ಲದೆ ಒಬ್ಬರ ತ್ಯಾಗದಿಂದ ಜನೋಪಕಾರಿಕ ಕೆಲಸಗಳನ್ನು ಉಳಿಸಿಕೊಳ್ಳುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗರ್ಭಿಣಿ ಮಹಿಳೆಯರು ಬಲಿಯಾಗಿರುವುದಕ್ಕೆ ಹಲವಾರು ಗೀತೆಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಗರ್ಭಿಣಿಯರನ್ನು ಕೆರೆಗೆ ಹಾರವಾಗಿ, ಕೋಟೆಯ ಗೋಡೆ, ಬಾಗಿಲಿಗೆ ಮತ್ತು ಮನೆಬಾಗಿಲು, ಗೋಡೆಗಳಿಗೆ ಹಾರವಾಗಿ ಕೊಡುತ್ತಿದ್ದುದು ಜನಪದ ಗೀತೆಗಳಲ್ಲಿ ಉಲ್ಲೇಖಗೊಂಡಿವೆ.

ಕೆಂಪೇಗೌಡನು ಬೆಂಗಳೂರಿನ ಕೋಟೆ ನಿರ್ಮಿಸುವಾಗ ಊರು ಬಾಗಿಲು ದಿನಾಲು ಬಿದ್ದು ಬಿದ್ದು ಹೋಗುತ್ತಿತ್ತು. ಅದಕ್ಕೆ ಕಾರಣಗಳನ್ನು ಶಾಸ್ತ್ರಿಗಳಲ್ಲಿ ಕೇಳಿದಾಗ ಗರ್ಭಿಣಿ ಮಹಿಳೆಯ ಬಲಿಯಾದರೆ, ಕೋಟೆಯ ಊರು ಬಾಗಿಲು ನಿಲ್ಲುತ್ತದೆ ಎಂದು ಹೇಳುತ್ತಾನೆ. ಈ ವಿಚಾರವನ್ನು ಕೆಂಪೇಗೌಡನು ತನ್ನ ಮನೆಯಲ್ಲಿ ಪ್ರಸ್ತಾಪ ಮಾಡಿದಾಗ ವಿಚಾರ ತಿಳಿದ ಕೆಂಪೇಗೌಡನ ಸೊಸೆ ಬಲಿಯಾಗುತ್ತಾಳೆ. ಬಲಿಯಾದ ಕಥನ ಈ ರೀತಿಯಿದೆ.

ಒಳ್ಳೆ ಐದು ಜನ ಪಾಳೇಗಾರರ
ಮಡಗಿಕೊಂಡ ಕೆಂಪೇಗೌಡ
ಒಳ್ಳೆ ಬೆಂಗಳೂರು ಕಟ್ಟಿಸ್ಯಾನು
ಕೋಟೆ ಊರು ಬಾಗಿಲು ನಿಲ್ಲಲಿಲ್ಲಾ
ಒಳ್ಳೆ ಎಷ್ಟು ಸಲ ಕಟ್ಟಿಸಿದರೂ
ನಿಲ್ಲದ್ಹೀಗ ಹೋದಿತಲ್ಲೋ
ಒಳ್ಳೆ ಮನೆಗಾದರೀಗಾ ಬಂದನ್ಹೀಗ
ಚಿಂತೆಯಿಂದ ಮನಗಿಕೊಂಡ
ಒಳ್ಳೆ ಕೆಂಪೇಗೌಡ್ನ ಕೇಳಿತಲ್ಲೋ
ಕೋಟೆ ಬಾಗಿಲು
ಒಳ್ಳೆ ಸೊಸೆ ಲಕ್ಷ್ಮಮ್ಮ ತಾಯಿ
ಏನಂತಾಗ ಹೇಳುತಾಳೆ

“ಮಾವಯ್ಯ ನೀನು ಚಿಂತೆ ಮಾಡಬೇಡ
ನಾನು ಹೋಗಿ ಕಟ್ಟಿಬರುವೆ
ನನ್ನ ಹೆಸರು ಜಗದಲ್ಲಿ
ಹರಡಾಲಿ ಮಾವಯ್ಯ ಕೆಂಪೇಗೌಡರೇ
ಒಳ್ಳೆ ಬೇಗದಿಂದ ಬರುತಾಳೆ
ಸೊಸೆ ತಾಯಿ ಲಕ್ಷ್ಮಮ್ಮದೇವಿ
ಒಳ್ಳೆ ಕೋಟೆ ಬಾಗಿಲಲ್ಲಿ ನಿಂತಳಲ್ಲೊ ॥ ತಂದೆನಾನಾ ತಾನಾನಾ ॥
ಬೆಂದಕಾಳೂರು ಬಾಗಿಲಲ್ಲಿ
ರಂಗಧಾಮನ ಪೂಜೆಯನ್ನು
ಮಾಡಿದಾಳು ಬೇಗದಿಂದ
ಶಾಂತಿಗಾಗಿ ತನ್ನ ದೇಹ
ಸೀಳಿಕೊಂಡಳು ತಾಯಮ್ಮ
ಒಳ್ಳೆ ಊರ ಬಾಗಿಲಲ್ಲಿ ನಿಂತಳಲ್ಲೋ
ತಾಯಿ ಶಾಪಕಾಗಿ ಈಗ
ಒಳ್ಳೆ ನೀಟುಗಾರ ಕೆಂಪೇಗೌಡ
ಯೋಜನೆಯ ಮಾಡಿಕೊಂಡು
ನನ್ನ ಸೊಸೆಯ ಸತ್ತಳಲ್ಲಾ
ನಾನು ಏನು ಮಾಡಲಯ್ಯ
ಆ ಸೊಸೆ ಹೆಸರಿಗಾಗಿ ಆಗಲೇ
ಶಿವಗಂಗೆ ಎಂಬ ಊರನ್ನೆ ಕಟ್ಟಿಸ್ಯಾನು
ಅಲ್ಲಿ ಕೆಂಪೇಗೌಡ್ನ ಪ್ರತಿರೂಪವ ತಿದ್ದಿಸ್ಯಾನು”[೩೪]

ಜನಪದರ ನಂಬಿಕೆಗಳು ಹಲವಾರು, ಅವು ಯಾವ ನಂಬಿಕೆಯಲ್ಲಾದರು ನೆರವೇರಬಹುದು. ಅದೇ ರೀತಿ ಕೋಟೆ, ಕೆರೆ ಇನ್ನಿತರ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಇಟ್ಟ ಬಾಗಿಲು, ಕಟ್ಟಿದ ಗೋಡೆಗಳು ಬಿದ್ದು ಹೋಗುವುದಕ್ಕೆ ಗರ್ಭಿಣಿಯಾದ ಮಹಿಳೆಯನ್ನು ಬಲಿಮಾಡುವುದರಿಂದ ಬಾಗಿಲು, ಗೋಡೆಗಳು ನಿಲ್ಲುತ್ತಿದ್ದವು ಎಂಬ ನಂಬಿಕೆ ಜನಪದರಲ್ಲಿ ಬಲವಾಗಿತ್ತು. ಇದರಿಂದ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಕೋಟೆಯ ಬಾಗಿಲು, ಗೋಡೆಗಳು ನಿಲ್ಲದಲೇ ಹೋದಾಗ ಗರ್ಭಿಣಿ ಮಹಿಳೆಯರ ಬಲಿಕಾರ್ಯ ಸರ್ವೇಸಾಮಾನ್ಯವಾಗಿತ್ತು. ಈಗ ದೊರೆತಿರುವ ಜನಪದ ಕಥನಗಳಲ್ಲಿ ಅದರಲ್ಲಿ ಹೆಚ್ಚಾಗಿ ತಾವಾಗಿಯೇ ಬಲಿಯಾದ ಘಟನೆಗಳು ಕಂಡುಬರುತ್ತವೆ.

ಈ ಮೇಲಿನ ಲಾವಣಿಯಿಂದ ಕೋಟೆಯ ನಿರ್ಮಾಣದ ಹಂತದಲ್ಲಿ ಬಲಿಯು ನಡೆಯುತ್ತಿತ್ತು ಎನ್ನುವುದಕ್ಕೆ ಉದಾಹರಣೆಯಾಗಿ ಕೊಡಬಹುದಾಗಿದೆ. ಇದಲ್ಲದೆ ಇನ್ನೂ ಹಲವಾರು ಗದ್ಯ ಸಾಹಿತ್ಯದಲ್ಲೂ ಕೋಟೆಗೆ ಬಲಿಯಾದ ಬಗೆಗೆ ಉಲ್ಲೇಖಗಳನ್ನು ಕಾಣಬಹುದಾಗಿದೆ. ಕೋಟೆಗೆ ಗರ್ಭಧರಿಸಿದವರನ್ನು ಬಲಿಕೊಡುವ ಉದ್ದೇಶವು ಫಲೋತ್ಪತ್ತಿಯ ಸಂಕೇತವೆಂದು ಭಾವಿಸಿದ್ದರು. ಇದರಿಂದ ಕೋಟೆಯು ನಾಶಹೊಂದದೆ, ಅಭೇದ್ಯವಾಗಿರುತ್ತಿತ್ತೆಂದು ನಂಬಿಕೆಯಿಟ್ಟಿದ್ದರು.

ಯಾವುದೇ ಶುಭಕಾರ್ಯಗಳಿಗೆ ಅಡ್ಡಿಯುಂಟಾದಾಗ ಬಲಿ ಕೊಡುವುದು ನಮ್ಮ ಜನಪದರ ಪದ್ಧತಿಯಾಗಿದೆ. ಪ್ರಾಣಿಗಳನ್ನೋ, ಮನುಷ್ಯರನ್ನೋ ಬಲಿ ಕೊಡುವ ಮೂಲಕ ದೇವರನ್ನು ಸಂತೃಪ್ತಿ ಗೊಳಿಸಿದಂತಾಗುತ್ತದೆ ಎಂದು ನಂಬಲಾಗಿದೆ. ಮನುಷ್ಯರಿಗೆ ಸಂಬಂಧಿಸಿದಂತೆ ಹೆಚ್ಚು ಬಲಿಯಾಗಿರುವುದು ಹೆಂಗಸರೇ. ಅದರಲ್ಲೂ ಗರ್ಭಿಣಿ ಹೆಂಗಸರನ್ನು ಬಲಿ ಕೊಡುವುದು ಜಾಸ್ತಿ. ಯಾಕೆ ಹೀಗೆ? ಜೊತೆಗೆ ಕೆಳವರ್ಗದ ಹೆಂಗಸರನ್ನೆ ಏಕೆ ಬಲಿಕೊಡುತ್ತಾರೆ? ಎಂಬ ಪ್ರಶ್ನೆ ಏಳುತ್ತದೆ. ಮುಖ್ಯವಾಗಿ ಪ್ರಾಚೀನ ಕಾಲದಿಂದಲೂ ಇಲ್ಲಿ ಪುರುಷರ ದಬ್ಬಾಳಿಕೆ ಹೆಂಗಸರ ಮೇಲೆ ನಡೆಯುತ್ತಲೇ ಬಂದಿದೆ. ಸ್ತ್ರೀಯರು ಈ ಬಗ್ಗೆ ಪ್ರತಿಭಟಿಸುವುದಿಲ್ಲ. ಹೀಗೆ ಬಲಿಯಾದ ಹೆಂಗಸರನ್ನು ದೈವತ್ವಕ್ಕೇರಿಸಿ ಪೂಜೆ ಮಾಡುವ ಮೂಲಕ ಇನ್ನಿತರ ಹೆಂಗಸರಿಗೆ ಮಾದರಿ ಎನ್ನುವಂತೆ ಬಿಂಬಿಸಲಾಗುತ್ತದೆ. ಇದರಿಂದಾಗಿ ಮುಂದೆ ಬಲಿ ನೀಡಬೇಕಾದ ಸಂದರ್ಭ ಬಂದರೆ ಹೆಂಗಸರನ್ನೆ ಬಲಿ ನೀಡುವಂತೆ ಮತ್ತು ಕೆಳವರ್ಗದವರನ್ನೆ ಬಲಿ ನೀಡುವಂತೆ ಒತ್ತಡ ಉಂಟಾಗುತ್ತದೆ. ಈ ಸ್ತ್ರೀಯರು ಸೃಷ್ಟಿಯ ಸಂಕೇತವಾಗಿದ್ದಾರೆ. ಸಮೃದ್ಧಿ ಫಲವತ್ತತೆಯ ಸಂಕೇತವಾದ ಇಂತಹ ಸ್ತ್ರೀಯರನ್ನು ಬಲಿ ನೀಡುವುದರಿಂದ ಕೋಟೆಯ ಶಕ್ತಿ ಸಾಮರ್ಥ್ಯ ಹೆಚ್ಚುತ್ತದೆಂದೂ, ಶುಭವಾಗುತ್ತದೆಂದೂ ನಂಬಲಾಗಿದೆ.

೨.೨.೬. ಕೋಟೆ ಕಟ್ಟಿಸಿದ ವ್ಯಕ್ತಿಯ ಉಲ್ಲೇಖ

ಪ್ರಬಲನಾದ ವ್ಯಕ್ತಿಯು ರಾಜ ಅಥವಾ ಪಾಳೆಗಾರನೆಂದು ಹೆಸರು ಪಡೆದು, ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಹೊಂದಿ, ಆತನು ರಾಜ್ಯ ಅಥವಾ ಸಂಸ್ಥಾನಗಳನ್ನು ಸಂರಕ್ಷಿಸುವುದಕ್ಕೆ ಒಂದು ಕೋಟೆ ಯನ್ನು ಕಟ್ಟಿಕೊಂಡು ಆಳ್ವಿಕೆ ಮಾಡುತ್ತಾನೆ. ಈ ಕೋಟೆಯನ್ನು ಕಟ್ಟಿಸಿದ ರಾಜ, ಪಾಳೇಗಾರರ ಹೆಸರನ್ನು ಲಿಖಿತ ಆಕರಗಳು ಉಲ್ಲೇಖಿಸುತ್ತವೆ. ಕೆಲವು ಬಾರಿ ಉಲ್ಲೇಖವಾಗದೆಯೂ ಇರುತ್ತವೆ. ಇಂಥಹ ಸಂದರ್ಭದಲ್ಲಿ ಮೌಖಿಕ ಕಾವ್ಯಗಳು ಇತಿಹಾಸದ ಬಹುಮುಖ್ಯ ಅಂಶಗಳನ್ನು ಹೊರಚೆಲ್ಲುತ್ತವೆ. ಇದರಿಂದ ಮೌಖಿಕ ಸಾಹಿತ್ಯವು ಚರಿತ್ರೆಯ ನಿರ್ಮಾಣದ ಸಂದರ್ಭದಲ್ಲಿ ಒಂದು ಆಕರವಾಗಿ ನಿಲ್ಲಬಹುದೆಂದು ಹೇಳಬಹುದು. ಕೋಟೆ ಕಟ್ಟಿಸಿದ ಪಾಳೇಗಾರನನ್ನು ಉಲ್ಲೇಖಿಸುವ ಒಂದು ಮೌಖಿಕ ಕಥನವೊಂದು ಹೀಗಿದೆ.

ಚಿತ್ರದುರುಗಾವ ವತ್ತಿ ಆಳುವಾಗ
ನೀನು ಒಪ್ಪೆ ಕಟ್ಟಿಸಯ್ಯ ಕೋಟೆಗಳ|ಮದಕೇರಪ್ಪ
ನೀನು ಒಪ್ಪೆ ಕಟ್ಟಿಸಯ್ಯ ಕೋಟೆಗಳ ||

ಏಳೆ ಕಲ್ವೇಣಿ ಎದ್ದೀತು ಈ ಕೋಟೆ
ರಾಯ ಮೆದಕೇರಿ ನಾಯ್ಕನ ಬಲದಲ್ಲಿ | ಚಿತ್ರದುರುಗ
ಏಳು ಕಲ್ಲೇಲಿ ಎದ್ದೀತು||

ಚಿತ್ರದುರುಗದ ನಾಡ ವತ್ತಿ ಆಳೋನಯ್ಯ
ಹೇಳಿ ಕಟ್ಟಿಸಿದ ಮೆದಕೇರಪ್ಪ | ಅವ್ವನು
ಏಳುಸುತ್ತಿನ ಕೋಟೆ ಒಳಗಪ್ಪೆ ||[೩೫]

ಈ ಮೇಲಿನ ಕಥನದಿಂದ ಚಿತ್ರದುರುಗಾದ ಕೋಟೆಯನ್ನು ಕಟ್ಟಿಸಿದವನು ಮೆದಕೇರಿ ಎಂಬ ಉಲ್ಲೇಖವಿದೆ. ಈತನು ಇನ್ನೊಬ್ಬರಿಗೆ ಒಪ್ಪಿ ಹೇಳಿ ಕಟ್ಟಿಸಿದನೆಂದು ಗೊತ್ತಾಗುತ್ತದೆ. ಈ ಕೋಟೆಯ ನಿರ್ಮಾಣವು ಯಾವ ಕಾಲದಲ್ಲಿ ನಿರ್ಮಾಣವಾಯಿತು ಎನ್ನುವುದು ಈ ಕಥನದಿಂದ ಗೊತ್ತಾಗುವುದಿಲ್ಲ. ಆದ್ದರಿಂದ ಲಿಖಿತ ಮತ್ತು ಮೌಖಿಕ ಆಕರಗಳಿಂದ ತುಲನೆ ಮಾಡಿದರೆ ಇನ್ನಷ್ಟು ಮಾಹಿತಿ ದೊರೆಯುತ್ತದೆ. ಆತನೇ ಹೇಳಿ ಕಟ್ಟಿಸಿದ ಕೋಟೆಗಳು ಇನ್ನು ಹಲವಾರು ಇವೆ ಎನ್ನುವುದಕ್ಕೆ ಇನ್ನೊಂದು ಕಥನ ಕಾಣಬಹುದು.

ನಿಂತು ನಿಡುಗಲ್ಲು ಕಟ್ಟಿಸಿದ ಕುಂತು ಕುಂದಿರ್ಪಿ ಕಟ್ಟಿಸಿದ
ವತ್ತಿ ಆಳೋನು ಮೆದಕೇರಿ | ದುರುಗದ
ಮೇಲೆ ಏಳು ಕೋಟೆಗಳ ಕಟ್ಟಿಸಿದ ||[೩೬]

ಈ ಕಥನವನ್ನು ಪರಿಶೀಲಿಸಿದರೆ ಮೆದಕೇರಿ ಪಾಳೇಗಾರನು ಚಿತ್ರದುರ್ಗದ ಕೋಟೆಯಲ್ಲಿದ್ದು, ನಿಡುಗಲ್ಲು, ಕುಂದಿರ್ಪಿಯ ಕೋಟೆಗಳನ್ನು ಕಟ್ಟಿಸಿದ್ದಾನೆನ್ನುವುದು ಉಲ್ಲೇಖಗೊಳ್ಳುತ್ತದೆ. ಇದಲ್ಲದೆ ಇನ್ನೂ ಏಳು ಕೋಟೆಗಳನ್ನು ಕಟ್ಟಿಸಿದ್ದಾನೆನ್ನುವ ವಿಚಾರ ಹೊರಬೀಳುತ್ತದೆ. ಒಟ್ಟಾಗಿ ಹತ್ತು ಪ್ರದೇಶಗಳಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿದ್ದಾನೆಂದು ಈ ಕಥನದಿಂದ ಪತ್ತೆಹಚ್ಚಬಹುದು. ಇದಲ್ಲದೆ ಇದೇ ಪಾಳೇಗಾರನು ಹಲವು ಪ್ರದೇಶಗಳನ್ನು ಗೆದ್ದುಕೊಂಡಿದ್ದರ ಬಗ್ಗೆಯೂ ಉಲ್ಲೇಖಿಸುತ್ತದೆ.

ಸೀರ್ಯಾವ ಗೆದ್ದ ಚಿನ್ನದುಂಗರಗೆದ್ದ
ಮಾತಿನಲ್ಲಿ ಗೆದ್ದ ಮಲೆನಾಡ | ಜರ್ಮಾಲೆಯ
ರೀತೀಲಿ ಗೆದ್ದನು ದುರುಗಾವ

ಚಿತ್ರದುರುಗದ ಪಾಳೇಗಾರ ಮೆದಕೇರಿಯು ಸೀರ್ಯಾ(ಈಗಿನ ಸಿರಾ), ಮಲೆನಾಡು, ಜರ್ಮಾಲೆ ಹಾಗೂ ಇನ್ನಿತರ ಪ್ರದೇಶಗಳನ್ನು ಗೆದ್ದಿದ್ದನೆಂಬುದಕ್ಕೆ ಈ ಕಥನ ಬಹಳ ಮುಖ್ಯ ಆಕರವಾಗಿದೆ. ಇದರಿಂದ

ಹಲವು ಕೋಟೆಗಳನ್ನು ಮದಕೇರಿಯು ಆಕ್ರಮಣ ಮಾಡಿ ಗೆದ್ದಿದ್ದನೆಂಬುದಕ್ಕೆ ಮೌಖಿಕ ಸಾಹಿತ್ಯ ಉಲ್ಲೇಖಿಸುತ್ತದೆ.

ಒಟ್ಟಾರೆಯಾಗಿ ಕೋಟೆಗಳನ್ನು ಕಟ್ಟಿಸಿದ ವ್ಯಕ್ತಿಯನ್ನು ಉಲ್ಲೇಖಿಸಿದಂತೆ, ಇನ್ನಿತರ ಕೋಟೆಗಳನ್ನು ವಶಪಡಿಸಿಕೊಂಡು ಆಳ್ವಿಕೆ ಮಾಡುವುದು ಇಲ್ಲಿನ ಕಥನಗಳು ವ್ಯಕ್ತಪಡಿಸುವುದನ್ನು ಕಾಣಬಹುದು. ಇತಿಹಾಸದ ಮರುನಿರ್ಮಾಣದ ಸಂದರ್ಭದಲ್ಲಿ ಲಿಖಿತವಾಗಿ ದಾಖಲಾಗದ ಎಷ್ಟೋ ವಿಷಯಗಳನ್ನು ಜಾನಪದ ಮೌಖಿಕ ಸಾಹಿತ್ಯ ಒದಗಿಸಿಕೊಡುತ್ತದೆ. ಇವನ್ನು ಇತಿಹಾಸದ ರಚನೆಯ ಸಂದರ್ಭದಲ್ಲಿ ಅತಿಸೂಕ್ಷ್ಮವಾಗಿ ಬಳಸಿಕೊಳ್ಳಬಹುದು.

೨.೨.೭. ಕೊತ್ತಲಗಳು

ಕೊತ್ತಲಗಳು ಕೋಟೆಯ ಗೋಡೆಗಳನ್ನು ಸಂಧಿಸುವ ಜಾಗದಲ್ಲಿ ನಿರ್ಮಿಸಿರುತ್ತಾರೆ. ಕೊತ್ತಲಗಳು ಕೋಟೆಗೆ ಅಂಟಿಕೊಂಡಿರುತ್ತವೆ. ಸೈನಿಕರು ನಿಂತು ಕಾದಾಡುವ ಅಥವಾ ಪಹರೆ ಮಾಡುವ ಉದ್ದೇಶದಿಂದ ಕೊತ್ತಲಗಳನ್ನು ನಿರ್ಮಿಸಿರುತ್ತಾರೆ. ಇವನ್ನು ಎತ್ತರವಾದ ಆಯಕಟ್ಟಿನ ಪ್ರದೇಶಗಳಲ್ಲಿ ರಕ್ಷಣೆಗಾಗಿ ನಿರ್ಮಿಸುತ್ತಿದ್ದರು. ಕೊತ್ತಲವನ್ನು ಉಲ್ಲೇಖಿಸುವ ಒಂದು ಕಥನ ಹೀಗಿದೆ.

ಸುತ್ತ ಕೋಟೆಯು ಇರಲು ಕೊತ್ತಳವು ಸುತ್ತಿರಲು
ಹತ್ತಿರಕೆ ಗುಡ್ಡ ಎದ್ದಿರಲು | ಊರಿಂಗೆ
ಅತ್ತಿತ್ತ ದಾರಿ ಬಂದಿರಲು || [೩೭]

ಹತ್ತಿರದ ಕೊತ್ತಳವ ಹತ್ತ್ಯಾಳ ಆಬಾಲಿ
ಕೊತ್ತಳದ ಮ್ಯಾಲ ನಿಂತಾಳ | ಹರನೆಂದು
ಕೊತ್ತಳದಿಂ ಬಿದ್ದು ಸತ್ತಾಲ[೩೮]

ಎತ್ತಿತು ಕೊತ್ತಳ ಗಗನವ ತುಳುಕಲು
ಸುತ್ತಲಿ ಆಳ್ವೇರಿಗಳು
ಮೊತ್ತದಿ ಹುಲಿಮುಖಿಗಳು ಸಂಭಮಿಸೆ
ಸುತ್ತಲಿದುರ್ಗ ರಂಜಿಸಲು[೩೯]

ಕೋಟೆಯ ಜೊತೆಗೆ ಕೊತ್ತಲವು ಅಂಟಿಕೊಂಡಿರುವ ಪದ. ಇವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಹೇಳಲು ಬರುವುದಿಲ್ಲ. ಅದೇ ರೀತಿ ಕೋಟೆಯು ಸುತ್ತವರಿದಿರುತ್ತದೆ. ಅದಕ್ಕೆ ಹೊಂದಿಕೊಂಡಂತೆ ಅಲ್ಲಲ್ಲಿ ಕೊತ್ತಲಗಳನ್ನು ನಿರ್ಮಿಸಿರುತ್ತಾರೆನ್ನುವುದನ್ನು ಮೇಲಿನ ಕಥನದಿಂದ ಕಾಣಬಹುದು. ಜೊತೆಗೆ ಕೊತ್ತಲಗಳು ಕೋಟೆ ಗೋಡೆಯಿಂದ ಮುಂಚಾಚಿರುವ ಚೌಕಕಾರದ ಭಾಗವೆಂದು

ಗುರುತಿಸಬಹುದಾಗಿದೆ. ಕೆಲವು ಭಾರಿ ಕೋಟೆಯ ಪಕ್ಕದಲ್ಲಿರುವ ಬೃಹತ್ ಬಂಡೆಗಳನ್ನು ಕೊತ್ತಲಗಳನ್ನಾಗಿ ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಇವೆಲ್ಲವುಗಳ ಅರ್ಥವನ್ನುಳ್ಳ ಕೊತ್ತಲಗಳು ಸಹ ಜನಪದ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವುದು ಕಾಣಬಹುದಾಗಿದೆ. ಕೋಟೆ ಮತ್ತು ಕೊತ್ತಲಗಳನ್ನು ಒಂದೇ ಬಾರಿ ಉಚ್ಚರಿಸುವ ಒಂದು ಕಥನ ಹೀಗಿದೆ.

ಕೋಟೆ ಕೊತ್ತಲದ ಮೇಲೆ ಕುಳಿತಿರೋವಳ್ಯಾರೆ
ಕುಂಕುಮದ ಸೀರೆ ನೆರಿಗ್ಯೋಳೆ ಕಾಳಮ್ಮ
ಕುಂತು ನೋಡೋಳೆ ಕುಣಿತಾವ||[೪೦]

ಈ ಉಲ್ಲೇಖವನ್ನು ಗಮನಿಸಿದರೆ ಕೋಟೆ ಮತ್ತು ಕೊತ್ತಲಗಳು ಒಂದನ್ನು ಬಿಟ್ಟು ಇನ್ನೊಂದಿಲ್ಲ ಅಂದರೆ ಕೋಟೆಗೆ ಕೊತ್ತಲಗಳು ಹೆಚ್ಚಿನ ರಕ್ಷಣೆಯನ್ನು ನೀಡುತ್ತವೆ. ಹಾಗಾಗಿ ಶತೃಗಳಿಂದ ರಕ್ಷಣೆಯ ಸಂದರ್ಭದಲ್ಲಿ ಕೋಟೆ-ಕೊತ್ತಲಗಳ ಪಾತ್ರ ಬಹಳ ಮುಖ್ಯವಾದದ್ದು.

೨.೨.೮. ಕೋಟೆಯ ಅಭೇದ್ಯತೆ

ರಾಜರು ಅಥವಾ ಪಾಳೇಗಾರರು ಕಟ್ಟುವ ಕೋಟೆಗಳು ರಕ್ಷಣೆಯ ದೃಷ್ಟಿಯಿಂದ ಅಭೇದ್ಯವಾಗಿರುತ್ತಿದ್ದವು. ಕೋಟೆಗಳನ್ನು ಶತ್ರುಗಳು ಆಕ್ರಮಣ ಮಾಡದ ರೀತಿ ಬಹಳ ತಾಂತ್ರಿಕವಾಗಿ ನಿರ್ಮಿಸುತ್ತಿದ್ದರು. ಕೋಟೆ ನಿರ್ಮಿಸಿದ ವ್ಯಕ್ತಿಗೆ ಮಾತ್ರ ಕೋಟೆ ಒಳಗೆ ಪ್ರವೇಶಿಸಲು ಅಥವಾ ಬೇಧಿಸಿ ಒಳಹೋಗಲು ಗುಪ್ತಮಾರ್ಗಗಳು ಗೊತ್ತಿರುತ್ತಿದ್ದವು. ಈ ವಿಚಾರವನ್ನು ಸಂಸ್ಥಾನದ ಕೆಲವು ಮಂದಿಗೆ ಮಾತ್ರ ಗೊತ್ತುಪಡಿಸಲಾಗಿರುತ್ತಿತ್ತು. ಈ ಹಿನ್ನೆಲೆಯಲ್ಲಿ ಕೋಟೆಗಳು ಹೇಗೆ ಶತ್ರುಗಳಿಂದ ಆಕ್ರಮಣಕ್ಕೆ ಒಳಗಾಗದೆ ಅಭೇದ್ಯವಾಗಿದ್ದವು ಎಂಬುದನ್ನು ಒಂದು ಕಥನದಿಂದ ಕಾಣಬಹುದು.

ಹಕ್ಕಿ ಹಾರದ ಕೋಟೆ ಪಕ್ಷಿ ತೂರದ ಕೋಟೆ
ರಕ್ಕಸನ ಕೋಟೆ ರಣಕೋಟ|| ರನ್ನಾದ ಕೋಲನ್ನಾ ಕೋಟೆ||
ರಕ್ಕಸನ ಕೋಟೆ ರಣಕೋಟೆ ನಿಡುಗಲ್ಲು
ಒಕ್ಕು ಹೋಗೋನ ಹೆಸರೇನೆ || ರನ್ನಾದ ||
ಕಾಗೆ ತೂರದ ಕೋಟೆ ಗೂಬೆ ಕೂರದ ಕೋಟೆ
ರಾವಳನ ಕೋಟೆ ರಣಕೋಟೆ || ರನ್ನಾದ ||
ರಾವಳನ ಕೋಟೆ ರಣಕೋಟೆ ನಿಡುಗಲ್ಲು
ಓಡಿ ಹೋಗೋನ ಹೆಸರೇನೆ || ರನ್ನಾದ ||
ಕೋಟೆ ಆರಾಳುದ್ದ ಕೊತ್ತಲ ಮೂರಾಳುದ್ದ

ಕೋಟೆಯ ಹೆಸರೇ ಗಡಿಯಂಕ || ರನ್ನಾದ ||
ಕೋಟೆಯ ಹೆಸರೇ ಗಡಿಯಂಕ ಮುಮ್ಮಡಣ್ಣನ
ಅಂಗೀಯ ಹೆಸರೇ ಲಿಂಗವಂತ || ರನ್ನಾದ ||[೪೧]

ಕೋಟೆಯೊಳಕ್ಕೆ ಪಕ್ಷಿ ತೂರುವುದಕ್ಕೆ ಸಾಧ್ಯವಿಲ್ಲ ಇನ್ನು ಮಾನವರು ತೂರಲು ಸಾಧ್ಯವೇ? ಎನ್ನುವಂತೆ ಕಥನ ಕಟ್ಟಿಕೊಡುತ್ತದೆ. ಪಾಳೇಗಾರರು ನಿರ್ಮಿಸಿದ ಕೋಟೆಗಳು ರಕ್ಕಸ-ರಾವಣರ ಕೋಟೆಗಳಾಗಿದ್ದವು. ಅವನ್ನು ಭೇಧಿಸಲು ಸಾಧ್ಯವಿಲ್ಲದ ರಣಕೋಟೆಗಳಾಗಿದ್ದವೆಂದು ಉಲ್ಲೇಖಿಸುತ್ತದೆ. ಈ ನಿಟ್ಟಿನಲ್ಲಿ ಕೋಟೆ-ಕೊತ್ತಲಗಳು ನಿರ್ಮಾಣದ ಸಂದರ್ಭದಲ್ಲಿ ಆಯಕಟ್ಟಿನ ಜಾಗವನ್ನು ಆಯ್ಕೆ ಮಾಡಿಕೊಂಡು ಬೃಹತ್ ಗಾತ್ರದ ಕಲ್ಲುಗಳನ್ನು ಬಳಸಿಕೊಂಡಿರುತ್ತಿದ್ದರು. ಅವುಗಳನ್ನು ಒಂದರ ಮೇಲೊಂದರಂತೆ ಪೇರಿಸಿ, ಅವುಗಳ ಸಂದುಗಳಿಗೆ ಸುಣ್ಣದ ಗಾರೆಯನ್ನು ಹಾಕಿ ಭದ್ರವಾದ ಕೋಟೆಯನ್ನು ನಿರ್ಮಿಸುತ್ತಿದ್ದರು. ಕೋಟೆಯೊಳಕ್ಕೆ ಪಕ್ಷಿಗಳು ಪ್ರವೇಶ ಮಾಡುವಷ್ಟು ಜಾಗವು ಸಹ ಇರುತ್ತಿರಲಿಲ್ಲ. ಒಳಹೋಗದ ರೀತಿ ಕೋಟೆಗಳಿದ್ದವು ಎಂಬುದನ್ನು ಜನಪದ ಸಾಹಿತ್ಯ ಉಲ್ಲೇಖಿಸುತ್ತದೆ. ಇದರಲ್ಲಿ ಕೊತ್ತಲಗಳ ಹೆಸರು ಉಲ್ಲೇಖಗೊಂಡಿರುವುದು ಸಹ ಕಾಣಬಹುದು.

೨.೨.೯. ಫಿರಂಗಿ ನಿರ್ಮಾಣ

ಪಾಶ್ಚಿಮಾತ್ಯರ ಪ್ರಭಾವದಿಂದ ಭಾರತದ ರಾಜ ಅಥವಾ ಪಾಳೇಗಾರರಲ್ಲೂ ರಾಜ್ಯ ಅಥವಾ ಸಂಸ್ಥಾನಗಳ ಸಂರಕ್ಷಕ ಸಾಧನಗಳಲ್ಲಿ ಭಾರಿ ಬದಲಾವಣೆಗಳು ಕಂಡುಬಂದವು. ಈ ಹಿನ್ನೆಲೆಯಲ್ಲಿ ಹಿಂದೆ ಬಳಕೆಯಾಗುತ್ತಿದ್ದ ರಕ್ಷಣೆ ಸಾಧನೆಗಳು ಬರಬರುತ್ತ ಹೊಸ ಹೊಸ ಸಾಮಗ್ರಿಗಳ ಕಡೆ ತಿರುಗಿತು. ಕೋಟೆಯ ಸಂರಕ್ಷಣೆಯ ದೃಷ್ಟಿಯಿಂದ ಫಿರಂಗಿ-ಕೋವಿಗಳು(ತುಬಾಕಿ) ಮಹತ್ವದ ಪಾತ್ರವನ್ನು ವಹಿಸುತ್ತವೆ. ಅವುಗಳ ಬಗೆಗೆ ಜನಪದ ಸಾಹಿತ್ಯದಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದಾಗಿದೆ.

ಒಡ್ಡರನು ಕರೆಸಿದ ದಿಬ್ಬವ ಹಗೆಸಿದ
ದೊಡ್ಡ ಫಿರಂಗಿ ನಿಲಿಸೀದ | ಮೆದಕೇರಿ
ದಿಬ್ಬಕೆ ಟೇಪ ಟೇಪನೆ ನೆಡಸೀದ ||
ಕೋಮಟಿಗರ ಕರೆಸಿದ ಕಾಲುವೆ ತೆಗೆಸಿದ
ಜೋಡ ಫಿರಂಗಿ ನಿಲಿಸೀದ ಮದಕೇರಿ
ದುರುಗಾಕೆ ಟೇಪ ಟೇಪನೆ ನೆಡಸೀದ ||[೪೨]

ಈ ಮೇಲಿನ ಪದ್ಯದಿಂದ ಕೋಟೆಯ ಸಂರಚನೆಯಲ್ಲಿ ಯಾವ್ಯಾವ ಸಮುದಾಯಗಳು ಬಳಕೆಗೊಂಡಿದ್ದವು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಜೊತೆಗೆ ಫಿರಂಗಿಯು ಆಧುನಿಕ ಕಾಲದ ಒಂದು ರಕ್ಷಣಾ ಆಯುಧ. ಇದರಿಂದ ಬೇಗ ಕೋಟೆಗಳನ್ನು ನಾಶಪಡಿಸಿ ಸಂಸ್ಥಾನಗಳನ್ನು ಆಕ್ರಮಿಸಿಕೊಳ್ಳಬಹುದಾಗಿತ್ತು.

ಚಿಕ್ಕ ಫಿರಂಗಿಯಿಂದ ದೊಡ್ಡ ದೊಡ್ಡ ಫಿರಂಗಿಗಳು ಬಳಕೆಗೊಂಡಿವೆ. ಜೊತೆಗೆ ಜೋಡಿಯಾಗಿ ಫಿರಂಗಿಗಳನ್ನು ಇಡಲಾಗುತ್ತಿತ್ತೆಂದು ಉಲ್ಲೇಖಿಸಿರುವುದನ್ನು ನಾವಿಲ್ಲಿ ಕಾಣಬಹುದು.

ಗುದ್ದಲಿಯ ತರಿಸಿದ ದಿಬ್ಬವ ಸರಿ ಮಾಡಿಸಿದ
ದೊಡ್ಡ ಫಿರಂಗಿಯ ನಿಲಿಸಂದ || ರನ್ನಾದ ||
ದೊಡ್ಡ ಫಿರಂಗಿಯ ನಿಲಿಸಂದ ಹೊಸಕೋಟೆ
ದಿಡ್ಡಿ ಬಾಗಿಲ ನೋಡಿ ಹೊಡೆಯೆಂದ || ರನ್ನಾದ ||

ಹಾರೆಯ ತರಿಸಿದ ಹಾದಿಯ ಸಮ ಮಾಡಿಸಿದ
ಘೋರ ಫಿರಂಗಿಯ ನಿಲಿಸಂದ || ರನ್ನಾದ ||
ಘೋರ ಫಿರಂಗಿಯ ನಿಲಿಸಂದ ಪಾಗೊಂಡೆ
ಘೋರ್ ಬಾಗಿಲ ನೋಡಿ ಹೊಡೆಯೆಂದ || ರನ್ನಾದ ||[೪೩]

ಕೋಟೆಯ ಒಳಗೆ ಫಿರಂಗಿಯ ನಿರ್ಮಾಣಗಳ ಬಗೆಗೆ ಈ ಗೀತೆಯು ವ್ಯಕ್ತಪಡಿಸುತ್ತದೆ. ಫಿರಂಗಿಯನ್ನು ನಿರ್ಮಾಣ ಮಾಡುವಾಗ ಸಮನಾದ ಜಾಗವನ್ನು ಆಯ್ಕೆ ಮಾಡಿಕೊಂಡು ಸ್ಥಾಪಿಸುತ್ತಿದ್ದರು. ಫಿರಂಗಿಯನ್ನು ಹೆಚ್ಚಾಗಿ ಎತ್ತರವಾದ ಪ್ರದೇಶದಲ್ಲಿ ಮಾತ್ರ ನಿರ್ಮಿಸುತ್ತಿದ್ದರು. ಈ ಫಿರಂಗಿಗಳು ಓಡಾಡುವುದಕ್ಕೆ ಸಮನಾಗಿರುವ ಜಾಗವನ್ನು ನಿರ್ಮಾಣ ಮಾಡಿರುತ್ತಿದ್ದರು. ಕೋಟೆಗಳನ್ನು ಆಕ್ರಮಿಸುವವರು ಈ ಫಿರಂಗಿಗಳನ್ನು ಬಳಸುತ್ತಿದ್ದರು. ಇದರಿಂದ ಕೋಟೆಗಳನ್ನು ಬಹುಬೇಗ ಆಕ್ರಮಿಸಿಕೊಳ್ಳಬಹುದಿತ್ತೆಂದು ಊಹಿಸಬಹುದು. ಇಲ್ಲಿ ಇನ್ನೊಂದು ಕಥನವು ಫಿರಂಗಿಯ ಮಹತ್ವವನ್ನು ಉಲ್ಲೇಖಿಸಿದೆ.

ಮಾರನು ಮನೆಂಬೋದು ಮೀರಿದ ಫಿರಂಗಿ
ಹುಚ್ಚನು ಮನೆಂಬೋದು ಹೆಚ್ಚೀದ ಫಿರಂಗಿ
ಎತ್ತೀರಿ ಮೇಲೆ ಬಂಡ್ಯಾಕೆಂದ ||[೪೪]

ಇಲ್ಲಿ ಫಿರಂಗಿಯ ವಿಶೇಷತೆಯನ್ನು ಜನಪದ ಕವಿ ಎತ್ತಿಹಿಡಿದಿರುವುದು ಕಾಣಬಹುದು.

ಫಿರಂಗಿಯಾ ದಿಡ್ಡಿ ಹೊಸಕೋಟೆ ಬಾಗಿಲು
ಪಾಗೊಂಡೆ ಗಾರೆದಿಡ್ಡೀಲಿ ದೊಡ್ಡ ಫಿರಂಗಿ ಹೊಡಿ
ಕರಿಯಮದ್ದನು ಸುರಿಸೆ ಸಾವು ಹತ್ತುಸಾವಿರ[೪೫]

ಇದರಿಂದ ಫಿರಂಗಿಗೆ ಬಳಸುತ್ತಿದ್ದುದು ಕರಿಯ ಮದ್ದು ಎಂಬುದು ತಿಳಿಯುತ್ತದೆ. ಫಿರಂಗಿಯನ್ನು ಉಡಾಯಿಸುವಾಗ ಕರಿಯಮದ್ದನು ತುಂಬಿ ಬೆಂಕಿಯನ್ನು ಹಚ್ಚುತ್ತಿದ್ದರೆಂದು ತಿಳಿಯಬಹುದಾಗಿದೆ. ಹೆಚ್ಚಾಗಿ ಕೋಟೆಯ ಬಾಗಿಲನ್ನು ಫಿರಂಗಿಯಿಂದ ಉಡಾಯಿಸುತ್ತಿದ್ದರು ಎಂಬುದು ಈ ಕಥನದಿಂದ ತಿಳಿಯಬಹುದು. ಜನಪದರು ಹೊಸ ಹೊಸ ಆವಿಷ್ಕಾರಗಳನ್ನು ಕೂಡ ತಮ್ಮ ಹಾಡಿನೊಳಗೆ

ಬಳಸಿಕೊಳ್ಳುತ್ತಾ, ತಮ್ಮ ಬದುಕಿಗೆ ಹೊಂದಿಸಿಕೊಳ್ಳುತ್ತಾ ಬದುಕುವುದನ್ನು ಫಿರಂಗಿ-ಮದ್ದು ಮುಂತಾದ ಪದಗಳ ಬಳಕೆಯಲ್ಲಿ ಕಾಣಬಹುದು.

೨.೨.೧೦. ಕೋಟೆಗಳ ನಾಶ

ಒಂದು ಕಾಲದಲ್ಲಿ ನಿರ್ಮಾಣಗೊಂಡ ಕೋಟೆಯು ಅದು ಕಾಲನಂತರ ನಾಶವಾಗಲೇಬೇಕು. ಹಾಗೆಯೇ ಕೋಟೆಯು ಒಬ್ಬ ರಾಜ ಅಥವಾ ಪಾಳೇಗಾರರಿಂದ ನಿರ್ಮಾಣಗೊಂಡು ಆ ಕೋಟೆಯು ಹಲವಾರು ರಾಜ ಅಥವಾ ಪಾಳೇಗಾರರಿಗೆ ವಶವಾಗಿರುವುದು ಕಂಡುಬರುತ್ತದೆ. ಕೋಟೆಯು ವಶವಾಗುವಾಗ ಶತ್ರುಗಳ ಕೈಗೆ ಸಿಕ್ಕಿನಾಶಗೊಂಡಿರುತ್ತದೆ. ಅದು ಮತ್ತೆ ಪುನರ್ ನಿರ್ಮಾಣವು ಆಗುತ್ತದೆ. ಇದರಿಂದ ಕೋಟೆಗಳು ನಿರ್ಮಾಣಗೊಂಡ ಕಾಲದಿಂದಲೂ ಹಲವು ರಾಜ ಅಥವಾ ಪಾಳೇಗಾರರ ಕೈಗೆ ಸಿಕ್ಕಿ ನಾಶ ಹೊಂದುತ್ತಿರುತ್ತವೆ. ಕೋಟೆಗಳು ನಾಶ ಹೊಂದುವುದನ್ನು ಜನಪದ ಸಾಹಿತ್ಯ ಕಥನಗಳು ಹೇಗೆ ಅಭಿವ್ಯಕ್ತಿಸುತ್ತವೆಂಬುದನ್ನು ಇಲ್ಲಿ ಕಾಣಬಹುದು.

ಆರು ಸುತ್ತಿನ ಅರಮನೆ ಹಾಗೆ ಹಾಳಾಗೊಯ್ತು
ಏಳು ಸುತ್ತಿನ ಕಲ್ಲಿನ ಕೋಟೆ ಜರುಕು ಬಿದ್ದೇ ಹೊಯ್ತು[೪೭]

ಮೇಲಿನ ಪದ್ಯವನ್ನು ಪರಿಶೀಲಿಸಿದಾಗ ಉಲ್ಲೇಖಿದಂತೆ ಆರು ಸುತ್ತಿನ ಅರಮನೆ, ಏಳು ಸುತ್ತಿನ ಕೋಟೆಯು ನಿರ್ಮಾಣಗೊಂಡು, ನಿರ್ಮಿಸಿದವನ ಕಣ್ಣೆದುರಿಗೆ ಆ ಅರಮನೆ, ಆ ಕೋಟೆ ಹಾಳಾಗಿ ಹೋದದ್ದನ್ನು ಜನಪದ ಕವಿ ಅಭಿವ್ಯಕ್ತಿಸುತ್ತಾನೆ. ಅದೇ ರೀತಿ ಕೋಟೆಯ ನಾಶದ ಇನ್ನೊಂದು ಕಥನ ಹೀಗಿದೆ.

ಹುಟ್ಟಿತು ಹುಟ್ಟಿತು ಕೋಟೆ ಜಗ್ಗನ್ನೇ ಜರುಗಿತು ಕೋಟೆ
ಹುಟ್ಟಿತು ಕೋಟೆ ರಣಕೋಟೆ | ತಿಮ್ಮಾಜಮ್ಮನ
ಒಪ್ಪದ ಮಗನ ಬಸುರಾಲಿ ||

ಮೂಡಿತು ಮೂಡಿತು ಕೋಟೆ ಜಾಗನೆ ಜರುಗಿತು ಕೋಟೆ
ಮೂಡಿತು ಕೋಟೆ ರಣಕೋಟೆ | ತಿಮ್ಮಜಮ್ಮನ
ಮೋಹದ ಮಗನ ಬಸುರಾಲಿ ||[೪೮]

ಕೋಟೆಗಳು ನಿರ್ನಾಮವಾಗುವುದನ್ನು ಕೂಡ ಮೌಖಿಕ ಸಾಹಿತ್ಯ ತನ್ಮಯತೆಯಿಂದ ವಿವರಿಸುತ್ತದೆ. ತಮ್ಮ ಬದುಕಿನ ಭಾಗವಾಗಿದ್ದ ಕೋಟೆ ತಮ್ಮೆದುರಿಗೆ ಕಳಚಿ ಬೀಳುವುದನ್ನು ಅವರು ಅಚ್ಚರಿಯಂತೆ ನೋಡಿದ್ದಾರೆ. 'ಹುಟ್ಟಿತು ಹುಟ್ಟಿತು ಕೋಟೆ ಜಗನ್ನೇ ಜರುಗಿತು ಕೋಟೆ' ಕೋಟೆ ನಿರ್ಮಾಣವಾದಷ್ಟೇ ತ್ವರಿತಗತಿಯಿಂದ ಅದು ನಾಶ ಹೊಂದಿದ್ದನ್ನೂ ಈ ಸಾಲು ವಿವರಿಸುತ್ತದೆ. ಅಷ್ಟಲ್ಲದೆ ಈ ಸಾಲು

ಮಧ್ಯಕಾಲೀನ ಕರ್ನಾಟಕದ ಸ್ಥಿತಿಗತಿಯನ್ನು ವಿವರಿಸುತ್ತದೆ. ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳಿಂದಾಗಿ ಕೋಟೆಗಳ ನಿರ್ಮಾಣ, ನಾಶ ಎರಡೂ ತ್ವರಿತಗತಿಯಲ್ಲಿಯೇ ಜರಗುತ್ತಿದ್ದುದನ್ನು ಇವು ಸೂಚಿಸುತ್ತಿವೆ.

ಹುಟ್ಟಿದ ಅಥವಾ ಮೂಡಿದ ಕೋಟೆಯು ಹಾಗೆಯೇ ನಾಶಹೊಂದಿದ್ದನ್ನು ಜನಪದ ಕಥನವು ಉಲ್ಲೇಖಿಸುತ್ತದೆ. ಇದರಿಂದ ಕೋಟೆಗಳು ನಿರ್ಮಾಣಗೊಂಡ ಕಾಲಾನಂತರದಲ್ಲಿ ನಾಶಹೊಂದಿವೆ ಎಂಬುದನ್ನು ಸಾಂಕೇತಿಕವಾದ ವಿಚಾರಗಳನ್ನು ಬಳಸಿ ನಾಶದ ಸಂಗತಿಗಳನ್ನು ಅಭಿವ್ಯಕ್ತಿಸುತ್ತದೆ.

ಇನ್ನು ಕೆಟ್ಟೀತು ನನ್ನ ಬಗತಾನss
ಎಂಟು ಸುತ್ತಿನ ಕೋಟೆಯು
ಎಂಟು ದಿನಕ್ಕೆ ಲಯವಾಯ್ತು ||[೪೮]

ಹತ್ತು ಸುತ್ತಿನ ಕೋಟೆ ಮತ್ತೆ ಪಾರಿಬೇಲಿ
ದಕ್ಕದೆಂದಿದ್ದೆ ನೋಡು ದುರುಗಾವ || ಕೋಲು ||[೪೯]

ಈ ಕಥನಗಳು ಕೋಟೆಯ ನಾಶದ ಜೊತೆಗೆ, ಕೋಟೆಗಳು ಎಷ್ಟೆಷ್ಟು ಸುತ್ತನ್ನು ಒಳಗೊಂಡಿದ್ದವು ಎಂಬುದನ್ನು ಉಲ್ಲೇಖಿಸುತ್ತವೆ. ಕೋಟೆಗಳು ಸಾಮಾನ್ಯವಾಗಿ ಏಳುಸುತ್ತನ್ನು ಮಾತ್ರ ಒಳಗೊಂಡಿದ್ದನ್ನು ಲಿಖಿತ ದಾಖಲೆಗಳಿಂದ ಕಾಣುತ್ತಿದ್ದೆವು. ಆದರೆ ಜನಪದ ಸಾಹಿತ್ಯ ಹತ್ತು ಸುತ್ತಿನ ಕೋಟೆಗಳು ಇವೆ ಎಂಬುದನ್ನು ಉಲ್ಲೇಖಿಸುತ್ತದೆ. ಈ ಕಥನಗಳಿಂದ ಅರಿವಾಗುವುದು ಒಂದು ಸುತ್ತಿನ ಕೋಟೆಯಿಂದ ಹತ್ತು ಸುತ್ತಿನ ಕೋಟೆಗಳವರೆಗೆ ನಿರ್ಮಾಣಗೊಂಡು ನಾಶಗೊಂಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕೋಟೆಗಳ ಉಗಮವು ಪ್ರಾಚೀನ ಪೂರ್ವ ಕಾಲದಿಂದಲೂ ರಕ್ಷಣೆಯ ದೃಷ್ಟಿಯಿಂದ ರಾಜ ಮಹಾರಾಜರು ನಿರ್ಮಿಸಿಕೊಂಡು ಆಳ್ವಿಕೆ ಮಾಡಿರುವುದನ್ನು ಲಿಖಿತ ದಾಖಲೆಗಳಿಂದ ಕಾಣಬಹುದು. ಆದರೆ ಜನಪದರು ಮಧ್ಯಕಾಲೀನ ಚರಿತ್ರೆಯ ಕಾಲಘಟ್ಟದಿಂದ ಕೋಟೆಗಳ ಉಲ್ಲೇಖವನ್ನು ಮಾಡಿದ್ದಾರೆ. ಅಂದರೆ ಸಾಮ್ರಾಜ್ಯಗಳ ಕಾಲದಲ್ಲಿ ಕೋಟೆ ಕೊತ್ತಲಗಳಿಂದ ಜನಸಮುದಾಯಗಳು ದೂರವಿದ್ದವು ಎಂಬುದನ್ನು ಈ ಕಥನಗಳಿಂದಲೇ ತಿಳಿಯಬಹುದಾಗಿದೆ. ಪಾಳೇಗಾರರು ವಿಕೇಂದ್ರೀಕರಣ ವ್ಯವಸ್ಥೆಯಿಂದ ಜನರ ಹಿತ ಕಾಪಾಡಿಕೊಂಡು ಬಂದಿದ್ದಕ್ಕೆ ಜನರಲ್ಲಿ ಪಾಳೇಗಾರರ ಆಳ್ವಿಕೆ, ಅವರ ಕಾಲದಲ್ಲಿ ನಿರ್ಮಿಸಿದ ಸ್ಮಾರಕಗಳು ಇವರ ಸಾಹಿತ್ಯಕ್ಕೆ ವಸ್ತುವಾದವು. ಈ ಹಿನ್ನೆಲೆಯಲ್ಲಿ ಕೋಟೆಗಳ ಉಲ್ಲೇಖವು ಮಧ್ಯಕಾಲೀನ ಚರಿತ್ರೆಯ ಸಂದರ್ಭದಿಂದಲೇ ಆರಂಭಗೊಂಡವು ಎಂಬುದನ್ನು ಊಹಿಸಬಹುದು.

ಜನಪದ ಸಾಹಿತ್ಯದಲ್ಲಿ ಕೋಟೆಗಳ ಉಲ್ಲೇಖವು ಮಧ್ಯಕಾಲೀನ ಚರಿತ್ರೆಯಲ್ಲಿ ಬಂದ ಪಾಳೇಗಾರರು ನಿರ್ಮಿಸಿದ ಕೋಟೆಗಳನ್ನು ಕುರಿತವುಗಳಾಗಿವೆ. ಈ ಕೋಟೆಗಳ ಉಲ್ಲೇಖವು ಹೆಚ್ಚು ಕಥನಗಳನ್ನು ಬಳಸಿಕೊಂಡು ಚರ್ಚಿಸಲಾಗಿದೆ. ಇಲ್ಲಿ ಚರ್ಚಿಸಿರುವ ಕಥನಗಳಲ್ಲಿ ಪುರಾಣ ಕಾಲದಲ್ಲಿ ಕೋಟೆಗಳು

ಹುಟ್ಟಿದ್ದವು ಎಂಬುದನ್ನು ಜನಪದರು ಉಲ್ಲೇಖಿಸುತ್ತಾರೆ. ಆದರೆ ಒಂದು ಕಥನವನ್ನುಳಿದಂತೆ ಇನ್ನೆಲ್ಲ ಕಥನಗಳು ಮಧ್ಯಕಾಲೀನ ಚರಿತ್ರೆಯಲ್ಲಿ ಬಂದ ಪಾಳೇಗಾರರು ನಿರ್ಮಿಸಿದ ಕೋಟೆಗಳಾಗಿವೆ. ಇದರಿಂದ ಕೋಟೆಗಳ ಸ್ಥಾಪನೆ ನಿರ್ಮಾಣ, ಆಳ್ವಿಕೆ, ವರ್ಣನೆ(ಅಭೇದ್ಯತೆ), ಕೋಟೆಯ ಫಿರಂಗಿ ನಿರ್ಮಾಣ, ಕೋಟೆಯ ನಾಶದ ಬಗ್ಗೆ ಕುರಿತು ತಾತ್ವಿಕವಾಗಿ ಚರ್ಚಿಸಲಾಗಿದೆ.

ಒಟ್ಟಾರೆ ಶಿಷ್ಟ ಮತ್ತು ಮೌಖಿಕ ಪಠ್ಯಗಳೆರಡನ್ನು ಗಮನಿಸಿದಾಗ ಕೆಲವು ವಿಶಿಷ್ಟ ಅಂಶಗಳು ಕಂಡುಬರುತ್ತವೆ. ಶಿಷ್ಟ ಪಠ್ಯಗಳು ಕೋಟೆಗೆ ಸಂಬಂಧಿಸಿದಂತೆ ಅದೊಂದು ರಾಜ್ಯದ ರಕ್ಷಣಾತ್ಮಕ ಭಾಗವಾಗಿ ಗಮನಿಸಿದರೆ ಮೌಖಿಕ ಪಠ್ಯಗಳು ಜನಜೀವನದ ಭಾಗವಾಗಿ ಗಮನಿಸುತ್ತವೆ. ಶಿಷ್ಟ ಪಠ್ಯಗಳ ರಚನೆಯು ಕೋಟೆಯ ನಿರ್ಮಾಣ, ರಕ್ಷಣೆಗಾಗಿ ಪ್ರಾಣ ತೆತ್ತವರನ್ನು ದಾಖಲಿಸುವುದೇ ಇಲ್ಲ. ಆದರೆ ಇದರ ಎಲ್ಲಾ ಮಹತ್ವವನ್ನು ರಾಜನಿಗೆ ಆರೋಪಿಸಿ ಚಿತ್ರಿಸುತ್ತವೆ. ಮೌಖಿಕ ಪಠ್ಯಗಳು ಕೋಟೆಗಳ ನಿರ್ಮಾಣದಲ್ಲಿ ತೊಡಗಿಕೊಂಡ ವಿವಿಧ ದುಡಿಯುವ ವರ್ಗಗಳನ್ನು ಅದರ ರಕ್ಷಣೆಗಾಗಿ ಹೋರಾಡಿದವರನ್ನು, ಪ್ರಾಣತ್ಯಾಗ ಮಾಡಿದವರನ್ನು ಕುರಿತು ವಿವರಿಸುತ್ತವೆ. ಅಲ್ಲದೆ ಹಾಡು, ಕಥೆ ಕಟ್ಟಿ, ನಂಬಿಕೆ ಆಚರಣೆಗಳನ್ನು ನೆರವೇರಿಸುವುದರ ಮೂಲಕ ಹಾಗೆ ತ್ಯಾಗ ಬಲಿದಾನ ಮಾಡಿದವರನ್ನು ಸ್ಮೃತಿ ಪಟಲ ದಲ್ಲಿನ್ನು ಉಳಿಸಿಕೊಂಡಿವೆ. ಈ ಹೊತ್ತಿನ ಅದೆಷ್ಟೋ ಆಚರಣೆಗಳು ಕಲ್ಲುಗಳಿಗೆ, ಮೂರ್ತಿಗಳಿಗೆ ನಡೆಯುತ್ತಿವೆ. ಇವೆಲ್ಲವೂ ಹಿಂದೆ ಪ್ರಾಣ ನೀಡಿದವರ ನೆನಪಿಗಾಗಿ ಉಳಿದುಕೊಂಡು ಬಂದಿರುವುದನ್ನು ನಾವು ಗಮನಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಡಾ.ಡಿ.ಎನ್.ಯೋಗೀಶ್ವರಪ್ಪ, ೨೦೦೦, ತುಮಕೂರು ಜಿಲ್ಲೆಯ ಕೋಟೆಗಳು(ಜಯಮಂಗಲಿ), ಪು.೩೮

೨. ಗುರುನಾಥ ಜೋಶಿ, ೧೯೯೦, ಕನ್ನಡ ಕನ್ನಡ ಶಬ್ದಕೋಶ, ಪು.೧೯೫

೩. ನೀ.ಕೃ.ರಾಮಶೇಷನ್, ಕರ್ನಾಟಕದ ಕೋಟೆ ಕೊತ್ತಲಗಳು, ಪು.೭೮

೪. ಅದೇ, ಪು.೮

೫. ಅದೇ, ಪು.೮

೬. ಅದೇ, ಪು.೮

೭. ಕನ್ನಡ ವಿಶ್ವಕೋಶ, ಸಂಪುಟ ೫, ಪು.೪೦೮

೮. ಎಂ.ಕೊಟ್ರೇಶ್, ೨೦೦೨, ಕೋಟೆ ಕೊತ್ತಲಗಳ ಅಧ್ಯಯನ(ಬಳ್ಳಾರಿ ಜಿಲ್ಲೆ), ಪು.೧೭

೯. ಕನ್ನಡ ವಿಶ್ವಕೋಶ, ಸಂಪುಟ ೫, ಪು.೪೦೮

೧೦. ಡಾ.ಎಸ್.ಕೆ.ಜೋಶಿ, ೨೦೦೦, ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಸೂರ್ಯಕೀರ್ತಿ, ಪು.೧೪೭

೧೧. **ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ,** ೧೯೮೫, ನ್ಯೂಡೆಲ್ಲಿ, ಪು.೨೬

೧೨. ಡಾ.ಎಸ್.ಕೆ.ಜೋಶಿ, ಪೂರ್ವೋಕ್ತ, ಪು.೧೪೮

೧೩. Rangarajan L.N.(ed), 1987, **Kautilyan Artha Shastra**, P.4

೧೪. ರಾಧಕೃಷ್ಣಮೂರ್ತಿ, *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ,* ಇತಿಹಾಸ ದರ್ಶನ ೬, ಪು.೧೫೭

೧೫. ಅದೇ, ಪು.೧೫೮

೧೬. ಬೃಹಸ್ಪತಿಯ ರಾಜನೀತಿ ಪ್ರಕಾಶ, ೧೯೧೬, ವಾರಣಾಸಿ, ಪು.೨೦೨

೧೭. ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ, ಪು.೨೮೬

೧೮. ಡಾ.ಎಸ್.ಕೆ.ಜೋಶಿ, ಪೂರ್ವೋಕ್ತ, ಪು.೧೪೮

೧೯. ದೇವಿರಪ್ಪ ಎಚ್.(ಸಂ), ೧೯೯೪, ಜನ್ನನ ಅನಂಥನಾಥ ಪುರಾಣ, ಆಶ್ವಾಸ ೧, ಪದ್ಯ ೧೦೧

೨೦. ಬೆಟಗೇರಿ ಕೃಷ್ಣಶರ್ಮ, ೧೯೮೩, ಕರ್ನಾಟಕ ಜನಜೀವನ, ಪು.೫೩

೨೧. ದೇವಿರಪ್ಪ ಎಚ್.(ಸಂ), ೧೯೯೪, ರಾಮನಾಥ ಚರಿತೆ ೨, ಪು.೩೭ ಮತ್ತು ೫೨

೨೨. ಮಲ್ಲೇಪುರಂ ಜಿ.ವೆಂಕಟೇಶ್(ಸಂ), ೧೯೯೮, ಶಿವತತ್ವ ರತ್ನಾಕರ, ಪು.೨೬೮, ೨೬೯

೨೩. ಕೋತಿನ ಎಸ್.ಎಸ್.(ಅನು), ೧೯೮೪, ಮೋಹನ ತರಂಗಿಣಿ, ಪು.೨೯೫

೨೪. ಬೆಟಗೇರಿ ಕೃಷ್ಣಶರ್ಮ, ಪೂರ್ವೋಕ್ತ, ಪು.೧೨, ೧೩

೨೫. ಅದೇ, ಪು.೧೩

೨೬. Rangarajan L.N., ಪೂರ್ವೋಕ್ತ, ಪು.೧೮೪-೧೮೫

೨೭. ಡಾ.ಪಿ.ಕೆ.ರಾಜಶೇಖರ್, ಪಿರಿಯಪಟ್ಟಣದ ಕಾಳಗ, ಪು.೭೦

೨೮. ಪ್ರೊಡಿ.ಲಿಂಗಯ್ಯ, ಕರ್ನಾಟಕ ಜನಪದ ಕಾವ್ಯಗಳು, ಪು.೧೪

೨೯. ವೀರಣ್ಣ ರಾಜೂರ(ಸಂ), ಹೊಸಕುಮಾರ ರಾಮನ ಸಾಂಗತ್ಯ, ಪು.೧೨೦, ೧೨೧, ೧೨೨

೩೦. ಡಾ.ಪಿ.ಕೆ.ರಾಜಶೇಖರ್, ಪೂರ್ವೋಕ್ತ, ಪು.೧೧೯

೩೧. ಕರಾಕೃ, ಪಾಳೇಗಾರರ ಪದಗಳು, ಪು.೬೫

೩೨. ಕರಾಕೃ, ಚಿತ್ರಕಲ್ಲು ಮದಕರಿ, ಪು.೬

೩೩. ಅದೇ, ಪು.೬

೩೪. ಕರಾಕೃ, ನಾಡಪ್ರಭು ಕೆಂಪೇಗೌಡ, ಪು.೪೦,೪೧,೪೨

೩೫. ಕರಾಕೃ, ಚಿತ್ರಕಲ್ಲು ಮದಕರಿ, ಪು.೨ ಮತ್ತು ೩

೩೬. ಅದೇ, ಪು.೩

೩೭. ಡಾ.ಬಿ.ಆರ್.ಮುದ್ದೆಬಿಹಾಳ್, ಬೇಡನಾಯಕರ ಪಾಡು, ಪು.೫೯

೩೮. ಅದೇ, ಪು.೩೬

೩೯. ವೀರಣ್ಣ ರಾಜೂರ, ಪೂರ್ವೋಕ್ತ, ಪು.೧೨೨

೪೦. ಡಾ.ಮೀರಸಾಬಿಹಳ್ಳಿ ಶಿವಣ್ಣ, ಪೂರ್ವೋಕ್ತ, ಪು.೪೮

೪೧. ಡಾ.ಚಿತ್ತಯ್ಯ ಪೂಜಾರ, ಪೂರ್ವೋಕ್ತ, ೨೦೦೩, ಪು.೫೩, ೫೪

೪೨. ಕರಾಕೃ, ಚಿತ್ರಕಲ್ಲು ಮದಕೇರಿ, ಪು.೬

೪೩. ಡಾ.ಚಿತ್ತಯ್ಯ ಪೂಜಾರ, ಪೂರ್ವೋಕ್ತ, ೨೦೦೩, ಪು.೫೬

೪೪. ಡಾ.ಮೀರಸಾಬಿಹಳ್ಳಿ ಶಿವಣ್ಣ, ಪೂರ್ವೋಕ್ತ, ಪು.೪೮

೪೫. ಚಿತ್ತಯ್ಯ ಪೂಜಾರ, ನಿಡುಗಲ್ಲು ಒಂದು ಸಾಂಸ್ಕೃತಿಕ ಅಧ್ಯಯನ (ಪಿಎಚ್.ಡಿ.ಅಪ್ರಕಟಿತ ಮಹಾಪ್ರಬಂಧ), ಪು.೨೯೪

೪೬. ಕರಾಕೃ, ಪಾಳೇಗಾರರ ಪದಗಳು, ಪು.೪೨

೪೭. ಅದೇ, ಪು.೬೫

೪೮. ಪ್ರೊ.ಡಿ.ಲಿಂಗಯ್ಯ ಪೂರ್ವೋಕ್ತ, ಪು.೧೬೦

೪೯. ಕರಾಕೃ, ಚಿತ್ರಕಲ್ಲು ಮದಕರಿ, ಪು.೧೫೨

ಅಧ್ಯಾಯ ೩

ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳು : ಅಧ್ಯಯನಗಳ ತಾತ್ವಿಕತೆ

೩.೧. ಪ್ರವೇಶ

೩.೨. ಅಧ್ಯಯನಗಳ ತಾತ್ವಿಕತೆ

೩.೩. ಇತಿಹಾಸ ಮತ್ತು ಜಾನಪದ

೩.೪. ಪುರಾವಸ್ತು ಮತ್ತು ಜಾನಪದ

ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳು : ಅಧ್ಯಯನಗಳ ತಾತ್ವಿಕತೆ

೩.೧. ಪ್ರವೇಶ

ಜಾನಪದವು ಮನುಷ್ಯ ಸಂಸ್ಕೃತಿಯ ಅಧ್ಯಯನವಾಗಿದ್ದು, ಅದರ ವ್ಯಾಪ್ತಿಯಲ್ಲಿ ಒಳಗೊಳ್ಳದೆ ಇರುವ ವಿಷಯಗಳೇ ಇಲ್ಲ. ಇದು ಜಗತ್ತಿನ ಜನತೆಗೆ ಅಕ್ಷರ ತಿಳಿಯುವ ಪೂರ್ವದಲ್ಲಿ ಮನುಷ್ಯ ಬದುಕಿನ ಸಮಸ್ತ ವ್ಯವಹಾರಗಳು ಮೌಖಿಕ ಸಂಪ್ರದಾಯದ ಮುಖಾಂತರವೇ ಹರಿದು ಬಂದಿತು. ಜಾನಪದವು ನಿಂತ ನೀರಲ್ಲ ಅದು ನಿರಂತರವಾಗಿ ಸಾಗುವ ಒಂದು ಪ್ರಕ್ರಿಯೆ. ಇದು ಒಂದು ಜನಾಂಗಕ್ಕೆ ಒಂದು ದೇಶಕ್ಕೆ ಸೀಮಿತವಾದುದಲ್ಲ. ಅದೊಂದು ವಿಶ್ವವಿರಾಟ್ ಸ್ವರೂಪದ್ದು. ಜನಪದ ಸಂಸ್ಕೃತಿಗೆ ಸಂಬಂಧಿಸಿದ ಜ್ಞಾನವೇ ಜಾನಪದ. ಜನಪದ ಸಂಸ್ಕೃತಿಯ ಸೆಲೆಗಳು ಆದಿಮ ಬದುಕಿನಿಂದ ಹಿಡಿದು ಇಂದಿನ ನಾಗರಿಕ ಬದುಕಿನವರೆಗೂ ವ್ಯಾಪಿಸಿದೆ. ಜನಪದ ಸಂಸ್ಕೃತಿಯೆಂದರೆ ಮನುಷ್ಯ ಬದುಕಿನ ಅಧ್ಯಯನವೇ ಆಗಿದೆ. ಈ ಕಾರಣದಿಂದಾಗಿ ಇದರ ಮಹತ್ವವನ್ನು ಅರಿತ ವಿದ್ವಾಂಸರು ಜನಪದ ಸಂಸ್ಕೃತಿಯನ್ನು ಶಿಷ್ಟ ಸಂಸ್ಕೃತಿಯಿಂದ ಪ್ರತ್ಯೇಕಿಸಿ ಅಧ್ಯಯನ ಮಾಡಲು ತೊಡಗಿದರು. ಇದರಿಂದ ಜನಪದ ಅಧ್ಯಯನದ ದಿಕ್ಕುಗಳು ಬೆಳೆದಂತೆಲ್ಲಾ ಕೇವಲ ಮೌಖಿಕ ವಿಷಯಗಳಷ್ಟೇ ಸೀಮಿತಗೊಳ್ಳದೆ ಪರಂಪರಾನುಗತವಾಗಿ ಬಂದ ಹಲವಾರು ಭೌತಿಕ ವಸ್ತುಗಳಿಗೂ ವ್ಯಾಪಿಸಿತು.

ಭಾರತದಲ್ಲಿ ಜಾನಪದ ಅಧ್ಯಯನ ಪ್ರಾರಂಭವಾದದ್ದು ಪಾಶ್ಚಾತ್ಯ ವಿದ್ವಾಂಸರಿಂದ. ಭಾರತಕ್ಕೆ ಬಂದ ಪಾಶ್ಚಾತ್ಯಕ್ರೈಸ್ತ ಮಿಷನರಿಗಳಲ್ಲಿ ಜರ್ಮನ್ ಮತ್ತು ಬ್ರಿಟಿಷ್ ಅಧಿಕಾರಿಗಳು ಮುಖ್ಯರಾಗುತ್ತಾರೆ. ಕ್ರೈಸ್ತರು ಧರ್ಮಾಭಿಮಾನಿಗಳಾಗಿದ್ದರಿಂದ ತಮ್ಮ ಮತಧರ್ಮವನ್ನು ಭಾರತ ದೇಶದಲ್ಲಿ ಪ್ರಚಾರ ಮಾಡಲು ಮತ್ತು ಆಡಳಿತ ನಡೆಸಲು ಮುಂದಾದರು. ಇದರಿಂದ ಮೊದಲಿಗೆ ಸಿಗುವ ಲಿಖಿತ ದಾಖಲೆಗಳನ್ನು ಸಂಗ್ರಹಿಸಲು ಆರಂಭಿಸಿದರು. ಜೊತೆಗೆ ಇವುಗಳ ಅಧ್ಯಯನದಿಂದ ಭಾರತೀಯ ಸಂಸ್ಕೃತಿಯ ಬಗೆಗೆ ಹೆಚ್ಚಿನ ಆಸ್ಥೆವಹಿಸಿದರು. ಪಾಶ್ಚಿಮಾತ್ಯ ವಿದ್ವತ್ ಪ್ರಪಂಚದಲ್ಲಿ ಭಾಷಾಶಾಸ್ತ್ರ, ಧರ್ಮ, ಪುರಾಣಗಳು ಮತ್ತು ರೂಢಿಗಳ ತೌಲನಿಕ ಅಧ್ಯಯನಗಳ ಮೂಲಕ ಭಾರತೀಯ ಸಂಸ್ಕೃತಿಯ ಎಲ್ಲಾ ಮಗ್ಗಲುಗಳನ್ನು ತಿಳಿಯುವ ನಿಟ್ಟಿನಿಂದ ಪುರಾತನ ಅವಶೇಷಗಳ ಸಾಂಸ್ಕೃತಿಕ ವಿವೇಚನೆಗೆ ಭದ್ರಬುನಾದಿ ಹಾಕಿದರು. ಪಾಶ್ಚಾತ್ಯರು ಧರ್ಮ ಪ್ರಚಾರದ ಹಿನ್ನೆಲೆಯನ್ನು ಇಟ್ಟುಕೊಂಡೇ ಜೊತೆಗೆ ಆಡಳಿತ ನಡೆಸುತ್ತಲೇ ಇಲ್ಲಿನ ಸಮುದಾಯ ಸಂಸ್ಕೃತಿಗಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ ಅವರ ಮೂಲನೆಲೆಯಾಗಿದ್ದ ಜಾನಪದವನ್ನು ಸಂಗ್ರಹ ಮಾಡಲು ಮುಂದೆ ಬರುತ್ತಾರೆ. ಇದರಿಂದ ಪ್ರೇರಿತಗೊಂಡು ಇಂಗ್ಲೀಷ್ ಶಿಕ್ಷಣ

ಕಲಿತ ದೇಶಿವಿದ್ವಾಂಸರು ಜನಪದ ಸಾಹಿತ್ಯದ ಕೆಲವೇ ವಿಶಿಷ್ಟ, ರಂಜಕ ಗುಣಗಳಿಗೆ ಮಾರುಹೋಗುವ ಮೂಲಕ ಜಾನಪದ ಸಂಗ್ರಹಕಾರ್ಯಮಾಡಿದರು. ಅಲ್ಲಿಯವರೆಗೂ ಜಾನಪದವನ್ನು ಭಾರತದ ವಿದ್ವಾಂಸರು ಹಾಗೂ ಪಂಡಿತರು ತುಂಬ ತಾತ್ಸಾರದಿಂದ ಕಾಣಲ್ಪಟ್ಟಿದ್ದರು. ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದಿದ್ದ ಜಾನಪದ ವೈಜ್ಞಾನಿಕ ಅಧ್ಯಯನಗಳ ಮೂಲಕ ಮತ್ತು ಪಾಶ್ಚಾತ್ಯ ಇಂಗ್ಲೀಷ್ ಶಿಕ್ಷಣ ಅಭ್ಯಾಸ ಮಾಡುವ ಮೂಲಕ ಭಾರತದಲ್ಲಿ ಜಾನಪದ ಅಧ್ಯಯನದ ಕ್ಷೇತ್ರದಲ್ಲಿ ಹಲವಾರು ಹೊಸ ಹೊಸ ಚಿಂತನೆಗಳು ಉದಯಿಸಿದವು. ಪಾಶ್ಚಾತ್ಯರಲ್ಲಿ ಬಹುಶಿಸ್ತೀಯ ಅಧ್ಯಯನಗಳೂ ನಡೆಯುತ್ತಿದ್ದವು. ಅದರಲ್ಲಿ ಜಾನಪದವೇ ಮೂಲ ನೆಲೆಯಾಗಿತ್ತು. ಇದರಿಂದ ಭಾರತದಲ್ಲಿಯೂ ವಿವಿಧ ವಿಷಯಗಳ ಶಾಸ್ತ್ರಜ್ಞರು ಜಾನಪದದತ್ತ ಮೊರೆಹೋಗತೊಡಗಿದರು. ಜಾನಪದ ಅಧ್ಯಯನವು ದೇಶಿ ವಿದ್ವಾಂಸರುಗಳಿಗೆ ಹೊಸ ನೆಲೆಗಳ ಹುಡುಕಾಟ ಹಾಗು ವಸ್ತುನಿಷ್ಠವಾಗಿ ವಿಷಯಗಳ ವಿಶ್ಲೇಷಣೆಗೆ ದಾರಿ ಮಾಡಿಕೊಟ್ಟಿತು.

ಭಾರತ ಜನಪದದ ತವರು. ಈ ದೇಶದಲ್ಲಿರುವಷ್ಟು ವೈವಿಧ್ಯಮಯವಾದ ಜಾನಪದ ಸಂಪತ್ತು ಬೇರೆ ಇನ್ನಾವ ದೇಶದಲ್ಲಿಯೂ ಇಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣ; ಭಾರತವು ಭೌಗೋಳಿಕ ಪರಿಸರಗಳ, ಹಲವು ಮತಗಳ, ಹಾಗೂ ಧರ್ಮಗಳ ಅನೇಕ ಭಾಷೆ-ಉಪಭಾಷೆಗಳ ಸಂಗಮಸ್ಥಾನವೆನಿಸಿದೆ. ಅದರಿಂದ ಕರ್ನಾಟಕವೂ ಹೊರತಾಗಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗಾಗಿ ಜಾನಪದ ಅಧ್ಯಯನವು ವಸಾಹತು ನೆಲೆಯಿಂದ ಭಾರತದ ಎಲ್ಲಾ ಕಡೆಯು ಪಸರಿಸಿದಂತೆ ಕರ್ನಾಟಕದಲ್ಲೂ ಆ ಗಾಳಿ ಬೀಸತೊಡಗಿತು.

ಕರ್ನಾಟಕದಲ್ಲಿ ಜಾನಪದ ಸಂಕಲನ ಕಾರ್ಯವನ್ನು ಮೊದಲಿಗೆ ಪ್ರಾರಂಭಿಸಿದವರು ಕ್ರೈಸ್ತ ಮಿಷನರಿಗಳು ಹಾಗೂ ಬ್ರಿಟಿಷ್ ಅಧಿಕಾರಿಗಳು. ಇವರು ಧರ್ಮ ಪ್ರಚಾರ ಮತ್ತು ಆಡಳಿತದ ನಡುವೆಯೇ ಕನ್ನಡವನ್ನು ಇಲ್ಲಿನ ಪಂಡಿತರಿಂದ ಕಲಿತು ಆಡಳಿತದ ದೃಷ್ಟಿಯಿಂದಲೂ ಇಲ್ಲಿನ ಜನರಿಂದ ಊರಿಗೆ ಅಲೆಯುವಾಗ ಸಮುದಾಯಗಳು ಹೇಳುವ ವಿಚಾರವನ್ನು ಗಮನಕೊಟ್ಟು ಕೇಳಿ ಅವುಗಳನ್ನು ಸಂಗ್ರಹಿಸಿದರು. ಅವರುಗಳಲ್ಲಿ ಜಾನ್ ಲೇಡನ್, ಅಬೆದುಬಾಯ್, ಚಾರ್ಲ್‌ಗೋವರ್, ಕಿಟೆಲ್, ಫ್ಲೀಟ್ ಇನ್ನು ಮುಂತಾದವರು ಮುಖ್ಯರಾಗುತ್ತಾರೆ. ಇವರುಗಳಿಂದ ಜನಪದ ಗೀತೆ, ದಾಸರ ಪದಗಳು, ಭಜನೆ ಹಾಡುಗಳು, ಲಾವಣಿಗಳು, ಸಂಪ್ರದಾಯ, ಗಾದೆ ಹಾಗೂ ಇನ್ನಿತರ ಜಾನಪದಕ್ಕೆ ಸಂಬಂಧಿಸಿದ ಹಲವಾರು ಪ್ರಕಾರಗಳನ್ನು ಸಂಗ್ರಹಿಸಿ ಮುಂದಿನ ಜಾನಪದ ಸಂಗ್ರಹಕರಿಗೆ ನಾಂದಿ ಹಾಡಿದರು.

ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿ ಜನಪದ ಸಾಹಿತ್ಯ ಸಂಗ್ರಹಕ್ಕೆ ಪಾಶ್ಚಾತ್ಯ ವಿದ್ವಾಂಸರು ಮಹತ್ವದ ಪ್ರೇರಣೆ ಒದಗಿಸಿದ್ದರೂ, ಕನ್ನಡದ ವಿದ್ವಾಂಸರುಗಳಾರು ಈ ಕಡೆಗೆ ಹೆಚ್ಚು ಗಮನ ನೀಡಿದಂತೆ ಕಂಡುಬರುವುದಿಲ್ಲ. ಇಪ್ಪತ್ತನೆಯ ಶತಮಾನದ ಆರಂಭದ ಎರಡು ದಶಕಗಳಲ್ಲಂತು ಈ ಕ್ಷೇತ್ರಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡವು. ಇಪ್ಪತ್ತನೆಯ ಶತಮಾನ ಪೂರ್ವಾರ್ಧದಲ್ಲಿ ಕನ್ನಡ

ಜಾನಪದದ ಬಗ್ಗೆ ಸ್ಥಳೀಯ ವಿದ್ವಾಂಸರು ಹೊಸದಾದ ಅಭಿರುಚಿಯನ್ನು ಬೆಳೆಸಿಕೊಂಡಿದ್ದರಿಂದ ಜನಪದ ಜೀವನದ ಅನೇಕ ಪ್ರಕಾರಗಳಿಗೆ ಸಂಬಂಧಿಸಿದ ಸಂಗತಿಗಳನ್ನು ದಾಖಲಿಸಿದರು. ಈ ಮೂಲಕ ಕನ್ನಡ ಜಾನಪದ ಅಧ್ಯಯನದ ಯುಗ ಪ್ರಾರಂಭವಾಯಿತು. ಅದಕ್ಕೆ ಉದಾಹರಣೆ ನಡಿಕೇರಿಯ ಚಿನ್ನಪ್ಪರ ಪಟ್ಟೋಲೆಪಳಮೆ(೧೯೨೪) ಇದೇ ಕಾಲಘಟ್ಟದಲ್ಲಿ ಮಾಸ್ತಿ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಹಲಸಂಗಿ ಗೆಳೆಯರು, ರಂಗಸ್ವಾಮಿ, ದೇವುಡು, ಗೊರೂರು ಇನ್ನು ಮುಂತಾದ ವಿದ್ವಾಂಸರು ಕನ್ನಡ ಜಾನಪದ ಸಂಗ್ರಹ, ಸಂವರ್ಧನೆ ಅಧ್ಯಯನದ ಮಹತ್ವವನ್ನು ಕುರಿತು ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಮತ್ತು ಸಮ್ಮೇಳಗಳಲ್ಲಿ ಮಂಡಿಸಿದ ಪ್ರಬಂಧ, ಚರ್ಚೆಗಳಿಂದ ಕನ್ನಡ ಜಾನಪದ ಅಧ್ಯಯಕ್ಕೆ ಮತ್ತಷ್ಟು ಚಾಲನೆ ದೊರೆಯಿತು.

ಸ್ವಾತಂತ್ರ್ಯನಂತರದ ಕಾಲಘಟ್ಟಕ್ಕೆ ಜಾನಪದ ಅಧ್ಯಯನವು ವಿದ್ವಾಂಸರಲ್ಲಿ ಮಹತ್ವವಾಗಿ ಕಂಡಿತು. ಜನಪದ ಸಾಹಿತ್ಯವನ್ನು ಸಂಗ್ರಹಿಸುವುದರ ಜೊತೆಗೆ ಗಂಭೀರವಾದ ವಿಶ್ಲೇಷಣೆಗಳು ನಡೆದವು. ಇದರಿಂದ ಆ ಮೂಲಕ ಹೊಸ ಹೊಸ ಚಿಂತನೆಗಳು ರೂಪಗೊಂಡು, ವಿಶಿಷ್ಟವಾದ ಜ್ಞಾನಪರಂಪರೆಗೆ ದಾರಿ ಮಾಡಿಕೊಟ್ಟಿತು. ಜಾನಪದವನ್ನು ಒಂದು ಶಾಸ್ತ್ರವೆಂದು ಪರಿಗಣಿಸಿ, ಇದೇ ವಿವಿಧ ವಿಷಯಗಳ ಶಾಸ್ತ್ರಗಳಿಗೆ ಮೂಲ ನೆಲೆಯೆಂದು ಸಹ ಒತ್ತಿ ಹೇಳಿದರು. ಹಾ.ಮಾ.ನಾಯಕ ಮತ್ತು ದೇ.ಜೆ.ಗೌಡರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಭಾರಿಗೆ ಎಂ.ಎ. ಜಾನಪದವನ್ನು ವಿದ್ಯಾರ್ಥಿಗಳಿಗಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದರು. ಹಾಗಾಗಿ ಜಾನಪದ ಅಧ್ಯಯನಕ್ಕೆ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ತೋರಿಸಿದರು. ನಂತರ ವಿವಿಧ ಅನೇಕ ವಿಶ್ವವಿದ್ಯಾನಿಲಯಗಳು ಸಹ ಇದನ್ನೆ ಅನುಸರಿಸಿದವು. ಕನ್ನಡದ ಜಾನಪದದ ಹಲವಾರು ವಿದ್ವಾಂಸರು ಸಂಗ್ರಹ, ವಿಶ್ಲೇಷಣೆ, ಸೈದ್ಧಾಂತಿಕ ಅಧ್ಯಯನ, ಸಂಶೋಧನೆ, ಅನ್ವಯಿಕ ನೆಲೆ, ಹೊಸ ಹೊಸ ಶೋಧಗಳನ್ನು ಮಾಡುವ ಮೂಲಕ ಈ ಕ್ಷೇತ್ರವನ್ನು ವಿಸ್ತರಿಸಿದ್ದಾರೆ.

೩.೨. ಅಧ್ಯಯನಗಳ ತಾತ್ವಿಕತೆ

ಒಂದು ನಾಡಿನ ಜೀವಂತ ಸಂಸ್ಕೃತಿಯನ್ನು ಅರಿಯುವುದಕ್ಕೆ ಅಲ್ಲಿನ ಮೌಖಿಕ ಚರಿತ್ರೆಯ ಆಕರ ಅಗತ್ಯವೆನಿಸುತ್ತದೆ. ಈ ಮೌಖಿಕ ಸಾಹಿತ್ಯವು ಕಥೆ, ಕಾವ್ಯ, ಐತಿಹ್ಯ, ಪುರಾಣ, ಆಚರಣೆ, ನಂಬಿಕೆಗಳ ಮೂಲಕ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಜನರ ಬಾಯಿಂದ ಬಾಯಿಗೆ ಬಂದ ಮೌಖಿಕ ರೂಪಕಗಳಾಗಿವೆ. ಇವು ಆ ಸಂದರ್ಭದ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ಚಾರಿತ್ರಿಕ ಘಟನೆಗಳನ್ನು ತಮ್ಮದೇ ಆದ ಹಿನ್ನೆಲೆಯಲ್ಲಿ ಪುನರ್ ನಿರ್ಮಿಸುವ ಕೆಲಸದಲ್ಲೂ ತೊಡಗಿರುತ್ತವೆ. ಜಾನಪದ ಸಾಹಿತ್ಯವನ್ನು ಮುಖ್ಯವಾಗಿ ಗದ್ಯ ಮತ್ತು ಪದ್ಯ ಎಂದು ವಿಂಗಡಿಸಲಾಗುತ್ತದೆ. ತಮ್ಮ ಪರಿಸರದಲ್ಲಿ ಬದುಕಿನ ಸಂದರ್ಭದಲ್ಲಿ ಚಾರಿತ್ರಿಕ ಘಟನೆಗಳನ್ನು ನೋಡಿ, ಕೇಳಿ, ಭಾಗವಹಿಸಿದ ಕ್ಷಣಗಳ ಹಲವು ಸಂಗತಿಗಳನ್ನು ಮೌಖಿಕ ಸಾಹಿತ್ಯದಲ್ಲಿ ನಿರೂಪಿಸುತ್ತಾರೆ. ಇದನ್ನು ಜನಪದ ಪ್ರಕಾರಗಳಾದ

ಪುರಾಣ, ಐತಿಹ್ಯ, ಕಥೆ, ಕಥನಗೀತೆ, ಸೋಬಾನೆ, ಕೋಲಾಟ, ಆಚರಣೆ, ಗಾದೆ, ನಾಣ್ನುಡಿ ಮುಂತಾದವುಗಳಲ್ಲಿ ಅವಲೋಕಿಸಬಹುದಾಗಿದೆ. ಜಾನಪದ ಸಾಹಿತ್ಯವೆಂಬುದು ಒಂದು ಪ್ರಾಯೋಗಿಕ ರೂಪವನ್ನು ಪಡೆದುಕೊಂಡು ಮನಸ್ಸಿಗೆ ಉಲ್ಲಾಸ, ರಂಜನೆ ನೀಡುವುದರ ಮೂಲಕ ವಾಸ್ತವಿಕ ಕೆಲವು ಅಂಶಗಳನ್ನು ನಾನಾ ರೀತಿಗಳಲ್ಲಿ ಮೌಖಿಕ ಸಾಹಿತ್ಯವು ವ್ಯಕ್ತಪಡಿಸುತ್ತದೆ.

ಒಂದು ಜಾನಪದ ಪರಂಪರೆಯನ್ನು ಅಭ್ಯಾಸಿಸಬೇಕೆಂದರೆ ಆ ನಾಡಿನ ಸಂಸ್ಕೃತಿಯ ವಿಚಾರಗಳಾದ ಆಚಾರ, ವಿಚಾರ, ರೀತಿ-ನೀತಿಗಳು ಪರಿಗಣನೆಗೆ ತೆಗೆದುಕೊಳ್ಳುವುದು ಅತ್ಯವಶ್ಯಕವಾಗುತ್ತದೆ. ಜನಪದರು ಗತಕಾಲದ ಆಗುಹೋಗುಗಳನ್ನು ತನ್ನ ಅಂತರಂಗದಲ್ಲೇ ಅಚ್ಚಳಿಯದಂತೆ ಗರ್ಭೀಕರಿಸಿಕೊಂಡು ಅದನ್ನು ಇಂದಿಗೂ ದಾಖಲು ಮಾಡುವುದು ಮಹತ್ವದ ಸಂಗತಿಯೇ ಆಗಿದೆ.

ಇತಿಹಾಸವು ಸಾಮಾನ್ಯವಾಗಿ ರಚನೆಯ ಸಂದರ್ಭದಲ್ಲಿ ಆಕರ ಸಾಮಗ್ರಿಗಳಾದ ಶಾಸನ, ಸಾಹಿತ್ಯ, ಪ್ರವಾಸಿ ಬರವಣಿಗೆಗಳು, ವೀರಗಲ್ಲು, ಮಾಸ್ತಿಕಲ್ಲು ಇನ್ನೂ ಮುಂತಾದವುಗಳು ಮುಖ್ಯ ಪಾತ್ರವಹಿಸಿವೆ. ಅಲ್ಲದೆ ಬಹುಪಾಲು ಆಳುವವರ ಅಧಿಕಾರಸ್ಥರ ನಿರ್ದೇಶನದಲ್ಲಿ ನಿರ್ಮಿತವಾಗುವಂತಹದ್ದು, ಆದರೆ ಅಲಿಖಿತ ಸಾಮಾಗ್ರಿಯಾದ ಜಾನಪದದಲ್ಲಿ ಮೌಖಿಕ ಪರಂಪರೆಯು ಕೂಡ ಮಹತ್ವದ್ದಾಗಿರುತ್ತದೆ. ಹೀಗೆ ಮೌಖಿಕ ಚರಿತ್ರೆಯು ಇತಿಹಾಸ ರಚನೆಯ ಸಂದರ್ಭದಲ್ಲಿ ಅತೀ ಮುಖ್ಯ ಆಕರವಾಗಿ ನಿಲ್ಲುತ್ತದೆ. ಜಗತ್ತಿನಲ್ಲಿ ಮೊದಲು ಮೌಖಿಕ ಸಂಸ್ಕೃತಿ ಹುಟ್ಟಿದೆ. ಇಂತಹ ಮೌಖಿಕ ಸಂಸ್ಕೃತಿಯು ಇತಿಹಾಸ ರಚನೆಯ ಸಂದರ್ಭದಲ್ಲಿ ಆಕರಗಳಾಗಿ ಬಳಸಿಕೊಳ್ಳಬಹುದು. ಭಾರತ ಮತ್ತು ಆಫ್ರಿಕಾದಂತಹ ದೇಶಗಳಲ್ಲಿ ಇತಿಹಾಸ ರಚನೆಗೆ ಕಂಠಸ್ಥ ಪರಂಪರೆಯ ಸಾಮಗ್ರಿಗಳಾದ ಐತಿಹ್ಯ, ಗಾದೆ, ನುಡಿಗಟ್ಟು ಮುಂತಾದವುಗಳನ್ನು ಬಳಸಿ ಕೊಳ್ಳಬೇಕಾಗಿರುವುದು ಅನಿವಾರ್ಯ.[೧] ಲಿಖಿತ ಪರಂಪರೆಯಿಲ್ಲದ ಆಫ್ರಿಕಾದ ನಿಗ್ರೋಗಳ ಇತಿಹಾಸವನ್ನು ರೂಪಿಸಲು ಆಧುನಿಕ ಇತಿಹಾಸಕಾರರು ಕಂಠಸ್ಥ ಪರಂಪರೆಯನ್ನು ಶೋಧಿಸುವುದು ಅನಿವಾರ್ಯವಾಯಿತು.

ಭಾರತದ ಇತಿಹಾಸವೆಂದರೆ ಅದು ಒಂದು ಪ್ರದೇಶದ ಎಲ್ಲಾ ಕಾಲದ ಒಟ್ಟು ಜನಸಮುದಾಯಗಳ ಬದುಕಿನ ಚಿತ್ರಣವೆಂದು ಹೇಳಬಹುದು. ಇಲ್ಲಿ ಇಡೀ ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ಚಿತ್ರಣವೂ ಆಗಬಹುದು. ಈ ಜನಸಮುದಾಯಗಳು ತಮ್ಮ ಬದುಕಿನ ಸಂದರ್ಭದಲ್ಲಿ ಆದ ನೋವು ನಲಿವುಗಳ ಘಟನೆಗಳನ್ನು ಬುದ್ಧಿವಂತಿಕೆಯಿಂದ ಸೆರೆಹಿಡಿದು, ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹೊತ್ತೊಯ್ಯುತ್ತಾ ಜೀವಂತವಾಗಿರಿಸಿಕೊಂಡು ಬಂದಿದೆ ಎಂದರೆ ಅಂದಿನ ಜನರ ತಿಳುವಳಿಕೆಯ ಮಟ್ಟ ಬಹಳ ಮಹತ್ವದ್ದೆಂದು ಅರಿಯಬಹುದಾಗಿದೆ. ನಡೆದ ಘಟನೆಯೊಂದನ್ನು ಕಣ್ಣಾರೆ ನೋಡಿದ ಜನರೆಲ್ಲರೂ ಅವುಗಳನ್ನು ಬರೆದಿಡಲು ಶಕ್ತರಾಗಿರುವುದಿಲ್ಲ. ಜೊತೆಗೆ ಬರವಣಿಗೆ ಗೊತ್ತಿರುವುದಿಲ್ಲ.

ಆದ್ದರಿಂದ ಸ್ಮೃತಿಯಲ್ಲಿರಿಸಿಕೊಂಡು, ತಲೆಮಾರುಗಳಿಂದ ತಲೆಮಾರಿಗೆ ಬೆಳೆದು ಬಂದ ಇತಿಹಾಸವೇ ಜನಪದದ ಇತಿಹಾಸವಾಗಿರುವುದು ಕಾಣಬಹುದು.

ಇತಿಹಾಸವು ಯಾವುದೋ ಒಂದು ವರ್ಗದ ಓತಕ್ಕೆ ಹುಟ್ಟಿರುವಂತಹದ್ದು, ಇದನ್ನು ರಚಿಸುವಾಗ ಬಳಸಲಾದ ಮಾಹಿತಿಗಳು ಲಿಖಿತ ಪರಂಪರೆಯಿಂದ ಬಂದವುಗಳು. ಶಾಸನಗಳು, ನಾಣ್ಯಗಳು, ಸಾಹಿತ್ಯ, ಪ್ರವಾಸಿ ಬರಹಗಳು ಇತಿಹಾಸಕ್ಕೆ ಪೂರಕವಾಗಿವೆ. ಈ ಲಿಖಿತ ಪರಂಪರೆಯು ಒಂದು ಆಡಳಿತ ವರ್ಗದ, ಶಿಕ್ಷಣ ಹೊಂದಿದವರ ರಚನೆಗಳೆಂಬುದು ತಿಳಿಯಬೇಕಾಗುತ್ತದೆ. ಸಾಹಿತ್ಯ ಕೃತಿಗಳನ್ನು, ಶಾಸನಗಳನ್ನು ಹಾಗೂ ಪ್ರವಾಸಿ ಬರಹಗಳನ್ನು ಬರೆಯುವವರು ಆಡಳಿತ ನಡೆಸುವವರ ಕೈಗೊಂಬೆಗಳಾಗಿದ್ದು ಇವರ ದೃಷ್ಟಿಯಂತೆ ನಿರ್ಮಿಸಲಾದ ರಚನೆಗಳಾಗಿವೆ. ರಾಜರು ನಡೆಸಿದ ಯುದ್ಧಗಳು, ಕಟ್ಟಿಸಿದ ದೇವಸ್ಥಾನಗಳು, ಅವುಗಳಿಗೆ ನೀಡಿದ ದಾನ-ದತ್ತಿಗಳು, ಕೆತ್ತಿಸಿದ ಮೂರ್ತಿಗಳು, ನಡೆಸಿದ ಸಮಾರಂಭಗಳ ಚಿತ್ರಣ ಮಾತ್ರ ಕಂಡುಬರುವುದೇ ಹೊರತು ಈ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು, ಬೆವರು, ರಕ್ತ, ಹೋರಾಟದಲ್ಲಿ ಸತ್ತವರ ಮಾಹಿತಿಯನ್ನು ನಾವು ಎಲ್ಲಿಯೂ ಕಾಣಲಾಗುವುದಿಲ್ಲ. ಡಾ.ಚಿದಾನಂದ ಮೂರ್ತಿಯವರು ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹುಪ್ರಚಲಿತವಾಗಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ಈ ರಾಜಕೀಯ ಇತಿಹಾಸವೇ ಪ್ರಧಾನವಾಗಿದ್ದು ಗ್ರಂಥದ ಕೊನೆಯಲ್ಲಿ ಆ ನಾಡಿನ ಕಲೆ, ಧರ್ಮ, ಇತ್ಯಾದಿಗಳನ್ನು ಕುರಿತ ವಿಷಯಗಳು ಒಂದು ಅನುಬಂಧದ ರೂಪದಲ್ಲಿರುವುದುಂಟು ಎಂದು ಹೇಳುತ್ತಾ ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ. ಹೀಗೆ ಬದುಕಿದ ಜನರ ಒಂದು ಗಣನೀಯವಾದ ಭಾಗ ಆ ನಾಡನ್ನಾಳಿದ ರಾಜ ಸಮೂಹ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರ ಜೀವನ ಸಮಸ್ಯೆಗಳು, ಅದರ ಜೀವನ ಮೌಲ್ಯಗಳು-ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ[೨] ಎಂದು ಪ್ರತಿಪಾದಿಸುತ್ತಾರೆ. ಇದರಿಂದ ಇತಿಹಾಸವೆಂದರೆ ಪ್ರಭುತ್ವಶಾಹಿಗಳು ನಿರ್ಮಿಸಿದ ಇತಿಹಾಸ ಮಾತ್ರವೇ ಇತಿಹಾಸವಲ್ಲ. ಜನಸಮುದಾಯಗಳು ಕಂಠಸ್ಥ ಪರಂಪರೆಯು ಬೆಳಸಿಕೊಂಡು ಬಂದ ಇತಿಹಾಸವು ಸಹ ಇತಿಹಾಸವೆಂದೇ ಹೇಳಬಹುದು. ಸಾಂಪ್ರದಾಯಿಕ ಇತಿಹಾಸದಲ್ಲಿ ಅಶಿಕ್ಷಿತ ಜನರ ಬಗ್ಗೆ ಯಾವುದೇ ಅಂಶಗಳೂ ತಿಳಿದುಬರುವುದಿಲ್ಲ. ಅಲ್ಲಲ್ಲಿ ಸಾಂಸ್ಕೃತಿಕವಾಗಿ ಗಂಡು ಹೆಣ್ಣನ್ನು ಕುರಿತು ಕೆಲವು ವಿಚಾರಗಳು ಬಂದಿದ್ದರೂ ಅವೆಲ್ಲಾ ಸಾವಿನ ಬಗ್ಗೆ, ದುರಂತದ ಬಗ್ಗೆ ತಿಳಿಸುತ್ತವೆ. ಆದರೆ ಅವೆಲ್ಲವೂ ಅವರ ಜೀವನದ ವಾಸ್ತವಿಕ ಅಂಶಗಳನ್ನು ಎಲ್ಲಿಯೂ ಪ್ರಸ್ತಾಪಿಸುವಿದಿಲ್ಲ. ಇಲ್ಲಿ ಮುಖ್ಯವಾಗಿ ಅಲಿಖಿತ ಪರಂಪರೆಯಿಂದ ತಿಳಿಯುವ ಅಂಶಗಳು ಲಿಖಿತ ಪರಂಪರೆಗಿಂತ ಬಹಳ ಮಹತ್ವದ್ದಾಗಿರುತ್ತವೆ ಎನ್ನಬಹುದು. ಲಿಖಿತ ಪರಂಪರೆಯು ಒಬ್ಬರಾಜನನ್ನು ಕುರಿತು ಅವನು ದಾನಿ, ಉದಾರಿ, ಕಲಾಪ್ರೇಮಿ ಎಂದು ಒಂದು

ಬಗೆಯಲ್ಲಿ ಹೊಗಳಿದರೆ ಇನ್ನೊಂದೆಡೆ ಅಧಿಕಾರ ಕೇಂದ್ರೀಕರಣ ದೃಷ್ಟಿಯಿಂದ ಆಡಳಿತ ಸೂತ್ರಹಿಡಿದ ರಾಜನು ದುಷ್ಟನಾಗಿ, ಕ್ರೂರಿಯಾಗಿ, ಸ್ವಾರ್ಥಿಯಾಗಿ ಜನವರ್ಗವನ್ನು ದುರಾವಸ್ಥೆಗೆ ತಳ್ಳಿದ ವಿವರಗಳು ಸಿಗುತ್ತವೆ. ಆದರೆ ಕಂಠಸ್ಥ ಪರಂಪರೆಯಲ್ಲಿ ಜಾನಪದ ಪ್ರಕಾರಗಳಾದ ಹಾಡು, ಐತಿಹ್ಯ, ಕಥೆ, ಪುರಾಣ, ಆಚರಣೆಗಳು ಮುಂತಾದವುಗಳಲ್ಲಿ ರಾಜನ ಮತ್ತೊಂದು ಕ್ರೂರ ಮುಖವನ್ನು ಪರಿಚಯಿಸುತ್ತಾರೆ. ಸ್ವಾರ್ಥದ ದೃಷ್ಟಿಯಿಂದ ಸ್ವಪ್ರತಿಷ್ಠೆಯ ಪರಾಕಾಷ್ಠೆಯ ಮದದಿಂದ ಮೆರೆದು, ತನ್ನ ಆಜ್ಞೆಯಿಂದ ಶಿರಸವಹಿಸಿ ಒಂದು ಮೂರ್ತಿಕೆತ್ತಿದ ಬಡಶಿಲ್ಪಿಯನ್ನು ಇನ್ನೊಂದು ಇದೇ ಮೂರ್ತಿಯನ್ನು ಇನ್ನೆಲ್ಲಿಯೂ ಕೆತ್ತಬಾರದೆಂದು ಆತನನ್ನು ಕೊಂದ ಪ್ರಸಂಗಗಳನ್ನು ಮೌಖಿಕ ಸಾಹಿತ್ಯ ಹೇಳುತ್ತದೆ.(ಉದಾಹರಣೆಗೆ ಪಾಡ್ದನಗಳಲ್ಲಿ ಬರುವ ಶಿಲ್ಪಿಗಳ ವಿಚಾರಗಳನ್ನು ಇಲ್ಲಿ ಕಾಣಬಹುದು) ಹೀಗೆ ಕಂಠಸ್ಥ ಪರಂಪರೆಯಿಂದ ವಸ್ತು, ವಿಷಯಗಳು ಅವು ಬಿಂಬಿಸುವ ಪ್ರತಿಬಿಂಬಗಳು ಸಾಹಿತ್ಯ, ಶಾಸನ, ವಿದೇಶಿ ಬರಹಗಳಲ್ಲಿ ದೊರೆಯುವುದಕ್ಕಿಂತ ತೀರ ಭಿನ್ನವಾಗಿರುತ್ತವೆ.

ಪಾಶ್ಚಿಮಾತ್ಯರಲ್ಲಿ ರೂಢಿಯಲ್ಲಿರುವ 'ಓರಲ್ ಹಿಸ್ಟ್ರಿ'ಯು ಕನ್ನಡದಲ್ಲಿ ಅದರಲ್ಲೂ ಜಾನಪದ ಅಧ್ಯಯನದಲ್ಲಿ ಮೌಖಿಕ ಇತಿಹಾಸವಾಗಿ ದೇಶಾಂತರಗೊಂಡಿದೆ. ಮೌಖಿಕ ರೂಪದಲ್ಲಿ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಬರೆಯುವ ಇತಿಹಾಸಕ್ಕೆ 'ಮೌಖಿಕ ಇತಿಹಾಸ'ವೆಂದು ಕರೆಯುತ್ತಾರೆ. ಇದಕ್ಕೆ ಪರ್ಯಾಯವಾಗಿರುವ ಇತಿಹಾಸಕ್ಕೆ 'ಲಿಖಿತ ಇತಿಹಾಸ'ವೆಂದು ಕರೆಯುತ್ತಾರೆ. ಇತಿಹಾಸದ ಘಟನೆಗಳು ಕಂಠಸ್ಥ ಪರಂಪರೆಯಲ್ಲಿ ಎಷ್ಟೋ ಅಂಶಗಳು ದೊರೆಯುತ್ತಿವೆ. ಆ ಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸುವ ಕಾರ್ಯವು ನಡೆಯುತ್ತಿದೆ. ಇಲ್ಲಿ ಮುಖ್ಯವಾಗಿ ಇತಿಹಾಸದ ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳು, ಒಂದಕ್ಕೊಂದು ಸೌಮ್ಯವಾಗಿರಬಹುದು ಅಥವಾ ವಿರುದ್ಧವಾಗಿರಬಹುದು ಅಥವಾ ಕೆಲವು ವಿಚಾರಗಳನ್ನು ಹೇಳಬಹುದು ಅಥವಾ ಹೇಳದೆಯು ಇರಬಹುದು. ಅಂತಹ ಸಂದರ್ಭದಲ್ಲಿ ಬರೀ ಲಿಖಿತ ವಿಚಾರಗಳೇ ಸತ್ಯವೆಂದು ಭಾವಿಸಬಾರದು. ಅಥವಾ ಮಿಥ್ಯವೆಂದು ಅಲಕ್ಷ್ಯಕ್ಕೆ ಗುರಿಪಡಿಸ ಬಾರದು. ಎರಡು ಆಕರಗಳಿಂದ ದೊರೆಯುವ ಅಪರೂಪ ಅಂಶಗಳು ಕಳಚಿ ಹೋಗಬಹುದು. ಈ ರೀತಿ ಹೊಡೆತಗಳು ಅಲಿಖಿತ ಆಕರಗಳಿಗೆ ಬೀಳುತ್ತಿದ್ದವು ಎಂಬುದು ಕೆಲವಿದ್ವಾಂಸರ ಅಭಿಪ್ರಾಯವಾಗಿತ್ತು. ಡಾ.ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯದಂತೆ 'ಇತಿಹಾಸ ಬರೆಯುವ ಪ್ರಸಂಗದಲ್ಲಿ ಲಿಖಿತ ಸಾಮಗ್ರಿಗಳಾದ ಶಾಸನಾದಿಗಳಿಗೆ ಪ್ರಧಾನ ಸ್ಥಾನವನ್ನೂ, ಕಾವ್ಯಾಧಿಗಳಿಗೆ ಗೌಣಸ್ಥಾನವನ್ನು ಕೊಡುತ್ತಿರುವ ಕೆಲ ಭಾರತೀಯ ಇತಿಹಾಸಕಾರರು ಅಲಿಖಿತವಾದ ಜಾನಪದವನ್ನು ತೀರ ಉಪೇಕ್ಷಿಸುತ್ತಾ ಬಂದಿದ್ದಾರೆ. ನಿರಕ್ಷರಿಗಳ ಸಂತಾನವಾದ ಭಾರತದಲ್ಲಿ ಲಿಖಿತ ರೂಪದಲ್ಲಿ ಉಳಿದುಬಂದಿರುವ ಆಧಾರವಾದ ಅನೇಕ ಸಾಮಗ್ರಿಗಳು ನೂರಕ್ಕೆ ಐದರಷ್ಟು; ಅಲಿಖಿತ ರೂಪದಲ್ಲಿ ಉಳಿದುಬಂದಿರುವ ಆಧಾರ ಸಾಮಗ್ರಿಗಳು ತೊಂಬತ್ತೈದರಷ್ಟು ಇದೆ. ಹೀಗಿರುವಾಗ ಇತಿಹಾಸ ರಚನಾ ಕಾರ್ಯದಲ್ಲಿ ಅಲಿಖಿತ ಸಾಮಗ್ರಿಯಾದ

ಜಾನಪದವನ್ನು ಅಲಕ್ಷಿಸುವುದು ಪ್ರಮಾದವಾಗುತ್ತದೆ. ಇದನ್ನು ಮನಗಂಡು ಇತಿಹಾಸಕಾರರ ರಚನಾಶಾಸ್ತ್ರವು ಇಂದು ಲಿಖಿತದೊಂದಿಗೆ ಅಲಿಖಿತ ಸಾಮಾಗ್ರಿಯನ್ನು ಬಳಸಿಕೊಂಡು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲಿರುವುದು ಸರಿಯಾದ ಕ್ರಮವೆಂದು ಹೇಳಬೇಕು' ಎಂದಿದ್ದಾರೆ.[೬]

ಇತಿಹಾಸವನ್ನು ರಚಿಸುವಾಗ ಏಕದೃಷ್ಟಿಯಿಂದ ಸಾಂಪ್ರದಾಯಿಕ ರೀತಿಯಲ್ಲಿಯೇ ಆಧಾರಗಳನ್ನು ಇಟ್ಟುಕೊಂಡು ಪ್ರಭುತ್ವವನ್ನೇ ಮೇಲುಗೈ ಮಾಡಿ ಇನ್ನಿತರ ವಿಚಾರಗಳನ್ನು ನಿರ್ಲಕ್ಷಿಸಿರುವುದು ಕಂಡುಬಂದಿದೆ. ಇದರಿಂದ ಇತ್ತೀಚಿನ ನವ ಇತಿಹಾಸಕಾರರು ಮಾನವನ ಚಟುವಟಿಕೆಗಳ ಸಂಪೂರ್ಣ ಇತಿಹಾಸವನ್ನು ಬರೆಯಬೇಕೆಂಬ ಉದ್ದೇಶದಿಂದ ಬಹುಶಿಸ್ತೀಯ ಅಧ್ಯಯನದ ಕಡೆಗೆ ವಾಲತೊಡಗಿದರು. ಇದರಿಂದ ಜಾನಪದ ಸಂಸ್ಕೃತಿಯನ್ನು ಮೊದಲಿಗೆ ಪರಿಗಣನೆಗೆ ತೆಗದುಕೊಂಡು, ಇನ್ನಿತರ ಶಾಸ್ತ್ರಗಳೊಂದಿಗೆ ತುಲನೆ ಮಾಡಿ ನಂತರ ಹಿಂದೆ ಇದ್ದ ಇತಿಹಾಸವನ್ನು ಪುನರ್ ರಚಿಸುವುದಕ್ಕೆ ಹಾದಿಯನ್ನು ಮಾಡಿಕೊಟ್ಟರು. ನವ ಇತಿಹಾಸಕಾರರ ಪ್ರಕಾರ ಇತಿಹಾಸಕ್ಕೆ ದಾಖಲೆಯ ಆಧಾರಗಳು ಎಷ್ಟು ಮುಖ್ಯವೋ ಮೌಖಿಕ ಚರಿತ್ರೆ, ಪ್ರಾದೇಶಿಕ ಚರಿತ್ರೆ ಮತ್ತು ಕೆಳವರ್ಗಗಳ ಚರಿತ್ರೆ ಅಷ್ಟೇ ಮುಖ್ಯವೆಂದು ಭಾವಿಸಬೇಕೆಂದು ಅಭಿಪ್ರಾಯಪಟ್ಟರು. ಈ ಅಭಿಪ್ರಾಯ ಮೊದಲಿಗೆ ಯುರೋಪಿನ ಮೂಲಕ ಬಂದಿದ್ದು, ಪ್ರಮುಖವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಬಹುಮೂಲ ಸಮುದಾಯಗಳ ಅಧ್ಯಯನದ ಸಂದರ್ಭದಲ್ಲಿ ಜಾನಪದ ಮೂಲದಿಂದಲೇ ಗುರುತಿಸಿ ನಾಂದಿ ಹಾಡಿದರು. Oral History ಬಲವಾಗಿ ಮಂಡಿಸಿದಾತ "ಅಲನೇ ನಿವನ್ಸ್ " ಇವನನ್ನು Father of oral History ಎಂತಲೂ ಕರೆಯುತ್ತಾರೆ.

ಮೌಖಿಕ ಚರಿತ್ರೆಯು ಮನುಷ್ಯನ ಸಮಸ್ತ ವ್ಯವಹಾರಗಳನ್ನು ನಿರೂಪಿಸಿದರೆ, ಲಿಖಿತ ಚರಿತ್ರೆಯು ಮನುಷ್ಯನ ಭೂತಕಾಲದ ಚಟುವಟಿಕೆಗಳನ್ನು ನಿರೂಪಿಸುತ್ತದೆ. ಮೌಖಿಕ ಚರಿತ್ರೆಯಲ್ಲಿ ಮನುಷ್ಯನ ಸಮಸ್ತ ವ್ಯವಹಾರಗಳಲ್ಲಿ ತಾನು ಅನುಭವಿಸಿದ, ಕಂಡುಕೊಂಡ, ಕೇಳಿ ಮತ್ತು ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ತಮ್ಮ ಸ್ಮೃತಿಯಲ್ಲಿಟ್ಟುಕೊಂಡು, ಸಹೃದಯರಿಗೆ ರಂಜಕ ಮತ್ತು ಇನ್ನಿತರ ಸಂದರ್ಭದಲ್ಲಿ ಮನಮುಟ್ಟುವಂತೆ ಹೇಳುವುದೇ ಆಗಿದೆ. ಇವರಿಗೆ ಲಿಖಿತ ಆಧಾರವಿಲ್ಲ. ಲಿಖಿತ ಚರಿತ್ರೆಯು ಭೂತಕಾಲದಲ್ಲಿನ ಘಟನಗೆಗಳ ಮೊತ್ತದ ದಾಖಲೆಯಾಗಿದೆ. ಇದು ಮನುಷ್ಯನ ಬದುಕಿನ ನಿಜ ಸ್ಥಿತಿಯನ್ನು ದಾಖಲೆಗಳಲ್ಲಿ ನಿರೂಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಇದನ್ನು ಸಾಂಪ್ರದಾಯಿಕ ಇತಿಹಾಸವೆಂತಲೂ ಕರೆಯಲಾಗುತ್ತದೆ. ಇದು 'ಒಂದು ಶಿಸ್ತಾಗಿ, ಇತಿಹಾಸವನ್ನು ಭೂತಕಾಲದ ದಾಖಲೆ ಎಂದೇ ಪರಿಗಣಿಸಲಾಯಿತು. ಅಂದರೆ ಭೂತ ಕಾಲದಲ್ಲಿ ನಡೆದು ಹೋದ ಘಟನೆಗಳು ಒಂದು ಕ್ರಮಾಗತ ಸರಣಿಯಲ್ಲಿ ನಡೆದವು ಮತ್ತು ಆ ಘಟನೆಗಳ ವಿವರಗಳನ್ನು ಅವುಗಳ ಸಂದರ್ಭಗಳಿಗೆ ಅನುಗುಣವಾಗಿ ಕಂಡುಕೊಳ್ಳಬಹುದೆಂಬ ಅರ್ಥದಲ್ಲಿ, ಇತಿಹಾಸವನ್ನು ಭೂತಕಾಲದ ಬಗೆಗಿನ ದಾಖಲೆ ಎಂದೇ ಪರಿಗಣಿಸಲಾಗುತ್ತಿದೆ.[೭] ಈ ದಾಖಲೆಗಳಿಗಾಗಿ ಇತಿಹಾಸಕಾರರು ಶಾಸನಗಳನ್ನು, ತಾಮ್ರಪಟಗಳನ್ನು,

ವಿದೇಶಿ ಬರಹಗಳನ್ನು ಕವಿಗಳ ಲಿಖಿತ ಸಾಹಿತ್ಯವನ್ನು, ಕೈಫಿಯತ್ತುಗಳನ್ನು, ನಾಣ್ಯಗಳನ್ನು ಆಳ್ವಿಕೆಯ ಕಾಲದಲ್ಲಿ ನಿರ್ಮಿಸಿದ ಸ್ಮಾರಕಗಳನ್ನು ಮರೆತು ಹೋಗಿರುವುದು ಕಾಣಬಹುದು. ಮೌಖಿಕ ಚರಿತ್ರೆಯನ್ನು ಕುರಿತು ಡಾ.ಹಿ.ಶಿ.ರಾಮಚಂದ್ರೇಗೌಡರು ಈ ರೀತಿ ಹೇಳುತ್ತಾರೆ. ‘ಜಾನಪದವೇ ಒಂದು ಪ್ರತ್ಯೇಕ ಐತಿಹಾಸಿಕ ಪರಂಪರೆ. ಅದನ್ನು ನಾವು ‘ಮೌಖಿಕ ಇತಿಹಾಸ’ ಎಂದು ಕರೆಯುತ್ತೇವೆ. ಅದರ ಘಟಕಗಳು ಜನಪದ ಇತಿಹಾಸವನ್ನು ಮೌಖಿಕವಾಗಿ ಉಳಿಸಿಕೊಂಡು ಬರುತ್ತವೆ. ಜಾನಪದ ಒಂದು ಸುಂದರ ಕಲ್ಪನೆ ಎನ್ನುವವರಿಗೆ ಇದು ಹಿಡಿಸುವುದಿಲ್ಲ. ಜಾನಪದ ಸುಂದರ ಕಲ್ಪನೆ ಎಂಬ ಅಭಿಪ್ರಾಯ ಮಾತ್ರ ತಪ್ಪು. ಜಾನಪದ ಇತಿಹಾಸವೆಂಬುದು ಒಂದು ಸಾಮಾಜಿಕ ಕ್ರಿಯೆ. ಜನಪದ ನಡೆದ ಮತ್ತು ತಿಳಿದವ ನಡೆಯಿತೆಂದು ಹೇಳಲಾದ ಘಟನೆಗಳ ಮೊತ್ತ. ಘಟನೆ ನಡೆದರೆ ಇತಿಹಾಸ ಸೃಷ್ಟಿಯಾಗುವುದು ಸಾಧ್ಯವಿಲ್ಲ. ಆದರೆ ನಡೆದದ್ದು ಯಾವ ಮಾದರಿಯ ಇತಿಹಾಸ ಎನ್ನುವುದು ಮುಖ್ಯ. ಇತಿಹಾಸ ಮರುಕಳಿಸಿತೆ ಅಥವಾ ಪ್ರತ್ಯೇಕವಾಗಿ ಘಟಿಸಿತೆ ಎಂಬ ತೀರ್ಮಾನದ ಮೇಲೆ ಜನಪದ ಇತಿಹಾಸ ಮುಖಗಳು ತೆರೆದುಕೊಂಡಿವೆ.’[೫] ಇಲ್ಲಿ ಮೇಲಿನ ಇಬ್ಬರು ವಿದ್ವಾಂಸರ ಮಾತುಗಳನ್ನು ಪರಿಶೀಲಿಸಿದರೆ ಭೂತಕಾಲದಲ್ಲಿ ನಡೆದ ಘಟನೆಗಳ ಮೊತ್ತವೇ ಇವೆರಡು ಚರಿತ್ರೆಗೆ ವಸ್ತುವಾಗಿರುತ್ತವೆಂಬುದು ನಿರ್ವಿವಾದ. ಅಂದರೆ ಒಂದು ದಾಖಲೆಗಳ ಮುಖಾಂತರ ಪರಂಪರೆಯಲ್ಲಿ ಉಳಿದರೆ, ಇನ್ನೊಂದು ಮೌಖಿಕ ಸ್ಮೃತಿಯ ಮುಖಾಂತರ ಪರಂಪರೆಯಲ್ಲಿ ಉಳಿಯುತ್ತದೆ. ದಾಖಲೆಗಳು ಯಥಾಸ್ಥಿತಿಯಲ್ಲಿ ಮುಂದುವರೆದರೆ, ಸ್ಮೃತಿಯು ಕಾಲಕ್ಕೆ ತಕ್ಕಂತೆ ಕೆಲವು ಬಾರಿ ಪಾಠಾಂತರಗೊಂಡಿರುತ್ತದೆ. ಕೆಲವು ಬಾರಿ ಕಲ್ಪಿತ ಅಂಶಗಳು ಸೇರಿ ಮೂಲ ಅಂಶಗಳೇ ಮರೆಯಾಗಿರುವ ಸಾಧ್ಯತೆಯು ಹೆಚ್ಚು. ಇಂತಹ ಸಂದರ್ಭದಲ್ಲಿ ಕಲ್ಪಿತ ಅಂಶಗಳನ್ನು ಕೈಬಿಟ್ಟು, ಸತ್ಯದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಲಿಖಿತ ಮತ್ತು ಮೌಖಿಕ ಚರಿತ್ರೆಗಳ ಘಟನೆಗಳಿಗೆ ಒಂದೇ ವಸ್ತುವಾಗಿದ್ದರೂ ಕಾಲಾನಂತರದಲ್ಲಿ ಭಿನ್ನ ಭಿನ್ನ ರೀತಿಯಾಗಿ ಒಂದಕ್ಕೊಂದು ಕಾಣಿಸಿಕೊಳ್ಳುತ್ತವೆ. ಲಿಖಿತ ಪರಂಪರೆಯು ಯಥಾಸ್ಥಿತಿಯಲ್ಲಿ ಮುಂದುವರೆದು, ಮೌಖಿಕ ಚರಿತ್ರೆಯು ಪರಂಪರೆಯಲ್ಲಿ ಸ್ಮೃತಿಯಲ್ಲಿರುವುದರಿಂದ ಕೆಲವು ವಿಚಾರಗಳು ಸೇರುತ್ತವೆ, ಕೆಲವು ಮರೆಯಾಗುತ್ತವೆ. ಇದರಿಂದ ವಸ್ತುಗಳು ಭಿನ್ನವಾಗುತ್ತವೆಂದು ಹೇಳಬಹುದಾಗಿದೆ.

ಈ ಮೇಲಿನ ವಿಚಾರಗಳನ್ನು ಮುಂದುವರೆಸುವುದಾದರೆ, ಮೌಖಿಕ ಚರಿತ್ರೆಯು ಒಂದು ನಿರ್ದಿಷ್ಟ ಆಕರವನ್ನು ಹೊಂದಿರುವುದಿಲ್ಲ. ಅಂದರೆ ಘಟನೆಯ ಕಾಲಸೂಚಿ, ಯಾವುದೇ ಆಧಾರವಿಲ್ಲದ ಸಂವಹನಗಳು ಎದ್ದು ಕಾಣಿಸುತ್ತವೆ. ಇದರಿಂದ ಮೌಖಿಕ ಚರಿತ್ರೆಯು ತೀರಾ ಅಸತ್ಯವನ್ನು ಹೇಳುತ್ತದೆ ಅನ್ನಿಸುವುದಿಲ್ಲ. ಇಡೀ ಮೌಖಿಕತೆಯು ಲಿಖಿತಕ್ಕೆ ಆಕರವಾಗದಿದ್ದರೂ ಕೆಲವು ವಿಚಾರಕ್ಕೆ ಹತ್ತಿರವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಗೀತೆಗಳಲ್ಲಿ ಬರುವ ವ್ಯಕ್ತಿ ವಸ್ತುವಿನ ಆಚಾರ-ವಿಚಾರ, ನಡವಳಿಕೆಗಳ ಹಿನ್ನೆಲೆಯಿಂದ ಯಾವ ಕಾಲದಲ್ಲಿ ನಡೆದ ಘಟನೆಗಳು, ಯಾವ ಪ್ರದೇಶಕ್ಕೆ ಸೇರಿದ್ದು ಎಂಬ ಹಿನ್ನೆಲೆಯಲ್ಲಿ ಮಾತ್ರ ಊಹಿಸಬಹುದಾಗಿದೆ. ಒಟ್ಟಾರೆಯಾಗಿ ಮೌಖಿಕ ಚರಿತ್ರೆಯನ್ನು ಲಿಖಿತ ಚರಿತ್ರೆಗೆ

ಬಳಸುವಾಗ ಜಾನಪದದ ಪರಿಪೂರ್ಣ ಜ್ಞಾನ ಅತ್ಯಗತ್ಯ. ಇಲ್ಲದಿದ್ದರೆ ಮೌಖಿಕ ಚರಿತ್ರೆಯಲ್ಲಿ ಸಿಗುವ ಅತ್ಯಲ್ಪ ಸತ್ಯವನ್ನು ಕೂಡ ಕೈಬಿಟ್ಟಂತಾಗುತ್ತದೆ.

ಮೌಖಿಕ ಪರಂಪರೆಯಲ್ಲಿರುವ ಜನಪದ ಸಾಹಿತ್ಯವು ಅಸಂಖ್ಯವಾದುದು. ಅದರಲ್ಲಿ ಕಥನಗೀತೆಗಳು, ಕಥೆಗಳು, ಗಾದೆಗಳು, ಐತಿಹ್ಯಗಳು, ಪುರಾಣಗಳು, ನಂಬಿಕೆ-ಆಚರಣೆಗಳು ಹಾಗೂ ಇನ್ನಿತರ ಜನಪದ ಪ್ರಕಾರಗಳು ಇಲ್ಲಿ ಮುಖ್ಯವಾಗುತ್ತವೆ. ಇವುಗಳಲ್ಲಿಯೂ ಸಹ, ಸಾಮಾಜಿಕ, ಐತಿಹಾಸಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಚಾರಗಳೆಂದು ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ. ಲಿಖಿತ ಚರಿತ್ರೆಯ ಸಂದರ್ಭದಲ್ಲಿ ಈ ಮೇಲೆ ಸೂಚಿಸಿರುವ ಪ್ರಕಾರಗಳು ಹೆಚ್ಚು ಬಳಕೆಗೆ ಒಳಪಟ್ಟಿರುವುದು ಕಾಣಬಹುದು. ಅದರಲ್ಲಿ ಇತಿಹಾಸಕಾರರಿಗೆ ಪ್ರಿಯವಾಗಿರುವುದು ಕಥನಗೀತೆಯ ರೂಪಕವಾಗಿದೆ.

ಜನಪದ ಸಾಹಿತ್ಯದಲ್ಲಿ ಕಥನ ಗೀತೆಗಳು ಹೆಚ್ಚಾಗಿ ವೀರ, ಪೌರುಷ ಆಶಯಗಳನ್ನು ಹೊಂದಿರುವಂತಾಗಿವೆ. ಬಹುಬೇಗ ಜನರನ್ನು ಆಕರ್ಷಿಸುವ ಪ್ರಕಾರವಾಗಿದೆ. 'ಒಂದು ರಾಜ್ಯದ ಹುಟ್ಟು, ವೈಭವ, ಕಾಳಗ, ಪತನ, ಶಿಷ್ಟಧರ್ಮಗಳ ಮೇಲಾಟ, ಧಾರ್ಮಿಕ ಸಂಘರ್ಷ ಮತ್ತು ಬರ ಇವು ವಿಜೃಂಭಿಕ ಸಾಹಿತ್ಯದ ಕಥಾವಸ್ತುಗಳು. ಪಾಳೇಗಾರರ ದೌರ್ಜನ್ಯ, ಸಾಹುಕಾರನ ಹಿಂಸೆ ಮತ್ತು ಕೊಲೆ, ಜನಸಾಮಾನ್ಯರ ಬಂಡಾಯ, ಸಾಂಸ್ಕೃತಿಕ ನಾಯಕರ ಸೃಷ್ಟಿ. ರಾಷ್ಟ್ರೀಯ ಹೋರ್ಟಗಾರರ ಕೆಚ್ಚು-ನೆಚ್ಚು, ರಾಷ್ಟ್ರದ ಬಿಡುಗಡೆ ಮತ್ತು ಇನ್ನಿತರ ವಿಶಿಷ್ಟ ಸಂದರ್ಭಗಳು ಕೂಡ ಈ ಬಗೆಯ ಸಾಹಿತ್ಯದಲ್ಲಿ ದಾಖಲಾಗುತ್ತವೆ. ಯಾವುದೇ ದೇಶದ ಕಥನ ಗೀತೆಗಳನ್ನು ಅಭ್ಯಾಸಿಸಿದರೂ ಈ ಸಮಾನ ನೆಲೆಯ ಅಂಶಗಳನ್ನು ಕಾಣಬಹುದು. ಗಮನಿಸಬಹುದಾದ ಇನ್ನೊಂದು ಮುಖ್ಯ ಅಂಶವೆಂದರೆ ಈ ಕಥನ ಗೀತೆಗಳು ಚಕ್ರವರ್ತಿ, ಮಹಾರಾಜರಂಥವರ ಬಗ್ಗೆ ಹೇಳುವುದಿಲ್ಲ. ಬದಲಾಗಿ ಸ್ಥಳೀಯವಾಗಿ ಜನರೊಂದಿಗೆ ಬೆರತು, ಜನರ ಆಶೋತ್ತರಗಳಿಗಾಗಿ ದುಡಿದ ಪಾಳೇಗಾರ, ಸಾಂಸ್ಕೃತಿಕನಾಯಕ, ನೈತಿಕತೆಗಾಗಿ ಹೋರಾಡಿದ ಸಾಮಾನ್ಯವ್ಯಕ್ತಿ ಮುಖ್ಯನಾಗುತ್ತಾನೆ. ಹೆಣ್ಣನ್ನು ಮಾನಭಂಗದಿಂದ ರಕ್ಷಿಸಿದವನು, ಒಳ್ಳೆಯವನಿಗಾಗಿ, ದೇಶದ ಒಳಿತಿಗಾಗಿ ಜೀವಕೊಟ್ಟವನು, ನಾಡಿನ ಮರ್ಯಾದೆ ಮತ್ತು ಮಹತ್ವವನ್ನು ಎತ್ತಿಹಿಡಿದವನು ಕಥನ ಗೀತೆಯ ವಸ್ತುವಾಗಿ, ಸಾಂಸ್ಕೃತಿಕ ಸಂಪನ್ನತೆಯ ಕೊಡುಗೆಯಾಗಿ ಕೀರ್ತಿಸಲ್ಪಡುತ್ತಾನೆ.'[೬] ಇದರಿಂದ ಮುಖ್ಯವಾಗಿ ತಿಳಿಯುವುದು ಜನಪದ ಸಾಹಿತ್ಯದ ಕಥನ ಗೀತೆಗಳು ರಾಜರುಗಳ ವೈಭವವನ್ನು ಅಭಿವ್ಯಕ್ತಿಸದೇ, ಜನಸಾಮಾನ್ಯರ ಜೀವನದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹಾಗೂ ರಕ್ಷಣೆಗೆ ಹೋರಾಡಿ ಮಡಿದ ವ್ಯಕ್ತಿಗಳನ್ನು ಕುರಿತಾಗಿ ಬಹುತೇಕ ಕಥನಗಳು ಸೃಷ್ಟಿಯಾಗಿವೆ.

ಇಲ್ಲಿಯವರೆಗೆ ಸಂಗ್ರಹಿಸಿದ ಜನಪದ ಐತಿಹಾಸಿಕ ಕಾವ್ಯಗಳು ಅಥವಾ ಕಥನಗೀತೆಗಳು ವಿಕೇಂದ್ರಿಕರಣ ವ್ಯವಸ್ಥೆಯ ಜಾಡನ್ನು ಹಿಡಿದು ಜನಸಮುದಾಯಗಳಿಗೆ ಹತ್ತಿರವಾಗಿ ಆಳ್ವಿಕೆಮಾಡಿದ ಪಾಳೇಗಾರರ ಬಗೆಗೆ ಹೆಚ್ಚು ಕಂಡುಬರುತ್ತವೆ. ಜನಪದ ಸಾಹಿತ್ಯವು ಯಾವಾಗಲೂ ಸಾಮ್ರಾಜ್ಯಗಳನ್ನು ಆಳ್ವಿಕೆ ಮಾಡಿದ ವಿಷ್ಣುವರ್ಧನ, ಪುಲಿಕೇಶಿ, ಕೃಷ್ಣದೇವರಾಯ, ರಣಧೀರ ಕಂಠೀರವರನ್ನು ಎಂದೂ ಹಾಡಿ

ಹೊಗಳಿಲ್ಲವೆಂಬುದು ಕಾಣಬಹುದಾಗಿದೆ. ಇವರ್ಯಾರು ಹೆಚ್ಚಿನದಾಗಿ ಜನಸಮುದಾಯಗಳ ಪತ್ತಿರವಿರಲಿಲ್ಲ. ಜೊತೆಗೆ ಅವರ ಕಷ್ಟ ಸುಖಗಳಲ್ಲಿ ಭಾಗಿಯಾದವರಲ್ಲ. ಇವರ ಆಡಳಿತದಲ್ಲಿ ಯಾವಾಗಲೂ ವೈಭವ, ಯುದ್ಧಗಳು, ಇದರಲ್ಲಿನ ರಕ್ತಪಾತಗಳು, ಶಿಷ್ಟ ದೇವತೆಗಳ ಸೃಷ್ಟಿ ಈ ದೇವತೆಗಳಿಗೆ ಕೊಟ್ಟ ದಾನದತ್ತಿಗಳು, ಸಾಮ್ರಾಜ್ಯದ ಪಟ್ಟಾಭಿಷೇಕಗಳೇ ಹೆಚ್ಚು ಕಂಡುಬರುತ್ತವೆ. ಜನಸಮುದಾಯಗಳನ್ನು ಪ್ರಭುತ್ವದಿಂದ ದೂರ ಇರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಜನಸಮುದಾಯಗಳು ಹತ್ತಿರದಿಂದ ನೋಡಿದ ಘಟನೆಗಳು ವಿರಳವೆನ್ನಬಹುದು. ಆದ್ದರಿಂದ ಈ ಸಾಮ್ರಾಜ್ಯದ ರಾಜರುಗಳ ಬಗೆಗೆ ಕಥನ ಗೀತೆಗಳು ಕಂಡುಬರುವುದಿಲ್ಲ.

ಪಾಳೇಗಾರರು ವಿಕೇಂದ್ರಿಕರಣದ ವ್ಯವಸ್ಥೆಯನ್ನು ಹೊಂದಿದ್ದರೂ ಆತನ ಪಾಳೆಯ ಪಟ್ಟಿನಲ್ಲಿ ಜನಸಮುದಾಯಗಳು ಕೆಲವು ಬಾರಿ ಧಿಕ್ಕರಿಸಿ ಎದುರು ನಿಂತಿರುವ ಉದಾಹರಣೆಗಳೂ ಕಂಡುಬರುತ್ತವೆ. ಪಾಳೇಗಾರನು ಜನಸಮುದಾಯಗಳನ್ನು ಕ್ಷುಲ್ಲಕವಾಗಿ ಕಂಡಾಗ ಆತನ ಬಗೆಗೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸದೇ ಮೌನವಹಿಸುವುದು ಜನ ಸಮುದಾಯಗಳ ಲಕ್ಷಣವಾಗಿದೆ. ಅಂತಹ ಪಾಳೇಗಾರರ ಬಗೆಗೆ, ಜನಪದ ಸಾಹಿತ್ಯವೂ ಹುಟ್ಟದೆ ಇರುವುದು ಒಂದು ಕಾರಣವೆನ್ನಬಹುದಾಗಿದೆ.

ಜನಸಮುದಾಯಗಳಿಗೆ ರಕ್ಷಣೆ ಕೊಡುವುದು ಪಾಳೇಗಾರನ ಕರ್ತವ್ಯ. ಅದು ಸಂಸ್ಥಾನವನ್ನೂ ಆಳುವವರಿಂದಲೂ ಆಗಬಹುದು. ಅಥವಾ ಅದರ ಮಧ್ಯೆ ಜೀವಿಸುವ ಯಾವನೇ ವ್ಯಕ್ತಿಯಿಂದ ಆಗಿರಬಹುದು. ಅದರಲ್ಲಿ ಹೆಣ್ಣಿನ ರಕ್ಷಣೆಯಾಗಿರಬಹುದು. ಗೋವುಗಳ ರಕ್ಷಣೆಯಾಗಿರಬಹುದು, ಒಂದು ಜನಾಂಗದ ರಕ್ಷಣೆಯಾಗಿರಬಹುದು. ಇಲ್ಲವೆ ಕ್ರೂರ ಮೃಗಗಳಿಂದ ರಕ್ಷಣೆ ಕೊಡುವುದಾಗಿರಬಹುದು. ಈ ಘಟನೆಗಳ ಆಘಾತದಿಂದ ರಕ್ಷಣೆಯೊದಗಿಸುವಲ್ಲಿ ಮರಣ ಹೊಂದಿದರೆ, ಆ ವ್ಯಕ್ತಿಯು ಜನಪದರಿಗೆ ಮುಖ್ಯವಾಗಿರುತ್ತಾನೆ. ಈತನೆ ಆ ಜನರ ಸಾಹಿತ್ಯಕ್ಕೆ ವಸ್ತುವಾಗುತ್ತಾನೆ. ಇದಕ್ಕೆ ಇಂಬಂತೆ ಡಾ.ಜಿ.ಆರ್. ತಿಪ್ಪೇಸ್ವಾಮಿಯವರು "ಜನಪದರು ಸಮಷ್ಠಿಯ ರಕ್ಷಣೆಗಾಗಿ, ಅನ್ಯಾಯಗಳ ವಿರುದ್ಧ ಪ್ರತಿಭಟಿಸಿ ನಿಂತು ಸಾವಿನ ದವಡೆಗೆ ತುತ್ತಾಗುವಂತಹ ವ್ಯಕ್ತಿಯ ಜನಪರ ನಿಲುವನ್ನು ಮೆಚ್ಚಿಕೊಂಡು ಆತನ ಬಗೆಗೆ ಹಾಡು ಕಟ್ಟಿದ್ದುಂಟು. ಇದು ಜನಪದರು ತಮಗಾಗಿ ಹೋರಾಡಿ ಪ್ರಾಣ ತ್ಯಾಗ ಮಾಡಿದಂತವರಿಗೆ ತೋರಿಸುತ್ತಿದ್ದ ಕೃತಜ್ಞತೆಯ ಸಂಕೇತವಲ್ಲದೆ ಬೇರೆ ಅಲ್ಲ. ಜನಪದ ವೀರಕಾವ್ಯಗಳೆಲ್ಲಾ ಈ ಮಾತಿಗೆ ಸಾಕ್ಷಿಯಾಗಿವೆ"[೭] ಎಂದು ಹೇಳಿದ ಮಾತು ಸತ್ಯವಾಗಿ ಕಾಣುತ್ತದೆ. ವೀರತ್ವಕ್ಕಾಗಿ ಮರಣಹೊಂದಿದವರೆಲ್ಲರೂ ಇಂದಿನ ಜನಸಮುದಾಯಗಳ ಸಾಂಸ್ಕೃತಿಕ ವೀರರಾಗಿ ಹಲವು ಆಚರಣೆಗೆ ಒಳಪಟ್ಟಿರುವುದು ಕಾಣಬಹುದಾಗಿದೆ. ಅದರ ಜೊತೆಗೆ ಕಥನಗೀತೆಗಳು ಸಹ ಅಷ್ಟೇ ರೂಢಿಯಲ್ಲಿರುವುದು ಕಂಡುಬರುತ್ತದೆ.

ಲಿಖಿತ ಚರಿತ್ರೆಗೆ ಆಕರವಾಗಿ ನಿಲ್ಲಬಲ್ಲ ಜನಪದ ಪ್ರಕಾರಗಳಲ್ಲಿ ಒಂದಾದ ಐತಿಹ್ಯವು ತನ್ನದೇ ಆದಂತಹ ವಿಶಿಷ್ಟ ನೆಲೆಯನ್ನು ಹೊಂದಿದೆ. ಜನ ಸಮುದಾಯದ ಮನೋಧರ್ಮದ ಮುದ್ರೆಯನ್ನೊತ್ತಿ

ಕೊಂಡು ಹುಟ್ಟಿದ ಐತಿಹ್ಯಗಳು ಜನರ ಸಾಂಸ್ಕೃತಿಕ ಬದುಕಿನ ಮೇಲೆ ಮಹತ್ತರವಾದ ಪರಿಣಾಮಗಳನ್ನು ಬೀರುತ್ತವೆ. ಹೀಗಾಗಿ ಐತಿಹ್ಯಗಳು ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವ ಪಡೆಯುತ್ತವೆ. ಐತಿಹ್ಯವು ವಾಸ್ತವವಾಗಿ ನಡೆದಿದೆಂದು ನಂಬಿಕೊಂಡು ಬಂದಿರುವ ಅಸಾಮಾನ್ಯ ಘಟನೆಯೊಂದರ ಕಥೆಯೇ ಐತಿಹ್ಯವೆನಿಸುವುದು. ಪ್ರಾಚೀನಕಾಲದ ಯಾವುದೇ ಒಂದು ಸಣ್ಣ ಚಾರಿತ್ರಿಕ ಘಟನೆಯ ಸುತ್ತ ಅದ್ಭುತವಾದ ಸನ್ನಿವೇಶಗಳು ಬೆಳೆದು ತಲೆಮಾರುಗಳ ಮೂಲಕ ಹರಿಯುವ ಕಥೆಯಾಗಿ ರೂಪುಗೊಂಡರೆ ಅಂಥವನ್ನೆ ಐತಿಹ್ಯವೆನ್ನಲಾಗುತ್ತದೆ[೭] ಭೂತಕಾಲದ ಘಟನೆಯ ವಸ್ತುವಿದ್ದರೂ ಆ ವಸ್ತುವಿಗೆ ಪರಂಪರೆಯಲ್ಲಿ ಕೆಲವು ಕಲ್ಪಿತ ವಿಚಾರಗಳು ಸೇರಬಹುದು ಅಥವಾ ಸೇರದೆಯೂ ಇರಬಹುದು. ಒಟ್ಟಾರೆಯಾಗಿ ಐತಿಹಾಸಿಕ ಭೌತಿಕ ವಿಚಾರಗಳು ವಸ್ತುಗಳಾಗಿರುತ್ತವೆ.

ಜನಪದರಲ್ಲಿರುವ ಕತೆ-ದಂತಕಥೆಗಳು ಇತ್ತೀಚಿನ ದಿನಗಳಲ್ಲಿ ಅವು 'ಐತಿಹ್ಯ' ಎಂಬ ಪದವನ್ನು ಸಂವಾದಿಯಾಗಿ ರೂಪಗೊಂಡಿದೆ. ಐತಿಹ್ಯ, ಚರಿತ್ರೆ ಒಂದು ಕಾಲದಲ್ಲಿ ನಡೆದ ಘಟನೆಯ ಸತ್ಯಸಂಗತಿಗಳನ್ನೆ ಅಭಿವ್ಯಕ್ತಿಸುವ ಗುರಿಯನ್ನು ಹೊಂದಿರುತ್ತವೆ. ಆದರೆ "ಇತಿಹಾಸದ ನಿರೂಪಕರು ಲಿಖಿತ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸತ್ಯ ಸಂಗತಿಯನ್ನು ತಾವು ಕಂಡಂತೆ ನಿರೂಪಿಸಿದರೆ, ಐತಿಹ್ಯ ನಿರೂಪಕರು(ಕತೆ ಅಥವಾ ದಂತಕಥೆಯ ನಿರೂಪಕರು) ಮೌಖಿಕ ಪರಂಪರೆಯ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸತ್ಯಸಂಗತಿಯನ್ನು ತಾವು ಕಂಡಂತೆ ನಿರೂಪಿಸುತ್ತಾರೆ."[೮] ಇಲ್ಲಿ ಮುಖ್ಯವಾಗಿ ವ್ಯತ್ಯಾಸ ಕಾಣುವುದು ಒಂದು ಆಕರಗಳಿಗೆ ಮತ್ತು ನಿರೂಪಣೆಗೆ ಮಾತ್ರ ಸಂಬಂಧಿಸಿದ್ದಾಗಿದೆ. ಒಂದು ಕಂಠಸ್ಥ ದಾಖಲೆಯನ್ನು ಮೌಖಿಕ ರೂಪದಲ್ಲಿ ಅಭಿವ್ಯಕ್ತಿಸಿದರೆ, ಇನ್ನೊಂದು ಲಿಖಿತ ದಾಖಲೆಗಳನ್ನು ಇಟ್ಟುಕೊಂಡು ಲಿಖಿತರೂಪದಲ್ಲಿ ಮಂಡಿಸುತ್ತದೆ.

ಜನಪದ ನಿರೂಪಕನು ದಂತಕತೆ ಅಥವಾ ಐತಿಹ್ಯಗಳನ್ನು ಹೇಳುವಾಗ ಅದಕ್ಕೆ ಒಂದು ಭೌತಿಕ ಆಧಾರವನ್ನು ತೋರಿಸುತ್ತಾನೆ. ಅದು ಯಾವುದಾದರೂ ವಸ್ತುವಾಗಿರಬಹುದು. ಸ್ಥಳ, ವ್ಯಕ್ತಿ, ಘಟನೆ, ಕಲ್ಲು ಅಥವಾ ಮನುಷ್ಯ ನಿರ್ಮಿಸಿದ ಸ್ಮಾರಕಗಳು ಇವೆಲ್ಲಾವೂ ಐತಿಹ್ಯಕ್ಕೆ ಆಧಾರವಾಗಿರುತ್ತವೆ. ಮುಖ್ಯವಾಗಿ ಭೌತಿಕ ಆಧಾರವಿಲ್ಲದೆ ಐತಿಹ್ಯವೊಂದು ಹುಟ್ಟಲಾರದೆಂದು ಹೇಳಬಹುದು.

ಐತಿಹ್ಯಗಳಿಂದ ಚರಿತ್ರೆಗೆ ವಿರುದ್ಧವಾದ ಮೌಖಿಕ ಚರಿತ್ರೆ ನಿರೂಪಿತವಾಗುತ್ತದೆ. ಯಾವುದು ಲಿಖಿತ ಇತಿಹಾಸದಿಂದ ತಿರಸ್ಕರಿಸಿರುವುದೋ ಅದನ್ನು ಜಾನಪದ ಇತಿಹಾಸ ಕಟ್ಟಿಕೊಡಲು ಯತ್ನಿಸುತ್ತದೆಂಬುದನ್ನು ಐತಿಹ್ಯಗಳ ಅಧ್ಯಯನದಿಂದ ತಿಳಿಯಬಹುದು. ಈ ಐತಿಹ್ಯಗಳು ಇತಿಹಾಸದ ರಚನೆಗೆ ಪ್ರಾಥಮಿಕ ಅಲ್ಲದಿದ್ದರೂ ಆನುಷಂಗಿಕ ಆಕರ ಸಾಮಗ್ರಿಗಳಾಗಿ ಬಳಸಿಕೊಳ್ಳಬಹುದು. ಆದರೆ ಇಂಥಲ್ಲಿ ಬಹಳ ಎಚ್ಚರಿಕೆ ಮತ್ತು ಸೂಕ್ಷ್ಮಕಲ್ಪನೆ ಬೇಕಾಗುತ್ತದೆ.

ಜಾನಪದ ಇತಿಹಾಸವನ್ನು ಮತ್ತು ಲಿಖಿತ ಇತಿಹಾಸವನ್ನು ಬೇರೆ ಬೇರೆಯಾಗಿ ನೋಡಲು ಬರುವುದಿಲ್ಲ. ಇವೆರಡು ಒಂದಕ್ಕೊಂದು ಆಧಾರವೆಂಬಂತೆ ಇರುವುದನ್ನು ಕಾಣಬಹುದು. ಚಾರಿತ್ರಿಕ ಘಟನೆಗಳು ಯಾವುದೋ ಕಾಲದಲ್ಲಿ ನಡೆದಿದ್ದನ್ನು ಜನಪದರು ತಮ್ಮ ಕಾಲಕ್ಕನುಗುಣವಾಗಿ ಆಧುನಿಕತೆಯೊಂದಿಗೆ ಅಭಿವ್ಯಕ್ತಿಸುವ ಜಾಣ್ಮೆಯನ್ನು ಹೊಂದಿರುತ್ತಾರೆ. ಆದರೆ ಮೌಖಿಕ ಚರಿತ್ರೆಯು ಕಾಲ ಮತ್ತು ಸ್ಥಳದ ನಿರ್ದಿಷ್ಟತೆಯ ಹಾದಿ ತುಳಿದಾಗ ಸೋಲುತ್ತದೆ. ಇದನ್ನೇ ಶಿವರಾಮ ಶೆಟ್ಟಿಯವರು 'ಮೌಖಿಕ ಆಕರಗಳನ್ನು ಲಿಖಿತ ಆಕರಗಳಿಗೆ ಹೋಲಿಸಿದರೆ, ಮೌಖಿಕ ಆಕರಗಳು ದುರ್ಬಲವಾಗಿ ಕಾಣಿಸುತ್ತದೆ. ಯಾಕೆಂದರೆ ಮೌಖಿಕ ಆಕರಕ್ಕೆ ನಿಶ್ಚಿತ ಆಕಾರವಿಲ್ಲ. ಅದರ ಘಟನಾ ಕಾಲಸೂಚಿಯೂ ಅನಿಶ್ಚಿತ. ಅದರ ಸಂವಹನಕ್ಕೂ ಯಾವುದೇ ಆಧಾರಗಳಿಲ್ಲ. ಈ ರೀತಿಯ ಪ್ರತಿಪಾದನೆಯಿಂದಾಗಿ ರೂಪ, ಕಾಲ, ಸಂವಹನದ ನೆಲೆಯಲ್ಲಿ ಅಕ್ಷರ ಪವಿತ್ರ, ವಾಸ್ತವಿಕ, ಭೌತಿಕ, ಅಧಿಕೃತವೆಂದಾಗುತ್ತದೆ. ಅದರ ಎದುರು ಮೌಖಿಕ ಅಪವಿತ್ರ, ಕಾಲ್ಪನಿಕ, ಮಾನಸಿಕ, ಅನಧಿಕೃತವೆಂದಾಗುತ್ತದೆ. ಲಿಖಿತವನ್ನು ಭೌತಿಕ, ವಾಸ್ತವಿಕ ಹಾಗೂ ಮೌಖಿಕವನ್ನು ಮಾನಸಿಕ, ಕಾಲ್ಪನಿಕ ಅನ್ನುವ ಈ ವರ್ಗೀಕರಣದಲ್ಲಿ ಮೌಲ್ಯಾತ್ಮಕವಾದ ಶ್ರೇಣಿಕರಣವಿದೆ. ಆ ಮೂಲಕ ಅಕ್ಷರಕ್ಕೆ ಶುದ್ಧತೆಯ, ಪಾವಿತ್ರ್ಯದ ಗುಣಗಳನ್ನು ಧಾರೆ ಎರೆಯಲಾಗುತ್ತದೆ. ಹಾಗೆಯೇ ಮೌಖಿಕಕತೆಯಲ್ಲಿ ಅನಿಶ್ಚಿತತೆಯ ದೋಷವನ್ನು ಆರೋಪಿಸಲಾಗುತ್ತಿದೆ'[೧೦] ಎಂದು ಹೇಳುತ್ತಾರೆ.

ಜನಪದ ಸಾಹಿತ್ಯವು ಒಂದು ನಿರ್ದಿಷ್ಟ ಕಾಲವನ್ನು ಮತ್ತು ಸ್ಥಳವನ್ನು ನಿರ್ಣಯ ಮಾಡಲು ಸೋಲಬಹುದು. ಆದರೆ ಆ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುವ ವಿಚಾರಗಳ ಮೇಲೆ ಊಹಿತ ಕಾಲವನ್ನು ಮತ್ತು ಸ್ಥಳವನ್ನು ನಿರ್ಣಯ ಮಾಡಬಹುದು. 'ಯಾವುದೋ ನಿರ್ದಿಷ್ಟ ಕಾಲದಲ್ಲಿ ಬಳಕೆಯಲ್ಲಿದ್ದ ಸಂಪ್ರದಾಯಗಳ ಬಗೆಗೆ, ಹೋರಾಡುವ ರೀತಿಯ ಬಗೆಗೆ, ಅಂದಿನ ಜನ ಧರಿಸುತ್ತಿದ್ದ ಪೋಷಾಕು, ಬಳಸುತ್ತಿದ್ದ ಆಯುಧ, ಯುದ್ಧಕ್ಕೆ ಹೋರಾಡುತ್ತಿದ್ದ ರೀತಿ, ಪೂಜಿಸುತ್ತಿದ್ದ ದೇವರು ಇತ್ಯಾದಿಗಳ ಬಗೆಗೆ ವಿವರ ಕೊಡಬಹುದು.'[೧೧] ಈ ವಿವರಗಳ ಹಿನ್ನೆಲೆಯಲ್ಲಿ ಯಾವ ಪ್ರದೇಶದಲ್ಲಿ ಈ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದರು. ಅಥವಾ ಯಾವ ಸಂದರ್ಭದಲ್ಲಿ ಧರಿಸುತ್ತಿದ್ದರು ಎಂಬ ಆಧಾರದಿಂದ ಕಾಲ ಮತ್ತು ಸ್ಥಳ ನಿರ್ಧರಿಸಬಹುದು.

ಜನಪದ ಸಾಹಿತ್ಯವು ಕಾಲಗಣನೆಯ ವಿಚಾರವನ್ನೇ ಎತ್ತುವುದಿಲ್ಲ. ಇದರಿಂದ ಬೇರೆ ಶಾಸ್ತ್ರದ ವಿದ್ವಾಂಸರು ಬಳಸಿಕೊಳ್ಳುವಾಗ ಮಾತ್ರ ಇದು ಚರ್ಚೆಗೆ ಒಳಗೊಳ್ಳುತ್ತದೆ. 'ಮೌಖಿಕ ಚರಿತ್ರೆಯಲ್ಲಿ ಕಾಲ ಮತ್ತು ನಿರ್ದಿಷ್ಟತೆಯು ಏಕರೂಪದ ಸರಳ ರೇಖಾತ್ಮಕ ಪಂಚಾಂಗೀಯ ನೆಲೆಯಲ್ಲಿ ಗ್ರಹಿಸಲ್ಪಡುವುದಿಲ್ಲ. ಅದರ ಬದಲಾಗಿ ಸಾಮಾಜಿಕ ಪ್ರಕ್ರಿಯೆಗಳು ಹಾಗೂ ಸಂಕಥನಗಳ ಮೂಲಕ ಕಾಲವನ್ನು ಅರ್ಥಮಾಡಿಕೊಳ್ಳಲಾಗುತ್ತದೆ. ಎಲ್ಲಾ ಕಡೆಯು ಒಂದೇ ಆಗಿರುವ ವಿಕಾಸವಾದದ, ಏಕರೂಪದ ಕಾಲವನ್ನು ಮೌಖಿಕ ಚರಿತ್ರೆ ಅಲ್ಲಗೆಳೆಯುತ್ತದೆ.'[೧೨] ಇದಕ್ಕೆ ಜಾನಪದ ವಿದ್ವಾಂಸರು

'ಇತಿಹಾಸವು ಸಂಪೂರ್ಣವಾಗಿ ಕಾಲದ ಮೇಲೆ ಅವಲಂಬಿತವಾಗಿದ್ದರೆ, ಜನಪದ ಸಾಹಿತ್ಯವು ಸಂಪೂರ್ಣವಾಗಿ ಕಾಲಾತೀತವಾದದ್ದು" ಎಂದು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ.[೧]

ಮೌಖಿಕ ಚರಿತ್ರೆಯನ್ನು ಇತಿಹಾಸ ಪುನರ್ ರಚಿಸುವಾಗ ಕಾಲದ ನಿರ್ದಿಷ್ಟತೆ, ಸ್ಥಳದ ನಿರ್ದಿಷ್ಟತೆ ಮತ್ತು ಸಂವಹನದ ನಿರ್ದಿಷ್ಟತೆಗಳು ಸಮಸ್ಯೆಗಳ ಸರಮಾಲೆಯಾಗಿ ಕಾಣಿಸಿಕೊಳ್ಳುತ್ತವೆ. ಇದರಂತೆ ಲಿಖಿತ ಇತಿಹಾಸವನ್ನು ರಚಿಸುವಾಗ ಬಳಸಿಕೊಳ್ಳುವ ಆಕರ ಸಾಮಾಗ್ರಿಗಳ ಕುರಿತೇ ಇತಿಹಾಸದಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿರುವುದು ಕಂಡುಬರುತ್ತದೆ. "ಲಿಖಿತ ದಾಖಲೆಗಳ ಆಕರ ಸಾಮಗ್ರಿಗಳೇ ಇತಿಹಾಸ ರಚನೆಗೆ ಮೂಲ ಸಾಮಗ್ರಿಗಳಾಗಿ ಬಳಸಬೇಕೆಂಬುದು ಒಂದು ವಾದ. ಲಿಖಿತ ದಾಖಲೆಯ ಸಾಮಗ್ರಿಗಳಿಗೂ ಮತ್ತು ಕಂಠಸ್ಥ ಪರಂಪರೆಯ ಸಾಮಾಗ್ರಿಗಳಿಗೂ ಪರಸ್ಪರ ವಿರೋಧಾಭಾಸಗಳಿವೆ ಎಂಬುದು ಮತ್ತೊಂದು. ಲಿಖಿತ ದಾಖಲೆಯ ಸಾಮಗ್ರಿಗಳು ಎಷ್ಟೋ ಸಂದರ್ಭಗಳಲ್ಲಿ ಸತ್ಯವನ್ನು ಮರೆಮಾಚುತ್ತವೆ. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಕಂಠಸ್ಥ ಪರಂಪರೆಯು ದಾಖಲೆಗಳೇ ಪ್ರಧಾನವಾಗಬೇಕು ಎನ್ನುವ ವಾದಗಳಿವೆ. ಕಂಠಸ್ತ ಪರಂಪರೆಯ ದಾಖಲೆ ಸಾಮಗ್ರಿಗಳಲ್ಲಿ ಅಸ್ಪಷ್ಟತೆ, ಸಂಕೀರ್ಣತೆ, ಬಿಡಿಸಲಾಗದ ಸಮಸ್ಯೆಗಳಿವೆ ಎನ್ನುವ ಕಾರಣಕ್ಕಾಗಿ ಇತಿಹಾಸಕಾರರು ಈ ಸಾಮಗ್ರಿಗಳನ್ನು ದೂರವಿಡುತ್ತಾರೆ."[೧೪] ಮೌಖಿಕ ಸಾಮಗ್ರಿಯಂತೆ ಲಿಖಿತ ಸಾಮಗ್ರಿಗಳಲ್ಲಿಯೂ ಅಸತ್ಯ ಮತ್ತು ಕೆಲವು ವಿಚಾರಗಳ ಸೇರುವಿಕೆ ಅಥವಾ ಕೆಲವು ವಿಚಾರಗಳು ಮರೆ ಮಾಚುವುದು ತಿಳಿಯುತ್ತದೆ.

ಲಿಖಿತ ಸಾಮಗ್ರಿಗಳಲ್ಲಿ ಒಂದಾಗಿರುವ ಶಾಸನವು ಸಹ ನೇರವಾಗಿ ವಿಚಾರವನ್ನು ಹೇಳದೇ ಇರಬಹುದು ಎಂಬುದನ್ನು ಇಲ್ಲಿ ಕಾಣಬಹುದು. 'ಯಾವುದೇ ಒಂದು ಶಾಸನದಿಂದ ನೇರವಾದ ಇತಿಹಾಸ ಸಾಮಗ್ರಿಯು ಸಿಕ್ಕುವುದು ಕಡಿಮೆ. ಅವನ್ನು ಇತರ ಶಾಸನಗಳೊಂದಿಗೆ ಹೋಲಿಸಿ ನೋಡಬೇಕಾಗುತ್ತದೆ. ಅನೇಕ ಶಾಸನಗಳಿಂದ ವಿಶೇಷ ಸಂಗತಿ ಹೊರಡಲಿಕ್ಕೂ ಇಲ್ಲ. ಇವನ್ನುಳಿದು ಕೆಲವು ಖೊಟ್ಟಿ ಶಾಸನಗಳೂ ಇರುತ್ತವೆ ಎಂಬುದರ ಕುರಿತು ಫ್ಲೀಟ್ ಗರ್ಲರಂದು ರೋಮ್ ನಲ್ಲಿ ನಡೆದ ಪ್ರಾಚ್ಯ ವಿಷಯಕ ಸಮ್ಮೇಳನದಲ್ಲಿ ಪ್ರಬಂಧವನ್ನು ಓದಿ ಸಂಶೋಧಕರಿಗೆ ಎಚ್ಚರಿಕೆಯನ್ನಿತ್ತಿದ್ದಾನೆ. ಇಂಥ ಶಾಸನಗಳ ಖೊಟ್ಟಿತನವನ್ನು ಕಂಡು ಹಿಡಿಯಲು ಅನುಕೂಲವಾಗುವಂತೆ ಕೆಲವು ಮಾದರಿಗಳನ್ನು ಸಹ ಅದರಲ್ಲಿ ಕೊಟ್ಟಿದ್ದಾನೆ.[೧೫] ಒಂದೇ ವಸ್ತುವನ್ನೊಳಗೊಂಡ ಹಲವಾರು ಆಕರ ಸಾಮಗ್ರಿಗಳು ಲಿಖಿತ ಪರಂಪರೆಯಲ್ಲಿ ದೊರೆಯುತ್ತವೆಂಬುದು ಮೇಲಿನ ವಿಷಯದಿಂದ ಸ್ಪಷ್ಟವಾಗುತ್ತದೆ.

ಮೇಲಿನ ವಿದ್ವಾಂಸರ ಮಾತುಗಳಿಂದ ಎರಡೂ ಪರಂಪರೆಯ ಚರಿತ್ರೆಗಳಲ್ಲಿ ಪಾಠಾಂತರಗಳುಳ್ಳ ಆಕರಗಳು ದೊರೆಯುತ್ತವೆ. ಅವುಗಳಲ್ಲಿ ಒಂದು ಘಟನೆಯನ್ನು ನೇರವಾಗಿ ಹೇಳಬಹುದು ಅಥವಾ ಹೇಳದೆ ಮರೆ ಮಾಚಬಹುದು. ಅಂತಹ ವಿಚಾರದಲ್ಲಿ ಹಲವು ಪಾಠಾಂತರಗಳನ್ನು ಒಂದು ಕಡೆ ಕಲೆಹಾಕಿ ನಾವು ಘಟನೆಯ ಸತ್ಯಕ್ಕೆ ಹತ್ತಿರವಾಗಿರುತ್ತವೆಂಬುದನ್ನು ಪರಿಶೀಲಿಸಿ, ಅನಂತರ ಮೂಲ ಆಕರ

ಸಾಮಗ್ರಿಯಾಗಿ ಬಳಸಿಕೊಳ್ಳಬೇಕಾಗುತ್ತದೆ. ಹೀಗೆ ಬಳಸಿಕೊಂಡು ಅಧ್ಯಯನ ಮಾಡುವ ಅಧ್ಯಯನಕಾರನಿಗೆ ಇತಿಹಾಸ ಮತ್ತು ಜಾನಪದದ ಬಗೆಗಿನ ಜ್ಞಾನ ಅತ್ಯಗತ್ಯ.

ಇತಿಹಾಸವು ಘಟನೆಯ ಸತ್ಯವಾಗಿದ್ದರೆ, ಜಾನಪದವು ಭಾವನೆಯ ಸತ್ಯವಾಗಿರುತ್ತದೆ. ಇತಿಹಾಸದ ನಿರೂಪಕರು ಲಿಖಿತ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸತ್ಯಸಂಗತಿಯನ್ನು ತಾವು ಕಂಡಂತೆ ನಿರೂಪಿಸಿದರೆ, ಜಾನಪದ ನಿರೂಪಕರು ಮೌಖಿಕ ಪರಂಪರೆಯ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸತ್ಯಸಂಗತಿಯನ್ನು ತಾವು ಕಂಡಂತೆ ನಿರೂಪಿಸುತ್ತಾರೆ. ಒಂದು ಲಿಖಿತ ದಾಖಲೆಗಳನ್ನು ಲಿಖಿತ ರೂಪದಲ್ಲಿ ಮರುಮಂಡನೆ ಮಾಡಿದರೆ ಇನ್ನೊಂದು ಕಂಠಸ್ಥ ದಾಖಲೆಗಳನ್ನು ಮೌಖಿಕ ರೂಪದಲ್ಲಿ ಮಂಡಿಸುತ್ತದೆ. ಆಧಾರಗಳಿಲ್ಲದ ಎರಡೂ ಬಗೆಯ ನಿರೂಪಣೆಗಳು ಸೃಷ್ಟಿಯಾಗಲಾರವು ಮೌಖಿಕ ಆಕರಗಳ ಮೂಲಕ ಇತಿಹಾಸವನ್ನು ಪುನರ್ ರಚನೆ ಮಾಡುವವನು ಮೌಖಿಕ ಮಾಧ್ಯಮದಿಂದ ಅಕ್ಷರಮಾಧ್ಯಮಕ್ಕೆ ವಿಷಯಗಳನ್ನು ದಾಟಿಸಬೇಕಾಗುತ್ತದೆ.[೧೧] ಇತಿಹಾಸಕ್ಕೂ, ಜಾನಪದಕ್ಕೂ ಒಂದೇ ಘಟನೆಗಳ ಆಧಾರದ ಮೇಲೆ ಸತ್ಯಗಳನ್ನು ಹೇಳುತ್ತವೆ. ಜಾನಪದವು ಮಾನವನ ಬದುಕಿನ ಅಂತರಾಳವನ್ನು ಪ್ರತಿನಿಧಿಸುತ್ತದೆ. ಅದು ಯಾವುದನ್ನು ತಿರಸ್ಕರಿಸದೇ ಲೋಕದ ಸಾಂಸ್ಕೃತಿಕ ಚೌಕಟ್ಟನ್ನು ಪ್ರತಿನಿಧಿಸುತ್ತದೆ. ಜಾನಪದ ಯಾವುದೋ ಒಂದು ಕಾಲದಲ್ಲಿ ಹುಟ್ಟಿದ ಶಕ್ತಿಯಲ್ಲ. ಅದು ಪರಂಪರೆಯಿಂದಲೂ ಚಾಲ್ತಿಯಲ್ಲಿರುವ ವಿಚಾರವನ್ನು ಪೀಳಿಗೆಯಿಂದ ಪೀಳಿಗೆಗೆ ತಮ್ಮ ಭಾವನೆಯಿಂದ ಅಭಿವ್ಯಕ್ತಿಕೊಂಡು ಬಂದಿರುವುದು ಕಾಣಬಹುದು.

ಲಿಖಿತ ಇತಿಹಾಸವು ಪ್ರಧಾನ ಸಮಾಜವನ್ನು ಎತ್ತಿ ಹಿಡಿದು, ಅಪ್ರಧಾನ ಸಮಾಜವನ್ನು ಕೈಬಿಟ್ಟಿರುವುದು ಕಾಣಬಹುದು. ಬರಹದ ಇತಿಹಾಸ ನಿರ್ಲಕ್ಷಿಸಿದ ಅನೇಕ ಐತಿಹಾಸಿಕ ಘಟನೆಗಳನ್ನು ಮೌಖಿಕ ಪರಂಪರೆ ದಾಖಲಿಸಿಕೊಳ್ಳುವ ಪ್ರಯತ್ನ ಮಾಡಿದೆ. ಹಾಗಾಗಿಯೇ ಪ್ರಧಾನಧಾರೆಯ ಇತಿಹಾಸವನ್ನು ಬಿಟ್ಟು, ನಿರ್ಲಕ್ಷಿಸಿದ ಇತಿಹಾಸವನ್ನು ಕುರಿತು ಮೌಖಿಕ ಪರಂಪರೆ ಪರಿಚಯಿಸುತ್ತದೆ. ಹೀಗೆ ಹೇಳುವ ಮೌಖಿಕ ಪರಂಪರೆಯ ಇತಿಹಾಸವನ್ನು ಇಬ್ಬರು ವಿದ್ವಾಂಸರು ಅನುಸಂಧಾನದ ಮೂಲಕ ಅತಿಮಾನುಷ ವಿಚಾರಗಳನ್ನು ಕೈಬಿಡಬೇಕಾಗುತ್ತದೆ. ಅದಕ್ಕೆ ಪ್ರೊ. ಲಕ್ಷ್ಮಣ್ ತೆಲಗಾವಿಯವರು ಜಾನಪದದಲ್ಲಿ ಹುದುಗಿಕೊಂಡಿರುವ ಚಾರಿತ್ರಿಕ ಅಂಶಗಳನ್ನಷ್ಟೇ ಬೆದಕಿ ತೆಗೆಯಬೇಕಾಗಿರುವುದುದರಿಂದ ಅವೆರಡರ ನಡುವಣ ಸಂಬಂಧವನ್ನು ಇಲ್ಲಿ ಸ್ಥೂಲವಾಗಿಯಾದರೂ ಗಮನಿಸಬೇಕಾಗುತ್ತದೆ. ಜಾನಪದದಲ್ಲಿ ಅಂತರ್ಗತವಾಗಿರುವ ಸಂಗತಿಗಳನ್ನು ಬೇರ್ಪಡಿಸುವಲ್ಲಿ ಅನುಸರಿಸಬೇಕಾದ ಕ್ರಮ, ಅಗತ್ಯವಿರುವ ಪರಿಕರ, ಗೊತ್ತು ಪಡಿಸಬೇಕಾದ ನಿರ್ದಿಷ್ಟ ಅವಧಿ-ಮೊದಲಾದ ಅಂಶಗಳನ್ನು ಸೂತ್ರೀಕರಿಸುವುದು ಕಷ್ಟವೆನಿಸುತ್ತದೆ.[೧೨] ಮೇಲಿನ ವಿಚಾರವನ್ನು ನೋಡಿದರೆ ಕೆಲಮಟ್ಟಿಗಾದರೂ ಚರಿತ್ರೆಯ ಇತರೆ ಆಕರಗಳಂತೆ ಮೌಖಿಕ ಚರಿತ್ರೆಯು ಆಕರವಾಗುತ್ತದೆ ಎನ್ನಬಹುದು. ಮೌಖಿಕ ಚರಿತ್ರೆಯು ಸಂಪೂರ್ಣವಾಗಿ ಚರಿತ್ರೆಯ

ಸತ್ಯವನ್ನು ಬಿಚ್ಚಿಡಲಾರದಿದ್ದರೂ ಹಲವಾರು ಚಾರಿತ್ರಿಕ ಎಳೆಗಳನ್ನು ತನ್ಮೂಲಕ ಪಸರಿಸುತ್ತದೆ. ಇತಿಹಾಸವೆಂಬುದು ಜನಸಮುದಾಯಗಳಲ್ಲಿ ಮೌಖಿಕಗೊಂಡು ಶಿಷ್ಟಪದದ ಮಾರುವೇಷದಲ್ಲಿ ಸತ್ಯವನ್ನು ಅಂತರಂಗದಲ್ಲಿ ಅಡಗಿಸಿಟ್ಟುಕೊಂಡಿರುತ್ತದೆ. ಮಾರುವೇಷವನ್ನು ಜಾಗರೂಕತೆಯಿಂದ ಬಿಡಿಸಿದಲ್ಲಿ ಚರಿತ್ರೆಯ ನಿಜಾಂಶವನ್ನು ಹೆಕ್ಕಿಕೊಳ್ಳಬಹುದು.

ಇತಿಹಾಸವನ್ನು ಹೇಳುವ ಪರಿಕರಗಳಾಗಿ ನಿಲ್ಲುವ ಶಾಸನಗಳು, ತಾಮ್ರಪಟಗಳು; ಚರಿತ್ರೆಯನ್ನೊಳಗೊಂಡ ಸಾಹಿತ್ಯ ಕೃತಿಗಳು ಇವೆಲ್ಲವೂ ಭವಿಷ್ಯತ್ತಿನ ದಾಖಲೆಗಳಾಗಿ ನಿಲ್ಲಲು ಸಹಾಯವಾಗುತ್ತವೆ. ಆದರೆ ಮೌಖಿಕ ಅಥವಾ ಕಂಠಸ್ಥ ಪರಂಪರೆಯು ಅಂದಿನ ಘಟನೆಯ ಸುಖಕ್ಕಾಗಿಯೋ ಅಥವಾ ಸಂತೋಷಕ್ಕಾಗಿಯೋ, ದುಃಖಕ್ಕಾಗಿಯೋ ಹುಟ್ಟಿದ್ದನ್ನು ಹಾಡಿ ಹೊಗಳಿದ್ದುಂಟು. ಇದನ್ನು ಯಾರೂ ಸಹ ಮುಂದಿನ ಪೀಳಿಗೆಗೆ ಒಂದು ದಾಖಲೆಯಾಗಿಸಿಡಬೇಕೆಂದು ಪ್ರಯತ್ನಿಸಿದವರಿಲ್ಲ. ಜಾನಪದರು ಇದನ್ನು ತಾವು ಹಾಡುಗಳೊಂದಿಗೆ ಭಾವನಾತ್ಮಕವಾಗಿ ಬೆರೆತು ಮನಸ್ಸಂತೋಷವಾಗಿ ಅದರಲ್ಲಿಯೇ ಮುಳುಗಿ ಹಾಡನ್ನು ಕಲಿತು ಪರಂಪರೆಯಲ್ಲಿರಿಸಿಕೊಂಡು ಉಳಿಸಿಕೊಂಡು ಬಂದಿದ್ದಾರೆ. ಒಂದಂತೂ ಸತ್ಯ ಜನಪದರು ಬದುಕಿನಲ್ಲಿ ತಾವು ಕಂಡುಂಡ ಘಟನೆಗಳನ್ನು ಕಥೆ, ಕಾವ್ಯ, ಗಾದೆ, ಒಗಟು ಮತ್ತು ಮಹಾಕಾವ್ಯಗಳ ಮೂಲಕ ಅಂದಿನ ಸಾಂದರ್ಭಿಕ ಇತಿಹಾಸವನ್ನು ದಾಖಲಿಸಿದ್ದಾರೆ. ಇತಿಹಾಸ ನಿರ್ಮಾಣದಲ್ಲಿ ಲಿಖಿತ ದಾಖಲೆಗಳಿಗಿಂತ ಭಿನ್ನವಾದ ದಾಖಲೆಗಳನ್ನು ಈ ಮೌಖಿಕ ಪರಂಪರೆಯಲ್ಲಿ ನಾವು ನೋಡಬಹುದು. ಉದಾಹರಣೆಗೆ ಲಿಖಿತ ಆಕರಗಳಲ್ಲಿಯ ರಾಮಯಣ ಕಥೆಗಿಂತ ಭಿನ್ನವಾದ ರಾಮಾಯಣದ ಕಥೆಯೊಂದನ್ನು ನಮ್ಮ ಮೌಖಿಕ ಕಾವ್ಯಗಳಲ್ಲಿ ಕಾಣಬಹುದು.

ಜನಪದ ಪರಂಪರೆಗೂ ಮತ್ತು ಇತಿಹಾಸದ ಪರಂಪರೆಗೂ ಯಾವುದೋ ಒಂದು ಕಾಲದ ಘಟನೆಗಳೇ ವಸ್ತುಗಳಾಗಿರುತ್ತವೆ. ಜನಪದದಲ್ಲಿ ಉತ್ಪ್ರೇಕ್ಷೆಗಳಿವೆಯೆಂದು ಇದನ್ನು ನಿರ್ಲಕ್ಷೆಗೆ ಒಳಪಡಿಸಿದ್ದಾರೆ. ಆದರೆ ಇತಿಹಾಸ ಮಾತ್ರ ದಾಖಲೆಯಾಗಿ ನಿಲ್ಲುತ್ತದೆ. ಜನಪದ ಹಾಗಾಗುವುದಿಲ್ಲ. ಇದಕ್ಕೆ ವಿವೇಕ ರೈರವರು 'ಇತಿಹಾಸದ ವಿಶಿಷ್ಟವಾದ ಘಟನೆಗಳೆಲ್ಲವೂ ಲಿಖಿತ ರೂಪದಲ್ಲಿ ದಾಖಲೆಗೊಳ್ಳುವುದಿಲ್ಲ. ಇತಿಹಾಸದ ಘಟನೆಯೊಂದನ್ನು ಕಣ್ಣಾರೆ ನೋಡಿದ ಜನರೆಲ್ಲರೂ ಅವುಗಳನ್ನು ಬರೆದಿಡಲು ಶಕ್ತರಾಗಿರುವುದಿಲ್ಲ. ಇತಿಹಾಸದ ಘಟನೆಗಳನ್ನ ನೋಡಿದ ಮತ್ತು ಅದರಲ್ಲಿ ಭಾಗವಹಿಸಿದ ಬಹುಪಾಲು ಮಂದಿಗೆ ಬರೆಯುವುದಕ್ಕೆ ಗೊತ್ತಿರುವುದಿಲ್ಲ. ಅಂದರೆ ಅಕ್ಷರಜ್ಞಾನ ಇರುವುದಿಲ್ಲ. ಆದರೆ ಇಂತಹ ಘಟನೆಗಳು ಅನಕ್ಷರಸ್ಥ ಜನಪದರ ಸ್ಮರಣೆಯ ಭಾಗವಾಗಿ ಉಳಿದುಕೊಂಡು ಕಂಠಸ್ಥ ಪರಂಪರೆಗೇ ಸೇರಿ ಹೋಗುತ್ತದೆ.'[೧೮] ಕೆಲವು ಬಾರಿ ನಡೆದ ಘಟನೆಯ ಅಂಶಗಳನ್ನು ದಾಖಲಿಸಿಡಲು ಸಾಧ್ಯವಾಗಿಲ್ಲ. ಅದು ಯುದ್ಧದ ಸಂದರ್ಭವಾಗಿರಬಹುದು ಅಥವಾ ಇನ್ನೋರ್ವ ಅತಿಕ್ರಮಣದಿಂದ ಆಕ್ರಮಿಸಿದಾಗ ಆಗಿರಬಹುದು. ಇಂತಹ ಸಂದರ್ಭಗಳಲ್ಲಿ ದಾಖಲೆಗಳು ನಡೆದಿಲ್ಲದಿರಬಹುದು. ಇಂತಹ ಸಂದರ್ಭದಲ್ಲಿ ಜನರು

ತಮ್ಮನ್ನು ತಾವು ತೊಡಗಿಸಿಕೊಂಡು ಈ ಘಟನೆಗಳಲ್ಲಿ ಭಾಗವಹಿಸಿ ನಡೆದ ಘಟನೆಯ ಅಂಶಗಳನ್ನು ಅನಕ್ಷರಸ್ಥ ಜಗತ್ತು ಸ್ಮರಣೆಯಲ್ಲಿಟ್ಟುಕೊಂಡು ಇಂದು ನಮಗೆ ದಾಖಲೆಗಳಾಗಿಸಿವೆ.

ಯಾವ ದೇಶದ ಸಾಹಿತ್ಯವನ್ನು ತೆಗೆದುಕೊಂಡರೂ ಜಾನಪದ ಸತ್ವ-ಸಾರ, ಸಹಕಾರ, ಸಹಾಯ ಪ್ರಭಾವಗಳಿಂದಲೇ ಪ್ರೇರೇಪಣೆಯಿಂದ ಪೋಷಿತಗೊಂಡು ಬೆಳೆದು ಬಂದಿದೆ ಎಂದು ಹೇಳಬಹುದು. ಯಾವುದೇ ದೇಶದ ಮೊದಲ ಸಾಹಿತ್ಯವೆಂದರೆ ಅದು ಜಾನಪದ ಕಡೆಗೆ ತಿರುಗಿ ಅಲ್ಲಿಂದ ಲಿಖಿತ ಸಾಹಿತ್ಯದ ಕಡೆಗೆ ನಂತರ ನೋಡಬೇಕಾಗುತ್ತದೆ. ಇತಿಹಾಸದ ಲಿಖಿತ ಆಕರಗಳು ವಿಪುಲವಾಗಿ ದೊರೆತರೂ ಜಾನಪದವನ್ನು ನಿರ್ಲಕ್ಷಿಸಲು ಬರುವುದಿಲ್ಲ. ಬಹುಪಾಲು ಅನಕ್ಷರಸ್ಥ ಜನಸಮೂಹದಿಂದಲೇ ತುಂಬಿದ್ದರಿಂದ ಜನತೆಯ ಸಮಗ್ರ ಅನುಭವವು ನಿತ್ಯ ನಿರಂತರವಾಗಿ ತನ್ನ ಜೀವಂತಿಕೆಯನ್ನು ಕಂಠಸ್ಥ ಸಂಪ್ರದಾಯ ಉಳಿಸಿಕೊಂಡು ಬಂದಿದೆ. ಡಾ.ಅಂಬಳಿಕೆ ಹಿರಿಯಣ್ಣರವರ ಪ್ರಕಾರ 'ಜಾನಪದವು ಜನಪದರದ್ದಾಗಿದ್ದ ಜನಪದರಿಂದಲೇ ಜನಪದರಗಾಗಿ ಸೃಷ್ಟಿಯಾದಂತಹುದು' ಎನ್ನುವುದು ಸತ್ಯವಾದುದಾಗಿದೆ.[೯]

ಜಾನಪದ ಇಂದು ನಿನ್ನೆಯದಲ್ಲ. ಪುರಾಣದ ಮಹಾಕಾವ್ಯಗಳ ಕರ್ತೃಗಳು ಸಹ ಅಜ್ಞಾತ ಜನಪದ ಕವಿಗಳಿಗೆ ನಾನಾ ರೀತಿಯಲ್ಲಿ ಋಣಿಯಾಗಿರುವುದು ಕಾಣಬಹುದಾಗಿದೆ. ಈ ಮಹಾಕಾವ್ಯಗಳು ಎಲ್ಲಾ ಪ್ರದೇಶಗಳಲ್ಲಿಯೂ ಆಯಾಪ್ರದೇಶದ ಮಹಾಕಾವ್ಯಗಳಾಗಿ ಪ್ರಚಲಿತವಿರುವುದು ಕಂಡುಬರುತ್ತದೆ. ಜನಪದರು ಪುರಾಣ ಮಹಾಕಾವ್ಯಗಳನ್ನು ಹಾಡುವಂತೆ ತಮ್ಮ ನಡುವೆಯೇ ಜನಿಸಿ, ಬಾಳಿ ಅಳಿದ ಇತಿಹಾಸವನ್ನು ಸೇರಿದ ವ್ಯಕ್ತಿಗಳನ್ನು ಹಾಡಿ ಕೊಂಡಾಡಿರುವುದು ಕಂಠಸ್ಥ ಪರಂಪರೆಯಿಂದ ಅರಿಯಬಹುದಾಗಿದೆ. ದೊಡ್ಡ ಸಾಮ್ರಾಜ್ಯಗಳನ್ನು ಜನಪದ ಪರಂಪರೆಯು ಯಾವುದೇ ರೀತಿಯ ಸಾಹಿತ್ಯವನ್ನು ಹೊಂದಿಲ್ಲದೆ ಇರುವುದನ್ನು ಕಾಣಬಹುದು. ಅಂದರೆ ಇವರ ಬಗೆಗೆ ಸಾಹಿತ್ಯ ಉದಯವಾಗಿಲ್ಲದಿರುವುದು ಅವರ ಕೇಂದ್ರೀಕೃತ ವ್ಯವಸ್ಥೆಯನ್ನು ಧಿಕ್ಕರಿಸಿರುವುದು ಅರಿವಾಗುತ್ತದೆ. ವಿಕೇಂದ್ರೀಕರಣದ ರೂವಾರಿಗಳಾಗಿದ್ದ ಪಾಳೇಗಾರರ ಕಾಲದಲ್ಲೇ ಜನಪದ ಸಾಹಿತ್ಯ ಹುಟ್ಟಿರುವುದು. ಪಾಳೇಗಾರರು ಜನ ಸಮುದಾಯಗಳ ಹತ್ತಿರವಿದ್ದು ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಜನಪದರಿಗೆ ಕಣ್ಣಿಗೆ ಕಟ್ಟಿದಂತೆ ಕಂಡಿದ್ದರಿಂದ ಅವರ ಇತಿಹಾಸವನ್ನು ಜನಪದ ಸಾಹಿತ್ಯದ ಪ್ರಕಾರಗಳ ಮುಖಾಂತರ ಅಭಿವ್ಯಕ್ತಗೊಂಡಿರುವುದು ಕಾಣಬಹುದು. ಉದಾಹರಣೆಗೆ ಚಿತ್ರದುರ್ಗದ ಪಾಳೇಗಾರರು, ಯಲಹಂಕ ನಾಡ ಪ್ರಭುವಾದ ಕೆಂಪೇಗೌಡರು, ಕುಮಾರ ರಾಮನ, ಸರ್ಜಪ್ಪನಾಯಕ, ಸಿರಾದ ರಂಗಪ್ಪನಾಯಕ, ನಿಡುಗಲ್ಲಿನ ಹೊಟ್ಟಣ್ಣ ನಾಯಕ ಹೀಗೆ ಹಲವಾರು ಪಾಳೇಗಾರರ ಪರಂಪರೆಯಲ್ಲಿ ಜನಪದರು ತಮ್ಮ ನಡುವೆ ಜನಾನುರಾಗಿಯಾಗಿ ಬದುಕಿದ ವ್ಯಕ್ತಿ ಚಿತ್ರಣವನ್ನು, ಅವರ ಕಾರ್ಯ ವೈಖರಿಯನ್ನು ಮೆಚ್ಚಿಕೊಂಡಾಡಿರುವುದು ಜನಪದ ಸಾಹಿತ್ಯದಿಂದ ತಿಳಿದುಕೊಳ್ಳಬಹುದು. ಜನಸಾಮಾನ್ಯರು ಪ್ರಭುತ್ವದ ಅಂಕೆಯಲ್ಲಿದ್ದರೂ ಪಾಳೇಗಾರರನ್ನು ಹೊಗಳಿರುವುದು ಕಂಡುಬಂದಿದೆ. ಕಾರಣ ಪಾಳೇಗಾರರು ಜನರ

ಸಾಂಸ್ಕೃತಿಕ ಕೆಲಸ ಕಾರ್ಯಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರಿಂದ ಜನಪದರು ತಮ್ಮ ಸಮಕಾಲೀನ ಚಿತ್ರಣವನ್ನು ಜನಪದ ಪ್ರಕಾರಗಳ ಮೂಲಕ ಅಭಿವ್ಯಕ್ತಿಗೊಳಿಸಿಕೊಂಡು ತಲೆತಲೆಮಾರುಗಳಿಂದ ಉಳಿಸಿಕೊಂಡು ಬಂದಿರುವುದೇ ಈಗ ನಮಗೆ ಸಿಗುತ್ತಿರುವ ಜನಪದ ಸಾಹಿತ್ಯವೇ ಸಾಕ್ಷಿಯಾಗಿದೆ. ಒಟ್ಟಾರೆಯಾಗಿ ಜಾನಪದ ಅಧ್ಯಯನವೆಂದರೆ ಜನಪದ ಜೀವನದಲ್ಲಿ ಅನುಭವಿಸಿದ ಸುಖದುಃಖಗಳ ವಾಚಿಕ ರೂಪದ ಸಮಷ್ಟಿ ಅಭಿವ್ಯಕ್ತಿಯೆಂದೇ ಹೇಳಬಹುದು.

೩.೩. ಇತಿಹಾಸ ಮತ್ತು ಜಾನಪದ

ಇತಿಹಾಸವು ಜಾನಪದ ಮೂಲನೆಲೆಯಿಂದ ಕೆಲವು ವಿಚಾರಗಳನ್ನು ಪಡೆದುಕೊಳ್ಳುತ್ತಿದೆಂಬುದು ನಿರ್ವಿವಾದ. ಅಂದರೆ ಇಲ್ಲಿ ಇತಿಹಾಸ ಮತ್ತು ಜಾನಪದ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಜಾನಪದ ಮತ್ತು ಇತಿಹಾಸದ ನಡುವಿನ ಸಂಬಂಧವನ್ನು ಕುರಿತು ಕನ್ನಡ ಜಾನಪದ ವಿದ್ವಾಂಸರ ಚರ್ಚೆಗಳನ್ನು ಇಲ್ಲಿ ಪರಿಶೀಲಿಸುವುದು ಅವಶ್ಯಕವಾಗಿದೆ.

ಕನ್ನಡ ಜಾನಪದ ವಿದ್ವಾಂಸರಾದ ಪ್ರೊ.ಜೀ.ಶಂ.ಪರಮಶಿವಯ್ಯನವರು 'ಜಾನಪದ ಕೆಲವು ಮುಖಗಳು'(೧೯೭೫), ಪ್ರೊ.ವಿವೇಕ ರೈ ಅವರ 'ಅನ್ವಯಿಕ ಜಾನಪದ'(೧೯೮೫), ಹಿ.ಶಿ.ರಾಮಚಂದ್ರಗೌಡ (೧೯೮೭)ರವರ 'ಜಾನಪದ ಅಂತರಂಗ', ಪ್ರೊ.ಲಕ್ಷ್ಮಣ್ ತೆಲಗಾವಿಯವರ(ಹರತಿಸಿರಿ) 'ಜನಪದ ವೀರಸಾಹಿತ್ಯ : ಚಾರಿತ್ರಿಕ ವಿವೇಚನೆ'(೧೯೮೭), ಡಾ. ಜಿ.ಆರ್.ತಿಪ್ಪೇಸ್ವಾಮಿಯವರ (ಹರತಿಸಿರಿ, ೧೯೮೭), 'ಜನಪದ ಸಾಹಿತ್ಯ: ಐತಿಹಾಸಿಕ ಮೂಲ ಸಾಮಗ್ರಿಯಾಗಿ', ಡಾ.ಅರವಿಂದ ಮಾಲಗತ್ತಿಯವರ : ಇತಿಹಾಸ ಮತ್ತು ಜನಪದ ಸಾಹಿತ್ಯ(ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು, ೧೯೯೦), ಡಾ.ಪಿ.ಕೆ.ರಾಜಶೇಖರ್ ರವರ 'ಪಿರಿಯ ಪಟ್ಟಣದಕಾಳಗ'(೧೯೯೦). ಎಸ್.ಎ.ಕೃಷ್ಣಯ್ಯರವರು ಸಂಪಾದಿಸಿದ 'ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದಗೀತೆಗಳು ಸಂಕಥನದ ಮುನ್ನುಡಿ, ಡಾ.ಮೊಗಳ್ಳಿ ಗಣೇಶ್ ರವರು 'ದಲಿತರ ರಾಷ್ಟ್ರೀಯತೆ ಮತ್ತು ಗಾಂಧಿಯುಗ' ಎಂಬ ಲೇಖನ ಇತಿಹಾಸ ಮತ್ತು ಜಾನಪದದ ಸಂಬಂಧವನ್ನು ಕುರಿತು ತಾತ್ವಿಕವಾಗಿ ಚರ್ಚಿಸಿದ್ದಾರೆ. ಮೇಲಿನ ಎಲ್ಲಾ ವಿದ್ವಾಂಸರ ಚರ್ಚೆಗಳನ್ನು ಈಗ ಒಂದೊಂದಾಗಿ ಪರಿಶೀಲಿಸಿ ವಿವರಿಸಲಾಗಿದೆ.

೧. ಜೀ.ಶಂ.ಪರಮಶಿವಯ್ಯರವರು ತಮ್ಮ 'ಜಾನಪದ ಕೆಲವು ಮುಖಗಳು'(೧೯೭೫) ಕೃತಿಯಲ್ಲಿ ಇತಿಹಾಸ ಮತ್ತು ಜಾನಪದದ ನಡುವಿನ ಸಂಬಂಧ ಕುರಿತು ಸೋದಾಹರಣವಾಗಿ ಚರ್ಚೆಯನ್ನು ಮಾಡಿದ್ದಾರೆ. ಅವರು ಆಧುನಿಕ ಶಾಸ್ತ್ರೀಯ ಕ್ರಮಗಳಲ್ಲಿ ಜಾನಪದ ಸಾಮಗ್ರಿಯನ್ನು ಉದ್ದೇಶಿತ ಇತಿಹಾಸದ ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ಜಾನಪದದಲ್ಲಿ ಇಂತಹ ಖಚಿತ ಆಧಾರಗಳು ಇರುವುದಿಲ್ಲವಾಗಿ ಇತಿಹಾಸಜ್ಞರನೇಕರು ಇದನ್ನು ನಿರ್ಲಕ್ಷಿಸುತ್ತಾರೆ. ದಾಖಲೆಗಳೆಂದು ಪರಿಗಣಿಸಲ್ಪಡುವ

ಅನೇಕ ಸಾಮಗ್ರಿಗಳು ಕೆಲವೊಮ್ಮೆ ವಿಫಲವಾದ ನಿದರ್ಶನಗಳುಂಟು. ಜಾನಪದ ಅನೇಕ ಬಾರಿ ಐತಿಹಾಸಿಕ ದಾಖಲೆಗಳನ್ನು ಸ್ಥಿರಗೊಳಿಸುವಲ್ಲಿ ತನ್ನ ನೆರವು ನೀಡುತ್ತದೆ. ಎಷ್ಟೋ ಅಜ್ಞಾತ ಐತಿಹಾಸಿಕ ಘಟನೆಗಳು ಜಾನಪದದಿಂದ ಬೆಳಕಿಗೆ ಬರುವ ಸಾಧ್ಯತೆಯೂ ಉಂಟು.[೨೦] ಇವರ ಪ್ರಕಾರ ಇತಿಹಾಸದ ಕೆಲವು ವಿಚಾರಗಳು ಜಾನಪದದ ಮೂಲನೆಲೆಯಲ್ಲಿ ಅಡಗಿರುತ್ತವೆ. ಆದುದರಿಂದ ಜಾನಪದವನ್ನು ಪರಿಗಣಿಸಿ ಇತಿಹಾಸ ಅಧ್ಯಯನಕ್ಕೆ ಬಳಸಿಕೊಳ್ಳಬೇಕೆಂಬುದು ವಾದವಾಗಿದೆ. ತಮ್ಮ ವಾದಕ್ಕೆ ಪೂರಕವಾಗಿ ಪ್ರಧಾನವಾಗಿ ಪಿರಿಯಪಟ್ಟಣ ಕಾಳಗವನ್ನು ಉದಾಹರಿಸುತ್ತಾ, ಅದರ ಜೊತೆಗೆ ಅನೇಕ ಐತಿಹ್ಯ, ಗಾದೆ, ಒಗಟು, ಕಥೆಗಳನ್ನು ಕೊಟ್ಟು ಬಹು ವಿಸ್ತೃತವಾಗಿ ಚರ್ಚಿಸಿದ್ದಾರೆ.

೨. ಪ್ರೊ.ವಿವೇಕ ರೈರವರು ತಮ್ಮ 'ಅನ್ವಯಿಕ ಜಾನಪದ'(೧೯೮೫) ಕೃತಿಯಲ್ಲಿರುವ 'ಇತಿಹಾಸ ಮತ್ತು ಜಾನಪದ' ಎಂಬ ಲೇಖನವನ್ನು ಇವೆರಡರ ನಡುವಿನ ಸಂಬಂಧಗಳ ಸ್ವರೂಪವನ್ನು ಅತ್ಯಂತ ಮಹತ್ವವಾಗಿ ಚರ್ಚೆಗೆ ತೆಗೆದುಕೊಂಡಿದ್ದಾರೆ.

ಇವರು ಲೇಖನವನ್ನು ನಾಲ್ಕು ಭಾಗಮಾಡಿ, ಮೊದಲನೆಯ ಭಾಗದಲ್ಲಿ(ಪುಟ. ೬೮-೮೧) ಹಲವು ಹಳ್ಳಿಗಳಿಂದ ಕೂಡಿರುವ ಭಾರತವು ಬಹು ಅನಕ್ಷರಸ್ಥರಿರುವ ನಾಡಿನಲ್ಲಿ ಮೌಖಿಕ ಸಾಮಗ್ರಿಗಳಿರುವ ಮಹತ್ವವನ್ನು ಎತ್ತಿಹಿಡಿದಿದ್ದಾರೆ. 'ಹೆಚ್ಚಿನ ಜನಸಾಮಾನ್ಯರ ಬದುಕಿನ ಚಿತ್ರಣವು ಭಾರತದ ಸಾಂಪ್ರದಾಯಿಕ ಇತಿಹಾಸಕಾರರ ಚರಿತ್ರೆಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಈ ಇತಿಹಾಸಕಾರರು ಕಂಠಸ್ಥ ಪರಂಪರೆಗೆ ಸೇರಿದ ಜನಪದ ಸಾಹಿತ್ಯವನ್ನು ತಮ್ಮ ಮಡಿವಂತಿಕೆಯ ಮನೋಧರ್ಮದಿಂದ ಅಸ್ಪೃಶ್ಯರೆಂಬಂತೆ ಕಂಡುದು ಮತ್ತು ಕೆಲವೊಂದು ಬಾರಿ ಇಂತಹ ಜನಪದ ಸಾಹಿತ್ಯದ ಮಹತ್ವದ ಬಗೆಗಿನ ಅಜ್ಞಾನ ಇವು ಈ ರೀತಿಯ ಧೋರಣೆಗೆ ಕಾರಣವಾಗಿತ್ತು'[೨೧] ಎನ್ನುತ್ತಾರೆ. ಎರಡನೆಯ ಭಾಗದಲ್ಲಿ ಮೌಖಿಕ ಪರಂಪರೆಯನ್ನು ಇತಿಹಾಸ ರಚಿಸುವಾಗ ಲೇಖಕರು ಬಹಳ ಜಾಗರೂಕತೆಯಿಂದ ಬಳಸಿಕೊಳ್ಳಬೇಕೆಂದು ಹೇಳುತ್ತಾರೆ. ಮೂರನೆಯ ಭಾಗದಲ್ಲಿ ಮೌಖಿಕ ಸಾಮಗ್ರಿಗಳು ಲಿಖಿತ ಆಕರಗಳಿಗಿಂತ ಹೇಗೆ ಭಿನ್ನವಾದ ಸತ್ಯಗಳನ್ನು ಪ್ರತಿಬಿಂಬಿಸುತ್ತವೆ ಎಂಬುದನ್ನು ಕಾರ್ಕಳದ ಮತ್ತು ವೇಣೂರಿನ ಗೊಮ್ಮಟ ಮೂರ್ತಿಗಳ ಸ್ಥಾಪನೆಯ ಬಗೆಗೆ ಹೇಳುತ್ತಾ, ಮೌಖಿಕ ಮತ್ತು ಲಿಖಿತ ಆಕರಗಳನ್ನು ಸಂಗ್ರಹಿಸಿ ತೌಲನಿಕವಾಗಿ ವಿಶ್ಲೇಷಿಸಿದ್ದಾರೆ. ಕೊನೆಯ ಭಾಗದಲ್ಲಿ ಜನಪದ ಆಶಯಗಳ ಹಿಂದಿರುವ ಐತಿಹಾಸಿಕ ಸತ್ಯದ ಕಡೆಗೆ ಹಲವು ವಿಚಾರಗಳನ್ನು ಚರ್ಚಿಸುತ್ತಾರೆ. 'ಇತಿಹಾಸ ರಚನೆಯಲ್ಲಿ ಲಿಖಿತ ಪರಂಪರೆಯನ್ನೇ ಅವಲಂಬಿಸಿ ಬಹುಸಂಖ್ಯಾತ ಜನಸಮುದಾಯದ ಭಾವನೆಗಳನ್ನು ಸಂಪೂರ್ಣ ಕಡೆಗಣಿಸಿ ನಾವು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ನಮ್ಮ ಲಿಖಿತ ಇತಿಹಾಸಗಳು ಅಪರಿಪೂರ್ಣ, ಪಾರ್ಶ್ವಿಕ, ಅರ್ಧಸತ್ಯಗಳನ್ನು ಒಳಗೊಂಡ ಬಾಕಿ ಇತಿಹಾಸವಾಗಿ ಉಳಿದುಬಂದಿರುವುದು ಇಂದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಕಂಠಸ್ಥ ಪರಂಪರೆಯ ಸಾಮಗ್ರಿಗಳಲ್ಲಿ ಸೇರಿಕೊಂಡಿರಬಹುದು.

ಘಟನೆಗಳು ಕಾಲದ ಅಂತರವನ್ನು ಮರೆತು ಒಂದಾಗಿರಬಹುದು. ವ್ಯಕ್ತಿಗಳ, ಸ್ಥಳಗಳ ಹೆಸರುಗಳ ವ್ಯತ್ಯಾಸಗೊಂಡಿರಬಹುದು. ಕಾಲದ ಬೆಳವಣಿಗೆಯು ಮೂಲ ತಿರುಳಿನ ಸುತ್ತ ಕವಚಗಳ ಪದರುಗಳನ್ನು ಸೇರಿಸಿರಬಹುದು. ಆದರೆ ಬಹುಜನರ ನೋವು ನಲಿವುಗಳ ಆಸೆ ಆಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲಾಗಿ ಪ್ರಸರಿಸುತ್ತ ಇಂತಹ ಕಂಠಸ್ಥ ಪರಂಪರೆಯಾಗಿದೆ ಎನ್ನುವುದನ್ನು ಮರೆಯಲಾಗದು. ಇಂತಹ ಕಂಠಸ್ಥ ಪರಂಪರೆಯ ಸಾಮಗ್ರಿಗಳನ್ನು ಬಳಸಿಕೊಂಡು ಇತಿಹಾಸ ರಚನೆ ಮಾಡಿದಾಗ ಸಂಭವಿಸಬಹುದಾದ ತಪ್ಪುಗಳು ಲಿಖಿತ ಪರಂಪರೆಯ ಇತಿಹಾಸ ರಚನೆಯಲ್ಲಿ ಆಗಬಹುದಾದ ತಪ್ಪುಗಳಷ್ಟು ಘೋರವಾಗಿರುವುದಿಲ್ಲ. ಅಮಾನವೀಯವಾಗಿರುವುದಿಲ್ಲ. ಪ್ರಜಾಪ್ರಭುತ್ವ ವಿರೋಧಿಯಾಗಿರುವುದಿಲ್ಲ ಎನ್ನುವುದನ್ನು ನಾವು ಮನಗಂಡಷ್ಟು ಒಳ್ಳೆಯದು'[೨೨] ಎಂದು ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬರುತ್ತಾರೆ. ಇವರು ಕೊಡುವ ಆಕರಗಳ ಸಮೃದ್ಧ ಬಳಕೆಯಿಂದಾಗಿ ಲೇಖನವು ಸ್ಪಷ್ಟವಾದ ಸೈದ್ಧಾಂತಿಕ ಗ್ರಹಿಕೆಯಿಂದ ಅತ್ಯಂತ ಮಹತ್ವದ್ದಾಗಿ ಮೂಡಿಬಂದಿದೆ.

೩. ಪ್ರೊ. ಹಿ.ಶಿ.ರಾಮಚಂದ್ರೇಗೌಡರ 'ಜಾನಪದ ಅಂತರಂಗ' ಕೃತಿಯಲ್ಲಿ(೧೯೮೭) ಜನಪದ ಇತಿಹಾಸ ಕುರಿತ ಲೇಖನವೊಂದರಲ್ಲಿ ಇವರು ಜನಪದ ಇತಿಹಾಸ ಮತ್ತು ಜಾನಪದದಲ್ಲಿ ಇತಿಹಾಸ ದಾಖಲೆಗಳ ರಚನೆಯಲ್ಲಿ ಇವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಜನಪದ ಇತಿಹಾಸವನ್ನು ಬರೆಯಲು ಚಾರಿತ್ರಿಕ ಜಾನಪದ ವಿದ್ವಾಂಸರಿಗೆ ವಹಿಸಿಕೊಟ್ಟರೆ, ಜನಪದರಿಂದ ಐತಿಹಾಸಿಕ ದಾಖಲೆಗಳನ್ನು ಹೆಕ್ಕಿ ತೆಗೆಯುವುದು ಚರಿತ್ರಕಾರನ ಕೆಲಸವೆಂದು ಹೇಳುತ್ತಾರೆ. ಇವರು ಮುಂದುವರೆದು 'ಜಾನಪದ ಇತಿಹಾಸವೆಂಬುದು ಒಂದು ಸಾಮಾಜಿಕ ಪ್ರಕ್ರಿಯೆ.' ಜನಪದ ನಡೆದ ಮತ್ತು ತಿಳಿದವ ನಡೆಯಿತೆಂದು ಹೇಳಲಾದ ಘಟನೆಗಳ ಮೊತ್ತ. ಇತಿಹಾಸ ನಡೆಯದೇ ಇತಿಹಾಸ ಸೃಷ್ಟಿಯಾಗುವುದು ಸಾಧ್ಯವಿಲ್ಲ. ಆದರೆ ನಡೆದದ್ದು ಯಾವ ಮಾದರಿಯ ಇತಿಹಾಸ ಎನ್ನುವುದು ಮುಖ್ಯ. ಇತಿಹಾಸ ಮರುಕಳಿಸಿತೆ ಅಥವಾ ಪ್ರತ್ಯೇಕವಾಗಿ ಘಟಿಸಿತೆ ಎಂಬ ತೀರ್ಮಾನದ ಮೇಲೆ ಜನಪದ ಇತಿಹಾಸ ಮುಖಗಳು ತೆರೆದುಕೊಂಡಿವೆ.[೨೩] ಇಲ್ಲಿ ಜನಪದ ಇತಿಹಾಸವು ಭಾವಸತ್ಯವನ್ನು ಹೇಳಿದರೆ ಇತಿಹಾಸವು ಕಾಲಸತ್ಯವನ್ನು ಹೇಳುತ್ತದೆ. ರಾಮಚಂದ್ರಗೌಡರು ಮೌಖಿಕ ಇತಿಹಾಸದ ಸ್ವರೂಪದ ಬಗೆಗೆ ಹೀಗೆ ಹೇಳುತ್ತಾ "ಜನಪದ ಇತಿಹಾಸ ಇಲ್ಲಿಯವರೆಗೆ ಯಾರು ಬರೆದಿಡದೆ ಉಳಿದು ಬಂದಿದೆ. ಅದು ಉಳಿದು ಬರಲು ಜನಪದ ಐತಿಹಾಸಿಕ ಪ್ರಜ್ಞೆ ಕಾರಣ. ಈಗ ನಾವು ಆ ಪ್ರಜ್ಞೆಯ ರಚನೆ ಶೋಧಿಸಬೇಕು. ಸಮಕಾಲೀನ ಸಂದರ್ಭದಲ್ಲಿ ಇತಿಹಾಸವನ್ನು ಜನಪದರು ಪುರಾಣ ಮಾಡುತ್ತಾರೆ. ಐತಿಹ್ಯ ಮಾಡುತ್ತಾರೆ, ಅಥವಾ ಕಟ್ಟುಕತೆ ಮಾಡುತ್ತಾರೆ ಎನ್ನುವ ಸರಳ ಮಾತುಗಳಿಂದ ಹಾಗೆ ಮಾಡಲು ಕಾರಣವೇನು? ಎಂಬುದು ಜನಪದ ಇತಿಹಾಸಕಾರನ ಶೋಧನೆಯಾಗಬೇಕು. ಜನಪದ ಇತಿಹಾಸ ಉಳಿದುಬರಲು ಇಂತಹ ಕಲ್ಪಿತ ಮಾರ್ಗಗಳೇ ಅವರಿಗೆ

ಏಕೆ ಬೇಕಾಗುತ್ತವೆ ಎಂಬುದೂ ಕೂಡ ವಿಚಾರ ಮಾಡಬೇಕಾದ ಪ್ರಶ್ನೆ''[೨೨] ಇವರು ಜನಪದ ಇತಿಹಾಸದ ಪ್ರತ್ಯೇಕ ರೂಪದ ಚಿಂತನೆ ಕುರಿತು ತಮ್ಮ ಸೈದ್ಧಾಂತಿಕ ನೆಲೆಗಳನ್ನು ಕುರಿತು ಸೋದಾಹರಣವಾಗಿ ಸಮರ್ಥಿಸಿಕೊಂಡಿಲ್ಲವಾದರೂ, ಅವರ ಆಲೋಚನೆಯ ನೆಲೆಗಳು ಭಿನ್ನವಾಗಿ ಅಧ್ಯಯನ ಯೋಗ್ಯವಾಗಿವೆ.

೪. ಪ್ರೊ.ಲಕ್ಷ್ಮಣ್ ತೆಲಗಾವಿ ಅವರು 'ಹರತಿಸಿರಿ'ಯಲ್ಲಿ ''ಜನಪದ ವೀರಸಾಹಿತ್ಯ : ಚಾರಿತ್ರಿಕ ವಿವೇಚನೆ''(೧೯೮೭) ಎಂಬ ಸುದೀರ್ಘವಾದ ಲೇಖನದಲ್ಲಿ ಜಾನಪದ ವಿಚಾರಗಳನ್ನು ಚರಿತ್ರೆಯ ಪುನರ್ ನಿರ್ಮಾಣದ ಸಂದರ್ಭದಲ್ಲಿ ಹೇಗೆ ಬಳಸಿಕೊಳ್ಳಬೇಕು. ಜೊತೆಗೆ ಅದರಲ್ಲಿರುವ ಅಂಶಗಳನ್ನು ಬೆದಕಿ ತೆಗೆಯುವಾಗ ಬಹಳ ಜಾಗರೂಕತೆಯಿಂದ ತೆಗೆದುಕೊಳ್ಳಬೇಕೆಂದು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾರೆ. ಅವರ ಮಾತುಗಳು 'ಜನಪದ ಸಾಹಿತ್ಯವನ್ನೇ ಆಕರವಾಗಿರಿಸಿಕೊಂಡು ಇಂತಹ ಆಶಯಗಳ ಅಧ್ಯಯನಕ್ಕೆ ತೊಡಗುವಾಗ ಜಾನಪದ ವಿದ್ವಾಂಸನಾಗಲೀ ಇತಿಹಾಸ ಪಂಡಿತನಾಗಲೀ ಅನುಸರಿಸಬೇಕಾದ ಸೂತ್ರಗಳು ತೀರ ಜಟಿಲವಾಗಿರುತ್ತವೆನ್ನಬೇಕಾಗುತ್ತದೆ.'[೨೩] ಈ ಹಿನ್ನೆಲೆಯಲ್ಲಿ ಚರಿತ್ರೆಯ ವ್ಯಕ್ತಿಗಳನ್ನು ಮೌಖಿಕ ಚರಿತ್ರೆಯಲ್ಲಿ ಬರುವ ವ್ಯಕ್ತಿಗಳೊಂದಿಗೆ ಹೋಲಿಸುವುದಾಗಿದೆ. ಈ ಅಭಿಪ್ರಾಯದಂತೆ ಅವರು ಕುಮಾರರಾಮ, ಚಿತ್ರದುರ್ಗದ ಮದಕರಿನಾಯಕ, ತರೀಕೆರೆಯ ಸರ್ಜಪ್ಪನಾಯಕ, ಮತ್ತಿತಿಮ್ಮಣ್ಣ ನಾಯಕ, ಒನಕೆ ಓಬವ್ವ, ಸಿರಾದ ರಂಗಪ್ಪ ನಾಯಕ, ಮಾಗಡಿ ಕೆಂಪೇಗೌಡ, ಪಿರಿಯಪಟ್ಟಣದ ವೀರರಾಜ, ಕೊಡಗಿನ ಲಿಂಗರಾಜ, ಐಗೂರಿನ ವೆಂಕಟಾದ್ರಿ ಭೂಪ. ಶ್ರೀರಂಗಪಟ್ಟಣದ ಟಿಪ್ಪುಸುಲ್ತಾನ್, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಹಲಗಲಿಯ ಬೇಡರು ಮೊದಲಾದವರ ಬಗ್ಗೆ ಲಭ್ಯವಿರುವ ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ಸುದೀರ್ಘವಾಗಿ ವಿಶ್ಲೇಷಿಸಿದ್ದಾರೆ.

ಪ್ರೊ.ಲಕ್ಷ್ಮಣ್‌ತೆಲಗಾವಿಯವರು ಸ್ವತಃ ಚರಿತ್ರೆಯ ವಿದ್ಯಾರ್ಥಿಯಾಗಿದ್ದು ಇವರು ಅಧ್ಯಯನಕ್ಕೆ ಆಯ್ದುಕೊಂಡ ಜನಪದ ಸಾಹಿತ್ಯ ಪಠ್ಯಗಳೆಲ್ಲವೂ ಈಗಾಗಲೇ ನಮಗೆ ತಿಳಿದಿರುವ ಐತಿಹಾಸಿಕ ವ್ಯಕ್ತಿಗಳ ಕುರಿತು ಹೊಸ ಮಾಹಿತಿ ಕೊಡುವಂತವುಗಳಾಗಿವೆ. ಜೊತೆಗೆ ಈ ಪಠ್ಯಗಳ ಮೂಲಕ ಚರಿತ್ರೆಯ ಕೆಲವು ಗ್ರಹಿಕೆಗಳನ್ನು ಪರಿಷ್ಕರಿಸಿಕೊಂಡು, ಆ ಮೂಲಕ ಇತಿಹಾಸ ಮತ್ತು ಜಾನಪದದ ನಡುವಿನ ಹೊಸ ಸಂಬಂಧವೊಂದರ ಏರ್ಪಡುವಿಕೆಗೆ ಕಾರಣೀಭೂತರಾಗಿದ್ದಾರೆ. ಮೇಲಿನವರ ಜನಪದ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳು ಚರಿತ್ರೆಯ ವ್ಯಕ್ತಿಗಳಾಗಿದ್ದಾರೆ. ಇವರ ಮೇಲೆ ಬಂದಿರುವ ಜನಪದ ಸಾಹಿತ್ಯವನ್ನು ಇಟ್ಟುಕೊಂಡರೆ, ಈಗಾಗಲೇ ಇರುವ ಚರಿತ್ರೆಯೊಂದಕ್ಕೆ ಇನ್ನಷ್ಟು ಮಾಹಿತಿಗಳನ್ನು ಒದಗಿಸಿಕೊಳ್ಳುವ ಕೆಲಸವಾದರೆ ಚರಿತ್ರೆಯ ನಿರ್ಮಾಣವು ಒಂದು ಒಳ್ಳೆಯ ಹಂತ ತಲುಪಬಹುದೆನ್ನುತ್ತಾರೆ.

ಪ್ರೊ.ಲಕ್ಷ್ಮಣ್ ತೆಲಗಾವಿಯವರು ಇನ್ನೊಂದು ಉದಾಹರಣೆಕೊಡುತ್ತಾ ಕೊರಗತನಿಯ ಎಂಬುವನೊಬ್ಬ ಇದ್ದ ಎಂಬುದಕ್ಕೆ ನಮ್ಮಲ್ಲಿ ಪಾಡ್ದನಬಿಟ್ಟರೆ ಬೇರಾವ ಆಧಾರವೂ ಇಲ್ಲ. ಇಂಥ ಸಂದರ್ಭದಲ್ಲಿ ಪಾಡ್ದನ ನೀಡುವ ಮಾಹಿತಿಗಳನ್ನು ಚರಿತ್ರೆಯ ನಿರ್ಮಾಣಕ್ಕೆ ಹೇಗೆ ಬಳಸಿಕೊಳ್ಳಬಹುದು? ಅಥವಾ ಪಾಡ್ದನಗಳ ಮೂಲಕ ನಾವು ನಿರ್ಮಿಸಬಯಸುವ ಚರಿತ್ರೆ ಹೇಗಿರುತ್ತದೆ? ಹೇರಳವಾಗಿರುವ ಜನಪದ ಕತೆಗಳಲ್ಲಿ ಇತಿಹಾಸಕ್ಕೆ ಅಗತ್ಯವಾಗಿರುವ ಕಾಲ, ದೇಶ ಮತ್ತು ವ್ಯಕ್ತಿಗಳ ಉಲ್ಲೇಖವೇ ಇರುವುದಿಲ್ಲ. ಹೀಗಿರುವಾಗ ಜನಪದಕತೆಗಳ ಮೂಲಕ ಸಾಮಾಜಿಕ ಚರಿತ್ರೆಯೊಂದನ್ನು ಕಟ್ಟಲಾದೀತೆ? ಇಂಥಲ್ಲಿ ಚರಿತ್ರಾಕಾರ ಇದಿರಿಸುವ ಸಮಸ್ಯೆಗಳೇನು ಈ ಬಗೆಯ ಪ್ರಶ್ನೆಗಳಿಗೆ ತೆಲಗಾವಿಯವರ ಲೇಖನದಲ್ಲಿ ಉತ್ತರ ಸಿಗುವುದಿಲ್ಲವಾದರೂ ಜನಪದ ಸಾಹಿತ್ಯದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ.

೫. ಡಾ. ಜಿ.ಆರ್.ತಿಪ್ಪೇಸ್ವಾಮಿಯವರು 'ಹರತಿಸಿರಿ'ಯಲ್ಲಿ 'ಜನಪದ ಸಾಹಿತ್ಯ ಐತಿಹಾಸಕ ಮೂಲ ಸಾಮಗ್ರಿಯಾಗಿದೆ' [೨೬] ಎಂಬ ಲೇಖನದಲ್ಲಿ ಜನಪದ ಸಾಹಿತ್ಯದ ವಿಚಾರಗಳನ್ನು ಐತಿಹಾಸಿಕ ಮೂಲ ಸಾಮಗ್ರಿಗಳಾಗಿ ಹೇಗೆ ಬಳಸಿಕೊಳ್ಳಬೇಕು. ಜೊತೆಗೆ ಐತಿಹಾಸಿಕ ಅಂಶಗಳನ್ನು ಜನಪದ ಸಾಹಿತ್ಯದೊಂದಿಗೆ ಹೇಗೆ ತುಲನಾತ್ಮಕವಾಗಿ ಹೋಲಿಸಿ ಅಧ್ಯಯನ ಮಾಡಬೇಕು ಎಂಬ ವಿಚಾರವನ್ನು ಚರ್ಚಿಸಿದ್ದಾರೆ. ಇತಿಹಾಸವನ್ನು ಬರೆಯಲು ಜನಪದ ಸಾಹಿತ್ಯವು ಶುದ್ಧಾಂಗ ಸಾಮಗ್ರಿಯಾಗಿ, ಆಕರವಾಗಿ ಸಹಾಯವಾಗುವ ಮಟ್ಟವನ್ನು ಇನ್ನೂ ತಲುಪಿಲ್ಲ. ಆದರೂ ಚಾರಿತ್ರಿಕ ದಾಖಲೆಗಳೊಂದಿಗೆ ಹೋಲಿಸಿ ಯಾವುದು ಚರಿತ್ರೆ, ಯಾವುದು ಕಲ್ಪನೆ ಎಂಬುದನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತಾರೆ. ಜನಪದ ಸಾಹಿತ್ಯವನ್ನು ಇತಿಹಾಸದ ಆಕರವಾಗಿ ಬಳಸಬೇಕಾದರೆ ಕಾಲನಿರ್ಣಯ ಸಮಸ್ಯೆ ಬರುತ್ತದೆ. ಈ ವಿಚಾರದಲ್ಲಿ ಜನಪದ ಸಾಹಿತ್ಯ ಹಿಂದೆ ಬೀಳುತ್ತದೆ. ಆದರೆ ಈ ಕಾಲವನ್ನು ಅಂದಿನ ಜನಧರಿಸುತ್ತಿದ್ದ ಪೋಷಾಕು, ಬಳಸುತ್ತಿದ್ದ ಆಯುಧ, ಯುದ್ಧಕ್ಕೆ ಹೋರಾಡುತ್ತಿದ್ದ ರೀತಿ, ಪೂಜಿಸುತ್ತಿದ್ದ ದೇವರು ಇತ್ಯಾದಿ ಆಧಾರದ ಮೇಲೆ ಊಹಿತ ಕಾಲ ನಿರ್ಣಯವನ್ನು ಮಾಡಲು ಸಾಧ್ಯವಿದೆ ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ ಮಾತ್ರ ಜನಪದ ಸಾಹಿತ್ಯವು ಇತಿಹಾಸಕ್ಕೆ ಮೂಲ ಸಾಮಗ್ರಿಯಾಗಿ ನೆರವು ನೀಡಬಲ್ಲದು ಎಂಬುದು ಇವರ ವಾದವಾಗಿದೆ.

೬. ಡಾ.ಅರವಿಂದ ಮೂಲಗತ್ತಿಯವರು 'ಇತಿಹಾಸ ಮತ್ತು ಜಾನಪದ ಸಾಹಿತ್ಯ'(೧೯೯೦) ಎಂಬ ಲೇಖನದಲ್ಲಿ ಕಂಠಸ್ಥ ಪರಂಪರೆಯ ಸಾಮಗ್ರಿಗಳನ್ನು ಇತಿಹಾಸ ರಚನೆಗೆ ಮೂಲ ಸಾಮಗ್ರಿಗಳಾಗಿ ಬಳಸಿಕೊಳ್ಳುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತು ವಿಸ್ತೃತವಾಗಿ ಚರ್ಚೆ ನಡೆಸಿದ್ದಾರೆ. ಜನಪದ ಸಾಹಿತ್ಯವನ್ನು ಇತಿಹಾಸಕ್ಕೆ ಬಳಸಿಕೊಳ್ಳುವಾಗ ಎದುರಿಸುವ ಸಮಸ್ಯೆಗಳನ್ನಿಲ್ಲಿ ಪಟ್ಟಿ ಮಾಡಿದ್ದಾರೆ.

೧. ಒಂದು ಐತಿಹಾಸಿಕ ಘಟನೆ ಜಾನಪದದ ಬೇರೆ ಬೇರೆ ಪ್ರಕಾರಗಳಲ್ಲಿಯೇ ಲಭ್ಯವಾಗುವುದು ಮತ್ತು ಜನಪದ ಸಾಹಿತ್ಯದಲ್ಲಿಯೇ ಕಥನಗೀತೆಯ ಒಂದು ಪ್ರಕಾರ ಆಯ್ದುಕೊಂಡಾಗ ಅದೇ ಐತಿಹಾಸಿಕ ಘಟನೆಯ ಸಂಗತಿಗಳು ಪಾಠಾಂತರಗಳೊಂದಿಗೆ ಲಭ್ಯವಾಗುವುದು.

೨. ಕಂಠಸ್ಥ ಪರಂಪರೆಯ ಒಂದು ಐತಿಹಾಸಿಕ ಕೃತಿಯಲ್ಲಿ ಲಭ್ಯವಾಗುವ ಎಲ್ಲಾ ಆಕರಗಳೂ ಐತಿಹಾಸಿಕ ಸತ್ಯಸಂಗತಿಗಳೆಂದು ಹೇಳಲಾಗದಿರುವುದು ಮತ್ತು ಕಾಲ್ಪನಿಕ ಗುಣ ಗುರುತಿಸಲಾಗದಂತೆ ಸೇರಿಕೊಂಡಿರುವುದು.

೩. ಒಂದು ಐತಿಹಾಸಿಕ ಘಟನೆಯೊಂದಿಗೆ, ಇನ್ನೊಂದು ಐತಿಹಾಸಿಕ ಘಟನೆ ಬಂದು ಸೇರ್ಪಡೆಯಾಗುವುದು. ಇಲ್ಲವೆ ಆ ಘಟನೆ ಬೇರೆ ಕಡೆಗಳೆಲ್ಲೆಲ್ಲ ಘಟಿಸಿದೆ ಎಂಬಂತೆ ಪ್ರಾದೇಶಿಕ ಗುಣಗಳೊಂದಿಗೆ ವ್ಯಕ್ತವಾಗುವುದು.

೪. ಜನಪದ ಸಾಹಿತ್ಯ ನಾಲಿಗೆಯಿಂದ ನಾಲಿಗೆಗೆ ಹರಿದು ಬರುವುದರಿಂದ ಮತ್ತು ಐತಿಹಾಸಿಕ ಘಟನೆಗಳು ತೀವ್ರ ಪ್ರಸರಣ ಹೊಂದುವುದರೊಂದಿಗೆ ಬದಲಾವಣೆ ಶಕ್ತಿಯನ್ನು ಪಡೆದುಕೊಂಡಿರುವುದು.

೫. ಲಿಖಿತ ಸಾಮಗ್ರಿ ಮತ್ತು ಕಂಠಸ್ಥ ಸಾಮಗ್ರಿಗಳಲ್ಲಿ ಪರಸ್ಪರ ಸಾಮ್ಯ-ವೈಷಮ್ಯಗಳಿರುವುದು.[೨೭]

ಇವರು ಈ ಮೇಲಿನ ಸಮಸ್ಯೆಗಳನ್ನು ಎತ್ತುತ್ತಾ, ಆ ಮೂಲಕ ಮೌಲ್ಯಮಾಪನಕ್ಕೆ ಬೇಕಾದ ಕೆಲವು ಸೂತ್ರಗಳನ್ನು ಮುಂದಿಡುತ್ತಾರೆ.[೨೮] ಯಾವುದೇ ಐತಿಹಾಸಿಕ ಘಟನೆ ಜನಪದ ಸಾಹಿತ್ಯದಲ್ಲಿ ಸ್ಥಾನವನ್ನು ಪಡೆದುಕೊಂಡಿತೆಂದರೆ ಮೊದಲು ಅದನ್ನು ಕೃತಿಗಿಳಿಸುವುದು, ಅದರ ಆಶಯ ಗುರುತಿಸುವುದು, ಅದಕ್ಕೆ ಸಂಬಂಧಿಸಿದ ಕಂಠಸ್ಥ ಪರಂಪರೆಯ ಎಲ್ಲಾ ಸಾಹಿತ್ಯ ಸಂಗ್ರಹಿಸುವುದು. ಅದರ ಸ್ಥಳ ದಾಖಲಿಸುವುದು, ಆ ಪಠ್ಯವನ್ನು ಗಣಗಳಾಗಿ ವಿಂಗಡಿಸಿ ಅಲ್ಲಿ ಸಿಗುವ ಇನ್ನೊಂದು ಪಠ್ಯದ ಗಣಗಳೊಂದಿಗೆ ಹೋಲಿಸಿ ಅವು ಎಷ್ಟು ಸ್ವಾಭಾವಿಕವಾದವುಗಳು ಎಂಬುದನ್ನು ಪರೀಕ್ಷಿಸುವುದು, ಆ ಗಣಗಳ ಸ್ವಭಾವಿಕತೆಯ ಪರೀಕ್ಷೆಗಾಗಿ ಪ್ರಾದೇಶಿಕ, ಭೌಗೋಳಿಕ, ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ನಿವೇದಕ ವರ್ಗ ಎಂಬುದರ ಬಗೆಗೆ ಕೆಲವು ಪ್ರಶ್ನೆಗಳಿಂದ ಪರೀಕ್ಷಿಸಿ ಉತ್ತರ ಕಂಡುಕೊಳ್ಳಬೇಕೆನ್ನುತ್ತಾರೆ. ವಿವೇಕ ರೈರವರು ಸಂಗ್ರಹಿಸಿ ಚರ್ಚಿಸಿರುವ ಪಾಡ್ದನದ ಹಿನ್ನೆಲೆಯಲ್ಲಿ ಇತಿಹಾಸ ರಚನೆಗೆ ಯಾವ ಗಣಗಳು ಸತ್ಯವಾದ ಮಾಹಿತಿಯನ್ನು ನೀಡುತ್ತವೆ ಎನ್ನುವ ಸ್ಪಷ್ಟ ನಿಲುವಿಗೆ ಬರಬೇಕೆನ್ನುತ್ತಾರೆ. ಮತ್ತೆ ತಮ್ಮ ವಾದಕ್ಕೆ ಪೂರಕವಾಗಿ ಅವರು ಚಪ್ಪಲಿ ಹೊಲಿದವನ ಕುರಿತ ಕತೆ-ಐತಿಹ್ಯಗಳನ್ನು ಕೋಷ್ಟಕದೊಂದಿಗೆ ವಿಶ್ಲೇಷಿಸಿದ್ದಾರೆ.[೨೯] ಇಷ್ಟಿದ್ದರೂ ಪರಿಶುದ್ಧವಾದ ಇತಿಹಾಸ ರಚಿಸಲು ಸಾಧ್ಯವಿಲ್ಲ ಎಂಬ ನಿಲುವಿಗೆ ಅವರು ಬರುತ್ತಾರೆ. ಉಪಲಬ್ಧವಿರುವ ಕಂಠಸ್ಥ ಪರಂಪರೆಯ ಸಾಮಗ್ರಿಗಳಿಂದ ಸ್ಥೂಲ ಇತಿಹಾಸವನ್ನು ಹೇಗೆ ನಿರೂಪಿಸಬೇಕೆಂಬುದಕ್ಕೆ ಇವರ ಲೇಖನವು ಇಲ್ಲಿ ಉತ್ತಮ ಉದಾಹರಣೆಯಾಗಿದೆ.

೭. ಡಾ.ಪಿ.ಕೆ.ರಾಜಶೇಖರವರು ಸಂಪಾದಿಸಿರುವ 'ಪಿರಿಯಪಟ್ಟಣದ ಕಾಳಗ'(೧೯೯೦)ದ ಪ್ರಸ್ತಾವನೆಯಲ್ಲಿ ಮೊದಲಿಗೆ ಜಾನಪದ ಆಕರವನ್ನು ಇತಿಹಾಸ ರಚನೆಗೆ ಬಳಸಿಕೊಳ್ಳುವ ಸಾಹಸ ಮಾಡಿದ್ದಾರೆ. ರಾಜಶೇಖರವರು ಬರೆದ ದೀರ್ಘ ಪ್ರಸ್ತಾವನೆಯಲ್ಲಿ ಲಿಖಿತ ಆಕರಗಳ ಮೂಲಕ ಸೃಷ್ಟಿಯಾದ

ಚರಿತ್ರೆಯನ್ನು ಸುದೀರ್ಘವಾಗಿ ವಿವರಿಸಿ ಕೊನೆಯಲ್ಲಿ ಜಾನಪದ ಆಕರಗಳನ್ನು ಅದಕ್ಕೆ ಪೂರಕ ಸಾಮಗ್ರಿಯಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಚರಿತ್ರೆಯ ಬಗೆಗೆ ಒಂದು ಕಲ್ಪನೆ ಮೊದಲೇ ಮೂಡಿರುತ್ತದೆ ಮತ್ತು ಅದನ್ನು ಗಟ್ಟಿಗೊಳಿಸಲು ಜಾನಪದ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಪ್ರಸ್ತಾವನೆಯಲ್ಲಿ ಅವರು ಹೇಳಿದ ಗಮನಾರ್ಹವಾದ ಅಂಶವೆಂದರೆ ಜನಪದ ವೀರ ಕಾವ್ಯಗಳಲ್ಲಿ ಕೆಲವು ಐತಿಹಾಸಿಕ ವಿಚಾರಗಳಿರಬಹುದೇ ಹೊರತು, ಜನಪದ ವೀರಕಾವ್ಯಗಳೆಂದರೆ, ಅದು ಪರಿಪೂರ್ಣವಾಗಿ ಇತಿಹಾಸವಲ್ಲವೆಂಬುದು. ಇದಕ್ಕೆ ಹಿನ್ನೆಲೆಯಾಗಿ ಹೇಳುವ ಜನಪದ ಗಾಯಕರ ಕಥೆಗಳು ಒಮ್ಮುಖವಾಗಿಲ್ಲ. ಆದ್ದರಿಂದ ಹೀಗೆ ಹೇಳಬಹುದು. ಯುದ್ಧ ನಡೆದಿದ್ದೊಂದೇ ಐತಿಹಾಸಿಕವಾಗಿ ನಮಗೆ ತಿಳಿದುಬರುತ್ತಿರುವ ಸತ್ಯಸಂಗತಿ. ಉಳಿದವುಗಳ ಬಗ್ಗೆ ನಿರ್ದಿಷ್ಟವಾಗಿ ಏನನ್ನು ಹೇಳಲಾಗುತ್ತಿಲ್ಲ.[೨೦] ಮೇಲಿನ ವಿಚಾರವನ್ನು ಪರಿಶೀಲಿಸಿದರೆ, ಲಿಖಿತ ಆಕರಗಳ ಮೂಲಕ ಸೃಷ್ಟಿಯಾದ ಚರಿತ್ರೆಯನ್ನು 'ಸತ್ಯ'ವೆಂದು ಭಾವಿಸಿ ಮತ್ತು ಕಂಠಸ್ಥ ಪರಂಪರೆಯ ಆಕರಗಳನ್ನು 'ಅಸತ್ಯ'ವೆಂದು ತಿಳಿದು ಸಾಕ್ಷಾತ್ಕಾರಕ್ಕಾಗಿ ಬಳಸಿಕೊಳ್ಳಲಾಗಿದೆ. ಇವರ ಪ್ರಕಾರ ನಿರ್ದಿಷ್ಟವಾಗಿ ಹೇಳಬಹುದಾದದ್ದು ಮಾತ್ರ ಸತ್ಯವೆಂದು ಉಳಿದದ್ದೆಲ್ಲಾ ಅಸತ್ಯವೆನ್ನಲಾಗಿದೆ.

೮. ಎಸ್.ಎ.ಕೃಷ್ಣಯ್ಯನವರು ಸಂಪಾದಿಸಿರುವ "ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು" ಎಂಬ ಸಂಕಲನದ ಮುನ್ನುಡಿಯಲ್ಲಿ ಮೌಖಿಕ ಸಾಹಿತ್ಯ ಮತ್ತು ಲಿಖಿತ ಚರಿತ್ರೆಯನ್ನು ಕುರಿತು ಚರ್ಚೆ ನಡೆಸಿದ್ದಾರೆ. ಇವರು 'ರಾಯಚೂರು ಕೋಟೆ' ಎಂಬ ಹಾಡನ್ನು ಆಧರಿಸಿಕೊಂಡು ಮೌಖಿಕ ಸಾಹಿತ್ಯ ಮತ್ತು ಲಿಖಿತ ಚರಿತ್ರೆಯ ಸಂಬಂಧಗಳ ಬಗೆಗೆ ವಿಶ್ಲೇಷಣೆ ನಡೆಸಿದ್ದಾರೆ. ಕೃಷ್ಣಯ್ಯನವರು ಡಾ.ಪಿ.ಕೆ.ರಾಜಶೇಖರರ ಹಾಗೆ ಒಂದು ರೀತಿ ಈಗಾಗಲೇ ಸಿದ್ಧಮಾದರಿಯಲ್ಲಿರುವ ಚರಿತ್ರೆಯ ಕಲ್ಪನೆಗೆ ಕಂಠಸ್ಥ ಪರಂಪರೆಯಿಂದ ದೊರೆತ ಮಾಹಿತಿಗಳನ್ನು ಹೊಂದಿಸುತ್ತಾ ಹೋಗುತ್ತಾರೆ. ಇವರ ಕಂಠಸ್ಥ ಪರಂಪರೆಯ ಸಾಮಗ್ರಿಗಳಿಗೆ ಕೋಟೆ ಕೊತ್ತಲಗಳ ಪುರಾವೆಗಳು ಸಿಕ್ಕಿದಾಗ ಮಾತ್ರ ಅದನ್ನು ಅಧಿಕೃತವೆಂದು ಸಿಂಧು ಮಾಡುತ್ತಾರೆ.

೯. ಮೊಗಳ್ಳಿ ಗಣೇಶ್ ರವರು 'ದಲಿತರ ರಾಷ್ಟ್ರೀಯತೆ ಮತ್ತು ಗಾಂಧಿಯುಗ'(ದಲಿತ ಚಿಂತನೆ) ೨೦೦೨ ಎಂಬ ಲೇಖನದಲ್ಲಿ ಜಾನಪದ ಮತ್ತು ಇತಿಹಾಸಕ್ಕೆ ಇರುವ ಸಂಬಂದವನ್ನು ಕುರಿತು ತಾತ್ವಿಕವಾಗಿ ಚರ್ಚಿಸಿದ್ದಾರೆ. 'ಮಾರ್ಕ್ಸ್‌ವಾದಿಗಳು ಹೇಳುವಂತಹ ಚರಿತ್ರೆಯ ಘಟಕಗಳಾಗಿ ಜನಪದರನ್ನು ಭಾವಿಸಲಾಗುವುದಿಲ್ಲ. ಸಂಸ್ಕೃತಿಯ ವಿವಿಧ ಹಂತಗಳಾಗಿ ರೂಪುಗೊಳ್ಳುವ ಹಾಗೇ ಅವರ ಸಂಸ್ಕೃತಿ ಮತ್ತು ಪರಂಪರೆಯ ಸಂವಿಧಾನಕ್ಕನುಗುಣವಾಗಿ ಬದುಕುವ ಸಮುದಾಯಗಳು ಸರಳ ರಾಚೆಯಂತಹ ವರ್ಗಗಳಾಗಿ ವಿಭಜನೆಗೊಂಡಿರುವುದಿಲ್ಲ. ಜನಪದ ಸಮುದಾಯಗಳ ಸಮಷ್ಠಿ ಶಕ್ತಿಯಲ್ಲಿ, ಸಮಷ್ಠಿ ಪ್ರಜ್ಞೆಯ ವಿಕಾಸದ ಪ್ರಕ್ರಿಯೆಯಲ್ಲಿ ಕಾಲ ದೇಶಗಳನ್ನು ಮೀರಿದ ಮನುಷ್ಯ ಸಮಾಜದ ಪ್ರತಿಬಿಂಬಗಳು

ಅಡಗಿರುತ್ತವೆ. ಉತ್ಪಾದನಾ ಘಟಕವಾಗಿ ಒಂದು ಜನಾಂಗ ಇಲ್ಲವೇ ಗುಂಪನ್ನು ವರ್ಗೀಕರಿಸಿದ ಕೂಡಲೇ ಆ ಸಮುದಾಯಗಳ ಆಳದ ಸಂವೇದನೆಗಳನ್ನು ಕಡೆಗಣಿಸಿ ಅಲ್ಲಿನ ಯಾವುದೋ ಒಂದು ಆಯಾಮವನ್ನು ಮಾತ್ರ ಪರಿಗಣಿಸಿದಂತಾಗುತ್ತದೆ. ಜನಪದ ಸಮುದಾಯಗಳು ಮಾರ್ಕ್ಸ್ ಹೇಳುವ ತತ್ತ್ವವನ್ನು ಮೊದಲೇ ಅವರೇ ಅವರ ಜೀವನದ ಅನುಭವದಿಂದ ಅರಿತಿದ್ದರೂ ಕೂಡ ಅದಕ್ಕೆ ಅವರಲ್ಲಿ ಯಾವ ಬಗೆಯ ಪರಿಹಾರವನ್ನು ಯಾವ ರೀತಿಯಲ್ಲಿ ಕಂಡುಕೊಂಡರೆಂಬುದರ ಕಡೆಗೆ ತಮ್ಮ ಗಮನ ಹೋಗಬೇಕಾಗಿದೆ. ಇಂತಹ ಒಳ ಅರಿವಿನ ಸೊಲ್ಲನ್ನು ನಮ್ಮ ಗಾಂಧಿ ಭಾರತೀಯ ಸಮುದಾಯಗಳ ಸಂದರ್ಭದಲ್ಲಿ ಬಹಳ ಸೂಕ್ಷ್ಮವಾಗಿ ಗ್ರಹಿಸಿದ್ದನ್ನು ಕಾಣಬಹುದು.’[೬೧]

ಪಶ್ಚಿಮದ ಚಾರಿತ್ರಕಾರರು ಹೇಳಿಕೊಟ್ಟ ರೀತಿಯಲ್ಲೇ ಮತ್ತು ವೈದಿಕ ಚಾರಿತ್ರಾಕಾರರು ರೂಪಿಸಿದ ಕ್ರಮದಲ್ಲೇ ಒಂದು ಹೆಜ್ಜೆ ಮುಂದೆ ಹೋಗಿ ಎಡಪಂಥೀಯ ಧೋರಣೆಗಳಾಚೆಯೂ ನಿಂತು, ಜನಪದ ಚರಿತ್ರೆಯನ್ನು ಹುಡುಕಿದಾಗ ನಮ್ಮ ಎಲ್ಲಾ ಚಳುವಳಿಗಳು ಪ್ರತ್ಯೇಕವಾದ ವಿಚಾರಗಳನ್ನು ಮಂಡಿಸತೊಡಗುತ್ತವೆ. ಒಂದು ಸಾಂಸ್ಕೃತಿಕವಾದ ರಾಷ್ಟ್ರೀಯ ಕಲ್ಪನೆಯಲ್ಲಿದ್ದ ಸಮುದಾಯಗಳು ವಸಾಹತುಶಾಹಿ ನಿರ್ಮಿಸುವ Stateನ ಅರ್ಥದಲ್ಲಿ ಜೀವಿಸುತ್ತಿರಲಿಲ್ಲ. ಆದ್ದರಿಂದಲೇ ದೇಶಿ ರಾಷ್ಟ್ರೀಯತೆಯಲ್ಲಿ ಪರಧಿಯ ಸಮುದಾಯಗಳ ಚರಿತ್ರೆ ನಿರ್ಧಿಷ್ಟವಾಗಿ ಒಂದು ಆಕಾರಕ್ಕೆ ಸಿಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಇವರ ಪ್ರಕಾರ ಜನಪದ ಸಮುದಾಯಗಳು ಯಾವಾಗಲೂ ಸಮಷ್ಠಿ ಪ್ರಜ್ಞೆಯನ್ನು ಹೊಂದಿ, ಇಲ್ಲಿನ ಪ್ರಜ್ಞೆಯ ವಿಕಾಸದ ಪ್ರಕ್ರಿಯೆಯಲ್ಲಿ ಕಾಲದೇಶಗಳನ್ನು ಮೀರಿ ನಿಲ್ಲುತ್ತವೆ. ಇಡೀ ಜನಾಂಗವನ್ನು ಅಥವಾ ಗುಂಪನ್ನು ವರ್ಗೀಕರಿಸಿದರೆ ಅಲ್ಲಿ ಎಲ್ಲಾ ಆಯಾಮಗಳನ್ನು ಕಾಣಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ.

೧೦. ಬಿ.ಶಿವರಾಮು ಶೆಟ್ಟಿಯವರ ‘ಮೌಖಿಕ ಚರಿತ್ರೆ’ಯಲ್ಲಿ (ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ-೪ ಚರಿತ್ರೆ, ೨೦೦೦) ಮೌಖಿಕ ಚರಿತ್ರೆಯನ್ನು ಇತಿಹಾಸ ರಚನೆಯ ಸಂದರ್ಭದಲ್ಲಿ ಹೇಗೆ ಬಳಸಿಕೊಳ್ಳ ಬೇಕು ಮತ್ತು ಅದನ್ನು ಬಳಸಿಕೊಳ್ಳಲು ಯಾವ ಯಾವ ತೊಡಕುಗಳುಂಟಾಗುತ್ತವೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಇವರ ಪ್ರಕಾರ ‘ಮೌಖಿಕ ಇತಿಹಾಸದ ಪುನರ್ ರಚನೆಯ ಸಂದರ್ಭದಲ್ಲಿ ೧೯ನೇಯ ಶತಮಾನದಲ್ಲಿ ಯುರೋಪಿನಲ್ಲಿ ಬಂಡವಾಳ ಶಾಹಿಯ ಉಚ್ಛ್ರಾಯ ಕಾಲದಲ್ಲಿ ಸೃಷ್ಟಿಗೊಂಡ, ಚರಿತ್ರೆಯನ್ನು ಗ್ರಹಿಸಿದ ಕೇಂದ್ರ ಮತ್ತು ಗ್ರಂಥಿ ಎನ್ನುವ ಪರಿಕಲ್ಪನೆ ಹಾಗೂ ಆ ವರ್ಗೀಕರಣದ ವಿನ್ಯಾಸದಲ್ಲೇ ‘ಮೌಖಿಕ ಇತಿಹಾಸ’ವನ್ನು ನಾವಿಂದು ಪುನರ್ ನಿರ್ಮಿಸಿಕೊಳ್ಳುತ್ತಿದ್ದೇವೆ. ಹೀಗೆ ಮೇಲಿನ/ಕೆಳಗಿನ, ಕೇಂದ್ರ/ಅಂಚು, ನಗರ/ಗ್ರಾಮ್ಯ, ಗಂಡು/ಹೆಣ್ಣು, ರಾಜ/ಜನ ಈ ಬಗೆಯ ಶ್ರೇಣಿಕೃತ ಸಿದ್ಧಸ್ಥಿತಿಗಳನ್ನೇ ಒಪ್ಪಿಕೊಂಡೇ ಮೌಖಿಕ ಇತಿಹಾಸವನ್ನು ನಾವಿಂದು ಪುನರ್ ಉತ್ಪಾದಿಸಿಕೊಳ್ಳುತ್ತಿದ್ದೇವೆ. ಈ ಘಟಕಗಳ ನಡುವೆ ಪರಸ್ಪರ ಕೊಳು ಕೊಡೆಯ

ಅವಲಂಬನದ ಸಂಬಂಧಗಳನ್ನು ಕಾಣದೇ ಕೇವಲ ವಿರುದ್ಧ ನೆಲೆಗಳಲ್ಲಿ ಅವುಗಳನ್ನು ಗ್ರಹಿಸಿಕೊಂಡ ಕಾರಣದಿಂದಲೇ ಮೌಖಿಕ ಚರಿತ್ರೆಯನ್ನು ಮೌಖಿಕ ಇತಿಹಾಸವಾಗಿ, ಸಾಂಪ್ರದಾಯಿಕ ಇತಿಹಾಸ ರಚನೆಗೆ ಬದಲಿಯಾಗಿ ನಿರೂಪಿಸುತ್ತಿದ್ದೇವೆ. ಈ ಗ್ರಹಿಕೆಯ ಕಾರಣದಿಂದ, ಸಾಂಪ್ರದಾಯಿಕ ಇತಿಹಾಸ ರಚನೆಯ ಅಕ್ಷರಿಕ ಆಕರಗಳಿಗೆ ಬದಲಿಯಾಗಿ ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಮೂಲಕ ರಾಜನ ಬದಲು ಜನರ ದೃಷ್ಟಿಯಲ್ಲಿ ರಾಜತ್ವವನ್ನು ನಿರೂಪಿಸಲಾಗುತ್ತಿದೆ. ಅಂದರೆ ಪ್ರಭುತ್ವದ ಸಾಂಪ್ರದಾಯಿಕ ಇತಿಹಾಸಕ್ಕೆ ವಿರುದ್ಧವಾಗಿ ವಿಲೋಮ ಸ್ಥಿತಿಯಲ್ಲಿ ಪ್ರಭುತ್ವದ ಚರಿತ್ರೆಯನ್ನು ಹೆಣೆಯಲಾಗುತ್ತಿದೆ. ಹಾಗೆಯೇ ಕೇಂದ್ರ/ಪರಿಧಿ ಎನ್ನುವ ಪಶ್ಚಿಮ ಪ್ರಣೀತ ಗೃಹೀತಗಳ ಆಧಾರದಲ್ಲಿ ಮೌಖಿಕ ಚರಿತ್ರೆಯನ್ನು ಪರಿಧಿಯಲ್ಲಿ ಗ್ರಹಿಸಿಕೊಳ್ಳಲಾಗುತ್ತಿದೆ. ಇದರಿಂದ ಅಂಚಿಗೆ ಸರಿಸಲ್ಪಟ್ಟ ಚರಿತ್ರೆ ಕೇಂದ್ರಕ್ಕೆ ಬರುತ್ತದೆ. ಅಂಚಿನಲ್ಲಿರುವ ಹೆಣ್ಣಿನ ಮೂಲಕ ಗಂಡಿನ, ಆಳಿನ ಮೂಲಕ ಒಡೆಯನ, ಜನರ ಮೂಲಕ ರಾಜನ, ಕೆಳಗಿನ ಮೂಲಕ ಮೇಲಿನ ಚರಿತ್ರೆ ಮರು ನಿರ್ಮಿಣವಾಗುತ್ತದೆ. ಈ ವಿನ್ಯಾಸದಲ್ಲಿ ಮೌಖಿಕ ಚರಿತ್ರೆಯನ್ನು ನಿರೂಪಿಸುವುದು ಮೌಖಿಕ ಇತಿಹಾಸವಾಗಿ ಮತ್ತು ಈಗಾಗಲೇ ನಿರೂಪಿಸಲ್ಪಟ್ಟ ಸಾಂಪ್ರದಾಯಿಕ ಇತಿಹಾಸಕ್ಕೆ ವಿರುದ್ಧವಾಗಿ ಅಧೀನವೇ ಇಲ್ಲಿ ಪ್ರಧಾನವಾಗುತ್ತದೆ' ಎನ್ನುತ್ತಾರೆ.[೨] ಇಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ವಿಷಯ ಮತ್ತು ವ್ಯಕ್ತಿಗಳು ಆಧುನಿಕೋತ್ತರ ಸಂದರ್ಭದಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತವೆಂದು ಹೇಳುತ್ತಾರೆ. ಜೊತೆಗೆ ಇತಿಹಾಸಕಾರನಿಗೆ ಮೌಖಿಕಕ್ಕೆ ಬದಲಾಗಿ ಲಿಖಿತ ದಾಖಲೆಗಳು ಯಾಕೆ ಅಧಿಕೃತವಾಗುತ್ತವೆನ್ನುವುದನ್ನು ರೂಪ, ಕಾಲ, ಬಹುಪಠ್ಯ ಎಂಬ ಅಂಶಗಳೊಂದಿಗೆ ಚರ್ಚಿಸಿದ್ದಾರೆ. ಇಡೀ ಲೇಖನದಲ್ಲಿ ಶ್ರೇಣಿಕೃತ ವ್ಯವಸ್ಥೆಯ ಅಥವಾ ಸಾಂಪ್ರದಾಯಿಕ ಇತಿಹಾಸ ರಚನೆಯ ಬದಲಾಗಿ ಮೌಖಿಕ ಆಕರಗಳನ್ನು ಬಳಸಿಕೊಂಡು ಇತಿಹಾಸವನ್ನು ಪುನರ್ ರಚಿಸಬೇಕಾಗುತ್ತದೆ ಎಂದು ಹೇಳುತ್ತಾರೆ.

ಹೀಗೆ ಹಲವು ವಿದ್ವಾಂಸರು ಸಾಂಪ್ರಾದಾಯಿಕ ಇತಿಹಾಸ ಮತ್ತು ಕಂಠಸ್ಥ ಪರಂಪರೆಯ ನಡುವಿನ ಸಂಬಂಧ ಕುರಿತು ಎರಡು ರೀತಿಯ ಚಿಂತನೆಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡಿರುವುದು ಕಾಣಬಹುದು. ೧. ಜಾನಪದ ಮತ್ತು ಇತಿಹಾಸದ ಸ್ವರೂಪ ಮತ್ತು ವಿಧಾನಗಳನ್ನು ಲಿಖಿತ ಇತಿಹಾಸದ ಸ್ವರೂಪ ಮತ್ತು ವಿಧಾನಗಳಿಂದ ಬೇರೆಯಾಗಿಯೇ ಗ್ರಹಿಸುವುದು. ಜಾನಪದ ಇತಿಹಾಸವು ಸೈದ್ಧಾಂತಿಕವಾಗಿ ಭಿನ್ನವಾಗಿರುವುದರಿಂದ, ಅವುಗಳನ್ನು ಲಿಖಿತ ಇತಿಹಾಸದೊಂದಿಗೆ ಹೋಲಿಸಿ ನೋಡಬಾರದೆಂಬ ನಿಲುವು ಕೆಲವರದಾಗಿದೆ. ೨. ಈಗಾಗಲೇ ಸಿದ್ಧಗೊಂಡಿರುವ ಚರಿತ್ರೆಯ ಕಲ್ಪನೆಯೊಂದಿಗೆ, ಅದಕ್ಕೆ ಪೂರಕವಾದ ಸಾಮಗ್ರಿಗಳು ಜನಪದರಲ್ಲಿ ಸಿಕ್ಕಿದಾಗ ಸಂಭ್ರಮಗೊಳ್ಳಲಾಗುತ್ತದೆ. ಅಂದರೆ ಜನಪದ ಇತಿಹಾಸದ ಅಧ್ಯಯನದ ವಿಧಿ ವಿಧಾನಗಳನ್ನು ಇವರು ಲಿಖಿತ ಇತಿಹಾಸದಿಂದಲೇ ನಿಷ್ಪನ್ನಗೊಳಿಸಿಕೊಂಡಿದ್ದಾರೆ ಎಂದೇ ಅಭಿಪ್ರಾಯ ಪಡೆಯಬಹುದು.

೩.೪. ಪುರಾವಸ್ತು ಮತ್ತು ಜಾನಪದ

ಜಾನಪದವು ಎಲ್ಲಾ ಶಾಸ್ತ್ರಜ್ಞರಿಂದ ಉಪೇಕ್ಷಿತವಾಗಿರುವುದು ಮೊದಲಿಗೆ ಕಂಡುಬಂದರೂ ಇತ್ತೀಚೆಗೆ ಜಾನಪದದ ಬಗ್ಗೆ ಗಂಭೀರವಾದ ಲಕ್ಷ್ಯವನ್ನು ಹರಿಸಿ, ಇದರ ಅಧ್ಯಯನದ ಮಹತ್ವವನ್ನು ಒತ್ತಿ ಹೇಳುತ್ತಿರುವುದು ಕಾಣಬಹುದು. ನೈಸರ್ಗಿಕವಾಗಿ ಸಿಗುವ ಎಲ್ಲಾ ವಸ್ತುಗಳಲ್ಲಿ ಒಂದೊಂದು ರೀತಿಯ ಅನನ್ಯ ಸಂಬಂಧವನ್ನು ನಮ್ಮ ಜನಪದರು ಹೊಂದಿದ್ದಾರೆ. ದಿನನಿತ್ಯದ ಅವಿನಾಭಾವ ಸಂಬಂಧ, ಭೂತದಲ್ಲಿ ಆ ವಸ್ತುವಿಗಿದ್ದ ವಸ್ತುನಿಷ್ಠ ವಿಶೇಷತೆ, ವಾಸ್ತವದಲ್ಲಿಟ್ಟು ಅವರ ಬಗ್ಗೆ ಅಭಿವ್ಯಕ್ತಿಸುವ ಕ್ರಮ, ಇವೆಲ್ಲವೂ ಕಂಡು-ಕೇಳಿದ-ಅನುಭವಿಸಿದ ವಿಚಾರಗಳೇ ಆಗಿವೆ. ಜಾನಪದವು ಒಂದು ದೃಷ್ಟಿಯಲ್ಲಿ ಎಲ್ಲಾ ಅಂಶಗಳನ್ನು ಅಡಗಿಸಿಟ್ಟು ಕೊಂಡಿರುತ್ತದೆ. ಅದರಲ್ಲಿ ಈ ಪುರಾವಸ್ತುವು ಸಹ ಒಂದಾಗಿದೆ.

ಡಾ.ಎಂ.ಚಿದಾನಂದಮೂರ್ತಿಯವರು 'ಪುರಾವಾಸ್ತುಶಾಸ್ತ್ರದ(Antiquclox) ಕಕ್ಷೆಯಲ್ಲಿ ಕೋಟೆಗಳು, ಹಿಂದಿನ ದೇವಾಲಯಗಳು, ಶಿಲ್ಪಗಳು, ಶಾಸನಗಳು, ಹಸ್ತಪ್ರತಿಗಳು, ನಾಣ್ಯಗಳು ಮತ್ತು ಪುರಾನಿವೇಶನಗಳಂತಹ "ಪುರಾವಸ್ತು"ಗಳ ಸಾಮಗ್ರಿಯ ಸಂಗ್ರಹವೂ ವ್ಯಾಖ್ಯಾನವೂ ಸೇರುತ್ತದೆ.'[೩೩] ಇವೆಲ್ಲವೂ ಪುರಾವಸ್ತುವಿನ ಕಕ್ಷೆಯಲ್ಲಿ ಬರುತ್ತವೆಂದು ಹೇಳಿ ಇವುಗಳಿಗೆ ಕುರಿತಾದ ಜಾನಪದಶಾಸ್ತ್ರದಲ್ಲಿ ನಿರೂಪಿತವಾಗುವ ಅಂಶಗಳನ್ನು ಇಲ್ಲಿಕೊಡುತ್ತಾರೆ. 'ಭಾರತಕ್ಕೆ ಬಹು ಪ್ರಾಚೀನವಾದ ಸಾಂಸ್ಕೃತಿಕ ಪರಂಪರೆಯಿದ್ದು ಸಾವಿರಾರು ಪುರಾವಸ್ತುಗಳೂ ಅವುಗಳನ್ನು ಕುರಿತಾದ ಅಸಂಖ್ಯಾತ ಹಾಡು, ಕತೆ, ಐತಿಹ್ಯ ಪುರಾಣಗಳೂ ಬೆಳೆದು ಬಂದಿವೆ. ಪುರಾವಸ್ತುಗಳನ್ನು ಕುರಿತಾದ ಜಾನಪದ ಶಾಸ್ತ್ರದಲ್ಲಿ ಐತಿಹ್ಯ, ಪುರಾಣಗಳು(ಸ್ಥಳ ಪುರಾಣ ಮಹಾತ್ಮ್ಯಗಳು), ಜಾನಪದ ಕತೆಗಳು, ನಂಬಿಕೆಗಳು, ಸಂಪ್ರದಾಯಗಳು ಗಾದೆಗಳು, ಹಾಡುಗಳು ಇರುತ್ತವೆ'[೩೪]

ಪುರಾವಸ್ತುಗಳಲ್ಲಿಯು ಜಾನಪದವನ್ನು ಹುಡುಕುವುದು ಹಾಸ್ಯಾಸ್ಪದವಾಗಿ ಕಂಡರೂ ಇದರ ಬಗ್ಗೆ ಹೆಚ್ಚಿನ ಆಸ್ಥೆವಹಿಸಬೇಕೆಂದು ಎಂ.ಚಿದಾನಂದಮೂರ್ತಿಯವರು ಹೇಳುತ್ತಾರೆ. ಜಾನಪದದ ಬಗ್ಗೆ ಪುರಾವಸ್ತು ಶಾಸ್ತ್ರಜ್ಞರು ತಾಳಿರುವ ಆಲಕ್ಷ್ಯದ ಬಗ್ಗೆಯು ತೀವ್ರ ಆಕ್ಷೇಪವೆತ್ತಿದ್ದಾರೆ. 'ಭಾರತೀಯ ಅಥವಾ ಕರ್ನಾಟಕ ಜಾನಪದ ಶಾಸ್ತ್ರದ ಒಂದು ಬಹುಮುಖ್ಯ ಭಾಗವು ಪುರಾವಸ್ತು ಶಾಸ್ತ್ರಜ್ಞರಿಂದ ಉಪೇಕ್ಷಿತವಾಗಿರುವುದು ಒಂದು ವೇಳೆ ಕ್ಷಮ್ಯವಾಗಿದ್ದರೂ, ಜಾನಪದ ಶಾಸ್ತ್ರಜ್ಞರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು ಅಂತಹ ಸಾಮಗ್ರಿಯ ವೈಶಿಷ್ಟ್ಯ ಅಥವಾ ಅನನ್ಯತೆಯನ್ನು ಗಮನಕ್ಕೆ ತಂದುಕೊಳ್ಳದಿರುವುದು ತೀರ ಅಕ್ಷಮ್ಯವಾಗಿ ತೋರುತ್ತದೆ.'[೩೫] ಅಳಿದುಳಿದಿರುವ ಅವಶೇಷಗಳನ್ನು ಜಾನಪದ ತಜ್ಞರು ಅವುಗಳ ವೈಶಿಷ್ಟ್ಯತೆಗಳನ್ನು ಕುರಿತು ಚರ್ಚಿಸಬೇಕೆನ್ನುವುದು ಇವರ ವಾದವಾಗಿದೆ.

ಪ್ರತಿಯೊಂದು ಸ್ಪರ್ಶ ಚರವಸ್ತುಗಳಲ್ಲಿಯೂ ಜಾನಪದದ ಅಂಶವೂ ಅಡಗಿಸಿಟ್ಟುಕೊಂಡಿರುತ್ತವೆ. ಜನಪದರ ಸಮಷ್ಟಿಯ ಮನಸ್ಸು ಇಂತಹ ಎಲ್ಲಾ ಚರವಸ್ತುಗಳಲ್ಲಿಯೂ ತಾದಾತ್ಮ್ಯವನ್ನು ಇಟ್ಟುಕೊಂಡು

ಉದಾಸೀನದಿಂದ ಕಾಣದೆ ಅವುಗಳ ಮೇಲೆ ಹುಟ್ಟಿರುವ ಸಾಹಿತ್ಯವನ್ನು ಪರಂಪರೆಯಿಂದ ಪರಂಪರೆಗೆ ಹೊಯ್ಯುವ ಕೆಲಸವನ್ನು ಮಾಡುತ್ತಿದ್ದಾರೆ. ಹಾಡುಗಳು, ಕಥೆ, ಐತಿಹ್ಯ, ಪುರಾಣ ಇವೆಲ್ಲವೂ ಒಂದಲ್ಲ ಒಂದು ಅಭಿವ್ಯಕ್ತಿಯ ಮಾರ್ಗವನ್ನು ಜನಪದರಲ್ಲಿ ಕಾಣಬಹುದಾಗಿದೆ. ಜಾನಪದರಿಗೆ ಈ ವಸ್ತುಗಳ ಬಗೆಗೆ ಗೌರವವಿರುವುದು ಮತ್ತು ದೈವಕ್ಕೆ ಸಮಾನವೆಂದು ಕಾಣುವುದು ಸಹ ನೋಡಬಹುದು.

ಜಾನಪದರಿಗೆ ಚಾರಿತ್ರಿಕ ಘಟನೆಗಳು ವಸ್ತುವಿಗೆ ಕಾರಣವಾಗಿದ್ದರೂ ಅನೇಕ ಉತ್ಪ್ರೇಕ್ಷಗಳು ಸೇರಿಕೊಂಡಿರುವುದರಿಂದ ಇದರ ಚಾರಿತ್ರಿಕ ಸತ್ಯದ ಅಂಶಗಳು ಇರದಿರಲು ಸಾಧ್ಯವಿಲ್ಲ. ಸತ್ಯದ ಅಂಶಗಳು ಇರಬಹುದು, ಇರದಿರಲೂ ಬಹುದು. ಕೆಲವು ಬಾರಿ ಪ್ರಾದೇಶಿಕವಾಗಿರುವ ಪುರಾವಸ್ತುಗಳನ್ನು ನೋಡಿ ಅಲ್ಲಿ ಹೇಳುವ ಮೌಖಿಕ ವಿಚಾರವನ್ನು ಸಂಗ್ರಹಿಸುವುದರಿಂದ ಇತಿಹಾಸವು ಇಂತಹ ಕಾಲಘಟ್ಟದಲ್ಲಿ ನಡೆದಿತ್ತು ಎನ್ನುವ ವಿಚಾರಕ್ಕೆ ಬರಬಹುದು. ಕೋಟೆಗಳ ವಾಸ್ತುಶಿಲ್ಪ ಮತ್ತು ದೇವಾಲಯಗಳ ವಾಸ್ತುಶಿಲ್ಪದ ಆಧಾರದ ಮೇಲೆ ಈ ನಿರ್ಮಾಣವು ಈ ಕಾಲಘಟ್ಟದಲ್ಲಿ ನಿರ್ಮಿತವಾಗಿತ್ತು ಎಂದು ಹೇಳಬಹುದಾಗಿದೆ. ಕಾಲ ನಿರ್ಣಯವು ವಾಸ್ತುಶಿಲ್ಪದಡಿಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಪ್ರಾದೇಶಿಕವಾಗಿ ಹೇಳುವ ಮೌಖಿಕ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಂಡರೆ ಇನ್ನಷ್ಟು ಶ್ರಮತಪ್ಪುತ್ತದೆ. ಪುರಾವಸ್ತುಗಳು ಇತಿಹಾಸದಲ್ಲಿ ಬರುವ ಆಕರಗಳಾಗಿ ನಿಲ್ಲುತ್ತವೆ. ಇವು ಇತಿಹಾಸದ ಸೃಷ್ಟಿಗೆ ಕಾರಣವಾಗಿ ಇವುಗಳೊಳಗೆ ಚರಿತ್ರೆಯನ್ನು ಗರ್ಭೀಕರಿಸಿಕೊಂಡು ಜಾನಪದದೊಂದಿಗೆ ಒಳಗೊಳಗೆ ಮಿಳಿತಗೊಂಡು ಹುದುಗಿರುತ್ತದೆ. 'ಪುರಾವಸ್ತು ಶಾಸ್ತ್ರವು ಎಷ್ಟೋ ಬಾರಿ ತನ್ನದೇ ಆದ ರೀತಿಯಲ್ಲಿ ಚರಿತ್ರೆಯನ್ನು ಗರ್ಭೀಕರಿಸಿಕೊಂಡಿರುತ್ತದೆ. ಚರಿತ್ರೆಯು ಕಥೆ ಪುರಾಣಗಳ ಒಳಗೆ ರಕ್ಷಿತಗೊಂಡು ಹುದುಗಿರುತ್ತದೆ. ಈ ಚರಿತ್ರೆಯನ್ನು ತಿಳಿಯುವುದು ಅಥವಾ ಬೇರೆ ಮೂಲಗಳಿಂದ ತಿಳಿದುಬರುವ ಚರಿತ್ರೆಯನ್ನು ಪುರಾವಸ್ತುಶಾಸ್ತ್ರ ಸಾಮಾಗ್ರಿಯಿಂದ ಪುರಾತತ್ವಶಾಸ್ತ್ರದ ಪ್ರಮುಖವಲ್ಲದಿದ್ದರೂ ಗಮನಾರ್ಹ ಗುರಿಗಳಲ್ಲೊಂದು.'[೩೬]

ಪುರಾವಸ್ತುಗಳ ಮೇಲೆಯಿರುವ ಕಥೆ, ಪುರಾಣಗಳು ಸುಳ್ಳೆಂದು ವರ್ಜಿಸಲು ಬರುವುದಿಲ್ಲ. ಪಾವಗಡದ ಕೋಟೆ ನಿರ್ಮಾಣದ ಸಮಯದಲ್ಲಿ ಬಿರುಕು ಕಂಡುಬಂದು, ಅದಕ್ಕೆ ನರಬಲಿ ಕೊಡಬೇಕೆಂದು ಸೂಚಿಸಿದ್ದರಿಂದ ಕೆಲಸವನ್ನು ನಿಲ್ಲಿಸಿದರು. ಆ ಸಮಯದಲ್ಲಿ ಸುಬ್ಬರಾಯಪ್ಪನ ಮಗಳಾದ ಸರಸ್ವತಿ ಸ್ವಇಚ್ಛೆಯಿಂದ ಕೋಟೆಗೆ ಬಲಿಯಾಗಿ ಕೋಟೆಯನ್ನು ಕಾಪಾಡಿದಳೆಂದು, ಇದೇ ರೀತಿಯಾಗಿ ಪಾಪಮ್ಮ, ಕೋಟಮ್ಮ, ಮುತ್ಯಾಲಮ್ಮ ಎಂಬುವರು ಬಲಿಯಾದರೆಂದು ಸ್ಥಳೀಯ ಐತಿಹ್ಯಗಳು ತಿಳಿಸುತ್ತವೆ. ಈ ರೀತಿಯಾಗಿ ಬಲಿತೆಗೆದುಕೊಂಡ ಕೋಟೆಯ ಬಾಗಿಲುಗಳ ಮೇಲೆ ಸ್ತ್ರೀಯ ಶಿರೋಭಾಗವನ್ನು ಮತ್ತು ನಗ್ನ ಸ್ತ್ರೀಯ ಚಿತ್ರಣಗಳನ್ನು ಇಂದಿಗೂ ಕಾಣಬಹುದು.'[೩೭] ಈ ಮೇಲಿನ ಐತಿಹ್ಯವನ್ನು ಸ್ಥಳೀಯರು ಅಭಿವ್ಯಕ್ತಿಸಿ ಕೋಟೆಯ ಬಾಗಿಲಿನ ಮೇಲೆ ಇರುವ ಹೆಣ್ಣಿನ ಶಿರೋಭಾಗದ ಕಲ್ಲನ್ನು ತೋರಿಸುತ್ತಾರೆ.

ಇದಲ್ಲದೆ ಅನೇಕ ರೀತಿಯ ಇಂತಹ ಘಟನೆಗಳ ಹಿನ್ನೆಲೆಯಲ್ಲಿ ಪುರಾವಸ್ತುಗಳನ್ನು ತೋರಿಸುತ್ತಾ ಘಟನೆಯ ವಿವರಗಳನ್ನು ಹೇಳುತ್ತಾರೆ. ಇದೇ ರೀತಿ ಭಸ್ಮಾಂಗಿ ಕೋಟೆಯೊಳಗೆ ಒಂದು ಬಸವನ ವಿಗ್ರಹವಿದೆ. ಈ ವಿಗ್ರಹಕ್ಕೆ ಸರಪಣಿಯಿಂದ ಬಿಗಿದು ಕಟ್ಟಿರುವಂತೆ ಶಿಲ್ಪಿಯು ಕೆತ್ತಿದ್ದಾನೆ. ಅಲ್ಲಿನ ಜನರು ಈ ವಿಗ್ರಹಕ್ಕೆ ಒಂದು ಐತಿಹ್ಯ ಹೇಳುತ್ತಾರೆ. ಪಾಳೇಗಾರನಾದ ಬೂದಿ ಬಸಪ್ಪನಾಯಕನ ಒಂದು ಬಸವವು ದಿನಾಲು ಸಿರಾದ ರಂಗಣ್ಣನ ಕಾವಲಿಗೆ ಮೇಯಲು ಹೋಗುತ್ತಿತ್ತು. ಆದರೆ ಅಲ್ಲಿಂದ ತಪ್ಪಿಸಿಕೊಂಡು ರೈತರ ಗದ್ದೆಗಳಿಗೆ ನುಗ್ಗುತ್ತಿತ್ತು. ಬಸವ ರೈತರು ಬರುವ ಹೊತ್ತಿಗೆ ಮೇಯ್ದು ಹೋಗುತ್ತಿತ್ತು. ರೈತರು ಈ ಬಸವನನ್ನು ಹಿಡಿಯಬೇಕೆಂದು ಒಂದು ದಿನ ಕಾದರು. ಬಸವ ಬಂದು ಮೇಯಲು ಆರಂಭಿಸಿದ ತಕ್ಷಣ ಅಟ್ಟಿಸಿಕೊಂಡು ಹಿಡಿಯಲು ಹೋದರು. ಅದು ಸಿಗದೇ ಸೀದಾ ಭಸ್ಮಾಂಗಿ ದುರ್ಗಕ್ಕೆ ಬಂದಿತು. ಇದರಿಂದಾಗಿ ರೈತರೆಲ್ಲರೂ ಬಸಪ್ಪನಾಯಕನಲ್ಲಿ ಮೊರೆಯಿಟ್ಟರು. ಹೀಗಾಗಿ ರಾಜನು ಬಸವಣ್ಣನನ್ನು ಸರಪಣಿಯೊಂದಿಗೆ ಕಟ್ಟಿಹಾಕಿದನು. ಅಂದಿನಿಂದ ಅದು ಅಲ್ಲೆ ಉಳಿಯುವಂತಾಯಿತು. ಅದು ಕೊನೆಗೆ ಕಲ್ಲಾಯಿತು ಎಂದು ಹೇಳುತ್ತಾರೆ. ಹೀಗೆ ಒಂದೊಂದು ಪುರಾವಸ್ತುಗಳನ್ನು ತೋರಿಸುತ್ತಾ ಅವುಗಳ ಬಗ್ಗೆ ಜನಪದರು ಕಥೆಗಳನ್ನು ಕಟ್ಟಿ ಅಭಿವ್ಯಕ್ತಿಸುವ ಜಾಣ್ಮೆಯನ್ನು ಇಲ್ಲಿ ಕಾಣಬಹುದಾಗಿದೆ.

ಕೋಟೆಯು ಒಂದು ಪುರಾವಸ್ತುವಾಗಿದ್ದು ಮತ್ತು ಅದರೊಳಗಿರುವ ಎಲ್ಲಾ ವಸ್ತುಗಳೆಲ್ಲವೂ ಪುರಾವಸ್ತುಗಳೆಂದೇ ಕರೆಯಬಹುದಾಗಿದೆ. ಇವೆಲ್ಲವೂ ಒಟ್ಟಾರೆಯಾಗಿ ಯಾವುದೋ ಒಂದು ಕಾಲಘಟ್ಟದಲ್ಲಿ ಮನುಷ್ಯನಿಂದ ನಿರ್ಮಿತವಾದಂತಹ ವಸ್ತುಗಳಾಗಿವೆ. ಪುರಾವಸ್ತುಗಳು ಅಥವಾ ಪ್ರಾಚೀನ ಅವಶೇಷಗಳು ಎಲ್ಲಾ ಕಡೆಯೂ ಸಾಮಾನ್ಯವಾಗಿ ಕಂಡುಬರುತ್ತವೆ. ಈ ಪುರಾವಸ್ತುಗಳು ಆಯಾ ಪ್ರದೇಶದ ಭೂತಕಾಲದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ಸಮಕಾಲೀನ ಸಮುದಾಯಗಳ ಸಂಸ್ಕೃತಿಯನ್ನು ಹೇಳುವಲ್ಲಿ ಸಹಾಯ ಮಾಡುತ್ತವೆ. ಇತಿಹಾಸದ ಕೋಟೆಗಳು, ದೇವಾಲಯಗಳು, ವಿಗ್ರಹಗಳು, ಕಣಜಗಳು ಹಾಗೂ ಇನ್ನಿತರ ಪುರಾವಸ್ತುಗಳನ್ನು ಜನಸಮುದಾಯಗಳಿರುವ ಪರಿಸರದಲ್ಲಿ ಕಾಣುತ್ತೇವೆ. ಈ ಪುರಾವಸ್ತುಗಳೊಂದಿಗೆ ಜನಸಮುದಾಯಗಳು ಗಾಢವಾದ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಜೊತೆಗೆ ಭೌತಿಕ ವಸ್ತುರೂಪಗಳಿಗೆ ಜನಪದರು ಒಂದಲ್ಲ ಒಂದು ರೀತಿಯಿಂದ ಪ್ರತಿಕ್ರಿಯಿಸುತ್ತಲೇ ಇರುತ್ತಾರೆ. ಅದರಲ್ಲೂ ಇತಿಹಾಸ ಪ್ರಸಿದ್ಧ ವಸ್ತುಗಳಿಗೆ ಜನರ ಪ್ರತಿಕ್ರಿಯೆ ಬಹು ಕುತೂಹಲಕರವಾಗಿರುತ್ತವೆ. ಜನಪದ ಸಾಹಿತ್ಯ ಪ್ರಕಾರಗಳು ಹೇಗೆ ಮೌಖಿಕ ರೂಪದಲ್ಲಿ ಮುಂದುವರೆದುಕೊಂಡು ಬರುತ್ತವೆಯೋ ಭೌತಿಕ ಜಾನಪದವು ಮೌಖಿಕ ರೂಪದಲ್ಲಿಯೇ ಮುಂದುವರೆದುಕೊಂಡು ಬಂದಿದೆ. ಈ ಮೌಖಿಕರೂಪಗಳಿಗೆ ಸ್ಥಿರ ಪಠ್ಯವೆಂಬುದಿಲ್ಲ. ಅವು ಪ್ರತಿಯೊಬ್ಬ ನಿರೂಪಕನಲ್ಲಿಯೂ ಪುನರ್ ಸೃಷ್ಟಿಯಾಗುತ್ತಿರುತ್ತದೆ.'[೪೮]

ಜಾನಪದ ಶಾಸ್ತ್ರವು ಎಲ್ಲಾ ಶಾಸ್ತ್ರಗಳ ಮೂಲ ಆಕರ ಸಾಮಗ್ರಿ ಅದರಲ್ಲಿ ಪುರಾವಸ್ತು ಶಾಸ್ತ್ರವು ಸಹ ಒಂದು ಶಾಖೆ. ಇಂತಹ ಪುರಾವಸ್ತು ಶಾಸ್ತ್ರದ ಬಗೆಗೆ ಕೆಲವು ವಿದ್ವಾಂಸರ ಚರ್ಚೆಗಳನ್ನು ಪರಿಶೀಲಿಸುವುದು ಅವಶ್ಯಕ.

೧. ಡಾ.ಚಿದಾನಂದಮೂರ್ತಿಯವರು 'ಪುರಾವಸ್ತುಶಾಸ್ತ್ರ ಅಥವಾ ಪಳೆವಸ್ತುಗಳಿಗೆ ಸಂಬಂಧಿಸಿದ ಜಾನಪದಶಾಸ್ತ್ರ'ಎಂಬ ಲೇಖನ ಬರೆಯುತ್ತಾ ಪುರಾವಸ್ತು ಶಾಸ್ತ್ರಜ್ಞರು ಜಾನಪದ ಶಾಸ್ತ್ರವನ್ನು ನಿರ್ಲಕ್ಷಿಸಿದ್ದಾರೆ. ಜಾನಪದಶಾಸ್ತ್ರದ ಒಂದು ಶಾಖೆ ಪುರಾಶಾಸ್ತ್ರವಾಗಿರುವುದರಿಂದ, ಇದರ ಬಗೆಗೆ ಇರುವ ಜಾನಪದ ಸಾಮಗ್ರಿಯನ್ನು ಸಂಗ್ರಹಿಸಿ, ಅದನ್ನು ವ್ಯಾಖ್ಯಾನಿಸಿ ಅದರ ಬಳಕೆ ಮಾಡಿಕೊಳ್ಳಬೇಕೆಂದು ಹಲವು ಉದಾಹರಣೆಯೊಂದಿಗೆ ಚರ್ಚಿಸುತ್ತಾ ಹೇಳಿದ್ದಾರೆ.

೨. ಡಾ.ಪುರುಷೋತ್ತಮ ಬಿಳಿಮಲೆಯವರು 'ಹಂಪಿ ಜಾನಪದ'(೧೯೯೬) ಕೃತಿಯಲ್ಲಿ ಹಂಪಿಯ ಪರಿಸರದಲ್ಲಿರುವ ಪುರಾವಸ್ತುಗಳ ಬಗೆಗೆ ಜನಪದರು ಹೇಳುವ ವಿಚಾರಗಳನ್ನು ಸಂಗ್ರಹಿಸಿದ್ದಾರೆ. ಈ ಕೃತಿಯಲ್ಲಿ ಪುರಾವಸ್ತುಗಳ ಮೇಲೆ ಹುಟ್ಟಿರುವ ಜಾನಪದವನ್ನು ಭೌತಿಕ ಜಾನಪದವೆಂದು ಕರೆದಿದ್ದಾರೆ.

೩. ಡಾ. ಚಲುವರಾಜುರವರು 'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು'(೨೦೦೨) ಎಂಬ ಕೃತಿಯಲ್ಲಿ ಹಂಪಿಯ ಸ್ಮಾರಕಗಳಲ್ಲಿ ಅಭಿವ್ಯಕ್ತಿಗೊಂಡಿರುವ ಜನಪದ ವೃತ್ತಿಗಳು, ಜನಪದ ಯುದ್ಧಕಲೆಗಳು, ಪ್ರದರ್ಶನಾತ್ಮಕ ಕಲೆಗಳು, ವಾದ್ಯಗಳು, ಉಡುಗೆ-ತೊಡುಗೆಗಳು, ದಿನಬಳಕೆಯ ವಸ್ತುಗಳು, ಆಟಗಳು ಮತ್ತು ಮಿಥುನ ಶಿಲ್ಪಗಳೆಂದು ವಿಂಗಡಿಸಿ ಹಲವು ಜಾನಪದ ಅಂಶಗಳನ್ನು ಗುರುತಿಸಿ ಚರ್ಚಿಸಿದ್ದಾರೆ.

ಈ ಮೇಲಿನವರ ವಿವರಗಳನ್ನು ಪರಿಶೀಲಿಸಿದಾಗ ಪುರಾವಸ್ತುಗಳ ಬಗೆಗೆ ಜನಸಮುದಾಯಗಳು ಚಾರಿತ್ರಿಕ ಅಂಶವನ್ನು ಹೇಳುವುದರ ಜೊತೆಗೆ ಆ ಪರಿಸರದ ಸಮಾಜದ ಸಾಂಸ್ಕೃತಿಕ ಬದುಕನ್ನು ಅಡಗಿಸಿಟ್ಟುಕೊಂಡಿರುತ್ತವೆ. ಇಂತಹ ವೈವಿಧ್ಯಪೂರ್ಣ ವಿಚಾರವನ್ನು ಸಂಗ್ರಹಿಸಿ, ವ್ಯಾಖ್ಯಾನಿಸಬೇಕೆಂಬುದೇ ಆಗಿದೆ.

ಅಡಿಟಿಪ್ಪಣಿಗಳು

೧. ಡಾ.ವಿವೇಕ ರೈ, ಆನ್ವಯಿಕ ಜಾನಪದ, ಪು.೧೦೫

೨. ಡಾ.ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ, ಪು.೧

೩. ಡಾ.ಎಂ.ಎಂ.ಕಲಬುರ್ಗಿ, ಮಾರ್ಗ ೨, ಪು.೩೨೯, ೧೯೯೫

೪. ಶಿವರಾಮಶೆಟ್ಟಿ, ಮೌಖಿಕ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯದ-ಚರಿತ್ರೆ ವಿಶ್ವಕೋಶ ೪, ಪು.೩೫

೫. ಡಾ.ಹಿ.ಶಿ.ರಾಮಚಂದ್ರೇಗೌಡ, ಜಾನಪದ ಅಂತರಂಗ, ಪು.೮೮

೬. ಅದೇ, ಪು.೬೩

೭. ಜಿ.ಆರ್.ತಿಪ್ಪೇಸ್ವಾಮಿ, ಜನಪದ ಸಾಹಿತ್ಯ ಐತಿಹಾಸಿಕ ಮೂಲಸಾಮಗ್ರಿಯಾಗಿ, ಹರತಿಸಿರಿ, ಪು.೮೩೩

೮. ರಾಜಪ್ಪದಳವಾಯಿ, ಕನ್ನಡ ಸಾಹಿತ್ಯಕೋಶ, ಪು.೫೦೨

೯. ಪುರುಷೋತ್ತಮ ಬಿಳಿಮಲೆ, ಕೂಡುಕಟ್ಟು, ಪು.೯೪, ೧೯೯೭

೧೦. ಶಿವರಾಮಶೆಟ್ಟಿ, ಪೂರ್ವೋಕ್ತ, ಪು.೩೭

೧೧. ಜಿ.ಆರ್.ತಿಪ್ಪೇಸ್ವಾಮಿ, ಪೂರ್ವೋಕ್ತ, ಪು.೮೮೯, ೮೯೦

೧೨. ಶಿವರಾಮಶೆಟ್ಟಿ, ಪೂರ್ವೋಕ್ತ, ಪು.೩೭

೧೩. ಜಿ.ಆರ್.ತಿಪ್ಪೇಸ್ವಾಮಿ, ಪೂರ್ವೋಕ್ತ, ಪು.೮೭೬

೧೪. ಅರವಿಂದ ಮಾಲಗತ್ತಿ, ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು, ಪು.೪೦

೧೫. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಪು.೧೭೬, ೨೦೦೦

೧೬. ಡಾ.ಪುರುಷೋತ್ತಮ ಬಿಳಿಮಲೆ, ಚಲುವರಾಜು, ಹಂಪಿ ಜಾನಪದ, ಪು.೧೫, ೧೬

೧೭. ಪ್ರೊ. ಲಕ್ಷ್ಮಣ್ ತೆಲಗಾವಿ, *ಜನಪದ ವೀರ ಸಾಹಿತ್ಯ ಚಾರಿತ್ರಿಕ ವಿವೇಚನೆ,* ಹರತಿಸಿರಿ, ಪು.೯೬೮

೧೮. ಡಾ.ವಿವೇಕ ರೈ, ಪೂರ್ವೋಕ್ತ, ಪು.೯೧

೧೯. ಡಾ.ಅಂಬಳಿಕೆ ಹಿರಿಯಣ್ಣ, ಜಾನಪದ ಕೆಲವು ವಿಚಾರಗಳು, ಪು.೧೯, ೧೯೮೪

೨೦. ಡಾ.ಜೀ.ಶಂ.ಪರಮಶಿವಯ್ಯ, ಜಾನಪದ ಕೆಲವು ಮುಖಗಳು, ಪು.೨೬, ೨೭

೨೧. ಡಾ.ವಿವೇಕ ರೈ, ಪೂರ್ವೋಕ್ತ, ಪು.೬೫

೨೨. ಅದೇ, ಪು.೮೦, ೮೧

೨೩. ಡಾ.ಹಿ.ಶಿ.ರಾಮಚಂದ್ರೇಗೌಡ, ಪೂರ್ವೋಕ್ತ, ಪು.೮೮

೨೪. ಅದೇ, ಪು.೮೬

೨೫. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪು.೯, ೧೯೮೭

೨೬. ಜಿ.ಆರ್.ತಿಪ್ಪೇಸ್ವಾಮಿ, ಪೂರ್ವೋಕ್ತ, ಪು.೮೭೧

೨೭. ಅರವಿಂದ ಮಾಲಗತ್ತಿ, ಪೂರ್ವೋಕ್ತ, ಪು.೪೩

೨೮. ಅದೇ, ಪು.೪೭, ೪೮

೨೯. ಅದೇ, ಪು.೫೦, ೫೬

೩೦. ಡಾ.ಪಿ.ಕೆ.ರಾಜಶೇಖರ, ಪಿರಿಯಪಟ್ಟಣದ ಕಾಳಗ, ಪು.xxxviii-xxxix, ೧೯೯೦

೩೧. ಮೊಗಳ್ಳಿ ಗಣೇಶ, ದಲಿತರ ರಾಷ್ಟ್ರೀಯತೆ ಮತ್ತು ಗಾಂಧಿಯುಗ, ದಲಿತ ಚಿಂತನೆ, ಪು.೨೫೩

೩೨. ಶಿವರಾಮಶೆಟ್ಟಿ, ಪೂರ್ವೋಕ್ತ, ಪು.೩೫

೩೩. ಚಿದಾನಂದಮೂರ್ತಿ ಎಂ., ಹೊಸತು ಹೊಸತು, ಪು.೩೭೯, ೧೯೯೩

೩೪. ಅದೇ, ಪು.೩೭೯

೩೫. ಅದೇ, ಪು.೩೭೮

೩೬. ಅದೇ, ಪು.೩೮೦

೩೭. ನಾಗರತ್ನಮ್ಮ, *ಪಾವಗಡದ ಪಾಳೇಗಾರರು,* ದಕ್ಷಿಣ ಕನ್ನಡ ಅರಸು ಮನೆತನಗಳು, ಪು.೭೨

೩೮. ಡಾ.ಪುರುಷೋತ್ತಮ ಬಿಳಿಮಲೆ, ಚಲುವರಾಜು, ಪೂರ್ವೋಕ್ತ, ಪು.೯೦

ಅಧ್ಯಾಯ ೪

ತುಮಕೂರು ಜಿಲ್ಲೆಯ ಕೋಟೆಗಳ ಸ್ವರೂಪ

ಜಿಲ್ಲೆಯ ಭೌಗೋಳಿಕ ಮತ್ತು ರಾಜಕೀಯ ಇತಿಹಾಸ

ಕೋಟೆಯ ರಾಜಕೀಯ ಇತಿಹಾಸ

ಕೋಟೆಯ ಲಕ್ಷಣಗಳು

ಕೋಟೆಯ ಮಹತ್ವ

ಕೋಟೆಯಲ್ಲಿನ ಸ್ಮಾರಕಗಳು

ತುಮಕೂರು ಜಿಲ್ಲೆಯ ಕೋಟೆಗಳ ಸ್ವರೂಪ

ಜಿಲ್ಲೆಯ ಭೌಗೋಳಿಕ ಮತ್ತು ರಾಜಕೀಯ ಇತಿಹಾಸ

ಯಾವುದೇ ಪ್ರದೇಶದ ಇತಿಹಾಸ ತಿಳಿಯುವುದಕ್ಕಿಂತ ಮೊದಲು ಅಲ್ಲಿನ ಭೌಗೋಳಿಕ ಸನ್ನಿವೇಶದ ವಿವರ ತಿಳಿದುಕೊಳ್ಳುವುದು ಬಹಳ ಮುಖ್ಯ. ಸಾಮಾನ್ಯವಾಗಿ ಜನಸಮುದಾಯಗಳ ಜೀವನ ವಿಧಾನವನ್ನು ಈ ಭೌಗೋಳಿಕ ಲಕ್ಷಣಗಳು ರೂಪಿಸುತ್ತವೆ. ಈ ಅಂಶಗಳಿಂದ ಅಲ್ಲಿನ ಸಾಂಸ್ಕೃತಿಕ ಬೆಳವಣಿಗೆಯನ್ನು ಸಹ ಕಾಣಬಹುದಾಗಿದೆ. ಒಂದು ಪ್ರದೇಶದ ಸಂಸ್ಕೃತಿಯ ಉಗಮ ಮತ್ತು ವಿಕಾಸವು ಅಲ್ಲಿನ ಭೂಪ್ರದೇಶದ ನದಿ, ಬೆಟ್ಟ, ಅರಣ್ಯ, ಗ್ರಾಮಗಳಿಂದ ಪ್ರಭಾವಿತವಾಗಿರುತ್ತದೆ. ಆ ಮೂಲಕ ಆರ್ಥಿಕ, ಸಾಮಾಜಿಕ ಅಂಶಗಳನ್ನೂ ಒಳಗೊಂಡಿರುತ್ತದೆ.

ಕರ್ನಾಟಕದ ಆಗ್ನೇಯ ಭಾಗದಲ್ಲಿರುವ ತುಮಕೂರು ಜಿಲ್ಲೆಯು ರಾಜಧಾನಿ ಬೆಂಗಳೂರಿನಿಂದ ೭೦ ಕಿ.ಮೀ ದೂರದಲ್ಲಿದೆ. ಭೌಗೋಳಿಕವಾಗಿ ಈ ಜಿಲ್ಲೆಯು ಬಯಲು ಪ್ರದೇಶದಿಂದ ಕೂಡಿದ್ದು, ಹೆಚ್ಚು ಬೆಟ್ಟಗುಡ್ಡಗಳನ್ನು ಹೊಂದಿದೆ. ಯಾವುದೇ ಜೀವ ನದಿಗಳು ಈ ಜಿಲ್ಲೆಯಲ್ಲಿ ಇಲ್ಲದಿರುವುದರಿಂದ ವ್ಯವಸಾಯ ಮಾಡಲು ಮಳೆಯನ್ನೇ ಆಶ್ರಯಿಸಬೇಕಾಗಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೦,೫೯೮ ಚ.ಕಿ.ಮೀ.ಗಳು. ಇದು ೧೨-೪೫ದಿಂದ ೧೪-೨೪ ಉತ್ತರ ಅಕ್ಷಾಂಶ ಮತ್ತು ೭೬-೨೦ ದಿಂದ ೭೭-೩೨ ಪೂರ್ವರೇಖಾಂಶಗಳ ನಡುವೆ ನೆಲೆಸಿದೆ.[೧] ಈ ಜಿಲ್ಲೆಯ ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯ, ಪಶ್ಚಿಮ ಮತ್ತು ವಾಯುವ್ಯ ಭಾಗಕ್ಕೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಿವೆ. ಪಶ್ಚಿಮದ ಮಧ್ಯಭಾಗದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರಿದಿದೆ. ಈಶಾನ್ಯ ಭಾಗವು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯು ಪಾವಗಡ ತಾಲ್ಲೂಕನ್ನು ಸುತ್ತುವರಿದಿದೆ.

ತುಮಕೂರು ಜಿಲ್ಲೆಯು ಪ್ರಾಗಿತಿಹಾಸದ ತವರೂರು.[೨] ಇಲ್ಲಿ ದೊರೆಯುವ ಪುರಾತತ್ವ ಅವಶೇಷಗಳ ಅಧ್ಯಯನದಿಂದಾಗಿ, ಈ ಜಿಲ್ಲೆಯ ಮಾನವನ ಇತಿಹಾಸವನ್ನು ಶಿಲಾಯುಗಕ್ಕೆ ಕೊಂಡೊಯ್ಯಬಹುದು. ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗ, ಇತಿಹಾಸದ ಆರಂಭ ಕಾಲ ಹೀಗೆ ಒಟ್ಟು ೨೬೬[೩] ನೆಲೆಗಳನ್ನೂ ಗುರುತಿಸಿರುವುದು ಕಾಣಬಹುದು. ಪ್ರತಿಯೊಂದು ನೆಲೆಯಲ್ಲಿ ವಿವಿಧ ಸಾಂಸ್ಕೃತಿಕ ಹಂತಗಳನ್ನು ಕಾಣುತ್ತೇವೆ.

ಆದಿ, ಮಧ್ಯೆ ಮತ್ತು ಅಂತ್ಯ ಹಳೆ ಶಿಲಾಯುಗಕ್ಕೆ ಸೇರಿದ ಶಿಲಾಯುಧಗಳು ಕಿಬ್ಬನಹಳ್ಳಿ, ಬಾಣಸಂದ್ರಬೆಟ್ಟ, ಬಿಳಿಗೆರೆ, ಯಲ್ಲಪ್ಪನಾಯಕನ ಹೊಸಕೋಟೆ, ನಿಡುಗಲ್ಲು, ಕೈಮರ, ದೊಡ್ಡಗುಣಿ, ಓಬಳಾಪುರ ಮುಂತಾದ ಪ್ರದೇಶಗಳಲ್ಲಿ ಇರುವುದನ್ನು ಗುರುತಿಸಿದ್ದಾರೆ. 'ಈ ಆದಿ ಹಳೆ ಶಿಲಾಯುಗದಲ್ಲಿ ಕೈಗೊಡಲಿ, ಮುಚ್ಚುಗತ್ತಿ, ಸೀಲುಗತ್ತಿ ಹಾಗೂ ಹೆರಗತ್ತಿ, ಚೌಕಾಕಾರದ ಉಪಕರಣ, ಅಂಡಾಕೃತಿಯ ಉಪಕರಣಗಳೆಂದು ವರ್ಗೀಕರಿಸಲಾಗಿದೆ.'[೩] ಒಟ್ಟಿನಲ್ಲಿ ಆದಿ ಹಳೆ ಶಿಲಾಯುಗ ಸಂಸ್ಕೃತಿಯು ಕಿಬ್ಬನಹಳ್ಳಿ ಪ್ರದೇಶದಲ್ಲಿ ಕೇಂದ್ರಿಕೃತವಾಗಿದ್ದಿತ್ತೆಂದು ತಿಳಿಯಲಾಗಿದೆ.

ಅಲ್ಲದೆ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗೆ ಸೇರಿದ ನೆಲೆಗಳ ಅಧ್ಯಯನ ಪ್ರದೇಶದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಇರುವುದು ಗಮನಾರ್ಹ. ಈ ಯುಗದಲ್ಲಿ ಬಳಸಿಕೊಂಡಿರುವ ಉಪಕರಣಗಳೆಂದರೆ ನೀಳಚಕ್ಕೆ, ಹೆರೆಚಕ್ಕೆ, ಮೊನೆ, ಬಾಣದ ಮೊನೆ, ಕೊರಗ, ಕೊರೆಯುಳಿ, ಅರ್ಧ ಚಂದ್ರಾಕೃತಿ, ದಬ್ಬಳ ಹಾಗೂ ಮೂಲಶಿಲಾಗಟ್ಟಿ ಆಗಿವೆ. ಉಪಕರಣಗಳ ವೈಜ್ಞಾನಿಕ ಅಧ್ಯಯನ ರೂಪಣಾ ವಿಧಾನ ವೈವಿಧ್ಯತೆ ಇವುಗಳನ್ನನುಸರಿಸಿ ಈ ಕಾಲಮಾನದಲ್ಲಾದ ಜೀವನ ವಿಧಾನಕ್ಕೆ ಮಾರ್ಪಾಟು ಹೊಂದುವ ಯತ್ನ ನಡೆಸಲಾಗಿದೆ. ಅದೇ ರೀತಿ ಮುಂದಿನ ಸಂಸ್ಕೃತಿಗೆ ಹಂತ ಹಂತವಾಗಿ ಸಾಗಿರುವಂತೆ ಕಂಡುಬರುತ್ತದೆ.[೪]

ನೂತನ ಶಿಲಾಯುಗ ಸಂಸ್ಕೃತಿಯನ್ನು ಕ್ರಾಂತಿಕಾರಿ ಯುಗವೆಂದು ಪರಿಗಣಿಸಲಾಗಿದೆ. ಕೆಲವೇ ಸಾವಿರ ವರ್ಷಗಳ ಹಿಂದೆ ಮಾನವ ಕೃಷಿಯಲ್ಲಿ ತೊಡಗಿ, ಒಂದು ಕಡೆ ನೆಲೆ ನಿಂತು ಪಶುಸಂಗೋಪನೆ ಮುಂತಾದ ನಿರ್ದಿಷ್ಟ ಕಾರ್ಯಗಳಲ್ಲಿ ತೊಡಗಿ ಉಜ್ಜಿ ನಯಗೊಳಿಸಿದ ಉಪಕರಣಗಳನ್ನು ರೂಪಿಸಿಕೊಂಡಂತಹ ಸಾಂಸ್ಕೃತಿಕ ಹಂತವೇ ನೂತನ ಶಿಲಾಯುಗ ಸಂಸ್ಕೃತಿ. ಈ ಕಾಲದಲ್ಲಿ ಮೃತ್ ಪಾತ್ರೆಯ ಬಳಕೆಯು ಗಣನೀಯವಾಗಿದ್ದು, ಪೂರ್ಣ ಕಪ್ಪು, ಕಪ್ಪು, ಕಂದು, ಕಂದುಗೆಂಪು ಹಾಗೂ ಊದಬಣ್ಣದ ಮಡಕೆಯ ಭಾಗಗಳು ಕಂಡುಬಂದಿವೆ. ಪ್ರಸ್ತುತ ಪ್ರದೇಶದಲ್ಲಿ ಶಿಲೋಪಕರಣಗಳ ವೈವಿಧ್ಯದಂತೆ ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೊಡಲಿ-ಸುತ್ತಿಗೆ, ಉಜ್ಜುಗ ಅಥವಾ ಅರೆಯುವ ಕಲ್ಲು, ಕವಣೆಕಲ್ಲು ಮತ್ತು ಉಂಗುರ ಕಲ್ಲುಗಳು ದೊರೆಕಿದ್ದು, ಹೆಚ್ಚಿನ ಎಲ್ಲಾ ಮಾದರಿಗಳೂ ಕಂಡುಬಂದಿದೆ.[೫]

ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ ಹಾಗೂ ಗೋರಿಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಲಭ್ಯವಿರುವುದು ಕಂಡುಬರುತ್ತದೆ. ಈ ಶಿಲಾಗೋರಿಗಳನ್ನು ಕೊರಟಗೆರೆ ತಾಲ್ಲೂಕಿನ ಇರಕಸಂದ್ರ ಕಾಲೋನಿ, ಮಧುಗಿರಿ ತಾಲ್ಲೂಕಿನ ಕತ್ತಿರಾಜನ ಹಳ್ಳಿಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಶಿಲಾಗೋರಿಗಳು ಕಂಡುಬಂದಿದ್ದು, ಈ ಗೋರಿಗಳು ವಿವಿಧ ಮಾದರಿಗಳಲ್ಲಿವೆ. ಪ್ರಸ್ತುತ ಶಿಲಾಗೋರಿಗಳಿರುವ ನೆಲೆಗಳಲ್ಲಿ ಕಲ್ಗುಪ್ಪೆ, ಗುಂಡುಕಲ್ಲಿನ ಕಲ್ಲಿವೃತ್ತ, ಕಲ್ಲುಚಪ್ಪಡಿಯ ಕಲ್ಲುವೃತ್ತ, ಕಲ್ಮನೆ ಹಾಗೂ ನಿಲಸುಗಲ್ಲು ಗೋರಿಗಳೆಂದು ಗುರುತಿಸಲಾಗಿದೆ.[೬] ಭೌಗೋಳಿಕ ಹಾಗೂ ಕಾಲಮಾನದ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ

ಸಂಪ್ರದಾಯಿಕ, ಆಹಾರ ಪದ್ಧತಿ, ಆಭರಣಗಳು, ವಸತಿ, ವಿಶಿಷ್ಟ ಮೃತ್ ಪಾತ್ರೆ ಲೋಹ ತಂತ್ರಜ್ಞಾನ ಮುಂತಾದ ಹಲವಾರು ಮಾಹಿತಿಗಳನ್ನೂ ಸಂಗ್ರಹಿಸಲಾಗಿದ್ದು, ಈ ಜನರ ಜನಾಂಗೀಯ ಪ್ರಭೇದದ ವಿವರಣೆಯ ಬಗೆಗೆ ಯತ್ನ ಮಾಡಿದ್ದು, ಹಲವು ವಿಷಯಗಳನ್ನು ತಿಳಿಯಲು ಸಹಾಯಕವಾಗಿದೆ.

ಒಟ್ಟಾರೆಯಾಗಿ ತುಮಕೂರು ಜಿಲ್ಲೆಯ ಪ್ರದೇಶದಲ್ಲಿ ವಿವಿಧ ಸಾಂಸ್ಕೃತಿಕ ಹಂತಗಳನ್ನು ಗುರುತಿಸಿದ್ದು, ಮಾನವನು ಸುಮಾರು ಎರಡು ಸಾವಿರ ವರ್ಷಗಳಷ್ಟು (ಕ್ರಿ.ಪೂ) ಹಿಂದೆಯೇ ವಾಸ ಮಾಡುತ್ತಿದ್ದರೆಂಬುದಕ್ಕೆ ಅನೇಕ ಕುರುಹುಗಳು ಲಭ್ಯವಾಗಿವೆ. ಈ ಕುರುಹುಗಳಿಂದ ಆ ಕಾಲದ ಸಾಂಸ್ಕೃತಿಕವಾದ ಜನರ ಜೀವನವನ್ನು ಗುರುತಿಸಬಹುದಾಗಿದೆ. ಇದರಿಂದ ಜೀವನದ ಸ್ಥಿತ್ಯಂತರಗಳನ್ನು ಕಾಣಬಹುದು.

ತುಮಕೂರು ಜಿಲ್ಲೆಯ ಆರಂಭದ ಇತಿಹಾಸವನ್ನು ಮೌರ್ಯರ ಮತ್ತು ಶಾತವಾಹನರ ಆಳ್ವಿಕೆಯಲ್ಲಿ ಗುರುತಿಸುವುದಕ್ಕೆ ನೆರೆಯ ಜಿಲ್ಲೆಯಲ್ಲಿ ಸಿಕ್ಕಿರುವ ಅಶೋಕನ ಶಾಸನಗಳು ಮತ್ತು ಮಡಕೆಗಳು ಶಿಲಾ ಸಮಾಧಿಗಳಿಂದ ತುಮಕೂರು ಜಿಲ್ಲೆಗೂ ಇವರ ಆಳ್ವಿಕೆ ಹಬ್ಬಿತ್ತೆಂದು ಊಹಿಸಬಹುದಾಗಿದೆ. ಆದರೆ ಜಿಲ್ಲೆಯಲ್ಲಿ ಯಾವುದೇ ಶಾಸನಾಧಿಗಳು ಕಂಡುಬರುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಶಾಸನ ಆಧಾರದಿಂದ ಮತ್ತು ಈ ಎರಡು ಜಿಲ್ಲೆಗಳ ಅಂತರವನ್ನ ಗಮನಿಸಿ ಈ ಮೇಲಿನ ಹೇಳಿಕೆಯನ್ನು ನೀಡಬಹುದಾಗಿದೆ.

ತುಮಕೂರು ಜಿಲ್ಲೆಯಲ್ಲಿ ಯಾವುದೇ ಪ್ರಸಿದ್ಧ ರಾಜ ಮನೆತನಗಳು ಹುಟ್ಟಿ ಬೆಳೆದು ಆಳ್ವಿಕೆ ನಡೆಸಿಲ್ಲ. ಆದರೆ ಹೊರಜಿಲ್ಲೆಯಿಂದ ಈ ಜಿಲ್ಲೆಯನ್ನು ಆಕ್ರಮಣ ಮಾಡಿಕೊಂಡು ಆಡಳಿತದ ಹಿಡಿತವನ್ನು ಹೊಂದಿದ್ದವು. ಈ ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಗಂಗರು, ರಾಷ್ಟ್ರಕೂಟರು, ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉತ್ತರದ ಮುಸ್ಲಿಮರು ಆಕ್ರಮಣಶೀಲ ನೀತಿಯನ್ನು ಅನುಸರಿಸಿ ಆಗಿಂದಾಗ್ಗೆ ದಾಳಿಯನ್ನು ಮಾಡಿ ಅಪಾರ ಸಂಪತ್ತನ್ನು ದೋಚಿರುವುದು ದಾಖಲೆಗಳಿಂದ ತಿಳಿಯಬಹುದು. ಈ ಜಿಲ್ಲೆಯಲ್ಲಿ ಒಟ್ಟು ೨೨ ಅರಸು ಮನೆತನಗಳು ಆಳ್ವಿಕೆ ಮಾಡಿದ್ದು, ರಾಜಮನೆತನಗಳ ಪ್ರಾಮುಖ್ಯತೆಯನ್ನು ಅರಿಯಲು ಮುಖ್ಯವಾಗಿ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಮತ್ತು ಸ್ಮಾರಕಗಳು ವೀರತ್ವದ ಬಗ್ಗೆ ಹೇಳುವುದರ ಜೊತೆಗೆ ರಾಜಕೀಯ, ಆಡಳಿತ, ಸಾಮಾಜಿಕ ಸ್ಥಿತಿ, ಆರ್ಥಿಕ ಸ್ಥಿತಿಗತಿ ಮತ್ತು ಸಾಂಸ್ಕೃತಿಕ ವಿಭಿನ್ನ ರೀತಿ ನೀತಿಗಳನ್ನು ಹೇಳುತ್ತವೆ.

ಈ ಜಿಲ್ಲೆಯಲ್ಲಿ ಮೊದಲು ಆಳ್ವಿಕೆ ಮಾಡಿದ ಅರಸರೆಂದರೆ ತಲಕಾಡಿನ ಗಂಗದೊರೆಗಳು. ಇವರು ಕುವಳಾಲಪುರ, ತಲಕಾಡು, ಮಾನ್ಯಪುರ ಎಂಬ ರಾಜಧಾನಿಗಳನ್ನು ಮಾಡಿಕೊಂಡು ಸುಮಾರು ಸಾವಿರ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಈವರೆಗೆ ಗಂಗರ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ಒಟ್ಟು ೪೭ ದೊರೆತಿದೆ.[೮] ಇವರ ಕಾಲವನ್ನು ಕ್ರಿ.ಶ.೪೦೦ ಎಂದು ನಿರ್ಧರಿಸಿದ್ದು, ಇದು ಈ ಮನೆತನದ

ದೊರೆಯಾದ ಮುಮ್ಮಡಿ ಮಾಧವವರ್ಮನದ್ದಾಗಿದೆ. ಗಂಗರು ಕ್ರಿ.ಶ.ಆರಂಭದಿಂದ ಕ್ರಿ.ಶ.೧೦೨೫ರವರೆಗೆ ಆಳ್ವಿಕೆ ಮಾಡಿದ್ದಾರೆ.

ರಾಷ್ಟ್ರಕೂಟರು ಗಂಗರ ಜೊತೆಗೆ ಆಳಿದಂತಹ ಇನ್ನೊಂದು ಮನೆತನವಾಗಿದೆ. ಇವರು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ ತುಮಕೂರು ಪ್ರಾಂತ್ಯವು ಇವರ ವಶದಲ್ಲಿದ್ದಿತೆಂಬುದಕ್ಕೆ ಇಲ್ಲಿ ದೊರೆತಿರುವ ೩ ಶಾಸನಗಳೇ ಸಾಕ್ಷಿ. ಈ ಶಾಸನಗಳು ಕ್ರಿ.ಶ.೮೧೨, ೯೦೩ ಮತ್ತು ೯೮೨ರಲ್ಲಿ ರಚಿತವಾಗಿವೆ.[೯]

ಕಲ್ಯಾಣದ ಚಾಲುಕ್ಯರು ತುಮಕೂರು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಆಡಳಿತದ ಹಿಡಿತ ಹೊಂದಿದ್ದರೆಂದು ಶಾಸನಗಳು ಹೇಳುತ್ತವೆ. ಆದರೆ ಈ ಶಾಸನಗಳು ನೇರವಾಗಿ ಕಲ್ಯಾಣ ಚಾಲುಕ್ಯ ದೊರೆಗೆ ಸಂಬಂಧಿಸಿದವುಗಳಲ್ಲ, ಇವು ಪ್ರಾರಂಭ ವಾಕ್ಯಗಳಲ್ಲಿ ಚಾಲುಕ್ಯರ ಪರಮಾಧಿಕಾರ ಹಾಗೂ ಅವರ ಬಿರುದು ಬಾವಲಿಗಳ ಬಗೆಗೆ ವ್ಯಕ್ತವಾಗಿವೆ. ಚಾಲುಕ್ಯರ ಬಹುತೇಕ ಶಾಸನಗಳು ತಿಪಟೂರು, ಚಿಕ್ಕನಾಯಕನಹಳ್ಳಿ, ಶಿರಾ, ಪಾವಗಡ, ಗುಬ್ಬಿ ತಾಲ್ಲೂಕಿನಲ್ಲಿ ದೊರೆತಿವೆ.

ನೊಳಂಬರು ತುಮಕೂರು ಜಿಲ್ಲೆಯಲ್ಲಿ ಆಳಿ ಪ್ರಸಿದ್ಧಿ ಪಡೆದವರಾಗಿದ್ದಾರೆ. ಇವರು ಪಲ್ಲವ ವಂಶಕ್ಕೆ ಸೇರಿದ ನೊಳಂಬರು ಅಥವಾ ನೊಣಬರು. ಇವರ ರಾಜ್ಯವು ನೊಳಂಬವಾಡಿ ೩೨೦೦೦ ಎಂಬ ಹೆಸರು ಹೊಂದಿತ್ತು. ಇದೇ ಜಿಲ್ಲೆಯ ಹೇಮಾವತಿ ಅಥವಾ ಹೆಂಜೇರು(ಈಗ ಇದು ಅನಂತಪುರಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿದೆ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೫೦೦ ವರ್ಷಗಳ ಕಾಲ ಆಳಿದ ಕೀರ್ತಿ ಈ ಮನೆತನಕ್ಕೆ ಸೇರುತ್ತದೆ. ಈ ಜಿಲ್ಲೆಯು ಮಧುಗಿರಿ, ಪಾವಗಡ, ಸಿರಾ ತಾಲ್ಲೂಕುಗಳ ಪ್ರದೇಶಗಳು ನೊಳಂಬವಾಡಿ ರಾಜ್ಯದ ಅಂಗಗಳಾಗಿದ್ದವು. ಅದರಲ್ಲಿ ಪಾವಗಡ ತಾಲ್ಲೂಕಿನ ನಿಡುಗಲ್ಲು ಪ್ರದೇಶದ ಮೇಲೆ ಪ್ರಭುತ್ವ ಪಡೆದಿದ್ದರು. ಪ್ರಸ್ತುತ ತುಮಕೂರು ಜಿಲ್ಲೆಯಲ್ಲಿ ಒಟ್ಟು ೨೩ ಶಾಸನಗಳು ಲಭ್ಯವಿವೆ. ಅದರಲ್ಲಿ ನೊಳಂಬರ ಮೊದಲ ಅಧಿಕೃತ ದಾಖಲೆ ಕ್ರಿ.ಶ.೯೪೩ಯೆಂದು ಊಹಿಸಲಾಗಿದೆ. ಇದು ಸಿರಾ ತಾಲ್ಲೂಕಿನಲ್ಲಿ ದೊರಕಿದೆ. ಇದರಲ್ಲಿ ನೊಳಂಬರ ವಂಶಾವಳಿ ಬಗ್ಗೆ ಉಲ್ಲೇಖವಿದೆ. ನೊಳಂಬರು ತಮ್ಮ ರಕ್ಷಣೆಯಲ್ಲಿ ಸುರಕ್ಷಿತರಾಗಿದ್ದರೂ, ಚಾಲುಕ್ಯ ಮತ್ತು ಗಂಗರ ಶಕ್ತಿ ವಿಸ್ತರಣಾ ನೀತಿಗಳಿಂದಾಗಿ ನೊಳಂಬರು ಇವರಿಬ್ಬರ ನಡುವೆ ಸಿಕ್ಕಿ ನರಳಬೇಕಾಯಿತು. ಕ್ರಿ.ಶ.೯೭೪ರಲ್ಲಿ ಗಂಗದೊರೆ ಮಾರಸಿಂಹನು ನೊಳಂಬರ ಮೇಲೆ ಮುಗಿಬಿದ್ದು ಅವರ ವಂಶವನ್ನು ನಾಶಗೊಳಿಸಿ "ನೊಳಂಬ ಕುಲಾಂತಕ" ಎಂಬ ಬಿರುದು ಧರಿಸಿದನು.[೧೦]

ಪ್ರಧಾನವಾಗಿ ತಮಿಳುನಾಡಿನಲ್ಲಿ ಆಳ್ವಿಕೆ ಮಾಡಿದ ಚೋಳ ಮನೆತನವು ಈ ಜಿಲ್ಲೆಯ ನಿಡುಗಲ್ಲನ್ನು(ಪಾವಗಡ ತಾಲ್ಲೂಕು) ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.೭೫೦ ರಿಂದ

ಕ್ರಿ.ಶ.೧೪೮೧ರವರಗೆ ಆಳ್ವಿಕೆ ಮಾಡಿರುವುದನ್ನು ಕಾಣಬಹುದು. ಈ ಮನೆತನಕ್ಕೆ ಸೇರಿದ ಒಟ್ಟು ಶಾಸನಗಳು ಮೂವತ್ತಾರು. ಈ ಜಿಲ್ಲೆಯಲ್ಲಿ ದೊರೆತಿದೆ. ಇದರ ಜೊತೆಗೆ ಹಲವಾರು ಸ್ಮಾರಕಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಗಂಗವಾಡಿ ಮತ್ತು ನೊಳಂಬವಾಡಿಗಳು ಚೋಳಮಂಡಲಕ್ಕೆ ಸೇರಿದ್ದುದರಿಂದ ಜಿಲ್ಲೆಯ ಕೆಲವು ಪ್ರದೇಶಗಳು ಚೋಳ ರಾಜರ ಆಳ್ವಿಕೆಗೆ ಸೇರಿದ್ದವು.

ತುಮಕೂರು ಜಿಲ್ಲೆಗೆ ಹೊಯ್ಸಳರ ಕೊಡುಗೆ ವಿಶಿಷ್ಟವಾದುದು. ಇವರು ದೋರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇನ್ನಿತರ ಪ್ರದೇಶಗಳ ಮೇಲೆ ಹಿಡಿತ ಹೊಂದಿ ಆಳ್ವಿಕೆ ನಡೆಸಿದ್ದರು. ಇವರ ಪ್ರಾಚೀನ ಶಾಸನ ತಿಪಟೂರು ತಾಲ್ಲೂಕಿನಲ್ಲಿ ಸಿಕ್ಕಿದೆ. ಇದು ಕ್ರಿ.ಶ.೧೦೭೮ರಲ್ಲಿ ರಚಿತಗೊಂಡಿದೆ. ಈ ಜಿಲ್ಲೆಗೆ ಅತಿಹೆಚ್ಚು ಶಾಸನಗಳನ್ನು(೧೫೭) ಕೊಟ್ಟ ಕೀರ್ತಿ ಹೊಯ್ಸಳರದು. ಅದೇ ರೀತಿ ವಾಸ್ತು ಶಿಲ್ಪದಲ್ಲಿ ಅತ್ಯುನ್ನತ ಶೈಲಿಯನ್ನೂ ಬಳಸಿಕೊಂಡು ಈ ಜಿಲ್ಲೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಅರಳುಗುಪ್ಪೆ, ಶೆಟ್ಟಿಕೆರೆ, ತಂಡಗ, ವಿಘ್ನಸಂತೆ, ನೊಣವಿನಕೆರೆ, ಕೈದಾಳ, ನಿಟ್ಟೂರು, ತುರುವೇಕೆರೆ ಮತ್ತು ನಾಗಲಾಪುರದಲ್ಲಿ ವಿಶಿಷ್ಟಶೈಲಿಯ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹೊಯ್ಸಳರ ಆಳ್ವಿಕೆಯು ವಿಜಯನಗರ ಸಾಮ್ರಾಜ್ಯ ಪ್ರಬುದ್ಧಮಾನಕ್ಕೆ ಬರುವವರೆಗೂ ಅಸ್ತಿತ್ವದಲ್ಲಿದ್ದು ನಂತರ ವಿಜಯನಗರದಲ್ಲಿ ವಿಲೀನವಾಯಿತು.

ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಉದಯವಾದರೂ ಇವರು ನೇರವಾಗಿ ಆಳ್ವಿಕೆಯನ್ನು ಮಾಡುತ್ತಿದ್ದುದು ಕಡಿಮೆಯೆನ್ನಬಹುದು. ಇವರು ನೇಮಿಸಿದ ಅಧಿಕಾರಿಗಳು ಮುಂದೆ ಪಾಳೇಗಾರರಾಗಿ ಸ್ವತಂತ್ರಗೊಂಡು ಪಾಳೆಯಪಟ್ಟನ್ನು ನಿರ್ಮಿಸಿಕೊಂಡಿರುವುದು ಕಾಣಬಹುದು. ಇದರಿಂದ ಕೇಂದ್ರಿಕೃತ ರಾಜಕೀಯವು ವಿಕೇಂದ್ರಿಕರಣಗೊಂಡಿದ್ದು ರಾಜಕೀಯದ ಹೊಸಹುಟ್ಟು ಎನ್ನಬಹುದು. ವಿಜಯನಗರದ ಅರಸರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವುದಕ್ಕೆ ೧೪೬ ಶಾಸನಗಳು ಇತಿಹಾಸದ ಆಧಾರಗಳಾಗಿವೆ. ಈ ಜಿಲ್ಲೆಯ ಪ್ರಾಚೀನ ಶಾಸನವೆಂದರೆ ಕ್ರಿ.ಶ. ೧೩೫೪ರ ಪಾವಗಡದ ೭೪ನೇ ಶಾಸನವಾಗಿದೆ. ವಿಜಯನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರೂ ಪೆನುಗೊಂಡೆ, ಹೊನ್ನವಳ್ಳಿ, ಆನೆಬಿದ್ದಸರಿ(ದೇವರಾಯನ ದುರ್ಗಕ್ಕಿದ್ದ ಮೊದಲಿನ ಹೆಸರು) ರಾಜ್ಯಗಳು ಆಡಳಿತ ವಿಭಾಗಗಳಾಗಿದ್ದವು. ವಿಜಯನಗರದ ಅರಸರು ತುಮಕೂರು ಜಿಲ್ಲೆಯಲ್ಲಿ ನೇರವಾಗಿ ಆಳ್ವಿಕೆ ಮಾಡಿದ್ದಕ್ಕಿಂತ ಹೆಚ್ಚು ಪಾಳೇಗಾರರಿಂದ ಪರೋಕ್ಷವಾಗಿ ಆಳ್ವಿಕೆ ಮಾಡಿಸಿರುವುದನ್ನು ಕಾಣಬಹುದು.

ತುಮಕೂರು ಜಿಲ್ಲೆಯನ್ನು ಹೊರಗಿನಿಂದ ಹಿಡಿತಹೊಂದಿ ಆಡಳಿತ ಮಾಡಿದ ಅರಸು ಮನೆತನಗಳಿಗಿಂತ ಸ್ಥಳೀಯವಾಗಿ ಪಾಳೆಯಪಟ್ಟನ್ನು ನಿರ್ಮಿಸಿಕೊಂಡು ಸುವ್ಯವಸ್ಥಿತವಾಗಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಈ ರೀತಿಯ ಆಳ್ವಿಕೆ ವಿಜಯನಗರದ ಕಾಲದಿಂದ ಜಾರಿಗೆ ಬಂದಿದೆ. ಅರಸರ ಆಳ್ವಿಕೆಯಲ್ಲಿದ್ದ ಅಧಿಕಾರಿಗಳಿಗೆ ಮತ್ತು ಸಾಮಂತರಿಗೆ ಭೂಪ್ರದೇಶಗಳನ್ನು, ಗ್ರಾಮಗಳನ್ನು ಉಂಬಳಿಯಾಗಿ

ಕೊಟ್ಟಿದ್ದಲ್ಲದೆ, ವಿವಿಧ ಬಿರುದು, ಬಾವಲಿಗಳನ್ನು ನೀಡಿದರು. ಅಧಿಕಾರಿಗಳು ಮತ್ತು ಸಾಮಂತರು ಅರಸರ ಪ್ರೀತಿ ಪಾತ್ರಕ್ಕೆ ಒಳಗಾಗಿ ಹಾಗೂ ಅವರ ಸೇವೆಯನ್ನು ಗುರುತಿಸಿ, ಅವರಿದ್ದ ಪ್ರದೇಶದಲ್ಲಿಯೇ ಆಳ್ವಿಕೆ ಮಾಡಲು ಸೂಚಿಸಿದರು. ವಿಜಯನಗರ ಸಾಮ್ರಾಜ್ಯವು ಅವನತಿ ಹೊಂದಿದ ಮೇಲೆ ಅಧಿಕಾರಿಗಳು, ಸಾಮಂತರು ಸ್ವತಂತ್ರರಾಗಿ 'ಪಾಳೇಗಾರ' ಎಂಬ ಹೆಸರಿಂದ ಆಳ್ವಿಕೆ ಪ್ರಾರಂಭಿಸಿದರು. ಇಲ್ಲಿಂದ ರಾಜ್ಯದ ಎಲ್ಲಾ ಕಡೆಯು ಪಾಳೇಗಾರರು ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ಜನರ ಕಷ್ಟ ಸುಖಗಳನ್ನು ಆಲಿಸಿಕೊಂಡು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಪಾಳೇಗಾರರಿಗೆ ಪಾಳೆಯ ಪಟ್ಟುಗಳನ್ನು ಸ್ಥಾಪಿಸಲು ಕೋಟೆ ಕೊತ್ತಲಗಳನ್ನು ನಿರ್ಮಿಸಲು ತುಮಕೂರು ಜಿಲ್ಲೆಯು ಒಳ್ಳೆಯ ಭೌಗೋಳಿಕ ಪ್ರದೇಶವನ್ನು ಹೊಂದಿತ್ತು. ಆದ್ದರಿಂದ ರಾಜ್ಯದ ಮತ್ತು ಜನರ ಹಿತದೃಷ್ಟಿಯಿಂದ ಸುರಕ್ಷಿತವಾಗಿರುವುದಕ್ಕೆ ತುಮಕೂರು ಜಿಲ್ಲೆಯನ್ನು ಪಾಳೇಗಾರರು ಆಯ್ಕೆ ಮಾಡಿಕೊಂಡಿದ್ದಾರೆ. ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪಾಳೇಗಾರರೆಂದರೆ, ನಿಡುಗಲ್ಲು ಪಾಳೇಗಾರರು, ಹಾಗಲವಾಡಿ ಪಾಳೇಗಾರರು, ಮಧುಗಿರಿಯ ಮಹಾನಾಡಪ್ರಭುಗಳು, ಪಾವಗಡದ ಪಾಳೇಗಾರರು, ಸಿರಾದ ಪಾಳೇಗಾರರು, ಮುಖ್ಯರಾಗುತ್ತಾರೆ. ಹೊರಗಿನಿಂದ ಆಳ್ವಿಕೆ ಮಾಡಿದ ಪಾಳೇಗಾರರೆಂದರೆ, ಮಾಗಡಿ ಕೆಂಪೇಗೌಡ, ಕುಂದಿರ್ಪಿಯ ಪಾಳೇಗಾರರು, ಹರತಿ ಪಾಳೇಗಾರರು, 'ಅವತಿನಾಡ' ಪಾಳೇಗಾರರು. ಇವರಲ್ಲದೆ ಈ ಜಿಲ್ಲೆಯಲ್ಲಿ ಚಿಕ್ಕಪುಟ್ಟ ಪಾಳೇಗಾರರು ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡಿದ್ದಾರೆ.

೧೭ ಮತ್ತು ೧೮ನೇ ಶತಮಾನದಲ್ಲಿ ಪಾಳೇಗಾರರಿಗೆ ಮೊಗಲರಿಂದ, ಬಿಜಾಪುರದ ಸುಲ್ತಾನರಿಂದ, ಮೈಸೂರು ಒಡೆಯರಿಂದ, ಹೈದರಾಲಿ ಟಿಪ್ಪುವಿನಿಂದ ಮತ್ತು ಮರಾಠರಿಂದ ಬಹಳ ತೊಂದರೆಯುಂಟಾಗಿತು. ಈ ಎರಡು ಶತಮಾನದಲ್ಲಿ ಆಕ್ರಮಣಗಳು ಹೆಚ್ಚಾದವು. ಇದರಿಂದ ಆಡಳಿತವು ಅಸ್ಥಿರಗೊಂಡಿತು. ಹೈದರ್-ಟಿಪ್ಪು ದಕ್ಷಿಣ ಕರ್ನಾಟಕ ಪಾಳೇಗಾರರನ್ನು ತಮ್ಮ ಬುದ್ಧಿವಂತಿಕೆಯಿಂದ ಕೆಳಗಿಳಿಸಿ ರಾಜ್ಯವನ್ನು ಪಡೆಯುತ್ತಿದ್ದರು. ಇಂತಹ ದುಸ್ಥಿತಿಯಿಂದ ಪಾಳೆಯಪಟ್ಟುಗಳು ಕೊನೆಗೆ ತುಮಕೂರು ಜಿಲ್ಲೆಯು ಮೈಸೂರು ರಾಜ್ಯದಲ್ಲಿಯೇ ಲೀನವಾಯಿತು.

ಪಾಳೇಗಾರರು ನಿರ್ಮಿಸಿದ ಕೋಟೆ ಕೊತ್ತಲಗಳು ಮಣ್ಣಿನಿಂದ ಕೂಡಿದ್ದವು. ಹೈದರ್-ಟಿಪ್ಪು ಕಾಲದಲ್ಲಿ ಗಾರೆಯಿಂದ ಪುನರ್ ನಿರ್ಮಾಣಗೊಂಡವು. ಈ ಪುನರ್ ನಿರ್ಮಾಣಗೊಂಡ ಕೋಟೆ ಕೊತ್ತಲಗಳನ್ನು ಈಗಲೂ ನೋಡಬಹುದಾಗಿದೆ. ಈ ಕೋಟೆ ಕೊತ್ತಲಗಳ ಪಾಳೇಗಾರರ ರಾಜಕೀಯ ಇತಿಹಾಸವನ್ನು ಒಂದೊಂದು ಕೋಟೆಯನ್ನು ಇಟ್ಟುಕೊಂಡು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಮಧುಗಿರಿ ದುರ್ಗದ ಕೋಟೆ

ಮಧುಗಿರಿಯು ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ ಮತ್ತು ಉಪವಿಭಾಗ ಕೇಂದ್ರವಾಗಿದೆ. ಇದು ಜಿಲ್ಲಾಕೇಂದ್ರದಿಂದ ೪೩ ಕಿ.ಮೀ. ದೂರದಲ್ಲಿದೆ. ಇದು ಜಿಲ್ಲೆಯ ಉತ್ತರ

ದಿಕ್ಕಿನಲ್ಲಿದೆ. ಮಧುಗಿರಿ ಊರಿಗೂ ಮತ್ತು ಬೆಟ್ಟಕ್ಕೂ ಒಂದೇ ಹೆಸರನ್ನೆ ಸೂಚಿಸಲಾಗಿದೆ. ಬೆಟ್ಟದಲ್ಲಿ ಮತ್ತು ಊರಿನಲ್ಲಿ ಕೋಟೆಯು ನಿರ್ಮಾಣವಾಗಿದ್ದು, ಈಗ ಅಲ್ಲಲ್ಲಿ ಶಿಥಿಲವಾಗುತ್ತಿದೆ. ಈ ಕೋಟೆಯನ್ನು ಪ್ರಾರಂಭದಲ್ಲಿ ಕಲ್ಲು, ಮಣ್ಣಿನಿಂದ ನಿರ್ಮಿಸಿದ್ದು, ನಂತರ ಹೈದರ್‌ನ ಕಾಲದಲ್ಲಿ ಗಾರೆ, ಇಟ್ಟಿಗೆ, ಕಲ್ಲಿನಿಂದ ಪುನರ್ ನಿರ್ಮಾಣವಾಗಿದೆ. ಈ ಬೆಟ್ಟವು ಸಮುದ್ರ ಮಟ್ಟದಿಂದ ೩೯೩೦ ಅಡಿ ಎತ್ತರದಲ್ಲಿದೆ. ಇದು ಏಷ್ಯಖಂಡದಲ್ಲೇ ಎರಡನೆ ಏಕಶಿಲಾ ಬೆಟ್ಟವೆಂದು ಪ್ರಸಿದ್ಧಿ ಹೊಂದಿದೆ. ಮಧುಗಿರಿ ದುರ್ಗವನ್ನು "ಧರೆಯೊಳೆಲ್ಲೇ ಇರಲಿ ನಾನು ಮರೆಯಲಾರೆ ಮಧುಗಿರಿ" ಎಂದು ಹೊಯ್ಸಳ ಕವಿ ಹಾಡಿದ್ದಾನೆ. ಇದೇ ರೀತಿ ಈ ಗಿರಿದುರ್ಗವನ್ನು ವಿದೇಶಿ ಪ್ರವಾಸಿ ಬುಖನನ್ ಸಹ ಹೊಗಳಿದ್ದಾನೆ. "ಈ ದುರ್ಗದ ಚೆಲುವು ನೋಡಲು ಮನೋಹರವಾಗಿದೆ. ಪೂರ್ವದಿಕ್ಕಿನಿಂದ ದುರ್ಗದ ದೃಶ್ಯನೋಡಲು ಅತ್ಯಂತ ಸುಂದರ ಎಂದಿದ್ದಾನೆ."[೧೧] ಇಂತಹ ಸುಂದರ ಬೆಟ್ಟದಲ್ಲಿ ನಿರ್ಮಿಸಿದ ಕೋಟೆಯು ಈಗ ಹಾಳಾಗುವ ಹಂತ ತಲುಪಿದೆ. ಇದರ ಅಳಿದುಳಿದ ಭಾಗಗಳ ಸಹಾಯದಿಂದ ಕೋಟೆಯ ನಿರ್ಮಾಣದ ಕಾಲ, ಆಳ್ವಿಕೆಯನ್ನು ಕುರಿತು ಈ ಕೆಳಗೆ ಚರ್ಚಿಸಲಾಗಿದೆ.

ಮಧುಗಿರಿ ಪ್ರದೇಶವನ್ನು ಗಂಗರ ಪ್ರಖ್ಯಾತ ದೊರೆಗಳಾದ ದುರ್ವಿನೀತನು ಕ್ರಿ.ಶ.೪೮೨ರಲ್ಲಿ ಮತ್ತು ಶ್ರೀ ಪುರುಷನೆಂಬುವನು (ಕ್ರಿ.ಶ.೭೨೬-೭೭೭) ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು ಎನ್ನುವುದಕ್ಕೆ ಮಿಡಿಗೇಶಿ ಶಾಸನದಿಂದ ತಿಳಿದುಬಂದಿದೆ.[೧೨] ನಂತರ ನೊಳಂಬರು ಮತ್ತು ಚೋಳರು ಆಳ್ವಿಕೆ ಮಾಡಿದ್ದು, ಅದಕ್ಕೆ ಸಿದ್ಧಾಪುರ ಕೆರೆ ಕೋಡಿಯಲ್ಲಿರುವ ಪ್ರಸಿದ್ಧವಾದ ಚೋಳೇಶ್ವರ ಗುಡಿಯಿಂದ ಈ ಪ್ರದೇಶವು ಚೋಳರ ಅಧೀನಕ್ಕೆ ಸೇರಿತ್ತೆಂದು ಊಹಿಸಬಹುದಾಗಿದೆ.

ವಿಜಯನಗರದ ಕಾಲದಲ್ಲಿ ಹಲವಾರು ಅಧಿಕಾರಿಗಳು, ರಾಜರಿಂದ ನೇಮಕಗೊಂಡು ಒಂದೊಂದು ಪ್ರಾಂತ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಈ ಅಧಿಕಾರಿಗಳೆಲ್ಲರೂ ರಾಜನಿಗೆ ನಿಷ್ಠೆಯಿಂದ ಇದ್ದು ಆಡಳಿತ ಉಸ್ತುವಾರಿಯಲ್ಲಿ ಕಂದಾಯ ವಸೂಲಿ ಮಾಡುವುದು, ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡುವುದು, ಯುದ್ಧ ಸಮಯದಲ್ಲಿ ಸಹಾಯ ಮಾಡಲು ಇವೇ ಮೊದಲಾದ ಉದ್ದೇಶವಾಗಿದ್ದವು. ಈ ಅಧಿಕಾರಿಗಳೆಲ್ಲರೂ ಯುದ್ಧಗಳ ಕಾಲದಲ್ಲಿ ರಾಜರಿಗೆ ಸಹಾಯ ಮಾಡಿದವರೆ ಆಗಿದ್ದಾರೆ. ಇದರಿಂದ ರಾಜನು ಕೆಲವು ಪ್ರದೇಶಗಳನ್ನು ಉಂಬಳಿಯಾಗಿ ಬಿಟ್ಟು ಕೊಡುತ್ತಿದ್ದನು. ಅಂತಹದರಲ್ಲಿ ಮಾರೇಗೌಡ ಮತ್ತು ಅವನ ಸಹೋದರರು ಯುದ್ಧದಲ್ಲಿ ಮಾಡಿದ ಸಾಹಸಕ್ಕೆ ಹರಿಹರನು ನೀಡಿದ ಉಂಬಳಿಯನ್ನು ಸ್ವೀಕರಿಸಿ ವಿಜಯನಗರ ಸಾಮ್ರಾಜ್ಯದ ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸಿ 'ತುಂಗವಟಿ' ಎಂಬ ಊರಿನಲ್ಲಿ ನೆಲೆನಿಂತರು. ಒಟ್ಟು ಏಳು ಜನ ಸಹೋದರರು ಸೇರಿ ಕೋರ ಗ್ರಾಮವನ್ನು ನಿರ್ಮಿಸಿ, ಅದರ ಸುತ್ತಲೂ ಕೋಟೆ ಕೊತ್ತಲಗಳನ್ನು(ಕ್ರಿ.ಶ.೧೩೪೬ರಲ್ಲಿ) ಕಟ್ಟಿ ವಾಸಿಸಲು ಪ್ರಾರಂಭಿಸಿದರು."[೧೩] ಈ ಕೋರ

ಪ್ರಾಂತ್ಯವು ಬಯಲು ಪ್ರದೇಶವಾಗಿದ್ದರಿಂದ ಹೆಚ್ಚು ರಕ್ಷಿತ ಪ್ರದೇಶವಲ್ಲವೆಂದು ಭಾವಿಸಿ ಬೆಟ್ಟಗುಡ್ಡಗಳಲ್ಲಿ ಮತ್ತು ಅರಣ್ಯಪ್ರದೇಶಗಳಲ್ಲಿ ಎಲ್ಲರೂ ಸ್ವತಂತ್ರವಾಗಿ ರಾಜ್ಯ ಸ್ಥಾಪಿಸಲು ಮುಂದಾದರು.[೧೪]

ಕೋರ ಗ್ರಾಮದಲ್ಲಿಯೇ ಕಾಳಣ್ಣಗೌಡರನ್ನು ಉಳಿಸಿ, ಚೆನ್ನಪ್ಪಗೌಡರು ತೆರೆಯೂರಿನಲ್ಲಿ, ಸಂಗಪ್ಪಗೌಡರು ಚೇಳೂರಿನಲ್ಲಿ, ಚಿಕ್ಕಪ್ಪಗೌಡರು ಬಿದರೆಯಲ್ಲಿ, ರಾಮಪ್ಪಗೌಡರು ಎಣ್ಣೆಗೆರೆಯಲ್ಲಿ, ಕಾಳಚಿಕ್ಕಪ್ಪಗೌಡರು ಗುಬ್ಬಿ ಹೊಸಹಳ್ಳಿಯಲ್ಲಿ ಮತ್ತು ಹಿರಿಯವನಾದ ಮಾರೇಗೌಡನು ಜಯಮಂಗಲಿ ನದಿಯ ದಡದಲ್ಲಿ ಕಾಡನ್ನು ಕಡಿದು 'ಮುಮ್ಮಡಿ ಪಟ್ಟಣ'ವನ್ನು ಸ್ಥಾಪಿಸಿದ ಮೇಲೆ ನೊಣಬೇಶ್ವರ ದೇವಾಲಯವನ್ನು ಕ್ರಿ.ಶ.೧೩೯೯ರಲ್ಲಿ ನಿರ್ಮಿಸಲಾಯಿತು.[೧೫] ಹೀಗೆ ಈ ಏಳೂ ಜನಸಹೋದರರಿಂದ ಸ್ಥಾಪಿತವಾದ ಊರು-ನಾಡುಗಳಿಗೆ-ಒಡೆಯರಿಗೆ ಮಹಾನಾಡ ಪ್ರಭುಗಳೆಂದು ಕರೆಯಲಾಯಿತು.

ಮುಮ್ಮಡಿ ಪಟ್ಟಣವನ್ನು ನಿರ್ಮಿಸಿದ ಮಾರೇಗೌಡರು ಮರಣಹೊಂದಿದ ನಂತರ ಅವನ ಮಗ ವೀರೇಗೌಡನೂ ನಂತರ ದೊಡ್ಡೇಗೌಡನೂ ಆಳ್ವಿಕೆ ಮಾಡಿದರು. ಆಗಿನ್ನು ರಾಜ್ಯವು ಶೈಶಾವಸ್ಥೆಯಲ್ಲಿ ಇದ್ದುದರಿಂದ ಎದುರಾಳಿಗಳನ್ನು ಎದುರಿಸಲು ಸಾಧ್ಯವಿರಲಿಲ್ಲ. ನವೀನ ಶಸ್ತ್ರಾಸ್ತ್ರಗಳನ್ನು ಹೊಂದಿದ ಬಹುಮನಿ ಸುಲ್ತಾನರು ಮುಮ್ಮಡಿ ಪಟ್ಟಣವನ್ನು ನಾಶಮಾಡಿದರು. ಈ ಸಂದರ್ಭದಲ್ಲಿ ದೊಡ್ಡೇಗೌಡರು ಮರಣಹೊಂದಿದರು. ಮಗನನ್ನು ತುಂಗವಟಿಯಲ್ಲಿ ಸುರಕ್ಷಿತವಾಗಿ ಇಡಲಾಗಿತ್ತು.[೧೬] ಕೆಲಕಾಲ ನಂತರ ದೊಡ್ಡೇಗೌಡರ ಮಗನಾದ ಹಿರೇ ಚಿಕ್ಕಪ್ಪಗೌಡರು ಪ್ರಾಯಕ್ಕೆ ಬಂದ ಮೇಲೆ ಮತ್ತೆ ಮುಮ್ಮಡಿ ಪಟ್ಟಣವನ್ನು ಪುನರ್ ನಿರ್ಮಿಸುತ್ತಾರೆ. ಪ್ರಾಂತ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ವಿಜಯನಗರದ ಅರಸ ಕೃಷ್ಣದೇವರಾಯರ ಒಪ್ಪಿಗೆಯ ಮೇರೆಗೆ ಕ್ರಿ.ಶ.೧೫೨೪ರಲ್ಲಿ 'ಬಿಜ್ಜಾವರ' ಎಂಬ ಪಟ್ಟಣ ನಿರ್ಮಿಸಿ ಕೋಟೆ ಕೊತ್ತಲಗಳನ್ನು ಕಟ್ಟಿಸಿದನು. ನಂತರ ತನ್ನ ರಾಜಧಾನಿಯನ್ನು ಮುಮ್ಮಡಿ ಪಟ್ಟಣದಿಂದ ಬಿಜ್ಜಾವರಕ್ಕೆ ಸ್ಥಳಾಂತರಿಸಿದನು.[೧೭] ಹಿರೇ ಚಿಕ್ಕಪ್ಪಗೌಡನು ಶ್ರೀವ್ಯಾಸರಾಯ ಸ್ವಾಮಿಗಳ ಮೇರೆಗೆ ಕ್ರಿ.ಶ.೧೫೩೦ರಲ್ಲಿ ಶ್ರೀ ಚಕ್ರದ ಮೇಲೆ ಸುಂದರ ಬಿಜ್ಜಮಹಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದನು.[೧೮]

ಹಿರೇ ಚಿಕ್ಕಪ್ಪಗೌಡರ ನಂತರ ಅವನ ಮಗ ಕರಿತಿಮ್ಮ ಚಿಕ್ಕಪ್ಪಗೌಡನು ಅಧಿಕಾರಕ್ಕೆ ಬಂದನು. ತಾಳಿಕೋಟೆಯ ಯುದ್ಧ ನಂತರ ವಿಜಯನಗರ ಅರಸರು ಪೆನುಗೊಂಡೆ ಸೇರುತ್ತಾರೆ. ಕ್ರಿ.ಶ.೧೫೭೭ರಲ್ಲಿ ಅದಿಲ್ ಶಾಹಿಗಳು ಪೆನುಗೊಂಡೆ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ವಿಜಯನಗರದ ಪ್ರತಿನಿಧಿಗಳಾದ ಚನ್ನಪಟ್ಟಣದ ಜಗದೇಕರಾಯ ಮತ್ತು ಕರಿತಿಮ್ಮ ಚಿಕ್ಕಪ್ಪಗೌಡರು ಶ್ರೀರಂಗರಾಯರಿಗೆ ಸಹಾಯ ಮಾಡಿದರು. ಇದರಿಂದ ಶ್ರೀರಂಗರಾಯರು ಹಲವಾರು ಕಾಣಿಕೆಗಳನ್ನು, ಬಿರುದು ಬಾವಲಿಗಳನ್ನ ನೀಡಿ ಸನ್ಮಾನಿಸಿದರು.[೧೯] ಗುರು ತೋಂಟದ ಸಿದ್ಧಲಿಂಗ ಶಿವಯೋಗಿಯ ಆರ್ಶೀವಾದದಿಂದ ಕರಿತಿಮ್ಮ ಚಿಕ್ಕಪ್ಪಗೌಡ ಮತ್ತು ಸೋಮಾಂಬೆಗೆ ಇಮ್ಮಡಿ ಚಿಕ್ಕಭೂಪಾಲ ಜನಿಸುತ್ತಾನೆ. ಈತನು ಮಹಾನಾಡ ಪ್ರಭುಗಳಲ್ಲಿ ವೀರನು, ಶೂರನು ಜನಾನುರಾಗಿಯಾಗಿದ್ದವನು.

ಇಮ್ಮಡಿ ಚಿಕ್ಕಪ್ಪಗೌಡರ ಬಗೆಗೆ ಮಲ್ಲಿಕಾರ್ಜುನ ಕವಿಯು ‘ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ’ದಲ್ಲಿ

ಕೊಟ್ಟ ಭಾಷೆಗೆ ತಪ್ಪುರಗಂಡ ರಣಕ್ಕೆ ಹಿ
ಮ್ಮೆಟ್ಟುವ ದೊರೆಗಳ ಗಂಡ
ಕೊಟ್ಟುವ ಕುದಿವ ಕುಂಬಿನ ಪರಗಂಡ ಬಲ್
ದಿಟ್ಟ ನಿರ್ಮಡಿ ಚಿಕ್ಕಭೂಪ||

ಇವನು ಕೊಟ್ಟ ಭಾಷೆಗೆ ತಪ್ಪುವವನಲ್ಲ, ರಣರಂಗದಲ್ಲಿ ಹಿಂದೆ ಸರಿಯುವ ವ್ಯಕ್ತಿಯು ಅಲ್ಲ, ಇಟ್ಟ ಹೆಜ್ಜೆಯನ್ನು ಹಿಂದೆ ಸರಿಸದೆ, ಎದೆಗುಂದದೆ ಹೋರಾಡುವವನಾಗಿದ್ದ ಎಂದು ಹೊಗಳಿದ್ದಾನೆ.[೨೦] ಈತನ ಕಾಲದಲ್ಲಿ ತನ್ನ ಗುರು ತೋಂಟದ ಸಿದ್ಧಲಿಂಗೇಶ್ವರರ ನೆನಪಿಗಾಗಿ ಕ್ರಿ.ಶ.೧೫೯೩ರಲ್ಲಿ ‘ಸಿದ್ಧಾಪುರ’ವನ್ನು ನಿರ್ಮಿಸಿ ಭದ್ರವಾದ ಕೋಟೆಯನ್ನು ಹಾಗೂ ವೀರಭದ್ರ, ಗಣಪತಿ, ಭೈರವ ಮುಂತಾದ ಪಂಚದೇವಾಲಯಗಳನ್ನು ನಿರ್ಮಿಸಿದನು.”[೨೧]

ಇಮ್ಮಡಿ ಚಿಕ್ಕಪ್ಪಗೌಡನು ಕೈಗೊಂಡ ಪ್ರತ್ಯೇಕ ಮೂರು ಯುದ್ಧಗಳಲ್ಲಿ ಜಯಶೀಲನಾಗುತ್ತಾನೆ. ಮೊದಲನೆಯದು ಮಿಡಿಗೇಶಿ ಪಾಳೇಗಾರನಾದ ನಾಗೀರೆಡ್ಡಿಯನ್ನು ಸಂಹಾರ ಮಾಡಿದ್ದು, ಎರಡನೆಯದು ಹಾವಳಿ ಭೈರೇಗೌಡ ವಿಜಯನಗರದ ಅರಸು ವೆಂಕಟಪತಿರಾಯರ ವಿರುದ್ಧ ನಡೆದ ಹರವೆ ಕೋಟೆ ಕಾಳಗ ಮತ್ತು ಮೂರನೆಯದು ಕೊರಟಗೆರೆಯ ರಣಭೈರೆಗೌಡನ ಮೇಲೆ ನಡೆದ ಯುದ್ಧಗಳು ಪ್ರಮುಖವಾಗಿವೆ.[೨೨] ಹರವೆಕೋಟೆ ಕಾಳಗದಲ್ಲಿ ಹಾವಳಿ ಭೈರೇಂದ್ರನು ಸೋಲುವುದು ಖಚಿತವಾದಾಗ ಇಮ್ಮಡಿ ಚಿಕ್ಕಪ್ಪಗೌಡರ ಮಗನಾದ ಸಪ್ಪೇಂದ್ರನನ್ನು ಯುದ್ಧದ ಸಂಚಿನಿಂದ ಕೊಲೆ ಮಾಡಲಾಗುತ್ತದೆ. ಇದೇ ಕೊರಗಿನಲ್ಲಿ ಚಿಕ್ಕಪ್ಪ ಗೌಡರು ಸಾವಿಗೀಡಾದರು.[೨೩]

ಮಧುಗಿರಿಯ ಏಕಶಿಲಾ ಬೆಟ್ಟದಲ್ಲಿ ಕ್ರಿ.ಶ.೧೬೦೧ರಲ್ಲಿ ಇಮ್ಮಡಿ ಚಿಕ್ಕಪ್ಪಗೌಡರು ಬಲವಾದ ಕೋಟೆಯನ್ನು ನಿರ್ಮಿಸಿ, ಬೆಟ್ಟದ ಮೇಲೆ ಗೋಪಾಲಕೃಷ್ಣದೇವಾಲಯವನ್ನು ನಿರ್ಮಿಸಿದರು.[೨೪] ಗೌಡರಿಗೆ ಮೂರು ಜನ ಗಂಡು ಮಕ್ಕಳು. ಅವರಲ್ಲಿ ೨ನೆಯವ ಚೆನ್ನಪ್ಪಗೌಡ ಅಕಾಲಿಕ ಮರಣಕ್ಕೆ ಈಡಾಗುತ್ತಾನೆ. ಅವನ ನೆನಪಿಗಾಗಿ ಚನ್ನರಾಯನ ದುರ್ಗವನ್ನು ಕ್ರಿ.ಶ.೧೬೧೩ರಲ್ಲಿ ನಿರ್ಮಿಸಿ, ದುರ್ಗದ ಮೇಲೆ ಚನ್ನಕೇಶವ ದೇವಾಲಯವನ್ನು ನಿರ್ಮಿಸಿದನು.[೨೫] ಈ ಎರಡು ಕೋಟೆಗಳು ಮಹಾನಾಡ ಪ್ರಭುಗಳ ಆಳ್ವಿಕೆಯಲ್ಲಿ ನಿರ್ಮಿಸಿದ ಬಲಿಷ್ಠ ಕೋಟೆಗಳಾಗಿವೆ. ಬೆಟ್ಟದ ಮೇಲಿನ ಕೋಟೆಗಳನ್ನು ಹೈದರ್-ಟಿಪ್ಪು ಕಾಲದಲ್ಲಿ ದುರಸ್ತಿ ಮಾಡಿ ಇಟ್ಟಿಗೆ ಕೈಪಿಡಿಗೋಡೆಯನ್ನು ಕಟ್ಟಲಾಗಿದೆ. ಈಗಲೂ ಕೋಟೆಯು ಅಭೇದ್ಯವಾಗಿರುವುದನ್ನು ಕಾಣಬಹುದಾಗಿದೆ. ಹೈದರ್-ಟಿಪ್ಪು ಕಾಲದಲ್ಲಿ ದುರಸ್ತಿಗೊಂಡಿರುವುದರಿಂದ ಕೋಟೆ ಗೋಡೆಯ ಮೇಲೆ, ಬಾಗಿಲ ಅಕ್ಕ ಪಕ್ಕದಲ್ಲಿ ಗಾರೆಯಿಂದ ಮುಸ್ಲಿಂ ಶೈಲಿಯ ಕುಸರಿ ಕೆತ್ತನೆಯನ್ನು ಮಾಡಲಾಗಿದೆ. ಜೊತೆಗೆ ಮಸೀದಿಗಳು ಇದೇ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ.

ಮಹಾನಾಡ ಪ್ರಭುಗಳ ಕಾಲದಲ್ಲಿ ನಿರ್ಮಾಣ ಮಾಡಿದ್ದೆಂದು ಹೇಳಲಾಗುವ ಕೋಟೆಯು ಕೋಡಗದಾಲದಲ್ಲಿದೆ. ಇದು ಮಧುಗಿರಿಯ ಪೂರ್ವಕ್ಕೆ ೧೧.ಕಿ.ಮೀ. ದೂರದಲ್ಲಿದೆ.[೨೬] ಈ ಕೋಟೆಯನ್ನು ವಿಶಿಷ್ಟ ಶೈಲಿಯಲ್ಲಿ ನಿರ್ಮಿಸಲಾಗಿದೆ. ಕೋಟೆಯ ಒಳಪ್ರವೇಶಿಸುವ ವೈರಿಗಳಿಗೆ ಬಾಗಿಲು ಕಾಣದಂತೆ 'L' ಆಕಾರದ ಗೋಡೆಯು ತಡೆಯುತ್ತದೆ. ಕೋಟೆಯಲ್ಲಿ ಒಟ್ಟು ಎಂಟು ಕೊತ್ತಳಗಳಿದ್ದು, ಒಂದು ಚೌಕಾಕಾರದ ಮತ್ತು ಏಳು ವೃತ್ತಕಾರದಲ್ಲಿವೆ. ಕೋಟೆಯೊಳಗೆ ದೊಣೆಗಳು, ಮನೆಗಳು ಮತ್ತು ಶ್ರೀರಂಗನಾಥ ದೇವಾಲಯಗಳ ಅವಶೇಷಗಳನ್ನು ಕಾಣಬಹುದಾಗಿದೆ.

ಇಮ್ಮಡಿ ಚಿಕ್ಕಪ್ಪ ಗೌಡರು ಕಾಲವಾದ ನಂತರ ತನ್ನ ಕಿರಿಯ ಮಗನಾದ ಸಪ್ಪೇಂದ್ರನನ್ನು ಗುರುಚೋಳ ಬಸವೇಶ್ವರರು ಆಶೀರ್ವದಿಸಿ ಪಟ್ಟಾಭಿಷೇಕ ಮಾಡಿದರು. ಈತನು ಬಿಜ್ಜಾವರದಿಂದ ರಾಜಧಾನಿಯನ್ನು ಮಧುಗಿರಿಗೆ ಸ್ಥಳಾಂತರಿಸಿದನು. ಸಪ್ಪೇಂದ್ರನು ಮುಂದೆ ಮುಮ್ಮಡಿ ಚಿಕ್ಕಪ್ಪಗೌಡ ಎಂಬ ಹೆಸರಿನಿಂದ ರಾಜ್ಯ ಭಾರ ಕೈಗೊಂಡನು. ಕ್ರಿ.ಶ.೧೬೪೬ರಲ್ಲಿ ಮಧುಗಿರಿ ಬೆಟ್ಟದಲ್ಲಿ ಆಂಜನೇಯನ ವಿಗ್ರಹ ಮತ್ತು ಇಟ್ಟಿಗೆ ದೊಣೆಯನ್ನು ನಿರ್ಮಿಸಿದನು.[೨೭] ಮುಮ್ಮಡಿ ಚಿಕ್ಕಪ್ಪಗೌಡರು ಅವರ ತಂದೆಯಂತೆ ಜನಾನುರಾಗಿಯಾಗಿ ಮೆಚ್ಚುಗೆ ಪಡೆದಿದ್ದರು. ರಣದುಲ್ಲಾಖಾನನ ದಾಳಿಯಲ್ಲಿ ಸಿರಾವನ್ನು ಧ್ವಂಸ ಮಾಡಿದಾಗ ರಂಗಪ್ಪನಾಯಕನ ಮಕ್ಕಳನ್ನು ಮುಮ್ಮಡಿ ಚಿಕ್ಕಪ್ಪಗೌಡರು ತಂದು ಆಶ್ರಯ ನೀಡಿ ರತ್ನಗಿರಿಯ ಸೀಮೆಯನ್ನು ಕೊಟ್ಟು ನೆಲೆಸುವಂತೆ ಮಾಡಿದರು.[೨೮]

ಇವರ ಆಳ್ವಿಕೆಯ ಕಾಲದಲ್ಲಿಯೇ ತನ್ನ ಮೂವರು ಮಕ್ಕಳಿಗೆ ಮಧುಗಿರಿಯಲ್ಲಿ ಸಂಗಪ್ಪ ಗೌಡರನ್ನು, ಚನ್ನರಾಯನ ದುರ್ಗದಲ್ಲಿ ಹಿರೇ ತೋಂಟಪ್ಪಗೌಡರನ್ನು ಮತ್ತು ಮಿಡಿಗೇಶಿಯಲ್ಲಿ ಕಾಳಪ್ಪಗೌಡರನ್ನು ನೇಮಿಸಿದನು. ಇವರು ಕನೇ ಶ್ರೀರಂಗರಾಯರ ಅಪ್ಪಣೆಯ ಮೇರೆಗೆ ಯುದ್ದೋಪಕರಣ, ನಾಡುದುರ್ಗ ಅಭಿವೃದ್ಧಿ ಮತ್ತು ಗ್ರಾಮಗಳ ಎಲ್ಲೆ ಕಟ್ಟುಗಳನ್ನು ನಿರ್ಮಿಸಿದರು.[೨೯]

ಕಾಳಚಿಕ್ಕಪ್ಪಗೌಡರು ಮಧುಗಿರಿ ಮತ್ತು ಮಿಡಿಗೇಶಿ ದುರ್ಗಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು ಇವರ ಮಿತ್ರರಾದ ಸಿರಾದ ರಂಗಪ್ಪನಾಯಕನನ್ನು ಕೊಲೆ ಮಾಡಿದ ಪುವ್ವಲಕೆಂಗನನ್ನು ಎದುರಿಸಲು ಸಿದ್ಧರಾದರು. ಕಾಳಚಿಕ್ಕಪ್ಪಗೌಡರು ಪುವ್ವಲಕೆಂಗನಿಗೆ ಯುದ್ಧಕ್ಕೆ ಆಹ್ವಾನಿಸಿ ಆತನನ್ನು ಕೊಲ್ಲಲ್ಪಡಲಾಯಿತು.[೩೦] ಇದೇ ಸಂದರ್ಭದಲ್ಲಿ ಕನೇ ಶ್ರೀರಂಗರಾಯರನ್ನು ಗೋಲ್ಕಂಡದ ಸುಲ್ತಾನರು ಸೋಲಿಸಿದ್ದರು. ಇವರನ್ನು ರಕ್ಷಿಸಿ ಸಕ್ಕರೆ ಪಟ್ಟಣದಲ್ಲಿ ರಾಜನನ್ನಾಗಿ ಮಾಡಿದ್ದರು.[೩೧] ಈ ಹೊತ್ತಿಗೆ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಲು ಬಿದನೂರಿನ ಶಿವಪ್ಪನಾಯಕ ಮತ್ತು ಶ್ರೀರಂಗರಾಯರು, ಕಾಳಚಿಕ್ಕಪ್ಪಗೌಡರೊಡಗೂಡಿ ಮುನ್ನುಗ್ಗುತ್ತಾರೆ. ಈ ಯುದ್ಧದಲ್ಲಿ ಚಿಕ್ಕದೇವರಾಯರ ಮೂರು ಪಡೆಯನ್ನು ಸೋಲಿಸಲಾಯಿತು. ಇದರಿಂದ ವಿಜಯನಗರದರಸರಾದ ಶ್ರೀರಂಗರಾಯರು ಕಣ್ಮರೆಯಾದರು.[೩೨]

ಕಾಳಚಿಕ್ಕಪ್ಪಗೌಡರ ಮಕ್ಕಳಾದ ರಾಮಪ್ಪಗೌಡರಿಗೆ ಮಧುಗಿರಿಯನ್ನು ಮತ್ತು ತಿಮ್ಮಪ್ಪಗೌಡರಿಗೆ ಚನ್ನರಾಯದುರ್ಗನ್ನು ನೋಡಿಕೊಳ್ಳಲು ವಿಭಾಗಿಸಲಾಯಿತು. ಇವರಿಬ್ಬರಲ್ಲಿ ಮನಸ್ತಾಪ ಹುಟ್ಟಿ ದ್ವೇಷ ಬೆಳೆಯಿತು. ಇದರಿಂದ ತಿಮ್ಮಪ್ಪಗೌಡರು ಚಿಕ್ಕದೇವರಾಜ ಒಡೆಯರಲ್ಲಿ ಸಂಧಿ ಮಾಡಿಕೊಂಡು ರಾಮಪ್ಪಗೌಡರ ಮೇಲೆ ದೂರಿಟ್ಟರು. ಇದನ್ನೆ ಕಾಯುತ್ತಿದ್ದ ಒಡೆಯರು ಇಬ್ಬರನ್ನು ಸೆರೆ ಹಿಡಿದು ೩೦ ವರ್ಷಗಳ ಕಾಲ ಬಂಧಿಸಿಟ್ಟನು.[೩೩] ರಾಮಪ್ಪಗೌಡರ ಮಕ್ಕಳಲ್ಲಿ ಮಾಡಿಕೊಂಡ ಒಪ್ಪಂದಗಳ ಮೇರೆಗೆ ಇಬ್ಬರನ್ನು ಬಿಡುಗಡೆ ಮಾಡಿದರು. ಆದರೂ ಮಧುಗಿರಿ ಪ್ರದೇಶವನ್ನು ಒಡೆಯರೆ ವಹಿಸಿಕೊಂಡು ಕೋಟೆ ಕೊತ್ತಲಗಳನ್ನು ಆಯಕಟ್ಟಿನ ಜಾಗದಲ್ಲಿ ಕಟ್ಟಿಸಿ ಭದ್ರಪಡಿಸಿ ದುರ್ಗರಕ್ಷಣೆಗಾಗಿ ಸೈನ್ಯವನ್ನು ಕಳಿಸಿ ದಳವಾಯಿ ದೊಡ್ಡ ಅರಸರ ಸುಬರ್ಧಿಗೆ ಬಿಟ್ಟರು.[೩೪]

ಚಿಕ್ಕದೇವರಾಜ ಒಡೆಯರು ಮಧುಗಿರಿ ಪ್ರಕೃತಿ ಸೌಂದರ್ಯ ಸವಿಯಲು ತನ್ನ ರಾಣಿಯರೊಂದಿಗೆ ೧೬೭೦ರಲ್ಲಿ ಆಗಮಿಸಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ವೆಂಕಟರಮಣ ಮತ್ತು ಮಲ್ಲೇಶ್ವರ ದೇವಾಲಯಗಳ ಗೋಪುರ ಮತ್ತು ಕಲ್ಯಾಣ ಮಂಟಪಗಳು ನಿರ್ಮಾಣಗೊಂಡವು. ಕೆರೆ-ಕಟ್ಟೆಗಳು, ೩ ಸುಂದರ ಕೊಳಗಳು, ಬೃಂದಾವನ ಇತ್ಯಾದಿ ಕಾರ್ಯಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಿದರು. ಕೋಟೆಯಲ್ಲಿ ಧವಸ ಧಾನ್ಯವಿಡಲು ಕಣಜಗಳ ನಿರ್ಮಾಣ ಮಾಡಿದರು. ಇದೇ ರೀತಿ ಅನೇಕ ಉನ್ನತವಾದ ಸಾಧನಗಳನ್ನು ಮಾಡಿ ಮಧುಗಿರಿ ದುರ್ಗದ ರಕ್ಷಣೆ, ಆಡಳಿತ ಮುಂತಾದವುಗಳಿಗೆ ವ್ಯವಸ್ಥೆ ಮಾಡಿ ಸ್ವಲ್ಪ ಕಾಲದ ನಂತರ ಶ್ರೀರಂಗ ಪಟ್ಟಣಕ್ಕೆ ಹಿಂದಿರುಗಿದರು.[೩೫]

ಮಹಾನಾಡ ಪ್ರಭುಗಳು ಚಿಕ್ಕದೇವರಾಜ ಒಡೆಯರ ಆಳ್ವಿಕೆಗೆ ಒಳಪಟ್ಟನಂತರ ಗೌಣವಾಗತೊಡಗಿದರು. ರಾಮಪ್ಪ ಗೌಡರ ಮಗ ಕಾಳಪ್ಪಗೌಡರು, ಇವರ ಮಗ ತೋಂಟಪ್ಪಗೌಡರು ಮಿಡಿಗೇಶಿಯ ಉಸ್ತುವಾರಿಕೆ ನೋಡಿಕೊಂಡರು. ಹೈದರ್‌ನ ಕಾಲದಲ್ಲಿ ಮಿಡಿಗೇಶಿ ಪ್ರದೇಶದಲ್ಲಿ ಠಾಣ್ಯವನ್ನು ಹಾಕಿಸಿ ದೊಡ್ಡಕಣ್ಣಪ್ಪ ಗೌಡರಿಗೆ ತೆರಿಯೂರನ್ನು ಜಹಗೀರಾಗಿ ಕೊಟ್ಟರು.[೩೬] ೧೭೬೩ರಲ್ಲಿ ಹೈದರಾಲಿ ಬಿದನೂರಿನ ಮೇಲೆ ದಂಡೆತ್ತಿ ಹೋಗಿ ವಶಪಡಿಸಿಕೊಂಡು, ವೀರಮ್ಮಾಜಿ, ನಂಜಯ್ಯ ಮತ್ತು ವೇಷದಾರಿ ಚನ್ನಬಸಪ್ಪ ಇವರನ್ನು ಸೆರೆ ಹಿಡಿದು ಮಧುಗಿರಿ ಕೋಟೆಯಲ್ಲಿ ಬಂಧಿಗಳಾಗಿ ಇಟ್ಟನು.[೩೭] ಇದೇ ರೀತಿ ಕ್ರಿ.ಶ.೧೭೭೬ರಲ್ಲಿ ಪಾವಗಡ ಪಾಳೇಗಾರನಾದ ತಿಮ್ಮಪ್ಪನಾಯಕನನ್ನು ಸೆರೆ ಹಿಡಿದು ಮಧುಗಿರಿ ದುರ್ಗದಲ್ಲಿ ಸೆರೆ ಇಟ್ಟರು.[೩೮]

ಮರಾಠರು ದಕ್ಷಿಣ ಕರ್ನಾಟಕದ ಹೈದರನ ಪ್ರದೇಶವನ್ನು ೧೭೭೦ರಲ್ಲಿ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಇದರಿಂದ ಹೈದರನು ೩೦ ಲಕ್ಷ ವರಹಗಳನ್ನು ಕೊಡುವುದಾಗಿ ಒಪ್ಪಿಕೊಳ್ಳುತ್ತಾನೆ. ಈ ಹಣ ಪಾವತಿಯಾಗುವವರೆಗೂ ಮಧುಗಿರಿ, ಚೆನ್ನರಾಯದುರ್ಗ ಸೇರಿದಂತೆ ಹಲವು ಪ್ರದೇಶಗಳನ್ನು ಭೋಗ್ಯ ಮಾಡುತ್ತಾನೆ.[೩೯] ಮುಂದೆ ಮರಾಠರ ಒಳ ಜಗಳದಿಂದ ಕ್ರಿ.ಶ.೧೭೭೪ರಲ್ಲಿ ಟಿಪ್ಪು ಸುಲ್ತಾನನು

ಮತ್ತೆ ಮಧುಗಿರಿ ಕೋಟೆಯನ್ನು ವಶಪಡಿಸಿಕೊಳ್ಳುತ್ತಾನೆ. ಮಧುಗಿರಿಗೆ ಪತ್ತೇಹಾಬಾದ್ ಎಂಬ ಹೆಸರನ್ನು ಇಡುತ್ತಾನೆ.[೪೦] ಟಿಪ್ಪುವಿನ ಕಾಲದಲ್ಲಿ ಮಧುಗಿರಿಯನ್ನು ಚನ್ನಪ್ಪಗೌಡನು ಆಳುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ.೧೭೯೧ರಲ್ಲಿ ಮರಾಠರು ಕೋಟೆಯನ್ನು ವಶಪಡಿಸಿಕೊಂಡರು. ನಂತರ ಟಿಪ್ಪುವು ಮಧುಗಿರಿಯನ್ನು ಮರಾಠರಿಂದ ಪುನಃ ಪಡೆದನು.[೪೧]

ಹೀಗೆ ಮಹಾನಾಡು ಪ್ರಭುಗಳ ಕೊನೆ ಪ್ರಭು ಚನ್ನಪ್ಪಗೌಡನು ಬ್ರಿಟಿಷರ ಪರ ಸೇರಿಕೊಂಡು ಟಿಪ್ಪು ಸುಲ್ತಾನನ್ನು ಕ್ರಿ.ಶ.೪-೫-೧೭೯೯ ಶ್ರೀರಂಗಪಟ್ಟಣದ ಕೋಟೆಯಲ್ಲಿ ಸೋಲಿಸಲಾಯಿತು. ಕೊನೆಗೆ ಬ್ರಿಟೀಷರು ಚನ್ನಪ್ಪಗೌಡರ ಆಕಾಂಕ್ಷೆಗಳನ್ನು ಈಡೇರಿಸಲಾಗಲಿಲ್ಲ. ಇದರಿಂದ ಚನ್ನಪ್ಪಗೌಡರು ದುಃಖಿತರಾಗಿ ದೇಶಾಂತರ ಹೋದರು.[೪೨] ಬ್ರಿಟೀಷರು ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಹಿಂದಿರುಗಿಸಿದಾಗ ಮಧುಗಿರಿಯು ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು. ಮಹಾನಾಡ ಪ್ರಭುಗಳ ವಂಶದವರು ಶಂಭೋನಹಳ್ಳಿಯಲ್ಲಿ ಈಗ ವಾಸವಾಗಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ತುಮಕೂರು ಜಿಲ್ಲೆಯ ಮಧುಗಿರಿ ಪ್ರದೇಶದ ಸುತ್ತಲಿನ ಹಲವು ನಾಡುಗಳನ್ನು ನಿರ್ಮಿಸಿ ಮಹಾನಾಡ ಪ್ರಭುಗಳೆಂದೇ ಪ್ರಸಿದ್ಧಿಹೊಂದಿ, ಸಾಹಿತ್ಯ, ಕಲೆ, ಸಂಸ್ಕೃತಿ ಉಳಿಸಿ ಮತ್ತು ವೀರಶೈವ ಧರ್ಮವನ್ನು ಪ್ರೋತ್ಸಾಹಿಸಿ ಧರ್ಮಾವಲಂಬಿಗಳಾಗಿ ನಡೆದುಕೊಂಡರು. ಇವರು ಮುಮ್ಮಡಿ ಪಟ್ಟಣ, ಸಿದ್ಧಾಪುರ, ಬಿಜ್ಜಾವರ, ಮಧುಗಿರಿ, ಕೋಡಗದಾಲ, ಚನ್ನರಾಯನ ದುರ್ಗಗಳಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿ, ಜನರಿಗಾಗಿ ಅವಶ್ಯಕ ಕೆಲಸ ಕಾರ್ಯ ಮಾಡಿ ಜನಪೋಷಕರಾಗಿದ್ದರು. ಇವರು ವೀರಶೈವ ಮತವನ್ನು ಹೊಂದಿದ್ದರೂ ಇನ್ನಿತರ ಮತಗಳನ್ನು ದ್ವೇಷಿಸುತ್ತಿರಲಿಲ್ಲ. ಇವರು ೧೪ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಸುದೀರ್ಘವಾಗಿ ರಾಜ್ಯಭಾರ ಮಾಡಿ ಕೊನೆಗೆ ಮೈಸೂರು ಸಂಸ್ಥಾನದಲ್ಲಿ ವಿಲೀನವಾದರು.

ಮಧುಗಿರಿ ಕೋಟೆಯ ಲಕ್ಷಣಗಳು

ಮಹಾನಾಡ ಪ್ರಭುಗಳ ಆಳ್ವಿಕೆಯಲ್ಲಿ ನಿರ್ಮಿಸಿದ ಕೋಟೆಗಳಲ್ಲಿ ಮಧುಗಿರಿ ಕೋಟೆಯು ಒಂದು ಅಭೇಧ್ಯವಾದ ಕೋಟೆಯಾಗಿದೆ. ಮಧುಗಿರಿ ಕೋಟೆಯನ್ನು ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ.೧೬೦೧ರಲ್ಲಿ ನಿರ್ಮಿಸಿದನು.[೪೩] ಇದು ಪ್ರಾರಂಭದಲ್ಲಿ ಕಲ್ಲು, ಮಣ್ಣಿನಿಂದ ನಿರ್ಮಿಸಿದ ಕೋಟೆಯಾಗಿತ್ತು. ಮೈಸೂರು ಚಿಕ್ಕದೇವರಾಜ ಒಡೆಯರು ಮಧುಗಿರಿ ಕೋಟೆಯನ್ನು ವಶಪಡಿಸಿಕೊಂಡಾಗ ಹಿಂದೆ ಇದ್ದ ಕೋಟೆಯನ್ನು ಜೀರ್ಣೋದ್ಧಾರ ಮಾಡಿಸಿದರು.[೪೪] ನಂತರ ಹೈದರ್-ಟಿಪ್ಪುವಿನ ಕಾಲದಲ್ಲಿ ಕೋಟೆಯನ್ನು ವಿಸ್ತರಿಸಿ ಗಾರೆ, ಇಟ್ಟಿಗೆಯಿಂದ ಮತ್ತಷ್ಟು ಭದ್ರಪಡಿಸಿಲಾಯಿತು.[೪೫]

ಮಧುಗಿರಿ ಬೆಟ್ಟವು ಬೃಹತ್ತಾದ ಏಕಶಿಲೆಯ ಬೆಟ್ಟವಾಗಿದೆ. ಬೆಟ್ಟದ ತಪ್ಪಲಿನಿಂದ ಬೆಟ್ಟದ ತುದಿಯವರೆಗೆ ಅಭೇದ್ಯವಾದ ಕೋಟೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯು ಸುಸ್ಥಿತಿಯಲ್ಲಿದ್ದು, ಇದು ಒಟ್ಟು ಹದಿನೈದು ಬಾಗಿಲುಗಳನ್ನು ಒಳಗೊಂಡಿದೆ. ಮೊದಲನೆ ಕೋಟೆಯು ಬೆಟ್ಟದ ತಪ್ಪಲಿನಲ್ಲಿರುವ ಊರನ್ನು ಸುತ್ತುವರೆದಿದೆ. ಇದರ ಪ್ರವೇಶದ್ವಾರವು ಪಶ್ಚಿಮ ದಿಕ್ಕಿನಲ್ಲಿದೆ. ಇದನ್ನು ದಂಪೂರ ಊರಬಾಗಿಲು ಎಂದು ಸ್ಥಳೀಯರು ಕರೆಯುತ್ತಾರೆ. ಈ ಬಾಗಿಲನ್ನು ಪಕ್ಕದಲ್ಲಿರುವ ಎರಡು ವೃತ್ತಾಕಾರದ ಕೊತ್ತಲಗಳು ರಕ್ಷಿಸುತ್ತಿವೆ. ಇದೇ ಕೋಟೆಗೆ ಪೂರ್ವದಿಕ್ಕಿನಲ್ಲಿ ಈಗಿನ ದೊಡ್ಡ ಪೇಟೆಯ ಸರ್ಕಲ್ ಬಳಿ ಇನ್ನೊಂದು ಬಾಗಿಲು ಇತ್ತೆಂದು ಹೇಳುತ್ತಾರೆ. ಈಗ ಶಿಥಿಲವಾಗದೆ ಉಳಿದಿರುವ ೨ನೇ ಕೋಟೆಯು ಬೆಟ್ಟದ ಬುಡದಲ್ಲಿದೆ. ಈ ಕೋಟೆಗೆ ಬಂಡಿ ತಿಮ್ಮಣ್ಣನ ಬಾಗಿಲು, ರಾಟೆ ಬಾಗಿಲು, ನೀರ್ ಬಾಗಿಲು ಎಂಬ ಮೂರು ಪ್ರವೇಶದ್ವಾರಗಳನ್ನು ಬಿಡಲಾಗಿದೆ. ಇಲ್ಲಿನ ಕೋಟೆಯನ್ನು ಉತ್ತರ, ಪೂರ್ವ, ಪಶ್ಚಿಮ ದಿಕ್ಕಿನಲ್ಲಿ ನಿರ್ಮಿಸಿದ್ದು, ದಕ್ಷಿಣ ದಿಕ್ಕಿನ ಬೆಟ್ಟಕ್ಕೆ ಎರಡು ತುದಿಯನ್ನು ಸೇರಿಸಲಾಗಿದೆ. ಇದರಲ್ಲಿ ಅನೇಕ ಬಲವಾದ ಚೌಕಾಕಾರದ ಕೊತ್ತಲಗಳಿವೆ. ಅಲ್ಲದೆ ಅಲ್ಲಲ್ಲಿ ಎತ್ತರವಾದ ಬತೇರಿಗಳನ್ನು ನಿರ್ಮಿಸಲಾಗಿದೆ. ಕೋಟೆಯು ಕೈಪಿಡಿ ಗೋಡೆ ಹೊಂದಿದ್ದು, ಅದರಲ್ಲಿ ಬಂದೂಕ ರಂಧ್ರ ಮತ್ತು ಫಿರಂಗಿಗಾಗಿ ಮಾಡಿದ ಅಗಲವಾದ ಕಿಂಡಿಗಳಿವೆ. ಇವು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಾಣಗೊಂಡಿವೆ. ಉತ್ತರ ದಿಕ್ಕಿನ ಪ್ರವೇಶ ದ್ವಾರದ ಎಡಕೋಟೆ ಗೋಡೆಗೆ ಹೊಂದಿಕೊಂಡಂತೆ ಮಲ್ಲಿನಾಥ ಜೈನ ಬಸದಿಯಿದೆ. ಈ ಕೋಟೆಯ ಒಳಗೆ ವಿಶಾಲವಾದ ಪ್ರದೇಶವಿದ್ದು, ಈ ಸ್ಥಳದಲ್ಲಿ ಈಗ ಸರ್ಕಾರಿ ಕಛೇರಿಗಳನ್ನು ಸ್ಥಾಪಿಸಲಾಗಿದೆ. ಇದೇ ಪ್ರದೇಶದಲ್ಲಿ ಸುಸ್ಥಿತಿಯಲ್ಲಿರುವ ಕೋದಂಡರಾಮ ದೇವಾಲಯವನ್ನು ಕಾಣಬಹುದು. ಈ ದೇವಾಲಯದ ಪಕ್ಕದಿಂದ ಹಾದುಹೋದರೆ ಮಹಾನವಮಿ ದಿಬ್ಬದ ಅವಶೇಷ ಕಂಡುಬರುತ್ತದೆ. ವಿಜಯನಗರದ ಮತ್ತು ಮೈಸೂರು ಅರಸರ ನವರಾತ್ರಿ ಉತ್ಸವದ ಆಚರಣೆ ಇಲ್ಲಿ ನಡೆಯುತ್ತಿತ್ತೆಂದು ಊಹಿಸಬಹುದು. ಇಲ್ಲಿಂದ ಮುಂದೆ ಸಾಗಿದರೆ ಈಶಾನ್ಯಕ್ಕಿರುವ ಬಾಗಿಲನ್ನು ಪ್ರವೇಶಿಸಿ ಬೆಟ್ಟದ ಮೇಲೆ ಹತ್ತಬಹುದು.

ಇಲ್ಲಿಂದ ಸ್ವಲ್ಪ ಮುಂದೆ ಸಾಗಿದರೆ ಬೆಟ್ಟದ ಕೋಟೆಯ ಆರನೇ ಬಾಗಿಲು ಕಂಡುಬರುತ್ತದೆ. "ಇದು ಮಹಾನಾಡ ಪ್ರಭುಗಳ ಕಾಲದ ಈ ಬಾಗಿಲು ಹೈದರಾಲಿಯ ಕಾಲದಲ್ಲಿ ದುರಸ್ತಿಗೊಂಡಿದೆ" ಎಂದು ಡಾ.ಚನ್ನಬಸಪ್ಪ ಎಸ್.ಪಾಟೀಲ ಅವರು ಹೇಳುತ್ತಾರೆ.[೪೬] ಇಲ್ಲಿನ ಕೋಟೆಯ ಮತ್ತು ಬಾಗಿಲ ಕೈಪಿಡಿ ಗೋಡೆಯನ್ನು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಿದ್ದು, ಅಲ್ಲಲ್ಲಿ ಬಂದೂಕು ಕಿಂಡಿಗಳು ಮತ್ತು ಫಿರಂಗಿ ಕಿಂಡಿಗಳನ್ನ ಬಿಡಲಾಗಿದೆ. ಏಳನೇ ಬಾಗಿಲ ಕೋಟೆಯು 'L' ಆಕಾರದಲ್ಲಿ ನಿರ್ಮಿಸಿದ್ದು, ಇದರಲ್ಲಿ ಎರಡು ಬೃಹತ್ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ಬಾಗಿಲ ಪಕ್ಕದ ಗುಂಡಿನ ಮೇಲೆ ಮೈಸೂರು ಅರಸ ಚಿಕ್ಕದೇವರಾಜ ಒಡೆಯರ ಶಾಸನವಿದೆ. ಈ ಶಾಸನವು "ಕ್ರಿ.ಶ.೧೬೮೬ ರಿಂದ ೧೬೯೩ರ

ಅವಧಿಯಲ್ಲಿ ಈ ಬಾಗಿಲ ಹತ್ತಿರ ಒಂದು ಕೊತ್ತಳ, ರಾಮಭದ್ರ ಮತ್ತು ಭೂತನಾಥ ಫಿರಂಗಿಗಳಿಂದ ಗುಂಡು ಹಾರಿಸಲು ಅನುಕೂಲವಾಗುವಂತೆ ಪ್ರತಿಯೊಂದರ ಸುತ್ತ ಐದುಕಿಂಡಿಗಳನ್ನು ಬಿಟ್ಟು ಸುತ್ತ ಗೋಡೆ ಮತ್ತು ಬಾಗಿಲ ಮುಂದೆ ೫೫ ಮೆಟ್ಟಿಲುಗಳನ್ನು ನಿರ್ಮಿಸಿದ್ದೆಂದು ಈ ಶಾಸನ ತಿಳಿಸುತ್ತದೆ.''[೪೭] ಈ ಕೋಟೆಯ ದುರಸ್ತಿಯನ್ನು ಮೈಸೂರ ಚಿಕ್ಕದೇವರಾಜ ಒಡೆಯರು ಗೆದ್ದು ತಮ್ಮ ವಶದಲ್ಲಿಟ್ಟುಕೊಂಡಿದ್ದಾಗ ನಿರ್ವಹಿಸಿದ್ದರು.

ಎಂಟನೇ ಪ್ರವೇಶದ್ವಾರವು ಉತ್ತರಾಭಿಮುಖವಾಗಿದ್ದು, ಇಲ್ಲಿನ ಕೋಟೆಯು ವಿಶಾಲವಾದ ಸಮತಟ್ಟಾದ ಬಯಲನ್ನು ಒಳಗೊಂಡಿದೆ. ಇಲ್ಲಿ ಧಾನ್ಯ ಕಣಜಗಳು, ತುಪ್ಪದ ಕಣಜಗಳು, ದೊಣೆ, ಅರಮನೆ ಮತ್ತು ಇನ್ನಿತರ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು. ಇಲ್ಲಿನ ಬಾಗಿಲ ಒಳಭಾಗದ ಇಕ್ಕೆಲಗಳಲ್ಲಿ ಎರಡು ವಿಶ್ರಾಂತಿ ಮಂಟಪಗಳಿವೆ. ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಎರಡು ದೊಡ್ಡ ಕಣಜಗಳನ್ನು ನಿರ್ಮಾಣ ಮಾಡಲಾಗಿದೆ. ಪೂರ್ವದಿಕ್ಕಿನ ಕಣಜವು ಮೂರು ಭಾಗ ಹೊಂದಿದ್ದು, ಅದನ್ನು ಕಲ್ಲು ಚಪ್ಪಡಿ, ಕಂಬ, ತೊಲೆಗಳಿಂದ ಕಟ್ಟಲಾಗಿದೆ. ಇವು ಇಂದಿಗೂ ಶಿಥಿಲವಾಗದೆ ಭದ್ರವಾಗಿ ನಿಂತಿವೆ. ಇಲ್ಲಿಂದ ಮುಂದೆ ಸಾಗಿದರೆ ಪೂರ್ವಾಭಿಮುಖವಾದ ಅರಮನೆಯ ಅವಶೇಷಗಳನ್ನು ಹೊಂದಿದ ಕಟ್ಟಡವಿದೆ. ಇದರಲ್ಲಿ ಅಲಂಕಾರಕ್ಕಾಗಿ ಗಾರೆಯಿಂದ ಬಿಡಿಸಿದ ಕಮಾನು ಮತ್ತು ಹೂಬಳ್ಳಿಗಳ ಚಿತ್ರವನ್ನು ಕಾಣಬಹುದು. ಅರಮನೆಯ ಮುಂದೆ ನೀರಿನ ಚಿಕ್ಕ ತೊಟ್ಟಿ, ಒಂದು ಚಿಕ್ಕ ದೇವಾಲಯವಿದೆ. ಇಲ್ಲಿಂದ ಮುಂದೆ ಕಲ್ಲಿನ ಚಪ್ಪಡಿಗಳಿಂದ ನಿರ್ಮಿಸಿದ ಚೌಕಾಕಾರದ ದೊಡ್ಡ ದೋಣೆಯಿದೆ. ಇದನ್ನು ಇಟ್ಟಿಗೆ ದೊಣೆಯೆಂದು ಕರೆಯುತ್ತಾರೆ. ಈ ದೊಣೆಯ ನೀರನ್ನು ಅರಮನೆ ಮತ್ತು ಕಟ್ಟಡಗಳಿಗೆ ಬಳಸುತ್ತಿದ್ದರೆನ್ನಬಹುದು. ಇಲ್ಲಿಂದ ದಕ್ಷಿಣ ದಿಕ್ಕಿಗೆ ಸಾಗಿದರೆ ನೆಲದಲ್ಲಿ ನಿರ್ಮಿಸಿರುವ ಎರಡು ಗೋಲಾಕಾರದ ಕಣಜಗಳಿವೆ. ಇವುಗಳು ತುಪ್ಪವನ್ನು ತುಂಬಲು ಬಳಸುತ್ತಿರಬಹುದು. ಈ ಬಯಲಿನ ದಕ್ಷಿಣಕ್ಕೆ ಪೂರ್ವಭಿಮುಖವಾಗಿರುವ ಒಂಬತ್ತನೇ ಬಾಗಿಲಿದೆ. ಈ ಬಾಗಿಲ ಪಕ್ಕದಲ್ಲಿ ಚಿಕ್ಕ ಆಂಜನೇಯ ದೇವಾಲಯವಿದೆ. ಇದೇ ಪ್ರದೇಶದಲ್ಲಿ ಒಂದು ಚಿಕ್ಕ ಮದ್ದಿನ ಮನೆಯಿದ್ದು, ಅದು ಶಿಥಿಲಗೊಂಡಿದೆ.

ಇಲ್ಲಿನ ಬಯಲನ್ನು ಬೆಟ್ಟದ ದಕ್ಷಿಣ ದಿಕ್ಕಿನಿಂದಲೂ ಪ್ರವೇಶಿಸಬಹುದು. ಇಲ್ಲಿಯೂ ಸಹ ಕೋಟೆಯನ್ನು ನಿರ್ಮಿಸಲಾಗಿದೆ. ಈ ದಿಕ್ಕಿನಲ್ಲಿ ಮೂರು ಬಾಗಿಲಿವೆ. ಜೊತೆಗೆ ಕೋಟೆಯ ಗೋಡೆಗೆ ಅಲ್ಲಲ್ಲಿ ಎತ್ತರವಾದ ವೃತ್ತಾಕಾರದ ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಅವುಗಳಿಗೆ ಫಿರಂಗಿಯನ್ನು ಇಡಲು ಸೂಕ್ತವಾದ ಸ್ಥಳ ನಿರ್ಮಿಸಿದ್ದು, ಮೈಸೂರಿನ ದಿಕ್ಕಿನಿಂದ ಬರುವ ಶತ್ರುಗಳನ್ನು ವೀಕ್ಷಿಸಲು ಇವನ್ನು ನಿರ್ಮಿಸಿರಬಹುದಾಗಿದೆ. ಈ ದಿಕ್ಕಿನ ಬಾಗಿಲುಗಳಲ್ಲಿ ಮಧ್ಯದ ಬಾಗಿಲಿನ ಹೆಸರು ಮೈಸೂರು ಬಾಗಿಲು. ಇದನ್ನು ಕ್ರಿ.ಶ.೧೭೮೧-೮೨ರಲ್ಲಿ ಹೈದರಾಲಿಯು ಕಟ್ಟಿಸಿದನೆಂದು ಇದರ ಮೇಲಿನ ಶಾಸನ ತಿಳಿಸುತ್ತದೆ.[೪೮]

ಇಲ್ಲಿನ ಬಯಲಿನಿಂದ ಬೆಟ್ಟದ ತುದಿಗೇರಲು ಆರನೇ ಕೋಟೆಯ ಹತ್ತನೇ ಬಾಗಿಲನ್ನು ಪಶ್ಚಿಮಾಭಿಮುಖವಾಗಿ ಪ್ರವೇಶಿಸಿದರೆ, ಏಳನೇ ಕೋಟೆ ಸಿಗುತ್ತದೆ. ಇದು ಬಂಡೆಯ ಇಳಿಜಾರಾದ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯು ಹನ್ನೊಂದನೆಯ ಬಾಗಿಲನ್ನು ಹೊಂದಿದೆ. ಈ ಪ್ರದೇಶದಲ್ಲಿದ್ದ ಚಂದ್ರನಾಕಾರದ ಚಂದ್ರದೋಣಿಯು ಇದ್ದು, ಅದು ಈಗ ಮುಚ್ಚಿ ಹೋಗಿದೆ ಎಂದು ಸ್ಥಳೀಯರ ಅಭಿಪ್ರಾಯ. ಇಲ್ಲಿಂದ ಮುಂದೆ ಎಂಟನೇ ಕೋಟೆಯ ಹನ್ನೆರಡನೇ ಬಾಗಿಲಿದ್ದು ಅದರ ಮುಂದೆ ಕಡಿದಾದ ಬಂಡೆಯಲ್ಲಿ ಕೆತ್ತಿದ ಚಿಕ್ಕ ಮೆಟ್ಟಿಲುಗಳ ಸಹಾಯದಿಂದ ಮೇಲೇರಬೇಕು. ಆದರೆ ಆಧಾರಕ್ಕಾಗಿ ಹಾಕಿದ್ದ ಕಬ್ಬಿಣದ ಸರಳುಗಳನ್ನು ಕಿತ್ತು ಹಾಕಿರುವುದರಿಂದ ಮೇಲೇರಲು ಬಹಳ ಕಷ್ಟವಾಗುತ್ತದೆ. ಮುಂದೆ ಸಿಗುವ ಒಂಬತ್ತು ಮತ್ತು ಹತ್ತನೆಯ ಕೋಟೆಯು ಚಿಕ್ಕ ಪ್ರಮಾಣದಲ್ಲಿ ನಿರ್ಮಿಸಿದ್ದು, ಅವು ಈಗಲೂ ಅಭೇಧ್ಯವಾಗಿದೆ. ಇಲ್ಲಿಂದ ಮುಂದೆ ಸಾಗಿದರೆ ಬೆಟ್ಟದ ತುದಿಯ ಕೈಲಾಸದ ಬಾಗಿಲನ್ನು ಪ್ರವೇಶಿಸುತ್ತೇವೆ. ಇಲ್ಲಿನ ಕೋಟೆಯು ಆಯಾತಾಕಾರದ ರೀತಿಯಲ್ಲಿದ್ದು, ಇದನ್ನು ಚನ್ನಬಸಪ್ಪ ಎಸ್.ಪಾಟೀಲರು ಕಡೇಗಾಪು(citadal) ಎಂದು ಕರೆದಿದ್ದಾರೆ.(ಇತಿಹಾಸ ವಿದ್ವಾಂಸರಾದ ಪ್ರೊ.ಲಕ್ಷ್ಮಣ್ ತೆಲಗಾವಿಯವರ ಪ್ರಕಾರ ಕಡೆಗಾಪುಯೆಂದರೆ ರಾಜ ಪರಿವಾರ ವಾಸಿಸುವ ರಕ್ಷಿತ ಪ್ರದೇಶ ಎನ್ನುತ್ತಾರೆ)

ಈ ಕಡೆಗಾಪುವಿಗೆ ನಾಲ್ಕು ಮೂಲೆಗಳಲ್ಲಿ ಚೌಕಾಕಾರದ ಎತ್ತರವಾದ ನಾಲ್ಕು ಕೊತ್ತಲಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ದಕ್ಷಿಣ ಮತ್ತು ಉತ್ತರ ದಿಕ್ಕಿನಲ್ಲಿ ಎರಡು ಬಾಗಿಲುಗಳನ್ನು ಇಡಲಾಗಿದೆ. ಇವಕ್ಕೆ ಕುಂಭಿ ಮತ್ತು ಕೈಲಾಸದ ಬಾಗಿಲು ಎಂದು ಕರೆಯುತ್ತಾರೆ. ಇದರ ಮಧ್ಯದಲ್ಲಿ ಗೋಪಾಲಕೃಷ್ಣ ದೇವಾಲಯವಿದೆ. ಇದಕ್ಕೆ ಹೊಂದಿಕೊಂಡಂತೆ ಕಂಬ ಮತ್ತು ತೊಲೆಗಳ ಆಧಾರದಿಂದ ನಿರ್ಮಿಸಿದ ಕಣಜಗಳಿವೆ. ಇದೇ ಪ್ರದೇಶದಲ್ಲಿ ದೇವಾಲಯದ ಈಶಾನ್ಯಕ್ಕೆ ಒಂದು ಮತ್ತು ವಾಯುವ್ಯಕ್ಕೆ ಎರಡು ಇಟ್ಟಿಗೆ ಮತ್ತು ಗಾರೆಯಲ್ಲಿ ಕಟ್ಟಿದ ಗೋಲಾಕಾರದ ಕಣಜಗಳಿವೆ. ಇವು ನೆಲದಲ್ಲಿ ನಿರ್ಮಿಸಿದ್ದು, ತುಪ್ಪವನ್ನು ಈ ಕಣಜಗಳಲ್ಲಿ ತುಂಬಲು ಬಳಸಿರಬಹುದು. ಕಡೆಗಾಪುವಿನ ನೈರುತ್ಯ ಭಾಗದಲ್ಲಿ ವಾಸದ ಮನೆಯ ಅವಶೇಷಗಳಿದ್ದು ಅದರಲ್ಲಿ ಅಧಿಕಾರಿಗಳು ವಾಸಿಸುತ್ತಿದ್ದರೆಂದು ಹೇಳಬಹುದು. ಪೂರ್ವ ಮತ್ತು ದಕ್ಷಿಣ ಗೋಡೆಗಳಿಗೆ ಹೊಂದಿಕೊಂಡಿರುವ ಕೈಸಾಲೆಯಿದೆ. ಕಡೆಗಾಪುವಿನ ಅಗ್ನೇಯ ದಿಕ್ಕಿನ ಕೊತ್ತಲದಲ್ಲಿ ಒಂದು ಕಣಜವಿದ್ದು, ಇದನ್ನು ಕ್ರಿ.ಶ.೧೭೦೦ರಲ್ಲಿ ಚಿಕ್ಕದೇವರಾಜ ಒಡೆಯರು ಕಟ್ಟಿಸಿದರೆಂಬುದಕ್ಕೆ ಕಣಜದ ತೊಲೆಯ ಮೇಲೆ ಕೆತ್ತಿರುವ ಶಾಸನದಿಂದ ತಿಳಿದುಬರುತ್ತದೆ.[೪೯]

ಕಡೆಗಾಪುವಿನ ದಕ್ಷಿಣ ದಿಕ್ಕಿನ ಬಾಗಿಲನ್ನು ದಾಟಿ ಹೊರ ಹೋದರೆ, ಕಲ್ಲುಕಂಬ ಮತ್ತು ತೊಲೆಗಳಿಂದ ನಿರ್ಮಿಸಿದ ಒಂದು ದೊಡ್ಡ ಕಣಜವಿದೆ. ಇದನ್ನು ಮೂರು ಭಾಗ ಮಾಡಲಾಗಿದೆ. ಈ ಕಣಜದೊಳಗೆ ಪೂರ್ವಗೋಡೆಯ ಪಕ್ಕದಲ್ಲಿ ಎರಡು ಸಾಲು ಮಡಕೆಗಳನ್ನು ಹೂತಿದ್ದ ಗುರುತುಗಳಿವೆ. ಈ ಕಣಜದ

ಪಕ್ಕದಲ್ಲಿಯೇ ಒಂದು ದೊಣೆಯಿದೆ. ಈ ದೋಣೆಯನ್ನು ಕ್ರಿ.ಶ.೧೬೪೬ರಲ್ಲಿ ಮಹಾನಾಡ ಪ್ರಭು ಮುಮ್ಮಡಿ ಚಿಕ್ಕಪ್ಪಗೌಡನು ನಿರ್ಮಿಸಿ, ಪಕ್ಕದ ಬಂಡೆಯ ಮೇಲೆ ಹನುಮನ ವಿಗ್ರಹವನ್ನು ಕೆತ್ತಿಸಿ ದೊಣೆಯನ್ನು ಹನುಮನ ದೊಣೆಯೆಂದು ಕರೆದಿರುವುದು ಇಲ್ಲಿನ ಶಾಸನದಿಂದ ತಿಳಿಯುತ್ತದೆ.[೫೦] ಆದರೆ ಈ ದೊಣೆಯನ್ನು ಇಲ್ಲಿನ ಜನರು ಭೀಮನ ದೊಣೆಯೆಂದು ಕರೆಯುತ್ತಾರೆ. ಕಡೆಗಾಪುವಿನ ಪಶ್ಚಿಮ ದಿಕ್ಕಿನಲ್ಲಿ ಒಂದು ದೊಣೆಯಿದೆ. ಇದಕ್ಕೆ ನವಿಲು ದೊಣೆಯೆಂದು ಕರೆಯುತ್ತಾರೆ. ಈ ದೋಣೆಗಳು ಬೆಟ್ಟದ ಕುಂಭಿಯಲ್ಲಿ ವಾಸಿಸುವ ಜನರಿಗೆ ನೀರನ್ನು ಒದಗಿಸಲು ಸಹಕಾರಿಯಾಗಿದ್ದವು.

ಕೋಟೆಯ ಮಹತ್ವ

ತುಮಕೂರು ಜಿಲ್ಲೆಯ ಪ್ರಬಲವಾದ ಗಿರಿದುರ್ಗಗಳಲ್ಲಿ ಮಧುಗಿರಿ ದುರ್ಗವು ಒಂದು. ಇಲ್ಲಿನ ಬೆಟ್ಟವು ಬೃಹತ್ತಾದ ಏಕಶಿಲೆಯಿಂದ ಕೂಡಿದ್ದು ಆ ಹಿನ್ನೆಲೆಯಲ್ಲಿ ಅಲ್ಲಿನ ಕೋಟೆಯನ್ನು ಬೇಗ ವಶಪಡಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಮಧುಗಿರಿ ಕೋಟೆಯು ಎರಡು ಬಾರಿ ದುರಸ್ತಿಗೊಂಡಿರುವುದರಿಂದ ಅತ್ಯಂತ ಭದ್ರವಾದ ಮತ್ತು ಅಭೇದ್ಯವಾದ ಕೋಟೆ ಆಗಿತ್ತು. ಚಿಕ್ಕದೇವರಾಜ ಒಡೆಯರು ಮಧುಗಿರಿಯನ್ನು ವಶಪಡಿಸಿಕೊಳ್ಳಲು ಕಳಲೆಯ ದಳವಾಯಿ ದೇವರಾಜಯ್ಯನನ್ನು ಕಳುಹಿಸುತ್ತಾರೆ. ಆದರೆ ಇವರಿಗೆ ಕೋಟೆಯು ಮಣಿಯುವುದಿಲ್ಲ.[೫೧] ವಶವಾದ ನಂತರ ಚಿಕ್ಕದೇವರಾಜರು ಇಲ್ಲಿನ ಕೋಟೆಯನ್ನು ದುರಸ್ತಿ ಮಾಡಿದರು. ಇದಾದ ನಂತರ ಟಿಪ್ಪುವಿನ ಮುಖಂಡತ್ವದಲ್ಲಿ ಬಂದ ದೊಡ್ಡ ಸೈನ್ಯವು ಕ್ರಿ.ಶ.೧೭೭೪ರಲ್ಲಿ ಮಧುಗಿರಿಯನ್ನು ವಶಪಡಿಸಿಕೊಂಡಿತು. ಈ ಸಂದರ್ಭದಲ್ಲಿ ಮಧುಗಿರಿ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕೆ ಸುಮಾರು ತಿಂಗಳುಗಳ ಕಾಲ ಹೋರಾಟ ನಡೆದಿತ್ತು.[೫೨] ಇಂತಹ ಅಭೇಧ್ಯವಾದ ಕೋಟೆಯಲ್ಲಿ ರಕ್ಷಣೆಯು ಹೆಚ್ಚಿನದಾಗಿ ದೊರೆಯುತ್ತಿತ್ತು. ಈ ಹಿನ್ನೆಲೆಯಲ್ಲಿ ಕ್ರಿ.ಶ.೧೭೬೩ರಲ್ಲಿ ಹೈದರಾಲಿಯು ಬಿದನೂರಿನ ವೀರಮ್ಮಾಜಿ ನಂಜಯ್ಯ ಮತ್ತು ವೇಷಧಾರಿ ಚನ್ನಬಸಪ್ಪ ಇವರನ್ನು ಸೆರೆಹಿಡಿದು ಈ ಕೋಟೆಯಲ್ಲಿ ಬಂಧಿಸಲಾಗಿತ್ತು.[೫೩] ಜೊತೆಗೆ ಪಾವಗಡದ ಪಾಳೇಗಾರ ತಿಮ್ಮಪ್ಪ ನಾಯಕನನ್ನು ಸಹ ಇಲ್ಲಿ ಬಂಧಿಸಲಾಗಿತ್ತು.[೫೪] ಇದರಿಂದ ಕೋಟೆಯಲ್ಲಿದ್ದ ವ್ಯಕ್ತಿ, ವಸ್ತುಗಳಿಗೆ ಸದಾ ರಕ್ಷಣೆ ದೊರೆಯುತ್ತಿತ್ತೆಂದು ಭಾವಿಸಬಹುದು. ಒಟ್ಟಿನಲ್ಲಿ ಮಧುಗಿರಿಯ ಬೆಟ್ಟದಲ್ಲಿ ನಿರ್ಮಿಸಿರುವ ಕೋಟೆ ಮಣ್ಣು ಮತ್ತು ಕಲ್ಲಿನಿಂದ ಪ್ರಾರಂಭದಲ್ಲಿ ಇದ್ದು, ನಂತರ ಎರಡು ಬಾರಿ ಜೀರ್ಣೋದ್ಧಾರವಾಗಿದೆ. ಹೈದರ್ ಕಾಲದಲ್ಲಿ ಬೆಟ್ಟದ ಆಯಾಕಟ್ಟಿನ ಜಾಗದಲ್ಲಿ ಕೋಟೆ, ಕೊತ್ತಲಗಳನ್ನು ಮತ್ತೆ ವಿಸ್ತರಿಸಿ ಇಟ್ಟಿಗೆ, ಗಾರೆಯಿಂದ ಕೈಪಿಡಿ ಗೋಡೆ ನಿರ್ಮಿಸಿ, ಬಂದೂಕು, ಫಿರಂಗಿಗಳಿಗೆ ಕಿಂಡಿಗಳನ್ನು ಬಿಟ್ಟು ಮತ್ತಷ್ಟು ಭದ್ರಪಡಿಸಲಾಗಿದೆ. ಚನ್ನಬಸಪ್ಪ ಎಸ್.ಪಾಟೀಲರು "ಇದೊಂದು ಅತ್ಯುತ್ತಮವಾದ ಅಭೇಧ್ಯ ಕೋಟೆ" ಎಂದಿರುವುದು ಅತಿಶಯೋಕ್ತಿಯೇನಲ್ಲ.[೫೫]

ಕೋಟೆಯೊಳಗಿರುವ ಸ್ಮಾರಕಗಳು

ಇಲ್ಲಿ ವೆಂಕಟರಮಣಸ್ವಾಮಿ ದೇವಾಲಯ, ಮಲ್ಲೇಶ್ವರ ದೇವಾಲಯ, ಮಲ್ಲಿನಾಥ ಬಸದಿ, ಕೋದಂಡರಾಮ ದೇವಾಲಯ, ಬೆಟ್ಟದ ತುದಿಯ ಗೋಪಾಲ ಕೃಷ್ಣ ದೇವಾಲಯ, ಆಂಜನೇಯ ದೇವಾಲಯ, ದೊಣೆಗಳು, ಕಣಜಗಳು, ಅರಮನೆ ಹಾಗೂ ಇನ್ನಿತರ ಕಟ್ಟಡಗಳು ಸ್ಮಾರಕಗಳಾಗಿವೆ.

ವೆಂಕಟರಮಣಸ್ವಾಮಿ ದೇವಾಲಯ : ಈ ದೇವಾಲಯವು ಊರಿನ ಮಧ್ಯಭಾಗದಲ್ಲಿದೆ. ಸಪ್ಪೇಗೌಡರು ಈ ದೇವಾಲಯವನ್ನು ನಿರ್ಮಿಸಿ, ವಿಗ್ರಹಮೂರ್ತಿಯನ್ನು ಮಡಕಶಿರಾ ಕೆರೆಯಿಂದ ತಂದು ಪ್ರತಿಷ್ಠಾಪಿಸುತ್ತಾರೆ.[೫೬] ನಂತರ ಮೈಸೂರು ಚಿಕ್ಕದೇವರಾಯ ಒಡೆಯರ ಅಪ್ಪಣೆಯ ಮೇರೆಗೆ ದಳವಾಯಿ ಮಲ್ಲರಸಯ್ಯ ಮತ್ತು ತಿಮ್ಮರಸಯ್ಯನವರು ದೇವಸ್ಥಾನದ ಹೊರ ಪ್ರಾಕಾರ ಮತ್ತು ಮಹಾದ್ವಾರ, ಅದರ ಮೇಲೆ ಗೋಪುರವನ್ನು ನಿರ್ಮಿಸಿದರು.[೫೭] ಈ ಗೋಪುರವು ದ್ರಾವಿಡ ಶೈಲಿಯಲ್ಲಿದೆ. ಗರ್ಭಗುಡಿಯನ್ನು ಜಗತಿಯ ಮೇಲೆ ನಿರ್ಮಾಣ ಮಾಡಿದ್ದು, ಅದರ ಮಧ್ಯೆ ಮೃದು ಕಪ್ಪುಶಿಲೆಯ ಆರು ಅಡಿಗಳ ಎತ್ತರದ ವೆಂಕಟರಮಣಮೂರ್ತಿಯನ್ನು ಪ್ರತಿಷ್ಠಾಪಿಸಿಲಾಗಿದೆ. ಇಲ್ಲಿನ ಬೋಧಿಗೆಗಳಿಗೆ ದೇವರ ಶಿಲ್ಪಗಳನ್ನು ಕೆತ್ತಲಾಗಿದೆ. ದೇಗುಲದ ಒಳಪ್ರಾಕಾರದ ಗೋಡೆಯಲ್ಲಿ ವಾದ್ಯಗೋಷ್ಠಿ, ಕೋಳಿಪಂದ್ಯ ಮತ್ತು ಒಂಟೆಗಳಿರುವ ಚಿತ್ರದ ಕೆತ್ತನೆಗಳಿವೆ. ದೇವರ ಬಲಭಾಗಕ್ಕೆ ಪದ್ಮಾವತಿ ಮೂರ್ತಿಯ ಗುಡಿ, ಎಡಕ್ಕೆ ಅಲವೇಲು ಮಂಗಮ್ಮನ ಮೂರ್ತಿಯ ಗುಡಿಗಳಿವೆ. ಇಲ್ಲಿನ ಬಾಗಿಲನ್ನು ಕೋಟೆಯ ಹೆಬ್ಬಾಗಿಲಿನ ರೀತಿಯಲ್ಲಿ ಇಡಲಾಗಿದೆ. ಇದರ ಪ್ರವೇಶ ದ್ವಾರದಲ್ಲಿ ಎಡಕ್ಕೆ ಆಂಜನೇಯ, ಬಲಕ್ಕೆ ಗರುಡರಿರುವ ಚಿತ್ರವನ್ನು ಕೆತ್ತಲಾಗಿದೆ.

ಮಲ್ಲೇಶ್ವರ ದೇವಾಲಯ : ವೆಂಕಟರಮಣಸ್ವಾಮಿ ದೇವಾಲಯದ ಬಲಭಾಗಕ್ಕೆ ಪೂರ್ವಾಭಿಮುಖವಾಗಿ ಹೊಂದಿಕೊಂಡಿದೆ. ಇಲ್ಲಿರುವ ಉದ್ಭವ ಲಿಂಗಕ್ಕೆ ಸಪ್ಪೇಗೌಡರು ದೇವಾಲಯವನ್ನು ಸ್ಥಾಪಿಸಿದರು. ಇದಕ್ಕೆ ಕಟ್ಟಿರುವ ಗೋಪುರ, ಹೊರ ಪ್ರಾಕಾರವು ವೆಂಕಟರಮಣ ಸ್ವಾಮಿಗೆ ನಿರ್ಮಿಸುವಾಗಲೇ ಆಯಿತು. ಮಲ್ಲೇಶ್ವರನ ಪಕ್ಕದಲ್ಲಿ ಪಾರ್ವತಿದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ತೆರೆದ ಮಂಟಪದಲ್ಲಿ ದೊಡ್ಡ ದೊಡ್ಡ ಕಂಬಗಳಿವೆ. ಇಲ್ಲಿಯೇ ಬಸವೇಶ್ವರ, ಗಣಪತಿ, ದ್ವಾರಪಾಲಕರ ವಿಗ್ರಹಗಳಿವೆ. ಅಲ್ಲದೆ ದೇವಾಲಯದ ಪ್ರಾಕಾರದಲ್ಲಿ ಶಿವ, ಪಾರ್ವತಿಯರ ಶಿಲಾವಿಗ್ರಹಗಳನ್ನು ಇಡಲಾಗಿದೆ. ದೇವಾಲಯದ ಎದುರಿಗೆ ಸುಮಾರು ೨೦ ಅಡಿ ಎತ್ತರದ ದೀಪದ ಸ್ತಂಭವಿದೆ. ಇದರ ಮೇಲೆ ಕಾರ್ತೀಕ ಮಾಸದಲ್ಲಿ ದೀಪವನ್ನು ಇಟ್ಟು ಬೆಳಗಿಸಲಾಗುತ್ತದೆ.

ಚನ್ನರಾಯನ ದುರ್ಗದ ಕೋಟೆ

ಚನ್ನರಾಯನ ದುರ್ಗ ಕೊರಟಗೆರೆ ತಾಲ್ಲೂಕಿನಲ್ಲಿದೆ. ಇದು ಮಧುಗಿರಿ ಮತ್ತು ಕೊರಟಗೆರೆಯ ಮಧ್ಯಭಾಗದಲ್ಲಿದ್ದು, ಮಧುಗಿರಿಯಿಂದ ದಕ್ಷಿಣಕ್ಕೆ ೮.ಕಿ.ಮೀ ದೂರದಲ್ಲಿದೆ. ಈ ದುರ್ಗವು ಸಮುದ್ರ

ಮಟ್ಟದಿಂದ ೩೭೪೪ ಅಡಿ ಎತ್ತರದಲ್ಲಿದೆ. ನೈಸರ್ಗಿಕವಾಗಿರುವ ಈ ಬೆಟ್ಟಕ್ಕೆ ಮಧುಗಿರಿಯ ಮಹಾನಾಡ ಪ್ರಭುಗಳಾದ ಇಮ್ಮಡಿ ಚಿಕ್ಕಪ್ಪಗೌಡರು ತನ್ನ ಮಗ ಚನ್ನರಾಯನ ಅಕಾಲಿಕ ಮರಣದ ಸ್ಮರಣೆಗಾಗಿ ಕೋಟೆಕೊತ್ತಲ ನಿರ್ಮಿಸಿ, ಗ್ರಾಮವನ್ನು ಸ್ಥಾಪಿಸಿ ಚನ್ನರಾಯನ ದುರ್ಗವೆಂದು ನಾಮಕರಣ ಮಾಡುತ್ತಾರೆ.

ಮಧುಗಿಯ ಮಹಾನಾಡ ಪ್ರಭುಗಳಾದ ಇಮ್ಮಡಿ ಚಿಕ್ಕಪ್ಪಗೌಡರು ಮಧುಗಿರಿ ಕೋಟೆಯನ್ನು ನಿರ್ಮಿಸಿದ ನಂತರ ಕ್ರಿ.ಶ.೧೬೧೩ರಲ್ಲಿ ಚನ್ನರಾಯನ ದುರ್ಗದಲ್ಲಿ ಕೋಟೆಕೊತ್ತಲ ನಿರ್ಮಿಸಿದರು.[೫೮] (ಮಧುಗಿರಿ ಚರಿತ್ರೆ, ನಾರಾ, ಪು-೨೨) ಇದಾದ ಕೆಲವು ವರ್ಷಗಳಲ್ಲಿ ಗೌಡರು ಹರವೆ ಕಾಳಗದಲ್ಲಿ ಹಾವಳಿ ಭೈರೇಂದ್ರನ ಮೇಲೆ ಯುದ್ಧ ಮಾಡಬೇಕಾಗುತ್ತದೆ. ಈ ಯುದ್ಧದಲ್ಲಿ ಗೌಡರು ತನ್ನ ಮೊದಲ ಮಗನನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಗೌಡರು ಕೊರಗಿ ಸಾವನ್ನಪ್ಪುತ್ತಾರೆ. ಇದರಿಂದ ಆತನ ಮಡದಿಯರು ಸಹಾ ಮಹಾಸತಿಯರಾದರು.[೫೯]

ಇಮ್ಮಡಿ ಚಿಕ್ಕಪ್ಪಗೌಡರ ಮೂರನೇ ಮಗನಾದ ಸಪ್ಪೇಂದ್ರನು ಮುಮ್ಮಡಿ ಚಿಕ್ಕಪ್ಪಗೌಡ ಎಂಬ ಬಿರುದಿನಿಂದ ಆಳ್ವಿಕೆ ಮಾಡುತ್ತಾನೆ. ಈತನು ಬಿಜ್ಜಾವರದಿಂದ ಮಧುಗಿರಿಗೆ ರಾಜಧಾನಿ ಬದಲಾಯಿಸುತ್ತಾನೆ. ಈತನ ಕಾಲವು ಸುಭಿಕ್ಷೆಯಿಂದ ಕೂಡಿದ್ದಾಗಿತ್ತು. ಈತನ ಮಕ್ಕಳಲ್ಲಿ ಸಪ್ಪೇಗೌಡರು ಮಧುಗಿರಿಯನ್ನು ಹಿರೇಚಿಕ್ಕಪ್ಪಗೌಡರು ಚನ್ನರಾಯನದುರ್ಗವನ್ನು, ಕಾಳಚಿಕ್ಕಪ್ಪಗೌಡರು ಮಿಡಿಗೇಶಿಯನ್ನು ವಹಿಸಿಕೊಳ್ಳುತ್ತಾರೆ. ಇವರಲ್ಲಿ ಕಾಳಚಿಕ್ಕಪ್ಪಗೌಡರು ಬುದ್ಧಿವಂತರಾದ್ದರಿಂದ ಎಲ್ಲಾ ಕೋಟೆಗಳನ್ನು ಇವರೊಬ್ಬರೆ ನಿಭಾಯಿಸುತ್ತಾರೆ. ಈತನು ಮುಪ್ಪಿನ ಕಾಲದಲ್ಲಿ ತನ್ನ ಮಕ್ಕಳಿಗೆ ಮಧುಗಿರಿಯನ್ನು, ರಾಮಪ್ಪಗೌಡರಿಗೆ, ಚನ್ನರಾಯನ ದುರ್ಗವನ್ನು ತಿಮ್ಮಪ್ಪಗೌಡರಿಗೆ ವಿಭಾಗಿಸಿಕೊಡುತ್ತಾರೆ.[೬೦]

ಕಾಳಚಿಕ್ಕಪ್ಪಗೌಡರು ಹಂಚಿಕೊಟ್ಟ ಹಂಚಿಕೆ ಸರಿಯಿಲ್ಲವೆಂದು ತಿಮ್ಮಪ್ಪಗೌಡರು ಮೈಸೂರು ಚಿಕ್ಕದೇವರಾಯ ಒಡೆಯರಲ್ಲಿ ಮೊರೆಯಿಟ್ಟಾಗ, ಇಬ್ಬರ ಕುಟುಂಬಗಳನ್ನು ಬಂಧಿಸಿ, ಶ್ರೀರಂಗಪಟ್ಟಣದಲ್ಲಿ ಸೆರೆಗೆ ಹಾಕುತ್ತಾನೆ. ಆಗ ಒಡೆಯರು ಚನ್ನರಾಯನ ದುರ್ಗಕ್ಕೆ ದಂಡನಾಯಕರಾದ ಕೋಮಾರಯ್ಯ ಹಾಗೂ ದೊಡ್ಡ ಅರಸರನ್ನು ನೇಮಕ ಮಾಡುತ್ತಾರೆ. ನಂತರ ಈ ದುರ್ಗಕ್ಕೆ 'ಪ್ರಸನ್ನಗಿರಿ'ಯೆಂದು ಹೆಸರನ್ನಿಟ್ಟು ಆಳ್ವಿಕೆ ಮಾಡುತ್ತಾರೆ.[೬೧] ಹೈದರ್‌ನ ಕಾಲಕ್ಕೆ ಈ ಕೋಟೆಯು ದುರಸ್ತಿಗೊಂಡು ಈ ಜಿಲ್ಲೆಯ ಅಬೇಧ್ಯಕೋಟೆಯೆನಿಸಿ ಕೊಳ್ಳುತ್ತದೆ.[೬೨] ಈ ಹೊತ್ತಿಗೆ ಮರಾಠರು ಮೈಸೂರು ಸಂಸ್ಥಾನವನ್ನು ಮುತ್ತಿಗೆ ಹಾಕುತ್ತಾರೆ. ಈ ಸಂಬಂಧದಲ್ಲಿ ಒಪ್ಪಂದ ಮಾಡಿಕೊಂಡು, ಕೆಲವು ಪ್ರದೇಶಗಳನ್ನು ಪಡೆಯುತ್ತಾರೆ. ಅದರಲ್ಲಿ ಚನ್ನರಾಯನ ದುರ್ಗವು ಒಂದಾಗಿತ್ತು. ಮರಾಠರು ಚನ್ನರಾಯನ ದುರ್ಗಕ್ಕೆ ಗಣೇಶರಾವ್ ನಾರಾಯಣರನ್ನು ಮೇಲ್ವಿಚಾರಕರನ್ನಾಗಿ ಮಾಧವರಾಯನು ನೇಮಕ ಮಾಡಿದನು.[೬೩] ಅನಂತರ ಮರಾಠರನ್ನು ಟಿಪ್ಪುವು ಕ್ರಿ.ಶ.೧೭೭೪ರಲ್ಲಿ ವೀರಾವೇಷದಿಂದ ಸುಮಾರು ತಿಂಗಳುಗಳ ಕಾಲ ಹೋರಾಡಿ ಚನ್ನರಾಯನ ದುರ್ಗವನ್ನು ಪುನಃ ಪಡೆದನು.[೬೪]

ಕ್ರಿ.ಶ.೧೭೯೯ರವರೆಗೆ ಚನ್ನರಾಯನ ದುರ್ಗವು ಟಿಪ್ಪುವಿನ ಹಿಡಿತದಲ್ಲೇ ಇದ್ದು ನಾಲ್ಕನೇ ಮೈಸೂರು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಮಹಾನಾಡ ಪ್ರಭುಗಳಾದ ಚನ್ನಪ್ಪಗೌಡರು ಯುದ್ಧದಲ್ಲಿ ಭಾಗವಹಿಸುತ್ತಾರೆ. ಟಿಪ್ಪುವಿಗೆ ಸೋಲುಂಟಾಯಿತು. ಇದರಿಂದ ಮಹಾನಾಡು ಸಂಸ್ಥಾನಕ್ಕೆ ಈ ಪ್ರದೇಶಗಳು ವಾಪಸ್ಸು ಬರಬಹುದೆಂದು ಆಸೆಯಿದ್ದ ಚನ್ನಪ್ಪಗೌಡರಿಗೆ ಬ್ರಿಟಿಷರು ನಿರಾಸೆಗೊಳಿಸಿದರು. ಇದರಿಂದ ಈತನು ದೇಶಾಂತರ ಹೋದನು. ಕೊನೆಗೆ ಈ ಪ್ರದೇಶವನ್ನು ಬ್ರಿಟಿಷರು ಮೈಸೂರು ಒಡೆಯರಿಗೆ ವಹಿಸಿಕೊಟ್ಟರು. ಚನ್ನರಾಯನ ದುರ್ಗವು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು.

ಚನ್ನರಾಯನ ದುರ್ಗವು ದುರ್ಗಮ ಪ್ರದೇಶವಾದ್ದರಿಂದ ಸೈನಿಕ ಠಾಣ್ಯ ಹೂಡಲು ಪ್ರಾಶಸ್ತ್ಯವಾದ ಸ್ಥಳವಾಗಿತ್ತು. ಆದುದರಿಂದ ಇಮ್ಮಡಿ ಚಿಕ್ಕಪ್ಪಗೌಡರು ಮಗನ ಸ್ಮರಣೆಯ ದೃಷ್ಟಿಯಿಂದ ಇಲ್ಲಿ ಕೋಟೆ ನಿರ್ಮಾಣ ಮಾಡಿರಬಹುದು. ಇದು ಹಲವಾರು ಬಾರಿ ಆಕ್ರಮಣಕ್ಕೊಳಗಾದರೂ ಹೈದರ್-ಟಿಪ್ಪುವಿನ ಕಾಲದಲ್ಲಿ ಪುನರ್ ನಿರ್ಮಾಣವಾಗಿರುವುದರಿಂದ ಕೋಟೆ ಈಗಲೂ ಅಭೇದ್ಯವಾಗಿರುವುದನ್ನು ಕಾಣಬಹುದು.

ಚನ್ನರಾಯನ ದುರ್ಗದ ಕೋಟೆಯ ಲಕ್ಷಣಗಳು

ತುಮಕೂರು ಜಿಲ್ಲೆಯ ಗಿರಿ ದುರ್ಗಗಳಲ್ಲಿ ಚನ್ನರಾಯನ ದುರ್ಗವು ಸುಸಜ್ಜಿತವಾದ ರಕ್ಷಣೆಯನ್ನು ಒದಗಿಸುವ ಕೋಟೆಯಾಗಿದೆ. ಇಲ್ಲಿನ ಕೋಟೆಯನ್ನು ಮಧ್ಯಮ ಗಾತ್ರದ ಕಲ್ಲುಗಳಿಂದ ನಿರ್ಮಿಸಿ ಸಂಧಿಗೆ ಗಾರೆಯ ಲೇಪನ ಮಾಡಿದೆ. ಇದರಿಂದ ಕೋಟೆಯು ಅಭೇಧ್ಯವಾಗಿದ್ದು, ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಚೌಕಾಕಾರ ಮತ್ತು ವರ್ತುಲಾಕಾರದ ಎತ್ತರವಾದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೋಟೆಯಲ್ಲಿ ಕೈಪಿಡಿ ಗೋಡೆಯನ್ನು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಿದ್ದು, ಅದರಲ್ಲಿ ತೋಪು ಕಿಂಡಿಗಳು, ಬಂದೂಕು ಕಿಂಡಿಗಳನ್ನು ಬಿಡಲಾಗಿದೆ. ಕೊತ್ತಲಗಳಲ್ಲದೆ ಕೋಟೆಯ ಗೋಡೆಯ ಮೇಲೆ ಸೈನಿಕರು ಪಹರೆ ಮಾಡಲು ಸೂಕ್ತವಾದ ಸ್ಥಳವನ್ನು ಬಿಡಲಾಗಿದೆ.

ಬೆಟ್ಟದ ದಕ್ಷಿಣಕ್ಕೆ ನೆಲಮಟ್ಟದಲ್ಲಿ ಊರಿದೆ. ಊರಿನ ಸುತ್ತಲೂ ಚಿಕ್ಕ ಕಲ್ಲುಗಳಿಂದ ನಿರ್ಮಿಸಿರುವ ಕೋಟೆಯಿದೆ. ಈ ಕೋಟೆಗೆ ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಬಾಗಿಲುಗಳಿದ್ದು, ಅವು ಬಿದ್ದು ಹೋಗಿವೆ. ಊರ ಉತ್ತರಕ್ಕಿರುವ ಬೆಟ್ಟದ ಮೇಲೆ ಬಲವಾದ ಕೋಟೆಯಿದೆ. ಈ ಕೋಟೆಯ ಬಾಗಿಲು ಬಿದ್ದು ಹೋಗಿದೆ. ಊರಿನ ಪಶ್ಚಿಮ ದಿಕ್ಕಿನ ಕೋಟೆಯು ಬೆಟ್ಟದ ಕಡಿದಾದ ಸ್ಥಳದವರೆಗೆ ಹೋಗುತ್ತದೆ. ಪೂರ್ವದಿಕ್ಕಿನಲ್ಲಿ ಬೆಟ್ಟವು ಕಡಿದಾಗಿರುವುದರಿಂದ ಅಲ್ಲಿ ಕೋಟೆಯನ್ನು ನಿರ್ಮಿಸಿಲ್ಲ. ಕಡಿದಾದ ಜಾಗದಿಂದ ಸಾಗುವಾಗ ಹುಣುಸೆ ದೊಣೆ ಸಿಗುತ್ತದೆ. ಇಲ್ಲಿಂದ ಮುಂದೆ ಸಾಗಿದಾಗ ಬೆಟ್ಟದ ಮೇಲಿನ ಮೊದಲನೆ ಕೋಟೆ ನಾಲ್ಕು ದಿಕ್ಕುಗಳಲ್ಲಿ ಸುತ್ತುವರಿದಿದೆ. ಇದಕ್ಕೆ ಇರುವ ಎರಡು ಬಾಗಿಲುಗಳಲ್ಲಿ ದಕ್ಷಿಣಕ್ಕಿರುವುದು ಊರುಬಾಗಿಲು ಮತ್ತು ಉತ್ತರಕ್ಕೆ ಇರುವುದು ಮಧುಗಿರಿ ಬಾಗಿಲು. ಮಧುಗಿರಿಯ

ಮಹಾನಾಡ ಪ್ರಭುಗಳು ಇಲ್ಲಿನ ಕೋಟೆಯನ್ನು ನಿರ್ಮಿಸಿರುವುದರಿಂದ ಮಧುಗಿರಿ ದಿಕ್ಕಿಗೆ ಸಂಪರ್ಕವನ್ನು ಉಳಿಸಿಕೊಳ್ಳುವುದಕ್ಕೆ ಈ ಬಾಗಿಲನ್ನು ಇಡಲಾಗಿದೆ. ಈ ದಿಕ್ಕಿನಿಂದ ಬೆಟ್ಟವನ್ನು ಮೇಲೇರಲು ಮೆಟ್ಟಿಲಿನ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ದಕ್ಷಿಣದಿಕ್ಕಿನ ಕೋಟೆಯ ಬಾಗಿಲ ಬಳಿ ಎರಡು ಶಾಸನಗಳಿವೆ. ಅವು "ಕ್ರಿ.ಶ.೧೭೬೭ರಲ್ಲಿ ಈ ಕೋಟೆಯು ಮರಾಠರ ವಶದಲ್ಲಿದ್ದಾಗ ಬರೆದ ಈ ಶಾಸನಗಳಲ್ಲಿ ಮಾಧವರಾವ್ ಬಲ್ಲಾಳ ಪ್ರಧಾನ, ಶ್ರೀಮಂತ ಪ್ರಧಾನ ಧರಣೀ ತತ್ವಪರರಾವ್ ಮತ್ತು ಶಿವತ್ತರಾವ್ ಹವಲ್ದಾರ್ ರ ಉಲ್ಲೇಖವಿದೆ." [೬೫] ಇದೇ ಬಾಗಿಲ ಪೂರ್ವಕ್ಕೆ ತೋಪು ಗುಂಡುಗಳ ಏಟು ಬಿದ್ದ ಅನೇಕ ಗುರುತುಗಳಿವೆ. ಆ ಜಾಗದಲ್ಲಿ ಕಲ್ಲುಗಳು ಗಾಜಿನ ಹಾಗೆ ಸೀಳಿವೆ. ಇಲ್ಲಿನ ಬಾಗಿಲನ್ನು ದೂರದಿಂದ ನೋಡಿದಾಗ ಅದು ಗೋಚರವಾಗದೆ ಅದೊಂದು ದೊಡ್ಡ ಕೊತ್ತಲದಂತೆ ಕಾಣುತ್ತದೆ. ಇದಕ್ಕೆ ಕಾರಣ ಬಾಗಿಲು ಎದುರುಗಿರದೆ ಪಕ್ಕದಲ್ಲಿರುವುದು. ಈ ಬಾಗಿಲಲ್ಲಿ ಹೊರ ಮತ್ತು ಒಳಬಾಗಿಲುಗಳಿದ್ದು, ಇದರ ಮಧ್ಯದಲ್ಲಿ ಡೊಂಕಾದ ಪ್ರವೇಶ ಮಾರ್ಗವಿದೆ. ಈ ಬಾಗಿಲು ಪಶ್ಚಿಮಾಭಿಮುಖವಾಗಿ ತೆರೆದುಕೊಂಡಿದ್ದು, ಈ ಬಾಗಿಲ ಮೂಲಕ ಪ್ರವೇಶಿಸಿ ಪೂರ್ವ, ಉತ್ತರ, ಪಶ್ಚಿಮ, ಪುನಃ ಉತ್ತರಕ್ಕೆ ಸಾಗಿ ಕೋಟೆಯೊಳಗೆ ಪ್ರವೇಶಿಸಬೇಕು. ಶತ್ರುಗಳು ಈ ಡೊಂಕಾದ ರಸ್ತೆಯಲ್ಲಿ ಚಲಿಸುವಾಗ ಕೋಟೆಯ ಮೇಲೆ ನಿಂತ ರಕ್ಷಕ ಯೋಧರಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಇಲ್ಲಿನ ಮಂಟಪದ ಗೋಡೆಯ ಮೇಲೆ ಗಣೇಶನ ಮತ್ತು ಆಂಜನೇಯನ ಶಿಲ್ಪವಿದೆ. ಇನ್ನೊಂದು ಗೋಡೆಯ ಮೇಲೆ ನಂದಿಯ ಶಿಲ್ಪವಿದೆ. ಹೊರ ಬಾಗಿಲ ಮೇಲೆ ಹೂವಿನ ಮತ್ತು ಬಾಗಿಲ ಹೊರಗೆ ಕೋಟೆಯ ಮೇಲೆ ನಾಗರಹಾವಿನ ಶಿಲ್ಪವನ್ನು ಬಿಡಿಸಲಾಗಿದೆ. ಒಳಬಾಗಿಲ ಪಕ್ಕದಲ್ಲಿ ದಿಡ್ಡಿ(ಉಪ) ಬಾಗಿಲನ್ನು ಬಿಡಲಾಗಿದೆ. ಇದರ ಮೇಲೆ ಮಂಡಿಯೂರಿ ಕಹಳೆ ಊದುತ್ತಿರುವ ಮನುಷ್ಯನ ದೊಡ್ಡ ಉಬ್ಬುಶಿಲ್ಪವಿದೆ. ದಕ್ಷಿಣ ದಿಕ್ಕಿನಿಂದ ಮುಂದೆ ಸಾಗಿದರೆ ಒಂದು ದೊಡ್ಡ ದೋಣೆಯಿದೆ. ಇಷ್ಟೊಂದು ದೊಡ್ಡ ದೋಣೆ ಬೇರೆ ಯಾವ ಕೋಟೆಯಲ್ಲೂ ಕಂಡುಬರುವುದಿಲ್ಲ. ನೈಸರ್ಗಿಕವಾಗಿರುವ ಎರಡು ಬಂಡೆಗಳ ಮಧ್ಯದ ಜಾಗಕ್ಕೆ ದಕ್ಷಿಣ ದಿಕ್ಕಿನಲ್ಲಿ ಇಟ್ಟಿಗೆ, ಗಾರೆಯಿಂದ ನಿರ್ಮಿಸಿದ ತಡೆ ಗೋಡೆಯಿದೆ. ಇದರಿಂದ ನೀರು ಎಲ್ಲಿಯೂ ಸೋರುವುದಿಲ್ಲ. ಈ ದೋಣೆಯು ಇಂದಿನವರೆಗೆ ಬತ್ತಿ ಹೋಗಿರುವುದನ್ನು ನಾವು ಕಂಡಿರುವುದಿಲ್ಲವೆಂದು ಇಲ್ಲಿನ ಜನರು ಹೇಳುತ್ತಾರೆ. ಈ ದೋಣೆಯ ಪಶ್ಚಿಮದ ಕಡೆಯ ಬಂಡೆಯ ಮೇಲೆ ಜಗತಿಯನ್ನು ಕಟ್ಟಿ, ಅದರೊಳಗೆ ಈಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಇದರ ಹಿಂದೆಯೇ ವರ್ತುಲಾಕಾರದ ಕಣಜವಿದೆ. ಇದರಲ್ಲಿ ಈಗಲೂ ಉಪ್ಪಿನ ಉಂಡೆಗಳಿವೆ. ಈ ಹಿನ್ನೆಲೆಯಲ್ಲಿ ಈ ಕಣಜವನ್ನು ಉಪ್ಪಿನ ಕಣಜವೆಂದು ಕರೆಯುತ್ತಾರೆ. ಇಲ್ಲಿಯೇ ಮಸುರೆ ದೋಣೆಯಿದೆ. ಇದು ಚಿಕ್ಕದಾಗಿದ್ದು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದೆ. ಇಲ್ಲಿಂದ ಸ್ವಲ್ಪ ನೈರುತ್ಯ ದಿಕ್ಕಿಗೆ ನಡೆದರೆ ಚನ್ನಿಗರಾಯನ ದೇವಾಲಯವಿದೆ. ಇಲ್ಲಿರುವ ಶಿಲಾಮೂರ್ತಿಗಳು ಮುರಿದು ಬಿದ್ದಿವೆ. ಇಲ್ಲಿನ ಕಂಬಗಳಲ್ಲಿ ಸೂಕ್ಷ್ಮ ಕೆತ್ತನೆಯನ್ನು ಬಿಡಿಸಲಾಗಿದೆ. ಇದರ ಉತ್ತರ ಭಾಗದಲ್ಲಿ ಒಂದು ಮಂಟಪವಿದೆ.

ಎರಡನೇ ಕೋಟೆಯ ರಚನೆಯು ಮೊದಲ ಕೋಟೆಯ ರೀತಿಯೇ ಇದ್ದು, ಇದರಲ್ಲಿ ಚೌಕಾಕಾರದ ಮತ್ತು ವರ್ತುಲಾಕಾರದ ಕೊತ್ತಲಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ಕಲ್ಲುಕಂಬ ಮತ್ತು ತೊಲೆಗಳಿಂದ ನಿರ್ಮಿಸಿದ ಭದ್ರವಾದ ದೊಡ್ಡ ಕಣಜಗಳಿವೆ. ಈಗಲೂ ಸುಸ್ಥಿತಿಯಲ್ಲಿವೆ. ಈ ಕೋಟೆಯೊಳಗೆ ಸಭಾಂಗಣ ಮತ್ತು ಇತರ ಅನೇಕ ವಸತಿಗೃಹಗಳ ಅವಶೇಷಗಳು ಕಂಡುಬರುತ್ತವೆ.

ಕೊನೆಯದಾದ ಕೋಟೆ ಬೆಟ್ಟದ ತುದಿಯಲ್ಲಿದೆ. ಇಲ್ಲಿಗೆ ಸಾಗುವಾಗ ಉತ್ತರ ದಿಕ್ಕಿಗೆ ಒಂದು ಚಿಕ್ಕ ಪ್ರದೇಶವನ್ನು ಆವರಿಸಿರುವ ಕೋಟೆಯ ಸುತ್ತು ಇದೆ. ಇದಕ್ಕೆ ಎರಡು ಬಾಗಿಲುಗಳಿವೆ. ಈ ಪ್ರದೇಶದಲ್ಲಿ ಹಾಳಾಗಿರುವ ವಸತಿ ಗೃಹಗಳನ್ನು ಕಾಣಬಹುದು. ಇಲ್ಲಿಂದ ದಕ್ಷಿಣದ ಕಡೆಗೆ ಮುಂದೆ ಸಾಗಿದರೆ ಆಯತಾಕಾರದ ಕಡೇಗಾಪು(citadel) ಇದೆ. ಇದರ ಗೋಡೆ ಸುಮಾರು ೧೫ ರಿಂದ ೨೦ ಅಡಿ ಎತ್ತರವಿದ್ದು, ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿದೆ. ಈ ಗೋಡೆಯಲ್ಲಿ ಬಂದೂಕು ಕಿಂಡಿಗಳನ್ನು ಬಿಡಲಾಗಿದೆ. ಕೈಪಿಡಿ ಗೋಡೆಯ ಒಳಭಾಗದಲ್ಲಿ ಸೈನಿಕರು ಪಹರೆ ಮಾಡಬಹುದಾಗಿದೆ. ಇಲ್ಲಿನ ಚೌಕಾಕಾರದ ಕೊತ್ತಲಗಳು ಅತಿ ಎತ್ತರದಲ್ಲಿವೆ. ಇಲ್ಲಿಂದ ದೂರದ ಶತ್ರುಗಳ ಬರುವಿಕೆಯನ್ನು ಕಂಡು ಹಿಡಿಯಬಹುದಾಗಿದೆ. ಇಲ್ಲಿನ ಕಡೆಗಾಪು ಉತ್ತರ-ದಕ್ಷಿಣವಾಗಿದ್ದು, ಉತ್ತರದ ಭಾಗ ಅಗಲವಾಗಿದ್ದು, ದಕ್ಷಿಣದ ಭಾಗ ಕಿರಿದಾಗಿದೆ. ಈ ಪ್ರದೇಶದಲ್ಲಿ ದೊಣೆ, ಕಣಜ ಮತ್ತು ಮದ್ದಿನ ಮನೆಗಳನ್ನು ಒಳಗೊಂಡಿದೆ.

ಕೋಟೆಯ ಮಹತ್ವ

ಈ ಕೋಟೆಯನ್ನು ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿ ಅದರ ಸಂದುಗಳಿಗೆ ಗಾರೆಯ ಗಚ್ಚನ್ನು ಬಳಸಿದ್ದಾರೆ. ಕೋಟೆಯ ಕಲ್ಲುಗಳ ಜೋಡಣೆಯು ಅಚ್ಚುಕಟ್ಟಾಗಿ ಒಂದರ ಮೇಲೊಂದರಂತೆ ಸೇರಿಸಲಾಗಿದೆ. ಈ ಬೆಟ್ಟದಲ್ಲಿ ಬಲವಾದ ಮೂರು ಕೋಟೆಗಳ ಸುತ್ತನ್ನು ನಿರ್ಮಿಸಲಾಗಿದೆ. ಅಲ್ಲಲ್ಲಿ ಚೌಕಾಕಾರದ ಕೊತ್ತಲ ಮತ್ತು ವರ್ತುಲಾಕಾರದ ಕೊತ್ತಲಗಳನ್ನು ನಿರ್ಮಿಸಿ ಕೋಟೆಯ ಮಹತ್ವವನ್ನು ಹೆಚ್ಚಿಸಲಾಗಿದೆ.

ದಕ್ಷಿಣ ದಿಕ್ಕಿನ ಕೋಟೆಯನ್ನು ಶತ್ರುಗಳು ತೋಪುಗುಂಡುಗಳಿಂದ ಹೊಡೆದಿದ್ದರೂ ಬಿದ್ದು ಹೋಗದೇ ಅಭೇದ್ಯವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಚನ್ನರಾಯನ ದುರ್ಗದ ಕೋಟೆಯು ಎಷ್ಟೊಂದು ಭದ್ರವಾಗಿತ್ತೆಂದು ಫಿರಂಗಿಯ ಏಟು ಬಿದ್ದ ಗುರುತುಗಳಿಂದ ಕೋಟೆಯ ಮಹತ್ವವನ್ನು ಅರಿಯಬಹುದಾಗಿದೆ.

ಮಿಡಿಗೇಶಿ ದುರ್ಗದ ಕೋಟೆ

ಮಿಡಿಗೇಶಿ ದುರ್ಗವು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿಗೆ ಸೇರಿದ್ದು, ಮಧುಗಿರಿಯಿಂದ ಪಾವಗಡಕ್ಕೆ ಹೋಗುವ ರಸ್ತೆಯಲ್ಲಿ ೧೯ ಕಿ.ಮೀ, ದೂರದಲ್ಲಿದೆ. ಮಿಡಿಗೇಶಿ ದುರ್ಗವು ಊರಿನ ಪಶ್ಚಿಮ

ದಿಕ್ಕಿಗಿದೆ. ಈ ದುರ್ಗವು ಸಮುದ್ರ ಮಟ್ಟದಿಂದ ೩೪೦೯ ಅಡಿ ಎತ್ತರದಲ್ಲಿದೆ. ದುರ್ಗಕ್ಕೂ ಮತ್ತು ಊರಿಗೂ ಮಿಡಿಗೇಶಿ ಎಂದು ಹೆಸರಿಸಲಾಗಿದೆ. ಈ ದುರ್ಗವು ಮಧ್ಯಕಾಲೀನ ಕರ್ನಾಟಕದ ಗಿರಿ ದುರ್ಗಗಳ ಸಾಲಿಗೆ ಸೇರುತ್ತದೆ. ಈ ಕೋಟೆಯನ್ನು ನಾಗರೆಡ್ಡಿಯು ಕಟ್ಟಿದನೆಂಬ ವಿಚಾರ ಮೂರು ರಾಯರೇಖೆಗಳಲ್ಲಿ ಉಲ್ಲೇಖವಾಗಿರುವುದರಿಂದ ಆತನೇ ಪೂರ್ಣವಾಗಿ ನಿರ್ಮಾಣ ಮಾಡಿರಬಹುದೆಂದು ಊಹಿಸಬಹುದು.[೬೬] ಇಂದು ಕಾಣಬರುವ ಕೋಟೆಯು ವಾಸ್ತು ಶಾಸ್ತ್ರದ ನಿಯಮದಂತೆ ಏಳು ಸುತ್ತುಗಳನ್ನು ಹೊಂದಿದೆ. ಪಾಳೇಗಾರರ ಕಾಲದಲ್ಲಿ ನಿರ್ಮಿತವಾದ ಕೋಟೆಯನ್ನು ಮತ್ತೆ ಹೈದರ್ ಮತ್ತು ಟಿಪ್ಪುರವರು ದುರಸ್ಥಿಗೊಳಿಸಿರಬಹುದು.

ಮಿಡಿಗೇಶಿ ಹೆಸರಿನ ಉಲ್ಲೇಖ ಕ್ರಿ.ಶ.೯೦೬ರ ಗಂಗರ ಶಾಸನದಲ್ಲೇ ಕಂಡುಬರುತ್ತದೆ.[೬೭] ಮಿಡಿಗೇಶಿಯಲ್ಲಿನ ಶಾಸನಗಳ ಪ್ರಕಾರ ಗಂಗ ದೊರೆಗಳಾದ ಶಿವಮಾರ, ಶ್ರೀ ಪುರುಷ ಹಾಗೂ ಎರೆಯಂಗನ ಕಾಲದಲ್ಲಿ ಈ ಪ್ರದೇಶ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಗಂಗರ ನಂತರ ಈ ಪ್ರದೇಶ ನಿಡುಗಲ್ಲು ಚೋಳರ ಅಧೀನಕ್ಕೆ ಒಳಪಟ್ಟಿರಬೇಕು. ಅವರ ಶಾಸನಗಳಲ್ಲೂ ಮಿಡಿಗೇಶಿಯ ಉಲ್ಲೇಖ ಕಂಡುಬರುತ್ತದೆ.[೬೮] ಮಿಡಿಗೇಶಿಯು ವಿಜಯನಗರದರಸರ ಕಾಲದಲ್ಲೂ ಅಸ್ಥಿತ್ವದಲ್ಲಿತ್ತು ಎನ್ನುವುದಕ್ಕೆ ಕ್ರಿ.ಶ.೧೫೦೩ರ ದಾನಶಾಸನ ಒಂದರಲ್ಲಿ ಸಾಳುವ ಇಮ್ಮಡಿ ನರಸಿಂಗರಾಯನ ಕಾರ್ಯಕರ್ತನಾದ ನರಸಣನಾಯಕವೊಡೆಯನ ಕಾಯಕದ ಅ(ಪ)ರಸರಾಹುತನು ತಮ್ಮ ನಾಯಕ ತನಕ್ಕೆ ಸಲ್ಲುವ ಮಿಡಿಗೇಶಿ ಶೀಮೆ...[೬೯] ಎಂದು ಹೇಳಿರುವುದರಿಂದ ವಿಜಯನಗರ ಸಾಳುವ ಇಮ್ಮಡಿ ನರಸಿಂಗರಾಯನ ಕಾಲಕ್ಕೆ ಮಿಡಿಗೇಶಿ ವಿಜಯನಗರದ ಅಧೀನದಲ್ಲಿತ್ತು ಎಂದು ಊಹಿಸಬಹುದು.

ಇವರ ನಂತರ ತಿರುಪತಿ ಕಡೆಯಿಂದ ಬಂದ ಪಾಕನಾಟಿ ಒಕ್ಕಲಿಗನಾದ ನಾಗೀರೆಡ್ಡಿ ಎಂಬ ಪಾಳೇಗಾರನು ಮಿಡಿಗೇಶಿ ಪ್ರದೇಶದಲ್ಲಿ ಕೋಟೆ ಕೊತ್ತಲ ನಿರ್ಮಿಸಿಕೊಂಡು ಆಳ್ವಿಕೆ ಮಾಡಿದನು.[೭೦] ಈತನ ಬಗೆಗೆ ಇರುವ ಒಂದು ತೆಲುಗು ಶಾಸನವು ದೊರೆತಿದ್ದು, ಅದರಲ್ಲಿ ಕಾಲದ ಉಲ್ಲೇಖ ಕಂಡುಬರುವುದಿಲ್ಲ.[೭೧] ಮಧುಗಿರಿಯ ಮಹಾನಾಡು ಪ್ರಭುಗಳ ಇತಿಹಾಸದ ಎಳೆಯನ್ನು ಹಿಡಿದು ಮಿಡಿಗೇಶಿಯ ಇತಿಹಾಸದ ಕಾಲಘಟ್ಟವನ್ನು ನಿರ್ಧಸಬಹುದಾಗಿದೆ. ಮಿಡಿಗೇಶಿ ಪಟ್ಟಣದಿಂದ ಆಳುತಲಿದ್ದ ನಾಗೀರೆಡ್ಡಿಗೂ ಚಿಕ್ಕಪ್ಪ ಗೌಡರಿಗೂ ಒಮ್ಮೆ ಭೇಟಿ ಸಂಭವಿಸಿ ಹಸ್ತಲಾಘವದ ನಂತರ ಮೈತ್ರಿ ದ್ಯೋತಕವಾಗಿ ಇಬ್ಬರೂ ಸೇವಕರನ್ನು ವಿನಿಮಯ ಮಾಡಿಕೊಂಡರು. ಚಿಕ್ಕಪ್ಪಗೌಡ ಸೇವಕರೊಂದಿಗೆ ತನ್ನ ಊರಿಗೆ ಹೋದ ನಾಗೀರೆಡ್ಡಿಯು 'ನೊಣಬ ಕೈ ಮುಟ್ಟಿದ್ದಾನೆ, ಕೈ ತೊಳೆಯಲು ನೀರು ತಾ ಎಂದು ತನ್ನ ಹೆಂಡತಿಗೆ ಹೇಳುತ್ತಾನೆ. ಇದನ್ನು ಕೇಳಿದ ಸೇವಕರು ಇಮ್ಮಡಿ ಚಿಕ್ಕಪ್ಪಗೌಡರಿಗೆ ಸುದ್ದಿ ಮುಟ್ಟಿಸುತ್ತಾರೆ. ಇದರಿಂದ ಗೌಡರು ಕೋಪಗೊಂಡು ಮಿಡಿಗೇಶಿ ಪಟ್ಟಣವನ್ನು ಮುತ್ತಿಗೆ ಹಾಕಿ ನಾಗೇರೆಡ್ಡಿಯನ್ನು ಸೆರೆಹಿಡಿದು ಬಿಸಿನೀರಿನಲ್ಲಿ ಅದ್ದಿ ಕೊಂದನು.[೭೨] ಈ ವಿಚಾರವನ್ನು ಗಮನಿಸಿದರೆ,

ನಾಗೀರೆಡ್ಡಿಯು ಮಧುಗಿರಿಯ ಮಹಾನಾಡು ಪ್ರಭುಗಳಾದ ಇಮ್ಮಡಿ ಚಿಕ್ಕಪ್ಪ ಗೌಡರ ಸಮಕಾಲೀನನೆಂದು ಭಾವಿಸಬಹುದು. ನಾಗೀರೆಡ್ಡಿಯು ಇದೇ ಕಾಲದಲ್ಲಿ ಮಿಡಿಗೇಶಿಯಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿರಬಹುದು ಎನ್ನುವುದನ್ನು ಊಹಿಸಬಹುದು.

ಇಮ್ಮಡಿ ಚಿಕ್ಕಪ್ಪಗೌಡರಿಂದ ನಾಗೀರೆಡ್ಡಿಯ ಹತ್ಯೆಯಾದ ನಂತರ ಪಾಳೇಗಾರನ ಹೆಂಡತಿ ಮಿಡಿಗೇಶಿ ರಾಣಿಯು ತನ್ನ ಗಂಡನ ದೇಹದೊಡನೆ ಚಿತೆ ಏರಿದಳು. ಮುಂದೆ ಅದೇ ಮನೆತನದ ರಾಣಿಯರು ಕೆಲವು ಕಾಲ ಆಳ್ವಿಕೆ ನಡೆಸಿದರೆಂದು ಫ್ರಾನ್ಸಿಸ್ ಬುಖನನ್ ಮಿಡಿಗೇಶಿ ಬಗ್ಗೆ ಹೇಳುತ್ತಾನೆ.[೭೩] ಇದನ್ನು ಗಮನಿಸಿದರೆ, ಇಮ್ಮಡಿ ಚಿಕ್ಕಪ್ಪಗೌಡನೇ ಈ ರಾಣಿಯರಿಗೆ ಆಳ್ವಿಕೆ ಮಾಡಲು ಅವಕಾಶ ಮಾಡಿಕೊಟ್ಟಿರಬಹುದೆಂದು ಊಹಿಸಬಹುದಾಗಿದೆ.

ಚಿಕ್ಕಬಳ್ಳಾಪುರದ ನಾಡಪ್ರಭು ಹಾವಳಿ ಭೈರೇಂದ್ರನು ಇಮ್ಮಡಿ ಚಿಕ್ಕಪ್ಪಗೌಡರ ಅಧೀನದಲ್ಲಿದ್ದ ಮೀಡಿಗೇಶಿ ಕೋಟೆಯನ್ನು ವಶಪಡಿಸಿಕೊಂಡನು. ಇದನ್ನು ಮತ್ತೆ ಪಡೆಯಲು ಹೋಗಿ ಹರವೆ ಕಾಳಗದಲ್ಲಿ ಗೌಡರು ಹಿರಿಯ ಮಗ ಕೋಟೆಂದ್ರನನ್ನು ಕಳೆದುಕೊಳ್ಳಬೇಕಾಗುತ್ತದೆ. ಆದರೂ ಮಿಡಿಗೇಶಿಯನ್ನು ವಾಪಸ್ಸು ಪಡೆಯುತ್ತಾರೆ.[೭೪]

ಕಾಳಚಿಕ್ಕಪ್ಪಗೌಡರ ಕಾಲದಲ್ಲಿ ಹರತಿ ವಂಶಸ್ಥರು ಶಿರಾದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಒಂದು ಬಾರಿ ಪುವ್ವಲಕೆಂಗನಿಗೂ ಶಿರಾದ ರಂಗಪ್ಪರಾಜನಿಗೂ ಯುದ್ಧ ನಡೆಯಿತು. ಇದರಲ್ಲಿ ರಂಗಪ್ಪರಾಜನು ಕೊಲೆಯಾದನು. ಈತನ ಮಕ್ಕಳನ್ನು ಮಧುಗಿರಿ ಪ್ರಭುಗಳು ರಕ್ಷಣೆ ಮಾಡಿದರು. ಪ್ರಾಪ್ತ ವಯಸ್ಸಿಗೆ ಬಂದ ನಂತರ ಇಬ್ಬರೂ ಮಕ್ಕಳಿಗು ಮಿಡಿಗೇಶಿ ಮತ್ತು ರತ್ನಗಿರಿಯಲ್ಲಿ ನೆಲಸಲು ಸೂಚಿಸಿದರು.[೭೫] ಹರತಿಯ ವಂಶಸ್ಥರು ಒಟ್ಟು ಮೂರು ತಲೆ ಮಾರಿನವರೆಗೆ ಮಿಡಿಗೇಶಿಯನ್ನು ಆಳ್ವಿಕೆ ಮಾಡಿದರು. ಈ ಆಳ್ವಿಕೆಯಲ್ಲಿ ಕಸ್ತೂರಿ ರಂಗಪ್ಪರಾಜ ಈತನ ಮಗ ಸರ್ಜಾಭೂಪಾಲ ಇವನ ಮಗ ರಂಗಪ್ಪರಾಜನ ನಂತರ ಇವನ ಮಕ್ಕಳಾದ ಕೃಷ್ಣರಾಜ ಮತ್ತು ವೆಂಕಟ ಶಾಮಿರಾಜರು ಮಹಾನಾಡ ಪ್ರಭುಗಳಿಗೆ ಋಣಿಯಾಗಿದ್ದರು.

ಇದೇ ಸುಮಾರಿನಲ್ಲಿ ಮಹಾಗೌಡ ಪ್ರಭುಗಳ ಸಹೋದರರಲ್ಲಿ ಕಲಹವುಂಟಾಗಿ ಮೈಸೂರು ಅರಸರಿಂದ ಕ್ರಿ.ಶ.೧೬೭೮ರಲ್ಲಿ ರಾಮಪ್ಪಗೌಡ ಮತ್ತು ತಿಮ್ಮಪ್ಪಗೌಡರ ಕುಟುಂಬ ಸಮೇತವಾಗಿ ಬಂಧನಕ್ಕೆ ಒಳಪಟ್ಟು ಶ್ರೀರಂಗಪಟ್ಟಣದಲ್ಲಿ ಸೆರೆಯಾದರು.[೭೬] ಕೆಲವು ಕಾಲಾ ನಂತರ ರಾಮಪ್ಪಗೌಡನ ಮಗ ಮುಮ್ಮಡಿ ಹಿರೇವೀರಪ್ಪಗೌಡ ಬಂಧನದಿಂದ ತಪ್ಪಿಸಿಕೊಂಡು ಮಿಡಿಗೇಶಿಗೆ ಹಿಂದಿರುಗಿಬಂದು ಆಳತೊಡಗಿದನು. ಈತನು ಕೆಲವು ದಿನಗಳು ಹೈದರನಿಗೆ ನಿಷ್ಠನಾಗಿರಲು ಸೂಚಿಸಿದ್ದನು. ಅವನು ನಿಧಾನವಾಗಿ ಮೊದಲಿದ್ದ ಪ್ರದೇಶವನ್ನು ವಶಪಡಿಸಿಕೊಳ್ಳುವ ಸಮಯದಲ್ಲಿಯೇ ಕ್ರಿ.ಶ.೧೭೬೭ರಲ್ಲಿ

ಮರಾಠರು ಮಿಡಿಗೇಶಿಯನ್ನು ವಶಪಡಿಸಿಕೊಂಡರು.[೭೭] ಚನ್ನರಾಯನ ದುರ್ಗದಲ್ಲಿ ಮರಾಠರು ಠಾಣ್ಯ ಹಾಕಿಕೊಂಡು ಸುತ್ತ ಮುತ್ತಲಿನ ಪ್ರದೇಶವನ್ನೆಲ್ಲಾ ಆಳ್ವಿಕೆ ಮಾಡತೊಡಗಿದರು. ಹೈದರ್‌ನ ಆಜ್ಞೆಯ ಮೇರೆಗೆ ಕ್ರಿ.ಶ.೧೭೭೪ರಲ್ಲಿ ಟಿಪ್ಪು ಮಿಡಿಗೇಶಿಯನ್ನು ಆಕ್ರಮಿಸಿದಾಗ ಮರಾಠರು ಅಲ್ಲಿನ ಸಂಪತ್ತನ್ನೆಲ್ಲಾ ದೋಚಿಕೊಂಡು ಹೋದರು.[೭೮]

ಮಹಾನಾಡ ಪ್ರಭುಗಳ ವಂಶಸ್ಥನಾದ ಚನ್ನಪ್ಪಗೌಡನು ಬ್ರಿಟೀಷರಿಗೆ ೪ನೇ ಮೈಸೂರ ಯುದ್ಧದಲ್ಲಿ ಟಿಪ್ಪುವಿನ ವಿರುದ್ಧವಾಗಿ ಸಹಾಯ ಮಾಡಿದನು. ಈ ಸಹಾಯಕ್ಕೆ ಬ್ರಿಟೀಷರು ಮಿಡಿಗೇಶಿಯನ್ನು ಕೊಡುತ್ತೇವೆಂದು ಹೇಳಿದ್ದರು. ಕೊನೆಗೆ ಈ ಪ್ರದೇಶವೆಲ್ಲಾ ಮೈಸೂರು ಸಂಸ್ಥಾನಕ್ಕೆ ಸೇರಿಹೋಯಿತು. ತಮ್ಮ ಸಂಸ್ಥಾನವನ್ನು ಮರಳಿ ನೀಡಬೇಕೆಂದು ಮೈಸೂರು ದಿವಾನರನ್ನು ಪ್ರಾರ್ಥಿಸುತ್ತಾ ಕಾಯುತ್ತಾ ಮರಣ ಹೊಂದಿದನು.[೭೯]

ಮಿಡಿಗೇಶಿ ದುರ್ಗವನ್ನು ೩೦೦ ವರ್ಷಗಳ ಕಾಲ ನಾಲ್ಕು ಮನೆತನಗಳು ಆಳ್ವಿಕೆ ಮಾಡಿವೆ. ವಿಜಯನಗರದ ಕಾಲದಲ್ಲಿ ತಿಮ್ಮಪ್ಪನಾಯಕನ ಮನೆತನ, ನಾಗೀರೆಡ್ಡಿ ವಂಶಸ್ಥರು, ಸಿರಾದ ಹರತಿ ವಂಶಸ್ಥರು ಮತ್ತು ಮಹಾನಾಡ ಪ್ರಭುಗಳು ಆಳಿದರು. ವಿಜಯನಗರದ ನಂತರ ಮಿಡಿಗೇಶಿ ದುರ್ಗದ ಹಿಡಿತವನ್ನು ಮೈಸೂರು ಒಡೆಯರು ಮರಾಠರು, ಸಿರಾದ ನವಾಬರು, ಬ್ರಿಟಿಷರು. ಕೊನೆಗೆ ಮೈಸೂರು ಒಡೆಯರಿಗೆ ಈ ದುರ್ಗವು ಸೇರಿಕೊಂಡಿತು.

ಒಟ್ಟಾರೆಯಾಗಿ ನಾಗೀರೆಡ್ಡಿಯಿಂದ ನಿರ್ಮಿಸಿದ ಕೋಟೆಕೊತ್ತಲಗಳು ಈ ಮೇಲಿನ ಎಲ್ಲಾ ನಾಯಕರ ಆಕ್ರಮಣದಿಂದ ಶಿಥಿಲಗೊಂಡವು. ಇದರಿಂದ ಅಲ್ಲಿನ ಜನರ ಬದುಕು ಅಸ್ಥಿರತೆಯಿಂದ ನಿರ್ಲಿಪ್ತತೆಯನ್ನು ತಲುಪಿತ್ತೆನ್ನಬೇಕಾಗುತ್ತದೆ. ಈ ದುರ್ಗದ ದುರಸ್ತಿ ಕಾರ್ಯವನ್ನು ಮಾಡುವಾಗ ಟಿಪ್ಪುಸುಲ್ತಾನನು ಸ್ಥಳೀಯ ಸಂಪನ್ಮೂಲವನ್ನು ಬಳಸಿಕೊಂಡಿರುವುದು ಕಾಣುತ್ತದೆ. ಕೋಟೆಯು ಈಗಲೂ ಶಿಥಿಲವಾಗದೇ ಇರುವುದನ್ನು ಕಾಣಬಹುದು.

ಮಿಡಿಗೇಶಿ ದುರ್ಗದ ಕೋಟೆಯ ಲಕ್ಷಣಗಳು

ತುಮಕೂರು ಜಿಲ್ಲೆಯ ಗಿರಿ ದುರ್ಗಗಳ ಸಾಲಿಗೆ ಮಿಡಿಗೇಶಿ ದುರ್ಗವೂ ಸೇರುತ್ತದೆ. ಈ ದುರ್ಗದ ಕೋಟೆಯನ್ನು ನಾಗೀರೆಡ್ಡಿಯು ಕಟ್ಟಿಸಿದ ವಿಚಾರ ಮೂರೂ ರಾಯರೇಖೆಗಳಲ್ಲಿ ಉಲ್ಲೇಖಿತವಾಗಿದೆ.[೮೦] ಈ ಕೋಟೆಯು ವಾಸ್ತುನಿಯಮದಂತೆ ಏಳು ಸುತ್ತುಗಳನ್ನು ಹೊಂದಿದೆ. ಇದರಲ್ಲಿ ಬೆಟ್ಟದ ತಪ್ಪಲಿನ ಎರಡು ಸುತ್ತಿನ ಮಣ್ಣಿನಿಂದ ನಿರ್ಮಿಸಿದ ಕೋಟೆ ಗೋಡೆಯು ನಶಿಸಿದ್ದು, ಅದರ ಅವಶೇಷಗಳನ್ನು ಮಾತ್ರ ಕಾಣಬಹುದು. ಇನ್ನುಳಿದ ಐದು ಸುತ್ತಿನ ಕೋಟೆಯು ಗಾರೆ ರಚನೆಯಿಂದ ಕೂಡಿದೆ. ಇದನ್ನು ಹೈದರ್-ಟಿಪ್ಪು ಸುಲ್ತಾನರು ದುರಸ್ಥಿಗೊಳಿಸಿದ್ದಾರೆ ಎಂದು ಡಾ.ವಸುರವರು ಅಭಿಪ್ರಾಯಪಡುತ್ತಾರೆ.[೮೧]

ಬೆಟ್ಟದ ತಪ್ಪಲಿನ ಮೊದಲ ಸುತ್ತಿನ ಗೋಡೆಯು ವೆಂಕಟರಮಣ ದೇವಾಲಯ, ದೊಣೆ ಮತ್ತು ಅರಮನೆಯನ್ನು ಸುತ್ತುವರೆದಿದೆ. ಇಲ್ಲಿ ಈಗ ವೆಂಕಟರಮಣ ದೇವಾಲಯ ಮಾತ್ರ ಸುಸ್ಥಿತಿಯಲ್ಲಿದೆ. ಅರಮನೆ ಮತ್ತು ಗ್ರಾಮದ ವಸತಿ ಗೃಹದ ಅವಶೇಷಗಳನ್ನು ಮಾತ್ರ ಕಾಣಬಹುದು. ಬೆಟ್ಟದಲ್ಲಿ ನಿರ್ಮಿಸಿರುವ ಮೊದಲ ಸುತ್ತಿನ ಕೋಟೆಯ ಬಾಗಿಲು ಪೂರ್ವಾಭಿಮುಖವಾಗಿದ್ದು, ಇದರ ಬಾಗಿಲ ಬಳಿ ಕಾವಲುಗಾರನ ಮನೆಯಿದೆ. ಇದರ ಉತ್ತರಕ್ಕೆ ಹಾಳಾಗಿರುವ ಗೋಪಾಲಸ್ವಾಮಿಯ ಚಿಕ್ಕ ದೇವಾಲಯವಿದೆ. ಮೂರನೇ ಬಾಗಿಲನ್ನು ದಕ್ಷಿಣ ದಿಕ್ಕಿನಿಂದ ಪ್ರವೇಶಿಸಬೇಕು. ಈ ಬಾಗಿಲ ಒಳಭಾಗದಲ್ಲಿ ಎರಡು ಕಡೆಯು ವಿಶ್ರಾಂತಿ ಮಂಟಪಗಳಿವೆ. ಇದೇ ಕೋಟೆಯ ಆಯಾಕಟ್ಟಿನ ಜಾಗದಲ್ಲಿ ವೃತ್ತಾಕಾರದ ಕೊತ್ತಲವನ್ನು ನಿರ್ಮಿಸಲಾಗಿದೆ. ಇಲ್ಲಿಯೇ ಒಂದು ದೊಣೆಯಿದೆ. ಇದರಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ತುಂಬಿರುತ್ತದೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿಂದ ಸ್ವಲ್ಪ ಮುಂದೆ ನಡೆದರೆ ಬಲಭಾಗಕ್ಕೆ ಕಂಬ ತೊಲೆಗಳಿಂದ ಕಟ್ಟಿದ ಕಣಜ ಇದೆ. ಇದರ ಪಕ್ಕದಲ್ಲಿ ನಾಲ್ಕನೇ ಕೋಟೆ ಆರಂಭವಾಗಿದ್ದು, ಕಣಜದ ಪಕ್ಕದಲ್ಲಿ ಒಂದು ಕೊತ್ತಲವನ್ನು ನಿರ್ಮಿಸಿದ್ದಾರೆ. ಈ ವೃತ್ತಾಕಾರದ ಕೊತ್ತಲವು ಈ ಕಣಜದ ಕಾವಲಿಗೆ ನಿರ್ಮಿಸಿರಬಹುದು.

ನಾಲ್ಕನೆಯ ಕೋಟೆಯ ಬಾಗಿಲು ದಕ್ಷಿಣಾಭಿಮುಖವಾಗಿದೆ. ಬಾಗಿಲ ಮುಂದೆ ಒಂದು ಮಂಟಪವಿದೆ. ಇದು ಶಿಥಿಲಾವಸ್ಥೆಯಲ್ಲಿದೆ. ಈ ಕೋಟೆಯ ಗೋಡೆಗೆ ಮೂರು ವೃತ್ತಾಕಾರದ ಕೊತ್ತಲ ನಿರ್ಮಿಸಿದ್ದು, ಇದರಲ್ಲಿ ಗಾರೆಯಿಂದ ನಿರ್ಮಿಸಿದ ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಇಲ್ಲಿಯೇ ಇರುವ ಒಂದು ಬೃಹತ್ ಬಂಡೆಗೆ ಹೆಣ್ಣಿನ ರೇಖಾ ಚಿತ್ರವನ್ನು ಬಿಡಿಸಲಾಗಿದೆ. ಇದು ಮೂರು ಅಡಿ ಎತ್ತರವಿದೆ. ಇಲ್ಲಿನ ಜನರು ಇದನ್ನು "ಮಿಡಿಗೇಶಿ"ಯಮ್ಮಳ ಚಿತ್ರವೆಂದು ಹೇಳುತ್ತಾರೆ. ಆದರೆ ಇದು ಚಿಕ್ಕ ಮಲ್ಲಮ್ಮನದೆಂದು ದಾಖಲಾಗಿದೆ.[೮೨] ರೇಖಾ ಚಿತ್ರವಿರುವ ಬಂಡೆಗೆ ಮೆಟ್ಟಿಲುಗಳನ್ನು ಕೆತ್ತಲಾಗಿದೆ. ಇವುಗಳ ಸಹಾಯದಿಂದ ಬೆಟ್ಟಕ್ಕೆ ಹತ್ತಬಹುದು. ಮೆಟ್ಟಿಲುಗಳನ್ನು ಬಳಸಿ ಮುಂದುವರಿದರೆ, ಐದನೆ ಬಾಗಿಲು ಎದುರಾಗುತ್ತದೆ. ಇದು ಉತ್ತರಾಭಿಮುಖವಾಗಿದೆ. ಇದನ್ನು ನೈಸರ್ಗಿಕವಾಗಿ ಗೋಡೆಗಳಂತಿರುವ ಎರಡು ಬಂಡೆಗಳ ಮಧ್ಯದಲ್ಲಿ ಕಟ್ಟಲಾಗಿದೆ. ಬಾಗಿಲ ಬಲ ಭಾಗದಲ್ಲಿ ಕೋಟೆಯ ಗೋಡೆಯನ್ನು ನಿರ್ಮಿಸಿದ್ದು, ಅಭೇದ್ಯ ಸ್ಥಿತಿಯಲ್ಲಿದೆ. ಇದರ ಕೈಪಿಡಿ ಗೋಡೆಯು ಇಟ್ಟಿಗೆ, ಗಾರೆಯಿಂದ ನಿರ್ಮಾಣವಾಗಿದೆ. ಇದಕ್ಕೆ ಮುಂಚಾಚಿದ ಐದು ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಆರನೇಯ ಕೋಟೆಯ ಬಾಗಿಲು ಪೂರ್ವದಿಕ್ಕಿನಲ್ಲಿದ್ದು, ಇದರ ಪಕ್ಕದಲ್ಲಿ ವೃತ್ತಾಕಾರದ ಕೊತ್ತಲ ಒಳಗೊಂಡಿದೆ.

ಇಲ್ಲಿಂದ ಮುಂದೆ ಉತ್ತರದಿಕ್ಕಿಗೆ ಸಾಗಿದರೆ ತಾಂತ್ರಿಕವಾಗಿ ನಿರ್ಮಿಸಿರುವ ಒಂದು ಕಣಜವಿದೆ. ಇದನ್ನು ಇಟ್ಟಿಗೆ, ಗಾರೆ, ಪುಡಿಕಲ್ಲುಗಳಿಂದ ನಿರ್ಮಿಸಲಾಗಿದೆ. ಇದು ನೆಲದಲ್ಲಿ ನಿರ್ಮಾಣಗೊಂಡಿರುವುದರಿಂದ, ಕೆಳಗೆ ಇಳಿಯಲು ಮೆಟ್ಟಿಲ ವ್ಯವಸ್ಥೆ ಮಾಡಲಾಗಿದೆ. ಈ ಕಣಜದ ಸುತ್ತಲೂ ಗಾರೆ, ಇಟ್ಟಿಗೆಯ

ಗೋಡೆಯನ್ನು ನಿರ್ಮಿಸಲಾಗಿದೆ. ಉತ್ತರ ದಿಕ್ಕಿನ ಗೋಡೆ ಮತ್ತು ಕೋಟೆ ಮಧ್ಯೆ ಕಣಜಕ್ಕೆ ಒಳಪ್ರವೇಶಿಸಲು ಸ್ಥಳ ಬಿಡಲಾಗಿದೆ. ಕಣಜ ರಕ್ಷಿಸಲು ಕೋಟೆಯ ಮೇಲೆ ಸೈನಿಕರು ಓಡಾಡಬಹುದಾಗಿದೆ. ಇದಕ್ಕೆ ಕೈಪಿಡಿ ಗೋಡೆಯನ್ನು ನಿರ್ಮಿಸಿದ್ದು, ಮೂರು ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಇನ್ನು ಬೆಟ್ಟದ ತುದಿಯ ಕಡೆ ಸುತ್ತಿನ ಕೋಟೆ ಗೋಡೆಯ ಏಳನೇ ಬಾಗಿಲನ್ನು ಉತ್ತರದಿಕ್ಕಿನಿಂದ ಪ್ರವೇಶಿಸಬೇಕು. ಇಲ್ಲಿನ ಕೋಟೆಯು ಬೆಟ್ಟದ ತುದಿಯ ವಿಶಾಲವಾದ ಪ್ರದೇಶವನ್ನು ಸುತ್ತುವರೆದಿದೆ. ಈ ಕೋಟೆ ಗೋಡೆಯು ಅಭೇದ್ಯವಾಗಿದ್ದು, ಆಯಕಟ್ಟಿನ ಜಾಗದಲ್ಲಿ ವೃತ್ತಾಕಾರದ ಕೊತ್ತಲಗಳು ಮತ್ತು ಅರ್ಧವೃತ್ತಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಈ ಕೊತ್ತಲಗಳು ಬೆಟ್ಟದ ತುದಿಯಲ್ಲಿರುವುದರಿಂದ ಶತ್ರುಗಳ ಬರುವಿಕೆಯನ್ನು ಗ್ರಹಿಸುವುದು ಮತ್ತು ಕೋಟೆಯ ರಕ್ಷಣೆ ಮಾಡಿಕೊಳ್ಳುವುದು ಇವುಗಳ ನಿರ್ಮಾಣದ ಮೂಲ ಉದ್ದೇಶವಾಗಿದೆ.

ಬೆಟ್ಟದ ತುದಿಯು ವಿಶಾಲವಾದ ಪ್ರದೇಶವನ್ನು ಒಳಗೊಂಡಿರುವುದರಿಂದ ಹಲವು ಸ್ಮಾರಕಗಳನ್ನು ಇಲ್ಲಿ ಅಡಕಗೊಳಿಸಲಾಗಿದೆ. ಮಸೀದಿ, ಮಂಟಪಗಳು, ಆಂಜನೇಯನ ದೇವಾಲಯ, ಗಾರೆ, ಇಟ್ಟಿಗೆಯಿಂದ ನಿರ್ಮಿಸಿದ ಮುಸುರೆ ದೊಣೆ, ಪಾಳು ಬಿದ್ದಿರುವ ಮನೆಗಳು ಮತ್ತೊಂದು ದೊಣೆ, ವೃತ್ತಾಕಾರದ ಗೋಲಾಕಾರದ ಮತ್ತು ಮಂಟಪಾಕಾರದ ಕಣಜಗಳು. ಒಂದು 'ಕಡೇಗಾಪು' ಇದೆ. 'ಕಡೇಗಾಪಿನೊಳಗಡೆ ಅರಮನೆಯ ಅವಶೇಷಗಳಿವೆ.'[೮೩] ಈ ಕಡೆಗಾಪು ಪೂರ್ವಭಿಮುಖವಾಗಿದೆ. ಇದನ್ನು ಸಣ್ಣ ಸೈಜು ಗಲ್ಲುಗಳಿಂದ ನಿರ್ಮಿಸಲಾಗಿದೆ. ಇದರಲ್ಲಿ ಎರಡು ಕಣಜಗಳನ್ನೂ ಸಹ ನಿರ್ಮಿಸಲಾಗಿದೆ. ಈ ಕಣಜಗಳು ನಿಲುವುಗಂಭಗಳ ಆಧಾರದಿಂದ ನಿರ್ಮಿಸಲಾಗಿದೆ. ಇವು ಕಡೆಗಾಪುವಿನ ಒಳಗೆ ಇದ್ದು, ಬಾಗಿಲು ಸಹ ಒಳಗಿನಿಂದಲೇ ಇಡಲಾಗಿದೆ. ಕಡೆಗಾಪನ್ನು ಎರಡು ಭಾಗ ಮಾಡಿದ್ದು, ಮೂರು ಕೋಣೆಗಳನ್ನು ವಿಭಾಗಿಸಿ ನಿರ್ಮಿಸಲಾಗಿದೆ. ಈ ಕೋಣೆಗಳು ಸಂಪೂರ್ಣವಾಗಿ ಬಿದ್ದುಹೋಗಿವೆ. ಇಲ್ಲಿ ಅಂತಃಪುರವಿತ್ತೆಂದು ಸ್ಥಳೀಯರ ಅಭಿಪ್ರಾಯವಾಗಿದೆ.

ಬೆಟ್ಟದ ತುದಿಯ ಉತ್ತರ ದಿಕ್ಕಿನ ಸ್ವಲ್ಪ ಕೆಳಗೆ ಕನ್ನೇರಮ್ಮನ ದೊಣೆಯಿದೆ. ಮತ್ತು ಅದರ ದಡದಲ್ಲಿ ಚಿಕ್ಕ ಗುಡಿ, ಹಾಳು ಮಂಟಪವಿದೆ. ಕನ್ನೇರಮ್ಮ ದೊಣೆಯು ಇಲ್ಲಿನ ಸುತ್ತಮುತ್ತಲ ಜನಸಮುದಾಯಗಳಿಗೆ ಪವಿತ್ರವಾದ ದೊಣೆಯಾಗಿದೆ. ಈ ದೊಣೆಯಲ್ಲಿ ಪ್ರತಿವರ್ಷ ಶಿವರಾತ್ರಿ ಮತ್ತು ಯುಗಾದಿಯಲ್ಲಿ ಸುತ್ತಲಿನ ದೇವರುಗಳನ್ನು ತಂದು ಇಲ್ಲಿ ಜಲಧಿ ಮಾಡುವುದು ವಿಶೇಷವಾಗಿದೆ.

ಇಲ್ಲಿನ ಕೋಟೆಯು ಹೈದರ್-ಟಿಪ್ಪು ಕಾಲದಲ್ಲಿ ದುರಸ್ತಿ ಮಾಡಿ ಇಟ್ಟಿಗೆಯ ಕೈಪಿಡಿ ಗೋಡೆಯನ್ನು ಕಟ್ಟಲಾಗಿದೆ. ಮಸೀದಿಯು ಇದೇ ಕಾಲದಲ್ಲಿ ನಿರ್ಮಾಣಗೊಂಡಿದೆ.[೮೪] ಹೈದರ್ ಮತ್ತು ಟಿಪ್ಪು ಕೋಟೆಯನ್ನು ದುರಸ್ತಿ ಮಾಡಿರುವುದರಿಂದ ಬಾಗಿಲ ಮೇಲಿನ ಕೈಪಿಡಿ ಗೋಡೆ ಮತ್ತು ಕೋಟೆಯ ಕೈಪಿಡಿ ಗೋಡೆಯು ಗಾರೆಯಿಂದ ಮುಸ್ಲಿಂ ಶೈಲಿಯ ಚಿತ್ರಗಳನ್ನು ಬಿಡಿಸಿರುವುದನ್ನು ಕಾಣಬಹುದು.

ಕೋಟೆ ಸ್ಮಾರಕಗಳು

ಈ ಕೋಟೆ ಪ್ರದೇಶದಲ್ಲಿ ಆ ಕಾಲದ ದೇವಾಲಯಗಳು, ಅರಮನೆ, ಬಾವಿ, ಹೊಂಡಗಳು,. ಕಣಜಗಳು, ಮಸೀದಿ, ಕಲಾಸ್ಮಾರಕಗಳು ಕಂಡುಬರುತ್ತವೆ. ಅವುಗಳ ಕುರಿತಾಗಿ ಚರ್ಚಿಸಲಾಗಿದೆ.

ವೆಂಕಟರಮಣ ದೇವಾಲಯ : ಇದು ಬೆಟ್ಟದ ತಪ್ಪಲಿನ ಊರಸುತ್ತಿನ ಮಣ್ಣಿನ ಕೋಟೆ ಗೋಡೆಯ ಒಳಗಡೆ ಇದೆ. ಇದು ಪೂರ್ವಾಭಿಮುಖವಾಗಿದೆ. ಈ ದೇವಾಲಯವು "ಮಿಡಿಗೇಶಿಯಲ್ಲಿ ಪ್ರಸಿದ್ಧವಾಗಿರುವುದು. ಇದು ಆಗಿನ ಪಾಳೇಗಾರನಾದ ನಾಗೀರೆಡ್ಡಿಯು ನಿರ್ಮಿಸಿದ ದೇವಾಲಯವಾಗಿದೆ."[೨೫] ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ವಿಶಾಲವಾದ ತೆರೆದ ಮುಖ ಮಂಟಪ ಹೀಗೆ ವಿಂಗಡಿಸಲಾಗಿದೆ. ಇದರ ಮಹಾದ್ವಾರದ ಮೇಲೆ ಗೋಪುರ ಮತ್ತು ಗರ್ಭಗುಡಿಯ ಮೇಲಿನ ಶಿಖರಗಳು ವಿಜಯನಗರದ ವಿರೂಪಾಕ್ಷ ದೇವಾಲಯದ ಗೋಪುರವನ್ನು ಹೋಲುತ್ತದೆ. ಅಲ್ಲದೇ ಹೊರಸುತ್ತಿನ ಕಂಬಗಳ ಉಬ್ಬು ಚಿತ್ರಗಳಲ್ಲಿ ವಿಜಯನಗರದ ಪ್ರಭಾವ ಎದ್ದು ಕಾಣುತ್ತದೆ. ಕಂಬಗಳಲ್ಲಿ ಹಾರುವ ಸಿಂಹಗಳು, ವಶಿಷ್ಠ, ವಿಶ್ವಾಮಿತ್ರ, ಕಾಶ್ಯಪ, ಭಾರದ್ವಜರ ಮೂರ್ತಿಗಳು ಮತ್ತು ಕೃಷ್ಣನ ಶಿಲ್ಪಗಳನ್ನು ಕಾಣುತ್ತೇವೆ.

ಮಲ್ಲೇಶ್ವರ ದೇವಾಲಯ : ಕೋಟೆಯೊಳಗಿನ ಪ್ರಸಿದ್ಧ ದೇವಾಲಯಗಳಲ್ಲಿ ಇದು ಒಂದು. 'ಇದನ್ನು ಒಂದು ರಾಯರೇಖೆಯ ಪ್ರಕಾರದಂತೆ ಮಿಡಿಗೇಶಿಯ ಪಟೇಲನಾದ ಸಿವಣ್ಣೇಗೌಡ ನಿರ್ಮಿಸಿದನೆಂದು ತಿಳಿದು ಬಂದಿದೆ.'[೨೬]

ಇದೇ ರೀತಿ ಮಿಡಿಗೇಶಿಯ ಸುತ್ತ ಮುತ್ತ ಸುಮಾರು ೨೪ ದೇವಾಲಯಗಳಿವೆ. ಅವುಗಳಲ್ಲಿ ವೀರನಾರಾಯಣನ ದೇವಾಲಯ, ವೀರಭದ್ರಸ್ವಾಮಿ ದೇವಾಲಯ, ಗ್ರಾಮ ದೇವತೆಗಳಾದ ಅಂಕಾಳಮ್ಮ, ಲಕ್ಕಮ್ಮ, ದುಗ್ಗೆಮ್ಮನ ಗುಡಿಗಳು. ಸುಪಾರ್ಶ್ವನಾಥ ಬಸದಿ, ಬ್ರಹ್ಮದೇವ ಮಂದಿರದ ಬೃಹತ್ ಏಕಶಿಲಾ ಆಂಜನೇಯ, ಬೆಟ್ಟದ ಮಧ್ಯಭಾಗದ ಗೋಪಾಲಸ್ವಾಮಿ, ಬೆಟ್ಟದ ತುದಿಯ ಆಂಜನೇಯಸ್ವಾಮಿ ಗುಡಿ ಇನ್ನೂ ಹಲವು ದೇವಾಲಯಗಳು ಇಲ್ಲಿವೆ.

ಅರಮನೆಗಳು : ಮಿಡಿಗೇಶಿ ದುರ್ಗದಲ್ಲಿ ಒಟ್ಟು ಎರಡು ಅರಮನೆಗಳಿವೆ. ಒಂದು ಬೆಟ್ಟದ ತಪ್ಪಲಿನ ವೆಂಕಟರಮಣ ದೇವಾಲಯದ ಪಕ್ಕದಲ್ಲಿದ್ದು, ಇನ್ನೊಂದು ಬೆಟ್ಟದ ತುದಿಯ ಕಡೆಗಾಪುವಿನೊಳಗೆ ನಿರ್ಮಿಸಲಾಗಿದೆ. ಇವೆರಡು ಈಗ ಸಂಪೂರ್ಣವಾಗಿ ಹಾಳಾಗಿವೆ. ಆದರೆ ಅಲ್ಲಿನ ಅವಶೇಷಗಳನ್ನು ಕಾಣಬಹುದು. ದೇವಾಲಯದ ಪಕ್ಕದಲ್ಲಿರುವ ಅರಮನೆಯ ನೆಲಮಾಳಿಗೆಯ ಮೇಲ್ಭಾವಣೆ ಕಂಡುಬರುತ್ತದೆ. ಈಗ ಅಲ್ಲಲ್ಲಿ ಕೊರಕಲುಗಳಾಗಿದ್ದು, ಅದರ ಮೂಲಕ ಒಳ ಹೋಗಬಹುದು.

ಮಸೀದಿ : ಬೆಟ್ಟದ ತುದಿಯಲ್ಲಿದ್ದು, ಇದನ್ನು ಪೂರ್ವಾಭಿಮುಖವಾಗಿ ಹೈದರ್-ಟಿಪ್ಪುವಿನ ಕಾಲದಲ್ಲಿ ನಿರ್ಮಿಸಲಾಗಿದೆ. ಈ ಮಸೀದಿಯು ಸುಸ್ಥಿತಿಯಲ್ಲಿದ್ದು, ಇದಕ್ಕೆ ಎತ್ತರವಾದ ಎರಡು ಮೀನಾರ್‌ಗಳನ್ನು ನಿರ್ಮಿಸಲಾಗಿದೆ. ಮಸೀದಿಯ ಒಳಗೆ ಅಲ್ಲಲ್ಲಿ ಕಮಾನಾಕೃತಿಯ ಗೂಡುಗಳನ್ನು ಬಿಡಲಾಗಿದೆ. ಮೀನಾರ್‌ಗೆ ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದೆ. ಇದರ ನಿರ್ಮಾಣವು ಗಾರೆ, ಇಟ್ಟಿಗೆಯಿಂದ ನಡೆದಿದೆ. ಈಗ ಅಲ್ಲಲ್ಲಿ ಗಾರೆಯನ್ನು ಸ್ಥಳೀಯರು ಕಿತ್ತು ಹಾಕಿದ್ದಾರೆ.

ಕೊರಟಗೆರೆ ಕೋಟೆ

ಕೊರಟಗೆರೆ ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ. ಇದು ಜಿಲ್ಲಾ ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ಸುಮಾರು ೨೬ ಕಿ.ಮೀ. ದೂರದಲ್ಲಿದೆ. ಮಿಕ್ಕೆಲ್ಲಾ ತಾಲ್ಲೂಕುಗಳಿಗೆ ಹೋಲಿಸಿದರೆ ಈ ತಾಲ್ಲೂಕು ಚಿಕ್ಕಕೇಂದ್ರವಾಗಿದೆ. ಕೊರಟಗೆರೆ ಊರಿಗೂ ಮತ್ತು ಕೊರಟಗೆರೆ ದುರ್ಗಕ್ಕೂ ಒಂದೇ ಹೆಸರನ್ನು ಸೂಚಿಸಲಾಗಿದೆ. ಈ ದುರ್ಗವು ಸಮುದ್ರ ಮಟ್ಟದಿಂದ ೨೮೮೫ ಅಡಿ ಎತ್ತರದಲ್ಲಿದೆ. ಈ ಕೋಟೆಯನ್ನು ಮಣ್ಣು, ಕಲ್ಲಿನಿಂದ ನಿರ್ಮಿಸಿದ್ದು, ನಂತರ ಈ ಕೋಟೆಯನ್ನು ಯಾರೂ ಪುನರ್ ನಿರ್ಮಾಣ ಮಾಡಿಲ್ಲವಾದುದರಿಂದ ಈಗ ಕೋಟೆಯು ಸಂಪೂರ್ಣವಾಗಿ ನಾಶಗೊಂಡಿದೆ.

ಕರ್ನಾಟಕದ ಇತಿಹಾಸದ ಹಲವಾರು ಪಾಳೇಗಾರರಂತೆ ಕೊರಟಗೆರೆಯ ಪಾಳೇಗಾರನು ಸಹ ಗ್ರಾಮವನ್ನು ಸ್ಥಾಪಿಸಿ, ಬೆಟ್ಟದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿರುವುದು ಕಾಣಬಹುದಾಗಿದೆ. ಈ ಕೋಟೆ ಕೊತ್ತಲಗಳನ್ನು ನಿರ್ಮಿಸಿದ ರಣಭೈರೇಗೌಡನ ಮೂಲವಂಶಸ್ಥರು ಅವತಿ ಸಂಸ್ಥಾನಾಧೀಶ್ವರರು. ವಂಶದ ಮೊದಲ ರಣಭೈರೇಗೌಡನ ಮಗಳನ್ನ ಬೈಚನೆಂಬ ಪಾಳೇಗಾರನು ಮಾನಭಂಗ ಮಾಡಲು ಪ್ರಯತ್ನ ನಡೆಸಿದನು. ಇದರ ರಕ್ಷಣೆಯಿಂದ ರಾತ್ರೋರಾತ್ರಿ ಅವತಿಯನ್ನು ಬಿಟ್ಟು ಪಶ್ಚಿಮಾಭಿಮುಖವಾಗಿ ಹೊರಟು ಜಯಮಂಗಲಿ ದಡದಲ್ಲಿ ಬಿಡಾರ ಹೂಡಿದನು. ಅಲ್ಲಿನ ಸೌಂದರ್ಯಕ್ಕೆ ಬೆರಗಾಗಿ ಅಲ್ಲಿಯೇ ನೆಲಸಲು ಪ್ರಾರಂಭಿಸಿದನು. ಮೊದಲಿದ್ದ ಕೊರಮಪುರವನ್ನು ಹೊಳವನಹಳ್ಳಿಯೆಂದು ನಾಮಕರಣ ಮಾಡಿ, ಪಂಚಮುಖ ದೇವಸ್ಥಾನ, ಕಾಳಿಕಾಮಟೇಶ್ವರ ದೇವಸ್ಥಾನವನ್ನು ಪ್ರತಿಷ್ಠಾಪಿಸಿ, ಚಿಕ್ಕ ಸಂಸ್ಥಾನವಾಗಿ ಮಾಡಿಕೊಂಡನು.[೮೭]

ದೊಡ್ಡ ಭೈರೇಗೌಡನು ಕಾಲವಾದ ನಂತರ ತನ್ನ ಗಂಡು ಮಕ್ಕಳಾದ ಜಯಗೌಡ, ಯಲಹಂಕ ಕಟ್ಟಿ ನಂತರ ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ವಶಪಡಿಸಿಕೊಂಡು ರಾಜ್ಯವಾಳಿದರೆ, ಸಣ್ಣ(ರಣ) ಭೈರೇಗೌಡನು ಹೊಳವನ ಹಳ್ಳಿಯಲ್ಲಿ ನೆಲೆಸಿದನು. ತಿಮ್ಮೇಗೌಡನು ಸಗಟೂರು, ಜಂಗಮಕೋಟೆಗಳಲ್ಲಿ ರಾಜ್ಯ ಸ್ಥಾಪಿಸಿ, ಕೋಲಾರ, ಪುಂಗನೂರು ಮತ್ತು ಹೊಸಕೋಟೆಯ ಸ್ಥಾಪಕನೆನಿಸಿಕೊಂಡನು.[೮೮] ಸಣ್ಣಭೈರೇಗೌಡನು ಪಟ್ಟಕ್ಕೆ ಬಂದ ಮೇಲೆ ತನ್ನ ಪತ್ನಿಯೊಂದಿಗೆ ವ್ಯಾಸರಿಂದ ಆಕಾರ ಹೊಂದಿದ್ದ ಉದ್ರಮುಖ ಹನುಮಂತನ

ದರ್ಶನ ಪಡೆದ ನಂತರ ಆ ರಾತ್ರಿ ಸ್ವಪ್ನದಲ್ಲಿ ಆಶರೀರವಾಣಿಯೊಂದು ನಿನ್ನ ಗ್ರಾಮದ ಪಶ್ಚಿಮ ದಿಕ್ಕಿಗೆ ಅನತಿ ದೂರದ ಬೆಟ್ಟದಲ್ಲಿ ಗಂಗಾಧರೇಶ್ವರಸ್ವಾಮಿಯು ಉದ್ಭವಿಸಿರುವುದಾಗಿಯೂ ಅಲ್ಲಿ ಸಂಸ್ಥಾನ ನಿರ್ಮಿಸಬೇಕೆಂದು ನುಡಿದು ಮಾಯವಾಯಿತು. ಅದೇ ರೀತಿ ಪಾಳೇಗಾರನು ಸ್ವಪ್ನದ ಸ್ಥಳಕ್ಕೆ ಬಂದು ಉದ್ಭವ ಲಿಂಗದ ಮೇಲೆ ನೀರು ಹನಿ ಹನಿಯಾಗಿ ಬೀಳುತ್ತಿದ್ದನ್ನು ಗಮನಿಸಿ ಸ್ಥಳವು ಯೋಗ್ಯವಾಗಿದೆಯೆಂದು ಭಾವಿಸಿ ಅಲ್ಲಿಯೇ ನೆಲೆ ನಿಲ್ಲಲು ತೀರ್ಮಾನಿಸಿದನು.

ಈ ಬೆಟ್ಟವು ಕರಟಾಕಾರದಲ್ಲಿರುವುದರಿಂದ ಕೊರಟಗೆರೆಯೆಂದು ಹೆಸರಿಟ್ಟು, ಗ್ರಾಮವನ್ನು ಸ್ಥಾಪಿಸಿದನೆಂದು, ಜೊತೆಗೆ ರಾಜಧಾನಿಯನ್ನಾಗಿ ಮಾಡಿಕೊಂಡನೆಂದು ಎನ್.ಪದ್ಮನಾಭಯ್ಯರವರು ಹೇಳುತ್ತಾರೆ. ಕೊರಟಗೆರೆ ಕೋಟೆಯನ್ನು ಸ್ಥಾಪಿಸುವಾಗ ಹೆಚ್ಚು ಮಣ್ಣನ್ನು ಮತ್ತು ಸೈಜುಗಲ್ಲನ್ನು ಬಳಸಿ ಕಟ್ಟಿರುವುದು ಕಾಣಬಹುದು. ಈ ಕೋಟೆಯು ೧೬ನೇ ಶತಮಾನದ ಪೂರ್ವಾರ್ಧದ ಮೊದಲಲ್ಲಿ ನಿರ್ಮಿತವಾಗಿದೆ. ಸಣ್ಣ(ರಣ) ಭೈರೇಗೌಡ ಅಥವಾ ಸಣ್ಣ ಭೈರೇಗೌಡನು(ಸೋಲೆ ಅರಿಯದ ಸಿಂಹವಾಗಿದ್ದ ರಿಂದ 'ರಣ' ಎನ್ನುವ ಬಿರುದು ಬಳಕೆಯಾಗಿದೆ) ಕೋಟೆಯ ನಿರ್ಮಿಸಿದ ನಂತರದ ಕಾಲದಲ್ಲಿ ಬೇರೆ ಯಾವ ಅರಸರಿಂದಲೂ ಪುನರ್ ನಿರ್ಮಾಣಗೊಂಡಿಲ್ಲ. ಸಣ್ಣ ಭೈರೇಗೌಡನು ಮಧುಗಿರಿ ಮಹಾನಾಡ ಪ್ರಭು ಇಮ್ಮಡಿ ಚಿಕ್ಕಪ್ಪಗೌಡ(೧೫೨೬)ರ ಸಮಕಾಲೀನನಾಗಿದ್ದನು.

ಕೊರಟಗೆರೆ ಪಾಳೇಗಾರ ಮತ್ತು ಮಧುಗಿರಿ ಮಹಾನಾಡ ಪ್ರಭು ಇಮ್ಮಡಿ ಚಿಕ್ಕಪ್ಪಗೌಡನಿಗೂ ರಾಜ್ಯ ವಿಸ್ತರಣಾ ಕಾರ್ಯದಲ್ಲಿ ಆಗಾಗ್ಗೆ ಕದನಗಳು ನಡೆಯುತ್ತಲೇ ಇದ್ದವು. ಒಮ್ಮೆ ರಣಭೈರೇಗೌಡನು ತನ್ನ ಸೇನಾ ನಾಯಕರಾದ ಭೈಚೇಗೌಡ, ತಿಮ್ಮೇಗೌಡ, ಸಂಜೀವೇಗೌಡ ಮತ್ತು ರಾಮೇಗೌಡ ಇವರುಗಳೊಂದಿಗೆ ಯುದ್ಧಕ್ಕೆ ಬಂದನು. ಕೊರಟಗೆರೆ ಹತ್ತಿರವಿರುವ 'ಮಸುವಿನ ಕಲ್ಲು' ಬಳಿ ಇಬ್ಬರ ಸೈನ್ಯಗಳು ಸಂಧಿಸಿ ಯುದ್ಧ ಘೋರವಾಗಿ ನಡೆಯಿತು. ಸಮರದಲ್ಲಿ ಇಮ್ಮಡಿ ಚಿಕ್ಕಪ್ಪಗೌಡನ ಪೆಟ್ಟು ತಾಳಲಾರದೆ ಭೈರೇಗೌಡ ಹಿಮ್ಮೆಟ್ಟಿದನು.[೮] ಇಷ್ಟಾದರೂ ಭೈರೇಗೌಡನು ಅಲ್ಲಿಗೆ ಸುಮ್ಮನಾಗಲಿಲ್ಲ. ದಂಡಿಗೆ ಮುಂಜಾಗ್ರತೆಯಿಂದ ಕುಶಲ ಕೆಲಸಗಾರರಿಂದ ಆಯುಧಗಳನ್ನು ಮಾಡಿಸಿಟ್ಟನು. ಮತ್ತೆ ಮತ್ತೆ ಮಧುಗಿರಿಯ ಮಹಾನಾಡ ಪ್ರಭುಗಳಿಗೂ ರಣಭೈರೇಗೌಡನಿಗೂ ಕದನಗಳು ಸಾಮಾನ್ಯವಾಗಿದ್ದವು.

ಕೊರಟಗೆರೆ ಪಾಳೇಗಾರನು ಕಮ್ಮನ ಕೋಟೆಯ ಒಬ್ಬ ಹುಡುಗನನ್ನು ಆಪ್ತನಂತೆ ಸಾಕಿ ಆತನಿಗೆ ಸೇನಾಪತಿ ಮಾಡಿದನು. ಈತನು ರತ್ನಗಿರಿ ಮತ್ತು ಮಧುಗಿರಿ ಪಾಳೇಗಾರರಿಗೆ ಶಾಮಿಲಾಗಿ ರಣಭೈರೇಗೌಡನ ಜೀವನವನ್ನು ಮುಗಿಸಲು ಮುಂದಾದನು. ಅದೇ ಸಮಯಕ್ಕೆ ಬೆಂಗಳೂರು ಕಂಟೋನ್‌ಮೆಂಟ್ ನಿಂದ ಕೊರಟಗೆರೆ ಮಾರ್ಗವಾಗಿ ಕರ್ನೂಲ್‌ಗೆ ಹೋಗುತ್ತಿದ್ದ ಬ್ರಿಟೀಷ್ ಸೈನ್ಯದ ದಳಪತಿಯು ಈ ಪ್ರದೇಶದ ವಿಚಾರವನ್ನು ಪಾಳೇಗಾರನ ಆಪ್ತನಾಗಿದ್ದ ಲಿಂಗೇಗೌಡನಿಂದ ತಿಳಿದರು. ಕೊನೆಗೆ ಆತನನ್ನೇ ಬಂಧಿಸಿದರು. ಲಿಂಗೇಗೌಡನಿಗೆ ಪಾಳೆಯಪಟ್ಟಿನ ಒಡೆತನ ತೋರಿಸಿ ಮತ್ತು ಅಪಾರ ಧನರಾಶಿ ಹಾಗೂ ರಾಜ್ಯಾಧಿಕಾರದ

ಆಸೆಯನ್ನು ತೋರಿಸಿದರು. ಇವೆಲ್ಲವುಗಳಿಂದ ಲಿಂಗೇಗೌಡನಿಗೆ ಆಸೆ ಹೆಚ್ಚಾಗಿ, ಬುದ್ಧಿವಂತಿಕೆಯಿಂದ ಪಾಳೇಗಾರನನ್ನು ಮುಗಿಸಲು ಪಾಳೇಗಾರನ ರಹಸ್ಯಗಳನ್ನೆಲ್ಲಾ ಹೇಳಿದನು.[೯೦] ಈ ಹಿನ್ನೆಲೆಯಲ್ಲಿಯೇ ಲಿಂಗೇಗೌಡನನ್ನೇ ಬಳಸಿಕೊಂಡು ಪಾಳೇಗಾರನ ಚಲನವಲನ ವೀಕ್ಷಿಸಿದರು. ಪಾಳೆಯಾಗಾರನು ಶ್ರಾವಣಮಾಸದಲ್ಲಿ ನಿರಾಯುಧನಾಗಿ ಆಂಜನೇಯಸ್ವಾಮಿಯ ಪೂಜೆಗೆ ಬಂದಾಗ ಲಿಂಗೇಗೌಡನು ಬ್ರಿಟೀಷ್ ಸೈನಿಕರಿಗೆ 'ಹಿಡಿಯಿರಿ ಹಿಡಿಯಿರಿ' ಎಂದು ಹೇಳುತ್ತಾನೆ. ಆಗ ಪಾಳೇಗಾರನು ಲಿಂಗೇಗೌಡನು ನನ್ನನ್ನು ಮೋಸದಿಂದ ಮುಗಿಸಲು ಪ್ರಯತ್ನ ನಡೆಸಿದನೆಂದು ತಿಳಿದು, ಇನ್ನೇನು ಮಾಡಲು ತೋಚದೇ ಇದ್ದಾಗ ಆತ್ಮರಕ್ಷಣೆಯ ಬಾಕನ್ನು ತನ್ನ ತೋಳಿನ ಬದಿಯಿಂದ ತೆಗೆದು ತನ್ನ ಎದೆಗೆ ತಿವಿದುಕೊಂಡನು.[೯೧] ಇದರಿಂದ ಕೊರಟಗೆರೆಯ ಪಾಳೆಯಪಟ್ಟು ಸಂಪೂರ್ಣವಾಗಿ ನಾಶ ಹೊಂದಿತು.

ಕೊರಟಗೆರೆಯ ಇತಿಹಾಸವನ್ನು ಅರಿಯಲು ಸರಿಯಾದ ದಾಖಲೆಗಳು ದೊರೆತಿಲ್ಲ. ಕೋಟೆಯನ್ನು ಕಟ್ಟಿದವರು ಅವತಿಯ (ಸಣ್ಣ)ರಣ ಭೈರೇಗೌಡ ಎಂದು ಕೆಲವು ಲೇಖನಗಳಿಂದ ತಿಳಿಯಬಹುದು. ಆತನು ಎಷ್ಟರ ಕಾಲಘಟ್ಟದಲ್ಲಿದ್ದನು ಎಂಬುದು ನಿಖರವಾಗಿ ತಿಳಿಯಲಾಗಿಲ್ಲ. ಒಂದಂತೂ ಸ್ಪಷ್ಟ ಸಣ್ಣಭೈರೇಗೌಡನು ಮಧುಗಿರಿ ಮಹಾನಾಡ ಪ್ರಭುಗಳ ಇಮ್ಮಡಿ ಚಿಕ್ಕಪ್ಪಗೌಡನ ಸಮಕಾಲೀನನಾಗಿದ್ದನು. ಕೊರಟಗೆರೆ ಕೋಟೆಯನ್ನು ಹೈದರನ ಕಾಲದಲ್ಲಿ ನಾಶಗೊಳಿಸಲಾಗಿದೆ ಎಂದು ಕರ್ನಾಟಕ ಗ್ಯಾಜೆಟಿಯರ್ ನಲ್ಲಿ ತಿಳಿಸಲಾಗಿದೆ.

ಕೊರಟಗೆರೆ ಕೋಟೆಯ ಲಕ್ಷಣಗಳು

ಕೊರಟಗೆರೆಯ ಬೆಟ್ಟವನ್ನು ಮತ್ತು ಊರನ್ನು ಒಳಗೊಂಡಂತೆ ಕೋಟೆಯು ಸುತ್ತುವರೆದಿದೆ. ಇಲ್ಲಿನ ಕೋಟೆಗೋಡೆ ಮತ್ತು ಕೊತ್ತಲಗಳು ಹಾಳಾಗಿದ್ದು, ಅವಶೇಷಗಳನ್ನು ಮಾತ್ರ ಕಾಣಬಹುದು. ಇವುಗಳ ಆಧಾರದ ಮೇಲೆ ಅಲ್ಲಿಯ ಕೋಟೆಯ ರೂಪುರೇಷಗಳನ್ನು ತಿಳಿಯಬಹುದಾಗಿದೆ. ಊರನ್ನು ಒಳಗೊಂಡಂತೆ ಬೆಟ್ಟದ ತುದಿಯವರೆಗೂ ಏಳು ಸುತ್ತಿನ ಕೋಟೆಯನ್ನು ಒಳಗೊಂಡಿತ್ತೆಂದು ಇಲ್ಲಿನ ಸ್ಥಳೀಯರ ಅಭಿಪ್ರಾಯವಾಗಿದೆ. ಊರು ವಿಸ್ತಾರಗೊಂಡಂತೆಲ್ಲಾ ಕೋಟೆಯು ಸಂಪೂರ್ಣವಾಗಿ ನಾಶಗೊಂಡಿದೆ. ಬೆಟ್ಟದಲ್ಲಿ ಮಾತ್ರ ಕೋಟೆಯ ಅವಶೇಷಗಳನ್ನು ಕಾಣಬಹುದು.

ಇಲ್ಲಿ ಮಧ್ಯಮ ಗಾತ್ರದ ಹಾಗೂ ಸಣ್ಣ ಗಾತ್ರದ ಕಲ್ಲುಗಳನ್ನು ಬಳಸಿ ಕೋಟೆ ಗೋಡೆಯನ್ನು ನಿರ್ಮಿಸಲಾಗಿದೆ. ಬೆಟ್ಟದಲ್ಲಿರುವ ಬೃಹತ್ ಗುಂಡುಗಳನ್ನು ಕೊತ್ತಲಗಳನ್ನಾಗಿ ಮಾಡಿಕೊಳ್ಳಲಾಗಿದೆ. ಇವುಗಳ ಮೇಲೆ ನಿರ್ಮಿಸಲಾಗಿದ್ದ ಕಲ್ಲುಕಟ್ಟಡವು ಶಿಥಿಲಗೊಂಡಿದೆ. ಆದರೂ ಈ ಗುಂಡುಗಳು ಕೊತ್ತಲಗಳಾಗಿದ್ದವು ಎಂದು ಊಹಿಸಬಹುದು.

ಊರಿನ ಸುತ್ತಲೂ ನಿರ್ಮಾಣಗೊಂಡಿದ್ದ ಕೋಟೆಯ ಗೋಡೆಯು ಸಂಪೂರ್ಣವಾಗಿ ನಾಶವಾಗಿದ್ದು, ಅದರ ಪ್ರವೇಶ ದ್ವಾರವು ಪೂರ್ವದಿಕ್ಕಿನಲ್ಲಿ ಇತ್ತೆಂದು ಸ್ಥಳೀಯರು ಹೇಳುತ್ತಾರೆ. ಎರಡನೇ ಕೋಟೆ

ಗೋಡೆಯು ಬಿದ್ದು ಹೋಗಿದ್ದು, ಅಲ್ಲಲ್ಲಿ ಗೋಡೆಯ ತುಣುಕನ್ನು ಕಾಣಬಹುದು. ಇದರ ಪ್ರವೇಶದ್ವಾರವು ಪೂರ್ವ ದಿಕ್ಕಿಗಿದೆ. ದ್ವಾರವನ್ನು ನಾಲ್ಕು ಚೌಕಾಕಾರದ ಕಂಬಗಳಿಂದ ನಿರ್ಮಿಸಿದ್ದು, ಇವುಗಳಿಗೆ ಯಾವುದೇ ರೀತಿಯ ಉಬ್ಬುಶಿಲ್ಪಗಳನ್ನು ಕೆತ್ತಿಲ್ಲಾ, ಈ ದ್ವಾರದ ಪಕ್ಕದಲ್ಲಿರುವ ಕೋಟೆಯು ಶಿಥಿಲಗೊಂಡಿದೆ. ದ್ವಾರವನ್ನು ಒಳಪ್ರವೇಶಿಸಿದ ನಂತರ ಬಲಭಾಗಕ್ಕೆ ತಿರುಗಿಕೊಂಡು ಉತ್ತರದ ದಿಕ್ಕಿಗೆ ಸಾಗಬೇಕು. ಕೋಟೆಯ ಗೋಡೆಯು ಬಲಭಾಗದಲ್ಲಿಯೇ ನಿರ್ಮಾಣಗೊಂಡಿದೆ. ಇದೇ ಪ್ರದೇಶದಲ್ಲಿ ಎತ್ತರವಾದ ಕೊತ್ತಲವನ್ನು ನಿರ್ಮಿಸಿದ್ದು, ಇದನ್ನು ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಇದಕ್ಕೆ ಗಾರೆಯ ಅಥವಾ ಮಣ್ಣಿನ ಲೇಪನವನ್ನು ಮಾಡಲಾಗಿದೆ. ಈ ಕೋಟೆಗೆ ಎತ್ತರವಾದ ಕೊತ್ತಲವೆನ್ನಬಹುದು. ಮೂರನೇ ಕೋಟೆ ಮತ್ತು ಅದರ ಬಾಗಿಲು ಸಂಪೂರ್ಣವಾಗಿ ನಾಶಗೊಂಡಿದೆ. ಇದರ ಮಧ್ಯದಲ್ಲಿ ಪಾಳೇಗಾರನದು ನಾಣ್ಯವನ್ನು ಟಂಕಿಸುವ 'ಟಂಕಶಾಲೆ' ಇತ್ತೆಂದು ಹೇಳುತ್ತಾರೆ. ಗೌತಮ ಮಹರ್ಷಿಯ ದೇವಾಲಯ, ಕುದುರೆ ಲಾಯ, ಕಣಜಗಳ ಅವಶೇಷಗಳನ್ನು ಕಾಣಬಹುದು.

ನಾಲ್ಕನೆಯ ಕೋಟೆಯು ಅಲ್ಪಸ್ವಲ್ಪ ಸುಸ್ಥಿತಿಯಲ್ಲಿದ್ದು, ಅದು ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕೋಟೆಯ ಆಯಕಟ್ಟಿನ ಸ್ಥಳದಲ್ಲಿ ಒಟ್ಟು ನಾಲ್ಕು ಕೊತ್ತಲಗಳನ್ನು ನಿರ್ಮಾಣ ಮಾಡಲಾಗಿದೆ. ಕೋಟೆಯ ಮಧ್ಯಭಾಗದಲ್ಲಿ ಗಂಗಾಧರೇಶ್ವರ ದೇವಾಲಯ, ಅರಮನೆ ಆವರಣ, ದೊಣೆ, ಮದ್ದಿನ ಕಣಜ ಹಾಗೂ ಇನ್ನಿತರೇ ಅಧಿಕಾರಿಗಳ ವಸತಿಗೃಹಗಳು ಈ ಪ್ರದೇಶದಲ್ಲಿ ಇದ್ದುದರಿಂದ ಈ ಕೋಟೆಗೆ ಬಹಳ ಮಹತ್ವದ ಪಾತ್ರವನ್ನು ನೀಡಲಾಗಿತ್ತು. ಹಿನ್ನೆಲೆಯಲ್ಲಿ ಕೋಟೆಗೆ ಎತ್ತರವಾದ ವೃತ್ತಕಾರದ ಕೊತ್ತಲಗಳನ್ನು ನಿರ್ಮಾಣ ಮಾಡಲಾಗಿದೆ. ಕೊತ್ತಲಗಳು ಕೋಟೆಯೊಳಗಿರುವ ಸ್ಮಾರಕಗಳಿಗೆ ರಕ್ಷಣೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು.

ಐದು, ಆರನೇ ಮತ್ತು ಏಳನೇ ಕೋಟೆಯು ಬೆಟ್ಟದ ತುದಿಗೆ ಸಾಗುವ ದಾರಿಯಲ್ಲಿ ನಿರ್ಮಾಣಗೊಂಡಿದೆ. ಒಂದು ಬಾಗಿಲನ್ನು ಪೂರ್ವದಿಂದ ಪ್ರವೇಶಿಸಿದರೆ, ಇನ್ನೆರಡು ಬಾಗಿಲನ್ನು ಉತ್ತರದಿಂದ ಕ್ರಮಿಸಬೇಕು. ಇಲ್ಲಿಯ ಕೋಟೆಗೋಡೆಯು ನಾಶಹೊಂದಿದ್ದು, ಅವಶೇಷಗಳು ಮಾತ್ರ ಕಂಡುಬರುತ್ತದೆ. ಬೆಟ್ಟದ ತುದಿಯು ವಿಶಾಲ ಪ್ರದೇಶವನ್ನು ಹೊಂದಿದೆ. ಇಲ್ಲಿ ಬಸವಣ್ಣ ವಿಗ್ರಹವಿರುವ ಒಂದು ಗುಡಿಯಿದೆ. ಇದನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ.

ಕೋಟೆಯಲ್ಲಿರುವ ದೇವಾಲಯಗಳಲ್ಲಿ ಇಲ್ಲಿ ಗಂಗಾಧರೇಶ್ವರ ದೇವಾಲಯ, ಗೌತಮ ಋಷಿಯ ದೇವಾಲಯ ಮತ್ತು ಬಸವಣ್ಣ ದೇವಾಲಯ ಪ್ರಮುಖವಾದವು.

ಗಂಗಾಧರೇಶ್ವರ ದೇವಾಲಯ : ಈ ದೇವಾಲಯವು ಬೆಟ್ಟದ ಮಧ್ಯ ಭಾಗದಲ್ಲಿ ನಿರ್ಮಾಣಗೊಂಡಿದೆ. ಇದು ಪೂರ್ವಾಭಿಮುಖವಾಗಿದ್ದು, ಇದರ ಬುಡದಲ್ಲಿ ದೊಡ್ಡ ದೊಣೆಯಿದೆ. ಇದರ ನೀರು ಗಂಗಾಧರೇಶ್ವರ

ದೇವಾಲಯಕ್ಕೆ ಮಾತ್ರ ಮೀಸಲಾಗಿತ್ತೆಂದು ಹೇಳುತ್ತಾರೆ. ಪ್ರಾರಂಭದಲ್ಲಿ ಒಂದು ಉದ್ಭವ ಲಿಂಗವಿದ್ದು, ಇದಕ್ಕೆ ಸದಾಕಾಲ ನೀರು ಬೀಳುತ್ತಿತ್ತೆಂದು, ಅದರ ನೀರನ್ನು ಪೋಲಾಗದಂತೆ ಅಷ್ಟಗೋಡೆ ನಿರ್ಮಿಸಲಾಗಿದೆ ಎನ್ನುತ್ತಾರೆ. ಈ ಉದ್ಭವ ಲಿಂಗಕ್ಕೆ ದೇವಸ್ಥಾನವನ್ನು ನಿರ್ಮಿಸಲು ಹೊಳವನಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಸಣ್ಣಭೈರೇಗೌಡರಿಗೆ ಅಶರೀರವಾಣಿಯೊಂದು ಹೇಳಿದ್ದರಿಂದ ಇಲ್ಲಿ ಕೋಟೆ ಕೊತ್ತಲವನ್ನು ನಿರ್ಮಿಸಿ, ಉದ್ಭವಲಿಂಗಕ್ಕೆ ದೇವಾಲಯ ನಿರ್ಮಿಸಿದನೆಂದು ಸ್ಥಳೀಯರಿಂದ ತಿಳಿದುಬರುತ್ತದೆ.

ಈ ದೇವಾಲಯದಲ್ಲಿ ಗರ್ಭಗೃಹ, ಸಭಾಮಂಟಪವಿದೆ. ಗರ್ಭಗೃಹದಲ್ಲಿ ಉದ್ಭವ ಲಿಂಗವಿದೆ. ಇದು ಪೂರಾ ಆಕಾರವನ್ನು ಹೊಂದಿದರೆ ಪ್ರಪಂಚ ಪ್ರಳಯವಾಗುತ್ತದೆ ಎನ್ನುವ ನಂಬಿಕೆಯಿದೆ. ಇದರ ಮುಂದಿನ ಸಭಾಮಂಟಪವು ಕೆತ್ತನೆಯ ಶಿಲ್ಪಗಳನ್ನು ಒಳಗೊಂಡ ಕಂಬಗಳಿವೆ. ಇದರ ಮುಂದೆ ಚಂಡಿಕೇಶ್ವರ ಒಂದು ಚಿಕ್ಕ ವಿಗ್ರಹವಿದೆ. ಇದು ಕಿವುಡು ದೇವರೆಂದು, ಇದಕ್ಕೆ ಕೈಮುಗಿವವರು, ಎರಡು ಕೈಯಿಂದ ಮೂರು ಬಾರಿ ಚಪ್ಪಳೆ ಹೊಡೆಯಬೇಕು ಎನ್ನುತ್ತಾರೆ. ಕಾರಣ ಕಿವುಡು ದೇವರಾಗಿದ್ದರಿಂದ ಚಪ್ಪಾಳೆಯ ಮುಖಾಂತರ ಕೈಮುಗಿದು ಬೇಡಿಕೊಳ್ಳಬೇಕೆನ್ನುತ್ತಾರೆ. ಸದ್ಯದಲ್ಲಿ ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದು, ಪ್ರತಿ ಕಾರ್ತಿಕ ಮಾಸದಲ್ಲಿ ಕಲ್ಯಾಣೋತ್ಸವ, ರಥೋತ್ಸವ, ತೆಪ್ಪೋತ್ಸವ ಇನ್ನಿತರೆ ಆಚರಣೆಗಳನ್ನು ನೆರವೇರಿಸಲಾಗುತ್ತದೆ.

ಸಿರಾ ಕೋಟೆ

ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಮಾರ್ಗದಲ್ಲಿ ಸಿಗುವ ಸಿರಾ ನಗರವು ತುಮಕೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಜಿಲ್ಲಾ ಕೇಂದ್ರದಿಂದ ೫೦ ಕಿ.ಮೀ ದೂರದಲ್ಲಿದೆ. ಈಗ ಇದು ಬಯಲು ಪ್ರದೇಶದಿಂದ ಕೂಡಿದ್ದಾಗಿದೆ. ಎಂ.ವಿ.ಚಿತ್ರಲಿಂಗಯ್ಯನವರು ಸಿರಾವನ್ನು ಶಿಬಿರಕಂ-ಶಿವಿರಯಂ-ಸಿಇರಯಂ-ಸೀರ್ಯ ಎಂದು ಉಲ್ಲೇಖಿಸಿದ್ದಾರೆ.[೨]

ಸಿರಾವನ್ನು ಜನಪದ ಸಾಹಿತ್ಯವು 'ಸಿರಿಯಣ್ಣ, ದೇವಣ್ಣರೆಂಬ ಸೋದರರು ಹಾಲು ಹಯನಗಳ ಸಿರಿವಂತರಾಗಿದ್ದರು. ಇವರು ಹಾಲು, ಮಜ್ಜಿಗೆ, ಬೆಣ್ಣೆ ತುಪ್ಪ ಮಾರಿ ಬಂದ ಸಂಪಾದನೆಯಲ್ಲಿ ಗ್ರಾಮವೊಂದನ್ನು ನಿರ್ಮಿಸಿದರು. ನಂತರದ ದಿನಗಳಲ್ಲಿ ಆ ಪುಟ್ಟಗ್ರಾಮದ ಕಾಡಿಗೆ ರತ್ನಗಿರಿಯ ರಂಗಪ್ಪನಾಯಕ ಬೇಟೆಗಾಗಿ ಬಂದಾಗ ದಣಿವಾಗುತ್ತದೆ. ಅದನ್ನು ನೀಗಿಸಲು ಸಿರಿಯಣ್ಣ ದೇವಣ್ಣರಿರುವ ಗ್ರಾಮಕ್ಕೆ ಬರುವಾಗ ಬೇಟೆ ನಾಯಿಯ ಮೇಲೆ ಮೊಲವು ಸವಾರಿ ಮಾಡುತ್ತಿರುತ್ತದೆ. ಇದನ್ನು ಕಂಡು ಬೆರಗಾಗಿ ಗಂಡು ಭೂಮಿಯೆಂದು ಭಾವಿಸಿ ಕೋಟೆ ಕೊತ್ತಲು ಕಟ್ಟಲು ಇಲ್ಲಿಯ ಸಿರಿಯಣ್ಣ, ದೇವಣ್ಣ ಸಹಾಯ ಕೋರುತ್ತಾನೆ. ಕೋರಿಕೆಯಂತೆ ಸಹಾಯ ನೀಡುತ್ತಾರೆ. ಈ ನೆನಪಿಗಾಗಿ ಗ್ರಾಮಕ್ಕೆ ದೇವಣ್ಣ ಸಿರಿಯ ಎಂದು ಹೆಸರಿಡುತ್ತಾನೆ. ಅದು ಸಿರಿಯ ಸಾಡಾಗಿ, ಇಂದು ಸಿರಾ ನಗರದ ವಿಕಾಸಕ್ಕೆ ಕಾರಣವಾಗಿದೆ

ಎಂಬ ಜನಪದ ಐತಿಹ್ಯವೊಂದು ಜನಜನಿತವಾಗಿದೆ.”[೯೩] ೯ ಮತ್ತು ೧೨ನೇ ಶತಮಾನಕ್ಕೆ ಸೇರಿದ ಶಾಸನಗಳನ್ನು ಇಲ್ಲಿ ಉಲ್ಲೇಖಿಸಿದರೆ ಜನಪದ ಐತಿಹ್ಯವು ಸುಳ್ಳೆಂಬುದು ಸ್ಪಷ್ಟವಾಗುತ್ತದೆ. ಹೇಮಾವತಿಯ ನೊಳಂಬವಾಡಿಗೆ ಸಿರಾ ಪ್ರದೇಶವು ಸೇರಿತ್ತೆಂದು ಬರಗೂರಿನ ಶಾಸನ “ಸೀರೆನಾಡ ನಾನ್ದೂರವಿತ್ತಂ”[೯೪] ಎಂದು ಹೇಳಿದೆ. ಇನ್ನೊಂದು ಹೊಯ್ಸಳರ ಬಲ್ಲಾಳನ ಸಾಮಂತನೆನ್ನುವ ಹೊಳಕಲ್ಲು ಗಂಗನಾಯಕನ ಮಗ ಬೊಮ್ಮನಾಯಕನು ಸಿರಾ ಸೀಮೆಗೆ ಸೇರಿದವನಾಗಿದ್ದನು. “ರಾಯದುರ್ಗವೇಂಠೆ, ಸೀರೆಹ ಸೀಮೆ, ತರಿಗೆರೆಯೊಳಗಣ ಹೊಳಕಲ್ಲಿ” ಎಂದು ಹೆಸರಿಸಿದೆ.[೯೫]

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿಯೇ ಸಿರಾ ಅಷ್ಟೊಂದು ಪ್ರಸಿದ್ಧಿ ಪಡೆಯದಿದ್ದರೂ ಬಿಜಾಪುರದ ಅದಿಲ್ ಷಾಹಿ ಕಾಲಕ್ಕೆ ಹೆಚ್ಚು ಪ್ರಸಿದ್ಧಿ ಪಡೆಯಿತು. ಸಿರಾ ಪ್ರದೇಶವು ರತ್ನಗಿರಿ ಪಾಳೇಗಾರನಾಗಿದ್ದ ರಂಗಪ್ಪರಾಜನ ಅಧೀನದಲ್ಲಿತ್ತು. “ಒಂದು ದಿನ ರತ್ನಗಿರಿ ಪಾಳೇಗಾರ ರಂಗಪ್ಪನಾಯಕನು ತನಗೆ ಸೇರಿದ್ದ ಸಿರಾ ಅರಣ್ಯ ಪ್ರದೇಶಕ್ಕೆ ಬೇಟೆಯಾಡಲು ಬಂದನು. ಈತನಿಗೆ ದಣಿವಾಗಿತ್ತು. ಈ ದಣಿವನ್ನು ನೀಗಿಕೊಳ್ಳಲು ತಂಗಿದನು. ಈ ಪ್ರಕೃತಿಯಿಂದ ಸಂತೋಷಗೊಂಡು ಇಲ್ಲಿ ಕೋಟೆ ನಿರ್ಮಿಸಿದರೆ ಬಹಳ ಚೆನ್ನಾಗಿರುತ್ತದೆಂದು ಭಾವಿಸಿ, ಕೋಟೆ ನಿರ್ಮಾಣ ಪ್ರಾರಂಭಿಸಿದನು.[೯೬] ಈ ವೇಳೆಗೆ ಬಿಜಾಪುರದ ಅದಿಲ್ ಶಾಹಿಯವರ ದಾಳಿಗೆ ನಿರ್ಮಾಣದ ಕೋಟೆ ಸಿಗಬೇಕಾಯಿತು. ಇದರಿಂದ ಕೋಟೆಯ ನಿರ್ಮಾಣ ಕುಂಠಿತವಾಯಿತು.

ಸಿರಾದ ಪಾಳೇಗಾರರನ್ನು ಗುರುತಿಸುವಲ್ಲಿ ಇತಿಹಾಸಜ್ಞರು ಒಂದು ನಿರ್ದಿಷ್ಟ ನಿಲುವಿಗೆ ಬರಲು ಸೋತಿದ್ದಾರೆ ಎನ್ನಬಹುದು. ಇಲ್ಲಿ ಸಿರಾ, ಹರತಿ, ಚಿತ್ರದುರ್ಗ, ರತ್ನಗಿರಿ, ದೊಡ್ಡೇರಿ, ನಿಡುಗಲ್ಲು ಈ ಪ್ರದೇಶಗಳಲ್ಲಿ ಆಳ್ವಿಕೆ ಮಾಡುವ ಪಾಳೇಗಾರರು ಒಂದೇ ಕಾಲಘಟ್ಟದಲ್ಲಿ ರಂಗಪ್ಪ ನಾಯಕರೆಂಬವವರು ಹಲವರು ಒಂದೇ ಹೆಸರುಳ್ಳವರು ಇದ್ದಾರೆ. ಆದುದರಿಂದ ನಿರ್ದಿಷ್ಟವಾಗಿ ಯಾವ ರಂಗಪ್ಪ ನಾಯಕನೆಂದು ಹೇಳಲು ಹೆಣಗಾಡಬೇಕಾಗುತ್ತದೆ.

ವಿಜಯನಗರದ ಅರಸರು ಹರತಿಯ ಲಕ್ಷ್ಮೀಪತಿನಾಯಕರಿಗೆ ಅಮರ ಮಾಗಣಿಯಾಗಿ ಸಿರಿಯಾ, ಅಗಳಿ, ದೊಡ್ಡೇರಿ ಸೀಮೆಗಳನ್ನು ಕೊಟ್ಟಿದ್ದನ್ನು ಮಧುಗಿರಿ ಶಾಸನವು ಉಲ್ಲೇಖಿಸುತ್ತದೆ.[೯೭] ವಿಜಯನಗರ ಪತನಾನಂತರ ಲಕ್ಷ್ಮೀಪತಿನಾಯಕರು ಸಿರಾ ಸೀಮೆಯಲ್ಲಿ ನೆಲೆಸಿರಬೇಕು. ಈತನ ಮಕ್ಕಳು ಪೆನುಗೊಂಡೆಯಲ್ಲಿ ಆಳ್ವಿಕೆ ನಡೆಸಿದ ವಿಜಯನಗರದ ಅರಸರ ಸಾಮಂತ ನಾಯಕರೆನಿಸಿದರು.[೯೮] ಹರತಿಯ ಲಕ್ಷ್ಮೀಪತಿ ನಾಯಕರಿಗೆ ರಂಗಪ್ಪನಾಯಕ ಮತ್ತು ಚಿಕ್ಕರಂಗಪ್ಪನಾಯಕರೆಂಬ ಮಕ್ಕಳಿದ್ದು, ಇವರಲ್ಲಿ ಚಿಕ್ಕರಂಗಪ್ಪ ನಾಯಕನು ಹರತಿಯ ಸೀಮೆಯನ್ನು ಆಳಿದರೆ[೯೯] ರಂಗಪ್ಪನಾಯಕನು ಸಿರಾ ಸೀಮೆಯನ್ನು ಆಳಿದನು.[೧೦೦] ರಂಗಪ್ಪನಾಯಕನ ಮಗ ಇಮ್ಮಡಿ ರಂಗಪ್ಪನಾಯಕ, ಈತನ ಮಗ ಮುಮ್ಮಡಿ ರಂಗಪ್ಪನಾಯಕ[೧೦೧] ಇವರು ಸಿರಾ ಸೀಮೆಯನ್ನು ಆಳಿದುದರ ಬಗ್ಗೆ ಶಾಸನಗಳಿಂದ ಗುರುತಿಸಬಹುದಾಗಿದೆ.

ಸಿರಾ ಮತ್ತು ರತ್ನಗಿರಿಯ ವಂಶಾವಳಿ

ದುಂಡಪ್ಪನಾಯಕ

ಲಕ್ಷ್ಮೀಪತಿನಾಯಕ (ಕ್ರಿ.ಶ.೧೫೬೯)

ರಂಗಪ್ಪನಾಯಕ(ಕ್ರಿ.ಶ.೧೫೮೦) — ಚಿಕ್ಕರಂಗಪ್ಪನಾಯಕ(ಕ್ರಿ.ಶ.೧೫೯೨)

ಇಮ್ಮಡಿ ರಂಗಪ್ಪನಾಯಕ(ಕ್ರಿ.ಶ.೧೬೧೨)

ಮುಮ್ಮಡಿ ರಂಗಪ್ಪನಾಯಕ(ಕ್ರಿ.ಶ.೧೬೨೬)[೧೦೨]

ರತ್ನಗಿರಿ ವಂಶಾವಳಿ

ಸಮ್ಮೇಟ ಸರ್ಜ ಕೃಷ್ಣಪ್ಪನಾಯಕ

ರಂಗಪ್ಪರಾಜ

ಕಸ್ತೂರಿ ರಂಗಪ್ಪರಾಜ(ಕ್ರಿ.ಶ.೧೬೨೧)[೧೦೩]

ಸಮ್ಮೇಟ ಸರ್ಜ ಕೃಷ್ಣಪ್ಪ ನಾಯಕನ ವಂಶವನ್ನು ರತ್ನಗಿರಿ-ಮಿಡಿಗೇಶಿ ಪಾಳೇಗಾರರೆಂದು ವಂಶಾವಳಿಯಲ್ಲಿ ಚಿತ್ರಲಿಂಗಯ್ಯರವರು ಗುರುತಿಸಿದ್ದಾರೆ.[೧೦೪]

ಚಿತ್ರದುರ್ಗ ಮತ್ತು ಸಿರಾದ ಸಂಬಂಧವನ್ನು ಗಟ್ಟಿಗೊಳಿಸಲು ಕಸ್ತೂರಿ ರಂಗಪ್ಪನು ತನ್ನ ಮಗಳು ಓಬವ್ವೆಯನ್ನು ಸಿರಾದ ರಂಗಪ್ಪನ ಮಗ ಕೃಷ್ಣಪ್ಪನಿಗೆ ಮದುವೆ ಮಾಡಿಕೊಟ್ಟನು. ನಂತರ ಸ್ವಲ್ಪ ದಿವಸದಲ್ಲೇ ಕೃಷ್ಣಪ್ಪನು ಚಿತ್ರದುರ್ಗದ ಮೇಲೆ ದ್ವೇಷ ಮಾಡಲಾರಂಭಿಸಿದ. ಇದರ ಫಲವಾಗಿ ಸಿರಾ ಮತ್ತು ಚಿತ್ರದುರ್ಗದವರ ಸಂಬಂಧಗಳು ಮುರಿದು ಬೀಳಲು ಕಾರಣವಾಯಿತು.[೧೦೫]

ರಂಗಪ್ಪನಾಯಕನು ಯಾವ ಸ್ಥಳದಲ್ಲಿ ಯುದ್ಧಮಾಡಿ ಮಡಿದನು ಎನ್ನುವ ತೊಡಕು ಎದ್ದು ಕಾಣುತ್ತದೆ. ಇಲ್ಲಿ ಮೂರು ತಜ್ಞರು ಹೇಳಿದ ಅಂಶಗಳನ್ನು ಉಲ್ಲೇಖಿಸಬಹುದು. ಎಂ.ಎಸ್. ಪುಟ್ಟಣ್ಣರವರು "ಕ್ರಿ.ಶ.೧೬೩೮ರಲ್ಲಿ ಸಿರಾದ ರಂಗಪ್ಪನಾಯಕನು ಹಿರಿಯೂರಿನ ಮೇಲೆ ಮುತ್ತಿಗೆ ಹಾಕಿದನು. ಹಿರಿಯೂರಿನ ಕೆಂಚಣ್ಣ ನಾಯಕನ ನೆರವಿಗೆ ಚಿತ್ರದುರ್ಗದ ಕಸ್ತೂರಿ ರಂಗಪ್ಪನಾಯಕರು ಧಾವಿಸಿದ್ದು, ಕೊನೆಗೆ ಕೆರೆಯ ಬಳಿ ಯುದ್ಧವಾಯಿತು. ಈ ಯುದ್ಧದಲ್ಲಿ ಸಿರಾದ ರಂಗಪ್ಪನಾಯಕನು ಮರಣ ಹೊಂದಿದನು. ಸಿರಾದ ಸೈನ್ಯದಲ್ಲಿ ಹನ್ನೆರಡು ಸಾವಿರ ಕಾಲಾಳುಗಳೂ, ಮೂರು ಸಾವಿರ ಕುದುರೆಗಳೂ ಇದ್ದವೆಂದು ಬಣ್ಣಿಸುತ್ತಾರೆ[೧೦೬] ಎಚ್.ವಿ.ವೀರನಾಯಕರು. 'ಗುಮ್ಮಳ್ಳಿ ಕದನ'ವೆಂಬ ಜನಪದ ಗೀತೆಗಳ ಆಧಾರದ ಮೇಲೆ ತರೀಕೆರೆ ಸಂಸ್ಥಾನಿಕ ಪುವ್ವಲ ಕೆಂಗಣ್ಣನಿಗೂ ಮತ್ತು ಸಿರಾದ

ರಂಗಪ್ಪನಾಯಕನಿಗೂ ಗುಮ್ಮನಹಳ್ಳಿ ಪ್ರದೇಶದಲ್ಲಿ ಯುದ್ಧ ನಡೆಯಿತು. ಅದರಲ್ಲಿ ಸಿರಾದ ರಂಗಪ್ಪನಾಯಕನು ಕೊಲ್ಲಲ್ಪಟ್ಟನು.[೧೦೭]

ಚಿತ್ರಲಿಂಗಯ್ಯನವರು ಕ್ರಿ.ಶ.೧೬೨೧ರಲ್ಲಿ ತ್ರಾಮಶಾಸನದಲ್ಲಿ ಉಲ್ಲೇಖಿಸಿರುವ ಕಸ್ತೂರಿ ರಂಗಪ್ಪ ರಾಜುವಿನ ಸಹೋದರ ರಂಗಪ್ಪರಾಜು, ಹಿರಿಯೂರು ಮುತ್ತಿಗೆಯಲ್ಲಿ ಮರಣ ಹೊಂದಿದನೆಂದೂ, ಕಸ್ತೂರಿ ರಂಗಪ್ಪರಾಜುವಿನ ಮಗ ರಂಗಪ್ಪನಾಯಕನು ಗುಮ್ಮನಹಳ್ಳಿ ಕದನದಲ್ಲಿ ಮರಣ ಹೊಂದಿದನೆಂದು ಗುರುತಿಸಿದ್ದಾರೆ.''[೧೦೮] ಈ ಮೂವರು ಹೇಳಿರುವ ಪ್ರಕಾರ 'ಗುಮ್ನಳ್ಳಿ ಕದನ' 'ಹಿರಿಯೂರು'ನಲ್ಲಿ ನಡೆದ ಕದನದ ಜಾಗಗಳಂತೂ ಸರಿ, ಆದರೆ ಸಿರಾದ ನಾಯಕನನ್ನು ಗುರುತಿಸಲು ಹೆಸರಿನಿಂದ ತೊಡಕುಂಟಾಗಿದೆ.

ಸಿರಾದಲ್ಲಿ ನವಾಬರ ಆಳ್ವಿಕೆ

ರತ್ನಗಿರಿಯ ರಂಗಪ್ಪನಾಯಕ ಸಿರಾದಲ್ಲಿ ಕೋಟೆಯನ್ನು ಕಟ್ಟುತ್ತಿದ್ದನು. ಆ ವೇಳೆಗೆ ಉತ್ತರದ ಕಡೆ ನವಾಬರು ಬಲಿಷ್ಠರಾಗಿದ್ದರು. ಬಿಜಾಪುರದ ಆದಿಲ್‌ಷಾನು ಕ್ರಿ.ಶ.೧೬೩೭ರ ಹೊತ್ತಿಗೆ ತನ್ನ ಸೇನಾ ದಂಡನಾಯಕನಾದ ರಣದುಲ್ಲಾಖಾನನಿಗೆ ಶ್ರೀಮಂತವಾಗಿ ಮೆರೆಯುತ್ತಿದ್ದ ಇಕ್ಕೇರಿಗೆ ದಾಳಿ ಮಾಡಲು ಕಳುಹಿಸಿದನು. ಇವನ ಜೊತೆಗೆ ಸಹ ದಂಡನಾಯಕನಾಗಿ ಮಲ್ಲಿಕ್‌ರಿಹಾನ್‌ನನ್ನು ಜೊತೆಗೂಡಿಸಿದನು. ಇಬ್ಬರೂ ಇಕ್ಕೇರಿಯನ್ನು ಆಕ್ರಮಿಸಿದಾಗ ವೀರಭದ್ರನಾಯಕನು ಭುವನಗಿರಿಯಲ್ಲಿ ಆಶ್ರಯ ಪಡೆದನು. ಕೊನೆಗೆ ಈತನನ್ನು ಶರಣಾಗುವಂತೆ ಮಾಡಿ ೧೮ ಲಕ್ಷ ಹಣವನ್ನು ಕೊಡಲು ಜೊತೆಗೆ ಅರ್ಧರಾಜ್ಯವನ್ನು ಬಿಟ್ಟುಕೊಡಬೇಕಾಯಿತು.[೧೦೯]

ಇಕ್ಕೇರಿಯ ಗೆಲುವಿನಿಂದ ಬಸವಪಟ್ಟಣದ ಕೆಂಗಹನುಮನೊಡನೆ ರಣದುಲ್ಲಾಖಾನನು ಸಿರಾ ಕೋಟೆಗೆ ಮುತ್ತಿಗೆ ಹಾಕಿದನು. ಆ ಕೋಟೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದ ರತ್ನಗಿರಿಯ ಪಾಳೇಗಾರ ರಂಗಪ್ಪರಾಜು ಬಲವಾಗಿ ಪ್ರತಿಭಟಿಸಿದನು. ಯುದ್ಧ ಬಹಳ ದಿನಗಳ ಕಾಲ ಮುಂದುವರಿದು, ಖಾನನು ಸಿರಾವನ್ನು ಲೂಟಿ ಮಾಡಿ ರಂಗಪ್ಪನನ್ನು ಕೊಂದು ಹಾಕಿದನು. ಸಿರಾ ಮತ್ತು ಅದರ ಅವಲಂಬಿತ ಪ್ರಾಂತ್ಯವನ್ನು ಗೆದ್ದು, 'ಮಲ್ಲಿಕ್‌ರಿಹಾನ್ ಎಂಬುವನನ್ನು ಈ ಭಾಗಕ್ಕೆ ಸುಭೇದಾರನನ್ನಾಗಿ ನೇಮಕ ಮಾಡಿದನು.'[೧೧೦] ಮಲ್ಲಿಕ್‌ರಿಹಾನ್‌ನ ಸುಭೇದಾರಿಕೆಯಲ್ಲಿ ಸಿರಾ ಪಟ್ಟಣವು ಅತ್ಯಂತ ವೈಭವದಿಂದ ಕೂಡಿತ್ತು. ಈತನ ಕಾಲದಲ್ಲಿ ಬಂಡಾಯವೇಳುತ್ತಿದ್ದ ನಾಯಕ ಮತ್ತು ಪಾಳೇಗಾರರನ್ನು ಹುಟ್ಟಡಗಿಸುವಲ್ಲಿ ಯಶಸ್ವಿಯಾದನು. ರಿಹಾನ್‌ನು ಹಲವಾರು ಬಾರಿ ಬಿಜಾಪುರದ ಸೈನ್ಯದೊಂದಿಗೆ ಯುದ್ಧಗಳಲ್ಲಿ ಭಾಗವಹಿಸಿ ಜಯಕ್ಕೆ ಕಾರಣವಾಗಿದ್ದನು. ಅದರಲ್ಲಿ ಮೈಸೂರು ಅರಸರೊಂದಿಗೆ ಯುದ್ಧಮಾಡಿ ಕಂಠೀರವ ನರಸರಾಜ ಒಡೆಯರ ವಿರುದ್ಧ ಸೋಲನ್ನನುಭವಿಸಲಾಯಿತು.[೧೧೧] ಇದಲ್ಲದೆ ಮಲ್ಲಿಕ್‌ರಿಹಾನ್‌ನು ತಿರುಪತ್ತೂರು ಕೋಟೆ, ಕಾವೇರಿ ಪಟ್ಟಣಂ, ರಾಯದುರ್ಗ, ಕನಕಗಿರಿ, ರತ್ನಗಿರಿ, ಅರ್ಜುನಕೋಟೆ, ದಾಲಿನ ಕೋಟೆಗಳ ಆಕ್ರಮಣದಲ್ಲಿ ಪ್ರಮುಖ ಪಾತ್ರವಹಿಸಿದ್ದನು.[೧೧೨]

ಬಿಜಾಪುರದ ರಾಜಕೀಯದಲ್ಲಿ ಕಲಹ ಉಂಟಾಗಲು ಅಂಬರ್‌ಕಾಲಾ ಎಂಬ ನಂಬಿಕೆಯ ಅಧಿಕಾರಿಯ ಕೊಲೆಯಲ್ಲಿ ಮಹಮದ್ ಅದಿಲ್‌ಷಾನ ಕೈವಾಡವಿದೆಯೆಂದು ಮಲ್ಲಿಕ್‌ರಿಹಾನ್‌ನು ದಂಗೆಯೆದ್ದನು. ಇವನನ್ನು ಅಡಗಿಸಲು ಆದಿಲ್‌ಷಾನು ಆಜ್ಞೆಮಾಡಿದನು. ರಿಹಾನ್‌ನು ಮೈಸೂರು ಅರಸರೊಂದಿಗೆ ಸ್ನೇಹಬೆಳಸಿದ್ದರಿಂದ ಮತ್ತಷ್ಟು ಬಲಿಷ್ಠನಾದನು. ಈತನು ಬಿಜಾಪುರಕ್ಕೆ ಶರಣಾಗದೆ, ೧೬೫೨ರಲ್ಲಿ ಮರಣ ಹೊಂದಿದನು.[೧೧೩]

ಮೊಘಲರಿಗೆ ದಕ್ಷಿಣ ಭಾರತದ ಮೇಲೆ ಕಣ್ಣುಬಿದ್ದು ಬಿಜಾಪುರವು ಅವರ ವಶವಾಯಿತು. ಇದರಿಂದ ಅಧೀನವಾಗಿದ್ದ ಎಲ್ಲಾ ಪ್ರದೇಶಗಳು ಮೊಘಲರಿಗೆ ಸೇರಿದವು. ಅದರಲ್ಲಿ ಸಿರಾ ಪ್ರದೇಶವು ಸೇರಿಕೊಂಡಿತ್ತು. ಇದಕ್ಕೆ ಖಾಸಿಂಖಾನ್‌ನನ್ನು ನೇಮಿಸಲಾಯಿತು.

ರತ್ನಗಿರಿಯ ರಂಗಪ್ಪನಾಯಕನ ಕಾಲದಲ್ಲಿ ಅಪೂರ್ಣವಾಗಿದ್ದ ಕೋಟೆಯನ್ನು ಖಾಸಿಂಖಾನ್ (೧೬೮೭-೯೮)ರವರೆಗೆ ಫೌಜುದಾರನಾದ(ಸುಭೇದಾರ) ಮುಗಲ್ ಸುಬೇದಾರರಲ್ಲಿ ಪ್ರಮುಖವಾದ ಈತ ಕೋಟೆಯನ್ನು ಬಲಪಡಿಸಿ ಜಮಾಮಸೀದಿಯನ್ನು ನಿರ್ಮಿಸಿದ.[೧೧೪]

ಈತನ ಮರಣನಂತರ ಜುಲ್ಫೀಕರ್ ಖಾನ್-ರುಸ್ತುಜಂಗ್ ಸುಭೇದಾರರಾಗಿ ಬಂದರು. ರುಸ್ತುಂಜಂಗ್ ಸರಿಯಾದ ಕಾಲಕ್ಕೆ ಕಪ್ಪಕಾಣಿಕೆಯನ್ನು ಔರಂಗಜೇಬನಿಗೆ ಸಲ್ಲಿಸುತ್ತಿದ್ದ. ಇದರಿಂದ ಸಂತೋಷಗೊಂಡು ಬಹುದ್ದೂರ್ ಎಂಬ ಬಿರುದು ಕೊಟ್ಟು ಕೈಫಿಯತ್‌ಖಾನ್ ಎಂದು ಹೆಸರು ನೀಡಿ ಸನ್ಮಾನಿಸಿದನು. ಈತನು ಸಿರಾದ ಬಳಿಯಲ್ಲಿಯೇ 'ರುಸ್ತುಂಬಾದ್' ಎಂಬ ಪೇಟೆಯನ್ನು ನಿರ್ಮಿಸಿದನು.[೧೧೫]

ಸಿರಾವು ಒಂದು ರೀತಿಯಲ್ಲಿ ಆ ಕಾಲಕ್ಕೆ ಶ್ರೀಮಂತ ಪಟ್ಟಣವಾಗಿತ್ತು. 'ಮೊಗಲ್ ಚಕ್ರವರ್ತಿ ಔರಂಗಜೇಬನ ಕೊನೆಯ ಕಾಲದಲ್ಲಿ ಮೊಗಲರ ಸ್ಥಾನಮಾನಗಳು ಕುಗ್ಗ ತೊಡಗಿದವು. ಆ ವೇಳೆಗಾಗಲೇ ಮೈಸೂರು ಸಂಸ್ಥಾನ ಪ್ರಬುದ್ಧಮಾನಕ್ಕೆ ಬಂದಿತ್ತು. ಮೊಘಲರ ದುರ್ಬಲ ಸ್ಥಿತಿಗಳನ್ನು ಸಿದ್ಧಪಡಿಸಿಕೊಂಡ ಮೈಸೂರಿನ ಚಿಕ್ಕದೇವರಾಜ ಒಡೆಯರು ಸಿರಾದ ಮೇಲೆ ಆಕ್ರಮಣ ಮಾಡಿ ಮೊಘಲ್ ಸರ್ಕಾರಕ್ಕೆ ಸಲ್ಲಿಸಬೇಕೆಂದು ಇಟ್ಟುಕೊಂಡಿದ್ದ ಕಪ್ಪಕಾಣಿಕೆಯ ಹಣವನ್ನು ಲೂಟಿ ಮಾಡಿದನು. ಕ್ರಿ.ಶ.೧೭೦೬ರಲ್ಲಿ ಫಡುದುಲ್ಲಾಖಾನನು ಸಿರಾದ ನವಾಬನಾದನು. ಈತನ ನಂತರ ದಾವೂದ್‌ಖಾನನು ಸಿರಾದ ನವಾಬನಾಗಿ ಕೆಲಕಾಲ ಸ್ವತಂತ್ರನಾಗಿ ಮೆರೆದು ನಿವೃತ್ತನಾದನು.[೧೧೬] ಇಲ್ಲಿಗೆ ಮೊಘಲರ ಸುಬೇದಾರಿಕೆ ಮುಕ್ತಾಯವಾಗಿ ಹೈದರಬಾದಿನ ನಿಜಾಮ ಮತ್ತು ಅರ್ಕಾಟಿನ ನವಾಬ ದತ್ತಖಾನ್ ಸುಬೇದಾರರು ಸಿರಾವನ್ನು ಆಳಲು ಪ್ರಾರಂಭಿಸಿದರು. ಅವರಲ್ಲಿ ಕ್ರಿ.ಶ.೧೭೧೭ರಲ್ಲಿ ಅಮೀನ್‌ಖಾನ್, ಎರಡನೇ ದರ್ಗಾಕೂಲಿಖಾನ್, ಅರ್ಕಾಟಿನ ಅಬ್ದುಲ್‌ನಭೀ ತಾಹರ್‌ಖಾನ್‌ರು ಆಳಿದ್ದಾರೆ.[೧೧೭]

ಮರಾಠರು ಸಿರಾವನ್ನು ಆಕ್ರಮಿಸುವುದಕ್ಕಿಂತ ಮುಂಚೆ ನೆರೆಯ ರಾಜ್ಯಗಳೊಂದಿಗೆ ನವಾಬನು ಶಾಂತಿಯಿಂದ ಇದ್ದನು. ಈತನ ಕಾಲದಲ್ಲಿ ಸಿರಾದಲ್ಲಿ ೫೦ ಸಾವಿರ ಮನೆಗಳಿದ್ದವು. ಅಲ್ಲಿ ಸುಂದರವಾದ

ಅರಮನೆಯನ್ನು ಕೂಡಾ ನಿರ್ಮಿಸಿದ್ದನು. ಈ ಅರಮನೆಯ ಸೌಂದರ್ಯ-ಸೊಬಗನ್ನು ಕಂಡು ಹೈದರ್ ಮತ್ತು ಟಿಪ್ಪುವು ಪ್ರಭಾವಿತರಾಗಿ ಇದನ್ನೇ ಮಾದರಿಯಾಗಿಟ್ಟುಕೊಂಡು ಬೆಂಗಳೂರು ಮತ್ತು ಶ್ರೀರಂಗಪಟ್ಟಣದಲ್ಲಿ ಅರಮನೆಯನ್ನು ನಿರ್ಮಿಸಿದರು.[೧೧೮] ಟಿಪ್ಪುವು ಶ್ರೀರಂಗಪಟ್ಟಣದಲ್ಲಿ ನಿರ್ಮಿಸಿದ ಹೊಸನಗರಗಳಿಗೆ ಸಿರಾದ ಜನರನ್ನು ಒತ್ತಾಯ ಪೂರ್ವಕವಾಗಿ ಸಾಗಿಸುತ್ತಾನೆ. ಜೊತೆಗೆ ಇದೇ ರೀತಿ ಮರಾಠರು ಪದೇ ಪದೇ ಆಕ್ರಮಣ ಮಾಡಿದ್ದರಿಂದಲೂ ಜನಸಂಖ್ಯೆ ಮತ್ತು ಮನೆಗಳ ಸಂಖ್ಯೆ ಸಿರಾ ಪಟ್ಟಣದಲ್ಲಿ ಇಳಿಮುಖವಾಯಿತು.[೧೧೯]

ಮರಾಠರು ಪೇಶ್ವೆ ಬಾಲಾಜಿ ಬಾಜಿರಾವ್‌ನ ನೇತೃತ್ವದಲ್ಲಿ ಮೈಸೂರನ್ನು ಮುತ್ತಿಗೆ ಹಾಕುವ ನಿಟ್ಟಿನಲ್ಲಿ ಸಾಗುತ್ತಿದ್ದಾಗ ಸಿರಾದ ದಿಲಾವರ್‌ಖಾನನ್ನು ಪರಾಭವಗೊಳಿಸಿದರು. ಇದರಿಂದ ಸಿರಾ ಪ್ರದೇಶವು ಕ್ರಿ.ಶ.೧೭೫೬ ರಿಂದ ೧೭೬೧ರವರೆಗೆ ಮರಾಠರ ಆಳ್ವಿಕೆಗೆ ಒಳಪಟ್ಟಿತು.[೧೨೦] ಅದೇ ವರ್ಷ ಹೈದರಾಲಿಯು ಬಸಾಲತ್‌ಜಂಗ್‌ನೊಡನೆ ಒಪ್ಪಂದ ಮಾಡಿಕೊಂಡು ಸಿರಾದಿಂದ ಮರಾಠರನ್ನು ಕಾಲ್ತೆಗೆಸಿದನು. ಪುನಃ ಮರಾಠರು ಕ್ರಿ.ಶ.೧೭೬೬ರಲ್ಲಿ ಸಿರಾವನ್ನು ಆಕ್ರಮಿಸಿಕೊಂಡರು.[೧೨೧] ಇದಾದ ನಂತರ ಇಂಗ್ಲೀಷರಿಗೂ, ಹೈದರ್-ಟಿಪ್ಪುವಿಗೂ ಹಲವು ಯುದ್ಧಗಳು ಸಂಭವಿಸಿದವು. ಬ್ರಿಟೀಷರ ಪರವಾಗಿ ಮರಾಠರು ಯುದ್ಧಮಾಡಿದರು.

ಕ್ರಿ.ಶ.೧೭೭೪ರಲ್ಲಿ ಟಿಪ್ಪುವು ತಂದೆಯ ಅಪ್ಪಣೆಯಂತೆ ಮರಾಠರು ಆಕ್ರಮಿಸಿಕೊಂಡಿದ್ದ ಸಿರಾ ಪ್ರದೇಶವನ್ನು ಪಡೆದುಕೊಂಡನು. ಕ್ರಿ.ಶ.೧೭೯೯ರಲ್ಲಿನ ಯುದ್ಧವು ಬ್ರಿಟೀಷರ ಪರವಾದಾಗ ಮೈಸೂರಿಗೆ ಸೇರಿದ ಪ್ರದೇಶವೆಲ್ಲವೂ ಬ್ರಿಟೀಷರಿಗೆ ಸೇರಿತು. ಮುಂದೆ ಈ ಪ್ರದೇಶವನ್ನು ಒಡೆಯರಿಗೆ ವಾಪಸ್ಸು ಮಾಡಿದ್ದರಿಂದ ಸಿರಾವು ಮೈಸೂರು ರಾಜ್ಯದಲ್ಲಿ ಸೇರಿಕೊಂಡಿತು.

ಒಟ್ಟಾರೆಯಾಗಿ ಸಿರಾ ಪ್ರದೇಶದ ಇತಿಹಾಸವು ಹೇಮಾವತಿಯ ನೊಳಂಬರಿಂದ ಪ್ರಾರಂಭವಾದರೂ ಹರತಿ ವಂಶಸ್ಥರು ಇಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿ ಆಳ್ವಿಕೆ ಮಾಡಿದರು. ಈ ಕೋಟೆಯ ಅಲ್ಪ ಸ್ವಲ್ಪ ಭಾಗವನ್ನು ಮುಸ್ಲಿಂ ಸುಭೇದಾರರು ಪೂರ್ಣಗೊಳಿಸಿದರು. ಇದರಿಂದ ಹೈದರ್-ಟಿಪ್ಪು, ಮರಾಠರು, ಬ್ರಿಟೀಷರು ಸಿರಾದ ಕೋಟೆಯ ಮೇಲೆ ಹಿಡಿತ ಸಾಧಿಸಿದರು. ಕೊನೆಯಲ್ಲಿ ಮೈಸೂರು ಅರಸರ ಸಂಸ್ಥಾನಕ್ಕೆ ಒಳಗೊಂಡಿತು. ಕೋಟೆಯು ಗಾರೆಯಿಂದ ನಿರ್ಮಿಸಿರುವುದರಿಂದ ಈಗಲೂ ಸುಸ್ಥಿಯಲ್ಲಿದೆ.

ಸಿರಾದ ಕೋಟೆಯ ಲಕ್ಷಣಗಳು

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ ಹಲವು ದುರ್ಗಗಳಲ್ಲಿ ನೆಲದುರ್ಗ ಅಥವಾ ಭೂದುರ್ಗವು ಒಂದು. ಅಂತಹದರಲ್ಲಿ ಸಿರಾದ ಕೋಟೆಯು ಸಹ ಭೂದುರ್ಗದಲ್ಲಿಯೇ ನಿರ್ಮಾಣವಾಗಿದೆ. ಪ್ರಕೃತಿಯಲ್ಲಿ

ಒಡಮೂಡಿಬಂದಿರುವ ಬೃಹತ್ ಬಂಡೆಯನ್ನೇ ಬುನಾದಿಯನ್ನಾಗಿ ಮಾಡಿಕೊಂಡು ಅದರ ಮೇಲೆ ಅಭೇದ್ಯವಾದ ಕೋಟೆ ಕೊತ್ತಲಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಈ ಕೋಟೆಯು ಆಕಾಶವನ್ನು ಮುಟ್ಟುವುದೋ ಎಂಬಂತೆ ಎತ್ತರವಾಗಿ ಚೌಕಾಕಾರವಾಗಿ ನಿರ್ಮಾಣಗೊಂಡಿದೆ. ಈಗಲೂ ಕೋಟೆಯು ಶಿಥಿಲವಾಗದೇ ಅಭೇದ್ಯವಾಗಿಯೇ ಉಳಿದಿದೆ.

ಸಂರಕ್ಷಣೆಯ ದೃಷ್ಟಿಯಿಂದ ಕೋಟೆ ಕೊತ್ತಲಗಳನ್ನು ಹೆಚ್ಚಾಗಿ ಬೆಟ್ಟಗುಡ್ಡಗಳಲ್ಲಿ ಕಟ್ಟುತ್ತಿದ್ದುದು ರೂಢಿ. ಆದರೆ ಸಿರಾದ ಕೋಟೆಯು ಬಟ್ಟಬಯಲಿನಲ್ಲಿ ಕಟ್ಟಿದ ನೆಲಗೋಡೆಯಾಗಿದೆ. ಗಟ್ಟಿ ಕಲ್ಲುಗಳನ್ನು ಅಚ್ಚುಕಟ್ಟಾಗಿ ಮಾಡಿದ ಶಿಲೆಗಳಿಂದ ಗಾರೆಯ ಮೂಲಕ ಕಟ್ಟಿರುವ ಭದ್ರವಾದ ಕೋಟೆ ಇದು. ಇಲ್ಲಿನ ನೆಲಗೋಟೆಯು ಮೂರು ಹೆಬ್ಬಾಗಿಲುಗಳನ್ನು ಒಳಗೊಂಡಿದೆ. ಅದರಲ್ಲಿ ಮೊದಲ ಮುಖ್ಯ ದ್ವಾರವು ಈಗ ಶಿಥಿಲಗೊಂಡಿದೆ. ಇದನ್ನು ಹುಲಿಮುಖದ ಶೈಲಿಯಲ್ಲಿ ನಿರ್ಮಿಸಲಾಗಿದೆ. ಕೋಟೆ ಗೋಡೆಯಲ್ಲಿಯೇ ಸೈನಿಕರ ಕಾವಲು ಮನೆಗಳು ರಚಿಸಲ್ಪಟ್ಟಿವೆ. ಕೋಟೆಯ ಒಳಗಡೆಯ ವಿಶಾಲ ಮೈದಾನದಲ್ಲಿ ಆಳರಸರ ಅರಮನೆ, ಅಂತಃಪುರಗಳು ನಿರ್ಮಾಣಗೊಂಡಿದ್ದವು. ಅಲ್ಲದೆ ಉದ್ಯಾನವನವೂ ಪೂಜೆಗಾಗಿ ಮತ್ತು ಅಂತಃಪುರ ಸ್ತ್ರೀಯರ ಅಲಂಕಾರಕ್ಕಾಗಿ ಬೆಳಸಿದ್ದ ಹೂವಿನ ತೋಟಗಳೂ ಇದ್ದುದು ಕಂಡುಬರುತ್ತದೆ. ನಿತ್ಯ ಪೂಜೆಗೊಳ್ಳುತ್ತಿದ್ದ ಮಾರುತಿಯ ದೇವಾಲಯವೂ ಇದ್ದಿತು. ಬಯಲು ಮೈದಾನಕ್ಕೆ ಹೊಂದಿಕೊಂಡಂತೆ ಅರಮನೆ, ಅರಮನೆಯ ಪಕ್ಕದಲ್ಲಿಯೇ ಒಂದು ಕೊಳ, ಕೊಳದಿಂದ ನೀರನ್ನೆತ್ತಿ ಕೋಟೆಯೊಳಗಡೆ ಬೇಕಾದ ಕಡೆಗೆ ನೀರು ಸರಬರಾಜು ಮಾಡುತ್ತಿದ್ದ ಕಾರಂಜಿಗಳ ವ್ಯವಸ್ಥೆ, ಈ ಕಾರಂಜಿಗೆ ಹೋಗುತ್ತಿದ್ದ ನೀರಿಗೆ ಇಟ್ಟಿಗೆ ಗಾರೆಗಳಲ್ಲಿ ಕಟ್ಟಿದ್ದ ಕೊಳಾಯಿಗಳು, ಕೊಳದಿಂದ ನೀರನ್ನು ಮೇಲಕ್ಕೆತ್ತಲು ಎತ್ತುಗಳ ಸಹಾಯದಿಂದ ತಿರುಗುತ್ತಿದ್ದ ತಿರುಗಣೆ ಯಂತ್ರದ ವ್ಯವಸ್ಥೆ ಮಾಡಿದ್ದರೆಂಬುದನ್ನು ಎಚ್.ವಿ.ವೀರನಾಯಕರು 'ಗುಮ್ಮಳ್ಳಿ ಕದನ'ದ ಕೃತಿಯಲ್ಲಿ ಹೇಳಿದ್ದಾರೆ. ಆದರೆ ಇವರು ಹೇಳುವ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ.

ಸಿರಾದ ಕೋಟೆಯು ಅಭೇದ್ಯವಾಗಿದ್ದು, ಭದ್ರವಾಗಿದೆ. ಜೊತೆಗೆ ಇದರಲ್ಲಿನ ಕೊತ್ತಲಗಳು ವಿಸ್ತಾರವಾಗಿದ್ದು, ಫಿರಂಗಿಗಳನ್ನು ಇಟ್ಟು ಶತ್ರುಗಳನ್ನು ಹಿಮ್ಮೆಟ್ಟಿಸಲು ಎಲ್ಲಾ ಅನುಕೂಲಗಳಿಂದ ಕೂಡಿವೆ. ಪಹರೆ ಮಾಡುವವರಿಗೆ ವಿಶ್ರಾಂತಿ ಮಾಡಲು ಕಾವಲು ಮನೆಗಳನ್ನು ನಿರ್ಮಿಸಿದ್ದಾರೆ. ಅವುಗಳ ಪಕ್ಕದಲ್ಲಿಯೇ ನೀರಿನ ತೊಟ್ಟಿಗಳನ್ನು ಸಹ ನಿರ್ಮಿಸಲಾಗಿದೆ. ಚೌಕಾಕಾರದ ಕೊತ್ತಲಗಳಲ್ಲಿ ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಇವೆಲ್ಲಾವುಗಳಿಂದ ಕೋಟೆಯು ಬಹಳ ಭದ್ರವಾಗಿತ್ತೆಂದು ಊಹಿಸಬಹುದಾಗಿದೆ. ಈ ಕೋಟೆಯನ್ನು ಉತ್ತರದಿಕ್ಕಿನಿಂದ ಒಳಪ್ರದೇಶಿಸಿ ಮೂರು ದ್ವಾರಗಳನ್ನು ದಾಟಬೇಕು. ಈ ದ್ವಾರಗಳು ನೇರವಾಗಿ ಯಾವುದೇ ವ್ಯಕ್ತಿಗೆ ಹೊರಗಿನಿಂದ ಕಾಣುವುದಿಲ್ಲ. ಅಂಕುಡೊಂಕಾಗಿ ಕೋಟೆಯನ್ನು ಪ್ರವೇಶಿಸಬೇಕು. ಅಲ್ಲದೇ ದಕ್ಷಿಣ ದಿಕ್ಕಿನಲ್ಲಿ ಮತ್ತು ಆಗ್ನೇಯ ದಿಕ್ಕಿನಲ್ಲಿ ಚಿಕ್ಕ ಬಾಗಿಲನ್ನು ಬಿಡಲಾಗಿದೆ.

ಈ ಬಾಗಿಲುಗಳನ್ನು ಕೆರೆಯ ನೀರನ್ನು ಕಂದಕಕ್ಕೆ ಬಿಡಲು ಹೋಗುವುದಕ್ಕೆ ಇದನ್ನು ಬಳಸುತ್ತಿದ್ದರೆಂದು ಊಹಿಸಬಹುದು. ಕೋಟೆಯನ್ನು ರಕ್ಷಿಸಲು ಸುತ್ತುವರೆದು ಚೌಕಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೋಟೆಯ ಸುತ್ತಲೂ ಆಳವಾದ ಕಂದಕವನ್ನು ಸುಸಜ್ಜಿತವಾಗಿ ನಿರ್ಮಿಸಿದ್ದು, ಇದಕ್ಕೆ ಕೆರೆಯ ನೀರನ್ನು ಸದಾ ತುಂಬಿರುತ್ತಿದ್ದರು. ಅಲ್ಲದೆ ಕೋಟೆಯ ಹೊರಭಾಗದಲ್ಲಿ ಇಲ್ಲಿ ಆಳ್ವಿಕೆ ಮಾಡಿದ ಸುಬೇದಾರರ ಗೋರಿಗಳು, ದರ್ಗಾಗಳು ಕಂಡುಬರುತ್ತವೆ. ಇವೆಲ್ಲವು ಈಗ ಸುಸ್ಥಿತಿಯಲ್ಲಿವೆ.

ಕೋಟೆಯ ಮಹತ್ವ

ಸಿರಾದ ಕೋಟೆಯು ನೆಲಗೋಟೆಯಾಗಿದ್ದರೂ ಬಹಳ ಭದ್ರವಾಗಿ ನಿರ್ಮಿಸಲಾಗಿದೆ. ಕೋಟೆ ಚೌಕಾಕಾರವಾಗಿ ಸುತ್ತಲೂ ಕೊತ್ತಲಗಳನ್ನು ಒಳಗೊಂಡಿದೆ. ಇದರಿಂದ ಹೆಚ್ಚಿನ ಕಾವಲು ಪಡೆಯನ್ನು ನೇಮಿಸಲು ಅನುಕೂಲವಾಗಿತ್ತು. ಸಿರಾದ ಕೋಟೆಯನ್ನು ಕಟ್ಟುವ ಮೊದಲು ಆಗಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಕೋಟೆಯ ತಾಂತ್ರಿಕತೆಯನ್ನು ಬಳಸಲಾಗಿತ್ತು. ಕೋಟೆ ಕಟ್ಟುವ ಮೊದಲು ಕೆರೆಕಟ್ಟಿ ನಂತರ ಕೋಟೆಕಟ್ಟಿ, ಅದರ ಸುತ್ತಲೂ ಆಳವಾದ ಕಂದಕವನ್ನು ಕಲ್ಲು, ಗಾರೆಯಿಂದ ನಿರ್ಮಿಸಿ, ಕೆರೆಯ ನೀರನ್ನು ಕಂದಕಕ್ಕೆ ಬಿಟ್ಟು ಶತ್ರುಗಳು ಒಳಪ್ರವೇಶಿಸದಂತೆ ಮಾಡಿದ್ದರೆಂದು ಈಗಿರುವ ಕಂದಕದಿಂದ ನೋಡಿ ತಿಳಿಯಬಹುದು. ಅಲ್ಲದೆ ಕೋಟೆಯ ಸುತ್ತಲೂ ನುಗ್ಗೆ ಮರಗಳನ್ನು ಬೆಳೆಸಿ ಅವುಗಳ ಜೊತೆಯಲ್ಲಿ ಹಬ್ಬುವಂತೆ ಮುಳ್ಳಿನ ಬಳ್ಳಿಯನ್ನು ಬೆಳೆಸಿದ್ದರು. ಅಷ್ಟೇ ಅಲ್ಲದೆ ಸುತ್ತಲೂ ಆಳವಾದ ಕಂದಕ, ಇದನ್ನು ಹೊಂದಿಕೊಂಡಂತೆ ಸುತ್ತಲೂ ಜಗಲಿ ಹಾಕಿದಂತೆ ಜಾಲಿಗಿಡಗಳ ಸಾಲು. ಈ ಮುಳ್ಳು ಗಿಡಗಳಿಗೆ ಅಂಟಿಕೊಳ್ಳುವಂತೆ ರಸಬಳ್ಳಿ ಅಂದರೆ ವಿಷಪೂರಿತ ಬಳ್ಳಿಗಿಡಗಳನ್ನು ಬೆಳಸಿದ್ದರು. ಆ ಬಳ್ಳಿಗಳು ಅಗಲಿ(ಕಂದಕ)ದಲ್ಲಿ ಕೂಡ ಬೆಳೆದು ಹರಡಿ ಹಬ್ಬಿದ್ದವು. ಇವು ಮೈಪರಚುವಂತೆ ಮುಳ್ಳಿನ ಗಿಡಗಳು ಒಂದಕ್ಕೊಂದು ಅಂಟಿಕೊಂಡಿದ್ದವು. ಇದರಿಂದ ಕೋಟೆಯ ಗೋಡೆಯನ್ನು ಶತ್ರುಗಳು ಸುಲಭವಾಗಿ ಮುಟ್ಟಲು ಅಸಾಧ್ಯವಾಗಿತ್ತು. ಇದರಿಂದಾಗಿ ಕೋಟೆಯು ಮತ್ತಷ್ಟು ಸುಭದ್ರವಾಗಿ ನಿಂತಿತು. ಈ ಕೋಟೆಯನ್ನು ಹೋಲುವ ಅಭೇಧ್ಯಕೋಟೆಯೇ ಇನ್ನೊಂದಿಲ್ಲವಾಯಿತು.[೧೨೨]

ಸಿರಾದ ಕೋಟೆಯ ಮಹತ್ವವನ್ನು ಹೇಳುವ ಒಂದು ಜಾನಪದ ಹಾಡೊಂದನ್ನು ಕಾಣಬಹುದು.

ಬಂಡಿ ಚಕ್ರದ ಮೇಲೆ| ಹತ್ತಿ| ಅಂಡಿಗೆಯಿಟ್ಟು|
ಹತ್ತಲಾರದ ಕೋಟೆ ಹತ್ಯಾರೆ|ತುರುಕಾರು
ಮತ್ತೆ ಇಳಿಯಾದ ಅರಿಯಾರೆ|[೧೨೩]

ಏರಲಾರದ ಕೋಟೆ ಏರ್‍ಯಾರೇ ತುರುಕಾರು
ಏರಿ ಮತ್ತಿಳಿಯಲರಿಯಾರು|ತುರುಕಾರು
ನೀರಿಗೆ ಬಾಯ ಬಿಡುತಾರೆ|[೧೨೪]

ಇಂತಹ ಕೋಟೆಯನ್ನು ಸುತ್ತ ನೋಡಿದರೂ ಹತ್ತಲು ಸ್ಥಳವಿಲ್ಲ. ಆದರೂ ಕಂದಕದ ಮೇಲೆ ಬಂಡಿಚಕ್ರಗಳನ್ನು ತೇಲಿಬಿಟ್ಟು ಅದರ ಮೇಲೆ ಹತ್ತಿ ಅಂಡಿಗೆಗಳನ್ನು ಮೇಲೇರಿಸಿ ಕೋಟೆಯ ಮೇಲಕ್ಕೆ ಹತ್ತಿದರು. ಶ್ರಮದಿಂದ ಕೋಟೆ ಹತ್ತಿದರೂ ಮತ್ತೆ ಒಳಗೆ ಇಳಿಯುವ ದಾರಿ ಕಾಣುತ್ತಿಲ್ಲ ಎಂದು ಕೋಟೆಯ ಮಹತ್ವವನ್ನು ಜನಪದರು ಹೇಳಿದ್ದಾರೆ.

ಸಿರಾದ ಕೋಟೆಯನ್ನು ಹೈದರ್-ಟಿಪ್ಪು ವಶಪಡಿಸಿಕೊಂಡಾಗ ಇಂತಹ ಅಬೇಧ್ಯ ಕೋಟೆಯನ್ನೇ ಬೆಂಗಳೂರಿನಲ್ಲಿ ನಿರ್ಮಿಸಬೇಕೆಂದು ಬಯಕೆಯಾಗಿತ್ತು. ಅದರಂತೆ ಇಲ್ಲಿನ ಅರಮನೆ, ಖಾನಬಾಗ್‌ಗಳ ಮಾದರಿಯಲ್ಲಿಯೇ ಬೆಂಗಳೂರು ನಗರದಲ್ಲಿರುವ ಕೋಟೆ, ಅರಮನೆ, ಲಾಲಾಬಾಗ್‌ಗಳು ಪ್ರೇರಣೆ ಪಡೆದು ನಿರ್ಮಿಸಿರಬಹುದೆಂದು ಊಹಿಸಲಾಗಿದೆ.[೧೨೫]

ದೇವರಾಯನ ದುರ್ಗದ ಕೋಟೆ

ದೇವರಾಯನ ದುರ್ಗವು ತುಮಕೂರು ತಾಲ್ಲೂಕಿನಲ್ಲಿದ್ದು, ಇದು ತುಮಕೂರಿನಿಂದ ಈಶಾನ್ಯಕ್ಕೆ ೧೫ ಕಿ.ಮೀ ದೂರದಲ್ಲಿದೆ. ತಳವಾರ ಬೆಟ್ಟ, ಶಿಗೆಕೊಪ್ಪಳ ಬೆಟ್ಟ, ಚಿನ್ನರಬೆಟ್ಟ, ಈಶಾನಾಯಕನ ಬೆಟ್ಟ ಮತ್ತು ದೊಡ್ಡವಾಡಿ ಬೆಟ್ಟಗಳ ನಡುವೆ ದೇವರಾಯನ ಬೆಟ್ಟವಿದೆ. ಈ ಬೆಟ್ಟವು ಎಲ್ಲಾ ಬೆಟ್ಟಗಳಿಗಿಂತಲೂ ಎತ್ತರವಾಗಿದ್ದು, ಇದರ ಎತ್ತರವು ಸಮುದ್ರ ಮಟ್ಟದಿಂದ ೧೨೬೪ ಮೀ. ಇದೆ. ಈ ಬೆಟ್ಟವನ್ನು ಮೂರುಭಾಗಗಳಾಗಿ ವಿಂಗಡಿಸಲಾಗಿದೆ. ೧. ಕುಂಭಿನರಸಿಂಹ ಅಥವಾ ದುರ್ಗದ ಬೆಟ್ಟ, ೨. ಬಂಗ್ಲಬೆಟ್ಟ ಮತ್ತು ೩. ಊರಿನ ಬೆಟ್ಟವೆಂದು ಕರೆಯುತ್ತಾರೆ. ದೇವರಾಯನ ದುರ್ಗವು ಪೂರ್ವದಿಂದ ಗಜಕಾರವಾಗಿ, ಪಶ್ಚಿಮದಿಂದ ಸಿಂಹಾಕಾರವಾಗಿ, ಉತ್ತರದಿಂದ ಗರುಡಾಕಾರವಾಗಿ ಮತ್ತು ದಕ್ಷಿಣದಿಂದ ಸರ್ಪದ ಆಕಾರವಾಗಿ ಕಾಣಿಸುತ್ತದೆ.

ದೇವರಾಯನ ದುರ್ಗವು ಪುರಾಣ ಕೇಂದ್ರವಾಗಿರುವುದರಿಂದ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದ್ದು, ಇದು ಕೃತಯುಗದಲ್ಲಿ ಉತ್ಕಲ ಪರ್ವತವೆಂದು, ತ್ರೇತಾಯುಗದಲ್ಲಿ ಸಿಂಹಾದ್ರಿಯೆಂದು, ದ್ವಾಪರಯುಗದಲ್ಲಿ ಸಿದ್ಧಗಿರಿಯೆಂದು, ಕಲಿಯುಗದಲ್ಲಿ ಕರಿಗಿರಿಯೆಂದು ಕರೆಯಲ್ಪಟ್ಟಿದೆ.[೧೨೬] ಪುರಂದರದಾಸರು ಈ ದುರ್ಗವನ್ನು ಸಂದರ್ಶಿಸಿದ್ದರೆಂಬುದಕ್ಕೆ ಅವರ ಕೀರ್ತನೆಗಳಲ್ಲಿ ಈ ದುರ್ಗದ ನರಸಿಂಹ ಸ್ವಾಮಿಯನ್ನು 'ಕರಿಗಿರಿ ನರಸಿಂಹ', 'ಕರಿಗಿರೀಶ ಒಡೆಯ', ಕರಿಗಿರಿ ದುರ್ಗದ ಒಡೆಯ ಎಂದು ಸ್ತುತಿಸಿರುವುದು ಕಂಡುಬಂದಿದೆ. ಸ್ಥಳೀಯವಾಗಿ ದೊರೆಯುವ ಐತಿಹ್ಯಗಳಿಂದ ಇದು ಒಂದು ವೈಷ್ಣವ ಧಾರ್ಮಿಕ ಕೇಂದ್ರವಾಗಿತ್ತೆಂದು ಹೇಳಬಹುದು.

ತುಮಕೂರು ಜಿಲ್ಲೆಯಲ್ಲಿ ಗಂಗರು, ರಾಷ್ಟ್ರಕೂಟರು, ನೊಳಂಬರು, ಚೋಳರು ತಮ್ಮ ಹಿಡಿತವನ್ನು ಹೊಂದಿ ಆಡಳಿತ ನಡೆಸಿರುವುದಕ್ಕೆ ಜಿಲ್ಲೆಯ ಹಲವಾರು ಶಾಸನಗಳಿಂದ ದೃಢಪಟ್ಟಿದೆ. ಅದರಲ್ಲಿ ಈ ದುರ್ಗವು ಇವರಿಗೆ ಸೇರಿತ್ತೆಂದು ಊಹಿಸಬಹುದಾಗಿದೆ.

ಹೊಯ್ಸಳರ ಕಾಲದಿಂದ ಈ ದುರ್ಗವು 'ಮಂಗಲನಾಡಿನ' ಒಂದು ಭಾಗವಾಗಿತ್ತು.[೧೭] ಆಗ ಹೊಯ್ಸಳ ಅರಸ ವಿಷ್ಣುವರ್ಧನನು ಆಳ್ವಿಕೆ ಮಾಡುತ್ತಿದ್ದನು. ನಂತರ ೨ನೇ ಬಲ್ಲಾಳನ ಕಾಲಕ್ಕೆ ಈ ಪ್ರದೇಶ 'ಆನೆ ಬಿದ್ದಸರಿ' ನಾಡು ಎಂಬ ಖ್ಯಾತಿಗೆ ಒಳಗಾಯಿತು. ಅದೂ ಅಲ್ಲದೆ ಈ ಪ್ರದೇಶ ಹೆಚ್ಚು ಆನೆಗಳಿಂದ ಕೂಡಿದ ಪ್ರದೇಶವಾಗಿದ್ದು, ಇವುಗಳ ಹಾವಳಿ ಹೆಚ್ಚಾಗಿತ್ತು. ಈ ಆನೆಗಳನ್ನು ಹಿಡಿದು ಪಳಗಿಸಿ ಅವುಗಳನ್ನು ಹತೋಟಿಗೆ ತಂದು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿದ್ದರು. ೨ನೇ ಬಲ್ಲಾಳನು ಆನೆಗಳ ವಿಷಯದ ವ್ಯಾಸಂಗದಲ್ಲಿ ಆಸಕ್ತಿ ವಹಿಸಿದ್ದನೆಂದು ತಿಳಿದುಬರುತ್ತದೆ.[೧೮] ಜೊತೆಗೆ ಬೆಟ್ಟದ ಮೇಲೆ ಆನೆಯ ಸಮಾಧಿಯ ಅವಶೇಷಗಳು ಕಂಡುಬರುವುದರಿಂದ 'ಆನೆಜಾರಿದ ಗೊಂದಿ' ಎಂಬ ಸ್ಥಳವನ್ನು ಶಾಸನವು ಕೂಡಾ 'ಜಾರಿದ ಗೊಂದಿ' ಎಂದು ಉಲ್ಲೇಖಿಸುವುದರಿಂದ ಈ ಪ್ರದೇಶದ ನಾಡಿಗೆ 'ಆನೆಬಿದ್ದ ಸರಿ' ಎಂಬ ಹೆಸರನ್ನು ಸೂಚಿಸಿರುವುದು ತುಮಕೂರಿನ ೪೫ನೇ ಶಾಸನದಲ್ಲಿ ತಿಳಿದುಬರುತ್ತದೆ.

ದೇವರಾಯನ ದುರ್ಗವನ್ನು 'ಆನೆಬಿದ್ದಸರಿ' ಎಂದು ಕರೆಯುತ್ತಿದ್ದ ಹೊಯ್ಸಳರು ಈ ಪ್ರದೇಶದಲ್ಲಿ ಎರಡು ಸುತ್ತಿನ ಮೇಲಿನ ಕೋಟೆಯನ್ನು ನಿರ್ಮಿಸಿದರು. ಇದಕ್ಕೆ ಒಂದು ಶಾಸನವು ಈ ರೀತಿ ಹೇಳುತ್ತದೆ. "ದೇವ ಪಡಂಣಾಯಕರ ಮೈದುನ ಬೀಮಳಪ್ಪನವರು ಆನೆಬಿದ್ದಸರಿಯ ಏಳುನಾಡನಾಥ ಮಾಹೆನಸಿಂಗಯ್ಯ ಹೊಂನಮಾರಗವುಡನ ಮಗ ಹಿರಿಯ ಬೈಚಗವುಂಡಗೆ ಮಲೆಗಲನಾಡ ಒಳಗಣ ಮೇಳೆಯ ಕೋಟೆಯನ್ನು ಕೊಡುಗೆಯಾಗಿ ಆ ಊರ ಚತುರ್ಗಡೆಯಲ್ಲಿ ಕಲ್ಲನೆಟ್ಟು ಸರ್ವಬಾಧಾ" ಪರಿವಾರವಾಗಿ ಕೊಟ್ಟಿದ್ದರು.[೧೯] ಆನೆ ಬಿದ್ದ ಸರಿಯಲ್ಲಿ ಕೋಟೆಯು ನಿರ್ಮಾಣವಾದ ನಂತರ ಕ್ರಿ.ಶ.೧೨೭೮ರಲ್ಲಿ ರಾಮನಾಥ ವಶಪಡಿಸಿಕೊಂಡ ಎಂಬುದಕ್ಕೆ ಒಂದು ಶಾಸನ ಮಾಹಿತಿ ನೀಡುತ್ತದೆ.[೨೦]

ವಿಜಯನಗರದ ಅರಸರ ಕಾಲದಲ್ಲಿ ಶಿಥಿಲವಾಗಿದ್ದ ಬೆಟ್ಟದ ಮೇಲಿನ ಕೋಟೆಯನ್ನು ಅತ್ಯಂತ ದುರ್ಗಮವಾದ ಕೋಟೆಯನ್ನಾಗಿಸಿ ಕೋಟೆ ಕೊತ್ತಲಗಳನ್ನು ವಿಸ್ತರಿಸಲಾಯಿತು. ಇವರ ಕಾಲದಲ್ಲಿ ಏಳು ಸುತ್ತಿನ ಕೋಟೆಯನ್ನು ಸುಭದ್ರವಾಗಿ ನಿರ್ಮಿಸಲಾಯಿತು. ಬುಕ್ಕರಾಯನ ಅಂಗಜಾವ ಅಲ್ಲಪ್ಪನಾಯಕರ ಮಕ್ಕಳಾದ ಪೋಲೆಯನಾಯಕ ಆನೆಬಿದ್ದಸರಿ ಮೇಗೋಟೆಯ ಜಾರಿದ ಗೊಂದಿಯಲ್ಲಿ ಪಡುವಣ ಭಾಗದಲ್ಲಿನ ದೊಣೆಯನ್ನು ಬುಕ್ಕರಾಯ ಸಮುದ್ರ ಎಂಬ ಹೆಸರಿನಿಂದಲೂ, ಇದೇ ಮೇಗೋಟೆಯ ಮೂಡಣ ಭಾಗದಲ್ಲಿ ಮತ್ತೊಂದು ದೊಣೆಯನ್ನು ಪೋಲಸಮುದ್ರ ಎಂಬ ಹೆಸರಿನಿಂದಲೂ ಕಟ್ಟಿಸಿದರು.[೨೧]

೨ನೇ ದೇವರಾಯ(ಪ್ರೌಢದೇವರಾಯ ೧೪೨೪-೧೪೪೬)ನ ತಮ್ಮ ಪ್ರತಾಪದೇವ ಮುಳಬಾಗಿಲು, ಪೆನುಗೊಂಡ ಪ್ರದೇಶಗಳ ರಾಜ್ಯಪಾಲನಾಗಿದ್ದ. ಈತನ ಕಾಲದಲ್ಲಿ ಆದವಾನಿ, ಪೆನುಗೊಂಡ ಮುಖ್ಯ ರಾಜಧಾನಿಗಳಂತೆ ಬೆಳೆದವು. ಅಷ್ಟೇ ಅಲ್ಲದೆ ಪ್ರತಾಪದೇವನು ಈ ದುರ್ಗಕ್ಕೆ ಪೆನುಗೊಂಡ ಬಾಗಿಲು ನಿರ್ಮಾಣ ಮಾಡಿದನು.[೨೨] ಪ್ರೌಢದೇವರಾಯನ ಕಾಲದಲ್ಲಿ ಈ ಪ್ರದೇಶವು "ಆನೆಬಿದ್ದ ಜರಿ ದುರ್ಗ" ಎನಿಸಿಕೊಂಡಿತ್ತು. ಈ ದುರ್ಗದಲ್ಲಿ ಆನೆಗಳನ್ನು ಭೇಟೆಯಾಡುವುದರಲ್ಲಿ ಮತ್ತು ಪಳಗಿಸುವಲ್ಲಿ

ನಿರತನಾಗಿದ್ದನು ಎಂಬುದಕ್ಕೆ ಆತನು ಪಡೆದಿರುವ 'ಗಜ ಬೇಂಟೆಕಾರ' ಬಿರುದುವಿನಿಂದ ಊಹಿಸಬಹುದಾಗಿದೆ. ದೇವರಾಯನ ಸೇನಾನಿ ದುರ್ಜಟಿಯ ಆಡಳಿತಕ್ಕೆ ಒಳಪಟ್ಟ ಈ ದುರ್ಗ ಮುಂದೆ 'ಜಟಕನ ದುರ್ಗ'ವೆಂಬ ಹೆಸರು ಪಡೆಯಿತು. ಸೇನಾಪತಿ ದುರ್ಜಟಿಯು ತನ್ನ ಈ ದುರ್ಗದಲ್ಲಿ ವಿಜಯನಗರ ಸೈನ್ಯದ ಒಂದು ಭಾಗವನ್ನು ಇಟ್ಟಿದ್ದನು.[೧೩೩] ಈ ಕಾಲದಲ್ಲಿಯೇ ಸೈನ್ಯಕ್ಕಾಗಿ ಠಾಣೆಗಳು ನಿರ್ಮಾಣವಾದವು. ಸೈನಿಕರಿಗೆ ತರಬೇತಿ ಶಿಬಿರವು ಇಲ್ಲಿಯೇ ನಡೆಯುತ್ತಿದ್ದಂತೆ ಕಂಡುಬರುತ್ತದೆ.

ವಿಜಯನಗರದ ಸಾಮಂತರಾಗಿ ಆಳುತ್ತಿದ್ದ ಮೈಸೂರು ಅರಸರು ವಿಜಯನಗರವು ಅವನತಿ ಹೊಂದಿದ ಮೇಲೆ ಮೈಸೂರು ಅರಸರು ಪ್ರಬಲರಾಗಿ ತಮ್ಮ ರಾಜ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ಕ್ರಿ.ಶ.೧೬೭೫ರಲ್ಲಿ ಚಿಕ್ಕದೇವರಾಜ ಒಡೆಯರು ಜಟಕರಾಯನ ದುರ್ಗದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡು, ನರಸನಾಯಕನನ್ನು ಮರ್ದಿಸಿದರು.[೧೩೪] ಅಂದಿನಿಂದ ಜಟಕನದುರ್ಗವು ಚಿಕ್ಕದೇವರಾಯನ ದುರ್ಗ ಎಂದು ಬದಲಾಯಿತು.[೧೩೫] ಈ ದುರ್ಗದಲ್ಲಿ ಚಿಕ್ಕದೇವರಾಯರು ಕೋಟೆ ಕೊತ್ತಲಗಳನ್ನು ಪುನಃ ನಿರ್ಮಿಸಿದರು. ವಿಜಯನಗರದರಸರ ಕಾಲದಲ್ಲಿ ನಿರ್ಮಿತವಾಗಿದ್ದ ಕೋಟೆಯನ್ನು ಚಿಕ್ಕದೇವರಾಯರು ಮದ್ದಿನಿಂದ ಉಡಾಯಿಸಿ ಹಾಳುಗೆಡವಿದ್ದರು. ಅದನ್ನು ಮತ್ತೆ ಇವರೇ ನಿರ್ಮಿಸಿದರು.[೧೩೬]

ಕ್ರಿ.ಶ.೧೭೧೯ರಲ್ಲಿ ಒಂದನೇ ಕೃಷ್ಣರಾಜ ಒಡೆಯರ ದಳವಾಯಿ ದಾಸರಾಜಯ್ಯರು ನಿಜಗಲ್ಲಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಈ ದುರ್ಗದಲ್ಲಿ ಲಕ್ಷ್ಮೀನರಸಿಂಹಸ್ವಾಮಿ ವಿಗ್ರಹವನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ.[೧೩೭] ಇದೇ ರೀತಿ ಕ್ರಿ.ಶ.೧೮೫೮ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ರಾಣಿ ಮುದ್ದುಕೃಷ್ಣಾಂಬ ದೇವರಾಯನ ದುರ್ಗದ ನರಸಿಂಹಸ್ವಾಮಿ ದೇವಾಲಯದ ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದರೆಂದೂ, ವಿಮಾನವನ್ನು ನಿರ್ಮಿಸಿ ವಿಷ್ಣುವಿನ ದಶಾವತಾರವನ್ನು ಕೆತ್ತಿಸಿದರೆಂದೂ ತಿಳಿಯುತ್ತದೆ.[೧೩೮]

ಮೈಸೂರು ಒಡೆಯರ ಕಾಲದಲ್ಲಿ ಈ ಕ್ಷೇತ್ರವು ಬಹಳಷ್ಟು ಅಭಿವೃದ್ಧಿ ಹೊಂದಿತು. ಇಲ್ಲಿನ ದೇವಾಲಯಗಳಲ್ಲಿ ಉತ್ಸವಗಳು, ಜಾತ್ರೆಗಳು ನಡೆಯಲು ಅವಕಾಶ ಮಾಡಿಕೊಟ್ಟು, ಅದರಲ್ಲಿ ಅವರು ಭಾಗವಹಿಸುತ್ತಿದ್ದರು. ಹೀಗಾಗಿ ಇಲ್ಲಿನ ಎರಡು ದೇವಾಲಯಗಳು ಈ ಒಡೆಯರ ಕಾಲದಲ್ಲೇ ನಿರ್ಮಿತವಾದವೆಂದೂ ತಿಳಿಯಬಹುದಾಗಿದೆ. ಒಡೆಯರು ದೇವಾಲಯಗಳಿಗೆ ಕೊಟ್ಟ ಪ್ರಾಶಸ್ತ್ಯ ಇಲ್ಲಿನ ಕೋಟೆ ಕೊತ್ತಲಗಳಿಗೆ ಕೊಡಲಿಲ್ಲವೆಂದು ಶಾಸನಗಳಿಂದ ತಿಳಿಯಬಹುದಾಗಿದೆ. ಆದರೂ ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ನಿರ್ಮಿಸಿದ ಕೋಟೆ ಗೋಡೆಯು ಶಿಥಿಲಾವಾಗುತ್ತಿದ್ದು, ಕೋಟೆಯ ಬಾಗಿಲುಗಳು ಭದ್ರವಾಗಿವೆ. ದುರ್ಗದ ಕುಂಭಿ ತಲುಪಲು ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದೆ.

ಈ ಪ್ರದೇಶವು ಐತಿಹಾಸಿಕ ಹಿನ್ನೆಲೆ ಹೊಂದಿದ್ದರೂ ಅದು ಗೌಣವಾಗಿ ಪುರಾಣದ ಶ್ರೇಷ್ಠತೆ ಪಡೆದಿರುವುದು ಕಾಣುತ್ತೇವೆ. ಹೊಯ್ಸಳರಿಂದ ನಿರ್ದಿಷ್ಟವಾಗಿ ಆಳ್ವಿಕೆಯು ಆರಂಭವಾಗಿದ್ದು, ಇಲ್ಲಿ

ಕೋಟೆ ಕೊತ್ತಲಗಳ ನಿರ್ಮಾಣ ಇವರಿಂದಲೇ ಪ್ರಾರಂಭವಾಗಿದೆ. ವಿಜಯನಗರದ ಅರಸರು ಈ ದುರ್ಗವನ್ನು ವಿಶೇಷವೆಂದು ಪರಿಗಣಿಸಿ ಏಳುಸುತ್ತಿನ ಕೋಟೆ ನಿರ್ಮಿಸಿದರು. ನಂತರ ಈ ದುರ್ಗವು ಮೈಸೂರು ಒಡೆಯರ ಆಳ್ವಿಕೆಯಲ್ಲಿ ಕೊನೆಯವರೆಗೂ ಇತ್ತೆಂದು ತಿಳಿಯಬಹುದು.

ದೇವರಾಯನ ದುರ್ಗದ ಕೋಟೆಯ ಲಕ್ಷಣಗಳು

ಬೆಟ್ಟವನ್ನು ಬಳಸಿಕೊಂಡು ಕಟ್ಟಿರುವ ಈ ಕೋಟೆಯು ಗಿರಿದುರ್ಗಗಳ ಸಾಲಿಗೆ ಸೇರುತ್ತದೆ. ಬೆಟ್ಟದ ಆಕಾರದಂತೆ ಕೋಟೆಯನ್ನು ಕಣಿವೆ ಮತ್ತು ಬೆಟ್ಟಗಳಲ್ಲಿ ನಿರ್ಮಿಸಲಾಗಿದೆ. ಕಣಿವೆಯಲ್ಲಿ ದಪ್ಪಗಾತ್ರದ ಕಲ್ಲುಗಳನ್ನು ಬಳಸಿ ಕೋಟೆಯ ಗೋಡೆಯನ್ನು ಕಟ್ಟಿದ್ದಾರೆ. ಕೋಟೆಯ ಆಯಕಟ್ಟಿನ ಸ್ಥಳದಲ್ಲಿ ಆಯತಾಕಾರದ ಕೊತ್ತಲಗಳು ಇವೆ. ಆಯತಾಕಾರದ ಕೊತ್ತಲಗಳು ಊರ ಸುತ್ತಿನ ಕೋಟೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವರ್ತುಲಾಕಾರದ ಕೊತ್ತಲಗಳನ್ನು ಬೆಟ್ಟದ ಕೋಟೆಯ ದ್ವಾರಗಳಲ್ಲಿ ಕಾಣುತ್ತೇವೆ. ಬಹುಶಃ ೧೭-೧೮ನೇ ಶತಮಾನದಲ್ಲಿ ವರ್ತುಲಾಕಾರದ ಕೊತ್ತಲಗಳು ರೂಢಿಗೆ ಬಂದಿರಬಹುದು. ಕಾರಣ ಆಯತಾಕಾರದ ಕೊತ್ತಲಗಳಲ್ಲಿ ಫಿರಂಗಿಗಳನ್ನು ಇಟ್ಟು ಉಪಯೋಗಿಸಲು ಕಠಿಣವಾಗಿರುವುದರಿಂದ ವರ್ತುಲಕಾರದ ಕೊತ್ತಲಗಳಿಗೆ ಬೇಡಿಕೆ ಹೆಚ್ಚಾಗಿರಬಹುದು. ಈ ಕೊತ್ತಲಗಳಿಗೆ ಫಿರಂಗಿಗಳನ್ನು ಇಡಲು ಕಿಂಡಿಗಳನ್ನು ಮತ್ತು ಅಲ್ಲಲ್ಲಿ ಬಂದೂಕು ಕಿಂಡಿಗಳನ್ನು ಬಿಡಲಾಗಿದೆ.

ದೇವರಾಯನ ದುರ್ಗವನ್ನು ಮೂರು ಭಾಗವಾಗಿ ವಿಭಾಗಿಸಲಾಗಿದೆ. ೧. ಕುಂಭಿ ನರಸಿಂಹ ಅಥವಾ ದುರ್ಗದ ಬೆಟ್ಟ, ೨. ಬಂಗ್ಲ ಬೆಟ್ಟ ಮತ್ತು ೩.ಊರಿನ ಬೆಟ್ಟ ಎಂದು ವಿಂಗಡಿಸಿ ಇಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಬೆಟ್ಟದ ಹೊರ ಕೋಟೆಯನ್ನು ಪ್ರವೇಶಿಸಲು ಮೂರು ಮುಖ್ಯ ದ್ವಾರಗಳನ್ನು ಹೊಂದಿದೆ. ೧. ಉತ್ತರಕ್ಕೆ ಮದ್ದಿನ ಬಾಗಿಲು, ೨. ದಕ್ಷಿಣಕ್ಕೆ ಜಯಮಂಗಲಿ ಬಾಗಿಲು, ೩. ವಾಯುವ್ಯಕ್ಕೆ ಪೆನುಗೊಂಡೆ ಬಾಗಿಲೆಂದು ಕರೆಯುವವರು. ಈ ಮೂರು ಬಾಗಿಲುಗಳ ಬದಿಯಲ್ಲಿ ಎತ್ತರವಾದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಉತ್ತರಕ್ಕಿರುವ ಮದ್ದಿನ ಬಾಗಿಲನ್ನು ಇಳಿಜಾರಿನ ಬಂಡೆಯ ಮೇಲೆ ನಿರ್ಮಿಸಿದ್ದು, ಈ ಬಾಗಿಲನ್ನು ವೈರಿಗಳು ಪ್ರವೇಶಿಸಲು ಸ್ವಲ್ಪ ಶ್ರಮ ಪಡಬೇಕು. ಈ ಬಾಗಿಲ ಪಕ್ಕದಲ್ಲಿ ಮದ್ದಿನ ಮನೆಯಿರುವುದರಿಂದ ಮದ್ದಿನ ಮನೆ ಎಂದು ಕರೆಯುವರು. ಜಯಮಂಗಲಿ ಬಾಗಿಲು ಬೆಟ್ಟದ ಕಣಿವೆ ಕೋಟೆಗೆ ನಿರ್ಮಾಣ ಮಾಡಿದ್ದು, ಇದರ ಪಕ್ಕದಲ್ಲಿ ಜಯಮಂಗಲಿ ಎಂಬ ನದಿ ಉಗಮವಾಗುವುದರಿಂದ ಇದಕ್ಕೆ ಜಯಮಂಗಲಿ ನದಿಯೆಂದು ಕರೆಯುತ್ತಾರೆ. ಈ ಬಾಗಿಲ ಪಕ್ಕದಲ್ಲಿ ಒಂದು ದಿಡ್ಡಿ(ಉಪ) ಬಾಗಿಲನ್ನು ನಿರ್ಮಿಸಿದ್ದಾರೆ. ಈ ಬಾಗಿಲು ದಿನನಿತ್ಯ ಉಪಯೋಗಕ್ಕೆ ಬಳಕೆಯಾಗುತ್ತಿರಬಹುದು. ವೈರಿಗಳು ಕಲ್ಲಿನ ಬಾಗಿಲನ್ನು ನೇರವಾಗಿ ಪ್ರವೇಶಿಸದಂತೆ ವ್ಯವಸ್ಥೆ ಮಾಡಲಾಗಿದೆ. ದ್ವಾರಕ್ಕೆ ಮುಂಚಾಚಿರುವ ಕೊತ್ತಲಗಳ ಮೇಲೆ ಸೈನಿಕರು ವೈರಿಗಳ ಆಕ್ರಮಣವನ್ನು ಎದುರಿಸಲು ಅನುಕೂಲ ಸ್ಥಳವಿದೆ. ಬಾಗಿಲ ಒಳ ಬದಿಗಳಲ್ಲಿ ಮಂಟಪವನ್ನು ನಿರ್ಮಿಸಿದ್ದಾರೆ. ವಾಯುವ್ಯ

ದಿಕ್ಕಿಗಿರುವ ಪೆನುಗೊಂಡೆ ಬಾಗಿಲು ವಿಜಯನಗರದ ಎರಡನೆ ರಾಜಧಾನಿಯಾದ ಪೆನುಗೊಂಡೆಯ ಅರಸುಗಳಿಗಾಗಿ ನಿರ್ಮಿಸಲಾಗಿದೆ. ಈ ಬಾಗಿಲು ಜಯಮಂಗಲಿ ಬಾಗಿಲ ಸ್ವರೂಪವನ್ನೇ ಒಳಗೊಂಡಿದೆ. ಈ ದ್ವಾರದ ಕಂಬದಲ್ಲಿ ಆಂಜನೇಯನ ಉಬ್ಬು ಶಿಲ್ಪವಿದೆ. ಮತ್ತು ದ್ವಾರದ ಪಕ್ಕದ ಗೋಡೆಯಲ್ಲಿ ಸೈನಿಕರು ಖಡ್ಗ-ಗುರಾಣಿ ಹಿಡಿದು ಯುದ್ಧ ಮಾಡುತ್ತಿರುವ ಶಿಲ್ಪವಿದೆ. ಇಲ್ಲಿಯೇ ಆನೆ, ಸಿಂಹಗಳ ಶಿಲ್ಪಗಳನ್ನು ಸಾಲಾಗಿ ಬಿಡಿಸಲಾಗಿದೆ. ಈ ದಿಕ್ಕಿನಲ್ಲಿ ಶತ್ರುಗಳ ಬರುವಿಕೆಯನ್ನು ವೀಕ್ಷಿಸಲು ಮತ್ತು ಯುದ್ಧಮಾಡಲು ದ್ವಾರದ ಎರಡು ಬದಿಗಳಲ್ಲಿ ಕೊತ್ತಲಗಳ ನಿರ್ಮಾಣವಿದೆ. ಇಲ್ಲಿನ ಮುಂಭಾಗದ ಗೋಡೆಯ ಹಾಗೂ ಚಜ್ಜಗಳ ಮೇಲೆ ಫಿಂಗಿಯ ೩ ಗುಂಡುಬಿದ್ದ ಜಾಗವಿದೆ. ಆದರೂ ಗೋಡೆಯು ಶಿಥಿಲಗೊಂಡಿಲ್ಲ.

ಕಣಿಯಲ್ಲಿರುವ ಜಯಮಂಗಲಿ ದ್ವಾರವನ್ನು ಪ್ರವೇಶಿಸಿ ಒಳಬಂದ ನಂತರ ಉತ್ತರದಿಕ್ಕಿನ ಪ್ರದೇಶದ ಊರು ಬಾಗಿಲನ್ನು ಪ್ರವೇಶಿಸಬೇಕು. ಇದು ಚಿಕ್ಕ ಬಾಗಿಲಾಗಿದ್ದು, ಇದರ ಹಿಂದೆ ಜಗಲಿಯನ್ನು ಕಟ್ಟಿದ್ದಾರೆ. ಈ ಬಾಗಿಲ ಕೋಟೆಯನ್ನು ರಸ್ತೆ ಮಾಡುವಾಗ ತೆಗೆದು ಹಾಕಲಾಗಿದೆ. ಇಲ್ಲಿಂದ ಮುಂದೆ ಹೋದರೆ, ಊರ ಮಧ್ಯದಲ್ಲಿ ದೊಡ್ಡ ದೇವಾಲಯವಿದೆ. ಇದನ್ನು ಭೋಗನರಸಿಂಹ ಸ್ವಾಮಿ ದೇವಾಲಯ ಎಂದು ಕರೆಯುತ್ತಾರೆ. ಇದರ ಹಿಂದೆ ದೋಣೆಯಿದ್ದು, ಇಲ್ಲಿಂದ ಎಡಭಾಗಕ್ಕೆ ಸಾಗಿದರೆ, ಕಾಳಿಕಾಂಬ ದೇವಾಲಯವಿದೆ. ಆನೆಬಿದ್ದ ಸರಿ ಎಂದು ಕರೆಯುವ ಒಂದು ಸ್ಥಳವಿದೆ. ಇದರ ದಕ್ಷಿಣ ಮತ್ತು ಪೂರ್ವಕ್ಕೆ ಅರಮನೆಯ ಆವರಣದ ಪ್ರದೇಶವಿದೆ. ಆದರೆ ಈಗ ಯಾವ ಕಟ್ಟಡದ ಅವಶೇಷವೂ ಇಲ್ಲಿ ಉಳಿದುಕೊಂಡಿಲ್ಲ. ಅರಮನೆಯ ಆವರಣದ ಬಲಬದಿಗೆ ಕುದುರೆ ಲಾಯವಿದೆ.

ಇಲ್ಲಿಂದ ಎತ್ತರದ ಭಾಗದಲ್ಲಿರುವ ಕುಂಭಿ ನರಸಿಂಹಸ್ವಾಮಿ ಬೆಟ್ಟಕ್ಕೆ ಸಾಗುವಾಗ ಹಲವು ದ್ವಾರಗಳನ್ನು ಪ್ರವೇಶಿಸಬೇಕು. ಅದರಲ್ಲಿ ಮೊದಲಿಗೆ ಕೋಟೆಯ ಬಾಗಿಲು ಸಿಗುತ್ತದೆ ಇದರ ಬದಿಗಳಲ್ಲಿ ಎರಡು ವರ್ತುಲಕಾರದ ಕೊತ್ತಲಗಳಿವೆ. ಇದಕ್ಕೆ ಕೈಪಿಡಿ ಗೋಡೆಯಿದ್ದು, ಅಲ್ಲಲ್ಲಿ ಬಂದೂಕು ಕಿಂಡಿಗಳನ್ನು ಬಿಡಲಾಗಿದೆ. ಇಲ್ಲಿಂದ ಮುಂದೆ ಸಾಗಿದರೆ ಗರುಡ ಆಂಜನೇಯ ಶಿಲ್ಪದ ಬಾಗಿಲು ಇವೆ. ಇಲ್ಲಿಂದ ಕೋಟೆಯ ಗೋಡೆಯು ಬಲಭಾಗದ ಬದಿಯಲ್ಲಿಯೇ ಚಲಿಸಿ ಕುಂಭಿಯ ನರಸಿಂಹಸ್ವಾಮಿ ದೇವಾಲಯದವರೆಗೆ ಮುಂದುವರೆಯುತ್ತದೆ. ಈ ಬಾಗಿಲ ಮುಂದೆ ಗರುಡ ಮತ್ತು ಆಂಜನೇಯನ ಶಿಲ್ಪವಿರುವುದರಿಂದ ಈ ಬಾಗಿಲಿಗೆ 'ಗರುಡಾಂಜುನೇಯರ ಬಾಗಿಲು' ಎಂದು ಹೆಸರು ಬಂದಿದೆ. ಈ ದ್ವಾರದ ಮೇಲ್ಭಾಗದಲ್ಲಿಯೇ ಕತ್ತಲ ಬಾಗಿಲು ಇದೆ. ಈ ದ್ವಾರದ ಮುಂಭಾಗದಲ್ಲಿ ಎತ್ತರದ ಗೋಡೆ ಮತ್ತು ಬದಿಗಳಲ್ಲಿ ಕೊತ್ತಲುಗಳು ಇರುವುದರಿಂದ ದ್ವಾರದ ಒಳಭಾಗದಲ್ಲಿ ಸದಾಕತ್ತಲು ಇರುತ್ತದೆ. ಈ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು. ಈ ದ್ವಾರದ ಎದುರಿಗೆ ಎತ್ತರವಾದ ಗೋಡೆಯನ್ನು ಕಟ್ಟಿರುವುದರಿಂದ ದ್ವಾರ ಇರುವ ಸುಳಿವು ವೈರಿಗಳಿಗೆ ಕಾಣಿಸುವುದಿಲ್ಲ.

ಕತ್ತಲಬಾಗಿಲ ಮೇಲ್ಭಾಗದಲ್ಲಿ ಯೋಗನರಸಿಂಹ ದೇವಾಲಯ, ಪುಷ್ಕರಣಿ, ಮಂಟಪಗಳು, ಮದ್ದಿನ ಮನೆ ಮತ್ತು ವೃತ್ತಾಕಾರದ ಬತೇರಿಗಳು ಕಂಡುಬರುತ್ತವೆ. ಇಲ್ಲಿಂದ ಉತ್ತರ ದಿಕ್ಕಿಗೆ ನಡೆದರೆ ಬೆಟ್ಟದ ತುದಿಗೆ ಹೋಗುತ್ತೇವೆ. ಇಲ್ಲಿ ಒಂದು ಮಂಟಪ ಮತ್ತು ಕಬ್ಬಿಣದ ಸರಳಿನಿಂದ ನಿರ್ಮಿಸಿದ ದೀಪದ ಸ್ತಂಭವಿದೆ. ಈ ಸ್ತಂಭದಲ್ಲಿ ಕಾರ್ತಿಕ ಮಾಸದ ದಿನಗಳಲ್ಲಿ ಜ್ಯೋತಿಯನ್ನು ಬೆಳಗಿಸುವುದು ರೂಢಿಯಿದೆ.

ಕೋಟೆಯಲ್ಲಿರುವ ಸ್ಮಾರಕಗಳು

ಭೋಗ ಲಕ್ಷ್ಮೀನರಸಿಂಹ ದೇವಾಲಯ, ಯೋಗ ಲಕ್ಷ್ಮೀನರಸಿಂಹ ದೇವಾಲಯ, ಕಾಳಿಕಾ ದೇವಾಲಯ, ವೈದ್ಯನಾಥ ದೇವಾಲಯ, ಅರಮನೆಯ ಆವರಣ, ಪುಷ್ಕರಣಿಗಳು, ಮದ್ದಿನಮನೆ, ಕಣಜಗಳು ಇತ್ಯಾದಿಗಳು ಮುಖ್ಯವಾಗುತ್ತವೆ.

೧. ಭೋಗ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ : ಈ ದೇವಾಲಯ ಊರ ಮಧ್ಯಭಾಗದಲ್ಲಿದ್ದು, ಇದನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇದು ಗರ್ಭಗುಡಿ, ಅಂತರಾಳ, ನವರಂಗ, ತೆರೆದ ಮಂಟಪ ಒಳಗೊಂಡಿದೆ. ಗರ್ಭಗುಡಿಯಲ್ಲಿ ನರಸಿಂಹ ತನ್ನ ತೊಡೆಯ ಮೇಲೆ ಲಕ್ಷ್ಮೀಯನ್ನು ಕೂಡಿಸಿಕೊಂಡು ಕುಳಿತಿರುವ ಕಪ್ಪು ವರ್ಣದ ವಿಗ್ರಹವಿದೆ. ಸುಕನಾಶಿಯು ಚಿಕ್ಕದಾಗಿದ್ದು, ಇದರ ದ್ವಾರದ ಮೇಲೆ ವೈಷ್ಣವ ಮುದ್ರೆಗಳಿಂದ ಕೂಡಿದ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ಬೆಳಕು ಕಡಿಮೆಯಿರುವುದರಿಂದ ಇತ್ತೀಚಿಗೆ ಮುಂಭಾಗದ ಗೋಡೆಯನ್ನು ತೆಗೆದು ಇನ್ನೆರಡು ದ್ವಾರಗಳನ್ನು ಮಾಡಲಾಗಿದೆ. ಇದರಲ್ಲಿಯೂ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದ ಮುಂದುಗಡೆಯಲ್ಲಿ ಸಾಲುಕಂಬಗಳಿಂದ ಕೂಡಿದ ಮಂಟಪ ಇದೆ. ಇದರ ಮೇಲ್ಭಾಗದ ಗೋಡೆಯಲ್ಲಿ ಇಟ್ಟಿಗೆ-ಗಾರೆಯಿಂದ ಮಾಡಿದ ಕೋಷ್ಠಕಗಳಿವೆ. ಇಲ್ಲಿ ವಿಷ್ಣುವಿನ ಅವತಾರದ ಗಾರೆಶಿಲ್ಪಗಳಿವೆ. ದೇವಾಲಯದ ಶಿಖರ ಭಾಗವು ಮೈಸೂರು ಒಡೆಯರ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ.

ಈ ದೇವಾಲಯದ ಎಡಬದಿಯಲ್ಲಿ ವರಲಕ್ಷ್ಮೀಯ ಚಿಕ್ಕದೇವಾಲಯವಿದೆ. ಇದು ಗರ್ಭಗುಡಿ, ಸುಕನಾಶಿ, ಮಂಟಪ ಮತ್ತು ಮಹಾಮಂಟಪಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ಲಕ್ಷ್ಮೀಯ ವಿಗ್ರಹವಿದೆ. ಸುಕನಾಶಿ ಆಯತಾಕಾರವಾಗಿದೆ. ಅದರ ಮುಂದಿನ ಮಂಟಪ ೧೨ ಕಂಬಗಳಿಂದ ಕೂಡಿದೆ.

ಈ ದೇವಾಲಯಗಳ ಪ್ರಾಕಾರದ ಒಳಭಾಗದಲ್ಲಿ ಕಂಬಗಳಿಂದ ಕೂಡಿದ ಕಾರಿಡಾರ್ ಮಾಡಲಾಗಿದೆ. ನರಸಿಂಹ ದೇವಾಲಯದ ಎದುರಿಗೆ ಗೋಪುರದಿಂದ ಕೂಡಿದ ಮಹಾದ್ವಾರವಿದೆ. ಇದು ಹಂಪಿಯ ವಿರೂಪಾಕ್ಷ ದೇವಾಲಯದ ಗೋಪುರವನ್ನು ನೆನಪಿಗೆ ತರುತ್ತದೆ. ಈ ದ್ವಾರದ ಜಗಲಿಯ ಗೋಡೆಯ ಮೇಲೆ ಒಂದು ಶಾಸನವಿದೆ. ಅದು "ಮುಮ್ಮಡಿ ಮಹಾರಾಜರು ಕ್ರಿ.ಶ.೧೮೫೮ರಲ್ಲಿ ಈ ದ್ವಾರವನ್ನು ಹಾಗೂ ದೇವಾಲಯದ ಜೀರ್ಣೋದ್ಧಾರದ ಕಾರ್ಯವನ್ನು ಮಾಡಲಾಗಿದೆ" ಎಂದು ಹೇಳುತ್ತದೆ.[೧೬೯]

ಇಲ್ಲಿನ ಮಹಾದ್ವಾರವು ಎತ್ತರವಾಗಿದ್ದು, ಮೈಸೂರು ವಾಸ್ತುಶೈಲಿಯಿಂದ ನಿರ್ಮಿತವಾಗಿದೆ. ಗೋಪುರವು ಐದು ಮಹಡಿಯನ್ನು ಹೊಂದಿದೆ. ಪ್ರತಿ ಮಹಡಿಯ ದ್ವಾರದ ಮುಂದೆ ಗಾರೆಯಿಂದ ಮಾಡಿದ ವೈಷ್ಣವ ಮುದ್ರೆ ಹಿಡಿದಿರುವ ದ್ವಾರಪಾಲಕರ ವಿಗ್ರಹಗಳಿವೆ. ಈ ಮಹಾದ್ವಾರದ ಎದುರಿಗೆ ಗರುಡಸ್ತಂಭ ಮತ್ತು ಮಂಟಪವನ್ನು ಕಾಣಬಹುದು.

ಯೋಗ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ : ಈ ದೇವಾಲಯವನ್ನು ಬೆಟ್ಟದ ಕುಂಭಿಯ ಭಾಗದಲ್ಲಿ ನಿರ್ಮಿಸಲಾಗಿದೆ. ಇದನ್ನು ಕುಂಭಿನರಸಿಂಹ ದೇವಾಲಯವೆಂತಲೂ ಕರೆಯುತ್ತಾರೆ. ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ, ಮುಖ ಮಂಟಪ, ಅಂಗಳ ಧವನಮಂಟಪ, ಧ್ವಜಸ್ತಂಭ, ಬಲಿಪೀಠ, ವರಲಕ್ಷ್ಮೀಗುಡಿ, ಮಹಾದ್ವಾರ ಗರುಡಗುಡಿ ಮತ್ತು ಪುಷ್ಕರಣಿಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹನ ಕಪ್ಪುಶಿಲೆಯ ಮೂರ್ತಿ ಇದೆ. ಇದರ ಬಾಯಲ್ಲಿ ಎರಡು ಸಾಲಿಗ್ರಾಮಗಳಿವೆ. ಸುಕನಾಶಿಯ ದ್ವಾರದ ಮೇಲೆ ವೈಷ್ಣವ ಮುದ್ರೆ ಹಿಡಿದ ದ್ವಾರಪಾಲಕರ ಶಿಲ್ಪಗಳಿವೆ. ನವರಂಗವು ಚೌಕಕಾರವಾಗಿದ್ದು, ಉಬ್ಬುಶಿಲ್ಪಗಳಿಂದ ಕೂಡಿದೆ. ನವರಂಗದ ಮುಂದೆ ಮುಖ ಮಂಟಪವಿದ್ದು, ಇದರ ಮುಂದುಗಡೆ ಅಂಗಳ ಇದೆ. ಇಲ್ಲಿ ಧವನಮಂಟಪ, ಧ್ವಜಸ್ತಂಭ, ಬಲಿಪೀಠಗಳಿರುವುವು. ಅಂಗಳದ ಎಡಕ್ಕೆ ವರಲಕ್ಷ್ಮೀ ದೇವಾಲಯವಿದೆ. ನರಸಿಂಹ ದೇವಾಲಯಕ್ಕೆ ನೇರವಾಗಿ ಒಂದು ಮಹಾದ್ವಾರವಿದೆ. ಇದು ಮೂರು ಅಂತಸ್ತಿನಿಂದ ಕೂಡಿದ ಗೋಪುರ. ಈ ಗೋಪುರದಲ್ಲಿ ವಿಷ್ಣುವಿನ ವಿವಿಧ ಅವತಾರಗಳು, ದ್ವಾರಪಾಲಕರು, ಲಕ್ಷ್ಮೀ, ವಿಷ್ಣು ಇತರ ಶಿಲ್ಪಗಳನ್ನು ಬಿಡಿಸಲಾಗಿದೆ.

ದ್ವಾರದ ಮುಂದೆ ಗರುಡ ವಿಗ್ರಹಗಳ ಗುಡಿಯಿದೆ. ಇದರ ಹಿಂದೆ ಒಂದು ಪುಷ್ಕರಣಿ ಇದೆ. ಇದರ ಮಧ್ಯೆದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಮಂಟಪ ಇದೆ. ಪುಷ್ಕರಣಿಯನ್ನು ದಾಟಿ ಮುಂದೆ ಹೋದರೆ ಒಂದು ದೊಡ್ಡ ಬಂಡೆ ಇದ್ದು, ಇದನ್ನು ದೀವಿಗೆಗುಂಡು ಎನ್ನುವರು. ದೇವಾಲಯದ ಮಂದೆ ಗರುಡಸ್ತಂಭ ಮತ್ತು ಚಿಕ್ಕ ಮಂಟಪವಿದೆ.

ಹುಲಿಯೂರು ದುರ್ಗದ ಕೋಟೆ

ಕುಣಿಗಲ್ ತಾಲ್ಲೂಕಿನ ದಕ್ಷಿಣ ದಿಕ್ಕಿಗಿರುವ ಹುಲಿಯೂರು ದುರ್ಗವು ಒಂದು ಹೋಬಳಿ ಕೇಂದ್ರವೂ ಆಗಿದೆ. ಇದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ.ದೂರದಲ್ಲಿದ್ದು, ತುಮಕೂರು-ಮದ್ದೂರು ರಸ್ತೆಯ ಹೆದ್ದಾರಿಯಲ್ಲಿದೆ. ಈ ದುರ್ಗವು ೨೭೭೨ ಅಡಿ ಎತ್ತರದಲ್ಲಿದೆ. ಈ ದುರ್ಗವು ಕುಂಭಿಯಾಕಾರದಲ್ಲಿದೆ. ಇದು ಭೌಗೋಳಿಕ ದೃಷ್ಟಿಯಿಂದ ಸುತ್ತಲೂ ನಿಸರ್ಗ ಸೌಂದರ್ಯದಿಂದ ಕೂಡಿದೆ. ಎತ್ತ ತಿರುಗಿದರೂ ಅತ್ತತ್ತ ಗಿರಿಗಳ ಸಾಲು. ತೆಂಕಣಕ್ಕೆ ಕುಂಭಗಿರಿ, ಪಡುವಣಕ್ಕೆ ಕದಂಬ ನದಿ, ಮೂಡಣಕ್ಕೆ ಸಿದ್ಧರ ಬೀಪಾವ ಹೇಮಗಿರಿ ಮತ್ತು ಈಶಾನ್ಯಕ್ಕೆ ಪ್ರಸಿದ್ಧ ದೀಪಾಂಬುಧಿ ಕೆರೆಯಿಂದ ಈ ದುರ್ಗವು ಸುತ್ತುವರೆದಿದೆ.

ಹುಲಿಯೂರು ದುರ್ಗವು ಮೊದಲು ಅರಣ್ಯ ಪ್ರದೇಶದಿಂದ ಕೂಡಿದ್ದು, ಇದರಲ್ಲಿ ಹುಲಿಗಳು ಹೆಚ್ಚಾಗಿ ವಾಸಿಸುತ್ತಿದ್ದರಿಂದ ಇದಕ್ಕೆ ಹುಲಿಯೂರು ಎಂಬ ಹೆಸರು ಬಂದಿತೆಂದು ಊಹಿಸಲಾಗಿದೆ. ಈ ಹುಲಿಯೂರು ದುರ್ಗಕ್ಕೆ ವ್ಯಾಘ್ರಪುರ ಮತ್ತು ಚಿತ್ರಕಾಯಪುರವೆಂದು ಕರೆಯುತ್ತಿದ್ದುದಕ್ಕೆ ಶಾಂಕೇಶನ 'ಸಿದ್ದೇಶ್ವರ ಪುರಾಣ'ದಲ್ಲಿ ಉಲ್ಲೇಖಿಸಲಾಗಿದೆ. ಹುಲಿಯೂರು ಎಂಬ ಹೆಸರು ರೂಢಿಯಲ್ಲಿತ್ತೆಂದು ಲಕ್ಕಶೆಟ್ಟಿ ಪುರ ಮತ್ತು ಉಜ್ಜನಿಗಳಲ್ಲಿರುವ ಶಾಸನಗಳು ಸ್ಪಷ್ಟಪಡಿಸುತ್ತವೆ.[೧೪೦] ನಂತರದ ದಿನಗಳಲ್ಲಿ ಈ ಹುಲಿಯೂರಿನಲ್ಲಿ ಇಮ್ಮಡಿ ಹಿರಿಯ ಕೆಂಪೇಗೌಡನು ಕೋಟೆಕೊತ್ತಲಗಳನ್ನು ನಿರ್ಮಿಸಿದ್ದರಿಂದ ಹುಲಿಯೂರು>ಹುಲಿಯೂರು ದುರ್ಗವೆಂದು ಹೆಸರು ಪಡೆಯಿತೆಂದು ಹೇಳುತ್ತಾರೆ.[೧೪೧]

ಪ್ರಾಚೀನ ಇತಿಹಾಸವು ಕ್ರಿ.ಶ.೭೮೫ರಲ್ಲಿ ಗಂಗರಾಜ ಅರಸರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿದ್ದು, ಈ ಮನೆತನದ ಸಾಮಂತ ರಾಜನಾದ ಶಿವಮಾರನು ನೇಮಕಗೊಂಡಿದ್ದನು. ಈತನಿಗೆ ಕುಣಿಗಲ್ಲು ಕೇಂದ್ರಸ್ಥಾನವಾಗಿತ್ತು.[೧೪೨] ಶಿವಮಾರನ ನಂತರ ಕ್ರಿ.ಶ.೮೧೨ರಲ್ಲಿ ವಿಮಲಾದಿತ್ಯ ಇಲ್ಲಿನ ರಾಜ್ಯಪಾಲನಾಗಿದ್ದನು. ತುಮಕೂರು ಜಿಲ್ಲೆಯಲ್ಲಿ ನಿಡುಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚೋಳರು ಆಡಳಿತ ಮಾಡಿದರು. ಆಗ ಈ ಪ್ರದೇಶವನ್ನೆಲ್ಲಾ ಆಡಳಿತಕ್ಕೆ ಒಳಪಡಿಸಿಕೊಂಡಿದ್ದರು. ಕುಣಿಗಲ್ಲನ್ನು ಇವರು ರಾಜೇಂದ್ರ ಚೋಳಪುರಂ ಎಂಬ ಹೆಸರಿನಿಂದ ಕರೆಯುತ್ತಿದ್ದರು.[೧೪೩] ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ ಹೊಯ್ಸಳರು ಪಕ್ಕದಲ್ಲಿಯೇ ಇದ್ದ ಕುಣಿಗಲ್ಲು ಪ್ರದೇಶಕ್ಕೆ ಆಡಳಿತದ ಅಸ್ತಿಭಾರ ಹಾಕಿದರು. ಇವರ ಕಾಲದಲ್ಲಿ ಇದು ಒಂದು ಅಗ್ರಹಾರವಾಗಿತ್ತು. ಕ್ರಿ.ಶ.೧೪೯೦ರಲ್ಲಿ ವೀರಕಂಬಲರಾಯನು ಕುಣಿಗಲ್ಲಿಗೆ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದನು.[೧೪೪] ಈ ವಿಚಾರವನ್ನು ಪರಿಶೀಲಿಸಿದರೆ ಕುಣಿಗಲ್ಲು ಪ್ರದೇಶವು ಗಂಗರು, ಚೋಳರು ಮತ್ತು ಹೊಯ್ಸಳರು ಆಳಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಹುಲಿಯೂರು ದುರ್ಗವು ಸಹ ಇವರ ಆಳ್ವಿಕೆಯಲ್ಲಿ ಸೇರಿತ್ತೆಂದು ಇತಿಹಾಸವನ್ನು ಶೋಧಿಸಬಹುದಾಗಿದೆ.

ವಿಜಯನಗರ ಸಾಮ್ರಾಜ್ಯವು ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಂತೆಲ್ಲ ಹೊಯ್ಸಳ ಆಡಳಿತ ಕ್ಷೀಣವಾಗುತ್ತ ಬಂದು ವಿಜಯನಗರದ ಆಳ್ವಿಕೆಯಲ್ಲಿ ವಿಲೀನವಾಯಿತು. ಇದರಿಂದ ಅವರ ಪ್ರದೇಶವೆಲ್ಲ ವಿಜಯನಗರ ಆಳ್ವಿಕೆಗೆ ಒಳಪಟ್ಟಿರುವುದು ಕಾಣಬಹುದು. ಕ್ರಿ.ಶ.೧೫೬೭ರಲ್ಲಿ ಸದಾಶಿವರಾಯನ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತೆಂದು ಕಿಚ್ಚವಾಡಿ ಶಾಸನವು ಉಲ್ಲೇಖಿಸುತ್ತದೆ.[೧೪೫] ಈತನ ನಂತರ ಕೃಷ್ಣದೇವರಾಯನ ಕಾಲಕ್ಕೆ ಚನ್ನಪಟ್ಟಣದ ಜಗದೇವರಾಯನಿಗೆ ಹುಲಿಯೂರು ದುರ್ಗದ ಪ್ರದೇಶವು ಸೇರಿತ್ತು. ಈತನನ್ನು ಮಾಗಡಿಯ ಹಿರಿಯ ಕೆಂಪೇಗೌಡನ ತಮ್ಮ ಬಸವಯ್ಯ ಜಗದೇವರಾಯನನ್ನು ಕ್ರಿ.ಶ.೧೫೧೬ರ ಯುದ್ಧದಲ್ಲಿ ಸೋಲಿಸಿದನು. ಈತನು ಯುದ್ಧದಲ್ಲಿ ಗೆದ್ದಿದ್ದಕ್ಕಾಗಿ ಧ್ವಜವನ್ನು ಹಾರಿಸುತ್ತಾನೆ.[೧೪೬] ಬಸವಯ್ಯನು

ಹುಲಿಯೂರು ದುರ್ಗದ ಜೊತೆಗೆ ಹುತ್ರಿ ದುರ್ಗವನ್ನು ವಶಪಡಿಸಿಕೊಳ್ಳುತ್ತಾನೆ.[೧೪೭] ಈ ಎರಡು ಪ್ರದೇಶಗಳು ಮಾಗಡಿ ಕೆಂಪೇಗೌಡನಿಗೆ ಸೇರಿದಾಗ ತನ್ನ ತಮ್ಮನನ್ನೇ ಉಸ್ತುವಾರಿ ನೋಡಿಕೊಳ್ಳಲು ನೇಮಿಸುತ್ತಾನೆ. ಕೆಲವು ದಿನಗಳ ನಂತರ ಕೆಂಪೇಗೌಡನು ತನ್ನ ಇಬ್ಬರು ಸಹೋದರರಿಗೆ ರಾಮಗಿರಿ ಮತ್ತು ಹುಲಿಯೂರು ದುರ್ಗವನ್ನು ಬಸವಯ್ಯನಿಗೆ, ಕೆಂಪು ಸೊಮಣ್ಣನಿಗೆ ಹುತ್ರಿ ದುರ್ಗವನ್ನು ವಹಿಸಿ ಕೊಡುತ್ತಾನೆ.[೧೪೮]

ಹಿರಿಯ ಇಮ್ಮಡಿ ಕೆಂಪೇಗೌಡನು ಹುಲಿಯೂರು ದುರ್ಗವನ್ನು ಆಳ್ವಿಕೆಗೆ ಒಳಪಡಿಸಿಕೊಂಡ ಮೇಲೆ ಕೋಟೆ ಕೊತ್ತಲ, ದೇವಾಲಯ, ಕೆರೆ, ಕಟ್ಟೆಗಳನ್ನು ನಿರ್ಮಿಸಿದನು. ಈತನು ನಿರ್ಮಿಸಿದ ಕೋಟೆಯು ಅಭೇದ್ಯವಾಗಿತ್ತೆಂದು ಹಲವು ದಾಖಲೆಗಳು ದೃಢಪಡಿಸುತ್ತವೆ. ಹೀಗೆ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡುತ್ತಿರುವಾಗ ಕ್ರಿ.ಶ.೧೬೫೮ರಲ್ಲಿ ಮುಸ್ಲಿಮ್ ನಾಯಕ ರಣದುಲ್ಲಾ ಖಾನನು ಕೆಂಪೇಗೌಡನನ್ನು ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡನು. ಇದೇ ವೇಳೆಗೆ ಮೈಸೂರು ಮಹಾರಾಜ ಶ್ರೀ ದೊಡ್ಡ ದೇವರಾಜ ಒಡೆಯರ್ ರವರು ಮಧುರೆಯಲ್ಲಿ ಏಕೋಜಿರಾಮನನ್ನು ಸೋಲಿಸಿದ ನಂತರ ಇನ್ನಷ್ಟು ಧೈರ್ಯತಾಳಿ ಈ ದುರ್ಗದ ಮೇಲೆ ದಾಳಿ ಮಾಡಿ ಕ್ರಿ.ಶ.೧೬೬೭ರಲ್ಲಿ ರಣದುಲ್ಲಾ ಖಾನನನ್ನು ಸೋಲಿಸಿ, ಹುಲಿಯೂರು ದುರ್ಗವನ್ನು ವಶಪಡಿಸಿಕೊಂಡು ತಮ್ಮ ರಾಜ್ಯವನ್ನು ವಿಸ್ತರಿಸಿದರು.[೧೪೯]

ಮರಾಠರು ಮೈಸೂರು ರಾಜ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಳಿಮಾಡಲು ಬಂದರು. ದಾಳಿಯ ಸಂದರ್ಭದಲ್ಲಿ ಒಡೆಯರಿಗೆ ಸೇರಿದ ಪ್ರದೇಶಗಳನ್ನು ಮೊದಲು ಆಕ್ರಮಣ ಮಾಡಿದರು. ಕ್ರಿ.ಶ.೧೭೫೭ರಲ್ಲಿ ಮರಾಠ ಪೇಶ್ವೆ ಬಾಲಾಜಿರಾಯನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಗುಂಡು ಹೊಡೆಯಲು ಶ್ರೀರಂಗ ದೇವಾಲಯದ ಚಿನ್ನದ ಕಳಸ ನಾಶವಾಯಿತು.[೧೫೦] ಇದರಿಂದ ಭಯಗೊಂಡ ಒಡೆಯರು ನಂಜರಾಜರಿಗೆ ಮರಾಠರಲ್ಲಿ ಒಪ್ಪಂದಕ್ಕೆ ಸೂಚಿಸಿದರು. ನಂಜರಾಜನು ಮರಾಠರಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡಾಗ ೩೨ ಲಕ್ಷ ಹಣ ಕೊಡಬೇಕಾಗಿ ಬಂತು. ಆದರೆ ಖಜಾನೆಯಲ್ಲಿ ಹುಡುಕಿದರೂ ೫ ಲಕ್ಷಕ್ಕಿಂತ ಹೆಚ್ಚಿರಲಿಲ್ಲ. ಹಣದ ಬದಲಾಗಿ ಅನೇಕ ತಾಲ್ಲೂಕುಗಳನ್ನು ಒತ್ತೆಯಿಡಲಾಯಿತು. ಆಗ ಬೇಲೂರು, ಕಡೂರು, ಚಿಕ್ಕನಾಯಕನಹಳ್ಳಿ ಮತ್ತು ಹುಲಿಯೂರು ದುರ್ಗವು ಮರಾಠರ ಕೈವಶವಾದವು.[೧೫೧]

ಇದರಿಂದ ತೃಪ್ತರಾಗದ ಮರಾಠರು ಕ್ರಿ.ಶ.೧೭೫೯ರಲ್ಲಿ ಮೈಸೂರಿನ ಮೇಲೆ ದಂಡೆತ್ತಿ ಬಂದಾಗ ದಿಂಡಿಗಲ್ಲಿನಲ್ಲಿ ಫೌಜುದಾರನಾಗಿದ್ದ ಹೈದರಾಲಿಯನ್ನು ಕರೆಸಲಾಯಿತು. ಹೈದರನು ಮರಾಠರ ಸೈನ್ಯವನ್ನು ಚನ್ನಪಟ್ಟಣ ಮತ್ತು ಮಳವಳ್ಳಿ ಕಾಳಗದಲ್ಲಿ ಸೋಲಿಸಿದನು. ಇಮ್ಮಡಿ ಕೃಷ್ಣರಾಜ ಒಡೆಯರ್‌ರವರು ಪೇಶ್ವೆ ಬಾಲಾಜಿರಾಯನಿಗೆ ಅಡವಿಟ್ಟಿದ್ದ ತಾಲ್ಲೂಕುಗಳನ್ನು ವಶಪಡಿಸಿಕೊಂಡಾಗ ಹುಲಿಯೂರು

ದುರ್ಗವು ಮೈಸೂರು ಸಂಸ್ಥಾನಕ್ಕೆ ಸೇರಿತು.[೧೫೨] ಇಲ್ಲಿಂದ ದುರ್ಗವು ಹೈದರಾಲಿಯ ವಶದಲ್ಲಿಯೇ ಮುಂದುವರೆಯಿತು. ಅಷ್ಟೊತ್ತಿಗೆ ಬ್ರಿಟೀಷರು ಹೈದರ್ ಟಿಪ್ಪುವನ್ನು ಸೋಲಿಸಲು ಪ್ರಯತ್ನಿಸುತ್ತಿದ್ದರು. ಮುಖ್ಯ ಎಂಜನಿಯರ್ ಲೆಫ್ಟಿನೆಂಟ್ ಕರ್ನಲ್ ರಾಸ್‌ನು ಕ್ಯಾಪ್ಟನ್ ಅರಮ್‌ನ ನೇತೃತ್ವದಲ್ಲಿ ೨೨ನೇ ಬೆಟಾಲಿಯನ್‌ನ ಕರಾವಳಿ ಸೈನ್ಯದೊಡನೆ ಹುಲಿಯೂರು ದುರ್ಗ ಕೋಟೆಯ ಶೋಧನೆಗಾಗಿ ದಿನಾಂಕ ೧೯ ಜೂನ್ ೧೭೯೧ರಂದು ಸಂಯುಕ್ತ ಸೈನ್ಯದೊಡನೆ ಮದ್ದೂರನ್ನು ದಾಟಿ ಹುಲಿಯೂರು ದುರ್ಗದ ಈಸ್ವರ್ ದಂಡೆಯ ಮೇಲೆ ಬಿಡಾರ ಹೂಡಿದರು.[೧೫೩] ಮೂರನೇ ಮೈಸೂರು ಯುದ್ಧದಲ್ಲಿ ಕ್ರಿ.ಶ.೧೭೯೨ರಲ್ಲಿ ಬ್ರಿಟೀಷರು ಟಿಪ್ಪುಸುಲ್ತಾನನಿಂದ ಈ ಕೋಟೆಯನ್ನು ವಶಪಡಿಸಿಕೊಂಡರು. ಇಲ್ಲಿಂದ ಈ ಕೋಟೆಯು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತು.[೧೫೪] ಬ್ರಿಟೀಷರು ಮೈಸೂರು ರಾಜ್ಯವನ್ನು ಒಡೆಯರಿಗೆ ವಹಿಸಿದಾಗ ಈ ದುರ್ಗವು ಮೈಸೂರು ರಾಜ್ಯದಲ್ಲಿ ವಿಲೀನವಾಯಿತು.

ಒಟ್ಟಾರೆಯಾಗಿ ಹುಲಿಯೂರು ದುರ್ಗವು ಮೈಸೂರು ರಾಜ್ಯಕ್ಕೆ ಹತ್ತಿರವಿರುವುದರಿಂದ ಹೆಚ್ಚು ಮೈಸೂರಿನ ಅರಸರೇ ಆಳ್ವಿಕೆಗೆ ಒಳಪಡಿಸಿಕೊಂಡಿರುವುದು ಕಾಣುತ್ತೇವೆ. ಹಿರಿಯ ಇಮ್ಮಡಿ ಕೆಂಪೇಗೌಡನು ಈ ದುರ್ಗದಲ್ಲಿ ಕೋಟೆಕೊತ್ತಲ ನಿರ್ಮಿಸಿಕೊಂಡು ಮಾಗಡಿಯಿಂದ ಆಳ್ವಿಕೆ ಮಾಡುತ್ತಿದ್ದನು. ಉಸ್ತುವಾರಿಗಾಗಿ ತನ್ನ ತಮ್ಮನಾದ ಬಸವಯ್ಯನನ್ನು ನೇಮಿಸಿ ವಿವಿಧ ರೀತಿಯ ಜನಮುಖಿ ಕಾರ್ಯಕ್ರಮಗಳನ್ನು ನೆರವೇರಿಸಿದನು. ಈ ಕೋಟೆಯು ನಿರಂತರವಾಗಿ ವೈರಿಗಳ ದಾಳಿಗೆ ಒಳಗಾಗಿದ್ದರಿಂದ ಯಾರೂ ಈ ಕೋಟೆಯನ್ನು ದುರಸ್ತಿ ಮಾಡಿಲ್ಲವೆಂದು ಗೊತ್ತಾಗುತ್ತದೆ.

ಹುಲಿಯೂರು ದುರ್ಗದ ಕೋಟೆಯ ಲಕ್ಷಣಗಳು

ಈ ದುರ್ಗವು ಶ್ರೀರಂಗಪಟ್ಟಣ ಮತ್ತು ಮೈಸೂರು ಪ್ರದೇಶಕ್ಕೆ ಹತ್ತಿರವಾಗಿರುವುದರಿಂದ ಶತ್ರುಗಳು ಮೊದಲು ಈ ಕೋಟೆಯನ್ನು ವಶಪಡಿಸಿಕೊಂಡು, ನಂತರ ಮೈಸೂರು ಸಂಸ್ಥಾನವನ್ನು ಎದುರಿಸುವುದಕ್ಕೆ ಇಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು ಎಂದು ಊಹಿಸಬಹುದು. ಈ ಹಿನ್ನೆಲೆಯಲ್ಲಿ ಹುಲಿಯೂರು ದುರ್ಗದ ಕೋಟೆಯನ್ನು ಅಭೇಧ್ಯವಾಗಿಡಲು ವಶಪಡಿಸಿಕೊಂಡ ನಾಯಕರುಗಳು ಆಗಿದ್ದಾಗ್ಗೆ ಪುನರ್ ನಿರ್ಮಿಸಿಕೊಳ್ಳುತ್ತಿದ್ದರೆನ್ನಬಹುದು. ಆದರೆ ಈಗ ಈ ಕೋಟೆಯು ಸಂಪೂರ್ಣವಾಗಿ ನಾಶವಾಗಿದೆ. ಅಳಿದುಳಿದಿರುವ ಬಾಗಿಲುಗಳು ಕೋಟೆಯ ಗೋಡೆ, ಕೊತ್ತಲಗಳು, ಬುರುಜುಗಳು, ದೇವಾಲಯಗಳು, ಕಣಜಗಳು, ಅರಮನೆ, ದರ್ಬಾರ ಮಂಟಪ, ವಸತಿ ಗೃಹಗಳ ಅವಶೇಷಗಳಿಂದ ಕೋಟೆಯ ರಚನೆಯನ್ನು ಮತ್ತು ಅದರಲ್ಲಿರುವ ಸ್ಮಾರಕಗಳನ್ನು ತಿಳಿಯಬಹುದು.

ಈ ದುರ್ಗವು ಏಳು ಸುತ್ತಿನ ಕೋಟೆಯ ಗೋಡೆಯನ್ನು ಹೊಂದಿತ್ತೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಸ್ಪಷ್ಟವಾಗಿ ಐದು ಸುತ್ತು ಮಾತ್ರ ಕಂಡುಬರುತ್ತದೆ. ಕೋಟೆಯ ಹೊರಸುತ್ತಿನ ಗೋಡೆಯು

ಸಂಪೂರ್ಣವಾಗಿ ಬಿದ್ದು ಹೋಗಿದ್ದು, ಅದರ ತಳಭಾಗ ಮಾತ್ರ ಕಾಣುತ್ತದೆ. ಇದರ ಹೆಬ್ಬಾಗಿಲನ್ನು ಮಾತ್ರ ಈಗ ನೋಡಬಹುದು. ಇದರಲ್ಲಿ ಗಣಪತಿ, ಹನುಮಂತ ಹಾಗೂ ಇನ್ನಿತರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಈ ಕೋಟೆಯ ಒಳಗೆ ವಸತಿ ಗೃಹಗಳ ಅವಶೇಷಗಳನ್ನು ನೋಡಿದರೆ ಮೊದಲು ಈ ಪ್ರದೇಶದಲ್ಲಿ ಸಾಮಾನ್ಯ ಜನರು ವಾಸ ಮಾಡುತ್ತಿದ್ದರೆಂದು ಊಹಿಸಬಹುದು. ಇಲ್ಲಿಂದ ದಕ್ಷಿಣಾಭಿಮುಖ ವಾಗಿ ಮುಂದೆ ಸಾಗಿದರೆ ಎರಡನೇ ಕೋಟೆಯ ಮುಂದೆ ಎರಡನೇ ಬಾಗಿಲನ್ನು ಪ್ರವೇಶಿಸಬಹುದು. ಈ ಬಾಗಿಲು ಹೊರಗಿನಿಂದ ಬಂದವರಿಗೆ ತಕ್ಷಣವಾಗಿ ಕಂಡುಬರುವುದಿಲ್ಲ. ಇದನ್ನು ಅಂಕುಡೊಂಕಾಗಿಯೇ ನಡೆದು ಒಳಪ್ರವೇಶಿಸಬೇಕು. ಈ ಬಾಗಿಲ ಎರಡು ಪಕ್ಕಗಳಲ್ಲಿ ರಕ್ಷಣೆಯ ದೃಷ್ಟಿಯಿಂದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಈ ಎರಡನೇ ಕೋಟೆಯು ಸಂಪೂರ್ಣವಾಗಿ ಬೆಟ್ಟವನ್ನು ಸುತ್ತವರೆದಿದ್ದು, ಕೆಲವು ಕಡೆ ಗೋಡೆ ಬಿದ್ದು ಹೋಗಿದೆ. ಈ ಕೋಟೆಯ ಗೋಡೆಗೆ ಸಣ್ಣ ಸಣ್ಣ ಸೈಜುಗಲ್ಲುಗಳನ್ನು ಬಳಸಿದ್ದಾರೆ. ಈ ಬೆಟ್ಟದಲ್ಲಿಯೇ ಸಿಗುವ ಕರಿಯ ಕಲ್ಲನ್ನು ಬಳಸಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯ ಭಾಗವು ವಿಶಾಲವಾದ ಪ್ರಾಂಗಣವನ್ನು ಹೊಂದಿದೆ. ಇಲ್ಲಿಯೇ ಅಕ್ಕ-ಪಕ್ಕದಲ್ಲಿರುವ ಗೋಪಾಲ ಸ್ವಾಮಿ ದೇವಸ್ಥಾನ ಮತ್ತು ಲಕ್ಷ್ಮೀ ದೇವಸ್ಥಾನಗಳನ್ನು ಕಾಣಬಹುದು. ಇವೆರಡು ದೇವಾಲಯಗಳು ಪೂರ್ವಾಭಿಮುಖವಾಗಿವೆ.

ಎರಡನೇ ಕೋಟೆಗೆ ಹೊಂದಿಕೊಂಡಂತೆ ಮೂರನೇ ಕೋಟೆಯನ್ನು ದಕ್ಷಿಣ ದಿಕ್ಕಿನಲ್ಲಿ ನಿರ್ಮಿಸಲಾಗಿದೆ. ಈ ಕೋಟೆಗೆ ಮೂರು ಬಾಗಿಲುಗಳಿದ್ದು, ಇವು ಶ್ರೀರಂಗಪಟ್ಟಣ ದಿಕ್ಕಿಗೆ ತೆರೆದುಕೊಂಡಿವೆ. ಇದೇ ಕೋಟೆ ಗೋಡೆಗೆ ಐದು ಎತ್ತರವಾದ, ಬತೇರಿಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ನಾಲ್ಕು ವೃತ್ತಾಕಾರದ ಬತೇರಿಗಳು ಇನ್ನೊಂದು ಚೌಕಾಕಾರದ ಬತೇರಿಯನ್ನು ಕಾಣಬಹುದು. ಇಷ್ಟೊಂದು ಎತ್ತರವಾದ ಬತೇರಿಗಳನ್ನು ನಿರ್ಮಿಸಲು ಕಾರಣವೇನೆಂದರೆ, ಮೈಸೂರು ಶ್ರೀರಂಗಪಟ್ಟಣದ ಕಡೆಯ ಶತ್ರು ಸೈನ್ಯವನ್ನು ವೀಕ್ಷಣೆ ಮಾಡುವುದಕ್ಕೆ ನಿರ್ಮಿಸಿರಬಹುದು. ಅಲ್ಲದೆ ಈ ಕೋಟೆಯ ಸುತ್ತಿಗೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿರುವುದನ್ನು ಕಾಣಬಹುದು. ಗೋಡೆಯ ಮೇಲೆ ಓಡಾಡಲು ಸೂಕ್ತವಾದ ಸ್ಥಳ ಬಿಟ್ಟಿರುವುದು, ಫಿರಂಗಿಗಳನ್ನು ಮೇಲಕ್ಕೆ ಸಾಗಿಸಲು ಇಳಿಜಾರಾದ ವ್ಯವಸ್ಥೆ ಮಾಡಿರುವುದು, ಪಹರೆಗಾಗಿ ಅಲ್ಲಲ್ಲಿ ಬುರುಜು, ಬತೇರಿ, ಕೊತ್ತಲಗಳನ್ನು ನಿರ್ಮಿಸಿರುವುದು ವಿಶೇಷವಾಗಿದೆ. ಇಲ್ಲಿನ ಎಲ್ಲಾ ಸುತ್ತಿನ ಕೋಟೆ ಗೋಡೆಗಿಂತ ಈ ಸುತ್ತಿನ ಗೋಡೆಯು ಬಲಿಷ್ಠವಾಗಿತ್ತೆಂದು ಊಹಿಸಬಹುದು.

ಇನ್ನುಳಿದ ಸುತ್ತಿನ ಕೋಟೆ ಗೋಡೆಗಳನ್ನು ಬೆಟ್ಟಕ್ಕೆ ಅರ್ಧ ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಬೆಟ್ಟದ ತುದಿಗೆ ಹೋಗಲು ಕುಂಭಿ ಗಣಪತಿಯ ಬಲಭಾಗಕ್ಕೆ ಇರುವ ಬಾಗಿಲನ್ನು ಬಳಸಬೇಕು. ಈ ಬಾಗಿಲು ಈಗ ಬಿದ್ದು ಹೋಗಿರುವುದರಿಂದ ತುದಿಗೆ ಹೋಗಲು ಬಹಳ ಶ್ರಮಪಡಬೇಕು. ಇಲ್ಲಿನ ಕೋಟೆಯನ್ನು ಇಳಿಜಾರು ಪ್ರದೇಶದಲ್ಲಿ ನಿರ್ಮಿಸಿರುವುದರಿಂದ ಮಳೆಗೆ ಸಂಪೂರ್ಣವಾಗಿ ಬಿದ್ದು ಹೋಗಿದೆ. ಇಲ್ಲಿಂದ

ಮುಂದೆ ಸಾಗಿದರೆ, ಉತ್ತರ ದಿಕ್ಕಿಗಿರುವ ತುದಿಕೋಟೆಯ ಬಾಗಿಲನ್ನು ಪ್ರವೇಶಿಸುತ್ತೇವೆ. ಬಾಗಿಲ ಅಕ್ಕ-ಪಕ್ಕದಲ್ಲಿರುವ ಕೋಟೆಯ ಗೋಡೆಯು ಭದ್ರವಾಗಿದ್ದು, ಇಳಿಜಾರು ಪ್ರದೇಶದಲ್ಲಿದ್ದ ಕೋಟೆಯು ಹಾಳಾಗಿದೆ. ಈ ಕೋಟೆಯ ಪ್ರದೇಶದಲ್ಲಿ ಮದ್ದಿನ ಹಾಗೂ ಶಸ್ತ್ರಸಂಗ್ರಹಾಲಯ, ರಾಜನು ದರಬಾರು ಮಾಡುತ್ತಿದ್ದ ಸಭಾಂಗಣ, ನೀರಿನ ಸೌಕರ್ಯಕ್ಕಾಗಿ ಚಿಕ್ಕದೇವಿ ದೊಣೆ, ಅಕ್ಕ ತಂಗಿಯರ ದೊಣೆ, ಎಂಜಲೆಲೆಯ ದೊಣೆ, ಬೆಟ್ಟದ ಪೂರ್ವದಿಕ್ಕಿನ ಕಲ್ಲಿನಲ್ಲಿ ಕೆತ್ತಿರುವ ಹುಲಿಯನ್ನು ಕೊಂಡು ಎಳೆದೊಯ್ಯುವ ರೇಖಾಚಿತ್ರ ಹಾಗೂ ಅಲ್ಲಲ್ಲಿ ಒಳಕಲ್ಲು, ರಾಗಿಕಲ್ಲುಗಳ ಅವಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ.

ಒಟ್ಟಿನಲ್ಲಿ ಹುಲಿಯೂರು ದುರ್ಗದ ಕೋಟೆಯು ಮೈಸೂರು ಅರಸರು ಹಾಗೂ ಇಂಗ್ಲೀಷ್‌ರ ಕಾಲಕ್ಕೆ ಸುಭದ್ರವಾಗಿದ್ದು, ನಂತರ ಇದು ಪ್ರಕೃತಿ ವಿಕೋಪದಿಂದ ಮತ್ತು ಸ್ಥಳೀಯ ಜನರ ನಿರ್ಲಕ್ಷ್ಯದಿಂದ ಹಾಳಾಗಿದೆ ಎಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಇಲ್ಲಿನ ಕೋಟೆಯ ರಚನೆಯನ್ನು ಗಮನಿಸಿದಾಗ ನೀಲಿ ಮತ್ತು ಕಪ್ಪು ಮಿಶ್ರಿತ ಸಣ್ಣ ಸಣ್ಣ ಸೈಜುಗಳಲ್ಲುಗಳನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಈ ಕಲ್ಲುಗಳನ್ನು ಒಂದರ ಮೇಲೊಂದರಂತೆ ಪಿರಮಿಡ್ಡಿನ ರೀತಿ ಪೇರಿಸಲಾಗಿದೆ. ಈ ಕೋಟೆ ಗೋಡೆಯ ಸಂಧಿಗೆ ಗಾರೆ ಬಳಸದೇ ಬರೀ ಮಣ್ಣನ್ನು ಬಳಸಿ ನಿರ್ಮಿಸಿರುವುದು ವಿಶೇಷವಾಗಿದೆ.

ಕೋಟೆಯೊಳಗಿರುವ ದೇವಾಲಯಗಳು

ಗೋಪಾಲಕೃಷ್ಣಸ್ವಾಮಿ ದೇವಸ್ಥಾನ : ಈ ದೇವಾಲಯವು ಎರಡನೇ ಸುತ್ತಿನ ಕೋಟೆಯ ಒಳಗಡೆ ಇದ್ದು, ಇದನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದು, ಅದರಲ್ಲಿ ಗರ್ಭಗುಡಿ, ಸುಕನಾಶಿ ಮತ್ತು ನವರಂಗವನ್ನು ಒಳಗೊಂಡಿದೆ. ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಗೋಪಾಲಕೃಷ್ಣಸ್ವಾಮಿಯ ನಯವಾದ ಮೂರ್ತಿಯಿದೆ. ಮೇಲ್ಛಾವಣಿಯಲ್ಲಿ ಕಲ್ಲಿನ ಚಪ್ಪಡಿಗಳಿಂದ ನಕ್ಷತ್ರಾಕಾರವಾಗಿ ಅಷ್ಟಕೋನದ ವಿನ್ಯಾಸವನ್ನು ರೂಪಿಸಲಾಗಿದೆ. ಇದಕ್ಕೆ ಬಾಗಿಲಿದ್ದು, ಇಕ್ಕೆಲಗಳಲ್ಲಿ ಉಬ್ಬು ಚಿತ್ರಗಳನ್ನು ಬಿಡಿಸಲಾಗಿದೆ. ಇದರ ಮುಂದಿನ ಭಾಗ ಅಂತರಾಳ ಅಥವಾ ಸುಕನಾಶಿಯಿದೆ. ತೆರೆದ ಮುಖಮಂಟಪಕ್ಕೂ ಮತ್ತು ಅಂತರಾಳಕ್ಕೂ ಮಧ್ಯೆ ನವರಂಗ ಅಥವಾ ರಂಗ ಮಂಟಪವಿದೆ. ಇದು ನಾಲ್ಕು ಕಂಬಗಳ ಆಧಾರದ ಮೇಲೆ ನಿರ್ಮಿತವಾಗಿದೆ. ಕಂಬ ಮತ್ತು ಬಾಗಿಲ ಹೊಸ್ತಿಲ ಮೇಲೆ ದೇವತೆ ಮತ್ತು ಪ್ರಾಣಿಯ ಉಬ್ಬು ಚಿತ್ರಗಳನ್ನು ಬಿಡಿಸಲಾಗಿದೆ. ತೆರೆದ ಮುಖ ಮಂಟಪವನ್ನು ಒಟ್ಟು ೧೦ ಕಂಬಗಳ ಆಧಾರದಿಂದ ನಿರ್ಮಿಸಲಾಗಿದೆ. ಇಲ್ಲಿನ ಕಂಬಗಳು ಆಕರ್ಷಣೀಯವಾದ ಉಬ್ಬುಗೆತ್ತನೆಯ ಶಿಲ್ಪವನ್ನು ಹೊಂದಿವೆ. ಈ ಭಾಗವು ಬಿರುಕುಬಿಟ್ಟಿದ್ದು, ಬೀಳುವ ಸ್ಥಿತಿಯಲ್ಲಿದೆ.

ಲಕ್ಷ್ಮೀ ದೇವಸ್ಥಾನ : ಇದು ಗೋಪಾಲಕೃಷ್ಣ ದೇವಸ್ಥಾನದ ಬಲಭಾಗಕ್ಕೆ ಇದೆ. ಇದು ಪೂರ್ವಾಭಿಮುಖ ವಾಗಿದ್ದು, ಗರ್ಭಗೃಹ ಮತ್ತು ರಂಗ ಮಂಟಪವನ್ನು ಮಾತ್ರ ಒಳಗೊಂಡಿದೆ. ಗರ್ಭಗೃಹದಲ್ಲಿ

ಕಪ್ಪುಶಿಲೆಯ ನಯವಾದ ಲಕ್ಷ್ಮೀ ಮೂರ್ತಿಯನ್ನು ಒಳಗೊಂಡಿದೆ. ರಂಗಮಂಟಪವು ನಾಲ್ಕು ಕಂಬಗಳ ಆಧಾರದ ಮೇಲೆ ನಿರ್ಮಿಸಲಾಗಿದೆ. ಎರಡು ಭಾಗಗಳು ಬಾಗಿಲುಗಳನ್ನು ಒಳಗೊಂಡಿವೆ.

ಈ ದೇವಾಲಯಗಳಲ್ಲದೆ ಮೊದಲನೆ ಕೋಟೆಯಲ್ಲಿರುವ ಬಸವಣ್ಣನ ಗುಡಿ, ಬೆಟ್ಟದ ಮಧ್ಯ ಭಾಗದಲ್ಲಿ ಬೃಹತ್ ಬಂಡೆಯಲ್ಲಿ ಕೆತ್ತಿರುವ ಗಣಪತಿ ಮತ್ತು ಆಂಜನೇಯನ ಉಬ್ಬುಶಿಲೆಗಳನ್ನು ಕಾಣಬಹುದಾಗಿದೆ. ಈ ಉಬ್ಬುಶಿಲೆಗಳಿಗೆ ಈಗ ದೇವಾಲಯ ನಿರ್ಮಿಸಿ, ಪ್ರತಿವರ್ಷ ವಿಶೇಷ ಉತ್ಸವಗಳನ್ನು ಮಾಡುತ್ತಿದ್ದಾರೆ.

ಹುತ್ರಿದುರ್ಗದ ಕೋಟೆ

ಕುಣಿಗಲ್ ತಾಲ್ಲೂಕಿನ ಆಗ್ನೇಯ ದಿಕ್ಕಿಗೆ ಈ ದುರ್ಗವಿದೆ. ಇದು ೧೯ ಕಿ.ಮೀ. ದೂರದಲ್ಲಿದೆ. ಹುತ್ರಿದುರ್ಗವು ಸಮುದ್ರ ಮಟ್ಟದಿಂದ ೩,೭೧೩ ಅಡಿ ಎತ್ತರದಲ್ಲಿದೆ.[೧೫೫] ಹುತ್ರಿದುರ್ಗಕ್ಕೆ ದೊಡ್ಡ ಬೆಟ್ಟವೆಂತಲೂ ಕರೆಯುತ್ತಾರೆ. ಈ ಬೆಟ್ಟದ ನೈರುತ್ಯ ದಿಕ್ಕಿಗೆ ಬಸವನ ಬೆಟ್ಟವಿದೆ. ಇದರ ಮಧ್ಯೆ ಒಂದು ಊರು ಇದೆ. ಇದನ್ನು ಹುತ್ರಿಬೆಟ್ಟವೆಂತಲೂ, ಸಂತೇಪೇಟೆಯಂತಲೂ ಕರೆಯುತ್ತಾರೆ. ಈ ಎರಡು ಬೆಟ್ಟದಲ್ಲಿ ಕೋಟೆ ಕೊತ್ತಲಗಳ ಅವಶೇಷಗಳು ಇದೆ. ಇಲ್ಲಿರುವ ಕೋಟೆಯು ಬಹಳ ಭದ್ರವಾಗಿದೆ. ಜೊತೆಗೆ ಅಭೇಧ್ಯವಾಗಿಯೂ ಇದೆ. ಬೆಟ್ಟದ ತುದಿಗೇರಲು ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದೆ. ಸಾಮಾನ್ಯವಾಗಿ ಹುಲಿಯೂರು ದುರ್ಗ ಮತ್ತು ಕುಣಿಗಲ್‌ನ ಇತಿಹಾಸವು ಹುತ್ರಿ ದುರ್ಗದ ಇತಿಹಾಸವಾಗಿದೆ ಎಂದು ಹಲವಾರು ಆಧಾರಗಳಿಂದ ತಿಳಿಯಬಹುದಾಗಿದೆ.

ಹುತ್ರಿದುರ್ಗವು ಗಂಗರ ಆಳ್ವಿಕೆಯಿಂದ ಪ್ರಾರಂಭವಾಗಿದೆ. ಅದು ಕ್ರಿ.ಶ.೭೮೬ರಲ್ಲಿ ಗಂಗರಾಜರ ಸಾಮಂತ ಶಿವಮಾರ ಎಂಬುವನಿಂದ ಕುಣಿಗಲ್ ಕೇಂದ್ರಸ್ಥಾನವಾಗಿ ಈ ಸುತ್ತಲ ಪ್ರದೇಶ ಆಳ್ವಿಕೆಗೆ ಒಳಪಟ್ಟಿದೆ. ನಂತರ ಚೋಳರು ಕುಣಿಗಲ್ ಪ್ರದೇಶವನ್ನು 'ರಾಜೇಂದ್ರ ಚೋಳಪುರಂ' ಎಂದು ಹೆಸರಿಟ್ಟುಕೊಂಡು ಆಡಳಿತ ಮಾಡಿದರು. ತುಮಕೂರು ಜಿಲ್ಲೆಗೆ ಹೊಂದಿಕೊಂಡು ದ್ವಾರಸಮುದ್ರದ ಹೊಯ್ಸಳರು ರಾಜ್ಯಭಾರ ಮಾಡುತ್ತಿದ್ದರು. ಆ ಸಮಯದಲ್ಲಿ ಹೊಯ್ಸಳ ಸಾಮಂತ ರಾಮನಾಥನು ಆಳ್ವಿಕೆ ಮಾಡುತ್ತಿದ್ದನು. ಕ್ರಿ.ಶ.೧೫೬೭ರಲ್ಲಿ ವಿಜಯನಗರದರಸ ಸದಾಶಿವರಾಯನು ಈ ಪ್ರದೇಶದ ಹಿಡಿತ ಹೊಂದಿದ್ದನು ಎಂದು ಕಿಚ್ಚವಾಡಿಯ ಶಾಸನ ಉಲ್ಲೇಖಿಸುತ್ತದೆ.[೧೫೬]

ಕೃಷ್ಣದೇವರಾಯನ ಸಮಕಾಲೀನನಾದ ಚನ್ನಪಟ್ಟಣದ ಜಗದೇವರಾಯನು ಹುತ್ರಿದುರ್ಗವನ್ನು ಆಳ್ವಿಕೆ ಮಾಡುತ್ತಿದ್ದ. ಬೆಂಗಳೂರು ಕೆಂಪೇಗೌಡ ಕ್ರಿ.ಶ.೧೫೭೬ರಲ್ಲಿ ಹುತ್ರಿದುರ್ಗ ಹುಲಿಯೂರು ದುರ್ಗ ವಶಪಡಿಸಿಕೊಂಡು ಕೋಟೆಕೊತ್ತಲ ನಿರ್ಮಿಸಿ, ಹಲವಾರು ದೇವಾಲಯ ಮತ್ತು ಇನ್ನಿತರ ಸ್ಮಾರಕಗಳನ್ನು ನಿರ್ಮಿಸಿ ಜನರ ಮನದಲ್ಲಿ ಉಳಿದನು. ಇಮ್ಮಡಿ ಕೆಂಪೇಗೌಡನ ತಮ್ಮನಾದ ಕೆಂಪು ಸೊಮಣ್ಣನಿಗೆ

ವಹಿಸಿಕೊಟ್ಟು ಆಗಾಗ್ಗೆ ಹುತ್ರಿಬೆಟ್ಟಕ್ಕೆ ಭೇಟಿ ನೀಡುತ್ತಿದ್ದನು. ೧೬೫೬ರಲ್ಲಿ ಹುತ್ರಿದುರ್ಗವನ್ನು ರಣದುಲ್ಲಾಖಾನನು ವಶಪಡಿಸಿಕೊಳ್ಳುತ್ತಾನೆ. ಇದರಿಂದ ಮಹಾರಾಜ ಶ್ರೀ ದೊಡ್ಡ ರಾಜಒಡೆಯರ್‌ರವರು ೧೬೬೭ರಲ್ಲಿ ರಣದುಲ್ಲಾಖಾನನ್ನು ಸೋಲಿಸಿ ಹುತ್ರಿದುರ್ಗವನ್ನು ಪಡೆದುಕೊಳ್ಳುತ್ತಾರೆ. ಕ್ರಿ.ಶ.೧೭೫೭ರಲ್ಲಿ ಮರಾಠರ ಪೇಶ್ವೆ ಬಾಲಾಜಿರಾಯನು ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದ ಪರಿಣಾಮದಿಂದ ಶಾಂತಿ ಒಪ್ಪಂದ ಮಾಡಿಕೊಳ್ಳುತ್ತಾರೆ. ಇದರಿಂದ ೩೨ ಲಕ್ಷ ಹಣ ಕೊಡಲು ಮೈಸೂರು ಒಡೆಯರು ಬಾಧ್ಯರಾಗುತ್ತಾರೆ. ಖಜಾನೆಯಲ್ಲಿ ಹಣವಿಲ್ಲದ್ದರಿಂದ ತಮ್ಮ ಅಧೀನದಲ್ಲಿದ್ದ ಪ್ರದೇಶಗಳನ್ನು ಬಿಟ್ಟುಕೊಡುತ್ತಾರೆ. ಅದರಲ್ಲಿ ಹುತ್ರಿದುರ್ಗವು ಮರಾಠರ ವಶವಾಗುತ್ತದೆ.[೧೫೭]

ಹೈದರಾಲಿಯು ಮೈಸೂರು ಆಳ್ವಿಕೆ ಮಾಡಲು ಪ್ರಾರಂಭಿಸಿದಾಗ ಮರಾಠರ ವಶದಲ್ಲಿದ್ದ ಪ್ರದೇಶಗಳನ್ನು ಯುದ್ಧದಿಂದ ಪುನಃ ಪಡೆಯುತ್ತಾನೆ. ಹೈದರ್-ಟಿಪ್ಪು ಕಾಲದಲ್ಲಿ ಈ ಕೋಟೆಯು ಬಹಳ ಭದ್ರವಾಗಿತ್ತೆಂದು ಮತ್ತು ಅವರ ಇತರೆ ಸೈನ್ಯದ ಠಾಣ್ಯಹೂಡಲು ಸರಿಯಾದ ಕೋಟೆಯೆಂದು ಭಾವಿಸಿದ್ದರು. ಲಾರ್ಡ್ ಕಾರ್ನ್‌ವಾಲೀಸ್ ಕ್ರಿ.ಶ.೧೭೯೨ರಲ್ಲಿ ಹುತ್ರಿದುರ್ಗವನ್ನು ತನ್ನ ತೆಕ್ಕಗೆ ತೆಗೆದುಕೊಂಡನು.[೧೫೮]

ಕ್ರಿ.ಶ.೧೭೯೯ರಲ್ಲಿ ಬ್ರಿಟೀಷರಿಗೂ ಮತ್ತು ಟಿಪ್ಪುವಿಗೂ ೪ನೇ ಮೈಸೂರು ಯುದ್ಧವು ಒಂದು ಅಗ್ನಿಪರೀಕ್ಷೆ. ಅದರಲ್ಲಿ ಟಿಪ್ಪುವಿನ ಅಂತ್ಯವಾಯಿತು. ಇಲ್ಲಿಂದ ಈ ಪ್ರದೇಶವೆಲ್ಲ ಬ್ರಿಟೀಷರ ಪಾಲಾಯಿತು. ಕೊನೆಗೆ ಬ್ರಿಟೀಷರು ಮೈಸೂರು ಅರಸರಿಗೆ ಮೈಸೂರು ಪ್ರಾಂತ್ಯವನ್ನು ಬಿಟ್ಟುಕೊಟ್ಟಾಗ ಹುತ್ರಿದುರ್ಗವು ರಾಜ್ಯದಲ್ಲಿ ಲೀನವಾಯಿತು.

ಒಟ್ಟಾರೆಯಾಗಿ ಮಾಗಡಿ ಕೆಂಪೇಗೌಡನಿಂದ ಈ ದುರ್ಗವು ಅಸ್ಥಿತ್ವಕ್ಕೆ ಬಂದರೂ ಪರರ ಆಕ್ರಮಣದಿಂದ ಕೋಟೆಯು ಹಸ್ತಾಂತರಗೊಳ್ಳತೊಡಗಿತು. ಇದರಲ್ಲಿ ಹೆಚ್ಚು ಮೈಸೂರು ಒಡೆಯರು ಈ ದುರ್ಗವನ್ನು ಆಳ್ವಿಕೆ ಮಾಡಿರುವುದು ಕಾಣಬಹುದು. ಕೋಟೆಯು ಶಿಥಿಲವಾಗದೆ ಈಗಲೂ ಅಭೇಧ್ಯವಾಗಿದೆ. ಈ ದುರ್ಗದಲ್ಲಿರುವ ಜನರು ಕೋಟೆಯ ಸಂರಕ್ಷಣೆಯೊಂದಿಗೆ ಅಪಾರ ಜನಪದ ಮಾಹಿತಿಯನ್ನು ನೀಡುತ್ತಾರೆ. ಇವರಿಗಿರುವ ಕಾಳಜಿಯಿಂದಲೇ ಈ ಕೋಟೆಯು ಶಿಥಿಲವಾಗದೇ ಇರಲು ಸಾಧ್ಯವಾಗಿದೆ.

ಹುತ್ರಿದುರ್ಗದ ಕೋಟೆಯ ಲಕ್ಷಣಗಳು

ಹುತ್ರಿದುರ್ಗದ ಬೆಟ್ಟ ಮತ್ತು ಬಸವನ ಬೆಟ್ಟವನ್ನು ಒಳಗೊಂಡಂತೆ ಬಲವಾದ ಕೋಟೆಯನ್ನು ನಿರ್ಮಿಸಲಾಗಿದೆ. ಇವೆರಡು ಬೆಟ್ಟಗಳು ಉತ್ತರ-ದಕ್ಷಿಣವಾಗಿದ್ದು, ಮಧ್ಯೆ ವಿಶಾಲವಾದ ಪ್ರದೇಶವನ್ನು ಹೊಂದಿದೆ. ಈ ಬೆಟ್ಟಗಳನ್ನು ಮತ್ತು ವಿಶಾಲವಾದ ಪ್ರದೇಶವನ್ನು ಒಳಗೊಂಡಂತೆ ಪೂರ್ವ-ಪಶ್ಚಿಮದ ಕಡೆಯಲ್ಲಿ ಎರಡು ಬಲವಾದ ಕೋಟೆಯನ್ನು ನಿರ್ಮಿಸಿ, ಎರಡು ಬೆಟ್ಟಗಳನ್ನು ಒಂದಾಗಿಸಿವೆ. ಈ ಎರಡು ಕೋಟೆಯಲ್ಲಿ ಪಶ್ಚಿಮದ ಕೋಟೆ ಶಿಥಿಲವಾಗದೆ ಉಳಿದಿದ್ದು, ಪೂರ್ವದ ಕೋಟೆಯನ್ನು ಇಲ್ಲಿನ ಜನರು

ವ್ಯವಸಾಯದ ಸಂದರ್ಭದಲ್ಲಿ ಹಾಳು ಮಾಡಿದ್ದಾರೆ. ಆದರೂ ಅಲ್ಲಲ್ಲಿ ಅಳಿದುಳಿದಿರುವ ಅವಶೇಷಗಳ ಆಧಾರದಿಂದ ಕೋಟೆಯ ರಚನೆಯನ್ನು ಗುರುತಿಸಬಹುದಾಗಿದೆ. ಎರಡು ಬೆಟ್ಟಗಳಲ್ಲಿ ಕೋಟೆಯು ಶಿಥಿಲವಾಗದೇ ಹಾಗೆಯೇ ಉಳಿದುಕೊಂಡು ಬಂದಿದೆ. ಒಂದು ಬೆಟ್ಟಕ್ಕೂ ಇನ್ನೊಂದು ಬೆಟ್ಟಕ್ಕೂ ಅರ್ಧ ಕಿ.ಮೀ.ಅಂತರ ಈ ಎರಡು ಬೆಟ್ಟಗಳ ನಡುವೆ ಐವತ್ತು ವಸತಿಗಳ ಗ್ರಾಮವಿದೆ. ಇದನ್ನು 'ಸಂತೆಪೇಟೆ' ಎಂದು ಕರೆಯುತ್ತಾರೆ.

ಹುತ್ರಿದುರ್ಗದ ಮೊದಲ ಕೋಟೆಯನ್ನು ಪ್ರವೇಶಿಸಬೇಕೆಂದರೆ ಉತ್ತರ ದಿಕ್ಕಿಗಿರುವ ದಿಡ್ಡಿ ಬಾಗಿಲನ್ನು ದಾಟಿ ಮುಂದೆ ಪೂರ್ವದ ಕಡೆಗೆ ತಿರುಗಿದರೆ 'ಸಂತೆಪೇಟೆಗೆ' ಹೋಗುವ ಊರ ಹೆಬ್ಬಾಗಿಲನ್ನು ಕಾಣುತ್ತೇವೆ. ಈ ಹೆಬ್ಬಾಗಿಲು ಶಿಥಿಲವಾಗದೆ ಉಳಿದಿದ್ದು, ಇದರ ನಿಲುವುಗಳಿಗೆ ಮತ್ತು ಇದಕ್ಕೆ ಹೊಂದಿಕೊಂಡ ಮಂಟಪದ ಕಂಬಗಳಿಗೆ ಉಬ್ಬು ಶಿಲ್ಪಗಳನ್ನು ಕೆತ್ತಿದ್ದಾರೆ. ಇಲ್ಲಿ ಒಂದು ಶಾಸನವು ಇದ್ದು, ಅಸ್ಪಷ್ಟವಾಗಿದೆ. ಊರ ಹೆಬ್ಬಾಗಿಲಿನಿಂದ ಮುಂದೆ ಸಾಗಿದರೆ ಸಂತೆಪೇಟೆ ಗ್ರಾಮ ಇದೆ. ಇದರ ಉತ್ತರ ದಿಕ್ಕಿಗೆ ಹುತ್ರಿದುರ್ಗವಿದೆ. ಈ ಊರನ್ನು ಸುತ್ತವರೆದಿರುವ ಕೋಟೆಗೆ ಬಾಳೆಕಟ್ಟೆ ಬಾಗಿಲು, ಮಾಗಡಿ ಬಾಗಿಲು ಮತ್ತು ಎಲಿಯೂರು ಬಾಗಿಲುಗಳಿವೆ.[೧೫] ಇವು ಆಯಾಯ ಊರುಗಳ ಕಡೆ ಇರುವ ಬಾಗಿಲುಗಳಿಗೆ ಆ ಊರಿನ ಹೆಸರನ್ನು ಇಡಲಾಗಿದೆ.

ಹುತ್ರಿದುರ್ಗದ ಬೆಟ್ಟಕ್ಕೆ ಒಟ್ಟು ೭ ಕೋಟೆಯ ಸುತ್ತನ್ನು ಆಯಕಟ್ಟಿನ ಜಾಗದಲ್ಲಿ ನಿರ್ಮಿಸಿದ್ದು, ಅವುಗಳಿಗೆ ಇಲ್ಲಿನ ಸ್ಥಳಿಯರು ಒಂದೊಂದು ಹೆಸರನ್ನು ಹಿಡಿದು ಕರೆಯುವುದು ರೂಢಿಯಿದೆ. ಅದರಲ್ಲಿ ಕಲ್ಲುಕೋಟೆ, ಎಮ್ಮೆದೊಣ್ಣೆಯ್ಯನ ಕೋಟೆ, ತಬಸೆಮರದ ಕೋಟೆ, ದೊರೆಕೋಟೆ, ಸೋಗೆ ಕೋಟೆಗಳಿವೆ (ವಕ್ತೃ : ಭೀರಪ್ಪ ಕೆ. ಹುತ್ರಿದುರ್ಗ). ಇವುಗಳನ್ನು ಹೇಳುವಲ್ಲಿ ಅದಲು ಬದಲು ಮಾಡಿ ಹೇಳಿರುವುದು ಕಂಡುಬರುತ್ತದೆ. ಈ ಬೆಟ್ಟಕ್ಕೆ ಎಲ್ಲೆಲ್ಲಿ ಆಯಕಟ್ಟಿನ ಜಾಗವಿದೆಯೋ ಅಲ್ಲಲ್ಲಿ ಕೋಟೆಯನ್ನು ನಿರ್ಮಿಸಿದ್ದಾರೆ. ಬೆಟ್ಟದ ತುದಿಯ ತನಕ ಒಟ್ಟು ೭ ಬಾಗಿಲುಗಳನ್ನು ಕಾಣುತ್ತೇವೆ. ಊರಿನಿಂದ ಬೆಟ್ಟದ ತುದಿಗೆ ಹೋಗುವವರೆಗೂ ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದೆ. ಇಲ್ಲಿನ ಎಲ್ಲಾ ಬಾಗಿಲ ನಿಲುವು ಹೊಸ್ತಿಲುಗಳಲ್ಲಿ ಪ್ರಾಣಿ, ಪಕ್ಷಿ ಮತ್ತು ಹೂವಿನ ಚಿತ್ರಗಳನ್ನು ಕೆತ್ತಲಾಗಿದೆ.

ಬೆಟ್ಟದ ಮೊದಲ ಕೋಟೆಯು ಶಿಥಿಲಗೊಂಡಿದ್ದು, ಇದರ ಬಾಗಿಲು ದಕ್ಷಿಣ ದಿಕ್ಕಿಗೆ ತೆರೆದುಕೊಂಡಿದೆ. ಇನ್ನು ಎರಡನೇ ಕೋಟೆಯು ಮೊದಲ ಕೋಟೆಗೆ ಸಂಧಿಸಿ, ಬೆಟ್ಟದ ಆಯಕಟ್ಟಿನ ಜಾಗದವರೆಗೆ ಮುಂದುವರೆದಿದೆ. ಈ ಕೋಟೆಯ ಬಾಗಿಲ ಬಲಭಾಗಕ್ಕೆ ಒಂದು ಕೊತ್ತಲವನ್ನು ನಿರ್ಮಿಸಿದ್ದು, ಇದು ಮೂರು ಫಿರಂಗಿ ಕಿಂಡಿಗಳನ್ನು ಒಳಗೊಂಡಿದೆ. ಇದನ್ನು ಇಟ್ಟಿಗೆ ಮತ್ತು ಗಾರೆಯ ಸಹಾಯದಿಂದ ನಿರ್ಮಿಸಲಾಗಿದೆ. ಮೂರನೇ ಕೋಟೆಯು ಮಧ್ಯಮ ಕಲ್ಲುಗಳಿಂದ ನಿರ್ಮಿತವಾಗಿದ್ದು, ಅದರ ಮೇಲೆ ಸೈನಿಕರು ಓಡಾಡಲು ಸ್ಥಳವನ್ನು ಬಿಡಲಾಗಿದೆ. ಇಲ್ಲಿಂದ ಮೇಲಕ್ಕೆ ಇರುವ ಕೈಪಿಡಿ ಗೋಡೆಯು ಇಟ್ಟಿಗೆ

ಗಾರೆಯಿಂದ ಕಟ್ಟಿದೆ. ಅಗಲವಾದ ಕೈಪಿಡಿ ಗೋಡೆ ಹೊರಭಾಗದಲ್ಲಿ ಇಳಿಜಾರಾಗಿದೆ. ಇದರಲ್ಲಿ ಬಂದೂಕು ಕಿಂಡಿಗಳಿವೆ. ಕೊತ್ತಲಗಳ ಕೈಪಿಡಿ ಗೋಡೆಯಲ್ಲಿ ಗೋಪುರಗಳಿಗಾಗಿ ಬಿಟ್ಟ ಅಗಲವಾದ ಸಂಧಿಗಳಿವೆ. ಈ ಕೋಟೆಯ ಬಾಗಿಲ ಎಡಭಾಗಕ್ಕೆ ಎರಡು ಕೊತ್ತಲಗಳನ್ನು ಕಟ್ಟಲಾಗಿದೆ. ಇಲ್ಲಿಂದ ಮುಂದೆ ಸಾಗುವಾಗ ಬಲಭಾಗದಲ್ಲಿ ಮೇಲಿನಿಂದ ಬರುವ ನೀರಿಗೆ ತಡೆಗೋಡೆಯನ್ನು ನಿರ್ಮಿಸಿದ ಒಂದು ದೋಣೆಯಿದೆ. ಈ ದೋಣೆಯಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ತುಂಬಿರುತ್ತದೆ ಎನ್ನುವುದು ಸ್ಥಳೀಯರ ಅಭಿಪ್ರಾಯ. ನಾಲ್ಕನೆಯ ಕೋಟೆಯನ್ನು ಬಹಳಷ್ಟು ಉದ್ದವಾಗಿ ನಿರ್ಮಿಸಿಲ್ಲ. ಇದನ್ನು ಇಳಿಜಾರು ಬಂಡೆಯಲ್ಲಿ ನಿರ್ಮಿಸಿದ್ದಾರೆ. ಐದನೇ ಕೋಟೆಯನ್ನು ಪೂರ್ವದಿಕ್ಕಿನಿಂದ ಒಳಪ್ರವೇಶಿಸಬೇಕು. ಈ ಕೋಟೆಗೆ ಎರಡು ಕೊತ್ತಲಗಳನ್ನು ಕಟ್ಟಲಾಗಿದೆ. ಇವೆರಡು ಬಾಗಿಲ ಬಲಭಾಗದ ಸ್ವಲ್ಪ ದೂರದಲ್ಲಿವೆ. ಇವು ಎತ್ತರದ ಪ್ರದೇಶದಲ್ಲಿ ಇರುವುದರಿಂದ ಬಂದೂಕು, ಫಿರಂಗಿ ಕಿಂಡಿಗಳನ್ನು ಹೆಚ್ಚಿನದಾಗಿ ಹೊಂದಿವೆ. ಆರನೆಯ ಕೋಟೆಯ ಬಾಗಿಲು ಪಶ್ಚಿಮ ದಿಕ್ಕಿನಲ್ಲಿದ್ದು, ಅದನ್ನು 'ಮೈಸೂರು ಬಾಗಿಲು' ಎಂದು ಕರೆಯುತ್ತಾರೆ. ಈ ಕೋಟೆಗೋಡೆಯ ಕಲ್ಲುಗಳಿಗೆ ಯಾವುದೇ ಸಂಧಿಗೆ ಬಂಧವಿಲ್ಲದೆ ನಿರ್ಮಿಸಲಾಗಿದೆ. ಈ ಗೋಡೆಯನ್ನು ಬಂಡೆಯ ಇಳಿಜಾರಿನಲ್ಲಿ ನಿರ್ಮಿಸಿರುವುದರಿಂದ ಗೋಡೆಯು ಜರುಗದಂತೆ ಕೆಳಗೆ ಕಬ್ಬಿಣದ ಸಲಾಕೆಗಳನ್ನು ಅಲ್ಲಲ್ಲಿ ಬಂಡೆಗೆ ಹೊಡೆದು ನಿಲ್ಲಿಸಲಾಗಿದೆ. ಈ ಕೋಟೆಯ ಬಾಗಿಲ ಬಲಭಾಗಕ್ಕೆ ಒಂದು ಕೊತ್ತಲವನ್ನು ನಿರ್ಮಿಸಿದ್ದು, ಇದರ ಕೈಪಿಡಿ ಗೋಡೆಯು ಗಾರೆ, ಇಟ್ಟಿಗೆಯಿಂದ ಕಟ್ಟಿದೆ. ಅಲ್ಲಲ್ಲಿ ಬಂದೂಕು ಗಂಡಿಗಳನ್ನು ಮತ್ತು ಕೊತ್ತಲದಲ್ಲಿ ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ.

ಈ ದುರ್ಗದ ಕುಂಭಿಯನ್ನು ಸುತ್ತುವರೆದ ಕೊನೆ ಕೋಟೆಯು ಅಭೇದ್ಯವಾಗಿದ್ದು, ಸುತ್ತಲೂ ಕೊತ್ತಲ, ಬುರುಜುಗಳನ್ನು ಹೊಂದಿದೆ. ಈ ಕೋಟೆಗೆ ಬಾಗಿಲಿದ್ದು, ಅದು ದಕ್ಷಿಣ ದಿಕ್ಕಿಗೆ ತೆರೆದುಕೊಂಡಿದೆ. ಇಲ್ಲಿಂದ ಒಳಪ್ರವೇಶಿಸಿದರೆ, ಮುಂದೆಯೇ ಒಂದು ಚಿಕ್ಕದಾದ ಕೋಟೆಯನ್ನು ನಿರ್ಮಿಸಿದ್ದಾರೆ. ಇದಕ್ಕೆ ಚಿಕ್ಕ ಬಾಗಿಲನ್ನು ಇಡಲಾಗಿದ್ದು, ಅದು ಈಗ ಬಿದ್ದು ಹೋಗಿದೆ. ಈ ಕೋಟೆಯ ಒಳಭಾಗದಲ್ಲಿ ವಿಶಾಲವಾದ ಪ್ರದೇಶವಿದ್ದು, ಹಲವು ಅವಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ. ಅದರಲ್ಲಿ ಎತ್ತರದ ಬಂಡೆಯ ಮೇಲೆ ಪೂರ್ವಾಭಿಮುಖವಾಗಿ ನಿರ್ಮಿಸಿರುವ ಕುಂಭಿ ಶಂಕರ ದೇವಸ್ಥಾನವನ್ನು ಕಾಣಬಹುದು. ಈ ದೇವಸ್ಥಾನದಲ್ಲಿರುವ ಲಿಂಗವನ್ನು ಶಂಕರಚಾರ್ಯರು ಪ್ರತಿಷ್ಠಾಪಿಸಿದರೆಂದು ಪ್ರತೀತಿಯಿದೆ.[೧೦] ಅದರ ಮುಂದೆ ಒಂದು ನೈಸರ್ಗಿಕವಾದ ದೊಡ್ಡ ದೋಣೆಯಿದೆ. ಇದರಲ್ಲಿ ಸದಾಕಾಲ ನೀರು ಇದ್ದು, ಇದರ ತಳಭಾಗವನ್ನು ಯಾರು ಅರಿಯಲು ಸಾಧ್ಯವಾಗಿಲ್ಲವೆಂದು ಸ್ಥಳೀಯರು ಹೇಳುತ್ತಾರೆ. ಇದು ಶಂಕರ ದೇವಸ್ಥಾನದ ಮುಂದೆ ಇರುವುದರಿಂದ ಶಂಕರ ದೋಣೆಯೆಂದು ಕರೆಯುತ್ತಾರೆ. ಇದರ ಎಡಭಾಗದಲ್ಲಿ ರಾಜನ ದರಬಾರ್ ಕಟ್ಟಡವಿದ್ದು, ಈಗ ಇದು ಶಿಥಿಲಗೊಂಡಿದೆ. ಪಾಳೇಗಾರನು ಇಲ್ಲಿ ನ್ಯಾಯ ತೀರ್ಮಾನವನ್ನು ಮಾಡುತ್ತಿದ್ದನೆಂದು ಹೇಳುತ್ತಾರೆ. ಶಂಕರ ದೇವಸ್ಥಾನದ ಬಲಭಾಗಕ್ಕೆ

ಸ್ವಲ್ಪ ದೂರದಲ್ಲಿ ನೀರಿನ ಸೌಕರ್ಯಕ್ಕಾಗಿ ಎರಡು ದೋಣೆಯನ್ನು ನಿರ್ಮಿಸಲಾಗಿದೆ. ಇವುಗಳಿಗೆ ಅಕ್ಕ ತಂಗಿಯರ ದೋಣೆಯೆಂದು ಕರೆಯಲಾಗಿದೆ. ಇದೇ ಪ್ರದೇಶದಲ್ಲಿ ಕೆಂಪಲಕ್ಕಯ್ಯನ ದೋಣೆಯು ಇದೆ. ಬೆಟ್ಟದ ವಾಯುವ್ಯ ದಿಕ್ಕಿನಲ್ಲಿ ಅರಮನೆ, ಸೂಳೆ ಮನೆ, ಕೆಂಪೇಗೌಡನ ವಿಶ್ರಾಂತಿಗೃಹ ನೋಡಬಹುದು. ಇವೆಲ್ಲವೂ ನಿಧಿಗಳ್ಳರಿಂದ ಅವನತಿ ಹೊಂದಿವೆ. ಅವಶೇಷಗಳನ್ನು ಮಾತ್ರ ಕಾಣಬಹುದಾಗಿದೆ. ಉತ್ತರದಿಕ್ಕಿನ ಕಡೆಗೆ ಧಾನ್ಯದ ಕಣಜ, ಮದ್ದಿನ ಕಣಜಗಳಿವೆ. ಇವು ಗಾರೆ ಮತ್ತು ಕಲ್ಲಿನಿಂದ ನಿರ್ಮಾಣಗೊಂಡಿವೆ. ಅಲ್ಲದೆ ಅಲ್ಲಲ್ಲಿ ಕಟ್ಟಡಗಳ ತಳ ಭಾಗವನ್ನು ಮಾತ್ರ ನೋಡಬಹುದು. ಇವು ವಸತಿ ಗೃಹಗಳ ಅವಶೇಷಗಳೆಂದು ಗುರುತಿಸಬಹುದು.

ಹಾಗಲವಾಡಿ ಕೋಟೆ

ಗುಬ್ಬಿ ತಾಲ್ಲೂಕಿನ ಒಂದು ಹೋಬಳಿ ಕೇಂದ್ರವಾಗಿರುವ ಹಾಗಲವಾಡಿಯು, ತಾಲ್ಲೂಕು ಕೇಂದ್ರದಿಂದ ೨೫.ಕಿ.ಮೀ ದೂರದಲ್ಲಿದೆ. ಪ್ರಾರಂಭದಲ್ಲಿ ಹಾಗಲದ ಹಳ್ಳಿ ಎಂಬ ಹೆಸರಿದ್ದು, ಈ ಹಳ್ಳಿಗೆ ಕೋಟೆಯ ಗೋಡೆಯನ್ನು ಸುತ್ತಲೂ ನಿರ್ಮಿಸಿದ್ದಕ್ಕೆ ಹಾಗಲವಾಡಿ ಎಂದು ಹೆಸರಾಯಿತು. 'ವಾಡಿ' ಎಂದರೆ 'ಗೋಡೆ' ಎಂಬ ಅರ್ಥವನ್ನು ಹೊಂದಿದೆ. ಹಾಗಲವಾಡಿ ಪ್ರದೇಶವನ್ನು ಕ್ರಿ.ಶ.೧೪೭೮ರಿಂದ ೧೭೭೯ರವರೆಗೆ ಸುಮರು ೩೦೦ ವರ್ಷಗಳ ಕಾಲ ವೈಭವವಾಗಿ ಆಳ್ವಿಕೆ ಮಾಡಿದ್ದಾರೆ. ಈ ಹಾಗಲವಾಡಿ ಅರಸರ ಪ್ರಾರಂಭದ ರಾಜಧಾನಿ ಚಿಕ್ಕನಾಯಕನಹಳ್ಳಿಯಾಗಿದ್ದು, ನಂತರ ಹಿರಿ ಮುದಿಯಪ್ಪನಾಯಕನು ಆನೆಗೊಂದಿ ಮೂಲದವನಾದ ಕರಿಯನಾಯಕ ಎಂಬುವನಿಂದ ಹಾಗಲದಳ್ಳಿಯನ್ನು ವಶಪಡಿಸಿಕೊಂಡು ಅಲ್ಲಿ ಕೋಟೆಕೊತ್ತಲಗಳನ್ನು ಕಟ್ಟಿಸಿದನು. ಇದರಿಂದ ಹಾಗಲದಹಳ್ಳಿ ಹಾಗಲವಾಡಿಯಾಯಿತು.[೧೯೧]

ವಿಜಯನಗರ ಸಾಮ್ರಾಜ್ಯ ಕೇಂದ್ರಿಕೃತ ವ್ಯವಸ್ಥೆಗಿಂತ ವಿಕೇಂದ್ರೀಕೃತ ವ್ಯವಸ್ಥೆಗೆ ಹತ್ತಿರವಾಗಿತ್ತು. ಆ ಸಾಮ್ರಾಜ್ಯವನ್ನು ಊಳಿಗಮಾನ್ಯ ವ್ಯವಸ್ಥೆಯ ಅಂಶಗಳುಳ್ಳ ವಿಕೇಂದ್ರೀಕರಣ ತತ್ವಬದ್ಧ ಸಂಯುಕ್ತ ವ್ಯವಸ್ಥೆಯೆಂದು ವರ್ಣಿಸಬಹುದು. ಅಮರನಾಯಕ ಮನೆತನಗಳು ಅಸ್ತಿತ್ವಕ್ಕೆ ಬಂದದು ವಿಜಯನಗರ ಕಾಲದಲ್ಲಿ ವಿಜಯನಗರ ಅರಸರ ಮನ್ನಣೆಯಿಂದ ಎಲ್ಲೆಲ್ಲಿ ಕೋಟೆಗಳನ್ನು ಕಟ್ಟಲು ಅನುಕೂಲಗಳಿದ್ದವೋ ಅಲ್ಲಲ್ಲಿ ಇಂತಹ ಮನೆತನಗಳು ಕಾಣಿಸಿಕೊಂಡವು. ಸುಮಾರು ೧೫ನೇ ಶತಮಾನದ ಕೊನೆಯ ದಶಕದಿಂದ ಆರಂಭವಾಗುವ ಇಂತಹ ಮನೆತನಗಳು ಕೃಷ್ಣರಾಯ ಮತ್ತು ರಾಮರಾಯರ ಕಾಲಕ್ಕೆ ವ್ಯಾಪಕವಾಗಿ ಬೆಳೆದುಬಂದವು. ಈ ಮನೆತನಗಳನ್ನು ಒಂದು ಸರಪಳಿ ಎನ್ನುವುದಾದರೆ, ಹಾಗಲವಾಡಿ ಸಂಸ್ಥಾನ ಅಂತಹ ಸರಪಳಿಯಲ್ಲಿ ಒಂದು ಕೊಂಡಿಯಂತೆ ಇದ್ದಿತು.[೧೯೨]

ಹಾಗಲವಾಡಿ ಸಂಸ್ಥಾನವು ತುಮಕೂರು ಜಿಲ್ಲೆಯಲ್ಲಿ ಹಲವು ಭಾಗಗಳನ್ನು ಆಳಿದ ಒಂದು ಪ್ರಮುಖ ಅರಸು ಮನೆತನವಾಗಿದೆ. ಈ ಸಂಸ್ಥಾನವು ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು ಮತ್ತು ತುಮಕೂರು

ಪ್ರದೇಶಗಳಲ್ಲಿ ತನ್ನ ಬಾಹುಗಳನ್ನು ವಿಸ್ತರಿಸಿಕೊಂಡು, ಅಲ್ಲಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಿಕೊಂಡು ಆಳ್ವಿಕೆ ಮಾಡಿರುವುದು ತಿಳಿಯಬಹುದಾಗಿದೆ. ಈಗ ಉಳಿದಿರುವ ಕೋಟೆಯ ಕುರುಹುಗಳ ಸಹಾಯದಿಂದ ಮತ್ತು ಸಂಸ್ಥಾನದ ಹಲವಾರು ದಾಖಲೆಗಳಿಂದ ಇಲ್ಲಿನ ಇತಿಹಾಸವನ್ನು ಸ್ಥೂಲವಾಗಿ ಅರಿಯಬಹುದಾಗಿದೆ.

ಹಾಗಲವಾಡಿ ಮನೆತನದವರ ಮೂಲ ಪುರುಷನಾದವನು ಯೆರಿಮಾದನಾಯಕನೆಂದು ಈತನು ತುಂಮಳ ಸಂಸ್ಥಾನದಿಂದ ಇಂದಿನ ಚಿಕ್ಕನಾಯಕನಹಳ್ಳಿ ಪ್ರದೇಶಕ್ಕೆ ಅವನು ಹಿರಿಯೂರು, ಹೊಸದುರ್ಗ, ಹುಳಿಯಾರು ಮಾರ್ಗವಾಗಿ ಇಲ್ಲಿಗೆ ಬಂದಿರಬಹುದೆಂದು ಊಹೆ ಮಾಡಿದ್ದಾರೆ.[೧೬೩] ತುಂಮಳ ಸಂಸ್ಥಾನವನ್ನು ಇಂದಿನ ಆಂಧ್ರಪದ್ರೇಶದ ಅನಂತಪುರ ಜಿಲ್ಲೆಯಲ್ಲಿನ ಚಿನ್ನತುಮ್ಮಳು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.[೧೬೪] ಯೆರಿಮಾದನಾಯಕನ ನಂತರ ಬಂದ ನಾಯಕರ ಆಳ್ವಿಕೆಯನ್ನು ಈ ಕೆಳಗೆ ಕಾಣಬಹುದಾಗಿದೆ.

೧. **ಸಾಲಿನಾಯಕ :** ಈತನು ಯೆರಿಮಾದನಾಯಕನು ಮರಣಹೊಂದಿದ ಮೇಲೆ ಪಟ್ಟಕ್ಕೆ ಬಂದನು. ಇವನು ಎರೆಕಟ್ಟೆ ಗ್ರಾಮವನ್ನು ಸ್ಥಾಪಿಸಿ, ಅದನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು.[೧೬೫] ಸಾಲಿನಾಯಕನು ವಿಜಯನಗರ ತುಳುವಂಶದ ಕೃಷ್ಣದೇವರಾಯನ ಸಮಕಾಲೀನನಾಗಿದ್ದನು. ಇತರ ನಾಯಕರ ಸ್ನೇಹತ್ವವನ್ನು ಬೆಳೆಸಿಕೊಂಡು ಅವರು ಸೈನ್ಯವನ್ನು ಅಪೇಕ್ಷಿಸಿದಾಗ ಕೆಲವು ಪರತ್ತನ್ನು ಹಾಕಿ, ಅವರಿಂದ ಕೆಲವು ಪ್ರದೇಶಗಳನ್ನು ಪಡೆದುಕೊಳ್ಳುತ್ತಿದ್ದನು. ಇದರಿಂದ ಕಂದೀಕೆರೆ, ಶೆಟ್ಟಿಕೆರೆ ಪ್ರದೇಶಗಳನ್ನು ಪಡೆದುಕೊಂಡನು. ಜೊತೆಗೆ ಹೊನ್ನವಳ್ಳಿ, ನೊಣವಿನ ಕೆರೆ, ತುರುವೇಕೆರೆ ಪ್ರದೇಶಗಳನ್ನು ಆಕ್ರಮಣದಿಂದ ವಶಪಡಿಸಿಕೊಂಡನು.[೧೬೬] ಈತನ ಹೆಸರಿನ ಬಗೆಗೆ ಬಿ.ಎಲ್.ರೈಸ್ ರವರು ಸುತ್ತಮುತ್ತಲ ಪ್ರದೇಶಗಳನ್ನು ಜಯಿಸುತ್ತಾ ಬಂದ ಕಾರಣ ಇವನಿಗೆ ಸಾಲು ನಾಯಕ>ಸಾಲಿನಾಯಕ ಎಂಬ ಹೆಸರು ಬಂತು ಎನ್ನುತ್ತಾರೆ.[೧೬೭] ಒಟ್ಟಾರೆ ಸಾಲಿನಾಯಕ ಹಾಗಲವಾಡಿ ಸಂಸ್ಥಾನದ ನಾಯಕರಲ್ಲಿ ಅತ್ಯಂತ ಪ್ರಮುಖನಾಗಿದ್ದು, ಸಂಸ್ಥಾನವನ್ನು ವಿಸ್ತರಿಸಿ, ಕ್ರಿ.ಶ.೧೫೫೨ರಲ್ಲಿ ಮರಣಹೊಂದಿದನು.[೧೬೮]

೨. **ಭೈರಪ್ಪನಾಯಕ :** ಸಾಲಿನಾಯಕನ ಮರಣಾನಂತರ ಮಗನಾದ ಭೈರಪ್ಪನಾಯಕನಿಗೆ ಪಟ್ಟಾಭಿಷೇಕ ವಾಯಿತು. ಈತನು ತನ್ನ ತಂದೆಯಂತೆ ವೀರನಾಗಿದ್ದನು. ಸೆಟ್ಟಿಕೆರೆಯ ಮೇಲೆ ಕ್ರಿ.ಶ.೧೫೬೧ರಲ್ಲಿ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು. ಇದರ ಪಕ್ಕದಲ್ಲಿಯೇ ಇದ್ದ ಜಾಗದಲ್ಲಿ ಚಿಕ್ಕನಾಗನಹಳ್ಳಿ ಎಂಬ ಗ್ರಾಮವನ್ನು ಸ್ಥಾಪಿಸಿ, ಅಲ್ಲಿ ಕೋಟೆ, ಕೊತ್ತಲ, ಅಳ್ವೇರಿ, ಚಂದ್ರಶಾಲೆ, ಚಾವಡಿ ಮೊದಲಾದವನ್ನೆಲ್ಲಾ ಕಟ್ಟಿಸಿ ಅದನ್ನು ತನ್ನ ಸಂಸ್ಥಾನದ ರಾಜಧಾನಿಯಾಗಿ ಮಾಡಿಕೊಂಡನು.[೧೬೯] ನಂತರ ಅವನು ಚಿಕ್ಕ ನಾಗಹಳ್ಳಿಗೆ ೧೨ಕಿ.ಮೀ. ದೂರದಲ್ಲಿದ್ದ 'ಕಂದಿಕೆರೆ' ಎಂಬ ಸ್ಥಳದ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದನು.[೧೭೦] ಇವನ ಕಾಲದಲ್ಲಿ ಮಹತ್ವದ ಘಟನೆಯೆಂದರೆ ಶೈವರಾಗಿದ್ದು, ಎಡೆಯೂರಿನ ಸಿದ್ದಲಿಂಗೇಶ್ವರರ ಆಶೀರ್ವಾದದ ಮೇರೆಗೆ ವೀರಶೈವನಾದನು.[೧೭೧]

೩. ಹಿರಿಮುದಿಯಪ್ಪನಾಯಕ : ಈತನು ಪರಾಕ್ರಮಿಯಾಗಿದ್ದು, ಹಾಗಲವಾಡಿ ಮನೆತನವು ವಿಸ್ತಾರಗೊಳ್ಳಲು ಸಾಕಷ್ಟು ಶ್ರಮವಹಿಸಿದ್ದನು. ಕರಿಯಪ್ಪನಾಯಕನ ಆಳ್ವಿಕೆಯಲ್ಲಿಂದ ಹಾಗಲದಹಳ್ಳಿಯನ್ನು ಮತ್ತು ಆತನ ಸಹೋದರರು ಆಳುತ್ತಿದ್ದ ಪ್ರದೇಶವನ್ನು ಬಯಸಿ, ಹಾಗಲದಹಳ್ಳಿಯಲ್ಲಿ ಕ್ರಿ.ಶ.೧೬೧೮ರಲ್ಲಿ ಕೋಟೆ, ಕೊತ್ತಲಗಳನ್ನು ಕಟ್ಟಿಸಿ ಅದರ ಮೇಲೆ ತನ್ನ ಸಂಸ್ಥಾನದ ಬಾವುಟಗಳನ್ನು ಹಾಕಿಸಿದನು. ಇದರಿಂದ ಹಾಗಲದಹಳ್ಳಿಗೆ ಹೊಸಕೋಟೆ ಕಟ್ಟಿಸಿದ ನಂತರ ಹಾಗಲವಾಡಿ ಎನಿಸಿಕೊಂಡಿತು.[೧೭೨] ಸುಮಾರು ೪೦ ವರ್ಷಗಳ ಕಾಲ ಆಳ್ವಿಕೆ ಮಾಡಿ ಹಲವು ಪ್ರದೇಶಗಳ ಹಿಡಿತ ಸಾಧಿಸಿದನು. ಈತನು ಕ್ರಿ.ಶ.೧೬೨೬ರಲ್ಲಿ ಮರಣಹೊಂದಿದನು.

೪. ಇಮ್ಮಡಿ ಭೈರಪ್ಪನಾಯಕ : ಇವನ ಆಳ್ವಿಕೆಯು ಕ್ರಿ.ಶ. ೧೬೨೭ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಆರಂಭವಾಯಿತು. ಈತನ ಕಾಲದಲ್ಲಿ ಮೈಸೂರು ಒಡೆಯರು ಮತ್ತು ರಣದುಲ್ಲಾಖಾನನು ಆಕ್ರಮಣ ಮಾಡಿದುದರಿಂದ ಸಂಸ್ಥಾನವು ಅಪಾರ ನಷ್ಟಕ್ಕೆ ಒಳಗಾಯಿತು. ಕ್ರಿ.ಶ.೧೬೩೧ರ ಕೊನೆಯಲ್ಲಿ ಬೇಲೂರಿನ ನಾಯಕರಿಗೆ ಒಡೆಯರ ವಿರುದ್ಧ ಸಹಾಯ ಮಾಡಿದಾಗ ಒಡೆಯರ ಸೇನೆಗೆ ಭೈರಪ್ಪನಾಯಕನು ಶರಣಾಗಬೇಕಾಯಿತು.[೧೭೩]

ಇದೇ ಸಂದರ್ಭದಲ್ಲಿ ಬಿಜಾಪುರದ ರಣದುಲ್ಲಾಖಾನನಿಗೂ ಮತ್ತು ಹಾಗಲವಾಡಿ ನಾಯಕರಿಗೂ ರಾಜಕೀಯ ಸಂಬಂಧದಲ್ಲಿ ಅಹಿತಕರ ಘಟನೆಯುಂಟಾಯಿತು. ಇದರಿಂದ ಸಂಸ್ಥಾನವನ್ನು ಉಳಿಸಿಕೊಳ್ಳಬೇಕೆಂದರೆ ಇವರ ಪರವಾಗಿ ಯುದ್ಧದಲ್ಲಿ ಭಾಗವಹಿಸಬೇಕಾಯಿತು. ಈತನಿಂದ ಕೈತಪ್ಪಿ ಹೋಗುವ ಸೀಮೆಯನ್ನು ಬಿಟ್ಟು ಕ್ರಿ.ಶ.೧೬೪೯ರಲ್ಲಿ ಸಮಸ್ತವನ್ನು ತೆಗೆದುಕೊಂಡು ಭೈರಪ್ಪ ನಾಯಕನು ಹಾಗಲವಾಡಿಗೆ ಬಂದು ಆಳ್ವಿಕೆ ಮಾಡಲಾರಂಭಿಸಿದನು. ಒಟ್ಟಿನಲ್ಲಿ ಚಿಕ್ಕನಾಯಕನಹಳ್ಳಿ ಬಿಜಾಪುರದವರಿಗೆ ಸೇರಿತು. ಇದರಿಂದ ಹಾಗಲವಾಡಿಯನ್ನೇ ರಾಜಧಾನಿಯನ್ನಾಗಿಸಿಕೊಂಡು ಮೈಸೂರು ಅರಸರಿಗೆ ತಾನಿರುವವರೆಗೂ ನಿಷ್ಠನಾಗಿ ನಡೆದುಕೊಳ್ಳುತ್ತಾ ಕ್ರಿ.ಶ.೧೬೫೪ರಲ್ಲಿ ಮರಣಹೊಂದಿದನು.[೧೭೪]

೫. ಮೊದಲ ಚನ್ನಬಸಪ್ಪನಾಯಕ : ಇಮ್ಮಡಿ ಭೈರಪ್ಪನಾಯಕನ ಮರಣ ನಂತರ ಈ ಸಂಸ್ಥಾನದ ೬ನೇ ದೊರೆಯಾಗಿ ಆಳ್ವಿಕೆಯನ್ನು ಪ್ರಾರಂಭಿಸಿದನು. ತನ್ನ ತಂದೆಯ ಕಾಲದಲ್ಲಿ ಸಂಸ್ಥಾನದ ಬಹುಪಾಲನ್ನು ರಣದುಲ್ಲಾಖಾನನು ಆಕ್ರಮಿಸಿಕೊಂಡಿದ್ದನು. ಅದನ್ನು ಪುನಃ ಪಡೆದುಕೊಳ್ಳಲು ಜೊತೆಗೆ ರಣದುಲ್ಲಾಖಾನನು ಬಿಜಾಪುರಕ್ಕೆ ಹಿಂದಿರುಗಿದ ನಂತರ ಚನ್ನಬಸಪ್ಪನಾಯಕನು ತನ್ನ ಚಟುವಟಿಕೆಗಳನ್ನು ಆರಂಭಿಸಿದನು. ಆದರೆ ಅವನು ಪ್ರಬಲರಾಗಿದ್ದ ಮೈಸೂರು ಅರಸರ ಕೋಪಕ್ಕೆ ತುತ್ತಾಗಬೇಕಾಯಿತು. ಆಗ ಮೈಸೂರಿನಲ್ಲಿ ದೊಡ್ಡದೇವರಾಜ ಒಡೆಯರು ಆಳ್ವಿಕೆ ಮಾಡುತ್ತಿದ್ದರು. ಇವರು ಹಾಗಲವಾಡಿಯ ಮೇಲೆ ದಾಳಿ ಮಾಡಿ, ಹಾಗಲವಾಡಿಯ ದೊರೆಯನ್ನು ಸೆರೆ ಹಿಡಿದರು.[೧೭೫] ಇದರಿಂದ ನಾಯಕನು ಮೈಸೂರು ಅರಸರಿಗೆ ಶರಣಾಗಿ, ಸುಮಾರು ೭೫ ವರ್ಷಗಳ ಕಾಲ ಆಳ್ವಿಕೆ ಮಾಡಿ ಕ್ರಿ.ಶ.೧೬೭೯ರಲ್ಲಿ ಮರಣಹೊಂದಿದನು.

೬. ಇಮ್ಮಡಿ ಚನ್ನಬಸಪ್ಪನಾಯಕ : ಮೊದಲ ಚನ್ನಬಸಪ್ಪನಾಯಕನಿಗೆ ರಾಮಪ್ಪ ಮತ್ತು ಸಂಗಪ್ಪ ಎಂಬ ಇಬ್ಬರು ಮಕ್ಕಳಿದ್ದು, ರಾಮಪ್ಪನಿಗೆ ಮಕ್ಕಳು ಇಲ್ಲದ್ದರಿಂದ ಸಂಗಪ್ಪನ ಮಗನಾದ ಇಮ್ಮಡಿ ಚನ್ನಬಸಪ್ಪನಾಯಕನಿಗೆ ೧೭೦೯ರಲ್ಲಿ ಪಟ್ಟವಾಯಿತು. ಈತನು ಚಿತ್ರದುರ್ಗದ ನಾಯಕರೊಡನೆ ಯುದ್ಧ ಮಾಡಬೇಕಾಯಿತು. ಹರ್ತಿಕೋಟೆಯನ್ನು ವಶಪಡಿಸಿಕೊಂಡಿದ್ದು, ಇದರಿಂದ ಚಿತ್ರದುರ್ಗದ ನಾಯಕರು ಹರ್ತಿಯನ್ನು ಮತ್ತೆ ವಾಪಸ್ಸು ಪಡೆದರು. ಹೀಗೆ ಹರ್ತಿಕೋಟೆಯು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದಾಯಿತು. ಈತನು ೧೭೨೮ರಲ್ಲಿ ಮೃತನಾದನು.[೧೬]

೭. ಇಮ್ಮಡಿ ಮುದಿಯಪ್ಪನಾಯಕ : ಈತನು ರಾಜ್ಯದ ಆಳ್ವಿಕೆಗಿಂತ ಹೆಚ್ಚು ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಅನನ್ಯವಾದ ಕೊಡುಗೆಗಳನ್ನು ಕೊಟ್ಟಿದ್ದಾನೆ. ಈತನ ಆಡಳಿತಾವಧಿಯು ಅನೇಕ ಕಾರಣಗಳಿಂದ ವೈಶಿಷ್ಟ್ಯಪೂರ್ಣವೆನಿಸಿದೆ. ಉತ್ತಮ ಸಂಸ್ಕಾರ, ವಿದ್ಯೆ, ಸ್ವಭಾವ, ಅಭಿರುಚಿಗಳನ್ನು ಹೊಂದಿದ್ದನು. ಇಮ್ಮಡಿ ಮುದಿಯಪ್ಪನಾಯಕನು ಆಳ್ವಿಕೆ ಮಾಡುತ್ತಿದ್ದಾಗ ಜೀವನದಲ್ಲಿ ವೈರಾಗ್ಯ ಹುಟ್ಟಿ, ತನ್ನ ಪದವಿಯನ್ನು ತ್ಯಜಿಸಿ ತನ್ನ ಜೇಷ್ಠ ಪುತ್ರನಾದ ಮುದ್ದುವೀರಪ್ಪನಾಯಕನಿಗೆ ಕ್ರಿ.ಶ.೧೭೪೮ರಲ್ಲಿ ಪಟ್ಟಕಟ್ಟಿದನು. ನಂತರ ದೇಶ ಪರ್ಯಾಟನೆಗೆ ಹೊರಟು ಹೋದನು.[೧೭] ಕೊನೆಗೆ 'ರಾಜರ್ಷಿ'ಯೆಂಬ ಹೆಸರು ಪಡೆದು, ಶಿವನ ಸ್ಮರಣೆಯಲ್ಲಿ ಲಿಂಗೈಕ್ಯನಾದನು.

೮. ಮುದ್ದುವೀರಪ್ಪನಾಯಕ : ಹಾಗಲವಾಡಿ ಸಂಸ್ಥಾನದ ಪ್ರಸಿದ್ಧ ನಾಯಕರಲ್ಲಿ ಈತನು ಒಬ್ಬನು. ೧೭ನೇ ಮತ್ತು ೧೮ನೇ ಶತಮಾನದ ಆರಂಭ ಕಾಲದಲ್ಲಿ ಮೊಗಲರು ಕರ್ನಾಟಕದ ಮೇಲೆ ದಾಳಿ ಮಾಡಿದರು. ಈ ದಾಳಿಗಳಲ್ಲಿ ಸಲಾಬತ್ ಜಂಗ್ ಎಂಬುವನು ನಡೆಸಿದ ಕಾರ್ಯಾಚರಣೆಯ ಕಾಲದಲ್ಲಿ ಹಾಗಲವಾಡಿಯೂ ಸಹ ಸಿಲುಕಿ ಕೊಳ್ಳಬೇಕಾಯಿತು. ಮುದ್ದುವೀರಪ್ಪನಾಯಕನು ಸಲಾಬತ್ ಜಂಗ್ ನೊಡನೆ ಮುಂದಾಗಿ ಮಿತ್ರತ್ವ ಸಾಧಿಸಲು ಪ್ರಯತ್ನಿಸಿ, ಇದಕ್ಕಾಗಿ ಯೋಗ್ಯರಾದ ರಾಯಭಾರಿಗಳನ್ನು ಅವನ ಬಳಿ ಮಾತುಕತೆಗಾಗಿ ಕಳುಹಿಸಿದ. ಮಾತುಕತೆಯ ನಂತರ ರಾಯಭಾರಿಗೆ ಹಾಗಲವಾಡಿ ನಾಯಕನನ್ನು ಕಾಣಲು ಬರುವುದಾಗಿ ತಿಳಿಸಿದ ಕೂಡಲೇ ಸಲಾಬತ್‌ನು ಹಾಗಲವಾಡಿ ಕೆರೆಯ ಮುಂದೆ ಇಳಿದುಕೊಂಡು, ತಮ್ಮ ಗಾಡಿಗೆ ಕಟ್ಟುವುದಕ್ಕೆ ಐವತ್ತು ಜೊತೆ ಎತ್ತು ಬೇಕೆಂದಾಗ ನಾಯಕನು ಎತ್ತುಗಳನ್ನು ಜೊತೆ ಮಾಡುವ ಪ್ರಯತ್ನದಲ್ಲಿದ್ದಾಗ, ಆ ನೀಚ ತುರುಕನು ಸೇನೆ ಸಮೇತ ಊರಿನ ಮೇಲೆ ದಾಳಿ ಮಾಡಿ ಹಾಗಲವಾಡಿ ಕೋಟೆಯನ್ನು ಹಲ್ಲೆ ಮಾಡಿ ಅರಮನೆಯನ್ನು, ಊರನ್ನು ಲೂಟಿ ಮಾಡಿ ಕ್ರಿ.ಶ.೧೭೫೫ರಲ್ಲಿ ವಶಪಡಿಸಿಕೊಂಡನು.[೧೮]

ಮುದ್ದುವೀರಪ್ಪನಾಯಕನು ದಾಳಿಯಿಂದ ತಪ್ಪಿಸಿಕೊಂಡು ತನ್ನ ಅಧಿಕಾರಿಗಳ ಸಮೇತ ಮೂಗನಾಯ್ಕನ ಕೋಟೆಗೆ ಓಡಿಹೋದನು. ಮತ್ತೆ ಸೈನ್ಯವನ್ನೆಲ್ಲಾ ಸೇರಿಸಿಕೊಂಡು ಹಾಗಲವಾಡಿಯ ಮೇಲೆ ದಾಳಿ ಮಾಡಿದನು. ಅಲ್ಲಿದ್ದ ಸಿರಾದ ಮೊಗಲ್ ಸುಬೇದಾರ ದಿಲಾವರ್‌ಖಾನನು ಸೋಲಲು ನಂತರ ಸಂಧಿ

ಮಾಡಿಕೊಂಡನು. ಈ ಕರಾರಿನ ಪ್ರಕಾರ ದಿಲಾವರ್‌ಖಾನ್ ಹಾಗಲವಾಡಿಯನ್ನು ಬಿಟ್ಟು ಹೋಗಿದ್ದಲ್ಲದೆ, ಮಂಚಲದೊರೆ ಮತ್ತು ಅದಕ್ಕೆ ಸೇರಿದ ೧೨ ಹಳ್ಳಿಗಳು ಮುದ್ದುವೀರಪ್ಪನಾಯಕನಿಗೆ ಸೇರಿತು.[೧೭೯] ಹೀಗೆ ಮೊಗಲರು ಆಕ್ರಮಿಸಿಕೊಂಡಿದ್ದ ತನ್ನ ರಾಜ್ಯವನ್ನು ವೀರಾವೇಶದಿಂದ ಹೋರಾಡಿ ಮತ್ತೆ ಗಳಿಸಿ ಅವರಿಂದಲೇ ಶಹಭಾಶ್‌ಗಿರಿ ಪಡೆದನು. ಈತನು ತನ್ನ ತಂದೆಯಂತೆ ದಾನಧರ್ಮಗಳಲ್ಲಿ ತೊಡಗಿದ್ದನು. ಹೀಗೆ ಹಲವಾರು ವರ್ಷಗಳ ಕಾಲ ಆಳ್ವಿಕೆ ಮಾಡುತ್ತಾ ಕ್ರಿ.ಶ.೧೭೬೨ರಲ್ಲಿ ಮರಣ ಹೊಂದಿದನು.[೧೮೦]

ದಕ್ಷಿಣ ಕರ್ನಾಟಕದಲ್ಲಿ ಕ್ರಿ.ಶ.೧೭೬೧ ನಂತರ ಹೈದರಾಲಿಯಿಂದ ರಾಜಕೀಯ ಪರಿಸ್ಥಿತಿಯು ಪೂರ್ಣವಾಗಿ ಬದಲಾಯಿತು. ಇದೇ ಅವಧಿಯಲ್ಲಿ ಮುದ್ದುವೀರಪ್ಪನಾಯಕನ ತಮ್ಮ ಪ್ರಸನ್ನ ರಾಮಪ್ಪನಾಯಕನು ಆಳ್ವಿಕೆ ಮಾಡುತ್ತಿದ್ದನು. ಇಂತಹ ಸಂದರ್ಭದಲ್ಲಿ ಹೈದರಾಲಿಯು ಹಾಗಲವಾಡಿಯ ಪ್ರಸನ್ನ ರಾಮಪ್ಪನಾಯಕನಿಗೆ ಸೇನಾ ಸಹಾಯ ಕೇಳಿದನು. ಇದಕ್ಕೆ ಒಪ್ಪಿಗೆ ಕೊಟ್ಟು ಹೈದರನ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾದನು.[೧೮೧] ಹೀಗೆ ಕೇವಲ ಮೂರು ವರ್ಷಗಳವರೆಗೆ ರಾಜ್ಯಭಾರ ಮಾಡಿ ಕ್ರಿ.ಶ.೧೭೬೪ರಲ್ಲಿ ಮರಣಹೊಂದಿದನು.

ಪ್ರಸನ್ನ ರಾಮಪ್ಪನಾಯಕನ ಮರಣ ನಂತರ ಸಂಸ್ಥಾನದ ಸೋದರರಲ್ಲಿ ಕಲಹವುಂಟಾಯಿತು. ಇದರ ಅವಕಾಶವನ್ನು ಬಳಸಿಕೊಂಡು ಹೈದರಾಲಿಯು ಕರಿಯ ಚನ್ನಬಸಪ್ಪನಾಯಕ ಮತ್ತು ಮೂರನೇ ಚನ್ನಬಸಪ್ಪನಾಯಕನನ್ನು ಬಂಧಿಸಿ ಸೆರೆಯಲ್ಲಿಟ್ಟನು. ಕೊನೆಗೆ ಇವರು ಶ್ರೀರಂಗಪಟ್ಟಣದ ಮನೆಯಲ್ಲಿ ಮರಣ ಹೊಂದಿದರು.[೧೮೨] ಕೊನೆಯ ನಾಯಕರಾದ ಮೂರನೇ ಮುದಿಯಪ್ಪನಾಯಕನು ಬಾಲಕನೆಂದು ನೆಪಹೊಡ್ಡಿ ಹೈದರಾಲಿಯು ಹಾಗಲವಾಡಿ ಸಂಸ್ಥಾನವನ್ನು ಶ್ರೀರಂಗಪಟ್ಟಣಕ್ಕೆ ಸೇರಿಸಿಕೊಂಡು, ಭೋಗ ಸಮುದ್ರ, ಶಿವಪುರ, ಎಕ್ಕರಕಟ್ಟೆ ಗ್ರಾಮಗಳನ್ನು ಜಹಗೀರಾಗಿ ಕೊಡಲಾಯಿತು. ಸ್ವಲ್ಪ ಸಮಯದ ನಂತರ ಇಡೀ ಹಾಗಲವಾಡಿ ಸಂಸ್ಥಾನವು ಹೈದರಾಲಿಯ ವಶವಾಯಿತು. ಇದರಿಂದ ಮೂರನೇ ಮುದಿಯಪ್ಪ ನಾಯಕ ಜೀವನದಲ್ಲಿ ಜಿಗುಪ್ಸೆ ತಾಳಿ ದೇಶಾಂತರ ಹೊರಟು ಹೋದನು.[೧೮೩] ಇಲ್ಲಿಗೆ ಹಾಗಲವಾಡಿ ಸಂಸ್ಥಾನದ ಇತಿಹಾಸವು ಪೂರ್ಣಗೊಂಡು, ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತು.

ಹೀಗೆ ಹಾಗಲವಾಡಿ ಸಂಸ್ಥಾನವು ೩೦೦ ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಅದು ತನ್ನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜನಜೀವನದ ಮೇಲೆ ತನ್ನದೇ ಆದ ಪರಿಣಾಮವನ್ನು ಬೀರಿದೆ. ಈ ನಾಯಕನು ಹಾಗಲವಾಡಿ ಸಂಸ್ಥಾನವನ್ನು ಕಲೆ, ಸಾಹಿತ್ಯ, ಧರ್ಮ, ವಾಸ್ತುಶಿಲ್ಪಗಳ ತವರೂರನ್ನಾಗಿಸಿದರು. ಸಮರ ವ್ಯವಸ್ಥೆಯಲ್ಲಿಯೂ ಸಹ ಇವರು ಕಟ್ಟಿರುವ ಕೋಟೆಗಳು ಪ್ರಮುಖವಾಗಿದ್ದವು. ಇವರ ವ್ಯಾಪ್ತಿಯಲ್ಲಿ ಬರುವ ಕೋಟೆಗಳೆಂದರೆ ಚಿಕ್ಕನಾಯಕನಹಳ್ಳಿ ಕೋಟೆ, ಕಂದಿಕೆರೆ ಕೋಟೆ, ಹಾಗಲವಾಡಿ ಕೋಟೆಗಳು ಮುಖ್ಯವಾಗಿವೆ. ಮೊದಲೆರಡು ಕೋಟೆಗಳು ಶಿಥಿಲವಾಗಿದ್ದು, ಹಾಗಲವಾಡಿ ಕೋಟೆಯು

ಶಿಥಿಲವಾಗುತ್ತಾ ಇದೆ. ಈ ಕೋಟೆಯು ಹಾಗಲವಾಡಿ ಸಂಸ್ಥಾನದ ರಕ್ಷಣೆಗೆ ಪ್ರಮುಖವಾಗಿದ್ದಿತು ಎನ್ನುವುದನ್ನು ಈಗ ಉಳಿದಿರುವ ಕೋಟೆಯಿಂದ ತಿಳಿಯಬಹುದಾಗಿದೆ.

ಹಾಗಲವಾಡಿ ಕೋಟೆಯ ಲಕ್ಷಣಗಳು

ತುಮಕೂರು ಜಿಲ್ಲೆಯ ನೆಲಗೋಟೆಗಳಲ್ಲಿ ಹಾಗಲವಾಡಿ ಕೋಟೆಯು ಒಂದು ನೆಲಗೋಟೆಯಾಗಿದೆ. ಇಲ್ಲಿರುವ ಕೋಟೆಯು ಈಗ ಅವನತಿ ಹಂತ ತಲುಪುತ್ತಿದ್ದು, ಇಲ್ಲಿ ಅಳಿದುಳಿದಿರುವ ಕೋಟೆಯ ರಚನೆಯನ್ನು ಗಮನಿಸಿದಾಗ ಈ ಕೋಟೆಯು ಚೌಕಾಕಾರವಾಗಿ ನಿರ್ಮಾಣವಾಗಿತ್ತೆಂದು ಹೇಳಬಹುದು. ಸಾಮಾನ್ಯವಾಗಿ ಕೋಟೆ ನಿರ್ಮಿಸುವಾಗ ದಪ್ಪ ದಪ್ಪ ಕಲ್ಲುಗಳನ್ನು ಬಳಸಿ ಗೋಡೆಯನ್ನು ನಿರ್ಮಿಸುತ್ತಾರೆ. ಆದರೆ ಇಲ್ಲಿನ ಕೋಟೆಯು ಸಣ್ಣ ಸಣ್ಣ ಸೈಜುಗಲ್ಲುಗಳನ್ನು ಬಳಸಿ ಗೋಡೆ ನಿರ್ಮಾಣಗೊಂಡಿದೆ. ಇಲ್ಲಿನ ಗೋಡೆಯ ಕಲ್ಲುಗಳನ್ನು ಒಂದರ ಮೇಲೊಂದರಂತೆ ಬೆಲ್ಲದ ಅಚ್ಚಿನಂತೆ ಪೇರಿಸಲಾಗಿದೆ. ಕೋಟೆಯ ಗೋಡೆಗೆ ಗಾರೆಯಗಚ್ಚನ್ನು ಇಲ್ಲಿ ಬಳಸಿಲ್ಲ. ಆದರೂ ಸುಭದ್ರವಾಗಿತ್ತೆಂದು ಇರುವ ಕೋಟೆಯನ್ನು ನೋಡಿ ಹೇಳಬಹುದು.

ಹಾಗಲವಾಡಿಯ ಕೋಟೆಯ ಹೆಬ್ಬಾಗಿಲು ಪೂರ್ವಾಭಿಮುಖವಾಗಿದ್ದು, ಇದನ್ನು ಬೊಂಬೆ ಊರುಬಾಗಿಲೆಂದು ಕರೆಯುತ್ತಾರೆ. ಇದು ಸುಮಾರು ೨೦ ಅಡಿ ಎತ್ತರವಿದೆ. ಈ ಬಾಗಿಲಲ್ಲಿ ಆಮೆ, ಮೀನು, ಹಾವು ಮತ್ತು ಲಜ್ಜಾಗೌರಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಬಲಭಾಗದಲ್ಲಿ ಏಳು ಅಡಿ ಎತ್ತರದ ದಿಡ್ಡಿ ಬಾಗಿಲನ್ನು ನಿರ್ಮಿಸಲಾಗಿದೆ. ಬಾಗಿಲ ಎರಡು ಪಕ್ಕೆಗಳಲ್ಲಿ ಎರಡು ಕೊತ್ತಲಗಳನ್ನು ನಿರ್ಮಿಸಲಾಗಿದೆ. ಇವುಗಳು ಶತ್ರು ಸೈನ್ಯವನ್ನು ಎದುರಿಸಲು ಸದಾ ಬಳಕೆಯಾಗುತ್ತಿದ್ದವು. ದ್ವಾರದ ಒಳಭಾಗದ ಇಕ್ಕೆಲಗಳಲ್ಲಿ ಒಂದೊಂದು ಕೋಣೆಗಳಿವೆ. ಇದರ ಹಿಂದೆ ಐದು ಅಡಿ ಎತ್ತರದ ಜಗತಿ ನಿರ್ಮಿಸಲಾಗಿದೆ. ಅದರ ಮೇಲ್ಭಾಗದಲ್ಲಿ ಕಂಬಗಳನ್ನು ಇಡಲಾಗಿದ್ದು, ಇವುಗಳಲ್ಲಿ ಗಣಪತಿ ಮತ್ತು ಹನುಮಂತನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಕೋಟೆಯ ಹೆಬ್ಬಾಗಿಲಿನಿಂದ ಎರಡನೇ ಕೋಟೆ ಬಾಗಿಲ ಮಧ್ಯದಲ್ಲಿ ನರಸಿಂಹ ದೇವಸ್ಥಾನ, ಮುದ್ದುವೀರಸ್ವಾಮಿ ಗದ್ದುಗೆ, ಸೋಮನ ಕಟ್ಟೆ, ಕಲ್ಯಾಣಿ ಇನ್ನಿತರ ಸ್ಮಾರಕಗಳನ್ನು ಇಲ್ಲಿ ಕಾಣಬಹುದು. ಮುದ್ದುವೀರಸ್ವಾಮಿ ಗದ್ದುಗೆಯು ಅವನತಿ ಹಂತಕ್ಕೆ ತಲುಪಿದೆ. ಇದನ್ನು ಹಲವು ಬೋದಿಗೆಗಳಿಂದ ನಿರ್ಮಿಸಲಾಗಿದೆ. ಇದರಲ್ಲಿನ ನಿಲುವುಗಂಬಗಳಿಗೆ ಆಕರ್ಷಕವಾದ ಹಲವು ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಕೋಟೆಯ ಎರಡನೇಯ ಬಾಗಿಲು ಶಿಥಿಲವಾಗದೆ ಭದ್ರವಾಗಿದ್ದು, ಬಾಗಿಲ ನಿಲುವುಗಳಲ್ಲಿ ಲಜ್ಜಾಗೌರಿ, ಆಮೆ ಇನ್ನಿತರ ಉಬ್ಬು ಚಿತ್ರಗಳನ್ನು ಬಿಡಿಸಲಾಗಿದೆ. ಈ ಬಾಗಿಲ ಬಲಬದಿಗೆ ಎತ್ತರವಾದ ವೃತ್ತಾಕಾರದ ಬುರುಜನ್ನು ನಿರ್ಮಿಸಲಾಗಿದೆ. ಈ ಬುರುಜ ೪೦ ಅಡಿ ಎತ್ತರವಿದೆ. ಇದನ್ನು ಮೇಲೇರಲು

ಮೆಟ್ಟಿಲುಗಳ ವ್ಯವಸ್ಥೆ ಕಲ್ಪಿಸಲಾಗಿದ್ದು, ಅದು ಈಗ ಶಿಥಿಲಗೊಂಡಿದೆ. ಈ ಬುರುಜಿನ ಮೇಲೆ ಸೈನಿಕರು ವಿಶ್ರಾಂತಿ ಪಡೆಯಲು ಕಲ್ಲಿನ ಗೋಪುರವನ್ನು ನಿರ್ಮಿಸಲಾಗಿದೆ. ಇಲ್ಲಿಯೇ ಒಂದು ಒಳಕಲ್ಲನ್ನು ಸಹ ಕಾಣಬಹುದಾಗಿದೆ. ಈ ಬುರುಜು ಇಡೀ ಕೋಟೆಯನ್ನು ಸಂರಕ್ಷಿಸುತ್ತಿತ್ತೆಂದು ಇದರ ಮೇಲಿನಿಂದ ನಿಂತು ಸುತ್ತಲೂ ಗಮನಿಸಿದರೆ ಅರಿಯಬಹುದು. ಇಷ್ಟೊಂದು ಎತ್ತರವಾದ ಬುರುಜನ್ನು ದೂರದಿಂದ ಬರುವ ಶತ್ರು ಸೈನ್ಯವನ್ನು ವೀಕ್ಷಿಸಲು ನಿರ್ಮಿಸಿದ್ದಾರೆನ್ನಬಹುದು. ಇಲ್ಲಿನ ದ್ವಾರದಿಂದ ಮುಂದೆ ಸಾಗಿದರೆ ವಿಶಾಲವಾದ ಪ್ರದೇಶವನ್ನು ಕಾಣಬಹುದು. ಈ ಪ್ರದೇಶವನ್ನು ಊಡ್ಯವೆಂದು ಕರೆಯುತ್ತಾರೆ.(ಇದರ ಮೂಲ ರೂಪ 'ಉಡೇವು' ಎಂದಿರಬಹುದು) ಇಲ್ಲಿ ಈಜಿನ ಕೊಳ, ಅರಮನೆಯ ಅವಶೇಷಗಳು ಇದರ ಪಕ್ಕದಲ್ಲಿಯೇ ಇರುವ ರಾಮೇಶ್ವರ ದೇವಾಲಯ, ಮದ್ದಿನ ಕಣಜ ಹಾಗೂ ಹಲವು ಕಟ್ಟಡಗಳ ಅವಶೇಷಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ಈ ರೀತಿಯ ಹಲವು ಅವಶೇಷಗಳನ್ನು ಹೊಂದಿರುವ ಕೋಟೆಯು ಅಭೇದ್ಯವಾಗಿತ್ತೆಂದು ಹೇಳುತ್ತಾರೆ. ಈ ಕೋಟೆಯ ಸುತ್ತಲೂ ಆಳವಾದ ಕಂದಕವನ್ನು ತೊಡಲಾಗಿದ್ದು, ಯಾವಾಗಲೂ ನೀರನ್ನು ತುಂಬಿಸಲಾಗಿತ್ತು. ಇದರಿಂದ ಬಹುಬೇಗ ಕೋಟೆಯ ಆಕ್ರಮಣ ಆಗುವುದು ಕಷ್ಟವಾಗಿತ್ತು. ಆದರೆ ಕಂದಕವೂ ಈಗ ಸಂಪೂರ್ಣವಾಗಿ ಮುಚ್ಚಿ ಹೋಗಿದೆ.

ಇಲ್ಲಿನ ಅರಸರು ಕೋಟೆಯ ಒಳಗೆ ನಿರ್ಮಿಸಿದ ಸ್ಮಾರಕಗಳಷ್ಟೇ ಅಲ್ಲದೆ ಕೋಟೆಯ ಹೊರಗೂ ಸಹ ಹಲವಾರು ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಕೋಟೆಯ ನಾಲ್ಕು ದಿಕ್ಕಿಗೂ ನಾಲ್ಕು ಅನ್ನಛತ್ರಗಳ ಮಠಗಳನ್ನು ನಿರ್ಮಿಸಲಾಗಿದೆ. ಈ ಊರಿಗೆ ಬರುವುದಕ್ಕಿಂತ ಮುಂಚೆ ಮತ್ತು ಹೋಗುವುದಕ್ಕಿಂತ ಮುಂಚೆ ಇಲ್ಲಿ ಭೋಜನವನ್ನು ಸ್ವೀಕರಿಸಬೇಕಾಗಿತ್ತೆಂದು ಹೇಳುತ್ತಾರೆ. ಒಟ್ಟಿನಲ್ಲಿ ಇಲ್ಲಿನ ಕೋಟೆಯು ನೆಲದುರ್ಗವಾಗಿದ್ದು, ಗೋಡೆಯ ನಿರ್ಮಾಣದ ಸಂದರ್ಭದಲ್ಲಿ ಬರಿಕಲ್ಲುಗಳನ್ನು ಬಳಸಿ ಅಭೇಧ್ಯವಾಗಿರಿಸಲಾಗಿದೆ. ಕೋಟೆಯ ಗೋಡೆಯಲ್ಲಿ ಅಲ್ಲಲ್ಲಿ ವೃತ್ತಾಕಾರದ ಬುರುಜುಗಳನ್ನು ನಿರ್ಮಿಸಿ, ಕೋಟೆಯ ರಕ್ಷಣೆಯನ್ನು ಮಾಡಲಾಗಿದೆ. ಅಲ್ಲಿಗೆ ಕೋಟೆಯ ಹೊರ ಭಾಗದಲ್ಲಿನ ಕಂದಕವು ಸಹ ಸಂಸ್ಥಾನದ ಕೋಟೆಯು ಭದ್ರವಾಗಿರಿಸಲು ಮಹತ್ವ ಪಾತ್ರವಹಿಸಿದೆ.

ಕೋಟೆಯಲ್ಲಿನ ಸ್ಮಾರಕಗಳು

ಹಾಗಲವಾಡಿ ಪಾಳೇಗಾರರು ತಮ್ಮ ಆಳ್ವಿಕೆ ಸಂದರ್ಭದಲ್ಲಿ ಹಲವಾರು ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಧಾರ್ಮಿಕ ವಸ್ತುವಾದ ದೇವಾಲಯಗಳು, ಗದ್ದುಗೆಗಳು, ಮಠಗಳು, ಲೌಕಿಕ ವಸ್ತುವಾದ ಅರಮನೆಗಳು, ರಕ್ಷಣೆಗಾಗಿ ನಿರ್ಮಿಸಿದ ಕೋಟೆ ಕೊತ್ತಲಗಳು, ಮೂರ್ತಿ ಶಿಲ್ಪಗಳು, ದೊಣೆಗಳು, ಕಣಜಗಳು ಹಾಗೂ ಇನ್ನಿತರ ಸ್ಮಾರಕಗಳನ್ನು ಕಾಣಬಹುದು. ಇವುಗಳಲ್ಲಿ ಹೆಚ್ಚು ನಾಶಹೊಂದಿರುವುದನ್ನು ಈಗ ಕಾಣಬಹುದು. ಮುಖ್ಯವಾಗಿ ಕೋಟೆಯೊಳಗೆ ಚನ್ನಕೇಶವ ದೇವಾಲಯ, ರಾಮೇಶ್ವರ ದೇವಾಲಯ,

ನರಸಿಂಹ ಸ್ವಾಮಿ ದೇವಾಲಯ ಪ್ರಮುಖವಾದ ದೇವಾಲಯಗಳು. ಆದರೆ ಕೊನೆಯ ಎರಡು ದೇವಾಲಯಗಳು ಶಿಥಿಲಗೊಂಡಿವೆ.

ಚನ್ನಕೇಶವ ದೇವಾಲಯ : ಈ ದೇವಾಲಯವನ್ನು ಇಮ್ಮಡಿ ಮುದಿಯಪ್ಪನಾಯಕನ ಗುರುಗಳಾದ ಮುದ್ದೀರಸ್ವಾಮಿಗಳು ಹಾಗಲವಾಡಿಗೆ ಬಂದಾಗ ಊರಿನಲ್ಲಿ ಕೇವಲ ಶೈವದೇವಾಲಯಗಳೇ ಇರುವುದನ್ನ ಕಂಡು, ವಿಷ್ಣುವಿಗೆ ದೇವಾಲಯ ಸ್ಥಾಪಿಸುವಂತೆ ನಾಯಕರಿಗೆ ಆದೇಶಿಸಿದಾಗ ಇದನ್ನು ಕಟ್ಟಿಸಿದನೆಂದು ಹೇಳುತ್ತಾರೆ.[೧೮೪] ಇದನ್ನು ಸ್ವಲ್ಪ ಎತ್ತರದ ಜಗತಿಯ ಮೇಲೆ ನಿರ್ಮಿತವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹವನ್ನು ಹೊರತುಪಡಿಸಿದರೆ, ಉಳಿದ ರಚನೆಗಳನ್ನು ಮುಂದುವರಿಸಿಲ್ಲ. ಗರ್ಭಗೃಹದಲ್ಲಿ ಚನ್ನಕೇಶವನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಮುದ್ದುವೀರಸ್ವಾಮಿ ಗದ್ದುಗೆಯನ್ನು ಆಕರ್ಷಿತ ರೀತಿಯಲ್ಲಿ ನಿರ್ಮಿಸಲಾಗಿದೆ. ಇದರ ಮೇಲ್ಛಾವಣಿಯನ್ನು ಕಲ್ಲುಕಂಬಗಳು ಎತ್ತಿ ಹಿಡಿದಿವೆ. ಕಂಬಗಳಿಗೆ ಉಬ್ಬುಶಿಲ್ಪಗಳಿಂದ ಶೃಂಗಾರಗೊಳಿಸಲಾಗಿದೆ. ಆದರೆ ಗದ್ದುಗೆಯು ಸಂಪೂರ್ಣವಾಗಿ ಊರಗ್ರಾಮಸ್ಥರ ನಿರ್ಲಕ್ಷಕ್ಕೆ ಒಳಗಾಗಿದೆ. ಇಲ್ಲಿನ ಅರಮನೆಯನ್ನು ಪೂರ್ಣವಾಗಿ ಕಲ್ಲು, ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಈ ಅರಮನೆಯ ಸುತ್ತ ಭದ್ರವಾದ ಕೋಟೆ ಇದ್ದು, ನಾಲ್ಕು ಮೂಲೆಗಳಲ್ಲಿ ಎತ್ತರವಾದ ಬುರುಜುಗಳನ್ನು ನಿರ್ಮಿಸಲಾಗಿದೆ. ಇದು ಆಯತಾಕಾರವಾಗಿದ್ದು, ಹಲವು ಕೋಣೆಗಳನ್ನು ಹೊಂದಿದೆ. ಎಲ್ಲಾ ಕೋಣೆಗೂ ಬಾಗಿಲುಗಳಿವೆ. ಅಲ್ಲಲ್ಲಿ ದೀಪದ ವ್ಯವಸ್ಥೆಗೆ ಗೋಡೆಯಲ್ಲಿ ಗೂಡುಗಳನ್ನು ಬಿಡಲಾಗಿದೆ. ಈಗ ಅರಮನೆಯ ಅವಶೇಷಗಳನ್ನು ಮಾತ್ರ ವೀಕ್ಷಿಸಬಹುದು.

ನಿಡುಗಲ್ಲು ದುರ್ಗದ ಕೋಟೆ

ಚಿತ್ರದುರ್ಗ, ಪಾವಗಡ ಹೆದ್ದಾರಿಯಲ್ಲಿ ಪಾವಗಡದಿಂದ ಪಶ್ಚಿಮ ದಿಕ್ಕಿಗೆ ೧೫ ಮೈಲಿಗಳ ಅಂತರದಲ್ಲಿ ರಸ್ತೆಯ ಎಡಭಾಗದಲ್ಲಿರುವ ದುರ್ಗವೇ ನಿಡುಗಲ್ಲು ಈ ದುರ್ಗವು ಸಮುದ್ರ ಮಟ್ಟದಿಂದ ೩೭೬೯ ಅಡಿ ಎತ್ತರದಲ್ಲಿದೆ. ಬೆಟ್ಟಕ್ಕೂ ಮತ್ತು ಊರಿಗೂ ಒಂದೇ ಹೆಸರನ್ನು ಒಳಗೊಂಡಿದೆ. ಊರಿನ ಉತ್ತರ ಭಾಗಕ್ಕೆ ಬೆಟ್ಟವಿದ್ದು, ಅದು ನಿಡಿದಾದ ಕಲ್ಲುಗಳಿಂದ ಕೂಡಿದ ಮತ್ತು ಬಹಳ ಎತ್ತರದ ಪ್ರದೇಶವಾಗಿದೆ.

ನಿಡುಗಲ್ಲು ದುರ್ಗವನ್ನು ನೀಲಾವತಿ, ಕಾಲಾಂಜನ, ಕಾಳಂಜನಗಿರಿ ಎಂದು ಶಾಸನಗಳಲ್ಲಿ ಕರೆಯಲಾಗಿದೆ.[೧೮೫] ಈ ಬೆಟ್ಟಕ್ಕೆ ನಿಡುಗಲ್ಲು ಎಂದರೆ ನಿಡಿದಾದ ಕಲ್ಲು-ಅತ್ಯಂತ ಎತ್ತರವಾದ ಕಲ್ಲು ಎಂದರ್ಥವಾಗಿದೆ. ಈ ಪ್ರದೇಶವು ಬೆಟ್ಟಗುಡ್ಡಗಳಿಂದ ಹಬ್ಬಿದ್ದು, ಕಣ್ಣಿನ ದೃಷ್ಟಿ ಹರಿಯುವವರೆಗೆ ನೋಡಿದರೂ ಸುಂದರವಾದ ನಿಸರ್ಗವೇ ಕಾಣುತ್ತದೆ. ಇಂತಹ ಪ್ರದೇಶದಲ್ಲಿ ನೊಳಂಬರು, ಚೋಳರು,

ವಿಜಯನಗರದ ಅರಸರು, ಇವರ ಸಾಮಂತ ಪಾಳೇಗಾರರು ಆಳ್ವಿಕೆ ಮಾಡಿರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು.

ನಿಡುಗಲ್ಲು ಪ್ರದೇಶದಲ್ಲಿ ಮಾನವನ ಇತಿಹಾಸವನ್ನು ಶಿಲಾಯುಗದ ಕಾಲದಿಂದಲೂ ಜೀವಿಸುತ್ತಿದ್ದ ನೆಂಬುದಕ್ಕೆ ಅಲ್ಲಿ ಸಿಗುವ ಆಧಾರಗಳೇ ಸಾಕ್ಷಿಯಾಗಿವೆ. ಈ ಪ್ರದೇಶದಲ್ಲಿ ದೊರೆತಿರುವ ಕೊಡಲಿಗಳು, ಕೊರೆಯುವ ಚೆಕ್ಕೆಗಳು, ರಂಧ್ರ ಕೊರೆಯುವ ಸೂಜಿಗಲ್ಲುಗಳು, ಬಾಣದ ಮೊನೆಗಳು ಇತ್ಯಾದಿ ಆಯುಧಗಳಿಂದ ನಿಡುಗಲ್ಲು ಆದಿ ಹಳೇ ಶಿಲಾಯುಗ, ಮಧ್ಯೆ ಹಳೇ ಶಿಲಾಯುಗ ಮತ್ತು ಅಂತ್ಯ ಹಳೇ ಶಿಲಾಯುಗಕ್ಕೆ ಸೇರಿತ್ತೆಂದು ಕೆ.ಬಿ.ಶಿವತಾರಕ್ ಅವರು ಹೇಳುತ್ತಾರೆ. ಈ ಪ್ರದೇಶದ ಪ್ರಾಗ್ ಇತಿಹಾಸವನ್ನು ತೆಗೆದುಕೊಂಡರೆ ಮೇಲಿನ ಆಧಾರಗಳಿಂದ ಇದು ಕ್ರಿಸ್ತ ಪೂರ್ವದಷ್ಟು ಹಳೆಯದೆಂದು ಹೇಳಬಹುದು. ಇದರಿಂದ ನಿಡಗಲ್ಲು ಪ್ರದೇಶದಲ್ಲಿ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ಜನವಾಸ ಮಾಡುತ್ತಿದ್ದರೆಂಬುದಕ್ಕೆ ಅನೇಕ ಕುರುಹುಗಳು ಲಭ್ಯವಾಗಿವೆ.

ನಿಡುಗಲ್ಲು ಇತಿಹಾಸದ ಆರಂಭ ಕಾಲವನ್ನು ನೊಳಂಬರ ಆಳ್ವಿಕೆಯಿಂದ ಗುರುತಿಸಬಹುದಾಗಿದೆ. ಈ ಪ್ರದೇಶದ ಭಾಗವು ಗಂಗರ ಮನೆತನಕ್ಕೆ ಸೇರಿತ್ತು. ಇವರ ಅಮರನಾಯಕರಾಗಿದ್ದ ನೊಳಂಬರು ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಆಗ ಈ ಪ್ರದೇಶವು ನೊಳಂಬವಾಡಿ-೩೨೦೦೦ ನಾಡಿಗೆ ಸೇರಿದ್ದಿತೆಂದು ತಿಳಿದುಬರುತ್ತದೆ. ನಿಡುಗಲ್ಲು ಶಾಸನವೊಂದು ಕ್ರಿ.ಶ.೮೮೦ರಲ್ಲಿ ರಚಿತಗೊಂಡಿದ್ದು ಅದರಲ್ಲಿ ನೊಳಂಬರ ಅತಿ ಪ್ರಬಲ ದೊರೆ ಮಹೇಂದ್ರನು ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುವಾಗ ಇವನ ಅಧೀನ ದೊರೆ 'ಬಿದಿಯ ಚೋರರಸನು' ನಿಡುಗಲ್ಲಿನಲ್ಲಿ ಆಳ್ವಿಕೆ ಮಾಡುತ್ತಿದ್ದನೆಂದು ಶಾಸನ ತಿಳಿಸುತ್ತದೆ.[೧೮೮]

ನೊಳಂಬರು ಹೆಂಜೇರನ್ನು ರಾಜಧಾನಿಯನ್ನಾಗಿ ಮಾಡಿಕೊಂಡರೂ ನಿಡುಗಲ್ಲು ಮತ್ತು ಆಂಧ್ರಪ್ರದೇಶದ ಪರಗಿಯನ್ನು ಸಹ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ನೊಳಂಬರಲ್ಲಿ ಪ್ರಸಿದ್ಧ ದೊರೆ ಮಹೇಂದ್ರ, ಇವರ ಬಗೆಗೆ ಪಾವಗಡ ತಾಲ್ಲೂಕಿನಲ್ಲಿ ಸಾಕಷ್ಟು ಶಾಸನಗಳು ದೊರೆತಿವೆ. ಅವುಗಳಲ್ಲಿ ೧೧, ೧೨, ೧೩, ೪೫ ಇವುಗಳಿಂದ ನೊಳಂಬರು ನಿಡುಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು ಎನ್ನುವುದು ತಿಳಿಯುತ್ತದೆ.

ಅನಂತರದ ಕಾಲದಲ್ಲಿ ನೊಳಂಬರಿಗೂ, ಗಂಗರಿಗೂ ಅವ್ಯಾಹತವಾಗಿ ಯುದ್ಧಗಳು ನಡೆದು, ಹೇಮಾವತಿಯಲ್ಲಿ ನಡೆದ ಯುದ್ಧದಲ್ಲಿ ಮಹೇಂದ್ರನೂ, ದಂಡನಾಯಕನಾದ ಬಿದಿಚೋರಾರಸನೂ ಹತರಾದರು. ಗಂಗರ ಮಾರಸಿಂಹನ ಕಾಲದಲ್ಲಿ ನೊಳಂಬ ವಂಶವನ್ನೇ ನಿರ್ಮೂಲನ ಮಾಡಲು ಹೊರಟು ನೊಳಂಬರಾಜ ಕುಮಾರರೆನ್ನೆಲ್ಲಾ ಸಂಹರಿಸಿ 'ನೊಳಂಬಕುಲಾಂತಕ' ಎಂಬ ಬಿರುದನ್ನು

ಧರಿಸಿದನೆಂದು ತಿಳಿದುಬರುತ್ತದೆ.[೧೮೭] ಇದರಿಂದ ನೊಳಂಬರು ಚರಿತ್ರೆಯಿಂದ ಹಿಂದೆ ಸರಿದರು. ನಂತರ ಬಂದ ಚೋಳರು ನೊಳಂಬವಾಡಿಯನ್ನು ಗೆದ್ದು ರಾಜ್ಯವಿಸ್ತರಿಸಿದರು. ಚೋಳ ಮನೆತನದವರು ಮೊದಲಿಗೆ ಗೋವಿಂದವಾಡಿಯನ್ನು ನಂತರ, ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಕೊನೆಯಲ್ಲಿ ಮಾತ್ರ ನಿಡುಗಲ್ಲು ಇವರ ರಾಜಧಾನಿಯಾಗಿತ್ತು.[೧೮೮]

ನಿಡುಗಲ್ಲು ಚೋಳರ ಬಗ್ಗೆ ಹಲವಾರು ಶಾಸನಗಳೊಂದಿಗೆ ಅವರ ಮಾಹಿತಿ ತಿಳಿಯಲು ಅನುಕೂಲವಾಗಿದೆ. ಚೋಳರ ಮೊದಲರಸರ ಬಗ್ಗೆ ಅಷ್ಟೊಂದು ಮಾಹಿತಿ ದೊರೆತಿಲ್ಲ. ಆದರೂ ಮೂರನೇ ಇರಂಗೋಳನ ನಿಡುಗಲ್ಲು ಶಾಸನ 'ಜಟ' ಎಂಬುವವನು ಮೂಲ ದೊರೆಯೆಂದು ತಿಳಿಸಿದೆ.[೧೮೯] ಇದುವರೆಗೂ ದೊರೆತ ಚೋಳರ ಶಾಸನಗಳ ಪ್ರಕಾರ ಅವರ ವಂಶಾವಳಿಯನ್ನು ಈ ರೀತಿ ಚಿತ್ರಿಸಬಹುದು.

ಜಟ
|
ಬ್ರಹ್ಮ ಭೋಗೇಂದ್ರ
|
ಮಂಗರಸ(ಮಂಗಿ)
|
ಬೀಚಿ ಅಥವಾ ಬಚ್ಚೇದೇವ
|
ಗೋವಿಂದ ದೇವ
|
ಇರುಂಗೋಳ ದೇವ ಚೋಳ ಮಹಾರಾಜ
|
ಮಲ್ಲಿದೇವ ಚೋಳ ಮಹಾರಾಜ
|
ಭೋಗದೇವ ಚೋಳ ಮಹಾರಾಜ
|
ಬಮ್ಮದೇವ ಚೋಳ
|
ಇರುಂಗೋಳ ದೇವ ಚೋಳ
|
ಬೊಮ್ಮ
|
ಗಣೇಶ್ವರ

ನಿಡುಗಲ್ಲಿನಲ್ಲಿ ದೊರೆತಿರುವ ಚೋಳರ ಶಾಸನಗಳಲ್ಲಿ ಜಟ ಮತ್ತು ಬ್ರಹ್ಮ ಭೋಗೇಂದ್ರರ ಶಾಸನವಾಗಲಿ ಅವರ ಆಳ್ವಿಕೆ, ಸಾಧನೆ ಹೋರಾಟದ ಯಾವುದೇ ವಿಚಾರಗಳು ಲಭ್ಯವಿಲ್ಲ. ಚೋಳ

ಮಹಾರಾಜನೆಂದು, ಮಹಾಮಂಡಲೇಶ್ವರನೆಂದು ಕರೆಸಿಕೊಳ್ಳುವ ಮಂಗರಸನು ರೊದ್ದ-೩೦೦ ಮತ್ತು ಕಣೆಕಲ್ಲು-೩೦೦ನ್ನು ಆಳುತ್ತಿದ್ದನೆಂದು ಕ್ರಿ.ಶ.೧೦೭೮ರ ಗುತ್ತಿ ತಾಲ್ಲೂಕಿನ ಶಾಸನವೊಂದು ತಿಳಿಸುತ್ತದೆ.[೯೦]

ನಿಡುಗಲ್ಲು ಪ್ರದೇಶವನ್ನು ಹೊರಗಡೆಯಿಂದ ಆಳಿದ ಚೋಳರು ಮತ್ತು ನಿಡುಗಲ್ಲು ಪ್ರದೇಶದಿಂದ ಆಳಿದ ಚೋಳರೆಂದು ವಿಂಗಡಿಸಬಹುದು. ಅದರಲ್ಲಿ ಜಟ, ಬ್ರಹ್ಮದೇವ, ಮಂಗರಸ, ಜೀಚಿ, ಗೋವಿಂದರಸ, ಮೊದಲನೆಯ ಇರುಂಗೋಳ, ಮಲ್ಲಿದೇವ, ಇಮ್ಮಡಿ ಇರುಂಗೋಳರು ೧೦೧೫-೧೨೯೬ವರೆಗೆ ಹೊರಗಿನಿಂದ ಆಳಿದ್ದಾರೆ. ನಿಡುಗಲ್ಲಿನಿಂದ ಆಳಿದ ಚೋಳರು; ಇಮ್ಮಡಿ ಬಮ್ಮದೇವ, ಮುಮ್ಮಡಿ ಇರುಂಗೋಳ, ಪೆರುಮಾಳದೇವ, ಮುಮ್ಮಡಿಬೊಮ್ಮ, ಗಣೇಶ್ವರ ದೇವ ಕ್ರಿ.ಶ.೧೨೧೯-೧೨೯೨ರವರೆಗೆ ಅಲ್ಲಿದ್ದು ಕೊಂಡೇ ಆಳಿದರು. ಗುಂಡನಹಳ್ಳಿಯಿಂದ ಆಳಿದ ಚೋಳರು ೪ನೇ ಇರುಂಗೋಳನು ಕ್ರಿ.ಶ.೧೨೯೨-೧೩೨೦ರವರೆಗೆ ಪಾವಗಡ ತಾಲ್ಲೂಕಿನ ಗುಂಡ್ಲಹಳ್ಳಿ ಆಳಿದ್ದಕ್ಕೆ ಶಾಸನ ದೊರೆತಿದೆ.[೯೧] ಮತ್ತು ಗುಡಿಯಕುಂಟೆಯಿಂದ ಆಳಿದ ಚೋಳರ ಅರಸ ಭೈರರಸ(ಕ್ರಿ.ಸ.೧೩೩೨) ಆಳಿದನು. ಇದು ಸಿರಾ ತಾಲ್ಲೂಕಿನಲ್ಲಿದೆ. ಇದೇ ತಾಲ್ಲೂಕಿನ ದೊಡ್ಡಬಾಣಗೆರೆಯ ಶಾಸನ ತಿಳಿಸುತ್ತದೆ.[೯೨] ಈ ಮೇಲೆ ಸೂಚಿರುವ ಚೋಳರು ಒಂದಲ್ಲ ಒಂದು ಕಾರಣದಿಂದ ತಮ್ಮ ಕಾಲದಲ್ಲಿ ನಿಡುಗಲ್ಲನ್ನು ಆಳ್ವಿಕೆಗೆ ಒಳಪಡಿಸಿ ಕೊಂಡು ಬಂದಿದ್ದಾರೆ. ನಿಡುಗಲ್ಲಿನ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಕ್ರಿ.ಶ.೧೧೦೬ರಲ್ಲಿ ೧ನೇ ಇರುಂಗೋಳನು ಅಡಿಪಾಯ ಹಾಕಿದನು. ಈ ಕೋಟೆಗಳ ಜೊತೆಗೆ ನಗರೇಶ್ವರ ದೇವಾಲಯ, ಜಿನದೇವಾಲಯ ಇನ್ನಿತರ ಸ್ಮಾರಕಗಳನ್ನು ನಿರ್ಮಿಸಿರುವುದು ಕಾಣಬಹುದು.

ಚೋಳರ ಕಾಲದಲ್ಲಿ ನಿರ್ಮಿಸಿದ ನಿಡುಗಲ್ಲು ಕೋಟೆಯನ್ನು ಶಾಸನಗಳು ಈ ರೀತಿ ಹೋಗಳುತ್ತವೆ.

> ಕಾಳಾಂಜನ ವೆಂಬುದಿರುಂ
> ಗೋಳನ ಗಿರಿದುರ್ಗ್ಗವನ್ತದ ಭ್ರಂಕಷತಾ
> ಭೀಳತರ ಚೋಳವದರು
> ತ್ತಾಳತೆಯನೆ ನೋಡಿ ಧಾತ್ರಿ ನಿಡುಗಲ್ಲೆನ್ನುಂ...[೯೩]
>
> ಜಗದೀಶ ನಿರುಂಗೋಳಂ
> ಸೋಗಯಿಸಿ ತಾನಿರ್ಪ ದುರ್ಗದಂಕಿತ ವದುವಂ
> ನೆಗೆದು ಗಿರಿಶಿಖರದುಚ್ಚಂ
> ಮುಗಿಲಂ ಮುಟ್ಟಿದೊಡೆ ಪೊಡವಿ ನಿಡುಗಲ್ಲೆಂಗುಂ....[೯೪]

ಇದರಲ್ಲಿ ೨ನೇ ಇರುಂಗೋಳನನ್ನು ಅತಿ ಹೆಚ್ಚು ಹೊಗಳಿರುವುದನ್ನು ಇಲ್ಲಿ ಕಾಣಬಹುದು. ಈ ಶಾಸನಗಳು ಹೊಗಳಿರುವುದನ್ನು ನೋಡಿದರೆ, ಚೋಳರಲ್ಲಿಯೇ ಅತಿ ಶ್ರೇಷ್ಠನೂ, ಪರಾಕ್ರಮಶಾಲಿಯೂ ಆಗಿರುವುದನ್ನು ಕಾಣಬಹುದಾಗಿದೆ. ಕೊನೆಗೆ ಚೋಳರ ಕಿರುಕುಳವನ್ನು ತಡೆಯಲಾರದ ಹೊಯ್ಸಳ

ಇಮ್ಮಡಿ ನರಸಿಂಹ ಕ್ರಿ.ಶ.೧೨೮೫ರಲ್ಲಿ ನಿಡುಗಲ್ಲನ್ನು ಸಂಪೂರ್ಣವಾಗಿ ನೆಲಸಮ ಮಾಡಿದನೆಂದು ತಿಳಿಯುತ್ತದೆ.[೧೯೫]

ನಿಡುಗಲ್ಲು ಪ್ರದೇಶವನ್ನು ಕಲ್ಯಾಣಿ ಚಾಲುಕ್ಯರು ಆಳ್ವಿಕೆ ಮಾಡಿದ್ದರೆಂಬುದಕ್ಕೆ ಅಲ್ಲಿ ದೊರೆತಿರುವ ಶಾಸನದ ಆಧಾರದಿಂದ ತಿಳಿಯಬಹುದು. ''ಪರಮ ಭಟ್ಟಾರಕ ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣಂ ಶ್ರೀ ಪ್ರತಾಪ ಚಕ್ರವರ್ತಿ'' ಎನ್ನುವುದರ ಶಾಸನ ಹೀಗಿದೆ. 'ಸತ್ಯಾಶ್ರಯ' ಎಂದು ಪದವನ್ನು ಬಳಸುತ್ತಿದ್ದವರು ಕಲ್ಯಾಣಿ ಚಾಲುಕ್ಯರು. ಚೋಳರು ಕಲ್ಯಾಣಿ ಚಾಲುಕ್ಯರ ಅರಸೊತ್ತಿಗೆಯನ್ನು ಒಪ್ಪಿಕೊಂಡಿದ್ದರೆಂದು ತಿಳಿಯುತ್ತದೆ.[೧೯೬] ಆ ಕಾಲಘಟ್ಟದಲ್ಲಿದ್ದವನು ಮಲ್ಲಿದೇವ ಚೋಳನು. ನಿಡುಗಲ್ಲು ದುರ್ಗದಲ್ಲಿ ನಾಗೇಶ್ವರ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಅವನ ತಂತ್ರಪಾಲ ನಾಮಣನ ಮುಖಾಂತರ ಅನೇಕ ದಾನ-ದತ್ತಿಗಳನ್ನು ಕೊಟ್ಟಂತೆಯೂ ಒಂದು ಕೆರೆಯನ್ನು ಕಟ್ಟಿಸಿದಂತೆಯೂ ತಿಳಿಸುತ್ತದೆ.[೧೯೭] ಕಲ್ಯಾಣದ ಚಾಲುಕ್ಯರಿಗೆ ನಿಡುಗಲ್ಲು ಚೋಳರು ಸುಮಾರು ೫೦ ವರ್ಷಗಳ ಕಾಲ ಅಮರನಾಯಕರಾಗಿದ್ದರೆಂದು ತಿಳಿದುಬರುತ್ತದೆ.

ಕಲ್ಯಾಣದ ಚಾಲುಕ್ಯರಲ್ಲಿ ಜಗದೇಕ ಮಲ್ಲನು ಈ ಮಲ್ಲಿದೇವ ಸಾಮಂತನ ಮುಖಾಂತರ ನಿಡುಗಲ್ಲನ್ನು ತನ್ನ ಅಧೀನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದನು. ಹಾಗೆಯೇ ಮಲ್ಲಿದೇವನು ತನ್ನ ರಾಜನಿಗೂ ಅಷ್ಟೇ ನಿಷ್ಠಾವಂತನಾಗಿದ್ದನು ಎಂಬುದಕ್ಕೆ ಯಾವುದೇ ಅನುಮಾನವಿಲ್ಲ. ನಂತರ ಕಲ್ಯಾಣದ ಚಾಲುಕ್ಯರಿಗೂ ಹೊಯ್ಸಳರಿಗೂ ಯುದ್ಧಗಳು ಸಂಭವಿಸಿ ಅದರಲ್ಲಿ ಇಮ್ಮಡಿ ಇರುಂಗೋಳನ ಮತ್ತು ಹೊಯ್ಸಳರ ವಿಷ್ಣುವರ್ಧನಿಗೆ ಸಂಬಂಧಿಸಿದ ಕೆಲವು ಶಾಸನಗಳು ದೊರೆಯುತ್ತವೆ.[೧೯೮]

ಕರ್ನಾಟಕದಲ್ಲಿ ೧೩ ಮತ್ತು ೧೪ನೇ ಶತಮಾನದಲ್ಲಿ ಪದೇ ಪದೇ ಚೋಳರಿಗೂ ಹೊಯ್ಸಳರಿಗೂ ಯುದ್ಧಗಳು ಸಂಭವಿಸುತ್ತಲೇ ಇದ್ದು, ಕ್ರಿ.ಶ.೧೨೮೫ರಲ್ಲಿ ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳರ ಇಮ್ಮಡಿ ನರಸಿಂಹ ನಿಡುಗಲ್ಲಿನ ಮೇಲೆ ದಂಡೆತ್ತಿ ಬಂದು ಕೋಟೆಯನ್ನು ನೆಲಸಮ ಮಾಡಿದ. ಇದರೊಂದಿಗೆ ಈ ಚೋಳ ಸಂತತಿಯ ನಿಡುಗಲ್ಲಿನ ಕೊನೆಯ ದೊರೆಗಳ ಕಾಲದಲ್ಲಿ ಸೇವುಣರ ಆಕ್ರಮಣದಿಂದ ರಾಯದುರ್ಗ, ಕಲ್ಯಾಣದುರ್ಗ ಮಡಕಶಿರಾ, ಸಿರಾ ತಾಲ್ಲೂಕುಗಳ ಅರಾಜಕತೆಗೆ ಒಳಗಾದಾಗ ಕ್ರಮೇಣ, ನಿಡುಗಲ್ಲಿನ ಚೋಳರು ಅಸ್ತಿತ್ವ ಕಳೆದುಕೊಂಡರು.[೧೯೯] ದಕ್ಷಿಣ ಭಾರತದ ಮಹಾ ಸಾಮ್ರಾಜ್ಯವೆನಿಸಿದ ವಿಜಯನಗರವು ಪ್ರಬುದ್ಧಮಾನಕ್ಕೆ ಬಂದಾಗ ಇತರ ರಾಜವಂಶಗಳು ಚರಿತ್ರೆಯಿಂದ ಕಣ್ಮರೆಯಾಗಿದ್ದುದನ್ನು ಇಲ್ಲಿ ಕಾಣಬಹುದಾಗಿದೆ.

ನಿಡುಗಲ್ಲು ಸಂಸ್ಥಾನವು ವಿಜಯನಗರ ಸಾಮ್ರಾಜ್ಯದ ಅಮರನಾಯಕರ ಆಳ್ವಿಕೆಗೆ ಒಳಪಟ್ಟು ಕೆಲವರು ಹೊರಗಿನಿಂದ ಆಳಿದರೆ, ಕೆಲವರು ಅಲ್ಲಿಯೇ ಇದ್ದು ಆಳ್ವಿಕೆ ಮಾಡಿರುವುದು ಕಂಡುಬಂದಿದೆ. ಇವರು

ಕ್ರಿ.ಶ.೧೩೯೪ ರಿಂದ ಕ್ರಿ.ಶ.೧೬೮೧ರವರೆಗೆ ಆಳ್ವಿಕೆ ಮಾಡಿರುವುದು ಶಾಸನಗಳಿಂದ ನಿರ್ಧರಿಸಲು ಅನುಕೂಲವಾಗಿದೆ.

ನಿಡುಗಲ್ಲು ಪಾಳೇಗಾರರ ಇತಿಹಾಸದಲ್ಲಿ ಮೊದಲಿಗೆ ಚಿಕ್ಕತಿಪ್ಪರಾಜೇಂದ್ರನ ಆಳ್ವಿಕೆಯಿಂದ ಆರಂಭವಾಗುತ್ತದೆ. ಈತನ ಕಾಲದ್ದೆನ್ನುವ ಎರಡು ಶಾಸನಗಳು ಈ ರೀತಿ ಹೇಳುತ್ತವೆ. ಕ್ರಿ.ಶ.೧೪೮೭ರ ಶಾಸನ "ದುರ್ಘಟವೀ ಕರ್ನಾಟಕ ದುರ್ಗಗಳಿಗಧಿಕವೆನಿಪ್ಪ ನಿಡುಗಲ್ಲೆಂಬೀ ದುರ್ಗವನ್ನು" ಇಂತಹ ದುರ್ಗವನ್ನು ಆಳುತ್ತಿರುವ ಚಿಕ್ಕಪ್ಪನೃಪಾಲನು ಆ ದುರ್ಗವನ್ನು ಕಾಯಲು ಅಷ್ಟದಿಕ್ಕುಗಳಲ್ಲಿಯೂ ದುರ್ಗಿ, ಭೈರವ, ಗಣಪತಿಗಳನ್ನು ಸ್ಥಾಪಿಸಿ ಮಧ್ಯ ನಿಡುಗಲ್ಲಿನಲ್ಲಿ ಸುಖ ಸಂತೋಷದಿಂದಿರಲು ಅಶ್ವಪತಿಯಾಗಲಿ ಇದನ್ನು ಬೇಧಿಸಲು ಸಾಧ್ಯವಿಲ್ಲವೆಂದು ಹೇಳುತ್ತವೆ.[೨೦೦] ನಿಡುಗಲ್ಲು ದುರ್ಗ ಸುಧೃಢವಾದದ್ದನ್ನು ಯಾರು ಗೆಲ್ಲಲು ಸಾಧ್ಯವಿಲ್ಲವೆಂದು ತನ್ನ ಶಾಸನದಲ್ಲಿ ಹೇಳಿಕೊಂಡಿದ್ದಾನೆ.

ನಿಡುಗಲ್ಲು ಪಾಳೇಗಾರರಲ್ಲಿ ಅತಿಬಲಿಷ್ಠನಾಗಿದ್ದು, ಈತನ ಮೇಲಿನ ಒಂದು ದಂತಕಥೆಯು ಬಹಳ ಪ್ರಸಿದ್ಧಿ ಪಡೆದಿದೆ. ತಿಪ್ಪರಾಜನು ನಿಡುಗಲ್ಲನ್ನು ಅಭಿವೃದ್ಧಿಪಡಿಸಿ, ಅನೇಕ ದೇವಾಲಯಗಳು, ಕೆರೆ-ಕಟ್ಟೆಗಳನ್ನು ನಿರ್ಮಿಸಿದ್ದಾನೆ. ಈತನು ಸಾಳುವ ವಂಶದ ನರಸಿಂಹನ ಸಮಕಾಲೀನನಾಗಿ ನಿಡುಗಲ್ಲಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಚಿಕ್ಕತಿಪ್ಪರಾಜೇಂದ್ರನು ತನ್ನ ರಾಣಿಯಾದ ಲಕ್ಷ್ಮೀದೇವಿಯ ಸಾವಿನ ದುಃಖವನ್ನು ಮರೆಯಲು ನಿಡುಗಲ್ಲು ಬೆಟ್ಟದ ಮೇಲೆ ದಕ್ಷಿಣ ದಿಕ್ಕಿನಲ್ಲಿ ಸೀಗಲಗುಡ್ಡ ಎಂಬಲ್ಲಿ ಕೆರೆಯನ್ನು ಕಟ್ಟಿಸಿ ಅಲ್ಲೊಂದು ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ಧಾರೆಯೆರೆದನು. ಅಲ್ಲದೆ ತನ್ನ ಪ್ರೀತಿಯ ಪತ್ನಿಯ ಹೆಸರಿನಲ್ಲಿ ಲಕ್ಷ್ಮಣೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದನು.[೨೦೧]

ನಿಡುಗಲ್ಲು ಪಾಳೇಗಾರರ ಇತಿಹಾಸವನ್ನು ಆರಂಭ ಮಾಡಿದ ತಿಪ್ಪರಾಜನ ನಂತರ ಕಾಮನಾಯಕ, ಅಬ್ಬಿನಾಯಕ, ಬೊಮ್ಮನಾಯಕರು ಆಳ್ವಿಕೆ ಮಾಡಿದ್ದಾರೆ. ಇವರ ಕೊನೆ ಸಂತತಿಯ ಪಾಳೇಗಾರನಾದ ತಿಮ್ಮಣ್ಣನಾಯಕನು ಕ್ರಿ.ಶ.೧೫೫೬ ರಿಂದ ೧೫೬೪ರವರೆಗೆ ಆಳ್ವಿಕೆ ಮಾಡಿದ್ದಾನೆ. ನಿಡುಗಲ್ಲು ಪಾಳೇಗಾರರ ವಂಶಾವಳಿ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.

ಅಬ್ಬಿನಾಯಕ
|
ಪಾಲಭೂಪಾಲ
|
ಬೊಮ್ಮನಾಯಕ
|
ವೀರಪ್ಪ ನಾಯಕ
|
ಚಿಕ್ಕತಿಪ್ಪರಾಜೇಂದ್ರ

|

ಕಾಮನಾಯಕ

|

ಎರಡನೇ ಅಬ್ಬಿನಾಯಕ

|

ಬೊಮ್ಮನಾಯಕ/ಜಕನಾಯಕ

|

ಈಶ್ವರನಾಯಕ

|

ಚಿಕ್ಕಣನಾಯಕ

|

ಹೊಟ್ಟಣ್ಣನಾಯಕ

|

ತಿಮ್ಮಣ್ಣನಾಯಕ

ಈ ಮೇಲಿನ ವಂಶಾವಳಿಯಲ್ಲಿ ಕೆಲವರಿಗೆ ಶಾಸನಗಳು ಮಾತ್ರ ದೊರೆಯುತ್ತವೆ. ಪಾಲನಾಯಕ, ಅಬ್ಬಿನಾಯಕ, ಬೊಮ್ಮನಾಯಕರ ಶಾಸನಗಳು ದೊರೆಯುವುದಿಲ್ಲ. ತಿಮ್ಮಣ್ಣನಾಯಕನ ನಂತರ ಕ್ರಿ.ಶ.೧೫೬೪ರಿಂದ ೧೬೬೨ರವರೆಗೆ ಈ ನಿಡುಗಲ್ಲು ಪ್ರದೇಶವನ್ನು ಯಾರು ಯಾರು ಆಳಿದರು ಎಂದು ತಿಳಿದುಬರುವುದಿಲ್ಲ. ಕ್ರಿ.ಶ.೧೬೬೨ರ ನಂತರ 'ವೆಂಕಟಪತಿರಾಯ'ನಿಂದ ನಿಡುಗಲ್ಲು ವಂಶವು ಹರತಿ ವಂಶದ ಪಾಳೇಗಾರರಲ್ಲಿ ವಿಲೀನವಾಗುತ್ತದೆ."[೨೦೨]

ಹರತಿ-ನಿಡುಗಲ್ಲು ಪಾಳೇಗಾರರು ಕ್ರಿ.ಶ.೧೬೬೨ ರಿಂದ ೧೭೬೧ರವರೆವಿಗೂ ನಿಡುಗಲ್ಲಿನಲ್ಲಿ ಪಾಳೇಗಾರ ದೊರೆಗಳಾಗಿ ಮೆರೆದಿರುವುದನ್ನು ಕಾಣಬಹುದು. ವೀರ ಹೊಟ್ಟಣ್ಣನಾಯಕನು ಇಲ್ಲಿಗೆ ಮೊದಲಿಗನಾಗಿ ಕಾಣಿಸಿಕೊಳ್ಳುತ್ತಾನೆ. ಈತನ ತಂದೆ ಹರತಿ ತಿಪ್ಪರಾಜನ ವಂಶಕ್ಕೆ ಸೇರಿದವನಾಗಿದ್ದು, ಚೆನ್ನಮಾಂಬೆ ಮತ್ತು ಹೊಟ್ಟೇಂದ್ರರ ಪುತ್ರನೇ ವೀರ ಹೊಟ್ಟಣ್ಣನಾಯಕನಾಗಿದ್ದಾನೆ.[೨೦೩] ವಿಜಯನಗರ ತನ್ನ ಅಸ್ತಿತ್ವ ಕಳೆದುಕೊಂಡ ಮೇಲೆ ರಾಜಧಾನಿಯು ಪೆನುಗೊಂಡೆಗೆ ವರ್ಗಾಂತರವಾಯಿತು. ಮುಖ್ಯವಾಗಿ ಇಲ್ಲಿನ ಅಮರನಾಯಕರೆಲ್ಲ ಸ್ವತಂತ್ರರಾಗಿ ಶ್ರೀರಂಗರಾಯರಿಗೆ ನಿಷ್ಠೆ ತೋರಿಸಲಿಲ್ಲ. ಆದರೆ ವೀರಹೊಟ್ಟಣನಾಯಕನು ನಿಷ್ಠರಾಗಿಯೇ ಉಳಿದಿದ್ದನು. ನಿಡುಗಲ್ಲಿನಲ್ಲಿ ಕ್ರಿ.ಶ.೧೬೫೪ರಲ್ಲಿ ತನ್ನ ತಂದೆ ತಾಯಿಗಳಿಗೆ ಪುಣ್ಯ ಲೋಕ ಸಿಗಲೆಂದು ಕಾಳಂಜನಗಿರಿಯಲ್ಲಿ ಬಸವೇಶ್ವರ ದೇವರ ಗುಡಿಯನ್ನು ನಿರ್ಮಿಸಿದನು.[೨೦೪] ಇಲ್ಲಿಯೇ ಸಾರ್ಡೇಶ್ವರ ದೇವಾಲಯವನ್ನು ಸಹ ನಿರ್ಮಿಸಿದನು.[೨೦೫] ಜೊತೆಗೆ ಕ್ರಿ.ಶ.೧೬೬೧ರಲ್ಲಿ ಲಿಂಗ ಪ್ರತಿಷ್ಠಾಪಿಸಿ ಅದಕ್ಕೆ ತನ್ನ ಹೆಸರನ್ನೇ ಬಳಸಿ ಹೊಟ್ಟೇಶ್ವರವೆಂದು ನಾಮಕರಣ ಮಾಡಿದನು.[೨೦೬] ಇಲ್ಲಿ ಸೂಚಿಸುವ ಎರಡು ದೇವಾಲಯಗಳಿಗೆ ನಿತ್ಯ ನೈವೇದ್ಯ ದೀಪಾರಾಧನೆಗೆ ರಂಗ ಸಮುದ್ರದ ಕೆರೆಯ ಕೆಳಗಿನ ಗದ್ದೆಯನ್ನು ದಾನ ಮಾಡಿದ್ದಾನೆಂಬುದು ತಿಳಿಯುತ್ತದೆ.

ಹೊಟ್ಟಣ್ಣನಾಯಕನ ನಂತರ ತಿಮ್ಮನೃಪಾಲನು ನಿಡುಗಲ್ಲನ್ನು ಕ್ರಿ.ಶ.೧೬೬೩ರಲ್ಲಿ ಆಳಿದ್ದನೆಂದು ಮತ್ತು ತಿಮ್ಮಣ್ಣನಾಯಕನು ಕ್ರಿ.ಶ.೧೬೮೦ರಲ್ಲಿ ಆಳಿದನೆಂದೂ ಇವನು ತನ್ನ ತಂದೆ ಹೊಟ್ಟಣ್ಣನಾಯಕನು ಕಟ್ಟಿಸಿದ ಕಾಳಹಸ್ತೀಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದಂತೆ ಶಾಸನವು ಉಲ್ಲೇಖಿಸುತ್ತದೆ.[೨೦೭] ಇದೇ ಶಾಸನವು ಈತನು ಕೈಗೊಂಡ ಸಾಮಾಜಿಕ ಕಾರ್ಯಗಳನ್ನು ಕೊಂಡಾಡುತ್ತದೆ. ಮದುವೆ ಇತರೆ ಸಮಾರಂಭಗಳಿಗೆ ಹಲವಾರು ಉಡುಗೊರೆಗಳನ್ನು ಕೊಡುತ್ತಿದ್ದನು. ಈತನ ನಂತರ ಪ್ರಮುಖ ಪಾಳೇಗಾರನಾದ ಮುಮ್ಮಡಿ ಹೊಟ್ಟಣ್ಣನಾಯಕನು ಆಡಳಿತವನ್ನು ಕ್ರಿ.ಶ.೧೭೦೦ರಲ್ಲಿ ಪ್ರಾರಂಭಿಸಿದನು. ಇವನ ಕಾಲಘಟ್ಟದಲ್ಲಿ ಇತರ ಶತ್ರುಗಳು ಆಕ್ರಮಿಸಲು ಹವಣಿಸುತ್ತಿದ್ದರು. ಜೊತೆಗೆ ಎಲ್ಲರಲ್ಲಿಯೂ ಸ್ನೇಹ ಸಂಬಂಧವನ್ನಿಟ್ಟುಕೊಂಡಿದ್ದನು. ಕೊನೆಯದಾಗಿ ವೀರ ಮುಮ್ಮಡಿ ಹೊಟ್ಟಣ್ಣನಾಯಕ ಮತ್ತು ತಿಮ್ಮಣ್ಣನಾಯಕ ಆಳ್ವಿಕೆಯನ್ನು ಮಾಡಿದರು. ವೀರ ಮುಮ್ಮಡಿ ಹೊಟ್ಟಣ್ಣನಾಯಕನು ಕ್ರಿ.ಶ.೧೭೫೮ವರೆಗೆ ಆಡಳಿತ ಮಾಡಿದನು. ಈ ಅವಧಿಯಲ್ಲಿ ಸಿರಾ ನವಾಬರು ನಿಡುಗಲ್ಲು ದುರ್ಗವನ್ನು ಆಕ್ರಮಿಸಿದರು. ನಾಯಕನು ಅವರಿಗೆ ವಾರ್ಷಿಕ ೩೦೦೦ ಪಗೋಡಗಳ ಪೊಗದಿಯನ್ನು ಕೊಡಲು ಒಪ್ಪಿದನು. ಅಂದಿನಿಂದ ಅವರು ಸಿರಾ ನವಾಬರ ಆಶ್ರಿತರಾಗಿ ಆಡಳಿತ ಮಾಡಲಾರಂಭಿಸಿದರು.[೨೦೮]

ದಕ್ಷಿಣ ಕರ್ನಾಟಕದಲ್ಲಿ ಹಲವಾರು ರಾಜಕೀಯ ಬದಲಾವಣೆಗಳಾದವು. ಅದರಲ್ಲಿ ಮೈಸೂರಿನ ಕಡೆಯಿಂದ ಪ್ರತಿನಿಧಿಸಿದ ಹೈದರ್ ಮತ್ತು ಟಿಪ್ಪುವಿನ ರಾಜಕೀಯ ಕುತಂತ್ರಕ್ಕೆ ಸಿಕ್ಕಿದ ಪಾಳೆಯಪಟ್ಟುಗಳು ಚರಿತ್ರೆಯಿಂದ ಒಂದೊಂದೇ ನಿರ್ಗಮಿಸಲು ಒತ್ತಡಗಳು ಉಂಟಾದವು. ಅಂತಹ ವಿಚಾರದಲ್ಲಿ ನಿಡುಗಲ್ಲಿನ ಕೊನೆಯ ದೊರೆ ವೀರತಿಮ್ಮಣ್ಣನಾಯಕನು ಹೈದರನಿಗೆ ಸಹಾಯ ಮಾಡಲು ಹೋಗಿ ರೋಗಪೀಡಿತನಾಗಿ ಬಲಿಯಾಗುತ್ತಾನೆ. ಮುಂದೆ ಬಂದ ಈತನ ಮಕ್ಕಳೂ ಸಹ ತಿಳುವಳಿಕೆಯಲ್ಲಿ ಅಂಥ ಬಲಿಷ್ಠರಲ್ಲದ್ದರಿಂದ ಟಿಪ್ಪುವಿನಿಂದ ಗಲ್ಲುಶಿಕ್ಷೆಗೆ ಒಳಗಾದರು. ನಂತರ ಈ ಪ್ರದೇಶವು ಮೈಸೂರಿನ ಸಂಸ್ಥಾನದಲ್ಲಿ ವಿಲೀನವಾಯಿತು.

ನಿಡುಗಲ್ಲು ದುರ್ಗವನ್ನು ಇದೇ ಪ್ರದೇಶವನ್ನು ಆಳಿದವರು ಯಾರು ಇಲ್ಲವೆಂದು ಹೇಳಿರುವ ಡಾ.ಡಿ.ವಿ.ಪರಶಿವಮೂರ್ತಿ ಮಾತು ಸತ್ಯವಾಗುತ್ತದೆ. ಪ್ರಾರಂಭದಿಂದಲೂ ಚರಿತ್ರೆಯ ಕೊನೆಯವರೆಗೆ ವಲಸೆ ಬಂದು ಆಳಿದ ಅರಸರಿದ್ದಾರೆ. ನಿಡುಗಲ್ಲು ಮತ್ತು ಹರತಿಯಿಂದ ಆಳ್ವಿಕೆ ಮಾಡಿದ ಪಾಳೇಗಾರರ ವಂಶವೃಕ್ಷವನ್ನು ಇಲ್ಲಿ ಕಾಣಬಹುದಾಗಿದೆ.

ಹರತಿ-ನಿಡುಗಲ್ಲು ಅರಸರ ವಂಶಾವಳಿ

ಹರತಿ ತಿಪ್ಪರಾಜ

|

ಕಾಮನಾಯಕ

|

ಅಜ್ಜಿನಾಯಕ
|
ಬೊಮ್ಮನಾಯಕ
|
ಆಬ ಸುರೇಂದ್ರ
|
ಓರಿಯೊಡೆಯ
|
ಚಿಕ್ಕನೃಪ
|
ಹೊಟ್ಟೆ ನೃಪ
|
ನಂದಿ ನೃಪ
ಹೊಟ್ಟೆನೃಪ
|
ತಿಮ್ಮಭೂಪ
|
ಹೊಟೇಂದ್ರ + ಚೆನ್ನಮಾಂಬೆ
|
ವೀರ ಹೊಟ್ಟಣನಾಯಕ
|
ತಿಮ್ಮಣ್ಣನಾಯಕ
|
ಮುಮ್ಮಡಿ ಹೊಟ್ಟಣ್ಣನಾಯಕ
|
ವೀರ ಮುಮ್ಮಡಿ ಹೊಟ್ಟಣ್ಣನಾಯಕ
|
ವೀರತಿಮ್ಮಣ್ಣ ನಾಯಕ
|
ಹೊಟ್ಟಣನಾಯಕ ಇಮ್ಮಡಿ ಹೊಟ್ಟಣ್ಣನಾಯಕ[೨೯]

ನಿಡುಗಲ್ಲು ಕೋಟೆಯ ಲಕ್ಷಣಗಳು

ಹಲವು ಶಾಸನಗಳಲ್ಲಿ ನಿಡುಗಲ್ಲು ದುರ್ಗವನ್ನು ನೀಲಾವತಿ, ಕಾಲಾಂಜನ, ಕಾಳಂಜನಗಿರಿ ಎಂದು ಕರೆಯಲಾಗಿದೆ. ಆದರೆ ಪ್ರಕೃತಿಯಲ್ಲಿ ಮೂಡಿರುವ ನಿಡಿದಾದ ಕಲ್ಲಿನಿಂದ ಈ ದುರ್ಗವು ನಿಡುಗಲ್ಲು ಎಂದು ಹೆಸರಾಗಿದೆ. ಇಲ್ಲಿನ ಕೋಟೆಯನ್ನು ಪ್ರವೇಶಿಸಲು ದುರ್ಗದ ಬುಡದಲ್ಲಿರುವ ದಕ್ಷಿಣ ದ್ವಾರವನ್ನು ಬಳಸಬೇಕಾಗಿದೆ. ಇಲ್ಲಿಂದಲೇ ಇಡೀ ಕೋಟೆಯ ರಚನೆಯನ್ನು ಗಮನಿಸಬಹುದು.

ಕೋಟೆಯ ರಚನೆಯ ಗೋಡೆಯು ದೂರದಿಂದಲೇ ಬೃಹತ್ತಾಗಿ ಕಾಣಿಸುತ್ತದೆ. ಈ ಕೋಟೆಯ ನಿರ್ಮಾಣಕ್ಕೆ ತಳಭಾಗದಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ, ಮೇಲೇರಿದಂತೆ ಮಧ್ಯಮ ಕಲ್ಲುಗಳನ್ನು ಬಳಸಿರುವುದು ಕಂಡುಬರುತ್ತದೆ. ಈ ಕೋಟೆಯ ಮುಖ್ಯದ್ವಾರ ಇರುವುದು ಬೆಟ್ಟದ ಪೂರ್ವ ಭಾಗದಲ್ಲಿ, ಆದರೆ ಈ ದ್ವಾರ ಬಹಳ ಕಾಲದಿಂದಲೂ ಬಳಕೆ ಇಲ್ಲದ ಕಾರಣ ಸಂಪೂರ್ಣವಾಗಿ ಮುಳ್ಳಿನಿಂದ ಗಿಡಗಂಟಿಗಳಿಂದ ಮುಚ್ಚಿ ಹೋಗಿದೆ. ಈ ದ್ವಾರವನ್ನು ಪ್ರವೇಶಿಸಬೇಕಾದರೆ, ಅಂಕುಡೊಂಕಾಗಿಯೇ ಒಳಹೋಗಬೇಕು. ನೇರವಾಗಿ ಬಾಗಿಲು ಕಾಣುವುದಿಲ್ಲ. ಈ ಬಾಗಿಲನ್ನು ಸ್ಥಳೀಯರು 'ಪಾವಗಡದ ಬಾಗಿಲು' ಎಂದು ಕರೆಯುತ್ತಾರೆ. ಕೋಟೆ ಒಳಗಿರುವ ಗ್ರಾಮಕ್ಕೆ ಅನುಕೂಲವಾಗುವಂತೆ ಈಗ ರಸ್ತೆ ನಿರ್ಮಾಣ ಮಾಡುವ ಉದ್ದೇಶದಿಂದ ಪಾವಗಡ ಬಾಗಿಲ ಎಡ ಭಾಗದಲ್ಲಿನ ಕೋಟೆಯನ್ನು ಹೊಡೆದು ರಸ್ತೆಗೆ ಅವಕಾಶ ಮಾಡಲಾಗಿದೆ.

ನಿಡುಗಲ್ಲು ದುರ್ಗವು ಮೇಲಿನಿಂದ ಕೆಳಗಿನವರೆಗೆ ಏಳು ಸುತ್ತಿನ ಕೋಟೆಯನ್ನು ಸುತ್ತುವರಿದಿರುವುದು ಈಗಲೂ ಕಾಣಬಹುದು. ಈಗ ಕೋಟೆ ಗೋಡೆಯು ಬಹಳಷ್ಟು ಬಿದ್ದು ಹೋಗಿದ್ದು, ಅದರ ಕುರುಹುಗಳನ್ನು ಮಾತ್ರ ಕಾಣಬಹುದು. ಎಲ್ಲಾ ಸುತ್ತಿನ ಕೋಟೆಗಳಿಗೂ ಅಲ್ಲಲ್ಲಿ ಕೊತ್ತಲಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಏಳುಸುತ್ತಿನ ಕೋಟೆಗಳಿಗೂ ಒಂದೊಂದು ಹೆಸರನ್ನು ಸೂಚಿಸಲಾಗಿದೆ. ಕುಂಭಿಯ ಸುತ್ತಲಿರುವುದು ಕಾಳಂಜನಗಿರಿ ಅಥವಾ ಕಾಳಹಸ್ತಿಕೋಟೆ, ಅದರ ಕೆಳಗಿನದು ಭೈರವನ ಕೋಟೆ, ಅಲ್ಲಮ ದೇವರ ಕೋಟೆ, ಬೆಸ್ತರ ಕೋಟೆ, ವೀರಭದ್ರ ಕೋಟೆ' ಎಂದು ಹೆಸರಿಸಲಾಗಿದೆ.[೨೧೦] ಅಲ್ಲದೆ ಈ ಕೋಟೆಗಳಲ್ಲಿ ದೇವಾಲಯಗಳು ಹಾಗೂ ಇನ್ನಿತರ ಅವಶೇಷಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಈ ಕೋಟೆಗಳಲ್ಲಿರುವ ಹೆಬ್ಬಾಗಿಲುಗಳನ್ನು, ಪಾಗೊಂಡೆ ಬಾಗಿಲು, ವಜ್ರದೂರು ಬಾಗಿಲು, ಪೆನುಗೊಂಡೆ ಊರು ಬಾಗಿಲು, ಮಾಟೆನೂರು ಬಾಗಿಲು, ಕಳ್ಳೆ ಊರು ಬಾಗಿಲು, ಸಿಮ್ಮಲಯ್ಯನ ದಿಡ್ಡಿ ಬಾಗಿಲು, ಸಿರಾದ ಬಾಗಿಲು ಎನ್ನುವ ಹೆಸರುಗಳಿಂದ ಕರೆಯುತ್ತರಾದರೂ ಅವುಗಳಲ್ಲಿ ನಿರ್ದಿಷ್ಟವಾಗಿ ಇಂಥದೇ ಈ ಬಾಗಿಲು ಎಂದು ಹೇಳುವಲ್ಲಿ ತೊಡಕಿದೆ ಎನ್ನುತ್ತಾರೆ.[೨೧೧] ನಿಡುಗಲ್ಲು ದುರ್ಗವು ಬೇರೆ ಬೇರೆ ನಾಲ್ಕು ಅಂತಸ್ತುಗಳನ್ನು ಒಳಗೊಂಡಿದೆ. ಇದರಲ್ಲಿ ಮೇಲಿಂದ ಶಿಖರದ ಬಸವಣ್ಣನ ಅಂತಸ್ತು, ಕಾಳಹಸ್ತೇಶ್ವರ ದೇವಾಲಯವಿರುವ ಅಂತಸ್ತು, ಪ್ರಸ್ತುತ ವಾಸ ಮನೆಗಳಿರುವ ಅಂತಸ್ತು ಮತ್ತು ರಾಜತೀರ್ಥ-ಲಕ್ಷ್ಮಣ ತೀರ್ಥಗಳಿರುವ ಅಂತಸ್ತು ಎಂದು ವಿಂಗಡಿಸಬಹುದು. ಈಗ ನಿಡುಗಲ್ಲು ದುರ್ಗವನ್ನು ಪೂರ್ವ ಮತ್ತು ದಕ್ಷಿಣ ದಿಕ್ಕಿನಿಂದ ಮೇಲೇರಬಹುದಾಗಿದೆ. ಈ ದುರ್ಗದ ತುದಿಗೆ ಹೋಗಬೇಕಾದರೆ ಏಳುಸುತ್ತಿನ ಕೋಟೆಯನ್ನು ದಾಟಿ ಹೋಗಬೇಕು. ಕೆಳಗಿನ ಮೊದಲ ಅಂತಸ್ತಿನಲ್ಲಿ ರಾಮ ಲಕ್ಷ್ಮಣರು ಮಿಂದು ಮಡಿಯುಟ್ಟ ರಾಮತೀರ್ಥ-ಲಕ್ಷ್ಮಣತೀರ್ಥಗಳೆಂಬೆರಡು ತಿಳಿಗೊಳಗಳಿವೆ. ಪಕ್ಕದಲ್ಲಿಯೇ ಒಂದು ದೇವಾಲಯವಿದೆ. ಅದರಲ್ಲಿ ವಿಗ್ರಹ ಮಾತ್ರ ಕಾಣೆಯಾಗಿದೆ.

ಇದರಿಂದ ಪೂರ್ವದಿಕ್ಕಿಗೆ ಅರಣ್ಯ ಇಲಾಖೆಯವರು ಇತ್ತೀಚಿಗೆ ಬಂದು ಅಥಿತಿಗೃಹವನ್ನು ನಿರ್ಮಾಣ ಮಾಡಿದ್ದಾರೆ.

ಎರಡನೇ ಅಂತಸ್ತಿಗೆ ಹೋಗಲು ರಾಮತೀರ್ಥದಿಂದ ನರಸಿಂಹಸ್ವಾಮಿ ದೇವಸ್ಥಾನದವರೆಗೆ ರಸ್ತೆಯನ್ನು ನಿರ್ಮಿಸಲಾಗಿದೆ. ಇಲ್ಲಿಗೆ ಹೋಗಬೇಕೆಂದರೆ ವೀರಭದ್ರಕೋಟೆಯ ಪಾವಗಡ ಬಾಗಿಲನ್ನು ದಾಟಿ ಹೋಗಬೇಕು. ಇಲ್ಲಿ ಪೂರ್ವದಿಕ್ಕಿನಿಂದ ಪಶ್ಚಿಮ ದಿಕ್ಕಿನವರೆಗೂ ಸುಮಾರು ಒಂದು ಮೈಲಿಯಷ್ಟು ವಿಶಾಲವಾದ ಪ್ರದೇಶವನ್ನು ಕಾಣಬಹುದು. ಈ ಪ್ರದೇಶದಲ್ಲಿ ಅಸಂಖ್ಯಾ ವಸತಿ ತಾಣಗಳಿದ್ದ ಅವಶೇಷಗಳಿವೆ. ಅಲ್ಲದೆ ಪಶ್ಚಿಮ ದಿಕ್ಕಿನಲ್ಲಿ ಈಗಲೂ ೨೦-೩೦ ಮನೆಗಳಿವೆ. ಇಲ್ಲಿನ ನಿವಾಸಿಗಳ ಹೊಲಗಳಿವೆ. ಇವುಗಳಿಗೆ ಜಲಾಧಾರವಾಗಿ ಸಣ್ಣ ಸಣ್ಣ ಕುಂಟೆಗಳಿವೆ. "ಸ್ವಲ್ಪ ಮಟ್ಟಿಗೆ ಸುಸ್ಥಿತಿಯಲ್ಲಿರುವ ಹಲವು ದೇವಾಲಯಗಳಿವೆ. ಪಾರ್ಶ್ವನಾಥಬಸ್ತಿ, ವೀರಭದ್ರ ದೇವಾಲಯ, ಆದಿನಾರಾಯಣ, ಲಕ್ಷ್ಮೀ ನರಸಿಂಹಸ್ವಾಮಿ, ನಗರೇಶ್ವರ, ಮಳೆ ಮಲ್ಲಿಕಾರ್ಜುನ, ಸೋಮೇಶ್ವರ ದೇವಾಲಯಗಳು ಪ್ರೇಕ್ಷಣೀಯ ವಾದವುಗಳು."[೨೧೨] ಇಲ್ಲಿಂದ ಬೆಸ್ತರ ಕೋಟೆ ಮತ್ತು ಅಲ್ಲಮ ದೇವರ ಕೋಟೆಯನ್ನು ದಾಟಿದರೆ, ಮುಂದಿನದೇ ಚನ್ನರಾಯನ ಕೋಟೆ. ಇಲ್ಲಿ ದುರ್ಗಾಧಿಪತಿಗಳ ಅರಮನೆಯ ಅವಶೇಷಗಳನ್ನು ಕಾಣಬಹುದು. ಇಲ್ಲಿಯೇ ಒಂದು ಗುಂಡನ್ನು ಕೊರೆದು ದೊಡ್ಡಗೂಡನ್ನು ಮಾಡಿ, ಅಲ್ಲಿಗೆ ಹತ್ತಲು ಮೆಟ್ಟಿಲುಗಳನ್ನು ಕೊರೆದಿದ್ದಾರೆ. ಅಲ್ಲಿ ರಾಜನು ಕೂತು ರಾಜಕೀಯ ರಹಸ್ಯಗಳನ್ನು ಚರ್ಚಿಸುತ್ತಿರಲು, ಕೆಳಗೆ ಸಭಿಕರು ಕೂಡಲು ವಿಶಾಲ ಪ್ರಾಂಗಣ; ಇವನ್ನು ಮರೆ ಮಾಡುತ್ತಿದ್ದ ಭವ್ಯಕುಡ್ಯಗಳು; ಬೃಹದಾಕೃತಿಯ ಗುಂಡು ಬಂಡೆಗಳು; ಅರಸಿಯರ ಜಲಕೇಳಿಗೆಂದಿದ್ದ ತಿಳಿಗೊಳ; ಅದರ ಪಕ್ಕಕ್ಕೆ ರಾಜೋಧ್ಯಾನ; ಉಧ್ಯಾನಕ್ಕೆ ನೀರು ಸೇದಲು ಹಾಕಿದ್ದ ಚಿತ್ರ ಕೆಲಸವ ಕರಿಬಾವಿಯ ಕಲ್ಲುಗಳು; ಶತ್ರುಗಳು ದುರ್ಗವನ್ನು ಆಕ್ರಮಣಗೈದಾಗ ಪಾರಾಗಿ ಹೋಗಲೇರ್ಪಡಿಸಿದ್ದ ಗುಪ್ತಮಾರ್ಗ; ಅರಮನೆಯ ಮುಂದೆ ಚಂದ್ರಶಾಲೆ: ಅದರ ಮುಂದೆ ವಿಶಾಲ ಪ್ರಾಂಗಣ; ರಾಜಪ್ರಾಸಾದಕ್ಕೆ ಹೊಂದಿಕೊಂಡಿರುವ ನಗರೇಶ್ವರ ದೇವಾಲಯಗಳನ್ನು ಕಾಣಬಹುದು.[೨೧೩] ಇಲ್ಲಿಯೇ ಭೈರವನ ಕೋಟೆಯಲ್ಲಿ ಒಂದು ಭೈರವನ ಮೂರ್ತಿಯನ್ನು ಬಾಗಿಲಲ್ಲಿ ಕಾಣಬಹುದು. ಅಲ್ಲದೆ ಮಾಲನೂರು ಹೆಬ್ಬಾಗಿಲ ಬಳಿಯಲ್ಲಿ ಲಕ್ಷ್ಮೀಶ್ವರ ದೇವಾಲಯವಿದೆ.

ಮೂರನೇ ಅಂತಸ್ತಿಗೆ ಪ್ರವೇಶವು ಕಾಳೇಹಸ್ತೇಶ್ವರ ಕೋಟೆಯ ಪಶ್ಚಿಮ ದಿಕ್ಕಿನ ಬಾಗಿಲನ್ನು ದಾಟಬೇಕು. ಈ ಕೋಟೆಯು ಬೆಟ್ಟದ ಅಂತಿಮ ಸುತ್ತಾಗಿದೆ. ಇಲ್ಲಿಯೂ ಸಹ ವಿಶಾಲವಾದ ಪ್ರದೇಶವನ್ನು ಒಳಗೊಂಡಿದೆ. ಮೊದಲಿಗೆ, ದುರ್ಗವನ್ನು ಕೊರೆದು ಮಾಡಿರುವ ಎರಡು ಗವಿಗಳು ರಾಜಶಾಲಿಗೊಂದು(Rayal school) ಗರಡಿ ಮನೆಗೊಂದು ಉಪಯೋಗಿಸಲ್ಪಡುತ್ತಿದ್ದುವಂತೆ. ಶಾಲೆಯ ಗವಿಯಲ್ಲಿ ಅಯ್ಯಗಳು ಕೂಡುವ ಗೋಡೆಯಂಚಿನುದ್ದಕ್ಕೂ ಮೊಳ ಎತ್ತರದ ಜಗುಲಿ ಇದೆ.[೨೧೪] ಇಲ್ಲಿಂದ ಸ್ವಲ್ಪ ಕೆಳ ಭಾಗಕ್ಕೆ ಇಳಿದರೆ ತಿಳಿನೀರಿನ ಕೊಳ(ದೊಣೆ)ಯಿದೆ. ಇದರಲ್ಲಿ ಹಾಕಿದ ನಿಂಬೆಹಣ್ಣು

ಪರಶುರಾಂಪುರದ ಕೆರೆಯಲ್ಲಿ ತೇಲುತ್ತದೆ ಎನ್ನುವ ನಂಬಿಕೆಯಿದೆ. ಈ ಕೊಳದ ಬಲಭಾಗಕ್ಕೆ ಕಾಳ ಹಸ್ತೇಶ್ವರ ದೇವಾಲಯವಿದೆ. ಶ್ರೀರಾಮನಿಗೆ ಪೂಜೆಯ ವೇಳೆಯಲ್ಲಿ ಲಿಂಗವು ಸಿಗದ್ದಕ್ಕೆ, ಸೀತೆಯು ಫಲಹಾರಕ್ಕೆ ಮಾಡಿದ್ದ ಕಿಚ್ಚಡಿಯಿಂದ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದನು. ಅಂದಿನಿಂದ ಈ ಲಿಂಗಕ್ಕೆ ಕಿಚ್ಚಡಿ ಲಿಂಗೇಶ್ವರ ಎಂದೂ ಮತ್ತು ಕಾಳ ಹಸ್ತೀಶ್ವರಾಲಯವೆಂದು ಕರೆಯುತ್ತಾರೆ. ಇದರ ಬಲಭಾಗಕ್ಕೆ ವಸಂತ ಕಾಲಕ್ಕೆಂದು ನಿರ್ಮಿಸಿದ್ದ ಒಂದು ಅರಮನೆಯಿದೆ. ಈಗ ಇದು ಶಿಥಿಲಗೊಂಡಿದೆ. ಇದರ ಮುಂದೆಯೇ ತುಪ್ಪದ ಕಣಜಗಳನ್ನು ಬಂಡೆಯ ಮೇಲೆ ನಿರ್ಮಿಸಲಾಗಿದೆ. ಇಲ್ಲಿಂದ ಈಶಾನ್ಯ ಮೂಲೆಗೆ ನಡೆದರೆ ಒಂದು ಕೊತ್ತಲವಿದೆ. ಇದರ ಮೇಲೆ ಹದಿನೆಂಟಡಿ ಉದ್ದ ಒಂದಡಿ ವ್ಯಾಸವುಳ್ಳ ಮತ್ತು ಎಂಟಡಿ ಉದ್ದ ಒಂದಡಿ ವ್ಯಾಸವುಳ್ಳ ಎರಡು ಫಿರಂಗಿಗಳನ್ನು ಕಾಣಬಹುದು. ಇಲ್ಲಿನ ದೊಡ್ಡ ಫಿರಂಗಿಯನ್ನು 'ಏಳು ಮಕ್ಕಳ ತಾಯಿ' ಎತ್ತಿ ಶತ್ರುಗಳನ್ನು ನಾಶಗೊಳಿಸಿದ್ದಳು ಎಂದು ಹೇಳುತ್ತಾರೆ.

ನಾಲ್ಕನೇ ಅಂತಸ್ತು ಕುಂಭಿಯ ಭಾಗ. ಇಲ್ಲಿಗೆ ತಲುಪಬೇಕಾದರೆ ಬಹಳ ತ್ರಾಸು ಉಂಟಾಗುತ್ತದೆ. ಆದರೆ ಮೇಲೇರಿದ ತಕ್ಷಣವೇ ತಂಪಾದ ಗಾಳಿಯಿಂದ ಆಯಾಸ ಕಡಿಮೆಯಾಗುತ್ತದೆ. ಇಲ್ಲಿ ಬಸವೇಶ್ವರ ವಿಗ್ರಹವಿರುವ ಒಂದು ಗುಡಿಯಿದೆ. ಇದು ತುದಿಯ ಗುಂಡಿನ ಮೇಲಿರುವುದರಿಂದ ಇದರ ಪ್ರದಕ್ಷಿಣೆ ಅನುಕೂಲಕ್ಕಾಗಿ ಕಬ್ಬಿಣ ಸಲಾಕೆಯನ್ನು ಸುತ್ತಲೂ ಅಳವಡಿಸಲಾಗಿದೆ. ಇದರ ಬಲಭಾಗದ ಇನ್ನೊಂದು ಗುಂಡಿಗೆ ನೀರಿಗಾಗಿ ದೋಣೆಯನ್ನು ನಿರ್ಮಿಸಲಾಗಿದೆ. ಇದು ಬಸವೇಶ್ವರ ಗುಡಿ ಹತ್ತಿರ ಇರುವುದರಿಂದ 'ಬಸವಣ್ಣನ ದೋಣೆ'ಯೆಂದು ಕರೆಯುತ್ತಾರೆ. ಇಲ್ಲಿಯೇ ಆರಡಿ ಎತ್ತರದ ಕಬ್ಬಿಣದ ದೀಪಸ್ತಂಭವನ್ನು ನೆಡಿಸಿದ್ದಾರೆ. ಸುತ್ತಲ ಹಳ್ಳಿಯವರು ತಮ್ಮ ದನಕರುಗಳಿಗೆ ರೋಗಾದಿಗಳು ಬಂದಾಗ ಈ ಬಸವನಿಗೆ ಎಣ್ಣೆ, ಬೆಣ್ಣೆಗಳಿಂದ ದೀಪವನ್ನು ಹಚ್ಚುವ ವಾಡಿಕೆಯಿದೆ. ಶಿಖರದ ಬಸವನ ಜಾತ್ರೆಯು ಬಹಳ ದಿನಗಳವರೆಗೆ ನಡೆಯುತ್ತಿತ್ತೆಂದು, ಇಲ್ಲಿಯೇ ವಾಸವಾಗಿದ್ದ ಚನ್ನಪ್ಪ ಕವಿಯ 'ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ'ಯಿಂದ ತಿಳಿಯಬಹುದಾಗಿದೆ.[೨೧೫]

ನಿಡುಗಲ್ಲು ಕೋಟೆಯು ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಾಣಗೊಂಡಿದ್ದು, ರಕ್ಷಣೆಗಾಗಿ ಅಲ್ಲಲ್ಲಿ ಚೌಕಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಶತ್ರುಗಳ ಬರುವಿಕೆಯನ್ನು ಗ್ರಹಿಸಲು ತುಂಬಾ ಅನುಕೂಲವಾಗಿದ್ದವು. ಈ ಬೃಹದಾಕಾರದ ಕೊತ್ತಲಗಳು ಕೋಟೆಯ ಅಂದವನ್ನು ಹಿಮ್ಮಡಿಗೊಳಿಸಿವೆ ಎನ್ನಬಹುದು. ಇಲ್ಲಿನ ಕೋಟೆಯನ್ನು ಹಂಪೆ, ಚಿತ್ರದುರ್ಗ, ಗುಮ್ಮನಾಯಕನ ಹಳ್ಳಿಯ ಕೋಟೆಗಳಿಗೆ ಮತ್ತು ಇನ್ನಿತರ ಸ್ಮಾರಕಗಳಿಗೆ ಹೋಲಿಸಬಹುದಾಗಿದೆ.

ಕೋಟೆಯ ಮಹತ್ವ

ತುಮಕೂರು ಜಿಲ್ಲೆಯಲ್ಲಿರುವ ಪ್ರಬಲತರ ಗಿರಿದುರ್ಗಗಳಲ್ಲಿ ನಿಡುಗಲ್ಲು ದುರ್ಗವು ಒಂದು. ಇದನ್ನು ಚಿತ್ರದುರ್ಗದ ಕೋಟೆಗೆ ಹೋಲಿಸುವುದು ಉತ್ಪ್ರೇಕ್ಷೆಯೇನಲ್ಲ. ಅಲ್ಲದೆ ಶಾಸನಗಳು ನಿಡುಗಲ್ಲು

ದುರ್ಗವನ್ನು ಕರ್ನಾಟಕದ ಗಿರಿದುರ್ಗಗಳಲ್ಲಿ ನಿಡುಗಲ್ಲು ದುರ್ಗ ಅತ್ಯಂತ ಅಭೇಧ್ಯವಾದುದೆಂದೂ ಅಷ್ಟದಿಕ್ಕುಗಳಲ್ಲಿ ಭೈರವ, ಗಣಪತಿ, ದುರ್ಗಿ, ತ್ರಿಮೂರ್ತಿಗಳು ಸುತ್ತುವರೆದು ರಕ್ಷಿಸುತ್ತಿವೆಯೆಂದೂ ಆದ ಕಾರಣ ಅಶ್ವಪತಿಯಾಗಲೀ, ಗಜಪತಿಯಾಗಲೀ ಈ ದುರ್ಗವನ್ನು ಬೇಧಿಸಲು ಅಸಾಧ್ಯವೆಂದು ಹೊಗಳಿವೆ.[೨೧೬] ಇದನ್ನು ಡಾ. ಪರಶಿವಮೂರ್ತಿಯವರು 'ಕರ್ನಾಟಕದಲ್ಲಿಯೇ ಅತಿ ದುರ್ಗಮವಾದ ಕೋಟೆ' ಎಂದು ಹೇಳಿದ್ದಾರೆ. ಅಲ್ಲದೆ 'ಕರ್ನಾಟಕದಲ್ಲಿರುವ ಕೋಟೆಗಳೆಲ್ಲಲ್ಲಾ ಅತ್ಯಂತ ವಿಶಾಲವಾದ ಸ್ಥಳವನ್ನು ಹುದುಗಿಸಿಕೊಂಡಿರುವ ಕೋಟೆಯೆಂದರೆ ಇದೊಂದೇ ಆಗಿದೆ. ರಕ್ಷಣೆಯ ದೃಷ್ಠಿಯಿಂದ ತುಂಬ ಚಾಕಚಕ್ಯತೆಯಿಂದ ರಚನೆಯಾಗಿರುವ ಈ ಕೋಟೆಯು ಅಭ್ಯಾಸಕ್ಕೆ ಯೋಗ್ಯವಾಗಿದೆ ಎಂದಿದ್ದಾರೆ.'[೨೧೭] ಇಲ್ಲಿನ ಕೋಟೆಯ ಮಹಾದ್ವಾರದ ರಚನೆಯು "ಚಿತ್ರದುರ್ಗ ಕೋಟೆ ಮತ್ತು ಗುಮ್ಮನಾಯಕನಹಳ್ಳಿ ಕೋಟೆಯ ಮಹಾದ್ವಾರದ ರೀತಿಯೇ ಇದ್ದು, ರಚನಾ ಶೈಲಿ ವಿಸ್ಮಯವನ್ನುಂಟು ಮಾಡುತ್ತದೆ.'[೨೧೮] ಕೋಟೆಯ ಮಹಾದ್ವಾರವು ಹೊರಗಿನಿಂದ ದಾಳಿ ಮಾಡುವವರಿಗೆ ಸುಲಭವಾಗಿ ನುಗ್ಗಲು ಆಗದಂತೆ ಅನಿರೀಕ್ಷಿತ ತಿರುವುಗಳಿಂದ ಕೂಡಿದ ಈ ದ್ವಾರವು ವಾಸ್ತುಶೈಲಿಯ ಪ್ರತಿಭೆಯನ್ನು ತೋರಿಸುತ್ತದೆ.

ನಿಡುಗಲ್ಲು ದುರ್ಗವನ್ನು ಹರತಿ ತಿಮ್ಮಣ್ಣನಾಯಕನು ಆಳ್ವಿಕೆ ಮಾಡುತ್ತಿರುವಾಗ ಮೊಗಲರು ದಕ್ಷಿಣದ ಪ್ರದೇಶಗಳನ್ನು ಆಕ್ರಮಿಸಲು ಬರುತ್ತಾರೆ. ಮೊದಲಿಗೆ 'ಸಿರಾವನ್ನು ಗೆದ್ದ ಮೊಗಲರು ಸಮೀಪದಲ್ಲೇ ಇದ್ದ ನಿಡುಗಲ್ಲಿನ ಕೋಟೆಗೆ ಮುತ್ತಿಗೆ ಹಾಕಿದರು. ಮೊದಲೇ ರಕ್ಷಣೆ ಮಾಡಿಕೊಂಡಿದ್ದುದರಿಂದ ಕೋಟೆಯ ಬಾಗಿಲು ತೆರೆಯಲಿಲ್ಲ. ಮೂರು ವರ್ಷಗಳ ಕಾಲ ಮುತ್ತಿಗೆ ಮುಂದುವರೆದರೂ ದುರ್ಗವನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಕೋಟೆಯೊಳಗಡೆ ಇದ್ದ ಆಹಾರ ಪದಾರ್ಥಗಳು, ಮದ್ದು ಗುಂಡುಗಳು ಖಾಲಿಯಾಗತೊಡಗಿದವು.' ಕೊನೆಗೆ ಕೋಟೆಯು ಮೊಗಲರ ವಶವಾಯಿತು.[೨೧೯]

ನಿಡುಗಲ್ಲು ದುರ್ಗವು ಪ್ರಾಚೀನ ಗಿರಿದುರ್ಗವಾಗಿದೆ. ಚೋಳರ ಕಾಲದಲ್ಲಿಯೇ ನಿರ್ಮಾಣಗೊಂಡ ಇಲ್ಲಿನ ಕೋಟೆಯು ಹಲವು ಅಮರನಾಯಕರ ಆಳ್ವಿಕೆಯಲ್ಲಿ ಮಹತ್ವದ ಪಾತ್ರವನ್ನು ಹೊಂದಿತ್ತು. ಇಂತಹ ಕೋಟೆಯ ಬಲಿಷ್ಠತೆಯು ನಿಡುಗಲ್ಲಿನಲ್ಲಿ ದೊರೆತಿರುವ ಲಾವಣಿಯೊಂದರಲ್ಲಿ ಹೀಗೆ ವರ್ಣಿತವಾಗಿದೆ.

ಹಕ್ಕಿಹಾರದ ಕೋಟೆ ಪಕ್ಷಿ ತೂರದ ಕೋಟೆ
ರಕ್ಕಸನ ಕೋಟೆ ರಣಕೋಟೆ ||ರನ್ನಾದ||

ರಕ್ಕಸನ ಕೋಟೆ ರಣಕೋಟೆ ನಿಡುಗಲ್ಲು
ಒಕ್ಕು ಹೋಗೋನ ಹೆಸರೇನೆ || ರನ್ನಾದ||

ಕಾಗೆ ತೂರದ ಕೋಟೆ ಗೂಬೆ ತೂರದ ಕೋಟೆ

ರಾವಳನ ಕೋಟೆ ರಣಕೋಟೆ ||ರನ್ನಾದ||

ರಾವಳನ ಕೋಟೆ ರಣಕೋಟೆ ನಿಡುಗಲ್ಲು
ಓದಿ ಹೇಳೋನ ಹೆಸರೇನೆ || ರನ್ನಾದ ||

ಕೋಟೆ ಆರಾಳುದ್ದಕೊತ್ತಲ ಮೂರಾಳುದ್ದ
ಕೋಟೆಯ ಹೆಸರೆ ಗಡಿಯಂಕ || ರನ್ನಾದ ||[೨೨೦]

ನಿಡುಗಲ್ಲಿನ ಕೋಟೆ ಕೊತ್ತಲಗಳು ಆರಾಳು-ಮೂರಾಳುದ್ದ ಎತ್ತರಕ್ಕೆ ಬೆಳೆದು ಅಭೇದ್ಯವಾಗಿದ್ದವು. ಈ ಕೋಟೆಯ ಒಳಕ್ಕೆ ಹಕ್ಕಿ-ಪಕ್ಷಿಗಳೂ ಸಹ ತೂರಲು ಅವಕಾಶವಿಲ್ಲದೆ ಭದ್ರವಾಗಿತ್ತು. ಇದೊಂದು ರಕ್ಕಸನ ರಣಕೋಟೆಯಂತಿತ್ತು. ಅಲ್ಲದೆ ಕಾಗೆ, ಗೂಬೆ ತೂರದ ರಾವಳ ಕೋಟೆಯೆಂದು ಪುರಾಣಕಾಲದ ಕೋಟೆಗಳ ವರ್ಗಕ್ಕೆ ನಿಡುಗಲ್ಲು ದುರ್ಗದ ಕೋಟೆಯನ್ನು ಹೋಲಿಸುವುದನ್ನು ಕಾಣಬಹುದು. ಅದರಂತೆಯೇ ಇಲ್ಲಿನ ಕೋಟೆಯು ಎಲ್ಲಾ ಕಾಲದಿಂದಲೂ ಸುಭದ್ರವಾಗಿತ್ತೆಂದು ತಿಳಿಯಬಹುದು.

ಕೋಟೆಯೊಳಗಿರುವ ಸ್ಮಾರಕಗಳು

ನಿಡುಗಲ್ಲು ದುರ್ಗದ ಸ್ಮಾರಕಗಳು ಹಂಪಿಯಲ್ಲಿ ಕಂಡುಬರುವ ಸ್ಮಾರಕಗಳಷ್ಟೇ ಇವೆ. ಈ ಹಿನ್ನೆಲೆಯಲ್ಲಿ ನಿಡುಗಲ್ಲನ್ನು ಕರ್ನಾಟಕದ ಎರಡನೇ ಹಂಪೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ದುರ್ಗದಲ್ಲಿ ಸುಮಾರು ೧೯ ದೇವಾಲಯಗಳಿದ್ದು, ಅವುಗಳಿಗೆ ಇಂದೂ ಸಹ ಬಹುತೇಕ ದೇವಾಲಯದಲ್ಲಿ ಪೂಜೆ ಕಾರ್ಯ ನೆರವೇರುತ್ತಿದೆ. ಆದ್ದರಿಂದ ದೇವಾಲಯಗಳು ಮತ್ತೆ ಮತ್ತೆ ಜೀರ್ಣೋದ್ಧಾರಕ್ಕೆ ಒಳಗಾಗುತ್ತಿವೆ. ಇವಲ್ಲದೆ ಅನೇಕ ವಿಗ್ರಹಗಳು, ವೀರಗಲ್ಲುಗಳು, ಕಣಜಗಳು, ಅರಮನೆಗಳು, ನೀರಿನ ಸೌಕರ್ಯಕ್ಕೆ ನಿರ್ಮಿಸಿದ ಬಾವಿ, ದೋಣೆಗಳು ಇನ್ನು ಮುಂತಾದ ಸ್ಮಾರಕಗಳನ್ನು ಕಾಣಬಹುದಾಗಿದೆ.

ನಗರೇಶ್ವರ ದೇವಾಲಯ : ಈ ದೇವಾಲಯವು ಚನ್ನರಾಯನ ಮತ್ತು ಭೈರವನ ಕೋಟೆ ಮಧ್ಯದಲ್ಲಿದೆ. ಇಲ್ಲಿನ ದುರ್ಗಾಧಿಪತಿಗಳ ಅರಮನೆಯು ಸ್ವಲ್ಪ ದೂರದಲ್ಲಿದೆ. 'ನಗರೇಶ್ವರ ದೇವಾಲಯವು ಒಂದು ಪ್ರಮುಖ ದೇವಾಲಯವಾಗಿದ್ದು, ಪ್ರಾಕಾರದಲ್ಲಿ ಹಲವು ಶಾಸನ ಮತ್ತು ವೀರಗಲ್ಲುಗಳನ್ನು ಹೊಂದಿದೆ. ನವರಂಗದಲ್ಲಿರುವ ಕಪ್ಪುಶಿಲೆಯ ಶಾಸನವು ಕ್ರಿ.ಶ.೧೨೪೯ಕ್ಕೆ ಸೇರಿದೆ. ಪೂರ್ವ ಗರ್ಭಗೃಹ ಹಾಗೂ ಉತ್ತರ ಗರ್ಭಗೃಹಗಳಲ್ಲಿ ಮೂರ್ತಿಗಳಿವೆ. ನವರಂಗದಲ್ಲಿರುವ ಮೂರ್ತಿಗಳು ಸಪ್ತಮಾತೃಕೆ, ನಾಗ, ನಂದಿ ಹಾಗೂ ಮಹಿಷ ಮರ್ಧಿನಿ ನಿಲಯಗಳಾಗಿವೆ."[೨೨೧] ಈಗ ಈ ದೇವಾಲಯವು ನಾಶದ ಹಂತ ತಲುಪುತ್ತಿದೆ.

ಕಾಳೇಹಸ್ತೇಶ್ವರ ದೇವಾಲಯ : ಈ ದೇವಾಲಯವು ಕುಂಭಿಯ ಕೆಳಭಾಗದ ಹಂತದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು, ಇದನ್ನು ಶ್ರೀರಾಮನು ವನವಾಸದಲ್ಲಿದ್ದಾಗ ಈ ಪ್ರದೇಶದಲ್ಲಿ ಲಿಂಗ ಪೂಜೆ ಮಾಡುವುದಕ್ಕೆ ಎಲ್ಲಿಯೂ ಲಿಂಗ ದೊರೆಯದಿದ್ದಾಗ ಸೀತೆಯು ಫಲಹಾರಕ್ಕಾಗಿ ಮಾಡಿದ್ದ ಕಿಚ್ಚಡಿಯನ್ನು

ಲಿಂಗದ ಸ್ವರೂಪ ಮಾಡಿ, ಲಿಂಗ ಪೂಜೆ ಮಾಡಿದನೆಂದು, ಅಂದಿನಿಂದ ಈ ಲಿಂಗಕ್ಕೆ ಕಿಚ್ಚಟಿ ಲಿಂಗೇಶ್ವರವಾಯಿತೆಂದು ಜನರ ನಂಬಿಕೆ. ಆದರೆ ನಿಡುಗಲ್ಲು ಬೆಟ್ಟದ ಮೇಲಿನ ಕ್ರಿ.ಶ.೮೮೦ರ ಶಾಸನವೊಂದು ಈ ದೇವಾಲಯವನ್ನು ಪಲ್ಲವರ ಸಾಮಂತನಾಗಿದ್ದ ಚೋಳರ ಬಿದಿಯ ಚೋರರಸ ನಿರ್ಮಿಸಿದಂತೆ ತಿಳಿಸುತ್ತದೆ.[೨೨೨] ಅಷ್ಟೇ ಅಲ್ಲದೆ ತಿಮ್ಮಣ್ಣನಾಯಕನು ಕ್ರಿ.ಶ.೧೬೭೦ರಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾನೆ.[೨೨೩] ಇದು ಗರ್ಭಗೃಹವನ್ನು ಹೊಂದಿದ್ದು, ನವರಂಗದ ನೃತ್ಯವೇದಿಕೆಗಳನ್ನು ಹೊಂದಿದೆ. ಇಲ್ಲಿನ ಲಿಂಗದ ಮುಂದೆ ಬಸವಣ್ಣನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಇದರ ಮುಖವು ವಾರೆಯಾಗಿ ಒಂದು ಕಡೆ ವಾಲಿದೆ.

ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ : ಈ ದೇವಾಲಯವು ವೀರಭದ್ರಕೋಟೆಯ ಪ್ರದೇಶದಲ್ಲಿ ದಕ್ಷಿಣಾಭಿಮುಖವಾಗಿದೆ. ಇದು ಇಲ್ಲಿನ ದೇವಾಲಯಗಳಲ್ಲೆಲ್ಲ ಹಿರಿದಾಗಿದ್ದು, ಹೊಯ್ಸಳ ದ್ರಾವಿಡ ಶೈಲಿಯಲ್ಲಿದೆ.[೨೨೪] ಈ ದೇವಾಲಯವು ಎಲ್ಲಾ ದೇವಾಲಯಗಳಿಗಿಂತ ಹೆಚ್ಚಾಗಿ ಪೂಜೆಗೆ ಒಳಗಾಗುತ್ತಿದೆ. ಇದಕ್ಕೆ ಈಗ ಸುಣ್ಣ ಬಣ್ಣವನ್ನು ಬಳಿಯಲಾಗಿದೆ. ಇದರ ಗರ್ಭಗೃಹದ ತೋರಣದಲ್ಲಿ ದಶವತಾರವನ್ನು ಚಿತ್ರಿಸಲಾಗಿದೆ. ನವರಂಗದ ಗೂಡುಗಳಲ್ಲಿ ಕೇಶವ ಮತ್ತು ನಾಗನಮೂರ್ತಿಗಳಿದ್ದುದಾಗಿ ತಿಳಿಯುತ್ತದೆ. ಈ ದೇವಾಲಯಕ್ಕೆ ನವರಂಗ ಹಾಗೂ ಮುಖಮಂಟಪಗಳನ್ನು ನಂತರದಲ್ಲಿ ಸೇರಿಸಿದಂತೆ ಕಾಣುತ್ತದೆ.

ಸೋಮೇಶ್ವರ ದೇವಾಲಯ : ವೀರಭದ್ರಕೋಟೆಯ ಪ್ರದೇಶದಲ್ಲಿದೆ. ಇದನ್ನು ಕ್ರಿ.ಶ.೧೨೮೦ರಲ್ಲಿ ನಿರ್ಮಿಸಿದ್ದೆಂದು ದೇವಾಲಯದ ನವರಂಗದ ಬಾಗಿಲುವಾಡದಲ್ಲಿನ ಶಾಸನವು ತಿಳಿಸುತ್ತದೆ.[೨೨೫] ಇದರ ನವರಂಗದ ಒಂದು ಗೂಡಿನಲ್ಲಿ ಮಹಿಷಮರ್ದಿನಿಯ ಮೂರ್ತಿಯನ್ನು ಇಡಲಾಗಿದೆ. ನವರಂಗದ ದ್ವಾರವು ಸೂಕ್ಷ್ಮ ಕಲಾ ಕೆತ್ತನೆಯನ್ನು ಹೊಂದಿದೆ.

ಪಾರ್ಶ್ವನಾಥ ಬಸದಿ : ಅರಸರು ಸರ್ವಧರ್ಮಗಳನ್ನು ಪಾಲಿಸುತ್ತಿದ್ದರು ಎನ್ನುವುದಕ್ಕೆ ಇಲ್ಲಿನ ಪಾರ್ಶ್ವನಾಥ ಬಸದಿಯೇ ಸಾಕ್ಷಿಯಾಗಿದೆ. ಈ ಜಿನಾಲಯವನ್ನು ಪಾರ್ಶ್ವನಾಥ ಬಸದಿ ಅಥವಾ ಜೋಗವಟ್ಟಿಗೆ ಬಸದಿಯೆಂದು ಕರೆಯುತ್ತಾರೆ. ಇದನ್ನು ಗಾಂಗೇಯ ಮಾರೆಯನು ನಿರ್ಮಿಸಿದ್ದನೆಂದೂ, ಈತನು ಮತ್ತು ಪತ್ನಿ ಬಾಚಲೆಯರು ಇರುಂಗೋಳ ಚೋಳನನ್ನು ವಿನಂತಿಸಿದ್ದಕ್ಕೆ, ಭೂದಾನ ನೀಡಿದರೆಂದೂ ನಿಡುಗಲ್ಲಿನ ಕ್ರಿ.ಶ.೧೨೩೨ರ ಶಾಸನವೊಂದು ತಿಳಿಸುತ್ತದೆ.[೨೨೬] ಈ ಬಸದಿಯು ಗರ್ಭಗೃಹದಲ್ಲಿರುವ ನಾಗನ ಹೆಡೆ ಹೊಂದಿರುವ ಕಪ್ಪುಶಿಲೆಯ ಪಾರ್ಶ್ವನಾಥ ಮೂರ್ತಿಯು ಶಾಸನವನ್ನು ಹೊಂದಿದೆ. ಇದು ಐದಡಿಯ ಎತ್ತರವಾದ ಆಕೃತಿ. ಗರ್ಭಗೃಹದ ಬಾಗಿಲುವಾಡವು ಯಾವುದೇ ಸೂಕ್ಷ್ಮ ಕೆತ್ತನೆಗಳನ್ನು ಹೊಂದಿಲ್ಲ. ನವರಂಗವು ಒಂಬತ್ತು ಕಂಬಗಳನ್ನು ಮುಖಮಂಟಪವು ನಾಲ್ಕು ಕಂಬಗಳನ್ನು ಹೊಂದಿದ್ದು, ಪಾತಾಳಾಂಕಣವು ನಾಲ್ಕು ಕಂಬಗಳನ್ನು ಒಳಗೊಂಡಿದೆ. ಇದರ ಹಲವು ಭಾಗಗಳು ನಂತರದ ಸಂದರ್ಭದಲ್ಲಿ ಸೇರ್ಪಡೆಯಾಗಿರುವುದು ಕಂಡುಬರುತ್ತವೆ. ಬಸದಿಯಲ್ಲಿ ಸದಾ ಪೂಜೆಯು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಇದು ಶಿಥಿಲವಾಗದೇ ಈಗಲೂ ಉಳಿದುಕೊಂಡಿದೆ.

ಈ ಮೇಲೆ ತಿಳಿಸಿದ ದೇವಾಲಯಗಳಲ್ಲದೆ ನಾಗೇಶ್ವರ ದೇವಾಲಯ, ಇದನ್ನು ಕಲ್ಯಾಣ ಚಾಲುಕ್ಯರ ಅಧೀನಲ್ಲಿದ್ದ ಮಲ್ಲಿದೇವಚೋಳನು ನಿರ್ಮಿಸಿದ್ದನೆಂದು, ಅದಕ್ಕೆ ಅವನ ತಂತ್ರಪಾಲ ನಾನಮಣ ಮುಖಾಂತರ ಅನೇಕ ದಾನ-ದತ್ತಿಗಳನ್ನು ಕೊಟ್ಟಂತೆ ಶಾಸನವೊಂದು ತಿಳಿಸುತ್ತದೆ.[೨೭] ಕುಂಭಿಯ ಮೇಲಿರುವ ಬಸವೇಶ್ವರಾಲಯವನ್ನು ಕ್ರಿ.ಶ.೧೬೫೩ರಲ್ಲಿ ಹೊಟ್ಟಣ್ಣ ನಾಯಕನು ಕಟ್ಟಿಸಿ, ಪಕ್ಕದಲ್ಲಿ ಆರಡಿ ಎತ್ತರವಿರುವ ಕಬ್ಬಿಣ ದೀಪಸ್ತಂಭವನ್ನು ನೆಡಿಸಿದ್ದಾನೆ.[೨೮] ಮಾಲನೂರು ಹೆಬ್ಬಾಗಿಲ ಬಳಿಯಿರುವ ಲಕ್ಷ್ಮೀಶ್ವರ ದೇವಾಲಯವು, ಚಿಕ್ಕಪ್ಪನಾಯಕನೆಂಬುವನಿಂದ ಕ್ರಿ.ಶ.೧೪೮೯ರಲ್ಲಿ ತನ್ನ ಪಟ್ಟದರಸಿಯಾದ ಲಕ್ಷ್ಮೀದೇವಿಯ ಹೆಸರಿನಲ್ಲಿ ನಿರ್ಮಿಸಿದೆಂದು ಉಕ್ತವಾಗಿದೆ.[೨೯] ಇವಲ್ಲದೆ, ಚನ್ನಕೇಶ್ವರ ದೇವಾಲಯ, ಆದಿನಾರಾಯಣ ದೇವಾಲಯ, ಈಶ್ವರ ದೇವಾಲಯ, ಹೊಟ್ಟಣ್ಣನಾಯಕನು ಕ್ರಿ.ಶ.೧೬೬೦ರಲ್ಲಿ ನಿರ್ಮಿಸಿದ ಸಾರ್ವಡೇಶ್ವರ ದೇವಾಲಯ ಮತ್ತು ಈತನ ಹೆಸರಿನಲ್ಲೇ ಕ್ರಿ.ಶ.೧೬೬೧ರಲ್ಲಿ ನಿರ್ಮಿಸಿದ ಹೊಟ್ಟೇಶ್ವರ ದೇವಾಲಯ.[೩೦] ಗಳನ್ನು ಹೆಸರಿಸಬಹುದಾಗಿದೆ.

ಇಲ್ಲಿನ ಅರಸರು ದೇವಾಲಯಗಳಿಗೆ ಗಮನಕೊಟ್ಟಂತೆ ಕಣಜ, ನೀರಿನ ಸೌಕರ್ಯಕ್ಕಾಗಿ ದೊಣೆ, ಗರುಡ ಗಂಭಗಳು, ಅರಮನೆ, ಚಂದ್ರಶಾಲೆ, ಗರಡಿಮನೆ, ವಸತಿ ಗೃಹಗಳು ಸಹ ಪ್ರಾಮುಖ್ಯತೆಯನ್ನು ಪಡೆದುಕೊಂಡ ಇನ್ನಿತರ ಪ್ರಮುಖ ಸ್ಮಾರಕಗಳಾಗಿವೆ.

ಪಾವಗಡದ ಕೋಟೆ

ತುಮಕೂರು ಜಿಲ್ಲೆಯ ಮಧುಗಿರಿ ಉಪವಿಭಾಗಕ್ಕೆ ಸೇರಿದ ಪಾವಗಡವು ತಾಲ್ಲೂಕು ಕೇಂದ್ರವಾಗಿದೆ. ಇದು ತುಮಕೂರು ಜಿಲ್ಲೆಯ ಈಶಾನ್ಯದಲ್ಲಿದ್ದು, ಪಶ್ಚಿಮದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗೆ ಹೊಂದಿಕೊಂಡಿದೆ. ಉಳಿದ ಮೂರು ಕಡೆಯು ಆಂಧ್ರ ಪ್ರದೇಶ ಸುತ್ತುವರೆದಿದ್ದು, ಇದು ಕರ್ನಾಟಕದ ಗಡಿ ತಾಲ್ಲೂಕಾಗಿದೆ. ಪಾವಗಡದ ಬೆಟ್ಟವು ಸಮುದ್ರ ಮಟ್ಟಕ್ಕಿಂತ ೩೦೧೨ ಅಡಿ ಎತ್ತರದಲ್ಲಿದೆ. ಪಟ್ಟಣದ ಉತ್ತರ ದಿಕ್ಕಿಗೆ ಬೆಟ್ಟವಿದ್ದು, ಊರಿಗೂ ಮತ್ತು ಬೆಟ್ಟಕ್ಕೂ ಒಂದೇ ಹೆಸರನ್ನು ಇಡಲಾಗಿದೆ. ಈ ದುರ್ಗವನ್ನು ಶಾಸನಗಳು ಹಲವು ಹೆಸರುಗಳಿಂದ ಉಲ್ಲೇಖಿಸಿವೆ. ಬೆಟ್ಟದ ಬುಡದಲ್ಲಿರುವ ಈಶ್ವರ ದೇವಾಲಯದ ಶಾಸನ 'ಪಾಗೊಂಡೆ' ಎಂಬ ಹೆಸರಿನಿಂದ ಕರೆದರೆ, ಕಮ್ಮಾರ ಗುಂಡಿನ ಶಾಸನ 'ಪಾವಗೊಂಡ' ಎಂದು ಉಲ್ಲೇಖಿಸಿದರೆ, ವೆಂಕಟಪತಿ ದೊರೆಗಳ ಫೈಂಗಳನಾಮ ಶಾಸನದಲ್ಲಿ 'ಪಾಮುಕೊಂಡ' ಎಂದು ಉಲ್ಲೇಖಿಸಿದೆ.[೩೧] ಶಾಸನತಜ್ಞ ಲೂಯಿಸ್ ರೈಸ್ ಅವರು ಇಲ್ಲಿ ಹಾವಿನ ಚಿತ್ರವಿದ್ದ ಕಲ್ಲೊಂದು ಕಂಡುಬಂದಿದ್ದರಿಂದ ಇದಕ್ಕೆ 'ಪಾಮುಕೊಂಡ' ಎಂದು ಹೆಸರು ಬಂದಿದೆ ಎನ್ನುತ್ತಾರೆ.[೩೨] ಪಾಮುಕೊಂಡ ಎಂದರೆ ತೆಲುಗಿನಲ್ಲಿ 'ಹಾವಿನಂತಹ ಬೆಟ್ಟ' ಎಂಬರ್ಥವಿದೆ. ಈಗಲೂ ಜನರ ಬಾಯಲ್ಲಿ ಬಳಕೆಯಿರುವುದು ಪಾಗೊಂಡ ಎಂದಿದೆ. ಆದರೆ ಈ ಹೆಸರು ಏಕೆ ಬಂದಿದೆ ಎಂದು ತಿಳಿದುಬಂದಿಲ್ಲ. ಇದು ಮರಾಠರ

ಮಾಧವರಾಯನು ಕ್ರಿ.ಶ.೧೭೬೭ರಲ್ಲಿ ಮಧುಗಿರಿಯ ಜೊತೆಗೆ ಈ ಪ್ರದೇಶವನ್ನು ೭ ವರ್ಷಗಳ ಕಾಲ ಅಂಕೆಯಲ್ಲಿಟ್ಟಕೊಂಡಿದ್ದ. ಈ ಸಂದರ್ಭದಲ್ಲಿ ಪಾಮುಕೊಂಡ, ಪಾವುಗೊಂಡ, ಪಾಗೊಂಡ ಎಂಬ ಹೆಸರನ್ನು ಪಾವಗಡ ಎಂದು ಪರಿವರ್ತಿಸಿದನು. ಅಂದಿನಿಂದಲೂ ಪಾವಗಡ ಎಂಬ ಹೆಸರು ಬಳಕೆಯಿದೆ.[೨೩೩]

ಪಾವಗಡದ ಬೆಟ್ಟ ಮತ್ತು ಪಟ್ಟಣವು ಏಳುಸುತ್ತಿನ ಕೋಟೆಯಿಂದ ಆವೃತಗೊಂಡಿದೆ. ಈ ಕೋಟೆಯನ್ನು ಮೊದಲಿಗೆ ನಿರ್ಮಿಸಲು ಪ್ರಾರಂಭಿಸಿದವನು ಗೋಪರಾಜ. ಈತನು ವಿಜಯನಗರದ ಎರಡನೆ ದೇವರಾಯನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದು, ಮುಂದೆ ಈತನೇ ಈ ಪ್ರದೇಶದ ಮೊದಲನೆ ಪಾಳೇಗಾರನಾದನು. ಒಮ್ಮೆ ಬೇಟೆಯಾಡುತ್ತಾ ಇಲ್ಲಿಗೆ ಬಂದು ಈ ಪ್ರದೇಶವನ್ನು ನೋಡಿ ಕೋಟೆ ಕೊತ್ತಲಗಳನ್ನು ನಿರ್ಮಿಸಲು ಯೋಗ್ಯವಾದ ಸ್ಥಳವೆಂದು ಭಾವಿಸಿ, ಕ್ರಿ.ಶ.೧೪೦೫ರ ಪಾರ್ಥೀವ ನಾಮ ಸಂವತ್ಸರ ಆಶ್ವಯುಜ ಶುದ್ಧ ಪಂಚಮಿ ದಿನ ಕೋಟೆ ಕಾರ್ಯ ಪ್ರಾರಂಭಿಸಿದನು.[೨೩೪] ಈ ವಿಷಯ ತಿಳಿದ ದೇವರಾಯನು ಕೂಡಲೇ ಕೋಟೆಯ ನಿರ್ಮಾಣವನ್ನು ಸ್ಥಗಿತಗೊಳಿಸಬೇಕೆಂದು ಗೋಪರಾಜನಿಗೆ ಪತ್ರ ಬರೆದನು. ಇದರಿಂದ ಆರಂಭಗೊಂಡಿದ್ದ ಕೋಟೆ ನಿರ್ಮಾಣ ಕಾರ್ಯಸ್ಥಗಿತಗೊಂಡಿತು. ಜೊತೆಗೆ ಗೋಪರಾಜನು ಇಲ್ಲಿಂದ ಹಿಂದಿರುಗಬೇಕಾಯಿತು.

ಆನಂತರದ ದಿನಗಳಲ್ಲಿ ಪಾವಗಡದ ಸುತ್ತಮುತ್ತಲಿನ ಪ್ರದೇಶದಲ್ಲಿ ಪಂಜುಗಳ್ಳರ ಹಾವಳಿ ಹೆಚ್ಚಾಗಿದ್ದಿತು. ಇದೇ ಸಮಯಕ್ಕೆ ವಿಜಯನಗರ ಅವನತಿಯ ಕಡೆ ಸಾಗಿತ್ತು. ಪೆನುಗೊಂಡೆಯು ವಿಜಯನಗರದ ಭಾಗವಾಗಿದ್ದು, ಇಲ್ಲಿ ವೆಂಕಟಪತಿ ಅರಸರು ಆಳ್ವಿಕೆ ಮಾಡುತ್ತಿದ್ದರು. ಪಾವಗಡದ ಜನತೆ ಮತ್ತು ಸುತ್ತಮುತ್ತಲಿನ ಹಳ್ಳಿಯವರು ಪಂಜುಗಳ್ಳರಿಂದ ಬೇಸತ್ತು ಪೆನುಗೊಂಡ ಅರಸರಲ್ಲಿ ಮೊರೆಯಿಡುತ್ತಾರೆ. ಆಗ ಮಹಾರಾಜನು ದಂಡು ದಳವಾಯಿಯೊಂದಿಗೆ ಬಂದು ಕಳ್ಳರನ್ನು ಓಡಿಸಿದನು. ಇಲ್ಲಿ ಶಾಂತಿ, ಸುವ್ಯವಸ್ಥೆ ಉಂಟು ಮಾಡಲು ಗೋಪರಾಜನು ನಿಲ್ಲಿಸಿದ್ದ ಅಪೂರ್ಣಕೋಟೆಯನ್ನು ಪೂರ್ಣಗೊಳಿಸಲು ವೆಂಕಟಪತಿರಾಜರು ಕಾರ್ಯಾರಂಭ ಮಾಡಿದರು.[೨೩೫]

ಇತ್ತ ಹಾವಳಿ ಭೈರೇಗೌಡನು ಬಾಲಪ್ಪನಾಯಕನೊಡಗೂಡಿ ಪೆನುಗೊಂಡೆಗೆ ನುಗ್ಗಿ ಅಲ್ಲಿಯ ಸಂಪತ್ತನ್ನು ದೋಚಿದನು. ಈ ವಿಷಯವನ್ನು ತಿಳಿದ ತಕ್ಷಣ ಮಹಾರಾಜರು ಕೋಟೆಯ ಕಾರ್ಯವನ್ನು ನಿಲ್ಲಿಸಿ ಚಿಕ್ಕಬಳ್ಳಾಪುರದ ಹಾವಳಿ ಭೈರೇಗೌಡನ ಮೇಲೆ ಆಕ್ರಮಣ ಮಾಡಿ ಆತನನ್ನು ಮತ್ತು ಬಾಲಪ್ಪನಾಯಕನನ್ನು ಸೆರೆಹಿಡಿದು ಬಂಧನದಲ್ಲಿಟ್ಟನು. ಹಾವಳಿ ಭೈರೇಗೌಡನು ತನ್ನ ತಪ್ಪನ್ನು ಅರಿತು ಕ್ಷಮೆಯಾಚಿಸಿ ಬಾಲಪ್ಪನಾಯಕನನ್ನು ಒತ್ತೆಯಾಗಿ ಮಹಾರಾಜನ ದಂಡಿನಲ್ಲಿ ಬಿಟ್ಟು ಹೋದನು. ಅಂದಿನಿಂದ ಬಾಲಪ್ಪನಾಯಕ ಮಹಾರಾಜನಿಗೆ ಸಹಾಯಕನಾಗಿ ನಿಂತನು.[೨೩೬] ಕ.ರಾಜ್ಯ. ಗೆಜೆಟಿಯರ್, ಭಾಗ-೩, ಕ.ರಾ.ಸರ್ಕಾರ, ಬೆಂಗಳೂರು ೧೯೮೬, ಪು-೫೩೬) ಈತನು ಸ್ವಾಮಿ ನಿಷ್ಠೆಯಿಂದ ರಾಜರ

ದಂಡಿನಲ್ಲಿರುವಾಗ ಒಮ್ಮೆ ಪೆನುಗೊಂಡೆಯ ಮದ್ದಿನಕೋಠಿಗೆ ಸಿಡಿಲು ಬಡಿದು ಜ್ವಾಲೆಗಳು ಹರಡಿದವು. ಬಾಲಪ್ಪನಾಯಕನು ಬಹಳ ಸಾಹಸದಿಂದ ಆ ಬೆಂಕಿಯ ಜ್ವಾಲೆಯನ್ನು ನಂದಿಸಿದನು. ಇದರಿಂದ ಮಹಾರಾಜರು ಸಂತೃಪ್ತರಾಗಿ ಇವನ ಧೈರ್ಯ ಸಾಹಸಗಳಿಗೆ ಮೆಚ್ಚಿ ಒಂದು ತುಕಡಿಯ ಸೈನ್ಯಕ್ಕೆ ಯಜಮಾನನನ್ನಾಗಿ ಮಾಡಿದರು.[೨೩೭]

ಬಾಲಪ್ಪನಿಗೆ ಅದೃಷ್ಟ ಒಂದರ ಮೇಲೊಂದರಂತೆ ತಿರುಗತೊಡಗಿತು. ಇದೇ ಸಮಯಕ್ಕೆ ಗುತ್ತಿಯ ಪಾಳೇಗಾರರು ಸ್ವತಂತ್ರರಾಗಿ ಪೆನುಗೊಂಡೆಗೆ ಸೇರಿದ ಹಳ್ಳಿಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಇದರಿಂದ ವೆಂಕಟಪತಿ ರಾಜರು ಒಂದು ತುಕಡಿ ಸೈನ್ಯವನ್ನು ಬಾಲಪ್ಪನ ನಾಯಕತ್ವದಲ್ಲಿ ಗುತ್ತಿಯ ಮೇಲೆ ಯುದ್ಧ ಮಾಡಲು ಕಳುಹಿಸಿದನು. ಅಲ್ಲದೆ ಗುತ್ತಿಯವನೇ ಆದ ಬಾಲಪ್ಪನು ಅಲ್ಲಿನ ವಿದ್ಯಾಮಾನಗಳನ್ನು ಚೆನ್ನಾಗಿ ತಿಳಿದಿದ್ದರಿಂದ ಯುದ್ಧದಲ್ಲಿ ಅವನಿಗೆ ಸುಲಭವಾಗಿ ಜಯಲಭಿಸಿತು.[೨೩೮] ಈ ವಿಜಯದ ಕುರುಹಾಗಿ ಬಾಲಪ್ಪನಿಗೆ, 'ನಾಯಕ' ಎಂಬ ಬಿರುದು ನೀಡಿ ರತ್ನಗಿರಿ, ನಿಡುಗಲ್ಲು, ಪಳವಳ್ಳಿಗಳ ಅಧಿಕಾರವನ್ನು ಕೊಟ್ಟು ನಿಂತುಹೋಗಿದ್ದ ಪಾವಗಡದ ಕೋಟೆಯನ್ನು ಕಟ್ಟುವಂತೆ ವೆಂಕಟಪತಿರಾಜುಗಳು ಆದೇಶ ನೀಡಿದರು. ಬಾಲಪ್ಪನಾಯಕನು ಸುಬ್ಬರಾಯನೆಂಬ ಬ್ರಾಹ್ಮಣನ ಸಹಾಯದಿಂದ ಕ್ರಿ.ಶ.೧೫೮೫ರ ವೇಳೆಗೆ ಕೋಟೆಯ ಕಾರ್ಯವನ್ನು ಆರಂಭಿಸಿದನು.[೨೩೯]

ಬಾಲಪ್ಪನಾಯಕನ ಆಳ್ವಿಕೆಯಲ್ಲಿ ಪಾವಗಡ ಸಂಸ್ಥಾನವು ಪೂರ್ವಕ್ಕೆ ರಾಯದುರ್ಗದವರೆಗೂ, ಪಶ್ಚಿಮಕ್ಕೆ ಶಿರಾದವರೆಗೂ, ಉತ್ತರಕ್ಕೆ ದೊಡ್ಡೇರಿಯವರೆಗೂ, ದಕ್ಷಿಣಕ್ಕೆ ತೊಂಡೆಭಾವಿ, ಮಧುಗಿರಿಯ ವರೆಗೂ ವಿಸ್ತರಿಸಿತ್ತು. ಬಾಲಪ್ಪನಾಯಕನು ಸ್ವಾಮಿ ನಿಷ್ಠೆ ಪ್ರಾಮಾಣಿಕ ಗುಣಗಳನ್ನು ಹೊಂದಿದ್ದು, ಯುದ್ಧ ನಿಪುಣನು, ದಕ್ಷ ಆಡಳಿತಗಾರನೂ ಆಗಿದ್ದನು. ಇವನ ಆಡಳಿತಾವಧಿಯಲ್ಲಿ ಪಾವಗಡ ಪ್ರದೇಶವನ್ನು ವ್ಯವಸ್ಥಿತವಾಗಿ ಸುರಕ್ಷಿಸಲ್ಪಟ್ಟಿದ್ದನು. ಈತನ ಕಾಲದಲ್ಲಿ ಕೋಟೆ ಕೊತ್ತಲಗಳ ನಿರ್ಮಾಣ, ಮೂರು ಕಲ್ಯಾಣಿಗಳು, ಕಣಜಗಳು, ಅರಮನೆ, ವೇಣುಗೋಪಾಲ ಸ್ವಾಮಿ ದೇವಸ್ಥಾನ, ಹೀಗೆ ಹಲವಾರು ಕೆಲಸಕಾರ್ಯಗಳನ್ನು ನಿರ್ವಹಿಸಿ ಜನರ ನಾಯಕನಾಗಿ ಆಳ್ವಿಕೆ ಮಾಡಿದನು.

ಬಾಲಪ್ಪನಾಯಕನಿಗೆ ಐದು ಜನ ಪುತ್ರ ಸಂತಾನವಿದ್ದು, ಹಿರಿಯಮಗ ತಿಮ್ಮಭೂಪಾಲ[೨೪೦] ಇವನ ನಂತರ ಅಧಿಕಾರಕ್ಕೆ ಬಂದ ಪಾಳೇಗಾರರ ಬಗೆಗೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಬಾಲಪ್ಪನಾಯಕನ ನಂತರ ಬಂದ ಪಾಳೇಗಾರರು ಅಷ್ಟೊಂದು ಪ್ರಬಲರಾಗಿಲ್ಲದ ಕಾರಣ ಪಾವಗಡದ ಕೋಟೆಯು ಬೇರೆಯವರ ಆಕ್ರಮಣಕ್ಕೆ ಗುರಿಯಾಗಬೇಕಾಯಿತು. ಈ ಪ್ರದೇಶವು ಮುಂದೆ ವಿಜಾಪುರ ಮತ್ತು ಮೊಗಲರ ವಶಕ್ಕೆ ಅನುಕ್ರಮವಾಗಿ ಬಂದಾಗ ಪಾವಗಡದ ನಾಯಕರು ಅವರಿಗೆ ಕಾಲಕಾಲಕ್ಕೆ ಕಪ್ಪಕಾಣಿಕೆ ಕೊಡುತ್ತಿದ್ದರು. ಇದಾದ ನಂತರ ರಾಜಕೀಯದಲ್ಲಿ ಅನೇಕ ಬದಲಾವಣೆಯ ಸಂದರ್ಭದಲ್ಲಿ ಹೈದರಾಲಿಯು

ಮೈಸೂರು ರಾಜ್ಯವನ್ನು ತನ್ನ ಅಧೀನಕ್ಕೆ ವಹಿಸಿಕೊಂಡಾಗ ಇಲ್ಲಿನ ಸುತ್ತಮುತ್ತಲ ಪಾಳೆಯಪಟ್ಟುಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೭೭೭ರಲ್ಲಿ ಹೈದರಾಲಿಯು ಮಧುಗಿರಿಯನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಪಾವಗಡವನ್ನು ಸಹ ವಶಪಡಿಸಿಕೊಳ್ಳಲಾಯಿತು. ಆಗ ಪಾವಗಡವನ್ನು ವೆಂಕಟಪತಿ ತಿಮ್ಮಪ್ಪನಾಯಕನು ಆಳುತ್ತಿದ್ದನು.[೨೪೧] ಇದರಿಂದ ಪಾವಗಡದ ನಾಯಕರು ಹೈದರಾಲಿಗೆ ಕಪ್ಪವನ್ನು ಕೊಡಬೇಕಾಯಿತು.

ಕೊನೆಗೂ ವೆಂಕಟಪತಿ ತಿಮ್ಮಪ್ಪನಾಯಕನು ಹಲವು ಕಾರಣಗಳಿಂದಾಗಿ ಕಪ್ಪವನ್ನು ಕೊಡದ ಕಾರಣದಿಂದ ಸಂಸಾರ ಸಮೇತ ಅವನನ್ನು ಬಂಧಿಸಿ ಮಧುಗಿರಿ ಕೋಟೆಯ ಬಂದೀಖಾನೆಯಲ್ಲಿ ಇರಿಸಿದನು.[೨೪೨] ಆಗ ಮಧುಗಿರಿ ಸುಲ್ತಾನನಿಗೆ ಕೋಟೆಯ ಅಧಿಕಾರವನ್ನು ವಹಿಸಿಕೊಟ್ಟನು. ಮುಂದೆ ಮೈಸೂರು ಯುದ್ಧದಲ್ಲಿ ಲಾರ್ಡ್ ಕಾರ್ನ್‌ವಾಲೀಸನೊಡನೆ ಸಹಕರಿಸಲು ಬಂದ ಮರಾಠರು ಮಧುಗಿರಿಯನ್ನು ವಶಪಡಿಸಿಕೊಂಡರು. ಆ ಸಮಯದಲ್ಲಿ ತಿಮ್ಮನಾಯಕನು ಬಿಡುಗಡೆಯಾಗಿ ಪಾವಗಡಕ್ಕೆ ಬಂದನು.[೨೪೩] ಅದುವರೆಗೂ ಪಾವಗಡವು ಮುಸ್ಲಿಂರ ಆಳ್ವಿಕೆಯಲ್ಲಿತ್ತು. ಇವರ ಕಾಲದಲ್ಲಿ ಕೋಟೆಯು ಮುಸ್ಲಿಂ ವಾಸ್ತುಶೈಲಿಯಲ್ಲಿ ಹೊಸರೂಪವನ್ನು ತಾಳಿತು. ಅನಂತರ ತಿಮ್ಮಪ್ಪ ನಾಯಕನು ಹೊಸದಾಗಿ ವೇಣುಗೋಪಾಲಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದನು.[೨೪೪]

ಒಟ್ಟಾರೆಯಾಗಿ ವಿಜಯನಗರದ ಅರಸರ ಕಾಲದಲ್ಲಿ ಕೋಟೆ ಕೊತ್ತಲ ನಿರ್ಮಾಣದಿಂದ ಪಾವಗಡದ ಇತಿಹಾಸ ಪ್ರಾರಂಭವಾಗಿ ಮೈಸೂರು ರಾಜ್ಯದಲ್ಲಿ ವಿಲೀನವಾಗುವವರೆಗೆ ಪೆನುಗೊಂಡೆ ಪಾಳೇಗಾರರು, ಮುಸ್ಲಿಮ್ ದೊರೆಗಳು, ಮರಾಠರು, ಹೈದರ್-ಟಿಪ್ಪು, ಮೈಸೂರು ಒಡೆಯರು ಆಳ್ವಿಕೆ ಮಾಡಿರುವುದು ಕಾಣಬಹುದು. ಗೋಪರಾಜ ಮತ್ತು ಬಾಲಪ್ಪನಾಯಕನಿಂದ ನಿರ್ಮಾಣಗೊಂಡ, ಮಣ್ಣಿನ ಕೋಟೆಯು ಹೈದರ್-ಟಿಪ್ಪುಸುಲ್ತಾನರಿಂದ ಗಾರೆಗಚ್ಚಿನಿಂದ ಪುನರ್ ನಿರ್ಮಾಣಗೊಂಡಿರುವುದರಿಂದ ಈಗಲೂ ಕೋಟೆಯನ್ನು ಕಾಣಬಹುದು. ಸದ್ಯದಲ್ಲಿ ಪಾವಗಡ ಪಟ್ಟಣವು ವಿಸ್ತಾರಗೊಳ್ಳುತ್ತಿರುವುದರಿಂದ ಕೋಟೆಗೋಡೆಯು ಶಿಥಿಲವಾಗುತ್ತಿದೆ. ಕೋಟೆಯ ಬಾಗಿಲುಗಳು ಇನ್ನೂ ಭದ್ರವಾಗಿವೆ.

ಪಾವಗಡ ಕೋಟೆಯ ಲಕ್ಷಣಗಳು

ಪಾವಗಡ ಬೆಟ್ಟದಲ್ಲಿ ಕೋಟೆ ನಿರ್ಮಾಣ ಮಾಡಲು ತಳಪಾಯ ಹಾಕಿದ ಕೀರ್ತಿ ಗೋಪರಾಜನಿಗೆ ಸಲ್ಲುತ್ತದೆ. ಈತನು ವಿಜಯನಗರದ ದೇವರಾಯನ ಆಸ್ಥಾನದಲ್ಲಿ ಹಿರಿಯ ಅಧಿಕಾರಿಯಾಗಿದ್ದನು. ಒಮ್ಮೆ ಈ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಕೋಟೆ ಕೊತ್ತಲ ನಿರ್ಮಿಸಲು ಯೋಗ್ಯ ಸ್ಥಳವೆಂದು ಭಾವಿಸಿ ಕ್ರಿ.ಶ.೧೪೦೫ರಲ್ಲಿ ಕೋಟೆ ಕಾರ್ಯ ಪ್ರಾರಂಭಿಸಿದನು.[೨೪೫] ಆದರೆ ವಿಜಯನಗರದರಸರು ಕೋಟೆಕಟ್ಟಲು ಅಡ್ಡಿಪಡಿಸಿದ್ದರಿಂದ ಅರ್ಧಕ್ಕೆ ನಿರ್ಮಾಣದ ಕಾರ್ಯಸ್ಥಗಿತಗೊಂಡಿತು. ಇದನ್ನು ಪೆನಗೊಂಡೆಯ ವೆಂಕಟಪತಿ ಮಹಾರಾಜರ ಆದೇಶದ ಮೇರೆಗೆ ಅರ್ಧಕ್ಕೆ ನಿಂತಿದ್ದ ಕೋಟೆಯನ್ನು ಕ್ರಿ.ಶ.೧೫೮೫ರಲ್ಲಿ

ಬಲ್ಲಪ್ಪನಾಯಕನು ನಿರ್ಮಿಸಿ ಪಾವಗಡದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದನು.[೨೪೬] ನಂತರ ಟೈಪರ್ ಕಾಲದಲ್ಲಿ ಕೋಟೆಯು ಜೀರ್ಣೋದ್ಧಾರವಾಗಿರುವುದನ್ನು ಕಾಣಬಹುದು.

ಪಾವಗಡದ ಬೆಟ್ಟಕ್ಕೂ ಹಾಗೂ ಬೆಟ್ಟದ ಬುಡದಲ್ಲಿರುವ ಗ್ರಾಮಕ್ಕೂ ಒಳಗೊಂಡಂತೆ ಅಭೇಧ್ಯವಾದ ಮತ್ತು ಸದೃಢವಾದ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯ ಗೋಡೆಯ ಕೆಳಗಿನ ಭಾಗವು ಬೃಹತ್ ಕಲ್ಲುಗಳಿಂದ ಕೂಡಿದ್ದು, ಮೇಲೇರುತ್ತಾ ಮಧ್ಯಮ ಕಲ್ಲುಗಳನ್ನು ಬಳಸಲಾಗಿದೆ. ಸೈನಿಕರು ಪಹರೆಗಾಗಿ ಓಡಾಡುವ ಸ್ಥಳದಿಂದ ಮೇಲಕ್ಕೆ ಇಟ್ಟಿಗೆ ಗಾರೆಯಿಂದ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಇಟ್ಟಿಗೆ ಗೋಡೆಯಲ್ಲಿ ಅಂಬುಕಿಂಡಿಗಳನ್ನು ಬಿಡಲಾಗಿದೆ. ಅಲ್ಲದೆ ಕೊತ್ತಲ, ಬತೇರಿಗಳಲ್ಲಿ ಫಿರಂಗಿಯನ್ನು ಇಟ್ಟುಕೊಳ್ಳಲು ಮುಂಚಾಚಿದ ಫಿರಂಗಿ ಕಿಂಡಿಗಳನ್ನು ಸಹ ಬಿಡಲಾಗಿದೆ. ಇನ್ನು ಕೋಟೆಯ ಗೋಡೆಯ ಮೇಲೆ ಓಡಾಡಲು ಹಾಗೂ ಕಾವಲುಗಾರರು ಇರಲು ಅನುಕೂಲವಾಗುವಂತೆ ತಾಣಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಜೊತೆಗೆ ಅಲ್ಲಲ್ಲಿ ಬುರುಜು ಮತ್ತು ಚೌಕಾಕಾರದ, ವೃತ್ತಕಾರದ ಕೊತ್ತಲಗಳನ್ನು ಕಾಣಬಹುದು. ಇಷ್ಟೇ ಅಲ್ಲದೆ ಕೋಟೆಯಲ್ಲಿ ನೀರು ಕಿಂಡಿಗಳೂ, ಜೋರಕಿಂಡಿ ಇವೆ. ಕೋಟೆಯ ಕೆಳಭಾಗದಲ್ಲಿ ಸುತ್ತಲೂ ನಿರ್ಮಿಸಿದ ಕಂದಕಕ್ಕೆ ಬೆಟ್ಟದಿಂದ ಬರುವ ನೀರನ್ನು ನೀರು ಕಿಂಡಿಗಳ ಸಹಾಯದಿಂದ ಕಂದಕಗಳಿಗೆ ನೀರನ್ನು ಹಾಯಿಸಿ ಯಾವಾಗಲೂ ತುಂಬಿಸಿರುತ್ತಿದ್ದರು.[೨೪೭] ಇದರಿಂದ ಶತ್ರುಗಳು ಬೇಗನೆ ಕೋಟೆಯನ್ನು ವಶಪಡಿಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ.

ಪಾವಗಡ ಗ್ರಾಮದ ಸುತ್ತಿನ ಹೊರಕೋಟೆಯು ಮೂರು ಊರು ಬಾಗಿಲುಗಳನ್ನು ಹೊಂದಿದೆ. ಅದರಲ್ಲಿ ಪೆನುಗೊಂಡೆ(ಪೂರ್ವ)ದಿಕ್ಕಿಗೆ ಇರುವ 'ಪೆನುಗೊಂಡೆ ಹೆಬ್ಬಾಗಿಲು, ಮಧುಗಿರಿ (ದಕ್ಷಿಣ) ದಿಕ್ಕಿಗೆ ಇರುವ ಮಧುಗಿರಿ ಹೆಬ್ಬಾಗಿಲು, ನಿಡುಗಲ್ಲು(ಪಶ್ಚಿಮ) ದಿಕ್ಕಿಗೆ ಇರುವ ನಿಡುಗಲ್ಲು ಊರ ಬಾಗಿಲು ಎಂದು ಹೆಸರಿಸಲಾಗಿದೆ. ಇವುಗಳಲ್ಲಿ ಮಧುಗಿರಿ, ಪೆನುಗೊಂಡೆ ಬಾಗಿಲುಗಳು ವಿಜಯನಗರ ಶೈಲಿಯ ವಾಸ್ತು ವಿನ್ಯಾಸವನ್ನು ಹೊಂದಿವೆ.[೨೪೮] ಈ ಮೂರು ಬಾಗಿಲುಗಳ ಪಕ್ಕದಲ್ಲಿ ದಿಡ್ಡಿ ಬಾಗಿಲುಗಳನ್ನು ಸಹ ಕಾಣಬಹುದು. ಈ ಮೂರು ಊರು ಬಾಗಿಲುಗಳನ್ನು ಒಳಗೊಂಡಿರುವ ಕೋಟೆಯ ರಕ್ಷಣೆಯ ದೃಷ್ಟಿಯಿಂದ ಅಲ್ಲಲ್ಲಿ ಬುರುಜುಗಳನ್ನು ನಿರ್ಮಿಸಲಾಗಿದೆ. ಕೆಲವು ಬುರುಜುಗಳಿಗೆ ಹೆಸರನ್ನು ಸೂಚಿಸಲಾಗಿದೆ. ಅದರಲ್ಲಿ ಪೆನುಗೊಂಡೆ ಬಾಗಿಲ ಬಲಭಾಗಕ್ಕಿರುವ ಎರಡು ಬುರುಜುಗಳಿಗೆ, ಕೊರಚು ಮುತ್ಯಾಲಮ್ಮನ ಬುರುಜು, ಆಚಾರಿಬುರುಜು ಎಂದು ಹೆಸರಿಡಲಾಗಿದೆ. ಎರಡನೇ ಸುತ್ತಿನ ಕೋಟೆಯಲ್ಲಿ ಎರಡು ಊರು ಬಾಗಿಲುಗಳಿವೆ. ಒಂದು ಸಂತೆ ಊರು ಬಾಗಿಲು, ಇನ್ನೊಂದು ಜಿನಗಾರು ಊರು ಬಾಗಿಲು ಎಂದು ಹೆಸರಿಸಲಾಗಿದೆ. ಈ ಕೋಟೆಯ ಒಂದು ಕೊತ್ತಲಕ್ಕೆ ತೇರು ಕೊತ್ತಲವೆಂದು ಕರೆಯುತ್ತಾರೆ. ಇದಕ್ಕೆ ವಡ್ಡರ ಜಾತಿಯ ಗರ್ಭಿಣಿಯಾದ ಕೋಟಮ್ಮಳನ್ನು ಬಲಿಕೊಟ್ಟಿದ್ದರೆಂದು, ಆ ಹಿನ್ನೆಲೆಯಲ್ಲಿ ಇದನ್ನು

ಕೋಟಮ್ಮಳ ಕೊತ್ತಲವೆಂದು ಕರೆಯುತ್ತಾರೆ. ಈ ಕೊತ್ತಲದ ಸ್ಥಳಕ್ಕೆ ಪ್ರತಿ ವರ್ಷ ವೇಣುಗೋಪಾಲ ಸ್ವಾಮಿಯ ತೇರನ್ನು(ರಥ) ಎಳೆಯುತ್ತಾರೆ. ಇದರಿಂದ ಈ ಕೊತ್ತಲಕ್ಕೆ ತೇರು ಕೊತ್ತಲವೆಂದು ಹೆಸರಾಯಿತೆಂದು ಹೇಳುತ್ತಾರೆ. ಇಲ್ಲಿಂದ ಬೆಟ್ಟಕ್ಕೆ ಮೇಲೇರುವಾಗ ಕಮ್ಮಾರ ಮಂಟಪವನ್ನು ಕಾಣಬಹುದು. ಇಲ್ಲಿ ಯುದ್ಧಕ್ಕೆ ಬೇಕಾಗುವ ಆಯುಧಗಳನ್ನು ತಯಾರಿಸುತ್ತಿದ್ದರು ಎಂದು ಸ್ಥಳೀಯರ ನಂಬಿಕೆ.

ಪಾವಗಡದ ಕೋಟೆಯು ಏಳುಸುತ್ತಿನ ಕೋಟೆಯನ್ನು ಒಳಗೊಂಡಿದೆ. ಅದರಲ್ಲಿ ಎರಡು ಸುತ್ತನ್ನು ಗ್ರಾಮದ ರಕ್ಷಣೆಗಾಗಿ ನಿರ್ಮಿಸಿದ್ದಾರೆ. ಇನ್ನು ಉಳಿದ ಐದು ಸುತ್ತನ್ನು ಬೆಟ್ಟದಲ್ಲಿರುವವರ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಮೂರನೇ ಸುತ್ತಿನಿಂದ ತುದಿಯವರೆಗೂ ಹಲವು ಬಾಗಿಲುಗಳಿಗೆ ಹೆಸರನ್ನು ಸೂಚಿಸಲಾಗಿದೆ. ಪತ್ತೆ ಊರು ಬಾಗಿಲು, ಅಬ್ಬೂರು ಬಾಗಿಲು, ಪಪ್ಪಮ್ಮನ ಬಾಗಿಲು, ಆಂಜನೇಯ ಬಾಗಿಲು, ಕೊನೇರಿ ಬಾಗಿಲು ಮತ್ತು ಗೋಪಾಲ ಸ್ವಾಮಿ ಬಾಗಿಲು ಎಂದು ಕರೆಯುತ್ತಾರೆ[೨೪] ಈ ಬಾಗಿಲುಗಳ ಮೇಲಿನ ಕೈಪಿಡಿ ಗೋಡೆಗಳಲ್ಲಿ ಮುಸ್ಲಿಂ ಶೈಲಿಯ ಕುಸುರಿ ಚಿತ್ರಕಲೆಯನ್ನು ಬಿಡಿಸಲಾಗಿದೆ. ಎಲ್ಲಾ ಬಾಗಿಲುಗಳ ಪಕ್ಕದಲ್ಲಿ ರಕ್ಷಣೆಗಾಗಿ ಬತೇರಿಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಒಳ ಮಗ್ಗುಲುಗಳಲ್ಲಿ ವಿಶ್ರಾಂತಿ ಮಂಟಪಗಳನ್ನು ನಿರ್ಮಿಸಲಾಗಿದೆ.

ಮೂರನೇ ಸುತ್ತಿನ ಕೋಟೆಯನ್ನು ಕಡಿದಾದ ಬಂಡೆಯ ಮೇಲೆ ನಿರ್ಮಿಸಲಾಗಿದೆ. ಇದು ಬೃಹತ್ ಕಲ್ಲು ಮತ್ತು ಗಾರೆ ಗಚ್ಚಿನಿಂದ ನಿರ್ಮಾಣಗೊಂಡಿದೆ. ಇದರ ಒಳಪ್ರಾಂಗಣದಲ್ಲಿ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು. ಇಲ್ಲಿಂದ ಮೇಲೇರಲು ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಬೆಟ್ಟದ ಮಧ್ಯಭಾಗದಲ್ಲಿ ಏಳು ಅಡಿ ಎತ್ತರವಿರುವ ಆಂಜನೇಯ ವಿಗ್ರಹವಿದೆ. ಇದು ಪೂರ್ವಾಭಿಮುಖ ವಾಗಿದೆ. ಇನ್ನುಳಿದ ಎರಡು ಕೋಟೆಗಳನ್ನು ದಾಟಿ ಮೇಲೆ ಸಾಗಿದರೆ ವಿಶಾಲವಾದ ಪ್ರದೇಶವನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಹಲವಾರು ಅವಶೇಷಗಳನ್ನು ಕಾಣಬಹುದು.

ಬೆಟ್ಟದ ತುದಿಯ ಭಾಗದಲ್ಲಿ ಎತ್ತರವಾದ ಮತ್ತು ಬೃಹತ್ತಾದ ಎರಡು ಬತೇರಿಗಳನ್ನು ನಿರ್ಮಿಸಲಾಗಿದೆ. ಇವನ್ನು ಸುಲ್ತಾನ್ ಬತೇರಿ, ಸುಬ್ಬರಾಯಪ್ಪನ ಬತೇರಿ ಎಂದು ಹೆಸರಿಸಲಾಗಿದೆ. ಈ ಬತೇರಿಗಳ ಮೇಲಕ್ಕೆ ಫಿರಂಗಿಗಳನ್ನು ಸಾಗಿಸಲು ಇಳಿಜಾರಾದ ಪ್ರದೇಶವನ್ನು ಮಾಡಲಾಗಿದೆ. ಯುದ್ಧ ಕಾಲದಲ್ಲಿ ಮತ್ತು ಇನ್ನಿತರ ವೇಳೆಯಲ್ಲಿ ಶತ್ರುಗಳ ಆಗಮನವನ್ನು ವೀಕ್ಷಿಸಲು ಬತೇರಿಗಳು ಬಳಸಲಾಗುತ್ತಿತ್ತು. ಇಲ್ಲಿಂದ ಫಿರಂಗಿಗಳನ್ನು ಬಳಸಿ ಶತ್ರು ಸೈನ್ಯವನ್ನು ನಾಶಪಡಿಸುತ್ತಿದ್ದರೆಂದು ತಿಳಿಯಬಹುದಾಗಿದೆ. ಇಲ್ಲಿನ ಫಿರಂಗಿಗಳನ್ನು ಪಟ್ಟಣದ ಪೋಲಿಸ್ ಠಾಣೆಯ ಮುಂದೆ ಪ್ರದರ್ಶನಕ್ಕಾಗಿ ಇಡಲಾಗಿದೆ. ಈ ಪ್ರದೇಶದಲ್ಲಿ ನೀರಿನ ಸೌಕರ್ಯಕ್ಕಾಗಿ ಹಲವು ದೊಣೆಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ಭೀಮಾನ ದೊಣೆ, ಅಕ್ಕನ ದೊಣೆ, ಬಾಬಯ್ಯನ ದೊಣೆ ಪ್ರಮುಖವಾದವುಗಳು. ಅಲ್ಲದೆ ತಾಂತ್ರಿಕವಾಗಿ ನಿರ್ಮಿಸಿರುವ ಒಂದು ನೆಲ ಮಾಳಿಗೆಯಿದೆ. ಇದಕ್ಕೆ ಕೆಳಗಿಳಿಯಲು ಮೆಟ್ಟಿಲುಗಳ ವ್ಯವಸ್ಥೆಯಿದೆ. ಈ ನೆಲಮಾಳಿಗೆಯ

ಗೋಡೆಯಲ್ಲಿ ಯುದ್ಧ ವರ್ಣನೆಯ ಚಿತ್ರಗಳನ್ನು ಕೆತ್ತಲಾಗಿದೆ. ಈ ನೆಲಮಾಳಿಗೆ ಈಗಲೂ ಶಿಥಿಲವಾಗದೆ, ಸುಭದ್ರವಾಗಿದೆ.

ಇದೇ ಪ್ರದೇಶದಲ್ಲಿ ಧಾನ್ಯದ ಕಣಜಗಳು, ಮದ್ದಿನ ಕಣಜಗಳು, ಅಪೂರ್ಣವಾದ ಒಂದು ಮಸೀದಿಯ ಅವಶೇಷ, ಕಾವಲುಗಾರರ ವಸತಿಗೃಹಗಳು, ಶಿಥಿಲಗೊಂಡಿರುವ ಮಂಟಪಗಳು ಪಾಳೇಗಾರರ ಅರಮನೆಯ ಅವಶೇಷಗಳು ಹಾಗೂ ಇನ್ನಿತರ ಅವಶೇಷಗಳನ್ನು ಕುಂಭಿಯ ಪ್ರದೇಶವು ಅಡಕಗೊಳಿಸಿದೆ.

ಪಾವಗಡ ನಾಯಕರು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚು ಆಸ್ಥೆ ವಹಿಸಿದಿರುವುದನ್ನು ಕಾಣಬಹುದು. ಪ್ರಸ್ತುತದಲ್ಲಿರುವ ದೇವಾಲಯಗಳೆಂದರೆ ಎರಡನೆ ಸುತ್ತಿನಕೋಟೆಯೊಳಗಿನ ಪಾಳೇಗಾರರ ಆರಾಧ್ಯ ದೈವ ಶ್ರೀವೇಣುಗೋಪಾಲ ಸ್ವಾಮಿ ದೇವಾಲಯ, ಕೋಟೆಯ ಪಕ್ಕದಲ್ಲಿರುವ ಕೋಟೆ ಆಂಜನೇಯ, ಬೆಟ್ಟದ ಬುಡದಲ್ಲಿರುವ ಈಶ್ವರ ದೇವಾಲಯ, ಮಧ್ಯಭಾಗದಲ್ಲಿರುವ ಬಯಲಿನ ಆಂಜನೇಯ, ಕುಂಭಿಯಲ್ಲಿರುವ ಜುಮ್ಮಾ ಮಸೀದಿ. ಇವು ಇಂದು ಜೀರ್ಣೋದ್ಧಾರಕ್ಕೆ ಒಳಗಾಗಿವೆ. ಬೆಟ್ಟದ ತುದಿಯಲ್ಲಿ ವೇಣುಗೋಪಾಲಸ್ವಾಮಿ ದೇವಾಲಯವಿದ್ದು, ಅದನ್ನು ಹೈದರ್ ಕಾಲಕ್ಕೆ ನಾಶಪಡಿಸಿ ಮಸೀದಿಯೊಂದನ್ನು ನಿರ್ಮಾಣಮಾಡಲಾಗಿತ್ತು.[೨೫೦] ಈ ಹಿನ್ನೆಲೆಯಲ್ಲಿ ಪಾಳೇಗಾರರು ಹಿಂದೆ ನಿರ್ಮಿಸಿದ್ದ ದೇವಾಲಯಗಳನ್ನು ಮುಸ್ಲಿಂರು ನಾಶಪಡಿಸಿದ್ದಿರಬಹುದೆಂದು ಊಹಿಸಬಹುದಾಗಿದೆ.

ಕೋಟೆಯ ಮಹತ್ವ

ತುಮಕೂರು ಜಿಲ್ಲೆಯಲ್ಲಿ ಹೈದರ್-ಟಿಪ್ಪುವಿನ ಕಾಲಕ್ಕೆ ಪುನರ್ ನಿರ್ಮಾಣಗೊಂಡ ಕೋಟೆಗಳಲ್ಲಿ ಪಾವಗಡದ ಕೋಟೆಯೂ ಒಂದು. ಈ ಕೋಟೆ ಬೇರೆ ಕೋಟೆಗಳಿಗಿಂತ ನಿರ್ಮಾಣದ ಹಂತದಲ್ಲಿ ಭಿನ್ನವಾಗಿರುವುದನ್ನು ಕಾಣಬಹುದು. ಏಕೆಂದರೆ ಇಲ್ಲಿನ ಕೋಟೆಯ ಗೋಡೆಯು ಅಬೇಧ್ಯವಾಗಿದ್ದು, ಸುಲಭವಾಗಿ ಕೋಟೆಯು ಶತ್ರುಗಳಿಗೆ ವಶವಾಗುವುದಿಲ್ಲ. ಕೋಟೆಯು ಬೆಟ್ಟದ ಆಯಕಟ್ಟಿನ ಜಾಗದಲ್ಲಿ ನಿರ್ಮಿಸಿ, ಅಲ್ಲಲ್ಲಿ ವೃತ್ತಾಕಾರದ, ಚೌಕಾಕಾರದ ಬೃಹತ್ ಬುರುಜು, ಬತೇರಿ, ಕೊತ್ತಲಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಪಾವಗಡದ ಕೋಟೆಯು ಪಾಳೇಗಾರರ ಕಾಲದಲ್ಲಿ ಬೃಹತ್ ಕೋಟೆಯಾಗಿ ನಿರ್ಮಾಣಗೊಂಡಿರಲಿಲ್ಲ. ಆದರೆ ಹೈದರನು ಈ ಕೋಟೆಯನ್ನು ವಶಪಡಿಸಿಕೊಂಡ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ, ಗಾರೆಗಚ್ಚನ್ನು ಹಾಕಿ ಭದ್ರವಾಗಿರಿಸಿದನು. ಅದೇ ರೀತಿ ಕೋಟೆಯ ರಕ್ಷಣೆಗಾಗಿ ಆಯಕಟ್ಟಿನ ಸ್ಥಳಗಳನ್ನು ಚೌಕಾಕಾರದ ಕೊತ್ತಲಗಳನ್ನು ನಿರ್ಮಿಸಿ, ಸಾಕಷ್ಟು ಸೈನ್ಯವಿರಿಸಲು ವ್ಯವಸ್ಥೆಯನ್ನು ಕೈಗೊಳ್ಳಲಾಗಿತ್ತು. ಇಲ್ಲಿನ ಕೋಟೆಯನ್ನು ರಕ್ಷಿಸಲು ಹೊರಕೋಟೆ ಗೋಡೆಯ ಪಕ್ಕದಲ್ಲಿದ್ದ ಕಂದಕವು ಮಹತ್ವದ ಪಾತ್ರವನ್ನು ಹೊಂದಿತ್ತು.

ಯಲ್ಲಪ್ಪನಾಯಕನ ಹೊಸಕೋಟೆ

ಯಲ್ಲಪ್ಪನಾಯಕನ ಹೊಸಕೋಟೆಯು ಕರ್ನಾಟಕದ ಗಡಿಪ್ರದೇಶದಲ್ಲಿದೆ. ಇದು ತಾಲ್ಲೂಕು ಕೇಂದ್ರದಿಂದ ವಾಯುವ್ಯದಿಕ್ಕಿಗೆ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ಕೋಟೆ ಹೊಂದಿರುವ ಬೆಟ್ಟವು ಸಮುದ್ರ ಮಟ್ಟದಿಂದ ೨೬೭೦ ಅಡಿ ಎತ್ತರದಲ್ಲಿದೆ. ಇದು ಪಾವಗಡ ತಾಲ್ಲೂಕಿನ ಪ್ರಸಿದ್ಧ ವಾಣಿಜ್ಯಕೇಂದ್ರ. ಇದು ರೇಷ್ಮೆ ಬಟ್ಟೆಯ ನೇಯ್ಗೆಗೆ ಪ್ರಸಿದ್ಧಿ ಪಡೆದಿದೆ. ಯಲ್ಲಪ್ಪನಾಯಕನ ಹೊಸಕೋಟೆಯಲ್ಲಿ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಜನ ವಸತಿಗಳು ಇದ್ದವೆಂದು ಶಿವತಾರಕ್‌ರವರ ಅಭಿಪ್ರಾಯವಾಗಿದೆ.[೨೫೧]

ಯಲ್ಲಪ್ಪನಾಯಕನ ಹೊಸಕೋಟೆಯನ್ನು ಕುಂದುರ್ಪಿಯಿಂದ ಬಂದ ಯಲ್ಲಪ್ಪನಾಯಕನು ನಿರ್ಮಿಸಿದನೆಂದು ತಿಳಿದುಬಂದಿದೆ. ಈತನು ಈ ಪ್ರದೇಶಕ್ಕೆ ಯುಗಾದಿ ಹಬ್ಬಕ್ಕೆಂದು ಬಂದಿದ್ದಾಗ ಒಂದು ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗಿದ್ದನ್ನು ನೋಡಿ, ಇದು ಗಂಡು ಭೂಮಿ ಎಂದು ಭಾವಿಸಿ ಗ್ರಾಮವನ್ನು ಸ್ಥಾಪಿಸಿ, ಕೋಟೆ ಕೊತ್ತಲಗಳನ್ನು ಕಟ್ಟಿಸಿ ಯಲ್ಲಪ್ಪನಾಯಕನ ಹೊಸಕೋಟೆಯೆಂದು ನಾಮಕರಣಮಾಡಿದನೆಂದು ಈಗಿರುವ ಅದೇ ವಂಶದ ಯಲ್ಲಪ್ಪನಾಯಕರು ಹೇಳುತ್ತಾರೆ. ಆದರೆ ಇಲ್ಲಿ ಹೊಸಕೋಟೆಯೆಂದು ಕರೆಯಲು ಕಾರಣಗೊತ್ತಾಗಿಲ್ಲ. ಹೊಸಕೋಟೆಯೆಂದರೆ ಮೊದಲು ಒಂದು ಕೋಟೆಯನ್ನು ಯಾರೋ ಕಟ್ಟಿರಬಹುದು. ಅದು ಹಳೆಯದಾಗಿರಬಹುದು. ಯಲ್ಲಪ್ಪನಾಯಕನು ಅದನ್ನು ಪುನರ್ ನಿರ್ಮಾಣ ಮಾಡಿರುವುದರಿಂದ ಹೊಸಕೋಟೆಯೆಂದು ಹೆಸರಿಟ್ಟಿರಬಹುದೆಂದು ಊಹಿಸಬಹುದಾಗಿದೆ. ಅಥವಾ ಈ ಜಾಗದಲ್ಲಿ ಹೊಸದಾಗಿ ಕಟ್ಟಿದ ಕೋಟೆಗೆ ಹೊಸಕೋಟೆಯೆಂತಲೂ ಕರೆದಿರಬಹುದು.

ಇಲ್ಲಿನ ಹೊಸಕೋಟೆಯನ್ನು ನಿರ್ಮಿಸಿ, ಆಳ್ವಿಕೆ ಮಾಡಿದ ಯಲ್ಲಪ್ಪನಾಯಕನು ಚಿತ್ರದುರ್ಗದ ಇಮ್ಮಡಿ ಮದಕರಿ ನಾಯಕ ಹಾಗೂ ಪೆನುಗೊಂಡೆಯ ಪೆದ್ದಕೋನೇಟಿ ನಾಯಕನ ಸಮಕಾಲೀನನು ೧೭ನೇ ಶತಮಾನದವನು. ಇವನ ಕಾಲ ಸುಮಾರು. ೧೬೫೦ ರಿಂದ ೧೬೩೦ ಎಂದು ಗುರುತಿಸಲಾಗಿದೆ.[೨೫೨] ಜೊತೆಗೆ ಯಲ್ಲಪ್ಪನಾಯಕನು ನಿಡುಗಲ್ಲಿನ ವೀರ ತೊಟ್ಲಿಣ್ಣನಾಯಕನ(೧೬೪೦-೧೬೬೨) ಸಮಕಾಲೀನನೆಂದು ಪಾವಗಡದ ಶಾಸನದಿಂದ ತಿಳಿಯಬಹುದಾಗಿದೆ.[೨೫೩] ಇದೇ ಕಾಲದಲ್ಲಿಯೇ ಕುಂದುರ್ಪಿಯಿಂದ ಹೊಸಕೋಟೆಗೆ ಬಂದು ಕೋಟೆ ಕೊತ್ತಲಗಳನ್ನು ನಿರ್ಮಿಸಿ ಆಳ್ವಿಕೆ ಮಾಡಿದನೆಂದು ತಿಳಿಯಬಹುದಾಗಿದೆ.

ಯಲ್ಲಪ್ಪನಾಯಕನ ಹೊಸಕೋಟೆಯವರು ಹಾಗೂ ಕುಂದುರ್ಪಿಯವರು ನಿಡುಗಲ್ಲು ಪಾಳೇಗಾರರ ಮನೆತನಕ್ಕೆ ಸಂಬಂಧಪಟ್ಟ ದಾಯಾದಿಗಳೆಂದೂ, ಇವರು ಹರತಿ ಮೂಲದವರೆಂದು ತಿಳಿಯಲಾಗಿದೆ.[೨೫೪] (ಹೊಸಕೋಟೆ ಪಾಳೇಗಾರರ ವಂಶವೃಕ್ಷ, ಕನ್ನಡ ಸಾಹಿತ್ಯ, ಪರಿಷತ್ಪತ್ರಿಕ, ೧೫, ೨-೭-೧೯೩೨)(ಅನುಬಂಧ) ಆದರೂ ಇಲ್ಲಿ ಸೂಚಿಸಿರುವ ವಂಶಾವಳಿಯು ಕೊಂಚ ಗೊಂದಲವಿದೆಯೆಂದು ಹೇಳಿದ್ದಾರೆ. ಈ

ಗೊಂದಲವೆಂದರೆ ಈಶ್ವರ ನಾಯಕನೆಂಬ ವ್ಯಕ್ತಿಯು ಎರಡು ಸಂದರ್ಭದಲ್ಲಿ ಬರುತ್ತಾನೆಂದು ಹೇಳುತ್ತಾರೆ. ಆದರೆ ಈಶ್ವರನಾಯಕ ಎಂದು ವಂಶಾವಳಿಯಲ್ಲಿ ಬರೆಯುವ ಉದ್ದೇಶವೆಂದರೆ ವಂಶಾವಳಿ ಬರೆಯುವಾಗ ಆ ಕಾಲಘಟ್ಟದಲ್ಲಿ ಬಂದಂತಹ ನಾಯಕನ ಹೆಸರು ಗೊತ್ತಿಲ್ಲದೆ ಇರುವುದರಿಂದ ಆ ಜಾಗಕ್ಕೆ ಶೈವ ಮನೆತನದವರು ಈಶ್ವರ ನಾಯಕನೆಂದು ಹೆಸರಿಟ್ಟರೆ, ವೈಷ್ಣವ ಮನೆತನದವರು ವಿಷ್ಣುನಾಯಕ, ನರಸಿಂಹ ನಾಯಕನೆಂದು ಹೆಸರು ಇಡುತ್ತಾರೆಂದು ವಿ.ಆರ್ .ಚಲುವರಾಜ್ (ಪಾವಗಡ)ರವರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಈಶ್ವರನಾಯಕನೆಂದು ವಂಶಾವಳಿಯಲ್ಲಿ ಲಿಖಿತವಾಗಿದ್ದರೆ, ಆ ಜಾಗದಲ್ಲಿ ಒಂದು ತಲೆಮಾರು ಗೊತ್ತಿಲ್ಲದೆ ಮರೆಯಾಗಿದೆ ಎಂದು ಭಾವಿಸಬೇಕಾಗುತ್ತದೆ.

ಆರ್.ನರಸಿಂಹಚಾರ್ ಅವರು ಸಂಪಾದಿಸಿರುವ ಹೊಸಕೋಟೆ ಪಾಳೇಗಾರರ ವಂಶವೃಕ್ಷ ಈ ರೀತಿ ಇದೆ.

ಮೂಲಪುರುಷ ತಿಪ್ಪನಾಯಕ
|
ಮಗ ಕಾಮನಾಯಕ
|
ಮಗ ಅಬ್ಬಿನಾಯಕ

೧. ಈಶ್ವರ ನಾಯಕ
|
ಮಗ ಈಶ್ವರನಾಯಕ
|
ಮಗ ನಲ್ಲಬೊಮ್ಮನಾಯಕ
|
ಮಗ ಯಲ್ಲಪ್ಪನಾಯಕ
|
ಮಗ ಹಿರಿಯ ರಾಮಪ್ಪನಾಯಕ
|
ಮಗ ಚಿಕ್ಕ ಬಡಚಿಕ್ಕತಿಮ್ಮಳನಾಯಕ

೧. ಮಗ ನಲಜಲ್ಮನಾಯಕ
|
೧. ರಾಮಪ್ಪನಾಯಕ
|
ಮಗ ಚಿಕ್ಕ ಬಡತಿಮ್ಮಳನಾಯಕ

೨. ಮುಸಲಪ್ಪನಾಯಕ ಇವನ ಸಂತತಿ ಜರಮಲೆಯ ಕಡೆ ಇದ್ದಾರೆ

೨. ಬಂಗಾರಪ್ಪನಾಯಕ
|
ಮಗ ದೊಡ್ಡ ತಿಮ್ಮಪ್ಪನಾಯಕ

೨. ಬೊಮ್ಮನಾಯಕ ಇವನು ನಿಡುಗಲ್ಲು ಸಂತತಿಗೆ ಸೇರಿದವನು.

ಮಗ ರಾಮಪ್ಪನಾಯಕ		೧. ವೀರಪ್ಪನಾಯಕ ಕನಕಗಿರಿ ಕಡೆ ಇದ್ದಾನೆ	೨. ಚಿಕ್ಕತಿಮ್ಮಪ್ಪ
ಬಡತಿಮ್ಮಳನಾಯಕ ಪವುತಿ	ಯಲ್ಲಪ್ಪನಾಯಕ ಹಾಜರು	ತಿಮ್ಮಪ್ಪನಾಯಕ ಹಾಜರು	ಮಗ ಬಂಗಾರಪ್ಪ ಹಾಜರು
			ಮಗ ತಿಮ್ಮಪ್ಪ ಪವುತಿ

ಕೃಪೆ : ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಜುಲೈ ೧೯೩೨

ಯಲ್ಲಪ್ಪನಾಯಕನು ಕುಂದುರ್ಪಿಯ ರಾಜಕಸ್ತೂರಿ ಬೊಬ್ಬುಲಿ ತಿಮ್ಮಣ್ಣನಾಯಕನ ವಂಶದವನು ತಿಮ್ಮಣ್ಣನಾಯಕನು ವಿಜಯನಗರದ ಶ್ರೀಕೃಷ್ಣದೇವರಾಯನು ಸೌಹಾರ್ದತೆಯಿಂದ 'ಕುಂದುರ್ಪಿ ಅರವತ್ತು ಸೀಮೆ'ಯನ್ನು ಆಳುತ್ತಿದ್ದನು. ಈತನನ್ನು ಆಂಧ್ರದ ಪಾಳೇಗಾರರು ಪಿತೂರಿ ನಡೆಸಿ, ಪೆನುಗೊಂಡೆ ನವಾಬರ ಸಹಾಯದೊಂದಿಗೆ ಕುಂದುರ್ಪಿಯಲ್ಲಿ ಅನಿರೀಕ್ಷಿತವಾಗಿ ತಿಮ್ಮಣ್ಣ ನಾಯಕನನ್ನು ಕೊಲೆ ಮಾಡಿದರು. ಈ ವಾರ್ತೆಯನ್ನು ತಿಳಿದ ಪಟ್ಟದ ರಾಣಿ ತನ್ನವಂಶದ ಕುಡಿಯಾದ ಐದು ವರ್ಷದ ಬಾಲಕನನ್ನು 'ರಾಯದುರ್ಗ'ದಲ್ಲಿ ಸಾಕಲು ಹೇಳಿ, ತಾನು ಸಹಗಮನ ಮಾಡಿದಳು. ಮಗುವನ್ನು ದಳವಾಯಿಗಳು ರಾಯದುರ್ಗಕ್ಕೆ ಸಾಗಿಸುವಾಗ ಶತ್ರುಗಳು ದಾಳಿ ಮಾಡುತ್ತಾರೆ. ಆಗ ಗಿಡ್ಡದಳವಾಯಿ, ಗಡ್ಡದ ಮುದ್ದಯ್ಯರು ಸೇರಿಕೊಂಡು ತುಮಕುಂಟೆಯಲ್ಲಿ ಲಿಂಗಾಯತ ಗುರುಗಳಿಂದ ಲಿಂಗಧಾರಣೆ ಮಾಡಿಸಿ, ಲಿಂಗಾಯಿತ ಹುಡುಗನೆಂದು ಗೌಪ್ಯವಾಗಿಡುತ್ತಾರೆ. ಇದೇ ಊರಿನಲ್ಲಿ ಶಿಕ್ಷಣ, ಯುದ್ಧದ ಕಲೆ, ಇನ್ನಿತರ ಪಾಳೆಯಗಾರಿನಿಗೆ ಬೇಕಾಗುವ ಅರ್ಹತೆಗಳನ್ನು ಬೋಧಿಸಲಾಗುತ್ತದೆ.[೨೫೫]

ಯಲ್ಲಪ್ಪನಾಯಕನು ಬೆಳೆದು ಬುದ್ಧಿವಂತನಾಗಿ, ಶಕ್ತಿಶಾಲಿಯಾಗಿ ಪ್ರಬುದ್ಧಮಾನಕ್ಕೆ ಬರುತ್ತಾನೆ. ಇದರಿಂದ ಈ ಪ್ರದೇಶದಲ್ಲಿ ಈತನನ್ನು ಕೊಲ್ಲಲು ಪಿತೂರಿ ನಡಸುತ್ತಾರೆ. ರಾಯದುರ್ಗದ ದೊರೆಯು ಕುದುರೆ ಓಟದ ಸ್ಪರ್ಧೆಯಿಂದ ಈತನನ್ನು ಕೊಲ್ಲಲು ತನ್ನ ಆಪ್ತ ದಳವಾಯಿಯ ಜೊತೆ ಸಮಾಲೋಚಿಸಿ, ಕುದುರೆಗೆ ವಿಷ ಕುಡಿಸಿ ಓಟದಲ್ಲಿ ಮುಗಿಸಬೇಕೆಂದು ತೀರ್ಮಾನವಾಗುತ್ತದೆ. ಇದನ್ನು ಅರಿತ ಸೋದರತ್ತೆಯು ಕುದುರೆ ಜೀನಿಗೆ ಸಹಸ್ರಾರು ಚಿನ್ನ ಮತ್ತು ಬೆಳ್ಳಿ ವರಹಗಳನ್ನು ತುಂಬಿ ಕುದುರೆ ಓಟದಲ್ಲಿ ಉತ್ತರ ಬಾಗಿಲ ಕೋಟೆಯಲ್ಲಿ ಪ್ರವೇಶಿಸಿ ಯಲ್ಲಪ್ಪನಾಯಕನಿಗೆ ವಿಷಯ ತಿಳಿಸಿ ಅಲ್ಲಿಂದ ಪಾರು ಮಾಡಿದಳು.[೨೫೬] ಆ ಕುದುರೆಯು ಗೌರಸಂದ್ರದ ಬಳಿ ಬರಬರುತ್ತ ಸತ್ತು ಬಿದ್ದಿತು. ಅಲ್ಲಿಯೇ ಸಮೀಪದಲ್ಲಿದ್ದ ಮಾರೀಕಾಂಬ ದೇವಸ್ಥಾನದಲ್ಲಿ ಆ ರಾತ್ರಿ ಕಳೆಯಲು ನಿಶ್ಚಯಿಸಿ ಮಲಗಿದನು. ದೇವತೆಯು ಯಲ್ಲಪ್ಪನಾಯಕನ ಕನಸಿನಲ್ಲಿ ಬಂದು ನಿನ್ನ ಜೊತೆಗೆ ಇಬ್ಬರು ಮಿತ್ರರು (ಗಿಡ್ಡದಳವಾಯಿ, ಗಡ್ಡದ ಮದ್ದಯ್ಯ) ಸೇರಿಕೊಳ್ಳುತ್ತಾರೆ. ಅವರೊಂದಿಗೆ ಪೂರ್ವಾಭಿಮುಖವಾಗಿ ಪ್ರಯಾಣ ನಡೆಸಬೇಕೆಂದು

ಹೇಳಿ, ನೀನು ಎಲ್ಲಿ ಹಿಂದೆ ತಿರುಗಿ ನನ್ನನ್ನು ನೋಡುತ್ತಿಯೋ ಅಲ್ಲಿಯೇ ನಾನು ಮಾಯವಾಗುತ್ತೇನೆಂತಲೂ ಅಲ್ಲಿ ನನ್ನನಿಧಿ' ಎಂದು ತಿಳಿದು ಪೂಜಿಸಬೇಕೆಂತಲೂ, ನೀನು ಮುಂದೆ ಕೋಟೆಕೊತ್ತಲ ಕಟ್ಟಿಸಿ ರಾಜ್ಯವಾಳುತ್ತಿ ಎಂತಲೂ, ಮತ್ತು ನಿನ್ನ ಹೆಸರು ಚಿರಾಯುವಾಗಿರುತ್ತೆ ಎಂತಲೂ ತಿಳಿಸಿ ಮಾಯವಾದಳು.[೨೫೭]

ಅದರಂತೆ ಮಾರಿದೇವತೆಯೂ ಹೊಸಕೋಟೆ ಹತ್ತಿರ ಬಂದಾಗ ಯಲ್ಲಪ್ಪನಾಯಕ ಹಿಂದಕ್ಕೆ ನೋಡುತ್ತಾನೆ. ತಕ್ಷಣವೇ ಮಾರಿಯು ಮಾಯವಾಗುತ್ತಾಳೆ. ಇಲ್ಲಿಯೇ ಮಿತ್ರರೂ ಸೇರಿಕೊಂಡು ದೇವತೆ ನಿಧಿಯೆಂದು ತಿಳಿದು ಪೂಜಿಸಿದರು. ಅದು ಈಗಲೂ ದೇವಸ್ಥಾನ ರೂಪದಲ್ಲಿ ರೂಪುಗೊಂಡು ಪೂಜೆಕಾರ್ಯಗಳು ನಡೆಯುತ್ತಿವೆ. ಅಲ್ಲಿಂದ ಯಲ್ಲಪ್ಪನಾಯಕನು ಮಿತ್ರ ದಳವಾಯಿಗಳೊಂದಿಗೆ ಚರ್ಚಿಸಿ, ಹಾಳುಬಿದ್ದ ಕುಂದುರ್ಪಿಯನ್ನು ಪುನರ್ ಸ್ಥಾಪಿಸಿತ್ತಾನೆ.

ಹೀಗಿರಲು ಒಂದು ದಿನ ಯಲ್ಲಪ್ಪನಾಯಕನು ತನ್ನ ದಳವಾಯಿಗಳೊಂದಿಗೆ ಯುಗಾದಿ ಹಬ್ಬಕ್ಕೆಂದು ಕುಂದುರ್ಪಿಯಿಂದ ಪೂರ್ವದಿಕ್ಕಿಗೆ ಒಂದು ಹಳ್ಳಿಗೆ ಬರುತ್ತಾನೆ. ಈಗಿನ ಹೊಸಕೋಟೆಯ ಜಾಗದಲ್ಲಿ ಒಂದು ಮೊಲವು ತೋಳವನ್ನು ಅಟ್ಟಿಸಿಕೊಂಡು ಹೋಗುತ್ತಿರುವುದನ್ನು ನೋಡಿ ನಾಯಕನಿಗೆ ಆಶ್ಚರ್ಯ ಉಂಟಾಯಿತು. ಈ ಘಟನೆ ನಡೆದ ಪ್ರದೇಶವು ವೀರಭೂಮಿ ಅಥವಾ ಗಂಡುಭೂಮಿಯೆಂದು ತಿಳಿದು ಇಲ್ಲಿಯ ಕಾಡನ್ನು ಕಡಿಸಿ, ತನ್ನ ಸೋದರತ್ತೆ ಕಳುಹಿಸಿದ ಐಶ್ವರ್ಯ ಮತ್ತು ತನ್ನ ಸೈನಿಕರ ಸಹಾಯದಿಂದ ಹುಸಿರಾಬೆಯೆಂಬ ಊರನ್ನು ಕಟ್ಟಿಸಿದನು.[೨೫೮] ಅಲ್ಲದೆ ಬೆಟ್ಟದ ಮೇಲೆ ಪೆನುಗೊಂಡೆ ನವಾಬನ 'ಪಾರುಪತ್ಯೇದಾರನು ಇರುವುದನ್ನು ತಿಳಿದು ಅವನನ್ನು ತನ್ನ ದಳವಾಯಿಗಳಾದ ದೊಡ್ಡಲಿಂಗಯ್ಯ ಮತ್ತು ಚೆನ್ನಲಿಂಗಮಯ್ಯ ಇತರರುಗಳನ್ನು ಹುರಿದುಂಬಿಸಿ ಆ ಪಾರುಪತ್ಯದಾರರನ್ನು ಕೊಲ್ಲಿಸಿ, ಅವನ ಶಿರವನ್ನು ಕುಂದುರ್ಪಿಯಲ್ಲಿ ಮಣ್ಣು ಮಾಡಿಸಿದನು. ಅಲ್ಲದೆ, ಹೊಸದಾಗಿ ಕಟ್ಟಿದ ಹೊಸ ಕೋಟೆಗೆ ಸುತ್ತಲೂ ಭದ್ರವಾದ ಸೈನ್ಯವನ್ನು ನೆಲೆಗೊಳಿಸಿದನು. ಈ ಕೋಟೆಗೆ ನಾಲ್ಕು ಊರು ಬಾಗಿಲುಗಳನ್ನು ನಿರ್ಮಿಸಿದನು. ಇಲ್ಲಿಂದಲೇ ಈ ಕೋಟೆಗೆ ಯಲ್ಲಪ್ಪನಾಯಕನ ಹೊಸಕೋಟೆಯೆಂದು ಪ್ರಸಿದ್ಧಿ ಪಡೆಯಿತು.[೨೫೯]

ರಾಜಾ ಯಲ್ಲಪ್ಪನಾಯಕನು ವೀರನೂ ಶೂರನೂ, ಬುದ್ಧಿವಂತನೂ ಆಗಿದ್ದನು. ಈತನು ಕುಂದುರ್ಪಿ, ಹೊಸಕೋಟೆಯ ಸುತ್ತಲಿನ ಪ್ರದೇಶಗಳನ್ನು ತನ್ನ ಅಂಕೆಯಲ್ಲಿಟ್ಟು ಸುದೀರ್ಘವಾದ ಕಾಲ ಆಳ್ವಿಕೆ ಮಾಡಿದನು. ಈತನ ನಂತರ ಬಂದ ದೊರೆಗಳು ಅಷ್ಟೊಂದು ಬಲಿಷ್ಠರಾಗಿ ಕಂಡುಬಂದಿಲ್ಲ. ಇವರು ಮೈಸೂರು ಅರಸರಿಗೆ, ಬ್ರಿಟೀಷರಿಗೆ ಅಧೀನದಲ್ಲಿಯೇ ಇದ್ದು ಸಮಯ ಸಂದರ್ಭಕ್ಕೆ ಸೈನ್ಯವನ್ನು ಮತ್ತು ಕಪ್ಪಕಾಣಿಕೆ ಕೊಡುತ್ತಿದ್ದರು. ಕೊನೆಯಲ್ಲಿ ಮೈಸೂರು ಸಂಸ್ಥಾನಕ್ಕೆ ವಿಲೀನಗೊಂಡಿದೆ. ಈಗಲೂ ಈ ಮನೆತನಕ್ಕೆ ಸೇರಿದ ವಂಶದವರು ವೈ.ಎನ್.ಹೊಸಕೋಟೆಯಲ್ಲಿ ವಾಸವಾಗಿದ್ದಾರೆ. ಅವರಲ್ಲಿ ಆಯುಧಗಳು, ಉಡುಗೆ-ತೊಡುಗೆಗಳು ಸಹ ಇವೆ. ದಸರದ ಸಂದರ್ಭದಲ್ಲಿ ಮೈಸೂರು ದಸರ ನೆನೆಪಿಗೆ ತರುವಂತೆ

ಇಲ್ಲಿಯೂ ಸಹ ಅದ್ದೂರಿಯಾಗಿ ಆಚರಿಸುತ್ತಾರೆ. ಇಲ್ಲಿನ ಪಾಳೇಗಾರರು ಕೋಟೆಕೊತ್ತಲಗಳ ನಿರ್ಮಾಣಕ್ಕಿಂತ ಅವರ ಸಮಾಧಿಗಳ ನಿರ್ಮಾಣದಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ.

ಯಲ್ಲಪ್ಪನಾಯಕನ ಹೊಸಕೋಟೆಯ ಲಕ್ಷಣಗಳು

ಗ್ರಾಮದ ಉತ್ತರ ಮತ್ತು ದಕ್ಷಿಣದ ದಿಕ್ಕಿಗೆ ಎರಡು ಬೆಟ್ಟಗಳಿವೆ. ದಕ್ಷಿಣಕ್ಕೆ ಚಿಕ್ಕ ಪಾವುಲ ಮತ್ತು ಉತ್ತರಕ್ಕೆ ದೊಡ್ಡಪಾವುಲ ಬೆಟ್ಟಗಳೆಂದು ಹೆಸರು. ಈ ಬೆಟ್ಟಗಳ ಮಧ್ಯೆಯಿರುವ ಗ್ರಾಮದ ಪೂರ್ವಪಶ್ಚಿಮದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯು ಮೂರು ಬಾಗಿಲುಗಳನ್ನು ಒಳಗೊಂಡಿದೆ. ಒಂದು ಬಾಗಿಲು ಪಶ್ಚಿಮದ ದಿಕ್ಕಿಗೆ ಇಡಲಾಗಿದ್ದು, ಅದನ್ನು ನಿಡುಗಲ್ಲು ಊರುಬಾಗಿಲು ಎನ್ನುತ್ತಾರೆ. ಇನ್ನೆರಡು ಪೂರ್ವದ ಕಡೆಗೆ ಇದ್ದು ಅದನ್ನು ಪೆನುಗೊಂಡೆ ಊರು ಬಾಗಿಲು, ಸಂತೆ ಊರುಬಾಗಿಲು ಎಂದು ಕರೆಯುವರು. ಗ್ರಾಮವು ಬೆಳೆದಂತೆಲ್ಲಾ ಕೋಟೆಯು ನಾಶಗೊಂಡಿದ್ದು, ಅಲ್ಲಲ್ಲಿ ಗೋಡೆಯ ತುಣುಕುಗಳನ್ನು ಕಾಣಬಹುದು.

ಕೋಟೆಯನ್ನು ದೊಡ್ಡ ಪಾವುಲ ಬೆಟ್ಟ(ಈಗ ಯಲ್ಲಪ್ಪನಾಯಕನ ಹೊಸಕೋಟೆ ಎಂದು ಕರೆಯುತ್ತಾರೆ) ದಲ್ಲಿ ನಿರ್ಮಾಣಗೊಂಡಿದೆ. ಕೋಟೆಯ ಗೋಡೆಯನ್ನು ಬೆಟ್ಟದ ಆಯಕಟ್ಟಿನ ಜಾಗದಲ್ಲಿ ಮಾತ್ರ ನಿರ್ಮಿಸಲಾಗಿದೆ. ಇದು ಮಧ್ಯಮ ಮತ್ತು ಚಿಕ್ಕಗಾತ್ರದ ಕಲ್ಲುಗಳಿಂದ ನಿರ್ಮಾಣಗೊಂಡಿದ್ದು, ಕಲ್ಲುಗಳ ಮಧ್ಯದಲ್ಲಿ ಸಂಧಿ ಉಂಟಾಗದಂತೆ ಮಣ್ಣನ್ನು ತುಂಬಲಾಗಿದೆ. ಕೋಟೆಯ ಗೋಡೆಯು ಶಿಥಿಲಾವಸ್ಥೆಯಲ್ಲಿದೆ. ಕೊತ್ತಲಗಳನ್ನು ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಇವು ಕೋಟೆಯ ಗೋಡೆಗಿಂತ ಎತ್ತರವಾಗಿವೆ. ಬೆಟ್ಟದ ತುದಿಯ ಈಶಾನ್ಯ ದಿಕ್ಕಿನಲ್ಲಿ ಚೌಕಾಕಾರದ ಕೊತ್ತಲಗಳನ್ನು ಕಾಣಬಹುದು.

ದೊಡ್ಡ ಪಾವುಲ ಬೆಟ್ಟವು ಇಳಿಜಾರಾದ ಬೃಹತ್ ಬಂಡೆಯನ್ನು ಒಳಗೊಂಡಿರುವುದರಿಂದ ಕೋಟೆಯನ್ನು ಆಯಕಟ್ಟಿನ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಬೆಟ್ಟದ ಕೋಟೆಯನ್ನು ಪೂರ್ವದಿಕ್ಕಿನಿಂದ ಪ್ರವೇಶಿಸಬೇಕು. ಇದರ ಪ್ರವೇಶದ್ವಾರವು ನಾಲ್ಕು ಒರಟುಕಲ್ಲುಗಳಿಂದ ನಿರ್ಮಾಣಗೊಂಡಿದ್ದು, ಬಲಬದಿಯಲ್ಲಿ ಒಂದು ಮಂಟಪವನ್ನು ಒಳಗೊಂಡಿದೆ. ದ್ವಾರದ ಬದಿಯ ಸ್ವಲ್ಪ ದೂರದಲ್ಲಿ ಎರಡು ಕೊತ್ತಲಗಳನ್ನು ನಿರ್ಮಿಸಲಾಗಿದೆ. ಇವನ್ನು ಹತ್ತಿಕೋಟೆಯ ಕೊತ್ತಲಗಳು ಎಂದು ಕರೆಯುತ್ತಾರೆ. ಇವು ಬೆಟ್ಟದ ಮೊದಲ ಕೋಟೆಯ ಕೊತ್ತಲಗಳಾಗಿರುವುದರಿಂದ ರಕ್ಷಣೆಯನ್ನು ಒದಗಿಸುವಲ್ಲಿ ಇವು ಪ್ರಮುಖ ಪಾತ್ರವಹಿಸಿದ್ದವು. ಇಲ್ಲಿಂದ ಪಶ್ಚಿಮದ ಕಡೆಗೆ ನಡೆದು ಬಲಭಾಗಕ್ಕೆ ತಿರುಗಿದರೆ, ಚಪ್ಪಡಿ ಕಲ್ಲನ್ನು ಒಳಗೊಂಡ ಮೆಟ್ಟಿಲುಗಳನ್ನು ಕಾಣಬಹುದು. ಇವು ಬೆಟ್ಟದ ತುದಿವರೆಗೆ ನಿರ್ಮಾಣಗೊಂಡಿವೆ. ಎಡಭಾಗದಲ್ಲಿ ಒಂದು ಅರ್ಧವೃತ್ತಾಕಾರದ ಚಿಕ್ಕಕೋಟೆಯಿದೆ. ಇದು ಒಂದು ವೃತ್ತಾಕಾರದ ಕೊತ್ತಲವನ್ನು ಒಳಗೊಂಡಿದೆ.

ಇಲ್ಲಿಂದ ಮೆಟ್ಟಿಲುಗಳ ಸಹಾಯದಿಂದ ಮುಂದೆ ಸಾಗಿದರೆ 'ಕತ್ತಿ ಗುಂಡು' ಎಂದು ಕರೆಯುವ ಪ್ರದೇಶ ಸಿಗುತ್ತದೆ. ಇಲ್ಲಿ ಒಂದು ಉದ್ದನೆಯ ಕೋಟೆಯು ನಿರ್ಮಾಣಗೊಂಡಿದೆ. ಇದು ಸಣ್ಣ ಕಲ್ಲುಗಳಿಂದ ಕೂಡಿದೆ. ಎರಡು ಎತ್ತರವಾದ ವೃತ್ತಾಕಾರದ ಕೊತ್ತಲಗಳನ್ನು ಒಳಗೊಂಡಿದೆ. ಇಲ್ಲಿಂದ ಬೆಟ್ಟದ ತುದಿಗೆ ಸಾಗುವಾಗ ಬಲಭಾಗದಲ್ಲಿಯೇ ಕೋಟೆಯನ್ನು ನಿರ್ಮಿಸಲಾಗಿದೆ. ಬೆಟ್ಟದ ತುದಿಯು ವಿಶಾಲವಾದ ಪ್ರಾಂಗಣವನ್ನು ಒಳಗೊಂಡಿದೆ. ಇಲ್ಲಿ ನೀರಿನ ಸೌಕರ್ಯಕ್ಕಾಗಿ ಸಿದ್ಧರದೊಣೆ, ಎಮ್ಮೆದೊಣೆ, ದೇವಸ್ಥಾನದ ದೊಣೆ, ಆನೆದೊಣೆಗಳಿವೆ. ಅಲ್ಲದೆ ತುಪ್ಪದ ಕಣಜಗಳು, ಮಂಟಪಗಳು, ಅರಮನೆ ಆವರಣ, ಚನ್ನಕೇಶವ ದೇವಾಲಯ, ಅಧಿಕಾರಿಗಳ ವಸತಿ ಗೃಹಗಳು ಮತ್ತು ಇನ್ನಿತರ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು.

ಬೆಟ್ಟದ ತುದಿಯ ಕೋಟೆಯ ಪ್ರವೇಶದ್ವಾರವು ದಕ್ಷಿಣ ದಿಕ್ಕಿನಲ್ಲಿದೆ. ದ್ವಾರದ ಒಳ ಬದಿಯ ಎಡಭಾಗದಲ್ಲಿ ಒಂದು ವಿಶ್ರಾಂತಿ ಮಂಟಪವಿದೆ. ಇದರ ಪಕ್ಕದಲ್ಲಿ ಪಹರೆಗಾಗಿ ನಿರ್ಮಿಸಿದ ಎತ್ತರಗೋಡೆಯಿದೆ. ಬೆಟ್ಟದ ಕುಂಭಿಯ ಉತ್ತರ ದಿಕ್ಕಿನಲ್ಲಿ ಕೋಟೆಯ ಗೋಡೆಯು ಸುಸ್ಥಿತಿಯಲ್ಲಿದ್ದು, ಆಯಕಟ್ಟಿನ ಜಾಗದಲ್ಲಿ ಚೌಕಾಕಾರದ ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಇದನ್ನು ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಇದೇ ತುದಿಯ ಪೂರ್ವದಿಕ್ಕಿನಲ್ಲಿ ಎರಡು ಕೋಟೆಗಳ ಗೋಡೆಯಿದ್ದು, ಇವು ಶಿಥಿಲಗೊಂಡಿವೆ. ಎರಡಕ್ಕೂ ಎರಡು ಬಾಗಿಲುಗಳನ್ನು ಇಡಲಾಗಿದೆ. ಒಂದು ಬಾಗಿಲು ಸುಸ್ಥಿತಿಯಲ್ಲಿದ್ದು ಇನ್ನೊಂದು ಬಾಗಿಲು ಬಿದ್ದುಹೋಗಿದೆ. ಇವೆರಡು ಬಾಗಿಲಿನಿಂದ ಕೆಳಭಾಗಕ್ಕೆ ನಡೆದರೆ, 'ಸ್ವಾಗೆ ಬಂಡೆ' ಸಿಗುತ್ತದೆ. ಈ ಜಾಗದಲ್ಲಿ ಹಾಳುಬಿದ್ದಿರುವ ವಸತಿಗೃಹಗಳನ್ನು ಕಾಣಬಹುದು. ಪ್ರಾರಂಭದಲ್ಲಿ ಇಲ್ಲಿ ಊರಿತ್ತೆಂದು ಸ್ಥಳೀಯರು ಹೇಳುತ್ತಾರೆ. ಈ ಊರು ದಳವಾಯಿ ಹಳ್ಳಿಗೆ ವಲಸೆ ಹೋಯಿತೆಂದು ಇವರ ಅಭಿಪ್ರಾಯ.

ಕೋಟೆಯೊಳಗಿನ ಸ್ಮಾರಕಗಳು

ಚನ್ನಕೇಶವ ದೇವಾಲಯ, ದೊಣೆಗಳು, ಅರಮನೆ, ಮಂಟಪಗಳು ಮತ್ತು ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿರುವ ಪಾಳೇಗಾರರ ಸಮಾಧಿಗಳು ಮುಖ್ಯ ಸ್ಮಾರಕಗಳಾಗಿವೆ.

ಚನ್ನಕೇಶವ ದೇವಾಲಯ : ಬೆಟ್ಟದ ತುದಿಯ ಉತ್ತರ ದಿಕ್ಕಿನಲ್ಲಿ ಈ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು, ಒಂದು ಗರ್ಭಗುಡಿ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಚನ್ನರಾಯನ ಕಪ್ಪುವರ್ಣದ ವಿಗ್ರಹವಿದೆ. ಇದಕ್ಕೆ ಪೂರ್ವದ ಕಡೆಗೆ ಒಂದು ಬಾಗಿಲಿದೆ. ಮುಂದುಗಡೆಯ ಮಂಟಪವು ಆಯತಾಕಾರವಾಗಿದೆ. ಇದು ಸಹ ಪೂರ್ವದ ಕಡೆಗೆ ಬಾಗಿಲನ್ನು ಹೊಂದಿದೆ. ಈ ದೇವಾಲಯವನ್ನು ಚಪ್ಪಡಿ ಕಲ್ಲುಗಳಿಂದ ಪೇರಿಸಿ ಕಟ್ಟಲಾಗಿದೆ. ಈ ಚಪ್ಪಡಿ ಕಲ್ಲುಗಳ ಮೇಲೆ ಸುತ್ತಲೂ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ.

ಮಂಟಪದ ಬಾಗಿಲ ಬದಿಗಳಲ್ಲಿ ಗರುಡ-ಅಂಜನೇಯನ ಉಬ್ಬುಶಿಲ್ಪಗಳಿವೆ. ಬಾಗಿಲ ನಿಲುವಿಗೆ ಗದೆ ಹಿಡಿದಿರುವ ಚನ್ನರಾಯನ ಚಿತ್ರಗಳಿವೆ. ಬಾಗಿಲ ಮೇಲೆ ಈಶ್ವರ ಶಿಲ್ಪವಿದೆ. ಇದರ ಪಕ್ಕ ಎರಡು ಆನೆಯ ಸೊಂಡಿಲಿವೆ. ದೇವಾಲಯದ ಉತ್ತರದ ಗೋಡೆಗೆ ಆಮೆ, ನಾಗರಹಾವು, ಮೀನು, ಹುಲಿಯ ಜೊತೆಗೆ ಮನುಷ್ಯನ ಕಾಳಗ, ನಾಗರಹಾವನ್ನು ಹಿಡಿದ ಕೋತಿಯ ಉಬ್ಬುಶಿಲ್ಪಗಳಿವೆ. ಪಶ್ಚಿಮದ ಕಡೆಗೆ ಮೂರು ಮೀನುಗಳು, ಗಂಡು ತನ್ನ ಲಿಂಗವನ್ನು ಹಿಡಿದ ಚಿತ್ರ, ಲಜ್ಜಾಗೌರಿ ಚಿತ್ರ, ಮತ್ತು ನಾಲ್ಕು ನವಿಲುಗಳಿವೆ. ದಕ್ಷಿಣದ ಕಡೆಗೆ ಮೀನು, ಆಂಜನೇಯನ ಚಿತ್ರ, ನಾಗರಹಾವು, ಪೂರ್ಣಚಂದ್ರ ಮತ್ತು ನವಿಲನ್ನು ಬಿಡಿಸಲಾಗಿದೆ.

ಗುಡಿಯ ಮುಂಭಾಗದ ಬಂಡೆಯ ಮೇಲೆ ಮೇಲಕ್ಕೆ ಎತ್ತಿದ ಒಂದು ಕೈಯನ್ನು ಕೆತ್ತಲಾಗಿದೆ. ಅದರ ಬಲಭಾಗಕ್ಕೆ ಕೆಲವು ಅಕ್ಷರಗಳನ್ನು ಬಿಡಿಸಲಾಗಿದೆ. ಅದು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಲ್ಲಿಯೇ ಒಂದು ಬಿದ್ದಿರುವ ಗರುಡಗಂಭವಿದೆ. ಪಕ್ಕದಲ್ಲಿಯೇ ಕಬ್ಬಿಣದ ಸರಳಿನಿಂದ ಮಾಡಿದ ಗರುಡಗಂಭವನ್ನು ಕಾಣಬಹುದು. ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಚನ್ನರಾಯನ ದೇವಸ್ಥಾನದ ಉತ್ಸವ ನಡೆಯುತ್ತದೆ. ಅಲ್ಲದೆ ನವರಾತ್ರಿಯ ಉತ್ಸವವು ಪಾಳೇಗಾರರ ವಂಶದವರಿಂದ ಪ್ರತಿವರ್ಷ ಜರುಗುತ್ತದೆ.

ದೇವರಬೆಟ್ಟದ ಕೋಟೆ

ದೇವರಬೆಟ್ಟವು ಪಾವಗಡ ತಾಲ್ಲೂಕಿನಲ್ಲಿದ್ದು, ತಾಲ್ಲೂಕು ಕೇಂದ್ರದಿಂದ ಪಶ್ಚಿಮದ ದಿಕ್ಕಿಗೆ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ದೇವರ ಬೆಟ್ಟದಲ್ಲಿ ಪ್ರಸಿದ್ಧ ಶ್ರೀರಂಗನಾಥಸ್ವಾಮಿ ದೇವಸ್ಥಾನ ಇರುವುದರಿಂದ ಈ ಬೆಟ್ಟಕ್ಕೆ ಮತ್ತು ಊರಿಗೆ ದೇವರಬೆಟ್ಟ ಎಂಬ ಹೆಸರು ಬಂದಿದೆ.[೨೦] ಈ ಬೆಟ್ಟದಲ್ಲಿ ಮತ್ತು ಊರಿನಲ್ಲಿ ಕೋಟೆಯನ್ನು ಕಟ್ಟಿರುವುದು ಈಗಲೂ ಕಾಣಬಹುದಾಗಿದೆ. ದೇವರ ಬೆಟ್ಟದ ಕೋಟೆಯನ್ನು ಮತ್ತು ಶ್ರೀರಂಗನಾಥ ದೇವಸ್ಥಾನವನ್ನು ನಿಡುಗಲ್ಲು ಚೋಳರು ಕಟ್ಟಿಸಿದರೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಆದರೆ ಇದಕ್ಕೆ ಪೂರಕವಾದ ಯಾವುದೇ ದಾಖಲಾತಿಯು ದೊರಕಿಲ್ಲದೆ ಇರುವುದರಿಂದ ಸ್ಪಷ್ಟವಾಗಿ ಇತಿಹಾಸ ರಚಿಸಲು ಸಾಧ್ಯವಾಗಿಲ್ಲ.

ನಿಡುಗಲ್ಲು ಚೋಳರು ಈ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡು ಕೋಟೆಕೊತ್ತಲಗಳನ್ನು ಕಟ್ಟಿದರೆಂದು ತಿಳಿಯಬಹುದು. ದೇವರಬೆಟ್ಟದ ಮಧ್ಯ ಭಾಗದಲ್ಲಿ ಚೋಳರ ದೇವಾಲಯಗಳ ವಾಸ್ತುವನ್ನು ಹೋಲುವ ಶ್ರೀರಂಗನಾಥ ದೇವಾಲಯವನ್ನು ಕಾಣಬಹುದಾಗಿದೆ. ಚೋಳರು ನಿಡುಗಲ್ಲು ಪ್ರದೇಶದಿಂದ ಕಾಲ್ತೆಗೆದ ಮೇಲೆ ವಿಜಯನಗರದ ಅರಸರು ನಿಡುಗಲ್ಲು, ಪಾವಗಡದ ಪ್ರದೇಶಗಳ ಮೇಲೆ ಹಿಡಿತಹೊಂದಿ ಅಧಿಕಾರಿಗಳಿಂದ ಆಡಳಿತ ನಡೆಸಿದರು. ಆ ಸಂದರ್ಭದಲ್ಲಿ ದೇವರಬೆಟ್ಟವು ವಿಜಯನಗರದ ಅಧಿಕಾರಿಗಳಿಗೆ ಸೇರಿತ್ತೆಂದು ಊಹಿಸಬಹುದಾಗಿದೆ. ವಿಜಯನಗರ ಪತನಾ ನಂತರ ಅಲ್ಲಲ್ಲಿ ಪಾಳೇಗಾರರು ತಲೆ

ಎತ್ತಿದರು. ಅದೇ ಸಂದರ್ಭದಲ್ಲಿ ದೇವರಬೆಟ್ಟವನ್ನು ರತ್ನಗಿರಿಯ ಅರಸರು ಆಕ್ರಮಿಸಿಕೊಂಡು ಸೈನ್ಯವನ್ನು ಇಲ್ಲಿಟ್ಟು ಅದ್ದುಬಸ್ತಿನಲ್ಲಿಟ್ಟುಕೊಂಡರು.

ದೇವರಬೆಟ್ಟವನ್ನು ರತ್ನಗಿರಿಯ ಪಾಳೇಗಾರರಿಂದ ಹೇಗಾದರೂ ಮಾಡಿ ಹೊಡೆಯಬೇಕೆಂದು ನಿಡುಗಲ್ಲು ಪಾಳೇಗಾರರು ಸಂಚು ಹೂಡುತ್ತಾರೆ. ಸಂಚನ್ನು ಯಶಸ್ವಿಯಾಗಿ ನಿರ್ವಹಿಸುವವರನ್ನು ಪಾಳೇಗಾರರು ಹುಡುಕಿಸುತ್ತಾರೆ. ಇಲ್ಲಿ ಪ್ರಸ್ತಾಪಕ್ಕೆ ಬರುವವರು ಕ್ಯಾತಗಾನಹಳ್ಳಿ ಕರಿಯಣ್ಣ ಮತ್ತು ಲಿಂಗಣ್ಣರು. ಇವರಿಬ್ಬರು ಜಾಣ್ಮೆಯ ಹೆಸರಿನಲ್ಲಿ ಪ್ರಸಿದ್ಧರಾಗಿದ್ದರು. ಪಾಳೇಗಾರನ ಆಜ್ಞೆಯ ಮೇರೆಗೆ ದೇವರಬೆಟ್ಟದಲ್ಲಿ ಸಂಚು ಹೂಡಲು ಒಪ್ಪಿಗೊಳ್ಳುತ್ತಾರೆ. ಒಂದು ದಿನ ಕರಿಯಣ್ಣನು ದೇವರಬೆಟ್ಟದ ಪ್ರದೇಶಕ್ಕೆ ಬರುತ್ತಾನೆ. ಬೆಟ್ಟದ ವಾಯುವ್ಯ ದಿಕ್ಕಿನ ಹೊಲದಲ್ಲಿ ವಯಸ್ಸಾದ ಹೆಂಗಸು ಹುಲ್ಲನ್ನು ಕೀಳುತ್ತಿರುತ್ತದೆ. ಈ ಹೆಂಗಸನ್ನು ಕಂಡ ಕರಿಯಣ್ಣನು ಈಕೆಯಲ್ಲಿ ಒಂದು ಭಿನ್ನಹವಿಡುತ್ತಾನೆ. ಆದೇನೆಂದರೆ ನನ್ನನ್ನು ನೀನು ಕಿತ್ತಿರುವ ಹುಲ್ಲಿನ ನಡುಮಧ್ಯೆ ಸೇರಿಸಿಕೊಂಡು ಹೊತ್ತು ಬೆಟ್ಟಕ್ಕೆ ಹೊಯ್ದರೆ ನಿನಗೆ ನಮ್ಮ ಪಾಳೇಗಾರರಿಂದ ಕೈತುಂಬ ಹಣವನ್ನು ಕೊಡಿಸುತ್ತೇನೆ ಎಂದು ಹೇಳುತ್ತಾನೆ. ಇದಕ್ಕೆ ಆಕೆ ತಿರಸ್ಕರಿಸುತ್ತಾಳೆ. ಕೆಲವು ಸಮಯದ ನಂತರ ಒಪ್ಪಿಕೊಳ್ಳುತ್ತಾಳೆ. ಆಗ ಆಕೆ ಆತನನ್ನು ಹುಲ್ಲಿನ ಹೊರೆಯಲ್ಲಿ ಕಟ್ಟಿ ಅನುಮಾನ ಬಾರದ ರೀತಿ ಹೊತ್ತುಕೊಂಡು ಬೆಟ್ಟದಲ್ಲಿರುವ ಮನೆಯನ್ನು ಸೇರುತ್ತಾಳೆ.

ಸಂಜೆಯಾಗುವವರೆಗೂ ಆಕೆಯ ಮನೆಯಲ್ಲಿಯೇ ಕರಿಯಣ್ಣ ಅಡಗಿಕೊಳ್ಳುತ್ತಾನೆ. ಆ ದಿವಸವೇ ಶ್ರೀರಂಗನಾಥಸ್ವಾಮಿ ದೇವರುಪೂಜೆ ಮಾಡುವ ಸರದಿ ಇರುತ್ತದೆ. ಪೂಜೆ ಮಾಡಿಸುವವರು ಬೆಟ್ಟದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಊಟ ಹಾಕಿಸಬೇಕಾಗಿರುತ್ತದೆ. ಸಂಜೆಗೆ ಪೂಜೆ ಮುಗಿದ ಮೇಲೆ ಎಲ್ಲರೂ ಊಟಕ್ಕೆ ಬಂದರು. ಊಟಕ್ಕೆಲ್ಲ ಕರಿಯಣ್ಣನು ಮೊದಲೇ ಮತ್ತು ಬರುವ ಚೂರ್ಣವನ್ನು ಬೆರಸಿರುತ್ತಾನೆ. ಇದನ್ನು ತಿಂದ ಎಲ್ಲಾ ನಾಗರಿಕರು, ಸೈನಿಕರು ಪ್ರಜ್ಞೆ ತಪ್ಪಿ ಬೀಳುತ್ತಾರೆ. ಇದನ್ನೇ ಕಾಯುತ್ತಿದ್ದ ಕರಿಯಣ್ಣನು ಜಯದ ಧ್ವಜವನ್ನು ತೆಗೆದುಕೊಂಡು ಬೆಟ್ಟದ ತುದಿಗೇರಿ ಗೋಪುರದ ಮೇಲೆ ಹಾರಿಸುತ್ತ 'ದೇವರಬೆಟ್ಟದ ಸಂಸ್ಥಾನವನ್ನು ನಿಡುಗಲ್ಲು ಸಂಸ್ಥಾನದ ಪರವಾಗಿ ನಾನು ಗೆದ್ದಿದ್ದೇನೆ' ಎಂದು ಕೇಕೆ ಹಾಕುತ್ತಾನೆ. ಇದನ್ನು ಕೇಳಿಸಿಕೊಂಡ ನಿಡುಗಲ್ಲು ಲಿಂಗಣ್ಣನು ಸೈನ್ಯವನ್ನು ಕರೆದುಕೊಂಡು ಬಂದು ದೇವರಬೆಟ್ಟದಲ್ಲಿರುವ ಸೈನಿಕರನ್ನೆಲ್ಲಾ ಸಾಮೂಹಿಕವಾಗಿ ಕೊಲೆ ಮಾಡಿಸುತ್ತಾರೆ. ಪ್ರಜ್ಞೆಯಿಂದ ಎಚ್ಚೆತ್ತಾ ಹೆಂಡತಿ ಮಕ್ಕಳು ಚೀರಿಕೊಂಡು ರೋಧಿಸಲು ಪ್ರಾರಂಭಿಸುತ್ತಾರೆ. ಈ ಸುದ್ದಿಯನ್ನು ತಿಳಿದ ರತ್ನಗಿರಿಯ ಪಾಳೇಗಾರರು ಏನೂ ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲಿದ್ದ ಹೆಂಗಸರೆಲ್ಲರೂ ಕೋಪದಿಂದ ಶಾಪ ಹಾಕುತ್ತಾರೆ. 'ದೇವರ ಬೆಟ್ಟದಲ್ಲಿ ಹೆಣ್ಣೆ ಬೇಡ ಗಂಡು ಬೆಳೀಬೇಡ' ಈ ಮಾತನ್ನು ಹೇಳುತ್ತಾ ಬಳೆ ಹೊಡೆದುಕೊಂಡು ಅಗ್ನಿಪ್ರವೇಶ ಮಾಡುತ್ತಾರೆ.

ಹತ್ತಿ ಬೆಳೆಯುವುದು ಹಂದಿಕುಂಟೆ
ಮುತ್ತು ಬೆಳೆಯುವುದು ಮುಗದಾಳಬೆಟ್ಟ

ಉತ್ತರಾಣಿ ಬೆಳೆಯುವುದು ದೇವರಬೆಟ್ಟ ದೂರಮುಂದೆ
ಮುತ್ತೈದೆಯರ ಬಳೆ ಹೊಡೆದಾವಣ್ಣ || ಎಂದು ಜನಪದ ಹಾಡಿದೆ.

ರತ್ನಗಿರಿಯ ಪಾಳೇಗಾರರಿಂದ ನಿಡುಗಲ್ಲು ಪಾಳೇಗಾರರು ಆಕ್ರಮವಾಗಿ ದೇವರಬೆಟ್ಟದ ಕೋಟೆಯನ್ನು ವಶಪಡಿಸಿಕೊಂಡರೆಂದು ಜನಪದ ಐತಿಹ್ಯವು ಹೇಳುತ್ತದೆ.[೨೬೧]

ದೇವರಬೆಟ್ಟವನ್ನು ಗೆದ್ದುಕೊಟ್ಟ ಕರಿಯಣ್ಣ ಮತ್ತು ಲಿಂಗಣ್ಣನಿಗೆ ನಿಡುಗಲ್ಲು ಪಾಳೇಗಾರರು ಇವರ ಉಸ್ತುವಾರಿಕೆಯನ್ನು ವಹಿಸಿಕೊಟ್ಟರು.

ದೇವರಬೆಟ್ಟದ ಕೋಟೆಯು ಚೋಳರ ಕಾಲದಿಂದ ಇಲ್ಲಿ ಇತಿಹಾಸ ಆರಂಭವಾಗಿ ರತ್ನಗಿರಿಯ ಪಾಳೇಗಾರರು, ನಿಡುಗಲ್ಲು ಪಾಳೇಗಾರರು ಆಳ್ವಿಕೆ ಮಾಡಿದರು. ನಿಡುಗಲ್ಲು ಪಾಳೇಗಾರರ ಕಾಲದಲ್ಲಿ ಈ ಬೆಟ್ಟದ ಕೋಟೆಯು ಪುನರ್ ನವೀಕರಣಗೊಂಡಿದೆ ಎಂದು ಹೇಳುತ್ತಾರೆ. ಆದರೆ ನಂತರದ ಕಾಲದಲ್ಲಿ ಯಾರ ಆಳ್ವಿಕೆಗೆ ಸೇರಿತ್ತೆಂದು ತಿಳಿದು ಬಂದಿಲ್ಲ. ಎರಡು ಬಾರಿ ಕೋಟೆಯನ್ನು ಕಟ್ಟಿದರೂ ಗಾರೆಯನ್ನು ಬಳಸಿಲ್ಲ. ಆದ್ದರಿಂದ ಈಗ ಮಳೆ, ಗಾಳಿಯಿಂದ ನಾಶವಾಗುತ್ತಿದೆ.

ದೇವರಬೆಟ್ಟದ ಕೋಟೆಯ ಅವಶೇಷಗಳು

ಇಲ್ಲಿನ ಕೋಟೆಯನ್ನು ಬೆಟ್ಟ ಮತ್ತು ಊರನ್ನು ಒಳಗೊಂಡಂತೆ ನಿರ್ಮಿಸಲಾಗಿದೆ. ಮೊದಲ ಸುತ್ತಿನ ಕೋಟೆಯು ಊರನ್ನು ಸುತ್ತವರೆದು ಎರಡು ತುದಿಗಳೂ ಬೆಟ್ಟವನ್ನು ಸಂಧಿಸಿವೆ. ಕೋಟೆಯ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದೆ. ಈ ದ್ವಾರವನ್ನು ಚಿಕ್ಕ ನಿಲುವುಗಳಿಂದ ಚಚ್ಚೌಕವಾಗಿ ನಿರ್ಮಿಸಲಾಗಿದೆ. ಬಾಗಿಲ ಕಂಬಗಳು ಒರಟು ಒರಟಾಗಿ ಇರುವುದರಿಂದ ಯಾವುದೇ ಉಬ್ಬುಶಿಲ್ಪಗಳನ್ನು ಕೆತ್ತಲು ಸಾಧ್ಯವಾಗಿಲ್ಲ. ಇಲ್ಲಿನ ಕೋಟೆಯ ಹೊರಗೆ ಸುತ್ತಲೂ ಕಂದಕವನ್ನು ನಿರ್ಮಿಸಲಾಗಿದೆ. ಈ ಕಂದಕವನ್ನು ಯಾರು ದಾಟಿ ಬರಲು ಸಾಧ್ಯವಾಗುತ್ತಿರಲಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಕಂದಕಗಳು ಕೋಟೆಗಳ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವೆಂದು ಹೇಳಬಹುದು.

ದೇವರ ಬೆಟ್ಟದ ಕೋಟೆಗೆ ಒಟ್ಟು ಹನ್ನೊಂದು ಬಾಗಿಲು ಇದ್ದು, ಅದರಲ್ಲಿ ಮುಖ್ಯ ಬಾಗಿಲುಗಳು ಎಂಟು, ಚಿಕ್ಕ ಬಾಗಿಲುಗಳು ಮೂರು, ಇವುಗಳಲ್ಲಿ ಐದು ಬಾಗಿಲುಗಳು ಬಿದ್ದುಹೋಗಿವೆ. ಇಲ್ಲಿ ಏಳು ಸುತ್ತಿನ ಕೋಟೆಯಿದ್ದು, ಅದರಲ್ಲಿ ಎರಡು ಸುತ್ತು ಚಿಕ್ಕಕೋಟೆಗಳು. ಕೋಟೆಯನ್ನು ಸಣ್ಣ ಸಣ್ಣ ಸೈಜುಕಲ್ಲುಗಳಿಂದ ನಿರ್ಮಿಸಲಾಗಿದೆ. ಕಲ್ಲುಗಳ ಸಂಧಿಗೆ ಮಣ್ಣನ್ನು ಬಳಸಿರುವುದರಿಂದ ಮಳೆಯಿಂದ ಕೊರೆದು ಕೋಟೆಯ ಗೋಡೆಯು ಶಿಥಿಲಗೊಂಡಿದೆ. ಶಿಥಿಲಗೊಂಡಿರುವ ಕೋಟೆಯ ಅವಶೇಷಗಳಿಂದ ಕೋಟೆಯ ರೂಪುರೇಷೆಯನ್ನು ಕಂಡುಹಿಡಿಯಲಾಗಿದೆ. ಅದರಲ್ಲಿ ಆರು ವೃತ್ತಾಕಾರದ ಕೊತ್ತಲಗಳನ್ನು

ಮತ್ತು ಐದು ಚೌಕಾಕಾರದ ಕೊತ್ತಲಗಳನ್ನು ಮಾತ್ರ ಕಾಣಬಹುದಾಗಿದೆ. ಬಂಡೆಗಳನ್ನು ಸಹ ಇಲ್ಲಿ ಕೊತ್ತಲಗಳನ್ನಾಗಿ ಮಾಡಿಕೊಳ್ಳಲಾಗಿದೆ. ನಾಲ್ಕು ಸುತ್ತಿನ ಕೋಟೆಯ ತುದಿಗಳು ಒಂದೊಂದು ಸುತ್ತಿನ ಕೋಟೆಗೆ ಸಂಧಿಸಿವೆ. ಸಂಧಿಸಿದ ಜಾಗದಲ್ಲಿ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಆದರೆ ಎಲ್ಲಾ ಕೊತ್ತಲಗಳು ಶಿಥಿಲಗೊಂಡು ಅವಶೇಷಗಳನ್ನು ಮಾತ್ರ ಉಳಿಸಿಕೊಂಡಿವೆ.

ಮೂರನೇ ಸುತ್ತಿನ ಕೋಟೆಯು ಸುಸ್ಥಿತಿಯಲ್ಲಿದ್ದು, ಇದಕ್ಕೆ ಎರಡು ಬಾಗಿಲನ್ನು ಇಡಲಾಗಿದೆ. ಒಂದು ಪೂರ್ವಾಭಿಮುಖವಾಗಿದ್ದು, ಇನ್ನೊಂದು ಉತ್ತರಾಭಿಮುಖವಾಗಿದೆ. ಇವೆರಡು ಚಿಕ್ಕ ಬಾಗಿಲುಗಳು ಈ ಕೋಟೆಯ ಒಳಗೆ ಎರಡು ಕೊತ್ತಲಗಳಿದ್ದು, ಬಹಳಷ್ಟು ಎತ್ತರವಾದ ಪ್ರದೇಶದಲ್ಲಿವೆ. ಇವುಗಳನ್ನು ಪ್ರಧಾನವಾಗಿ ಬರುವ ಶತ್ರುಗಳನ್ನು ವೀಕ್ಷಿಸಲು ಬಳಸುತ್ತಿದ್ದರೆನ್ನಬಹುದು. ನಾಲ್ಕನೇ ಸುತ್ತಿನ ಕೋಟೆಯು ಶ್ರೀರಂಗನಾಥಸ್ವಾಮಿ ದೇವಾಲಯವನ್ನು ಸುತ್ತುವರೆದಿದೆ. ಇದರ ಪ್ರವೇಶದ ದ್ವಾರವು ಉತ್ತರಾಭಿಮುಖವಾಗಿದೆ. ಕೋಟೆಯ ಗೋಡೆಯ ಅಗಲ ಚಿಕ್ಕದಾಗಿದೆ. ಇದು ದೇವಾಲಯವನ್ನು ಮಾತ್ರ ರಕ್ಷಿಸಲು ನಿರ್ಮಿಸಿದ ಕೋಟೆಯಾಗಿದೆ. ಬಾಗಿಲ ಎಡಭಾಗದಲ್ಲಿ ಮೂರನೇ ಕೋಟೆ ಮತ್ತು ನಾಲ್ಕನೇ ಗೋಡೆ ತುದಿ ಸಂಧಿಸಿದ ಜಾಗದಲ್ಲಿ ಎತ್ತರವಾದ ವೃತ್ತಾಕಾರದ ಕೊತ್ತಲವನ್ನು ನಿರ್ಮಿಸಲಾಗಿದೆ. ರಂಗನಾಥಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ಒಟ್ಟು ಮೂರು ಬಾಗಿಲನ್ನು ಒಳಗೊಂಡಿದೆ. ಇದರ ಹಿಂಭಾಗದಲ್ಲಿ ನಾಗರಕಲ್ಲುಗಳನ್ನು ಇಡಲಾಗಿದೆ. ಮತ್ತು ಮುಂಭಾಗದಲ್ಲಿ ನಾಲ್ಕು ಗರುಡಗಂಭಗಳಿವೆ. ಒಂದು ಆಂಜನೇಯ ಮೂರ್ತಿಯನ್ನು ಗೋಡೆಗೆ ವಾರೆಯಾಗಿ ನಿಲ್ಲಿಸಲಾಗಿದೆ. ದೇವಾಲಯದ ಬಲಭಾಗದಲ್ಲಿ ಮಂಟಪವನ್ನು ನಿರ್ಮಿಸಿದ್ದು ಇದನ್ನು ದೇವಾಲಯದ ದರ್ಶನಕ್ಕೆ ಭೇಟಿ ನೀಡಿದ ಭಕ್ತರು ಇಲ್ಲಿ ತಂಗುತ್ತಿದ್ದರೆಂದು ಊಹಿಸಬಹುದು. ಇಲ್ಲಿಂದ ಬೆಟ್ಟದ ತುದಿಗೆ ಹೋಗಲು ದಕ್ಷಿಣ ದಿಕ್ಕಿನಲ್ಲಿ ಒಂದು ದಿಡ್ಡಿ ಬಾಗಿಲನ್ನು ಬಿಡಲಾಗಿದೆ.

ಬೆಟ್ಟದ ತುದಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಎರಡು ಚಿಕ್ಕ ಕೋಟೆಯನ್ನು ಕಾಣಬಹುದು. ಇವೆರಡು ಶಿಥಿಲಗೊಂಡಿದ್ದು, ಎರಡು ಕೋಟೆಗಳ ಬಾಗಿಲುಬಿದ್ದು ಹೋಗಿವೆ. ಕುಂಭಿಯ ಭಾಗವು ವಿಶಾಲವಾದ ಪ್ರಾಂಗಣವನ್ನು ಹೊಂದಿದೆ. ಇದನ್ನು ಸುತ್ತವರೆದ ಆಯತಕಾರದ ಕಡೇಗಾಪ್ಪನ್ನು ನಿರ್ಮಿಸಲಾಗಿದೆ. ಈ ಕೋಟೆ ಗೋಡೆಯು ಒರಟು ಕಲ್ಲುಗಳಿಂದ ನಿರ್ಮಿತವಾಗಿದ್ದು, ಸಂಧಿಗೆ ಯಾವುದೇ ಬಂಧವನ್ನು ಹಾಕಲಾಗಿಲ್ಲ. ಕೋಟೆಯ ಆಯಕಟ್ಟಿನ ಜಾಗದಲ್ಲಿ ಐದು ಚೌಕಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಪಶ್ಚಿಮದ ದಿಕ್ಕಿನ ಕಡೆಯಲ್ಲಿ ವಾಸದ ಮನೆಗಳ ಅವಶೇಷಗಳಿದ್ದು, ಇವುಗಳ ಪಕ್ಕದಲ್ಲಿಯೇ ಕುದುರೆಲಾಯವನ್ನು ನಿರ್ಮಿಸಲಾಗಿದೆ. ಇದು ಮಂಟಪಕಾರದಲ್ಲಿದ್ದು, ಬಂಡೆ ಮತ್ತು ಕಲ್ಲುಕಂಬಗಳ ಆಧಾರದಿಂದ ನಿರ್ಮಿಸಲಾಗಿದೆ. ದಕ್ಷಿಣ ದಿಕ್ಕಿನ ಕಡೆಯಲ್ಲಿ ಪೂರ್ವಾಭಿಮುಖವಾಗಿರುವ ಒಂದು ದಿಡ್ಡಿ ಬಾಗಿಲನ್ನು ಬಿಡಲಾಗಿದೆ. ಇಲ್ಲಿಂದ ಕೆಳಭಾಗಕ್ಕೆ ಹೋಗಲು ದಾರಿಯನ್ನು ಬಿಡಲಾಗಿದೆ.

ಇಲ್ಲಿ ಒಂದು ನೀರಿನ ಬಾವಿ ಮತ್ತು ಒಂದು ದೋಣೆಯಿದೆ. ಈ ದೋಣೆಗೆ ಏಳು ಮಂದಿ ಅಕ್ಕಮ್ಮ ಗಾರ್ಲು ದೋಣೆಯೆಂದು ಕರೆಯುತ್ತಾರೆ. ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ ಎಂದು ಹೇಳುತ್ತಾರೆ.

ಕುಂಭಿಯ ಮಧ್ಯಭಾಗದಲ್ಲಿ ಆಯತಕಾರದ, ಕಡಿಮೆ ಅಗಲದ, ಹದಿನೈದು ಅಡಿ ಎತ್ತರವಿರುವ ಕೋಟೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯ ಕಲ್ಲುಗಳು ಅತಿ ಚಿಕ್ಕದಾಗಿದ್ದು, ಗಾರೆ ಮತ್ತು ಮಣ್ಣನ್ನು ಬಳಸದೆ, ಗೋಡೆಯನ್ನು ನಿರ್ಮಿಸಲಾಗಿದೆ. ಇದರ ಸುತ್ತಲೂ ಬಂದೂಕು ಕಿಂಡಿಗಳನ್ನು ಬಿಡಲಾಗಿದೆ. ಈ ಕೋಟೆಯ ಒಳಗಡೆ ಹಾಳಾದ ಅರಮನೆ ಗೋಪುರ ಮತ್ತು ಗರುಡಗಂಭವನ್ನು ಕಾಣಬಹುದು. ಈ ಗೋಪುರವನ್ನು ಧ್ವಜ ಹಾರಿಸಲು ಬಳಸಲಾಗುತ್ತಿತ್ತೆಂದು ಹೇಳುತ್ತಾರೆ. ಗೋಪುರವು ನಾಲ್ಕು ಕಂಬಗಳಿಂದ ನಿರ್ಮಿಸಲಾಗಿದ್ದು, ಈ ಕಂಬಗಳಿಗೆ ಪ್ರಾಣಿ ಚಿತ್ರಗಳ ಉಬ್ಬುಶಿಲ್ಪವನ್ನು ಬಿಡಿಸಲಾಗಿದೆ. ಇಲ್ಲಿನ ಗರುಡಗಂಭದ ಮೇಲೆ ಸದಾ ದೀಪವನ್ನು ಉರಿಸಲಾಗುತ್ತಿತ್ತೆಂದು ಜನರು ಹೇಳುತ್ತಾರೆ.

ಕೋಟೆಯೊಳಗಿನ ಸ್ಮಾರಕಗಳು

ಶ್ರೀರಂಗನಾಥಸ್ವಾಮಿ ದೇವಾಲಯ, ನಾಗರಕಲ್ಲುಗಳು, ಕುಂಭಿಯಲ್ಲಿರುವ ಗಾಳಿಗೋಪುರ, ಗರುಡ ಗಂಭಗಳು, ಊರ ಹೊರಗಿರುವ ವೀರಗಲ್ಲುಗಳು ಇಲ್ಲಿನ ಮುಖ್ಯ ಸ್ಮಾರಕಗಳಾಗಿವೆ.

ಶ್ರೀರಂಗನಾಥಸ್ವಾಮಿ ದೇವಾಲಯ : ದ್ರಾವಿಡ ಶೈಲಿಯಲ್ಲಿ ಈ ದೇವಾಲಯವನ್ನು ನಿರ್ಮಿಸಿದ್ದಾರೆ. ಈ ವಿಶೇಷತೆಯಿಂದಲೇ ಈ ಊರಿಗೆ ಮತ್ತು ಬೆಟ್ಟಕ್ಕೆ ದೇವರಬೆಟ್ಟವೆಂದು ಕರೆಯುತ್ತಾರೆ. ಇದು ಪೂರ್ವಾಭಿಮುಖವಾಗಿದ್ದು, ಒಟ್ಟು ಮೂರು ಬಾಗಿಲುಗಳನ್ನು ಒಳಗೊಂಡಿದೆ. ಅದರಲ್ಲಿ ಮುಖ್ಯದ್ವಾರವು ದೊಡ್ಡದಿದ್ದು, ದಕ್ಷಿಣದಿಕ್ಕಿನ ಕಡೆಯಿರುವ ಬಾಗಿಲು ಚಿಕ್ಕದಿದೆ. ರಂಗಮಂಟಪವು ಕಂಬಗಳ ಆಧಾರದ ಮೇಲೆ ಮೇಲ್ಛಾವಣೆಯನ್ನು ನಿಲ್ಲಿಸಲಾಗಿದೆ. ದೇವಾಲಯದ ಗೋಪುರವು ವಿಶೇಷವಾಗಿದ್ದು, ದ್ರಾವಿಡ ಶೈಲಿಯಲ್ಲಿ ಇದನ್ನು ನಿರ್ಮಿಸಲಾಗಿದೆ. ಆದರೆ ಗೋಪುರದ ಶಿಲ್ಪಗಳು ಅಲ್ಲಲ್ಲಿ ಹಾಳಾಗಿವೆ. ದೇವಾಲಯವನ್ನು ಈಗ ಮುಜರಾಯಿ ಇಲಾಖೆಗೆ ಒಳಪಡಿಸಲಾಗಿದೆ.

ಬಂಗಾರನಾಯಕನ ದುರ್ಗದ ಕೋಟೆ

ಬಂಗಾರನಾಯಕನ ದುರ್ಗ ಪಾವಗಡ ತಾಲ್ಲೂಕಿನಿಂದ ಪಶ್ಚಿಮ ದಿಕ್ಕಿಗೆ ೧೨ ಕಿ.ಮೀ ದೂರದಲ್ಲಿದೆ. ಈ ದುರ್ಗವು ಆಂಧ್ರ ಮತ್ತು ಕರ್ನಾಟಕ ಗಡಿಪ್ರದೇಶದಲ್ಲಿದೆ. ಈ ದುರ್ಗವು ಮಲಗಿರುವ ಬಸವನಂತೆ ಕಾಣಿಸುತ್ತದೆ. ಈ ದುರ್ಗದ ಸುತ್ತಲೂ ಬೆಟ್ಟಗಳ ಸಾಲು ಹಬ್ಬಿದ್ದು, ಈ ಪ್ರದೇಶವು ನೋಡಲು ರಮಣೀಯವಾಗಿ ಕಾಣಿಸುತ್ತದೆ. ಈ ಬೆಟ್ಟದ ಕೋಟೆಗೆ ಮತ್ತು ಊರುಳ್ಳ ಪ್ರದೇಶಕ್ಕೆ ಬಂಗಾರನಾಯಕ ಬೆಟ್ಟವೆಂದು ಹೆಸರಿಸಲಾಗಿದೆ. ಈ ಬೆಟ್ಟದಲ್ಲಿ ಬಂಗಾರನಾಯಕನು ಸುಮಾರು ೧೭ ಮತ್ತು ೧೮ನೇ ಶತಮಾನದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ರಾಜ್ಯವಾಳುತ್ತಿದ್ದನೆಂದು ಊಹಿಸಬಹುದಾಗಿದೆ.

ಈತನು ನಿಡುಗಲ್ಲು ಪಾಳೇಗಾರನಾದ ಹೊಟ್ಟಣ್ಣನಾಯಕನ ಕಾಲಘಟ್ಟದವನೆಂದು ಸ್ಥಳೀಯರಿಂದ ತಿಳಿಯಬಹುದಾಗಿದೆ. ಬಂಗಾರನಾಯಕನಿಗೆ ಇಬ್ಬರು ಸಹೋದರರು ಮತ್ತು ಒಬ್ಬಳು ತಂಗಿಯಿದ್ದಳು. ಇವರ ವಂಶವೃಕ್ಷವನ್ನು ಸ್ಥಳೀಯರು ಈ ಕೆಳಗಿನಂತೆ ಹೇಳುತ್ತಾರೆ.

ರಾಜಾನಾಯಕ

ಬಂಗಾರನಾಯಕ ನರಸನಾಯಕ ಚಿಕ್ಕನಾಯಕ ಬಂಗಾರವ್ವನಾಗತಿ[೨೬೨]

ಬಂಗಾರನಾಯಕನು ಐತಿಹಾಸಿಕ ಪ್ರಸಿದ್ಧವಾದ ನಿಡುಗಲ್ಲು ದುರ್ಗದ ಪಾಳೇಗಾರ ತಿಪ್ಪನಾಯಕನ ಮಗಳು ತಿಪ್ಪವ್ವ ನಾಗತಿಯೊಂದಿಗೆ ವಿವಾಹವನ್ನು ಮಾಡಿಕೊಂಡಿದ್ದನು. ತಿಪ್ಪನಾಯಕ ಬಂಗಾರನಾಯಕನಿಗೆ ಉಡುಗೊರೆಯಾಗಿ ಹನ್ನೆರಡು ಪಡಿಯ(ಹತ್ತು ಸೇರಿಗೆ ಒಂದು ಪಡಿ) ಬಂಗಾರವನ್ನು ಕೊಟ್ಟಿದ್ದನೆಂದು ನಂಬಿಕೆಯಿದೆ. ಈತನ ಸಂಸ್ಥಾನವು ಅಷ್ಟೊಂದು ವಿಶಾಲವಾಗಿಲ್ಲಾದಿದ್ದರೂ ಒಳ್ಳೆಯ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಈತನು ತನ್ನ ತಮ್ಮಂದಿರಿಗೆ ತನ್ನ ಸರಹದ್ದಿಗೆ ಸೇರುವ ಪ್ರದೇಶದಲ್ಲಿ ಕೋಟೆಕೊತ್ತಲಗಳನ್ನು ನಿರ್ಮಿಸಿ ನರಸನಾಯಕನಿಗೆ ನರಸದುರ್ಗವನ್ನು ಎರಡನೇ ತಮ್ಮ ಚಿಕ್ಕನಾಯಕನಿಗೆ ಚಿಕ್ಕನಾಯಕನ ದುರ್ಗವನ್ನೂ ಆಳ್ವಿಕೆಗೆ ಒಪ್ಪಿಸಿದನು. ತನ್ನ ಏಕೈಕ ತಂಗಿಯನ್ನು ಬಂಗಾರನಾಯಕ ದುರ್ಗದ ದಕ್ಷಿಣ ದಿಕ್ಕಿಗಿರುವ ಓಬನಾಯಕದುರ್ಗದ ಓಬನಾಯಕನಿಗೆ ಮದುವೆ ಮಾಡಿಕೊಟ್ಟನು.[೨೬೩]

ನಿಡುಗಲ್ಲಿನ ವೈವಾಹಿಕ ಸಂಬಂಧದಿಂದ ಬಂಗಾರನಾಯಕನ ಪ್ರತಿಷ್ಠೆಯು ಹೆಚ್ಚಾಗಿತ್ತು. ಈತನು ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು, ಅಪಾರವಾದ ಶ್ರೀಮಂತಿಕೆಯನ್ನು ಹೊಂದಿದ್ದನು. ''ಬಂಗಾರ ನಾಯಕ ದುರ್ಗ ಬಂಗಾರದ ಹೊಂಬಾಳೆ ಹೊಡದೈತೆ'' ಎನ್ನುವ ಜನಪದ ಹೇಳಿಕೆಯನ್ನು ಪರಿಶೀಲಿಸಿದರೆ ಬಂಗಾರನಾಯಕನ ದುರ್ಗವು ಅಪಾರ ಬಂಗಾರವನ್ನು ಹೊಂದಿತ್ತೆಂದು ತಿಳಿಯಬಹುದು. ಈ ಅಪಾರವಾದ ಸಂಪತ್ತನ್ನು ಸಂರಕ್ಷಿಸಲು ಹಲವು ತಾಂತ್ರಿಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದನು. ಕೋಟೆ ಕೊತ್ತಲಗಳನ್ನು ನಿರ್ಮಿಸಿ, ಕೋಟೆಯ ಒಳಗಡೆಯಲ್ಲಿ ಬಂಗಾರವನ್ನು ಇಟ್ಟು ಕಬ್ಬಿಣದ ಕಂಬಿಗಳಿಂದ ಜೈಲನ್ನು ನಿರ್ಮಿಸಲಾಗಿತ್ತು. ಈ ಸಂಪತ್ತನ್ನು ಬೇರೆಯವರು ಕದಿಯದ ರೀತಿ ವ್ಯವಸ್ಥೆ ಮಾಡಲಾಗಿತ್ತು.

ಬಂಗಾರನಾಯಕನು ಸುತ್ತಮುತ್ತಲ ಚಿಕ್ಕಪುಟ್ಟ ಪಾಳೇಗಾರರೆನ್ನೆಲ್ಲ ವಿವಾಹ ಸಂಬಂಧದಿಂದ ಮೈತ್ರಿಮಾಡಿ ಕೊಂಡಿದ್ದನು. ತನ್ನ ತಮ್ಮನಾದ ನರಸನಾಯಕನಿಗೆ ತಿರುಮಲನಾಯಕ ಕುವರಿ ತಿಮ್ಮವ್ವ ನಾಗತಿಯನ್ನು ತಂದಿದ್ದ, ಇನ್ನೊಬ್ಬ ತಮ್ಮನಿಗೆ ಒಂದನೇ ಹೊಟ್ಟೆಪ್ಪನಾಯಕನ ಕುವರಿ ಅಕ್ಕಮ್ಮ ನಾಗತಿಯನ್ನು ತಂದುಕೊಂಡಿದ್ದ, ತನ್ನ ಏಕೈಕ ತಂಗಿಯನ್ನು ಓಬನಾಯಕನಿಗೆ ಕೊಟ್ಟು ಶತೃವಿಲ್ಲದಂತೆ ಮಾಡಿಕೊಂಡಿದ್ದ.

ಇಂತಹ ವಿವಾಹ ಸಂಬಂಧವನ್ನು ಇಟ್ಟುಕೊಂಡಿದ್ದರೂ ಬಂಗಾರನಾಯಕನ ದುರ್ಗವನ್ನು ಅನುಭವಿಸಲೇ ಬೇಕೆಂದು ಓಬನಾಯಕನು ದುರಾಸೆಯಿಂದ ಹೈದರಾಲಿಗೆ ದುರ್ಗವನ್ನು ಮುತ್ತಲು ಅನುಕೂಲ

ಮಾಡಿಕೊಡುವನು. ಬಂಗಾರನಾಯಕನು ತನ್ನ ಮಡದಿಯೊಂದಿಗೆ ನಿಡುಗಲ್ಲು ಮಾರಿಕಾಂಬ ಉತ್ಸವಕ್ಕೆ ಪಾಲ್ಗೊಳ್ಳಲು ಹೋಗುತ್ತಾನೆ. ಇಂತಹ ಸಂದರ್ಭವನ್ನೇ ಕಾಯುತ್ತಿದ್ದ ಓಬನಾಯಕನು ಹೈದರಾಲಿಗೆ ಈ ರೀತಿ ಹೇಳುತ್ತಾನೆ. ದಾರಿಮಧ್ಯದಲ್ಲಿಯೇ ಬಂಗಾರನಾಯಕನನ್ನು ತಡೆದು ಯುದ್ಧಕ್ಕೆ ಆಹ್ವಾನಿಸಬೇಕೆಂದು ಸುಳಿವೊಂದನ್ನು ಕೊಡುತ್ತಾನೆ. ಉತ್ಸವನ್ನು ಮುಗಿಸಿಕೊಂಡು ಬರುವ ಮಧ್ಯೆದಲ್ಲಿ ಹೈದರಾಲಿಯು ತಡೆದು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಈ ಯುದ್ಧದಲ್ಲಿ ಯಾವುದೇ ಬಲವಿಲ್ಲದ್ದರಿಂದ ಬಂಗಾರನಾಯಕನಿಗೆ ಸೋಲುಂಟಾಗಿ ಸಾವನ್ನಪ್ಪುತ್ತಾನೆ. ನಂತರ ಬಂಗಾರನಾಯಕನ ದುರ್ಗವನ್ನು ಆಕ್ರಮಿಸಿಕೊಂಡು ಅಪಾರ ಸಂಪತ್ತನ್ನು ದೋಚುತ್ತಾನೆ. ಓಬನಾಯಕನ ಆಸೆ ಈಡೇರಿದರೂ ಆತನಿಗೆ ಈ ಸಂಸ್ಥಾನವನ್ನು ಒಪ್ಪಿಸದೆ ಹೈದರಾಲಿಯು ತಂತ್ರದಿಂದ ಬಂಧಿಸಿ ಮಧುಗಿರಿ ಜೈಲಿನಲ್ಲಿಟ್ಟು ಇಲ್ಲಿನ ಸುತ್ತಮುತ್ತಲ ಕೋಟೆಗಳನ್ನು ಲೂಟಿ ಮಾಡುತ್ತಾನೆ. ಈ ಕೋಟೆಗಳನ್ನು ನೋಡಿಕೊಳ್ಳಲು ಹೈದರಾಲಿಯ ಆಪ್ತರನ್ನು ಇಲ್ಲಿ ನೇಮಿಸುತ್ತಾನೆ.[೨೬೪]

ಬಂಗಾರನಾಯಕ ದುರ್ಗವನ್ನು ನಿರ್ಮಿಸಿ ತನ್ನ ಸುತ್ತಮುತ್ತಲ ಪಾಳೇಗಾರರನ್ನು ವಿವಾಹ ಮೈತ್ರಿಯ ಸಂಬಂಧದಿಂದ ತನ್ನತ್ತ ವಾಲಿಸಿಕೊಂಡು ರಾಜ್ಯಭಾರ ಮಾಡಿದ್ದನು. ಮಣ್ಣಿನಿಂದ ಕೂಡಿದ ಕೋಟೆಯನ್ನು ನಿರ್ಮಿಸಿ, ಶತ್ರುಗಳಿಗೆ ಬೇಗ ಸಿಗದ ರೀತಿ ಭದ್ರತೆಯನ್ನು ಒದಗಿಸಿದ್ದನು. ಹೈದರಾಲಿಯ ಬುದ್ಧಿವಂತಿಕೆಯಿಂದ ಬಂಗಾರನಾಯಕನನ್ನು ಸೋಲಿಸಿ, ಅಲ್ಲಿ ಅಪಾರ ಸಂಪತ್ತನ್ನು ಲೂಟಿ ಮಾಡಿ, ತನ್ನ ಆಪ್ತರನ್ನು ನೇಮಕ ಮಾಡಿಕೊಂಡು ಆಳ್ವಿಕೆ ಮಾಡಿಸುತ್ತಾನೆ. ನಂತರ ಈ ಕೋಟೆಯನ್ನು ಕಾರ್ನ್‌ವಾಲೀಸನು ಹಾಳು ಮಾಡಿಸಿದನೆಂದು ತಿಳಿಯಲಾಗಿದೆ.[೨೬೫] ಈಗ ಬಂಗಾರನಾಯಕನ ದುರ್ಗದಲ್ಲಿ ಕೋಟೆಯ ಅವಶೇಷಗಳನ್ನು ಮಾತ್ರ ಕಾಣಬಹುದು.

ಬಂಗಾರನಾಯಕನ ದುರ್ಗದ ಕೋಟೆಯ ಲಕ್ಷಣಗಳು

ಗಿರಿದುರ್ಗದ ಕೋಟೆಗಳಲ್ಲಿ ಬಂಗಾರನಾಯಕನ ದುರ್ಗದ ಕೋಟೆಯು ಒಂದು. ಕೋಟೆಯನ್ನು ಬೆಟ್ಟದ ತುದಿಯಲ್ಲಿ ನಿರ್ಮಿಸಿದ್ದು, ಇಲ್ಲಿನ ಕೋಟೆಯು ಅಭೇಧ್ಯವಾಗಿಲ್ಲದಿದ್ದರೂ, ಎತ್ತರದ ಪ್ರದೇಶದಲ್ಲಿ ಕೋಟೆ ನಿರ್ಮಾಣಗೊಂಡಿರುವುದರಿಂದ ಇದನ್ನು ಬಹುಬೇಗ ವಶಪಡಿಸಿಕೊಳ್ಳಲು ಅಸಾಧ್ಯ ವಾಗುತ್ತದೆ. ಈ ಬೆಟ್ಟದ ಮೇಲೆ ಸಮತಟ್ಟಾದ ಪ್ರದೇಶವಿದೆ. ಇಲ್ಲಿಯೇ ಕೋಟೆಯನ್ನು ನಿರ್ಮಾಣ ಮಾಡಲಾಗಿದೆ. ಈ ಕೋಟೆಯನ್ನು ಮಧ್ಯಮ ಗಾತ್ರದ ಹಾಗೂ ಸಣ್ಣ ಸಣ್ಣ ಸೈಜುಕಲ್ಲುಗಳಿಂದ ನಿರ್ಮಿಸಲಾಗಿದೆ. ಪ್ರಕೃತಿಯ ಸಹಜ ವೈಪರಿತ್ಯದಿಂದ ಹಾಗೂ ಕೋಟೆಯು ಪುನರ್ ನಿರ್ಮಾಣವಾಗದೇ ಇರುವುದರಿಂದ ಕೋಟೆಯ ಬಹುತೇಕ ಭಾಗಗಳು ಶಿಥಿಲಗೊಂಡಿವೆ. ಅಳಿದುಳಿದ ಕೋಟೆಯ ಗೋಡೆ ಮಾತ್ರ ಅಲ್ಲಲ್ಲಿ ಕಂಡುಬರುತ್ತದೆ.

ಬೆಟ್ಟದ ತುದಿಯಲ್ಲಿ ಕೋಟೆಯನ್ನು ನಿರ್ಮಿಸುವಾಗ ಊರನ್ನು ಸ್ಥಾಪಿಸಲಾಗಿತ್ತು. ಅದಕ್ಕೆ ಹಾಳಾಗಿರುವ ವಸತಿ ಗೃಹಗಳನ್ನು ಕಾಣಬಹುದು. ಜೊತೆಗೆ ಇಲ್ಲಿಯೂ ವ್ಯವಸಾಯ ಮಾಡುತ್ತಿದ್ದರು ಎನ್ನುವುದಕ್ಕೆ ನಾಲ್ಕು ಎಕರೆ ಯೋಗ್ಯ ಭೂಮಿ ಇದೆ. ಇಲ್ಲಿನ ಕೋಟೆಯನ್ನು ಶತ್ರುಗಳು ನಾಶಪಡಿಸಿದ ಮೇಲೆ ಇಲ್ಲಿಂದ ಉತ್ತರದಿಕ್ಕಿಗೆ ಬೆಟ್ಟದ ತುದಿಯ ಕೆಳಭಾಗದಲ್ಲಿ ಊರನ್ನು ಸ್ಥಾಪಿಸಲಾಯಿತು. ನಂತರ ಕೆಲವು ಕಾಲ ಇಲ್ಲಿಯೇ ವಾಸಿಸಿ, ಈಗ ಬೆಟ್ಟದ ತಪ್ಪಲಿನಿಂದ ಬೆಟ್ಟದ ಭೂಮಿ ಪ್ರದೇಶದಲ್ಲಿ ಊರನ್ನು ಸ್ಥಾಪಿಸಿ ವಾಸಿಸುತ್ತಿದ್ದಾರೆ. ಮೊದಲ ಮೂರು ಪ್ರದೇಶದಲ್ಲಿ ಸ್ಥಾಪಿಸಿದ ಊರಿನ ಅವಶೇಷಗಳು ಈಗಲೂ ಕಂಡುಬರುತ್ತವೆ. ಊರಿನ ಸುತ್ತಲೂ ಕೋಟೆಯನ್ನು ನಿರ್ಮಿಸಿ, ಆಯಕಟ್ಟಿನ ಜಾಗದಲ್ಲಿ ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಆದರೆ ನೈಸರ್ಗಿಕ ವೈಪರಿತ್ಯದಿಂದ ಕೋಟೆಯು ಶಿಥಿಲಗೊಂಡಿದೆ. ಈಗ ಉಳಿದಿರುವ ಕೋಟೆಯಿಂದ ಕೋಟೆಯ ರಚನೆಯನ್ನು ತಿಳಿಯಬಹುದು.

ಕೋಟೆಯನ್ನು ಬೆಟ್ಟದ ದಕ್ಷಿಣ ದಿಕ್ಕಿನಲ್ಲಿ ನಿರ್ಮಾಣ ಮಾಡಲಾಗಿದೆ. ಇಲ್ಲಿನ ಮೊದಲ ಕೋಟೆಯ ಪ್ರವೇಶದ್ವಾರವು ಪೂರ್ವದಿಕ್ಕಿಗೆ ತೆರೆದುಕೊಂಡಿದೆ. ಇಲ್ಲಿಂದ ಮುಂದೆ ಪ್ರವೇಶಿಸಿದರೆ ಮದ್ದಿನ ಮನೆ, ದವಸದ ಮನೆಗಳನ್ನು ಕಾಣಬಹುದು. ಮುಂದಿನ ಕೋಟೆಯು ಶಿಥಿಲವಾಗಿದ್ದು, ಈ ಕೋಟೆಯ ಪ್ರದೇಶದಲ್ಲಿ ಉಳುಮೆಗೆ ಯೋಗ್ಯವಾದ ಭೂಮಿಯಿದೆ. ಇಲ್ಲಿಯೇ ಒಂದು ಬೃಹತ್ ಗುಂಡಿದೆ. ಇದನ್ನು 'ನವಿಲಾಟದ ಗುಂಡು' ಎನ್ನುತ್ತಾರೆ. ನವಿಲುಗಳು ಈ ಗುಂಡಿನ ಪಕ್ಕದಲ್ಲಿ ಆಟ ಆಡುತ್ತಿದ್ದವು. ಈ ಹಿನ್ನೆಲೆಯಲ್ಲಿ ಈ ಹೆಸರು ಬಂದಿದೆ. ಇದರ ಮೇಲೆ ನಿಂತು ಸುತ್ತಲೂ ನೋಡಿದರೆ ಶತ್ರುಗಳ ಬರುವಿಕೆಯನ್ನು ವೀಕ್ಷಿಸಬಹುದು. ಇದೇ ಪ್ರವೇಶದಲ್ಲಿ ವಸತಿಗೃಹದ ಅವಶೇಷಗಳು, ಸ್ಮಶಾನದ ಜಾಗ, ತಣ್ಣೀರಿನ ಚಿಲುಮೆ, ಹಾಳಾದ ಮಂಟಪಗಳು ಕಂಡುಬರುತ್ತವೆ.

ಇಲ್ಲಿಂದ ಮುಂದೆ ಸಾಗಿದರೆ ಬೆಟ್ಟದ ತುದಿಯ ಭಾಗಕ್ಕೆ ಸಾಗುತ್ತೇವೆ. ಬೆಟ್ಟದ ತುದಿಯನ್ನು ಸುತ್ತುವರೆದಿರುವ ಕೋಟೆಯು ಸುಸ್ಥಿತಿಯಲ್ಲಿದೆ. ಕೆಲವು ಕಡೆ ಬಿದ್ದುಹೋಗಿದೆ. ಈ ಕೋಟೆಯು ಎರಡು ಬಾಗಿಲುಗಳನ್ನು ಒಳಗೊಂಡಿದೆ. ಒಂದು ಪೂರ್ವದ ದಿಕ್ಕಿಗೆ, ಇನ್ನೊಂದು ದಕ್ಷಿಣದ ಕಡೆ ಇಡಲಾಗಿದೆ. ಪೂರ್ವದ ಊರು ಬಾಗಿಲನ್ನು ಪ್ರವೇಶಿಸಿದರೆ ಬಲಭಾಗದಲ್ಲಿಯೇ ರಾಜ ಗುಂಡು ಇದೆ. ಈ ಗುಂಡಿನ ಮೇಲೆ ಕುಳಿತು ನ್ಯಾಯ ತೀರ್ಮಾನವನ್ನು ಮಾಡುತ್ತಿದ್ದ ಆದುದರಿಂದ ಇದಕ್ಕೆ 'ರಾಜನ ಗುಂಡು' ಎಂದು ಕರೆಯುತ್ತಾರೆ. ಇದೇ ರೀತಿ ಹಲವು ಗುಂಡುಗಳಿವೆ. ಅವನ್ನು ಕೊತ್ತಲಗಳನ್ನಾಗಿಯು ಮಾಡಿಕೊಂಡಿದ್ದಾರೆ. ಇಲ್ಲಿನ ಗುಂಡುಗಳ ಮೇಲೆ ನಿಂತು ಸುತ್ತಲೂ ನೋಡಿದರೆ ಶತ್ರುಗಳ ಆಗಮನವನ್ನು ಕಂಡುಹಿಡಿಯಬಹುದು.

ಬೆಟ್ಟದ ತುದಿಯ ಉತ್ತರ ದಿಕ್ಕಿನಲ್ಲಿ ಅಮದಾಲಗುಂಡು ಇದೆ. ಇದರ ಮೇಲೆ ಹರಳನ್ನು ಒಣಗಿಸುತ್ತಿದ್ದರು ಎಂದು ಹೇಳುತ್ತಾರೆ. ಇದು ಕೋಟೆಯ ಗೋಡೆಗೆ ಹೊಂದಿಕೊಂಡಿರುವುದರಿಂದ ಇದನ್ನು ಕೊತ್ತಲವಾಗಿ ಬಳಸುತ್ತಿದ್ದರೆನ್ನಬಹುದು. ಪಶ್ಚಿಮ ದಿಕ್ಕಿನಲ್ಲಿ ಬೃಹತ್ ಗಾತ್ರದ ಗುಂಡು ಇದೆ.

ಇದನ್ನು ಮೆಟ್ಟಿಲ ಗುಂಡು ಎಂದು ಕರೆಯುತ್ತಾರೆ. ಸೈನಿಕರು ಪಹರೆಗಾಗಿ ಮೇಲೇರಲು ಗುಂಡಿಗೆ ಮೆಟ್ಟಿಲನ್ನು ಕೆತ್ತಲಾಗಿದೆ. ಬೆಟ್ಟದ ದಕ್ಷಿಣ ದಿಕ್ಕಿನ ಬಾಗಿಲು ಸ್ವಲ್ಪ ದೂರದಲ್ಲಿ ತಿಮ್ಮಪ್ಪನ ಗುಂಡು ಇದೆ. ಇದರ ಮೇಲೆ ತಿಮ್ಮಪ್ಪನ ಗುಡಿಯಿರುವುದರಿಂದ ಈ ಹೆಸರು ಬಂದಿದೆ. ಇಲ್ಲಿಂದ ಪೂರ್ವದ ದಿಕ್ಕಿಗೆ ನಡೆದರೆ ಕೋಟೆಯ ತಿರುವಿನಲ್ಲಿ ಕುದುರೆಯ ಲಾಯವಿದೆ. ಅದರ ಪಕ್ಕದಲ್ಲಿಯೇ ಎತ್ತರವಾದ ವೃತ್ತಾಕರದ ಕೊತ್ತಲವನ್ನು ಕಾಣಬಹುದು. ಇದೇ ಪ್ರದೇಶದಲ್ಲಿ ವಸತಿಗೃಹಗಳು, ಜೈಲು ಇತ್ತೆಂದು ಹೇಳುವ ಪ್ರದೇಶ ಹಾಗೂ ಇನ್ನಿತರೆ ಕಟ್ಟಡಗಳ ಅವಶೇಷಗಳು ಕಂಡುಬರುತ್ತವೆ.

ಬೆಟ್ಟದ ತುದಿಯ ದಕ್ಷಿಣದ ದಿಕ್ಕಿಗೆ ಕೋಟೆಯ ಬಾಗಿಲನ್ನು ದಾಟಿ ಕೆಳಗೆ ನಡೆದರೆ ಒಂದು ದೊಣೆ ಸಿಗುತ್ತದೆ. ಇದನ್ನು ಗಾರೆದೊಣೆ ಅಥವಾ ಕೋತಿದೊಣೆ ಎನ್ನುತ್ತಾರೆ. ಪಕ್ಕದಲ್ಲಿಯೇ ವೃತ್ತಾಕಾರದ ಹಗ್ಗದಿಂದ ಸೇದುವ ಬಾವಿಯಿದೆ. ಇದರಲ್ಲಿ ಸದಾ ನೀರು ಇರುತ್ತದೆ. ಇದಲ್ಲದೆ ಹೂವಿನದೊಣೆ, ಹೊಸದೊಣೆ, ರಾಮಪ್ಪದೊಣೆಗಳ ನೀರನ್ನು ಬಂಗಾರನಾಯಕನ ದುರ್ಗದ ಜನರು ಕುಡಿಯಲು ಬಳಸುತ್ತಿದ್ದರು. ಇಲ್ಲಿಯೂ ಕಟ್ಟಡದ ಪಾಯಗಳನ್ನು ಕಾಣಬಹುದು. ಈ ಪ್ರದೇಶವನ್ನು ಸುತ್ತುವರೆದ ಕೋಟೆಯಿದೆ. ಇದನ್ನು ಕಲ್ಲು, ಮಣ್ಣಿನಿಂದ ನಿರ್ಮಿಸಲಾಗಿದೆ.

ಬಂಗಾರನಾಯಕನ ದುರ್ಗದ ಪಾಳೇಗಾರರ ಮನೆದೇವರಾದ ಕಂಬದರಾಯ ಅಥವಾ ಕಂಬಾಲಪ್ಪ ಗುಡಿಯು ಒಂದು ವಿಶೇಷವಾಗಿದೆ. ಈ ಗುಡಿಯು ಬೆಟ್ಟದ ಉತ್ತರ ದಿಕ್ಕಿನ ಭೂ ಪ್ರದೇಶದಲ್ಲಿದ್ದು, ಇದು ಸುಮಾರು ೪ ರಿಂದ ೫ ಅಡಿ ಎತ್ತರವಾಗಿದ್ದು, ಬಂಡೆಗಳಿಂದ ನಿರ್ಮಿಸಲಾಗಿದೆ. ಈ ಗುಡಿಯಲ್ಲಿ ಲಿಂಗಾಕಾರದ ಕಲ್ಲಿದ್ದು, ಇಲ್ಲಿಯೇ ೧೩ ಅಡಿ ಎತ್ತರದ ಗರುಡಗಂಭವಿದೆ. ಇದಕ್ಕೆ ನಡೆಯುವ ಆಚರಣೆಯು ವಿಶೇಷವಾಗಿದ್ದು, ಪ್ರತಿವರ್ಷ ಶ್ರಾವಣಮಾಸದಲ್ಲಿ ನಡೆಯುತ್ತದೆ. ಈ ಗರುಡಗಂಭದ ಮೇಲೆ ಜ್ಯೋತಿ ಹಚ್ಚಲು ಒಬ್ಬ ವ್ಯಕ್ತಿಯನ್ನು ಕಂಬಕ್ಕೆ ಕಾಲು ತಗಲದಂತೆ ಭುಜದ ಮೇಲೆ ಹಲವರು ಎತ್ತಿನಿಲ್ಲಿಸಿ, ಜ್ಯೋತಿಯನ್ನು ಬೆಳಗಿಸುವ ಆಚರಣೆ ನಡೆಯುತ್ತದೆ.

ಭಸ್ಮಾಂಗಿದುರ್ಗದ ಕೋಟೆ

ಭಸ್ಮಾಂಗಿದುರ್ಗ ಮಧುಗಿರಿಯಿಂದ ವಾಯುವ್ಯ ದಿಕ್ಕಿಗೆ ಹದಿನೆಂಟು ಮೈಲಿ ದೂರದಲ್ಲಿರುವ ಗಡಿಪ್ರದೇಶದ ಒಂದು ಊರು. ಈ ಊರು ಬೆಟ್ಟದ ಪೂರ್ವದ ತಪ್ಪಲಿನಲ್ಲಿದೆ. ಇದನ್ನು ಈಗ ಭಸ್ಮಾಂಗಿ ಕಾವಲ್ ಎಂದು ಕರೆಯುತ್ತಾರೆ. ಭಸ್ಮಾಂಗಿ ದುರ್ಗದ ಬುಡದಲ್ಲಿ ಭಸ್ಮಾಂಗೀಶ್ವರ ದೇವಾಲಯವಿದೆ. ಇಲ್ಲಿ ಕೋಲು ಶಾಂತಸ್ವಾಮಿಗಳ ಗದ್ದುಗೆ ಇದೆ. ಈ ಹಿನ್ನೆಲೆಯಲ್ಲಿ ತಪಸ್ವಿಗಳ ನೆಲೆವೀಡಾಗಿತ್ತೆಂದು ಇಲ್ಲಿನ ಸ್ಥಳೀಯರ ಅಭಿಪ್ರಾಯವಾಗಿದೆ. ಈ ಭಸ್ಮಾಂಗೀಶ್ವರ ದೇವಾಲಯದ ನಿರ್ಮಾಣ ಮತ್ತು ಊರಿಗೆ ಭಸ್ಮಾಂಗಿಯ ಹೆಸರು ಬರಲು ಒಂದು ಕಥನ ಹೀಗಿದೆ. "ಒಂದು 'ಪಂಚಕಲ್ಯಾಣಿ' ಎಂಬ ಗೋವು ಭಸ್ಮಾಂಗೀಶ್ವರ ದೇವಾಲಯದ ಸ್ಥಳದಲ್ಲಿನ ಒಂದು ಹುತ್ತಕ್ಕೆ ಪ್ರತಿದಿನವೂ ಬಂದು ಧಾರಾಕಾರವಾಗಿ

ಹಾಲನ್ನು ಸುರಿಸಿ ಹೋಗುತ್ತಿತ್ತು. ಈ 'ಪಂಚಕಲ್ಯಾಣಿ'ಯು ಶಿರಾದ ರಂಗಪ್ಪನಾಯಕನಿಗೆ ಸೇರಿತ್ತು. ಇದು ಹಿಂಡನ್ನು ಬಿಟ್ಟು ಹಾಲನ್ನು ಕೊಡದೆ ಬೇರೆ ಜಾಗದಲ್ಲಿ ನಿಲ್ಲುತ್ತಿತ್ತು. ಒಂದು ದಿನ ರಂಗಪ್ಪನಾಯಕನಿಗೆ ದನಗಾಯಿಯು ಈ ವಿಚಾರವನ್ನು ತಿಳಿಸುತ್ತಾನೆ. ಅದಕ್ಕೆ ರಂಗಪ್ಪನಾಯಕನು ಈ 'ಪಂಚಕಲ್ಯಾಣಿ' ದಿನಾಲು ಏನು ಮಾಡುತ್ತದೆ ಎನ್ನುವ ವರದಿ ನೀಡಬೇಕೆಂದು ಆಜ್ಞೆ ಮಾಡುತ್ತಾನೆ. ಅದರಂತೆ 'ಪಂಚಕಲ್ಯಾಣಿ' ಹುತ್ತಕ್ಕೆ ಹಾಲು ಸುರಿಸುವ ವಿಚಾರವನ್ನು ರಂಗಪ್ಪನಾಯಕನಿಗೆ ತಿಳಿಸುತ್ತಾನೆ. ಆಗ ರಂಗಪ್ಪನಾಯಕನು ಕೋಪದಿಂದ ಪಂಚಕಲ್ಯಾಣಿಯನ್ನು ಕಟ್ಟಿ ಹಾಕಿಸುತ್ತಾನೆ. ಅಂದಿನಿಂದ ರಂಗಪ್ಪನಾಯಕ ರೋಗಕ್ಕೆ ತುತ್ತಾಗುತ್ತಾನೆ. ಇದಕ್ಕೆ ಪರಿಹಾರವನ್ನು ಕೇಳಿದಾಗ 'ಪಂಚಕಲ್ಯಾಣಿ'ಯು ಹಾಲು ಸುರಿಸುವ ಜಾಗ ಈಶ್ವರನು ಭಸ್ಮವನ್ನು ಸೇವಿಸಿದ ಜಾಗವಾಗಿದೆ. ಈ ಹಿನ್ನೆಲೆಯಲ್ಲಿ ನೀನು ಅಲ್ಲಿ ದೇವಸ್ಥಾನವನ್ನು ನಿರ್ಮಿಸು ಎಲ್ಲವೂ ಸರಿಹೋಗುತ್ತವೆ ಎಂದು ತಿಳಿಸುತ್ತಾರೆ. ರಂಗಪ್ಪನಾಯಕನು ಹುತ್ತವಿರುವ ಜಾಗದಲ್ಲಿ ದೇವಾಲಯ ನಿರ್ಮಿಸಿ 'ಭಸ್ಮಾಂಗೀಶ್ವರ' ಎಂದು ನಾಮಕರಣ ಮಾಡುತ್ತಾನೆ. ಅಂದಿನಿಂದ ಈ ಬೆಟ್ಟಕ್ಕೆ 'ಭಸ್ಮಾಂಗಿ' ಬೆಟ್ಟವೆಂದು ಕರೆಯುತ್ತಾರೆ. ರಂಗಪ್ಪನಾಯಕನು 'ಭಸ್ಮಾಂಗೀಶ್ವರ'ದೈವ ಭಕ್ತನಾದ್ದರಿಂದ ಶಿರಾದ ಯುದ್ಧವೊಂದರಲ್ಲಿ ಶತ್ರುಗಳು ಇವನ ಶಿರಚ್ಛೇದನ ಮಾಡುತ್ತಾರೆ. ಆ ಶಿರವು ಬಂದು ಭಸ್ಮಾಂಗೀಶ್ವರ ದೇವಾಲಯದಲ್ಲಿ ನೆಲೆನಿಂತಿದೆ ಎಂದು ಸ್ಥಳೀಯರು ದೇವರ ಮುಂದೆ ಇರುವ ಪ್ರತಿಮೆಯನ್ನು ತೋರಿಸುತ್ತಾರೆ.

ಸಿರಾದ ರಂಗಪ್ಪನಾಯಕನು ಈ ಬೆಟ್ಟದಲ್ಲಿ ಭಸ್ಮಾಂಗೀಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶವು ಸಿರಾದ ರಂಗಪ್ಪನಾಯಕನಿಗೆ ಸೇರಿದ್ದಿರಬಹುದೆಂದು ಊಹಿಸಬಹುದು. ರಂಗಪ್ಪನಾಯಕನ ನಂತರ ಈ ಪ್ರದೇಶವು ಬೂದಿಬಸಪ್ಪನಾಯಕನ ವಶವಾಗಿರಬಹುದು. ಭಸ್ಮಾಂಗಿ ಬೆಟ್ಟವು ರಕ್ಷಣೆಯ ದೃಷ್ಟಿಯಿಂದ ಮಹತ್ವದ್ದೆಂದು ಬೂದಿ ಬಸಪ್ಪನಾಯಕನಿಗೆ ಕಂಡುಬಂದಿದೆ. ಆ ಹಿನ್ನೆಲೆಯಲ್ಲಿ ಬೆಟ್ಟದಲ್ಲಿಯೇ ಗ್ರಾಮವನ್ನು ಸ್ಥಾಪಿಸಿ, ಮಧ್ಯಮ ಕಲ್ಲು ಮತ್ತು ಮಣ್ಣಿನಿಂದ ಕೋಟೆ ಕೊತ್ತಲಗಳನ್ನು ನಿರ್ಮಿಸಿದನು.[೨೬೬]

ಮೈಸೂರು ಸಂಸ್ಥಾನದ ಅಧಿಪತ್ಯವನ್ನು ವಹಿಸಿದ ಹೈದರಾಲಿಯು ತಮ್ಮ ರಾಜ್ಯ ವಿಸ್ತರಣೆಯಲ್ಲಿ ರಾಜ್ಯದ ಹಲವಡೆ ತಮ್ಮ ಸೈನಿಕ ನೆಲೆಗಳನ್ನು ಇಡಲು ಹಲವು ಕೋಟೆ ಕೊತ್ತಲಗಳನ್ನು ವಶಪಡಿಸಿಕೊಳ್ಳ ಬೇಕಾಗುತ್ತದೆ. ಆದ್ದರಿಂದ ಭಸ್ಮಾಂಗಿ ದುರ್ಗವನ್ನು ವಶಪಡಿಸಿಕೊಂಡು, ಅಲ್ಲಿ ಸೈನಿಕ ನೆಲೆಯನ್ನು ಇಟ್ಟು ಸುತ್ತಲ ಕೋಟೆ ಕೊತ್ತಲಗಳನ್ನು ವಶಪಡಿಸಿಕೊಳ್ಳಬೇಕೆಂಬ ಉದ್ದೇಶ ಇಟ್ಟುಕೊಳ್ಳುತ್ತಾನೆ. ಹೈದರಾಲಿಯು ಕ್ರಿ.ಶ.೧೭೬೮ರಲ್ಲಿ ಭಸ್ಮಾಂಗಿ ದುರ್ಗವನ್ನು ಬೂದಿ ಬಸಪ್ಪನಾಯಕನಿಂದ ವಶಪಡಿಸಿ ಕೊಳ್ಳುತ್ತಾನೆ.[೨೬೭] ಭಸ್ಮಾಂಗಿದುರ್ಗದಲ್ಲಿ ಸೈನ್ಯವನ್ನು ನೆಲೆಗೊಳಿಸಲು ಯೋಗ್ಯವಾದ ಸ್ಥಳವೆಂದು ಭಾವಿಸಿ "ಇದ್ದ

ಕೋಟೆಯನ್ನು ಕೆಡವಿಸಿ, ಉತ್ತಮ ದರ್ಜೆಯ ರಚನೆಯಿಂದ ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ಅಭೇಧ್ಯವಾದ ಕೋಟೆಯನ್ನು ನಿರ್ಮಿಸಿದನು. ಅಲ್ಲದೆ ಅರಮನೆ, ಮಸೀದಿ, ನೀರಿನ ಸೌಕರ್ಯಕ್ಕಾಗಿ ದೊಣೆಗಳು ಹಾಗೂ ಇನ್ನಿತರೆ ಕಟ್ಟಡಗಳು ಈತನ ಕಾಲದಲ್ಲಿಯೇ ನಿರ್ಮಾಣಗೊಂಡವು."[೨೬೮] ಭಸ್ಮಾಂಗಿ ದುರ್ಗವು ಕೊನೆಯವರೆಗೂ ಮೈಸೂರು ಸಂಸ್ಥಾನದಲ್ಲಿಯೇ ಉಳಿದುಕೊಂಡಿತ್ತು.

ಭಸ್ಮಾಂಗಿ ಕೋಟೆಯ ಲಕ್ಷಣಗಳು

ಬೆಟ್ಟವನ್ನು ಬಳಸಿಕೊಂಡು ನಿರ್ಮಿಸಿರುವ ಕೋಟೆಯು ಗಿರಿದುರ್ಗಗಳ ಸಾಲಿಗೆ ಸೇರುತ್ತದೆ. ಕೋಟೆಯನ್ನು ಇಲ್ಲಿನ ಹಾಸುಬಂಡೆಗಳ ತಳಪಾಯದಿಂದ ನಿರ್ಮಿಸಲಾಗಿದೆ. ಈ ಬೆಟ್ಟದಲ್ಲಿ ಒಟ್ಟು ಎಂಟು ಸುತ್ತು ಕೋಟೆಯಿದ್ದು, ಈ ಕೋಟೆಗಳಿಗೆ ಒಂಬತ್ತು ಬಾಗಿಲುಗಳನ್ನು ಇಡಲಾಗಿದೆ. ಬೂದಿಬಸಪ್ಪ ಎಂಬ ಪಾಳೇಗಾರನು ಮಣ್ಣು ಮತ್ತು ಕಲ್ಲಿನಿಂದ ಕೋಟೆಯನ್ನು ನಿರ್ಮಿಸಿದ್ದನು. ಇದನ್ನು ಹೈದರ್ -ಟಿಪ್ಪು ಸುಲ್ತಾನರು ಪುನರ್ ನಿರ್ಮಿಸಿರಬಹುದೆಂದು ಇಲ್ಲಿರುವ ಮಸೀದಿಯಿಂದ ಊಹಿಸಬಹುದು. ಎಂಟುಸುತ್ತಿನ ಕೋಟೆಯಲ್ಲಿ ಮೂರು ಸುತ್ತನ್ನು ಪುನರ್ ನಿರ್ಮಾಣ ಮಾಡಿಲ್ಲದೇ ಇರುವುದರಿಂದ ಅದು ಹಾಳಾಗಿದೆ. ಪುನರ್ ನಿರ್ಮಾಣ ಮಾಡಿರುವ ಕೋಟೆ ಗೋಡೆಯ ಕೆಳಭಾಗದಲ್ಲಿ ಆಯತಾಕಾರದ ಕಲ್ಲುಗಳನ್ನು ಬಳಸಿದ್ದು, ಮೇಲ್ಭಾಗದಲ್ಲಿ ಮಧ್ಯಮಗಾತ್ರದ ಕಲ್ಲುಗಳನ್ನು ಉಪಯೋಗಿಸಿ, ಕೈಪಿಡಿ ಗೋಡೆಯನ್ನು ಇಟ್ಟಿಗೆ, ಗಾರೆಯಿಂದ ನಿರ್ಮಿಸಲಾಗಿದೆ. ಈ ಕೋಟೆಯಲ್ಲಿ ೧೬ ವೃತ್ತಾಕಾರದ ಕೊತ್ತಲಗಳು ಮತ್ತು ನಾಲ್ಕು ಚೌಕಾಕಾರದ ಕೊತ್ತಲಗಳನ್ನು ಕಾಣಬಹುದಾಗಿದೆ. ಇವುಗಳನ್ನು ಬೆಟ್ಟದ ಮತ್ತು ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಇವುಗಳಿಗೆ ಶಸ್ತ್ರಾಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗುವಂತೆ ಇಳಿಜಾರಾದ ರಹದಾರಿಯನ್ನು ಬಿಡಲಾಗಿದೆ. ಇವು ಶತ್ರುಗಳ ಬರುವಿಕೆಯನ್ನು ಗ್ರಹಿಸಲು ಮತ್ತು ಕೋಟೆಯನ್ನು ರಕ್ಷಣೆ ಮಾಡವ ಉದ್ದೇಶದಿಂದಾಗಿ ಕೋಟೆ ಗೋಡೆಗಿಂತ ಎತ್ತರವಾಗಿ ನಿರ್ಮಿಸಿದ್ದಾರೆ. ಕೊತ್ತಲಗಳಿಗೆ ಕ್ರಮವಾಗಿ ಮತ್ತು ಮೂರು ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಕೋಟೆಯ ಕೈಪಿಡಿ ಗೋಡೆಯಲ್ಲಿ ಬಂದೂಕು ಕಿಂಡಿಗಳನ್ನು ಅಳವಡಿಸಲಾಗಿದೆ.

ಭಸ್ಮಾಂಗಿಯ ಊರು ಬೆಟ್ಟದ ತಪ್ಪಲಿನ ಸ್ವಲ್ಪ ಮೇಲ್ಭಾಗದಲ್ಲಿದ್ದು, ಸುಮಾರು ಐವತ್ತು ಮನೆಗಳಿವೆ. ಈ ಊರು ಪ್ರಾರಂಭದಲ್ಲಿ ಮೊದಲನೆ ಕೋಟೆಯೊಳಗಿದ್ದು, ನಂತರ ಸ್ವಲ್ಪ ಬೆಟ್ಟದ ಕೆಳಭಾಗದಲ್ಲಿ ಬಂದು ನೆಲೆಸಿದ್ದಾರೆ. ಮೊದಲ ಕೋಟೆಯ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದೆ. ಇದರ ಬಲಭಾಗದಲ್ಲಿ ಸೈನಿಕರ ವಿಶ್ರಾಂತಿ ತಾಣವಿದೆ. ಈ ಕೋಟೆಯು ಎರಡನೇ ಕೋಟೆಯ ಗೋಡೆಗೆ ಸಂಧಿಸಿದೆ. ಪ್ರವೇಶದ್ವಾರದಿಂದ ಮುಂದೆ ಸಾಗಿದರೆ ಎಡಭಾಗಕ್ಕೆ ಮತ್ತು ಬಲಭಾಗಕ್ಕೆ ಹಳೇ ಊರಿನ ಪಾಳುಬಿದ್ದ ವಸತಿ ಗೃಹಗಳನ್ನು ಕಾಣಬಹುದು. ದಿನನಿತ್ಯದಲ್ಲಿ ಜನರು ಬಳಸುತ್ತಿದ್ದ ಒಳಕಲ್ಲು ಮತ್ತು

ರಾಗಿಕಲ್ಲುಗಳು ಅಲ್ಲಲ್ಲಿ ಬಿದ್ದಿರುವುದು ಕಂಡುಬರುತ್ತದೆ. ಎರಡನೇ ಕೋಟೆಯ ಬಾಗಿಲು ಪೂರ್ವದಿಕ್ಕಿಗಿದೆ. ಇದರ ಎಡಭಾಗಕ್ಕೆ ಒಂದು ಕೊತ್ತಲವಿದೆ. ಇದು ಶಿಥಿಲಗೊಂಡಿದೆ. ಇಲ್ಲಿಂದ ಮುಂದೆ ಸಾಗಿದರೆ ಎಡ ಭಾಗದಲ್ಲಿ ಒಂಟಿಯಾಗಿರುವ ಚೌಕಕಾರದ ಬತೇರಿಯಿದ್ದು, ಅದರ ಅವಶೇಷ ಮಾತ್ರ ಕಾಣಬಹುದು. ಮೂರನೇ ಕೋಟೆಯು ಅಭೇದ್ಯವಾಗಿದ್ದು, ಇದರೊಳಗೆ ವಿಶಾಲ ಪ್ರದೇಶವನ್ನು ಹೊಂದಿದೆ. ಈ ಕೋಟೆಗೆ ಮೂರು ಬಾಗಿಲಿದ್ದು, ಒಂದು ಭಸ್ಮಾಂಗಿ ಊರಿನಿಂದ ಪ್ರವೇಶ ಪಡೆಯಲು, ಈಶಾನ್ಯ ದಿಕ್ಕಿಗೆ ನಿರ್ಮಿಸಿರುವ ಬಾಗಿಲು ಮಧುಡಿ ಊರು ಬಾಗಿಲಾಗಿದ್ದು, ಇನ್ನೊಂದು ಸಿರಾದ ಕಡೆಗೆ ಇಟ್ಟಿರುವುದರಿಂದ ಸಿರಾದ ಊರು ಬಾಗಿಲೆಂದು ಕರೆಯಲಾಗಿದೆ. ಕೊನೆಯ ಎರಡು ಬಾಗಿಲುಗಳು ಚಿಕ್ಕ ಬಾಗಿಲಾಗಿವೆ. ಭಸ್ಮಾಂಗಿ ಊರಿನಿಂದ ಬರುವ ಬಾಗಿಲು ದೊಡ್ಡದಾಗಿದ್ದು, ಇದರ ಕಂಬಗಳಿಗೆ ಆಮೆ, ಮೀನು, ಹೂವಿನ ಚಿತ್ರದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಒಳಭಾಗದಲ್ಲಿ ಎರಡು ಕಡೆಗೂ ಮಂಟಪವನ್ನು ನಿರ್ಮಿಸಲಾಗಿದೆ. ಇದು ಸಮನಾಗಿ ನಾಲ್ಕು ನಾಲ್ಕು ಕಂಬಗಳ ಆಧಾರದಿಂದ ನಿರ್ಮಿಸಲಾಗಿದೆ. ಈ ಕೋಟೆಗೆ ಎಂಟು ವೃತ್ತಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ಕೋಟೆ ಗೋಡೆಯ ಮೇಲೆ ಪಹರೆ ಮಾಡಲು ಸ್ಥಳವನ್ನು ಬಿಡಲಾಗಿದೆ. ಇಲ್ಲಿನ ಮೂರು ಕೊತ್ತಲಗಳಿಗೆ ಫಿರಂಗಿಯನ್ನು ಸಾಗಿಸಲು ಇಳಿಜಾರಾದ ರಹದಾರಿ ಬಿಡಲಾಗಿದೆ. ವಿಶೇಷವೆಂಬಂತೆ ಈ ಕೋಟೆಯ ಕೈಪಿಡಿ ಗೋಡೆಯಲ್ಲಿ(ಸಿರಾದ ಬಾಗಿಲ ಪಕ್ಕದಲ್ಲಿ) ಸೈನಿಕರಿಗಾಗಿ ಶೌಚಾಲಯವನ್ನು ನಿರ್ಮಿಸಲಾಗಿದೆ. ಈ ಕೋಟೆಯ ಸ್ವಲ್ಪ ಕೆಳಭಾಗದಲ್ಲಿ ಮಣ್ಣು ಕಲ್ಲುನಿಂದ ನಿರ್ಮಿಸಿದ ಕೋಟೆಯಿದೆ. ಇದು ಈಗ ಶಿಥಿಲಗೊಂಡಿದೆ.

ಮೂರನೇ ಕೋಟೆಯ ಒಳಭಾಗದಲ್ಲಿ ವಿಶಾಲವಾದ ಪ್ರದೇಶವಿದ್ದು, ಅದರಲ್ಲಿ ಎಮ್ಮೆದೋಣೆ ಅದರ ಮೇಲ್ಭಾಗದಲ್ಲಿ ಬರಗಾಲ ತರಿಸುವ ಆಂಜನೇಯನ ಗುಡಿ, ಮಸೀದಿ, ಕಡೆಗಾಪುವಿನೊಳಗೆ ಇರುವ ಬಸವಣ್ಣನ ಗುಡಿ, ಅದರ ಹಿಂದೆ ಪಾಳುಬಿದ್ದಿರುವ ಮನೆಗಳು, ಇದರ ಪಕ್ಕದಲ್ಲಿಯೇ ಸದಾಕಾಲ ನೀರು ತುಂಬಿರುವ ದೇವರದೋಣೆಯನ್ನು ಕಾಣಬಹುದು. ಇಲ್ಲಿ ಹಾಲಿನ ಎಮ್ಮೆದೋಣೆ ಇದೆ. ಇದಕ್ಕೆ ಊರಿನ ಎಮ್ಮೆಯ ಹಾಲನ್ನು ತಂದು ಹಾಕುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ದೋಣೆಗೆ 'ಎಮ್ಮೆಹಾಲಿನ ದೋಣೆ' ಎನ್ನುತ್ತಾರೆ. ಇದರ ಮೇಲ್ಭಾಗದಲ್ಲಿ ಆಂಜನೇಯನ ಗುಡಿಯಿದೆ ಒಂದು ಮಹಿಳೆ ಇದನ್ನು ಪ್ರತಿಷ್ಠಾಪಿಸುವಾಗ ಆಸಕ್ತಿಯಿಂದ ಪೂಜೆ ಮಾಡಿದಳು. ಅಂದಿನಿಂದ ಬರಗಾಲ ಬಂದಿತು. ಅದಕ್ಕೆ ಬರಗಾಲ ತರಿಸುವ ಆಂಜನೇಯ ಎಂದು ಸ್ಥಳೀಯರು ಕರೆಯುತ್ತಾರೆ. ಅಂದಿನಿಂದ ಈಗಿನವರೆಗೂ ಈ ಅಂಜನೇಯನನ್ನು ಯಾರೂ ಪೂಜಿಸುವುದಿಲ್ಲ. ಇಲ್ಲಿಂದ ಮುಂದೆ ಸಾಗಿದರೆ ಬಲಭಾಗದಲ್ಲಿ ಚೌಕಾಕಾರವಾಗಿ ನಿರ್ಮಿಸಿದ ಎತ್ತರವಾದ ಗೋಡೆಯಿದೆ. ಇದರೊಳಗೆ ಒಂದು ಬಸವಣ್ಣನ ವಿಗ್ರಹವಿದೆ. ಇದು ಯಾವಾಗಲೂ ಕೂಗುತ್ತಿತ್ತೆಂದು, ಇದರ ಕೂಗು ಸಿರಾದ ರಂಗಣ್ಣನ ಕಾವಲಿಗೆ ಕೇಳಿಸುತ್ತಿತ್ತು ಎಂದು ಹೇಳುತ್ತಾರೆ. ಈಗ ಇದಕ್ಕೆ ಗುಡಿಯನ್ನು ನಿರ್ಮಿಸಿದ್ದಾರೆ. ಇದರ ಮುಂಭಾಗದಲ್ಲಿ ಮಸೀದಿಯನ್ನು ನಿರ್ಮಿಸಿದ್ದಾರೆ. ಇದು ಸುಸ್ಥಿತಿಯಲ್ಲಿದೆ. ಇಲ್ಲಿಯೇ ಒಂದು ದೋಣೆಯಿದೆ. ಇದರಲ್ಲಿ ಸದಾ ನೀರು

ತುಂಬಿರುತ್ತದೆ. ಈ ದೊಣೆಯಲ್ಲಿ ಸುತ್ತಮುತ್ತಲ ಜನಸಮುದಾಯಗಳ ದೇವರುಗಳನ್ನು ಹಬ್ಬ ಹರಿದಿನಗಳಲ್ಲಿ ತಂದು ಜಲಧಿಯನ್ನು ಮಾಡಿಸುತ್ತಾರೆ. ಆ ಹಿನ್ನೆಲೆಯಲ್ಲಿ ಈ ದೊಣೆಗೆ 'ದೇವರ ದೊಣೆ' ಅಥವಾ 'ಜಲಧಿ ದೊಣೆ' ಎಂದು ಹೇಳುತ್ತಾರೆ.

ನಾಲ್ಕನೇ ಕೋಟೆಯು ಚಿಕ್ಕದಾಗಿದ್ದು, ಇದು ಐದನೇ ಕೋಟೆಗೆ ಹೊಂದಿಕೊಂಡಿದೆ. ಇದರ ದ್ವಾರವು ಉತ್ತರ ದಿಕ್ಕಿಗಿದೆ. ಇಲ್ಲಿಂದ ಮುಂದೆ ಸಾಗಿದರೆ ಐದನೇ ಕೋಟೆ ಬಾಗಿಲಿದೆ. ಇದರ ಒಳಭಾಗದ ಇಕ್ಕೆಲಗಳಲ್ಲಿ ಮಂಟಪಗಳಿವೆ. ಈ ಕೋಟೆಯಲ್ಲಿ ಮೂರು ಕೊತ್ತಲಗಳಿವೆ. ಇವು ಬಂಡೆಯಿಂದ ಎತ್ತರದ ಪ್ರದೇಶದಲ್ಲಿವೆ. ಎರಡು ಕೊತ್ತಲಗಳಿಗೆ ಫಿರಂಗಿ ಸಾಗಿಸಲು ಇಳಿಜಾರಾದ ರಹದಾರಿ ಬಿಡಲಾಗಿದೆ. ಬಂಡೆಯ ಮಧ್ಯದಲ್ಲಿ ಎರಡು ಜೋಡಿ ಪಾದಗಳಿವೆ. ಇವು ಈ ಕೋಟೆಯನ್ನು ನಿರ್ಮಿಸಿದ ತಂದೆ-ಮಗನ ಪಾದಗಳು ಎಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿ ಆರು ಮತ್ತು ಏಳನೇ ಕೋಟೆಯಿದ್ದು, ಅದರ ಮಧ್ಯೆ ಪಾಳೇಗಾರರು ವಾಸಿಸುತ್ತಿದ್ದ ಅರಮನೆಯಿದೆ. ಇದು ಶಿಥಿಲಗೊಂಡಿದೆ. ಏಳನೇ ಕೋಟೆಯು ಕೊನೆಯದಾಗಿದ್ದು, ಇದರ ಬಾಗಿಲು ಉತ್ತರ ದಿಕ್ಕಿಗಿದೆ. ಇದರ ಒಳಭಾಗದಲ್ಲಿ ಮಂಟಪಗಳಿವೆ. ಈ ಕೋಟೆಗೆ ಹೊಂದಿಕೊಂಡಂತೆ ಎಡಭಾಗದಲ್ಲಿ ಎರಡು ಕಣಜಗಳನ್ನು ನಿರ್ಮಿಸಲಾಗಿದೆ. ಅವು ಸುಸ್ಥಿತಿಯಲ್ಲಿದ್ದು, ಸುತ್ತಲೂ ಕಲ್ಲು ಮತ್ತು ಗಾರೆಯಿಂದ ಕಟ್ಟಲಾಗಿದೆ. ಇದರ ಒಳಭಾಗದಲ್ಲಿ ಮೇಲ್ಛಾವಣಿಯನ್ನು ಹೊರಲು ಚೌಕಾಕಾರದ ಕಂಬಗಳನ್ನು ನಿಲ್ಲಿಸಲಾಗಿದೆ.

ಇಲ್ಲಿಂದ ಮುಂದೆ ಸಾಗಿದರೆ ಬಲಭಾಗದಲ್ಲಿ ಇಕ್ಕಟ್ಟಾದ ಪ್ರದೇಶದಲ್ಲಿ ಒಂದು ಸುಂದರ ಗೃಹವಿದೆ. ಇದರಲ್ಲಿ ಪಾಳೇಗಾರನ ಸೂಳೆಯು ವಾಸವಾಗಿದ್ದಳೆಂದು ಸ್ಥಳೀಯರು ಹೇಳುತ್ತಾರೆ. ಇದನ್ನು ಗಾರೆ, ಇಟ್ಟಿಗೆಯಿಂದ ನಿರ್ಮಿಸಿದೆ. ಇದರ ಒಳಗೆ ಕತ್ತಲನ್ನು ಹೋಗಲಾಡಿಸಲು ದೀಪದ ಗೂಡುಗಳಿವೆ. ಇದರ ಪಕ್ಕದಲ್ಲಿಯೇ ಕುದುರೆಲಾಯವಿದೆ. ಇಲ್ಲಿ ಕುದುರೆಗಳನ್ನು ಕಟ್ಟುತ್ತಿದ್ದರು ಎನ್ನುತ್ತಾರೆ. ಇದೇ ಪ್ರದೇಶದಲ್ಲಿ ಅಲ್ಲಲ್ಲಿ ಪಾಳುಬಿದ್ದ ವಸತಿ ಗೃಹಗಳನ್ನು ಕಾಣಬಹುದು. ಈ ಕೋಟೆಗೆ ಆಯಾಕಟ್ಟಿನ ಜಾಗದಲ್ಲಿ ಮೂರು ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಸೈನಿಕರು ಉಳಿದುಕೊಳ್ಳಲು ಗೂಡುಗಳಿವೆ. ಈ ಕೋಟೆಯ ಸ್ವಲ್ಪ ಕೆಳಭಾಗಕ್ಕೆ ಹೋದರೆ ಪಶ್ಚಿಮ ದಿಕ್ಕಿನಲ್ಲಿ ಅಕ್ಕತಂಗಿಯರ ದೊಣೆಯಿದೆ. ಇದನ್ನು ಸುತ್ತುವರೆದ ಕೋಟೆಗೆ ಮೂರು ಕೊತ್ತಲಗಳಿವೆ. ಇವು ನೈರುತ್ಯದಿಕ್ಕಿನಿಂದ ಬರುವ ಶತ್ರುಗಳ ವೀಕ್ಷಣೆಗಾಗಿ ನಿರ್ಮಿಸಲಾಗಿದೆ.

ಕೋಟೆಯೊಳಗಿರುವ ದೇವಾಲಯಗಳು

ಇಲ್ಲಿನ ಪಾಳೇಗಾರನು ಬಹುದೊಡ್ಡದೆನಿಸುವ ಯಾವುದೇ ದೇವಾಲಯವನ್ನು ನಿರ್ಮಿಸಿಲ್ಲ. ಬೆಟ್ಟದ ಮಧ್ಯಭಾಗದಲ್ಲಿರುವ ಬೃಹತ್ ಬಸವಣ್ಣನ ವಿಗ್ರಹವನ್ನು ಇಲ್ಲಿನ ಪಾಳೇಗಾರನು ನಿರ್ಮಿಸಿದ್ದು, ಇದಕ್ಕೆ ಸುತ್ತಲೂ ಎತ್ತರವಾದ ಸುತ್ತುಗೋಡೆಯನ್ನು ಸಣ್ಣ ಸಣ್ಣ ಒರಟು ಕಲ್ಲುಗಳಿಂದ ನಿರ್ಮಿಸಲಾಗಿದೆ. ಇಲ್ಲಿನ

ಬಸವಣ್ಣನು ರಂಗಣ್ಣ ಕಾವಲಿಗೆ ಮೇಯಲು ಹೋಗುತ್ತಿತ್ತು. ಅದು ಅಲ್ಲಿಂದ ರೈತರ ಗದ್ದೆಗಳಲ್ಲಿ ಮೇಯ್ದು ಬರುತ್ತಿತ್ತು. ಇದರ ತೊಂದರೆಯಿಂದ ರೈತರು ಪಾಳೇಗಾರರಲ್ಲಿ ಮನವಿ ಸಲ್ಲಿಸುತ್ತಾರೆ. ಇದರಿಂದ ಕೋಪಗೊಂಡ ಪಾಳೇಗಾರನು ಸರಪಳಿಯಿಂದ ಕಟ್ಟಿ ಹಾಕಿದನು. ನಂತರ ಅದು ಕಲ್ಲಾಯಿತೆಂದು ಜನರ ಅಭಿಪ್ರಾಯ ಅಂದಿನಿಂದ ಬಸವಣ್ಣನು ಕೂಗುತ್ತಿದ್ದನು. ಆ ಹಿನ್ನೆಲೆಯಲ್ಲಿ ಇದಕ್ಕೆ 'ಕೂಗು ಬಸವ' ಎಂದು ಸ್ಥಳೀಯರು ಕರೆಯುತ್ತಾರೆ. ಈ ಬಸವಣ್ಣನಿಗೆ ಈಗ ಒಂದು ಚಿಕ್ಕಗುಡಿಯನ್ನು ಕಟ್ಟಿ ಜೀರ್ಣೋದ್ಧಾರ ಮಾಡುತ್ತಿದ್ದಾರೆ.

ಭಸ್ಮಾಂಗೀಶ್ವರ ದೇವಾಲಯ : ಈ ದೇವಾಲಯವು ಬೆಟ್ಟದ ಬುಡದ ಉತ್ತರ ದಿಕ್ಕಿನಲ್ಲಿದೆ. ಇದನ್ನು ಸಿರಾದ ರಂಗಪ್ಪನಾಯಕನು ನಿರ್ಮಿಸಿದನೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ದೇವಾಲಯದ ಗರ್ಭಗುಡಿಯಲ್ಲಿ ಒಂದು ಲಿಂಗವಿದ್ದು, ಇದರ ಮುಂಭಾಗದಲ್ಲಿ ಒಂದು ಗುಂಡಿನಾಕಾರದ ಕಲ್ಲು ಇದೆ. ಇದನ್ನು ಸಿರಾದ ರಂಗಪ್ಪನಾಯಕನ ತಲೆಯೆಂದು ಹೇಳುತ್ತಾರೆ. ಸಿರಾದ ರಂಗಪ್ಪನಾಯಕನು ಪುವ್ವಲ ಕೆಂಗನೊಂದಿಗೆ ಹೋರಾಡುವಾಗ ಆತನು ರಂಗಪ್ಪನಾಯಕನ ತಲೆಯನ್ನು ಕಡಿದನು. ಅದು ತನ್ನ ಮನೆದೇವರಾದ ಭಸ್ಮಾಂಗೀಶ್ವರ ದೇವಾಲಯದಲ್ಲಿ ನೆಲೆಸಿತೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ.

ಕೋಟೆಯ ಮಹತ್ವ

ಒಂದು ರಾಜ್ಯದ ಅಳಿವು ಉಳುವಿಗೆ ರಾಜನ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಕೋಟೆಗಳ ಪಾತ್ರವು ಮುಖ್ಯವಾಗುತ್ತದೆ. ಅಂತದರಲ್ಲಿ ಭಸ್ಮಾಂಗಿಯ ಕೋಟೆಯು ಮಹತ್ವದ ಅಭೇಧ್ಯವಾದ ಕೋಟೆಯಾಗಿದೆ. ಮೊದಲಿದ್ದ ಮಣ್ಣು ಕಲ್ಲಿನ ಕೋಟೆಯನ್ನು ಮತ್ತೆ ಹೈದರ್-ಟಿಪ್ಪುಸುಲ್ತಾನರು ಗಾರೆ, ದಪ್ಪಕಲ್ಲು, ಇಟ್ಟಿಗೆಯಿಂದ ಅಭೇಧ್ಯವಾದ ಕೋಟೆಯನ್ನು ನಿರ್ಮಿಸಿದ್ದಾರೆ. ಅದರ ಜೊತೆಗೆ ಸುಸಜ್ಜಿತವಾದ ವ್ಯವಸ್ಥೆಯುಳ್ಳ ಕೊತ್ತಲಗಳು ಸಹ ಇಲ್ಲಿವೆ. ಇವನ್ನು ಕೋಟೆಯ ಆಯಾಕಟ್ಟಿನ ಸ್ಥಳದಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯು ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ವಿಶೇಷವೆಂದು ಪರಿಗಣಿಸುವ ಭಸ್ಮಾಂಗಿ ಕೋಟೆಯು ಅಭೇಧ್ಯ ಕೋಟೆಯೆನ್ನಬಹುದು.

ಅಡಿಟಿಪ್ಪಣಿಗಳು

೧. ಡಾ. ಸಿ.ಎಂ.ಲಕ್ಷ್ಮಣ, *ತುಮಕೂರು ಜಿಲ್ಲೆಯ ಭೌಗೋಳಿಕ ಲಕ್ಷಣಗಳು,* ಜಯಮಂಗಲಿ, ಸ್ಮರಣಸಂಚಿಕೆ, ಪು.೧, ೨೦೦೨

೨. ಡಾ.ಕೆ.ಬಿ.ಶಿವತಾರಕ್, ತುಮಕೂರು ಜಿಲ್ಲೆಯ ಪ್ರಾಗಿತಿಹಾಸ, ಪು.೬

೩. ಅದೇ, ಪು.೧೦

೪. ಅದೇ, ಪು.೧೦

೫. ಅದೇ, ಪು.೧೨

೬. ಅದೇ, ಪು.೧೪

೭. ಅದೇ, ಪು.೧೪,೧೫

೮. ಎಫಿಗ್ರಾಫಿ ಆಫ್ ಕರ್ನಾಟಕ, ಸಂಪುಟ ೧೨, ಪಾವಗಡ ತಾಲ್ಲೂಕು

೯. ಎಫಿಗ್ರಾಫಿ ಆಫ್ ಕರ್ನಾಟಕ, ಸಂಪುಟ ೧೨, ಸಿರಾ ೨೭, ಮಿಡಿಗೇಶಿ ೨೭, ೨೯, ೪೨

೧೦. ಪ್ರೊ.ಜಿ.ಎಂ.ಶ್ರೀನಿವಾಸಯ್ಯ, *ತುಮಕೂರು ಜಿಲ್ಲೆಯ ಸಂಕ್ಷಿಪ್ತ ಇತಿಹಾಸ, ವಿಜಯನಗರದವರೆಗೆ ಜಯಮಂಗಲಿ,* ಸ್ಮರಣಸಂಚಿಕೆ, ಪು.೨೦

೧೧. ಡಾ.ಎಂ.ವಿ.ವಸು(ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು.೨೪೨, ೨೦೦೧

೧೨. ಅದೇ, ಪು.೨೪೬

೧೩. ಕೆ.ನಾರಾಯಣಚಾರ್, ಮಧುಗಿರಿ ಚರಿತ್ರೆ, ಪು.೨೧, ೧೯೪೫

೧೪. ಕೆ.ಆರ್.ಬಸವರಾಜು, ಎಸ್.ಪರಶಿವಮೂರ್ತಿ(ಸಂ), ಮಹಾನಾಡ ಪ್ರಭುಗಳು, ಪು.೭, ೧೯೯೫

೧೫. ಎಂ.ಡಿ.ಶ್ರೀನಿವಾಸ, ಮಧುಗಿರಿ ಇತಿಹಾಸ, ಪು.೧೮, ೧೯೮೭

೧೬. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೨೩

೧೭. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೨೦

೧೮. ಅದೇ, ಪು.೨೧

೧೯. ಕೆ.ನಾರಾಯಣಚಾರ್, ಪೂರ್ವೋಕ್ತ, ಪು.೧೬

೨೦. ಎಂ.ಎಂ.ಕಲಬುರ್ಗಿ(ಸಂ), ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ೧೯೭೭

೨೧. ಎ.ಕ.ಸಂಪುಟ ೧೨, ಮಧುಗಿರಿ ೨೧

೨೨. ಡಾ.ಎಂ.ವಿ.ವಸು, ಪೂರ್ವೋಕ್ತ, ಪು.೨೨೮

೨೩. ಎಂ.ಎಂ.ಕಲಬುರ್ಗಿ(ಸಂ), ಪೂರ್ವೋಕ್ತ, ಸಂಧಿ ೧೩

೨೪. ಕೆ.ನಾರಾಯಣಚಾರ್, ಪೂರ್ವೋಕ್ತ, ಪು.೨೧

೨೫. ಅದೇ, ಪು.೨೨

೨೬. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೭೮

೨೭. ಕೆ.ನಾರಾಯಣಚಾರ್, ಪೂರ್ವೋಕ್ತ, ಪು.೩೫

೨೮. ಅದೇ, ಪು.೩೬, ೩೭

೨೯. ಅದೇ, ಪು.೨೯

೩೦. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೨೯

೩೧. ಅದೇ, ಪು.೨೯

೩೨. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೪೭

೩೩. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೩೦

೩೪. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೫೧

೩೫. ಅದೇ, ಪು.೫೨

೩೬. ಅದೇ, ಪು.೫೩

೩೭. ಅದೇ, ಪು.೫೩

೩೮. ಅದೇ, ಪು.೫೭

೩೯. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೫೫

೪೦. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೩೪

೪೧. ಡಾ.ಎಂ.ವಿ.ವಸು, ಪೂರ್ವೋಕ್ತ, ಪು.೨೩೧

೪೨. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೬೧, ೬೨

೪೩. ಕೆ.ಆರ್.ಬಸವರಾಜ, ಪೂರ್ವೋಕ್ತ, ಪು.೭೩

೪೪. ಡಾ.ಎಂ.ವಿ.ವಸು, ಪೂರ್ವೋಕ್ತ, ಪು.೨೩೨

೪೫. ಅದೇ, ಪು.೨೩೨

೪೬. ಕೆ.ಆರ್.ಬಸವರಾಜ, ಪೂರ್ವೋಕ್ತ, ಪು.೭೪

೪೭. ಅದೇ, ಪು.೭೪

೪೮. ಅದೇ, ಪು.೭೫

೪೯. ಅದೇ, ಪು.೭೬

೫೦. ಎಂ.ಎ.ಆರ್.ಪು.೫೬, ೧೯೧೮

೫೧. ಡಾ.ಡಿ.ವಿ.ಪರಮಶಿವಮೂರ್ತಿ, ಸಂಶೋಧನಾ ೩೦, ಪು.೪೨, ೧೯೯೬

೫೨. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೫೬

೫೩. ಅದೇ, ಪು.೫೩

೫೪. ಅದೇ, ಪು.೫೬

೫೫. ಕೆ.ಆರ್.ಬಸವರಾಜ, ಪೂರ್ವೋಕ್ತ, ಪು.೭೪

೫೬. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೭೨

೫೭. ಅದೇ, ಪು.೭೩

೫೮. ಕೆ.ನಾರಾಯಣಚಾರ್, ಪೂರ್ವೋಕ್ತ, ಪು.೨೨

೫೯. ಎಂ.ಎಂ.ಕಲಬುರ್ಗಿ(ಸಂ), ಪೂರ್ವೋಕ್ತ, ಪು.x, xii

೬೦. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೪೦

೬೧. ಕರ್ನಾಟಕದ ಗೆಜೆಟಿಯರ್ ೩

೬೨. ನೀ.ಕೃ.ರಾಮಶೇಷನ್, ಕರ್ನಾಟಕದ ಕೋಟೆಗಳು, ಪು.೧೬

೬೩. ಎಂ.ಡಿ.ಶ್ರೀನಿವಾಸನ, ಪೂರ್ವೋಕ್ತ, ಪು.೫೫

೬೪. ಅದೇ, ಪು.೫೬

೬೫. ಕೆ.ಆರ್.ಬಸವರಾಜು, ಪೂರ್ವೋಕ್ತ, ಪು.೭೭

೬೬. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೪೬

೬೭. ಎ.ಕ.ಸಂಪುಟ ೧೨, ಮಿಡಿಗೇಶಿ ೮೮

೬೮. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೪೬

೬೯. ಎ.ಕ.ಸಂಪುಟ ೧೨, ಮಿಡಿಗೇಶಿ ೮೮, ೯೧

೭೦. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೯೩

೭೧. ಎ.ಕ.ಸಂಪುಟ ೧೨, ಮಿಡಿಗೇಶಿ ೮೯

೭೨. ಕೆ.ನಾರಾಯಣಚಾರ್, ಪೂರ್ವೋಕ್ತ, ಪು.೨೨

೭೩. ಬುಖನನ್, ಸಂಪುಟ ೨, ಪು.೨

೭೪. ಮಧುಗಿರಿ ಮಹಾನಾಡ ಪ್ರಭುಗಳ ವಂಶಾವಳಿ ೪, ಪು.೩೭

೭೫. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೫೧

೭೬. ಎಂ.ಎ.ಆರ್, ಪು.೩೯, ೧೯೪೬

೭೭. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೫೨

೭೮. ಅದೇ, ಪು.೨೫೨

೭೯. ಅದೇ, ಪು.೨೫೨

೮೦. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೫೨

೮೧. ಅದೇ, ಪು.೨೫೩

೮೨. ಮೈಸೂರು ರಾಜ್ಯ ಗೆಜೆಟಿಯರ್ ೨, ಪು.೫೧೩, ೫೧೪

೮೩. ಕೆ.ಆರ್.ಬಸವರಾಜ, ಪೂರ್ವೋಕ್ತ, ಪು.೭೮

೮೪. ಅದೇ, ಪು.೭೮

೮೫. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೨೫೩

೮೬. ಅದೇ, ಪು.೨೫೩

೮೭. ಎನ್.ಪದ್ಮನಾಭ, ಕೊರಟಗೆರೆ ವಾರ್ತೆ, ವಿಶೇಷ ಸಂಚಿಕೆ, ೧೯೯೭

೮೮. ಎನ್.ಪದ್ಮನಾಭ, ಆಗ್ನೇಯವಾಣಿ, ೨೦೦೦

೮೯. ಎಂ.ಡಿ.ಶ್ರೀನಿವಾಸ, ಪೂರ್ವೋಕ್ತ, ಪು.೩೭

೯೦. ಎನ್.ಪದ್ಮನಾಭ, ಪೂರ್ವೋಕ್ತ, ೧೯೯೭

೯೧. ಅದೇ, ೧೯೯೭

೯೨. ಪ್ರೊ. ಲಕ್ಷ್ಮಣ್ ತೆಲಗಾವಿ(ಸಂ), ಹರತಿಸಿರಿ, ಪು.೨೦೬, ೧೯೮೭

೯೩. ವಕ್ತೃ : ಪೈಲವಾನ್ ರಂಗಣ್ಣ, ಸಿರಾ

೯೪. ಎ.ಕ.ಸಂ.೧೨, ಸಿರಾ ೭, ಕ್ರಿ.ಶ.೧೧೨೬

೯೫. ಎ.ಕ.ಸಂ.೧೨, ಸಿರಾ ೮, ಕ್ರಿ.ಶ.೧೩೩೭, ಸಿರಾ ೧೯, ಕ್ರಿ.ಶ.೧೩೪೧ ಮತ್ತು ಸಿರಾ ೫೪, ಕ್ರಿ.ಶ.೧೫೨೬

೯೬. ಮೆಕಂಜಿ, ಮೆಮೋರಿಸ್ ಆಫ್ ದಿ ವಾರ್ತನ್ ಪರಗಣಾಸ್ ಆಫ್ ಮೈಸೂರು, ೧೮೦೦

೯೭. ಎ.ಕ.ಸಂ.೧೨, ಮದ್ದಗಿರಿ ೧೦, ಕ್ರಿ.ಶ.೧೫೬೯

೯೮. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೧೮೬

೯೯. ಎ.ಕ.ಸಂಪುಟ ೧೦, ಹಿರಿಯೂರು ೬, ಕ್ರಿ.ಸ.೧೫೯೨

೧೦೦. ಎ.ಕ.ಸಂ.೧೨, ಸಿರಾ ೫೩, ಕ್ರಿ.ಶ.೧೫೮೦

೧೦೧. ಎ.ಕ.ಸಂ.೧೨, ಸಿರಾ ೫೪, ಕ್ರಿ.ಶ.೧೬೨೧

೧೦೨. ಎ.ಕ.ಸಂ.೧೨, ಸಿರಾ ೬೪, ಕ್ರಿ.ಶ.೧೬೨೬

೧೦೩. ಎ.ಕ.ಸಂ.೧೨, ಸಿರಾ ೬೪, ಕ್ರಿ.ಶ.೧೬೨೧

೧೦೪. ಪ್ರೊ.ಲಕ್ಷ್ಮಣ್ ತೆಲಗಾವಿ(ಸಂ), ಪೂರ್ವೋಕ್ತ, ಪು.೨೧೫

೧೦೫. ಎಂ.ಎಸ್.ಪುಟ್ಟಣ್ಣ, ಚಿತ್ರದುರ್ಗದ ಪಾಳೇಗಾರರು, ಪು.೧೯, ೧೯೨೪

೧೦೬. ಅದೇ, ಪು.೨೦, ೨೧

೧೦೭. ಎಚ್.ವಿ.ವೀರನಾಯಕ, ಗುಮ್ಮನಹಳ್ಳಿ ಕದನ, ಪು.೧೯, ೧೯೮೩

೧೦೮. ಪ್ರೊ. ಲಕ್ಷ್ಮಣ್ ತೆಲಗಾವಿ (ಸಂ), ಪೂರ್ವೋಕ್ತ, ಪು.೩೧೫

೧೦೯. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೧೯೩

೧೧೦. ಬಿ.ಎಲ್.ರೈಸ್, ಮೈಸೂರು ಗೆಜೆಟಿಯರ್ ೨, ಪು.೨೭

೧೧೧. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೧೯೫

೧೧೨. ಅದೇ, ಪು.೧೯೫

೧೧೩. ಎ.ಕ.ಸಂ.೧೨, ಸಿರಾ ೧೫, ೯೮, ೯೯ ಮತ್ತು ೧೬೮

೧೧೪. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೧೯೬

೧೧೫. ಮೆಕೆಂಜೆ, ಪೂರ್ವೋಕ್ತ, ೧೮೦೦

೧೧೬. ಡಾ.ಡಿ.ಎನ್.ಯೋಗೀಶ್, *ಸಿರಾದ ನವಾಬರು,* ಇತಿಹಾಸ ದರ್ಶನ ೧೩, ಪು.೨೭೫, ೧೯೯೮

೧೧೭. ಕರ್ನಾಟಕ ವಿಷಯ ವಿಶ್ವಕೋಶ, ಪು.೧೪೧೧

೧೧೮. ಬಿ.ಎಲ್.ರೈಸ್, ಪೂರ್ವೋಕ್ತ, ಪು.೧೯೯

೧೧೯. ಸಿ.ಎನ್.ಭಾಸ್ಕರಪ್ಪ, ತುಮಕೂರು ಜಿಲ್ಲಾ ದರ್ಶನ, ಪು.೧೭೪, ೧೭೫

೧೨೦. ಡಾ.ಡಿ.ಎನ್.ಯೋಗಿಶ್, ಪೂರ್ವೋಕ್ತ, ಪು.೨೭೬

೧೨೧. ಅದೇ, ಪು.೨೭೬

೧೨೨. ಎಚ್.ವಿ.ವೀರನಾಯಕ, ಪೂರ್ವೋಕ್ತ, ಪು.೪

೧೨೩. ಅದೇ, ಪು.೧೧

೧೨೪. ಅದೇ, ಪು.೧೨

೧೨೫. ಡಾ.ಎಂ.ವಿ.ವಸು(ಸಂ), ಪೂರ್ವೋಕ್ತ, ಪು.೧೯೫

೧೨೬. ಗಾಯತ್ರಿಸ್ವಾಮಿ, ದೇವರಾಯನದುರ್ಗದ ಇತಿಹಾಸ ಮತ್ತು ಧಾರ್ಮಿಕ ಹಿನ್ನೆಲೆ, ಪದ್ಮಶಾಲಿ ಪತ್ರಿಕೆ, ಪು.೩೨

೧೨೭. ಅದೇ, ಪು.೩೨

೧೨೮. ಎ.ಕ.ಸಂಪುಟ ೧೨, ತುಮಕೂರು ೪೫, ೧೧೯೫

೧೨೯. ಎ.ಕ.ಸಂ.೧೨, ತುಮಕೂರು, ೧೨೭೫

೧೩೦. ಎ.ಕ.ಸ.೧೨, ತುಮಕೂರು ೪೯

೧೩೧. ಎ.ಕ.ಸಂ.೧೨, ತುಮಕೂರು, ೧೩೮೭

೧೩೨. ಗಾಯತ್ರಿಸ್ವಾಮಿ, ಪೂರ್ವೋಕ್ತ, ಪು.೨೮

೧೩೩. ಅದೇ, ಪು.೨೯

೧೩೪. ಕರ್ನಾಟಕ ರಾಜ್ಯ ಗೆಜೆಟಿಯರ್ ೨, ಪು.೫೨೨

೧೩೫. ಸಿ.ಎನ್.ಭಾಸ್ಕರಪ್ಪ, ಪೂರ್ವೋಕ್ತ, ಪು.೬೦

೧೩೬. ಕರ್ನಾಟಕ ರಾಜ್ಯ ಗೆಜೆಟಿಯರ್ ೨, ಪು.೫೨೨

೧೩೭. ಎ.ಕ.ಸಂಪುಟ ೧೨, ತುಮಕೂರು ೪೬

೧೩೮. ಎ.ಕ.ಸಂಪುಟ ೧೨, ತುಮಕೂರು ೪೧, ೪೨

೧೩೯. ಡಾ.ಅರುಣಿ, ದೇವರಾಯನ ದುರ್ಗ, ತುಂಬೆ ಸ್ಮರಣಸಂಚಿಕೆ, ಪು.೩೮

೧೪೦. ಎ.ಕ.ಸಂ.೧೨, ತುಮಕೂರು, ಕೆಚ್ಚವಾಡಿ ಶಾಸನ

೧೪೧. ಹು.ಪು.ಸದಾಶಿವಪ್ಪ, ಹುಲಿಯೂರು ದುರ್ಗ, ಪು.೩

೧೪೨. ವಿದ್ವಾನ್ ಅಶ್ವತಯ್ಯ, ಕುಣಿಗಲ್ಲು ತಾಲ್ಲೂಕು ದರ್ಶನ, ಪು.೧೧, ೧೯೮೭

೧೪೩. ಅದೇ, ಪು.೧೧

೧೪೪. ಅದೇ, ಪು.೧೧

೧೪೫. ಎ.ಕ.ಸಂಪುಟ ೧೨, ಕುಣಿಗಲ್ಲು, ಕೆಚ್ಚವಾಡಿ ಶಾಸನ

೧೪೬. ಹು.ಪು.ಸದಾಶಿವಪ್ಪ, ಪೂರ್ವೋಕ್ತ, ಪು.೨೫

೧೪೭. ದೇ.ಜವರೇಗೌಡ, ಇಮ್ಮಡಿ ಕೆಂಪೇಗೌಡ, ಪು.೪೦

೧೪೮. ಅದೇ, ಪು.೪೦

೧೪೯. ಹು.ಪು.ಸದಾಶಿವಪ್ಪ, ಪೂರ್ವೋಕ್ತ, ಪು.೨೭, ೨೮

೧೫೦. ಅದೇ, ಪು.೨೮

೧೫೧. ಬಿ.ಷೇಕ್ ಅಲಿ, ಕರ್ನಾಟಕ ಚರಿತ್ರೆ ೫, ಪು.೩೭, ೧೯೯೭

೧೫೨. ಹು.ಪು.ಸದಾಶಿವಪ್ಪ, ಪೂರ್ವೋಕ್ತ, ಪು.೨೮

೧೫೩. ಅದೇ, ಪು.೨೯

೧೫೪. ಅದೇ, ಪು.೨೮

೧೫೫. ಹಯವದನರಾವ್(ಸಂ), ಮೈಸೂರು ಗೆಜೆಟಿಯರ್ ೫, ಪು.೪೯೦

೧೫೬. ಎ.ಕ.ಸಂಪುಟ ೧೨, ಕುಣಿಗಲ್ಲು, ಕೆಚ್ಚವಾಡಿ ಶಾಸನ

೧೫೭. ಷೇಕ್ ಅಲಿ, ಪೂರ್ವೋಕ್ತ, ಪು.೩೭

೧೫೮. ಹಯವದನರಾವ್(ಸಂ), ಪೂರ್ವೋಕ್ತ, ಪು.೪೯೦

೧೫೯. ಅದೇ, ಪು.೪೯೦

೧೬೦. ಅದೇ, ಪು.೪೯೦

೧೬೧. ಎಂ.ಎಸ್.ಪುಟ್ಟಣ್ಣ, ಹಾಗಲವಾಡಿ ಪಾಳೇಗಾರರು, ಪು.೧೦, ೧೯೨೧

೧೬೨. ಡಾ.ಡಿ.ಎನ್.ಯೋಗೀಶ್ವರಪ್ಪ, ಹಾಗಲವಾಡಿ ನಾಯಕರು, ಪು.೨೮

೧೬೩. ಎ.ವಿ.ವೆಂಕಟರತ್ನಂ, ಚಿಕ್ಕನಾಯಕನಹಳ್ಳಿ ಪಾಳೇಗಾರರು, ಪು.೨೯೫

೧೬೪. ಅದೇ, ಪು.೨೯೬

೧೬೫. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೫

೧೬೬. ಅದೇ, ಪು.೫, ೬

೧೬೭. ಹಯವದನರಾವ್(ಸಂ), ಪೂರ್ವೋಕ್ತ, ಪು.೧೬೫

೧೬೮. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೪

೧೬೯. ಅದೇ, ಪು.೭

೧೭೦. ಅದೇ, ಪು.೭

೧೭೧. ಸುಪ್ರೀಮಲ್ಲ, ತೋಂಟದ ಸಿದ್ಧಲಿಂಗೇಶ್ವರನ ಸಾಂಗತ್ಯ, ಸಂಧಿ ೨, ಪದ್ಯ ೧೧೯, ೧೨೦, ೧೨೧, ೧೨೨

೧೭೨. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೧೧, ೧೨

೧೭೩. ಹಯವದನರಾವ್, ದಿ ಹಿಸ್ಟರಿ ಆಫ್ ಮೈಸೂರು, ಸಂ.೧, ಪು.೯೨

೧೭೪. ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೩೯, ೪೦

೧೭೫. ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, ಕೆ.ಎ.೩೭೩, ಹಾಳೆ ೨೦

೧೭೬. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೧೬

೧೭೭. ಅದೇ, ಪು.೭೫

೧೭೮. ಡಾ.ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೪೪

೧೭೯. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೨೩

೧೮೦. ಡಾ.ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೪೫

೧೮೧. ಎಂ.ಎಸ್.ಪುಟ್ಟಣ್ಣ, ಪೂರ್ವೋಕ್ತ, ಪು.೧೫, ೨೬

೧೮೨. ಅದೇ, ಪು.೨೬

೧೮೩. ಅದೇ, ಪು.೨೮, ೨೯

೧೮೪. ಡಾ.ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೧೦

೧೮೫. ಎ.ಕ.ಸಂಪುಟ ೧೨, ಪಾವಗಡ ೫೨, ಕ್ರಿ.ಶ.೧೨೩೨

೧೮೬. ಎ.ಕ.ಸಂಪುಟ ೧೨, ಪಾವಗಡ ೪೫, ಕ್ರಿ.ಶ.೮೮೦

೧೮೭. ನಾಯಕವಾಣಿ, ಸಂಚಿಕೆ, ಪು.೮, ೧ ೧೧ ೧೯೮೪

೧೮೮. ಡಾ.ಕೆ.ಬಿ.ಶಿವತಾರಕ್, *ನಿಡುಗಲ್ಲು ಚೋಳರು,* ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಡಾ.ಎಂ.ವಿ.ವಸು (ಸಂ), ಪು.೧೫

೧೮೯. ಎ.ಕ.ಸಂಪುಟ ೧೨, ಪಾವಗಡ ೫೦

೧೯೦. ಚಿತ್ತಯ್ಯ ಪೂಜಾರ್, ನಿಡುಗಲ್ಲು : ಒಂದು ಸಾಂಸ್ಕೃತಿಕ ಅಧ್ಯಯನ (ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ), ಪು.೨೬

೧೯೧. ಎ.ಕ.ಸಂಪುಟ ೧೨, ಪಾವಗಡ ೧೪

೧೯೨. ಎ.ಕ.ಸಂಪುಟ ೧೨, ಸಿರಾ ೮

೧೯೩. ಎ.ಕ.ಸಂಪುಟ ೧೨, ಪಾವಗಡ ೫೨, ಕ್ರಿ.ಶ.೧೨೩೨

೧೯೪. ಎ.ಕ.ಸಂಪುಟ ೧೨, ಪಾವಗಡ ೫೦, ಕ್ರಿ.ಶ.೧೨೪೮

೧೯೫. ಕನ್ನಡ ವಿಷಯ ವಿಶ್ವಕೋಶ, ಪು.೮೪೫

೧೯೬. ಎ.ಕ.ಸಂಪುಟ ೧೨, ಪಾವಗಡ ೪೨, ಕ್ರಿ.ಶ.೧೧೫೦

೧೯೭. ಅದೇ,

೧೯೮. ಚಿತ್ತಯ್ಯ ಪೂಜಾರ್, ಪೂರ್ವೋಕ್ತ, ಪು.೩೫

೧೯೯. ಅದೇ, ಪು.೩೭

೨೦೦. ಎ.ಕ.ಸಂಪುಟ ೧೨, ಪಾವಗಡ ೫೪, ೫೫, ಕ್ರಿ.ಶ.೧೪೮೭

೨೦೧. ಡಾ.ಡಿ.ಎನ್.ಯೋಗೀಶ್, *ನಿಡುಗಲ್ಲು ಚೋಳರು,* ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಡಾ.ಎಂ.ವಿ.ವಸು (ಸಂ), ಪು.೫೩

೨೦೨. ಡಾ.ಡಿ.ವಿ.ಪರಮಶಿವಮೂರ್ತಿ, ಸಂಶೋಧನಾ ಸಿರಿ, ಪು.೧೨

೨೦೩. ಎ.ಕ.ಸಂಪುಟ ೧೨, ಪಾವಗಡ ೪೨, ಕ್ರಿ.ಶ.೧೬೫೩

೨೦೪. ಅದೇ,

೨೦೫. ಎ.ಕ.ಸಂಪುಟ ೧೨, ಪಾವಗಡ ೧೨, ಕ್ರಿ.ಶ.೧೬೬೦

೨೦೬. ಎ.ಕ.ಸಂಪುಟ ೧೨, ಪಾವಗಡ ೫೯

೨೦೭. ಎ.ಕ.ಸಂಪುಟ ೧೨, ಪಾವಗಡ ೪೬, ಕ್ರಿ.ಶ.೧೬೦೦

೨೦೮. ಡಾ.ಡಿ.ಎನ್.ಯೋಗೀಶ್ವರಪ್ಪ, ನಿಡುಗಲ್ಲು ನಾಯಕರು, ಪು.೬೦

೨೦೯. ಅದೇ, ಪು.೬೪

೨೧೦. ಉಮಾಪತಿ(ಸಂ), ನಿಡುಗಲ್ಲು ಕೈಫಿಯತ್ತು, ಕಲ್ಪಸಿರಿ, ಪು.೪೩೭, ೨೦೦೨

೨೧೧. ಚಿತ್ತಯ್ಯ ಪೂಜಾರ್, ಪೂರ್ವೋಕ್ತ, ಪು.೨೯೦

೨೧೨. ಉಮಾಪತಿ(ಸಂ), ಪೂರ್ವೋಕ್ತ, ಪು.೪೪೦

೨೧೩. ಅದೇ, ಪು.೪೨೮, ೪೨೯

೨೧೪. ಅದೇ, ಪು.೪೩೮

೨೧೫. ಡಾ.ಡಿ.ವಿ.ಪರಮಶಿವಮೂರ್ತಿ, ಪೂರ್ವೋಕ್ತ, ಪು.೨೧

೨೧೬. ಎ.ಕ.ಸಂ.೧೨, ಪಾವಗಡ ೫೪, ಕ್ರಿ.ಶ.೧೪೮೭

೨೧೭. ಡಾ.ಡಿ.ವಿ.ಪರಮಶಿವಮೂರ್ತಿ, ಪೂರ್ವೋಕ್ತ, ಪು.೧೩

೨೧೮. ಅದೇ, ಪು.೧೩

೨೧೯. ಡಾ.ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೫೭

೨೨೦. ಚಿತ್ತಯ್ಯ ಪೂಜಾರ್, ಜೋಳಿಗೆ ಹೊನ್ನು, ಪು.೫೩, ೫೪

೨೨೧. ಡಾ.ಎಂ.ವಿ.ವಸು(ಸಂ), ದ.ಕ.ಅ.ಮ., ಪು.೩೧

೨೨೨. ಎ.ಕ.ಸಂಪುಟ ೧೨, ಪಾವಗಡ ೪೫, ಕ್ರಿ.ಶ.೮೮೦

೨೨೩. ಎ.ಕ.ಸಂಪುಟ ೧೨, ಪಾವಗಡ ೪೬, ಕ್ರಿ.ಶ.೧೭೯೦

೨೨೪. ಕೆ.ಬಿ.ಶಿವತಾರಕ್, ಪೂರ್ವೋಕ್ತ, ಪು.೩೧

೨೨೫. ಅದೇ, ಪು.೩೨

೨೨೬. ಎ.ಕ.ಸಂಪುಟ ೧೨, ಪಾವಗಡ ೫೨, ಕ್ರಿ.ಶ.೧೨೩೨

೨೨೭. ಎ.ಕ.ಸಂಪುಟ ೧೨, ಪಾವಗಡ ೪೨, ಕ್ರಿ.ಶ.೧೧೫೦

೨೨೮. ಉಮಾಪತಿ, ಪೂರ್ವೋಕ್ತ, ಕಲ್ಪಸಿರಿ, ಪು.೪೩೮

೨೨೯. ಅದೇ, ಪು.೪೩೯

೨೩೦. ಡಾ.ಡಿ.ಎನ್.ಯೋಗೀಶ್ವರಪ್ಪ, ಪೂರ್ವೋಕ್ತ, ಪು.೫೬

೨೩೧. ಚಲುವರಾಜನ್ ವಿ.ಆರ್., ಪಾವಗಡ ತಾಲ್ಲೂಕು ದರ್ಶನ, ಪು.೧೭, ೧೯೮೭

೨೩೨. ಮೈಸೂರು ಗೆಜೆಟಿಯರ್, ಸಂಪುಟ ೨, ಪು.೧೯೫, ೧೯೩೭

೨೩೩. ಎಸ್.ನಾಗರತ್ನಮ್ಮ, *ಪಾವಗಡದ ಪಾಳೇಗಾರರು,* ದಕ್ಷಿಣ ಕರ್ನಾಟಕ ಅರಸು ಮನೆತನಗಳು, ಡಾ.ಎಂ.ವಿ.ವಸು(ಸಂ), ಪು.೬೮

೨೩೪. ಚಲುವರಾಜನ್ ವಿ.ಆರ್., ಪೂರ್ವೋಕ್ತ, ಪು.೧೮

೨೩೫. ಎಸ್.ನಾಗರತ್ನಮ್ಮ, ಪೂರ್ವೋಕ್ತ, ಪು.೬೯

೨೩೬. ಎಸ್.ಯು.ಕಾಮತ್(ಸಂ), ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ ೩, ಪು.೫೩೬

೨೩೭. ಎಸ್.ನಾಗರತ್ನಮ್ಮ,. ಪೂರ್ವೋಕ್ತ, ಪು.೬೯,೭೦

೨೩೮. ವಿ.ಆರ್.ಚಲುವರಾಜನ್, ವಾಙ್ಮಯ ಇತಿಹಾಸ(ಕನ್ನಡಪ್ರಭ), ಜೂನ್ ೧೫, ೧೯೮೯

೨೩೯. ವಿ.ಆರ್.ಚಲುವರಾಜನ್, ಪಾವಗಡ ತಾಲ್ಲೂಕು ದರ್ಶನ, ಪು.೨೦

೨೪೦. ಎಸ್.ನಾಗರತ್ನಮ್ಮ, ಪೂರ್ವೋಕ್ತ, ಪು.೭೦

೨೪೧. ಅದೇ, ಪು.೭೧

೨೪೨. ಅದೇ, ಪು.೭೧ .

೨೪೩. ಚಲುವರಾಜನ್ ವಿ.ಆರ್., ಪೂರ್ವೋಕ್ತ, ಪು.೨೨

೨೪೪. ಅದೇ, ಪು.೨೨

೨೪೫. ಅದೇ, ಪು.೧೮

೨೪೬. ನಾಗರತ್ನಮ್ಮ ಎಸ್., ಪೂರ್ವೋಕ್ತ, ಪು.೭೦

೨೪೭. ಅದೇ, ಪು.೭೨

೨೪೮. ವಿ.ಆರ್.ಚಲುವರಾಜನ್, ಪೂರ್ವೋಕ್ತ, ಪು.೨೮

೨೪೯. ವಕ್ತೃ, ವಿ.ಆರ್.ಚಲುವರಾಜನ್, ೫೮ ವರ್ಷ, ಬ್ರಾಹ್ಮಣ, ಪಾವಗಡ

೨೫೦. ವಿ.ಆರ್.ಚಲುವರಾಜನ್, ಪೂರ್ವೋಕ್ತ, ಪು.೨೨

೨೫೧. ಡಾ.ಕೆ.ಬಿ.ಶಿವತಾರಕ್, *ತುಮಕೂರು ಜಿಲ್ಲೆಯ ಪ್ರಾಗಿತಿಹಾಸ,* ಜಯಮಂಗಲಿ, ಪು.೯

೨೫೨. ಎಂ.ವಿ.ಚಿತ್ರಲಿಂಗಯ್ಯ, *ಹರತಿ ಪಾಳೇಗಾರರ ಮೂಲ ವಂಶಾವಳಿ: ಒಂದು ವ್ಯಾಸಂಗ,* ಹರತಿ ಸಿರಿ ಲಕ್ಷ್ಮಣ್ ತೆಲಗಾವಿ(ಸಂ), ಪು.೩೯೮, ೧೯೮೭

೨೫೩. ಎ.ಕ.ಸಂಪುಟ ೧೨, ಪಾವಗಡ ೭೦

೨೫೪. ರಾ.ನರಸಿಂಹಚಾರ್, ಹೊಸಕೋಟೆ ಪಾಳೇಗಾರರ ವಂಶವೃಕ್ಷ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪು.೧೫

೨೫೫. ಎಂ.ಕೆ.ನಾಯಕ್, *ರಾಜಕಸ್ತೂರಿ ಬೊಮ್ಮಲಿ ಯಲ್ಲಪ್ಪನಾಯಕ,* ವಾಲ್ಮೀಕಿ ವಾಣಿ, ಸಂಪುಟ ೫, ಸಂಚಿಕೆ ೨, ಮೇ, ೨೦೦೨

೨೫೬. ಅದೇ,

೨೫೭. ಅದೇ,

೨೫೮. ವಕ್ತೃ: ಯಲ್ಲಪ್ಪನಾಯಕ, ೫೫ ವರ್ಷ, ಪಾಳೇಗಾರರ ವಂಶಸ್ಥ, ಹೊಸಕೋಟೆ

೨೫೯. ಎಂ.ಕೆ.ನಾಯಕ್, ಪೂರ್ವೋಕ್ತ

೨೬೦. ವಕ್ತೃ: ಎನ್.ದೊಡ್ಡಯ್ಯ, ೭೦ ವರ್ಷ, ಒಕ್ಕಲಿಗರು, ದೇವರಬೆಟ್ಟ

೨೬೧. ಅದೇ,

೨೬೨. ಮದ್ದೇವು ಮಾಧವರೆಡ್ಡಿ, ಬಂಗಾರನಾಯಕನದುರ್ಗ, ಪು.೨೩, ೨೦೦೨

೨೬೩. ಅದೇ, ಪು.೩

೨೬೪. ಅದೇ, ಪು.೧೩

೨೬೫. ಡಾ.ಡಿ.ಎನ್.ಯೋಗೀಶ್ವರಪ್ಪ, *ತುಮಕೂರು ಜಿಲ್ಲೆಯ ಕೋಟೆಗಳು,* ಜಯಮಂಗಲಿ, ಪು.೪೬

೨೬೬. ಎಂ.ಡಿ.ಶ್ರೀನಿವಾಸ, ಮಧುಗಿರಿ ಇತಿಹಾಸ, ಪು.೯೪

೨೬೭. ಸಿ.ಹಯವದನರಾವ್, ಮೈಸೂರು ಗೆಜೆಟಿಯರ್, ಸಂ.೫, ಪು.೪೬೩

೨೬೮. ಅದೇ, ಪು.೪೬೩

ಅಧ್ಯಾಯ ೫

ತುಮಕೂರು ಜಿಲ್ಲೆಯ ಕೋಟೆಗಳ ಮೌಖಿಕ ಕಥನಗಳು

೫.೧. ಕೋಟೆಗಳ ಪ್ರದೇಶದ ಸ್ಥಳನಾಮ

೫.೨. ಕೋಟೆಗಳ ನಿರ್ಮಾಣ ಪೂರ್ವದ ಮೌಖಿಕ ಕಥನ

೫.೩. ಕೋಟೆಗಳ ನಿರ್ಮಾಣದ ಮೌಖಿಕ ಕಥನ

೫.೪. ಕೋಟೆಗಳಿಗೆ ಬಲಿಯಾದ ಮೌಖಿಕ ಕಥನ

೫.೫. ಕೋಟೆಗಳಲ್ಲಿ ಕಂಡುಬರುವ ಐತಿಹ್ಯಗಳು

೫.೫.೧. ಕೋಟೆಗಳಲ್ಲಿನ ಜಲಸಂಬಂಧಿ ಐತಿಹ್ಯಗಳು

೫.೫.೨. ಕೋಟೆಯಲ್ಲಿನ ದೈವಸಂಬಂಧಿ ಐತಿಹ್ಯಗಳು

೫.೫.೩. ಕೋಟೆಯಲ್ಲಿನ ಇನ್ನಿತರ ಐತಿಹ್ಯಗಳು

ತುಮಕೂರು ಜಿಲ್ಲೆಯ ಕೋಟೆಗಳ ಮೌಖಿಕ ಕಥನಗಳು

ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳು ಬಹುತೇಕವಾಗಿ ಮಧ್ಯಕಾಲೀನ ಚರಿತ್ರೆಯ ಸಂದರ್ಭದಲ್ಲಿ ನಿರ್ಮಾಣಗೊಂಡಂತವು. ಈ ಕಾಲಕ್ಕಿಂತ ಹಿಂದೆ ನೊಳಂಬರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದರಸರು ತುಮಕೂರು ಜಿಲ್ಲೆಯಲ್ಲಿ ಕೋಟೆ ನಿರ್ಮಿಸಿ ಆಳ್ವಿಕೆ ಮಾಡಿದರೂ ಅಷ್ಟೊಂದು ಪ್ರಸಿದ್ಧಿ ಹೊಂದಿರಲಿಲ್ಲ. ಚೋಳರ ಕಾಲದಲ್ಲಿ ನಿಡುಗಲ್ಲು ದುರ್ಗದ ಕೋಟೆಯು ಮಾತ್ರ ಬಲಿಷ್ಠತೆಯಿಂದ ಕೂಡಿತ್ತೆಂದು ಶಾಸನಗಳಿಂದ ತಿಳಿಯಬಹುದಾಗಿದೆ. ವಿಜಯನಗರೋತ್ತರ ಕಾಲದಲ್ಲಿ ಅಮರನಾಯಕರು ಸ್ವತಂತ್ರಗೊಂಡು ಪಾಳೇಗಾರರೆಂಬ ಹೆಸರಿನಿಂದ ಸಂಸ್ಥಾನಗಳನ್ನು ಸ್ಥಾಪಿಸಿ ಆಳ್ವಿಕೆ ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ಪಾಳೇಗಾರರು ವಿಕೇಂದ್ರಿಕರಣ ವ್ಯವಸ್ಥೆಯನ್ನು ಅನುಸರಿಸಿ, ರಾಜ್ಯದ ಜನಸಮುದಾಯಗಳ ಹಿತರಕ್ಷಣೆಯೇ ನಮ್ಮ ಧ್ಯೇಯ ಎಂಬ ನಿಲುವನ್ನು ತಾಳಿದರು. ಅಂದಿನಿಂದ ಪಾಳೇಗಾರರಲ್ಲಿ ಜನಸಮುದಾಯಗಳಲ್ಲಿ ಸಂಬಂಧಗಳು ವೃದ್ಧಿಸ ತೊಡಗಿದವು. ಇದರಿಂದ ಪಾಳೇಗಾರರು ಕೈಗೊಳ್ಳುವ ಕೆಲಸ ಕಾರ್ಯಗಳಲ್ಲಿ ಜನಸಮುದಾಯಗಳು ಭಾಗಿಯಾದವು. ಕೋಟೆ ಕೊತ್ತಲಗಳನ್ನು ಕಟ್ಟುವಲ್ಲಿ ಹಾಗೂ ಇನ್ನಿತರ ಸ್ಮಾರಕಗಳನ್ನು ಕಟ್ಟುವಲ್ಲಿ ಸಹಾಯ, ಸಹಕಾರಗಳು ಜನಸಾಮಾನ್ಯರಿಂದ ದೊರೆತವು. ಅಲ್ಲದೆ ಇಡೀ ಸಂಸ್ಥಾನವನ್ನು ರಕ್ಷಿಸುವ ಹೊಣೆಯನ್ನು ಸಹ ಜನ ಸಮುದಾಯಗಳು ಹೊಂದಿದ್ದವು. ಇದರಿಂದ ಪಾಳೇಗಾರರಿಗೂ ಅಲ್ಲಿನ ಜನಸಮುದಾಯಗಳಿಗೂ ಸಾಂಸ್ಕೃತಿಕ ಸಂಬಂಧಗಳು ಗಾಢವಾಗಿ ಬೆಳೆಯ ತೊಡಗಿದವು. ಈ ಹಿನ್ನೆಲೆಯಲ್ಲಿ ಜನಪದರು ಪಾಳೆಯ ಪಟ್ಟುಗಳಲ್ಲಿ ಪ್ರಾರಂಭದಿಂದಲೂ ನೋಡಿದ, ಕೇಳಿದ, ಅನುಭವಿಸಿದ ಘಟನೆಗಳು ಜನಪದರ ಮೌಖಿಕ ಕಥನಗಳಿಗೆ ವಸ್ತುವಾದವು. ಅಂದು ಸೃಷ್ಟಿಯಾದ ಮೌಖಿಕ ಕಥನಗಳು ತಲೆಮಾರಿನಿಂದ ತಲೆಮಾರುಗಳಿಗೆ ಮುಂದುವರಿಯುತ್ತ ಬಂದಿವೆ. ಆ ಹಿನ್ನೆಲೆಯಲ್ಲಿ ಚರಿತ್ರೆಯ ಒಂದೊಂದು ಘಟನೆಗಳನ್ನು ಕೋಟೆಯಲ್ಲಿನ ಭೌತಿಕ ವಸ್ತುಗಳಿಗೆ ಆರೋಪಿಸಿ ಕಥನ, ಹಾಡು, ಗಾದೆ, ಐತಿಹ್ಯಗಳನ್ನು ಕಟ್ಟಿರುವುದು ಕಂಡುಬರುತ್ತದೆ. ಹಾಗಾಗಿ ಕೋಟೆ ಕೊತ್ತಲಗಳ ಬಗೆಗೆ, ಅದರಲ್ಲಿರುವ ಸ್ಮಾರಕಗಳ ಬಗೆಗೆ ಅವುಗಳ ಸುತ್ತಮುತ್ತ ಬದುಕುವ ಜನಸಮುದಾಯಗಳು ಹಲವಾರು ಮೌಖಿಕ ಪರಂಪರೆಯ ವಿಷಯಗಳನ್ನು ಹೇಳುತ್ತಾರೆ. ಇವುಗಳನ್ನು ಈ ಅಧ್ಯಾಯದಲ್ಲಿ ಒಂದೊಂದು ಪರಿಕಲ್ಪನೆಯಾಗಿಸಿಕೊಂಡು ಚರ್ಚಿಸಲಾಗಿದೆ. ಮುಖ್ಯವಾಗಿ ಕಥನಗಳು-ಐತಿಹ್ಯಗಳು ಒಂದೇ ನೆಲೆಯಲ್ಲಿ ಕಂಡುಬಂದರೂ ಅಧ್ಯಯನದ ದೃಷ್ಟಿಯಿಂದ ಇಲ್ಲಿ ಬೇರೆ ಬೇರೆಯಾಗಿ ಅಭ್ಯಾಸಿಸಲಾಗಿದೆ. ಹಾಡು-ಲಾವಣಿಗಳು ಪಾಳೇಗಾರರ ಬಗೆಗೆ, ಕೋಟೆಗಳ ಬಗೆಗೆ ವ್ಯಕ್ತವಾಗಿವೆ. ಅವು ಈಗಾಗಲೇ

ಸಂಗ್ರಹಗೊಂಡಿವೆ. ಇವುಗಳನ್ನು ಅಧ್ಯಯನದ ಸಂದರ್ಭದಲ್ಲಿ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ಜೊತೆಗೆ ಅನುಬಂಧದಲ್ಲಿಯೂ ಸಹ ಕೊಡಲಾಗಿದೆ. ಅಲ್ಲದೆ ಕೋಟೆಗಳ ಬಗೆಗೆ, ಕೋಟೆಗಳನ್ನು ಹೊಂದಿದ ಪ್ರದೇಶಗಳ ಬಗೆಗೆ ಹಲವಾರು ಗಾದೆಗಳು ದೊರೆತಿವೆ. ಇದು ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದ್ದರೂ ಹೆಚ್ಚಾಗಿ ನಂಬಿಕೆಯ ಅಂಶಗಳನ್ನು ಒಳಗೊಂಡಿರುವುದರಿಂದ ಗಾದೆಗಳನ್ನು 'ನಂಬಿಕೆ, ಆಚರಣೆಗಳಿಂದ ಸ್ಮಾರಕಗಳ ಸಂರಕ್ಷಣೆಯ' ಅಧ್ಯಾಯದಲ್ಲಿ ಚರ್ಚಿಯಸಲಾಗುವುದು. ಒಟ್ಟಿನಲ್ಲಿ ಕೋಟೆ ಕೊತ್ತಲಗಳ ಬಗೆಗೆ ಹಾಗೂ ಅದರಲ್ಲಿರುವ ಸ್ಮಾರಕಗಳ ಬಗೆಗೆ ಅಲ್ಲಿನ ಪರಿಸರದ ಜನ ಸಮುದಾಯಗಳು ತಮ್ಮ ಜೀವನದ ಭಾಗವಾಗಿಸಿಕೊಂಡು ಅವುಗಳನ್ನು ಹೇಗೆ ಗ್ರಹಿಸಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

೫.೧. ಕೋಟೆಗಳ ಪ್ರದೇಶದ ಸ್ಥಳನಾಮ

ಸಾಂಸ್ಕೃತಿಕ ಇತಿಹಾಸ ರಚನೆಗೆ ಶಾಸನಗಳು ಮತ್ತು ಕಾವ್ಯಗಳು ಕ್ರಮವಾಗಿ ಪ್ರಥಮ ಮತ್ತು ಆನುಷಂಗಿಕ ಆಕರಗಳಾಗುವುದರ ಜೊತೆಗೆ ಸ್ಥಳನಾಮಗಳು ಸಹ ಚಾರಿತ್ರಿಕ ಸಂಗತಿಗಳ ಅನಾವರಣಕ್ಕೆ ಮುಖ್ಯ ಪಾತ್ರವಹಿಸುತ್ತವೆ ಎಂದು ಹೇಳಬಹುದು. ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದ ಅಂಶಗಳನ್ನು ಒಳಗೊಂಡಿರುತ್ತವೆ. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರಗಿಡ, ಕೋಟೆ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳು ಚರಿತ್ರೆಗೆ ಪೂರಕವಾಗುವ ವಿಚಾರಗಳನ್ನು ಒದಗಿಸುತ್ತವೆ ಎನ್ನಬಹುದು.

ಯಾವುದೇ ಒಂದು ಸ್ಥಳನಾಮವು ಜನ್ಮ ತಳೆಯುವುದಕ್ಕೆ ಆ ಪ್ರದೇಶದ ಭೌಗೋಳಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳೇ ಮುಖ್ಯವಾಗಿರುತ್ತವೆ. ಆದ್ದರಿಂದ ಸ್ಥಳನಾಮಗಳ ಅಧ್ಯಯನದಲ್ಲಿ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ, ಭೌಗೋಳಿಕ ಪರಿಸ್ಥಿತಿ ಸನ್ನಿವೇಶಗಳ ವಿವರಣೆಗೂ ಆದ್ಯ ಗಮನ ನೀಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಐತಿಹಾಸಿಕ ಮಹತ್ವವುಳ್ಳ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನವೆಂದರೆ ಅದೊಂದು ರೀತಿಯಲ್ಲಿ ಸಾಂಸ್ಕೃತಿಕ ಅಧ್ಯಯನವೆನ್ನಬಹುದು. ಸ್ಥಳನಾಮಗಳಂತಹ ಸಾಮಾನ್ಯ ವಿಷಯದಲ್ಲಿ ಅಪೂರ್ವವಾದ ಸಂಗತಿಗಳು ಹುದುಗಿಕೊಂಡಿವೆ. ಅದೆಷ್ಟು ಅಜ್ಞಾತ ವಿಷಯಗಳು ಬೆಳಕಿಗೆ ಬರಲಿವೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟೂ ಹಿಂದೆ ಆಗಿ ಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಾದಿಗಳಲ್ಲಿ ದೊರೆಯದ ಆಧಾರಗಳು ಎಡೆಗಳ ಹೆಸರಿನಲ್ಲಿ ಸಿಕ್ಕುತ್ತವೆ. ಇತಿಹಾಸವು ಯಾರ ಹೆಸರನ್ನು ಕಡೆಗಣಿಸಿ ತೀರ ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವುದಿಲ್ಲವೋ ಅಂತಹ ಅನೇಕಾನೇಕ ಅರಸರು, ನಾಯಕರು, ಗೌಡರು, ಗೌಡತಿಯರು, ಪ್ರಾದೇಶಿಕ ವೀರರು, ಕುರುಬರು, ಗೊಲ್ಲರು ಮೊದಲಾದವರು ತಮ್ಮ ಹೆಸರಿನ ಪಟ್ಟಿಯನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರಾಗಿದ್ದಾರೆ.

ಪುರಾಣಗಳಿಗೆ ಪೋಷಕವಾದ ಅನೇಕ ಯಾತ್ರಾ ಸ್ಥಳಗಳ ವಿವರಗಳು ಧರ್ಮ ಸಂಸ್ಕೃತಿಗಳ ಮಹಾ ಪ್ರವಾಹದ ಕುರುಹುಗಳನ್ನು ಎಡೆಗಳಿಂದ ತಿಳಿದುಕೊಳ್ಳಬಹುದು.[೧] ಒಂದು ಸ್ಥಳದ ಹೆಸರು ಅದರ ನಿರ್ಮಾಣ ಬೆಳವಣಿಗೆಯಲ್ಲಿ ಐತಿಹಾಸಿಕ, ಭಾಷಿಕ, ಸಾಮಾಜಿಕ ಸಾಮಗ್ರಿ ಇರುತ್ತದೆ. ಈ ಎಲ್ಲದರ ಪರಿಣಾಮವಾಗಿ ಒಂದು ಸಂಸ್ಕೃತಿಯ ಅನಾವರಣ ಸಾಧ್ಯವಾಗುತ್ತದೆ. ವಿಶಿಷ್ಟ ಪರಿಸರ, ವಿಶೇಷ ಘಟನೆ, ವಿಶಿಷ್ಟವ್ಯಕ್ತಿಯ ಹಿನ್ನೆಲೆಯಲ್ಲಿ ರಚಿತಗೊಂಡ ಪ್ರತಿ ಗ್ರಾಮನಾಮಗಳು ದೇಶದ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತವೆ.

ಸ್ಥಳನಾಮಗಳು ಬಹುಶಃ ಕೃಷಿ ನಾಗರೀಕತೆಯು ತಲೆಯೆತ್ತುವ ಸಮಯದಲ್ಲೇ ಅಸ್ತಿತ್ವಕ್ಕೆ ಬಂದಿರಬಹುದೆಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಜನಸಂಖ್ಯೆ ಬೆಳೆಯುತ್ತಾ ಹೋದಂತೆ ಜನರು ಆರಂಭದಲ್ಲಿ ನೈಸರ್ಗಿಕವಾಗಿ ತಮ್ಮ ನಿತ್ಯ ಜೀವನದ ಅವಶ್ಯಕತೆಗಳನ್ನು ಪೂರೈಸುವಂತಹ ಸ್ಥಳಗಳಲ್ಲಿ ವಾಸಿಸತೊಡಗಿದರು. ಹಾಗೆ ವಾಸಿಸಿದ ಪರಿಸರದಲ್ಲಿ ಪ್ರಾಕೃತಿಕವಾಗಿ ಮುಖ್ಯವೆನಿಸುವ ಸ್ಥಳಗಳನ್ನು ಗುರುತಿಸಿ ಅಲ್ಲಿ ಗ್ರಾಮಗಳನ್ನು ಸ್ಥಾಪಿಸಿದರು. ಸ್ಥಾಪಿಸಿದ ಗ್ರಾಮಗಳು ಸಂಪರ್ಕ ನಡೆಸುವುದಕ್ಕೆ ಹಾಗೂ ಅನುಕೂಲತೆಗಳನ್ನು ಉಂಟು ಮಾಡುವುದಕ್ಕೆ, ಒಂದು ಗ್ರಾಮದ ಇನ್ನೊಂದು ಗ್ರಾಮದ ವ್ಯತ್ಯಾಸ ಗುರುತಿಸುವುದಕ್ಕೆ ಗ್ರಾಮನಾಮಗಳು ಸೃಷ್ಟಿಯಾದವು. ಇಂತಹ ಸೃಷ್ಟಿಯ ಪ್ರತಿಯೊಂದು ಪದಾರ್ಥಕ್ಕೂ ಒಂದು ಹಿನ್ನೆಲೆ ಇತಿಹಾಸವಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ಊರಿಗೂ ಚರಿತ್ರೆಯಿರುತ್ತದೆ. ವ್ಯಕ್ತಿಯ ಹೆಸರು, ಊರಿನ ಹೆಸರು ಬರಿಯ ಹೆಸರುಗಳಲ್ಲ. ಆ ಹೆಸರುಗಳ ಉಸಿರಲ್ಲಿ ಆತ್ಮ ಚರಿತ್ರೆ ಇರುತ್ತದೆ.[೨]

ಯಾವುದೇ ಒಂದು ಸ್ಥಳಕ್ಕೆ, ವಸ್ತುವಿಗೆ ಹೆಸರು ಬರಲು ಹಲವಾರು ಕಾರಣಗಳಿರುತ್ತವೆ. ಅಲ್ಲಿನ ಇತಿಹಾಸದಲ್ಲಿ ಆಗಿ ಹೋದಂತಹ ಅನೇಕ ಐತಿಹಾಸಿಕ ಪುರುಷರ-ಸ್ತ್ರೀಯರ ಹೆಸರುಗಳನ್ನು ಸ್ಥಳನಾಮಗಳಾಗಿ ನಿರ್ದೇಶಿಸಿರುವುದುಂಟು. ಈ ಹಿನ್ನೆಲೆಯಿಂದ ಗ್ರಾಮನಾಮಗಳು ಹುಟ್ಟಲು ಅಲ್ಲಲ್ಲಿಯ ಭೌಗೋಳಿಕ, ಐತಿಹಾಸಿಕ ಘಟನೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳೇ ಪ್ರಧಾನವಾಗಿರುತ್ತವೆ.[೩]

ಪ್ರಸ್ತುತ ಅಧ್ಯಯನವು ತುಮಕೂರು ಜಿಲ್ಲೆಯ ಕೋಟೆಗಳನ್ನು ಹೊಂದಿರುವ ಸ್ಥಳನಾಮದಲ್ಲಿ ಚರಿತ್ರೆಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಂತೆ ಸಮಕಾಲೀನ ಸಂಸ್ಕೃತಿಯ ಸಮಾಜದ ಜೀವನ ವಿಧಾನವನ್ನು ಸಹ ತಿಳಿದು ಕೊಳ್ಳಬಹುದಾಗಿದೆ. ಇಲ್ಲಿನ ಸ್ಥಳನಾಮಗಳಿಗೆ ಕೆಲವು ಬಾರಿ ಆಧಾರಗಳಿಲ್ಲದೆ ಚರಿತ್ರೆಯು ಮೌನ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರಮುಖವಾಗಿ ಸ್ಥಳೀಯವಾಗಿ ಸಿಗುವ ಮೌಖಿಕ ಅಂಶಗಳನ್ನು ಪರಿಗಣಿಸಿ, ಸ್ಥಳನಾಮಗಳಿಂದ ಚರಿತ್ರೆಯ ಅಂಶಗಳನ್ನು ಶೋಧಿಸಬಹುದಾಗಿದೆ. ಹಾಗೂ ಪ್ರತಿಯೊಂದು ಸ್ಥಳನಾಮವು ಕಾಲಾನಂತರದಲ್ಲಿ ಹೊಂದಿದ ರೂಪಾಂತರವನ್ನು ಸಹ ಇಲ್ಲಿ ವಿವರಿಸಲಾಗಿದೆ.

ಮಧುಗಿರಿ ದುರ್ಗ : ಇಲ್ಲಿನ ಜನರು ಈ ಊರಿನ ಬಗೆಗೆ ಎರಡು ರೀತಿಯ ವಿವರಣೆಯನ್ನು ಕೊಡುತ್ತಾರೆ. ೧. ಇಲ್ಲಿನ ಬೆಟ್ಟವನ್ನು ದಕ್ಷಿಣದಿಕ್ಕಿನಿಂದ ನೋಡಿದಾಗ ಮದಿಸಿದ ಆನೆಯಂತೆ ಕಾಣುತ್ತದೆ. ಆದ್ದರಿಂದ ಮದ್ದಾನೆಬೆಟ್ಟ>ಮದ್ದಾನೆಗಿರಿ>ಮದ್ದಗಿರಿ ಎಂದು ರೂಢಿಗೆ ಬಂದಿದೆ ಎನ್ನುತ್ತಾರೆ. ೨. ಈ ಬೆಟ್ಟದಲ್ಲಿ ಎಲ್ಲೆಂದರಲ್ಲಿ ಜೇನುತುಪ್ಪ ಹೇರಳವಾಗಿ ದೊರೆಯುತ್ತಿತ್ತು. ಆ ಹಿನ್ನೆಲೆಯಲ್ಲಿ ಜೇನು(ಮಧು) ಬೆಟ್ಟ>ಮಧುಬೆಟ್ಟ>ಮಧುಗಿರಿ ಆಯಿತೆಂದು ಹೇಳುತ್ತಾರೆ. 'ಮದ್ದಗಿರಿ' ಎಂಬ ಹೆಸರುಳ್ಳ ಒಂದು ಪದ್ಯವನ್ನು ಎಂ.ಡಿ.ಶ್ರೀನಿವಾಸರವರು 'ಮಧುಗಿರಿ ಇತಿಹಾಸ' ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

ಪಿರಿದಾದ ಗುಂಡು ಹಾಸರೆಗಳಿಂದ ಕುಂದದೆ
ಪರಿವಜಲ ವಿವನದಿಂದೆ| ವರಸಾನು ವಿಕ್ಕಲ ತಿಟ್ಟುಗಳಿಂದ ಮದ್ದ
ಗಿರಿ ವೆಸರ್ಪಡೆದೊಪ್ಪುತಿಹದು|| [೪]

ಮೊದಲಿದ್ದ 'ಮದ್ದಗಿರಿ' ಎಂಬ ಹೆಸರನ್ನು ೧೯೨೬ರಲ್ಲಿ 'ಮಧುಗಿರಿ' ಎಂಬ ಹೆಸರಾಗಿ ಪರಿವರ್ತಿಸಲು ಇಲ್ಲಿನ ಜನತೆ ಸರ್ಕಾರವನ್ನು ಕೇಳಿಕೊಂಡರು. ಅದಕ್ಕೆ ಸ್ಪಂದಿಸಿದ ಸರ್ಕಾರ 'ಮಧುಗಿರಿ' ಎಂಬ ಹೆಸರನ್ನು ರೂಢಿಗೆ ತಂದಿತು.[೫] ಇಲ್ಲಿನ 'ಗಿರಿ' ಅಥವಾ ಬೆಟ್ಟಕ್ಕೆ ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡರು ಕ್ರಿ.ಶ.೧೬೦೧ರಲ್ಲಿ ಕೋಟೆಕೊತ್ತಲಗಳನ್ನು ನಿರ್ಮಿಸಿದರು. ಅಂದಿನಿಂದ 'ಮದ್ದಗಿರಿ ದುರ್ಗ'ವಾಯಿತು.[೬] ಹೈದರ್ ಮತ್ತು ಟಿಪ್ಪು ಸುಲ್ತಾನರ ಅಧೀನಕ್ಕೆ ಈ ಪ್ರದೇಶವು ಒಳಪಟ್ಟಾಗ 'ಮದ್ದಗಿರಿ' ಹೆಸರನ್ನು ತೆಗೆದು 'ಪತ್ತೇಹ ಬಾದ್' ಎಂಬ ಹೆಸರನ್ನು ನಾಮಕರಣ ಮಾಡುತ್ತಾರೆ.[೭] ಹೈದರ್-ಟಿಪ್ಪುಸುಲ್ತಾನರು ಮರಣ ಹೊಂದಿದ ಮೇಲೆ ಮತ್ತೆ 'ಮದ್ದಗಿರಿ' ಎಂಬ ಹೆಸರೇ ಜಾರಿಗೆ ಬಂದಿದೆ.

'ಮಧು' ಎಂದರೆ ಜೇನು ತುಪ್ಪ, ಮಕರಂದ[೮] ಎಂದು, 'ಗಿರಿ' ಎಂದರೆ 'ಬೆಟ್ಟ' ಎಂಬ ಹೆಸರು ಹೊಂದಿದೆ. ಮಧು + ಗಿರಿ>ಮಧುಗಿರಿ ಎಂಬ ಹೆಸರು ರೂಢಿಗೆ ಬಂದಿದೆ. 'ಬಿಜ್ಜಾವರದ ಊಟಚೆಂದ, ಮಧುಗಿರಿ ಮಾತಿಗೆ ಚೆಂದ, ಸಿದ್ಧಪುರದಲ್ಲಿ ಮಲಗಲು ಚೆಂದ' ಎಂಬ ಒಂದು ರೂಢಿ ಮಾತಿದೆ. ಇದರಿಂದ ಮೌಖಿಕ ಸಾಹಿತ್ಯದಲ್ಲೂ 'ಮಧುಗಿರಿ' ಹೆಸರು ಗುರುತಿಸಬಹುದು.

ಸಿದ್ಧಾಪುರ : ಈ ಪ್ರದೇಶವು ಸಿದ್ಧರ ತಪೋ ಭೂಮಿಯಾಗಿತ್ತು. ಆ ಹಿನ್ನೆಲೆಯಲ್ಲಿ ಈ ಊರಿಗೆ 'ಸಿದ್ಧಾಪುರ' ಎಂಬ ಹೆಸರು ರೂಢಿಗೆ ಬಂದಿರಬಹುದೆಂದು ಇಲ್ಲಿನ ಜನರು ಅಭಿಪ್ರಾಯ ಪಡುತ್ತಾರೆ. ಆದರೆ ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿದರೆ. ಮಹಾನಾಡ ಪ್ರಭುಗಳ ಪರಮ ಗುರುಗಳಾದ ಎಡೆಯೂರು ಸಿದ್ಧಲಿಂಗೇಶ್ವರರ ಹೆಸರಿನಲ್ಲಿ ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ.೧೫೯೮ರಲ್ಲಿ ಒಂದು ಊರನ್ನು ನಿರ್ಮಿಸಿ, ಅದರ ಸುತ್ತಲೂ ಕೋಟೆ ಕೊತ್ತಲಗಳನ್ನು ಕಟ್ಟಿಸಿ, ಆ ಊರಿಗೆ 'ಸಿದ್ಧಲಿಂಗ ಪುರ' ಎಂಬ ಹೆಸರನ್ನು ಇಡುತ್ತಾನೆ.[೯] ಅಂದಿನಿಂದ 'ಸಿದ್ಧಲಿಂಗಪುರ' ಎಂಬ ಹೆಸರು ರೂಢಿಯಿದ್ದರೂ, ಅದು ಬರಬರುತ್ತಾ 'ಸಿದ್ಧಾಪುರ' ಎಂದು ರೂಢಿಗೆ ಬಂದಿದೆ.

‘ಸಿದ್ಧ’ ಎಂದರೆ ಸಾಧಿಸಿದವನು ಎಂದರ್ಥ.[೧೦] ‘ಪುರ’ ಎಂದರೆ ‘ಪಟ್ಟಣ’, ‘ನಗರ’, ಎಂದರ್ಥ. ಸಿದ್ಧರು ಅಥವಾ ಯತಿಗಳು ಈ ಪುರದಲ್ಲಿ ಜೀವಿಸುತ್ತಿದ್ದಕ್ಕೆ ಈ ಊರಿಗೆ ‘ಸಿದ್ಧಾಪುರ’ ಎಂಬ ಹೆಸರು ಬಂದಿರಬಹುದು.

ಬಿಜ್ಜಾವರ : ಮುಮ್ಮಡಿ ಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿದ್ದ ಹಿರೇಚಿಕ್ಕಪ್ಪಗೌಡನಿಗೆ ಬಿಜ್ಜಾಮಹಾದೇವಿಯು ಒಂದು ಬಾರಿ ಕನಸಿನಲ್ಲಿ ಬಂದು ‘ನಾನು ಗುರುತು ಮಾಡಿ ಹೇಳುವ ಪ್ರದೇಶದಲ್ಲಿ ಊರನ್ನು ಸ್ಥಾಪಿಸಿ, ಕೋಟೆಕೊತ್ತಲನ್ನು ಅದರ ಸುತ್ತಲೂ ಕಟ್ಟಿದರೆ ನಿನಗೆ ಒಳ್ಳೆಯದಾಗುತ್ತದೆ ಎಂದು ಹೇಳಿ ಮಾಯವಾಗುತ್ತದೆ’. ಅದರಂತೆ ಗೌಡನು ಗುರುತು ಮಾಡಿದ ಪ್ರದೇಶಕ್ಕೆ ಹೋದಾಗ ನಾಯಿಗಳ ಮೇಲೆ ಮೊಲಗಳು ಸವಾರಿ ಮಾಡುತ್ತಿರುವುದನ್ನು ಕಂಡು ಬೆರಗಾಗಿ ಈ ಪ್ರದೇಶ ವೀರಭೂಮಿ, ಗಂಡು ಭೂಮಿ ಎಂದು ಭಾವಿಸಿ, ಊರನ್ನು ಸ್ಥಾಪಿಸಿ, ಬಿಜ್ಜಾಮಹಾದೇವಿಯ ದೇವಾಲಯ ಸ್ಥಾಪಿಸಿ, ಕೋಟೆಕೊತ್ತಲಗಳನ್ನು ನಿರ್ಮಿಸಿ, ಆ ಊರನ್ನು ಕಟ್ಟಲು ಪ್ರೇರೇಪಿಸಿದ ದೇವಿಯ ಹೆಸರನ್ನೆ ಇಡುತ್ತಾನೆ. ಬಿಜ್ಜಾದೇವಿಯ ಅನುಗ್ರಹದಿಂದ ಇಲ್ಲಿನ ಪುರ(ವರ)ವನ್ನು ಸ್ಥಾಪಿಸಿದ್ದಕ್ಕೆ ಬಿಜ್ಜಾಪುರ>ಬಿಜ್ಜಾವರ ಎಂಬ ಹೆಸರು ರೂಢಿಗೆ ಬಂದಿತು ಎಂದು ಇಲ್ಲಿನ ಜನರು ಹೇಳುತ್ತಾರೆ. ಆದರೆ ಇತಿಹಾಸ ದಾಖಲೆಗಳಲ್ಲಿ ವಿಜಯನಗರದ ಅರಸು ಶ್ರೀ ಕೃಷ್ಣದೇವರಾಯರ ಅಪ್ಪಣೆಯ ಮೇರೆಗೆ ಕ್ರಿ.ಶ.೧೫೨೪ರಲ್ಲಿ ಬಿಜ್ಜಾವರ ನಗರವನ್ನು ನಿರ್ಮಿಸಿ, ನಗರಕ್ಕೆ ಬಲವಾದ ಕೋಟೆಯನ್ನು ಕಟ್ಟಿಸಿ ಅದರೊಳಗೆ ವೀರಭದ್ರ ದೇವಾಲಯವನ್ನು ಒಂದು ಕೊಳವನ್ನು ನಿರ್ಮಿಸಿ, ಮುಮ್ಮಡಿ ಪಟ್ಟಣದಿಂದ ಹಿರೇ ಚಿಕ್ಕಪ್ಪಗೌಡರು ರಾಜಧಾನಿಯನ್ನು ಬಿಜ್ಜಾವರಕ್ಕೆ ಸ್ಥಳಾಂತರಿಸಿದರು[೧೧] ಎಂದು ಉಲ್ಲೇಖಿಸುತ್ತವೆ. ಈ ಎರಡು ಮಾಹಿತಿಗಳಲ್ಲೂ ಬಿಜ್ಜಾವರ ಎಂಬ ಹೆಸರು ಇದೆ.

ಚನ್ನರಾಯನ ದುರ್ಗ : ಮಧುಗಿರಿ ಮಹಾನಾಡ ಪ್ರಭುಗಳಾದ ಇಮ್ಮಡಿ ಚಿಕ್ಕಪ್ಪಗೌಡರು ತನ್ನ ಅಧೀನದಲ್ಲಿರುವ ಈ ಪ್ರದೇಶದಲ್ಲಿ ತನ್ನ ಮಗ ಚನ್ನರಾಯನ ಅಕಾಲಿಕ ಮರಣದ ಸ್ಮರಣೆಗಾಗಿ ಒಂದು ಗ್ರಾಮವನ್ನು ಸ್ಥಾಪಿಸಿ, ಈ ಗ್ರಾಮವನ್ನು ಒಳಗೊಂಡಂತೆ ಬೆಟ್ಟದಲ್ಲಿ ಕೋಟೆಕೊತ್ತಲನ್ನು ನಿರ್ಮಿಸಿ, ಊರಿಗೆ ಮತ್ತು ಬೆಟ್ಟಕ್ಕೆ ‘ಚನ್ನರಾಯನ ದುರ್ಗ’ವೆಂದು ಹೆಸರನ್ನು ಇಡುತ್ತಾನೆ. ಇದು ಕ್ರಿ.ಶ.೧೬೧೩ರಲ್ಲಿ ನೆರವೇರಿತೆಂದು ದಾಖಲೆಗಳು ಸ್ಪಷ್ಟಪಡಿಸುತ್ತವೆ.[೧೨] ಈ ದುರ್ಗವನ್ನು ಚಿಕ್ಕದೇವರಾಯರು ವಶಪಡಿಸಿಕೊಂಡಾಗ ದಂಡನಾಯಕರಾದ ಕೋಮಾರಯ್ಯ ಹಾಗೂ ದೊಡ್ಡ ಅರಸರನ್ನು ನೇಮಕ ಮಾಡುತ್ತಾರೆ. ಇವರು ಚನ್ನರಾಯನ ದುರ್ಗಕ್ಕೆ ‘ಪ್ರಸನ್ನಗಿರಿ’ ಎಂದು ಹೆಸರನ್ನು ಇಟ್ಟು ಆಳ್ವಿಕೆ ಮಾಡುತ್ತಾರೆ.[೧೩] ಮರಾಠರು ಮೈಸೂರು ಸಂಸ್ಥಾನವನ್ನು ಮುತ್ತಿಗೆ ಹಾಕಿದಾಗ ಚನ್ನರಾಯನ ದುರ್ಗವನ್ನು ಬಿಟ್ಟು ಕೊಡುತ್ತಾರೆ. ಹಿಂದಿನ ಪ್ರಸನ್ನಗಿರಿಯನ್ನು ಚನ್ನರಾಯನ ದುರ್ಗವೆಂದು ಪುನರ್ ನಾಮಕರಣ ಮಾಡಿಕೊಳ್ಳುತ್ತಾರೆ.

ಚನ್ನರಾಯನ ದುರ್ಗಕ್ಕೆ ಇಮ್ಮಡಿ ಚಿಕ್ಕಪ್ಪಗೌಡರು ತನ್ನ ಮಗನ ಹೆಸರು ಶಾಶ್ವತವಾಗಿ ಉಳಿಯಲೆಂದು ನೈಸರ್ಗಿಕವಾಗಿರುವ ಬೆಟ್ಟಕ್ಕೆ ಕೋಟೆಕೊತ್ತಲ ನಿರ್ಮಿಸಿ 'ಚನ್ನರಾಯನದುರ್ಗ' ಎಂದು ಹೆಸರಿಟ್ಟಿದ್ದಾರೆ. ಇಲ್ಲಿ ಐತಿಹಾಸಿಕ ವ್ಯಕ್ತಿಯೊಂದಿಗೆ ನೈಸರ್ಗಿಕವಾಗಿರುವ ಬೆಟ್ಟಕ್ಕೆ ಕೋಟೆ ಕೊತ್ತಲ ಕಟ್ಟುವುದರೊಂದಿಗ ಇಲ್ಲಿನ ಸ್ಥಳವು 'ಚನ್ನರಾಯನ ದುರ್ಗ'ವೆಂದಾಗಿದೆ.

ಮಿಡಿಗೇಶಿ ದುರ್ಗ : ಈ ಪ್ರದೇಶದಲ್ಲಿ ಪಾಕನಾಟಿ ಕುಲಕ್ಕೆ ಸೇರಿದ ನಾಗಿರೆಡ್ಡಿ ಎಂಬ ಪಾಳೇಗಾರನು ಕೋಟೆಕೊತ್ತಲಗಳನ್ನು ನಿರ್ಮಿಸಿ, ಊರನ್ನು ಸ್ಥಾಪಿಸಿ ಆಳ್ವಿಕೆ ಮಾಡುತ್ತಿದ್ದನು. ಈತನ ಹೆಂಡತಿಯ ಕೂದಲು ಹಿಮ್ಮಡಿಯವರೆಗೆ ನೀಳವಾಗಿ, ದೀರ್ಘವಾಗಿತ್ತೆಂದು ಜನರು ಹೇಳುತ್ತಾರೆ. ಈಕೆಯ ಗಂಡನು ಮರಣ ಹೊಂದಿದಾಗ, ಅವನ ಸಂಗಡವೇ ಸಹಗಮನವನ್ನು ಮಾಡುತ್ತಾಳೆ. ಅವಳ ಹೆಸರು ಉಳಿಯುವ ಹಿನ್ನೆಲೆಯಲ್ಲಿ (ಹಿಮ್ಮಡಿ(ಮಿಡಿ)ಯವರೆಗೆ ಆಕೆಗೆ ಕೂದಲು (ಕೇಶ>ಕೇಶಿ) ಇರುವುದರಿಂದ) ಬೆಟ್ಟದ ಮಧ್ಯದಲ್ಲಿ ಇವಳ ರೇಖಾ ಚಿತ್ರವನ್ನು ಬಿಡಿಸಿ, ಈ ಊರಿಗೆ ಮಿಡಿಕೇಶಿ>ಮಿಡಿಗೇಶಿ ಎಂದು ಹೆಸರಿಡಲಾಯಿತು ಎನ್ನುತ್ತಾರೆ. ಆದರೆ ಇತಿಹಾಸದ ದಾಖಲೆಗಳು ನಾಗಿರೆಡ್ಡಿಯ ಕಾಲಕ್ಕಿಂತ ಹಿಂದಕ್ಕೆ ಹೋಗುತ್ತವೆ. ಕ್ರಿ.ಶ.೯೦೬ರ ಗಂಗರ ಶಾಸನದಲ್ಲಿ 'ಮಿಡಿಗೇಶಿ' ಹೆಸರಿನ ಉಲ್ಲೇಖ ಕಂಡುಬರುತ್ತದೆ.[೧೪] ಗಂಗರ ನಂತರ ಈ ಪ್ರದೇಶ ನಿಡುಗಲ್ಲು ಚೋಳರ ಅಧೀನಕ್ಕೆ ಒಳಪಟ್ಟಿತ್ತೆಂದು. ಡಾ.ವಸುರವರು ಊಹಿಸುತ್ತಾರೆ.[೧೫] ಕ್ರಿ.ಶ.೧೫೦೩ರ ಶಾಸನ ಒಂದರಲ್ಲಿ ಸಾಳುವ ಇಮ್ಮಡಿ ನರಸಿಂಗರಾಯನ ಕಾರ್ಯಕರ್ತನಾದ 'ನರಸಣ ನಾಯಕವೊಡೆಯನ ಕಾಯಕದ ಅ(ಪ)ರ ಸರಾಹುತನು ತಮ್ಮ ನಾಯಕತನಕ್ಕೆ ಸಲ್ಲುವ ಮಿಡಿಗೇಶಿ ಸೀಮೆ....[೧೬] ಎಂದು ಹೇಳುತ್ತದೆ. ವಿಜಯನಗರದ ಸಾಳುವ ಇಮ್ಮಡಿ ನರಸಿಂಗರಾಯನ ಕಾಲಕ್ಕೆ 'ಮಿಡಿಗೇಶಿ', ವಿಜಯನಗರದ ಅಧೀನದಲ್ಲಿತ್ತು. ಈ ಮೇಲಿನ ಐತಿಹಾಸಿಕ ದಾಖಲೆಗಳನ್ನು ಪರಿಶೀಲಿಸಿದಾಗ 'ಮಿಡಿಗೇಶಿ'ಯು ನಾಗಿರೆಡ್ಡಿಯ ಕಾಲಕ್ಕಿಂತ ಹಿಂದೆಯೇ ಪ್ರಚಲಿತದಲ್ಲಿತ್ತು ಎಂದು ಹೇಳಬಹುದು.

ಕನ್ನಡ ರತ್ನಕೋಶದಲ್ಲಿ ಮಿಡಿ(ನಾ) ಎಂದರೆ 'ಹೀಚು'(ಗು) ಸಣ್ಣದಾದ ಎಂದಿದೆ.[೧೭] ಕೇಶ > ಕೇಶಿ ಎಂದರೆ ಕೂದಲು ಎಂದಿದೆ. ಕೇಶಿಯು ಗೇಶಿ ಎಂದು ಪರಿವರ್ತಿತವಾಗಿದೆ. ಮಿಡಿಕೇಶಿಯನ್ನು ಮಿಡಿಗೇಶಿ ಎಂದು ಕರೆಯುತ್ತಿರಬಹುದು. ಮಿಡಿಗೇಶಿಯೆಂದರೆ ಹಿಮ್ಮಡಿಯವರೆಗೆ ಕೇಶರಾಶಿ ಉಳ್ಳವಳು ಎಂದು ಕರೆಯುತ್ತಾರೆ. ಇಲ್ಲಿನ ಬೆಟ್ಟಕ್ಕೆ ಕೋಟೆಕೊತ್ತಲಗಳನ್ನು ಕಟ್ಟಿಸಿರುವುದರಿಂದ 'ಮಿಡಿಗೇಶಿ ದುರ್ಗ' ಎಂದು ಹೆಸರಾಗಿದೆ.

ಭಸ್ಮಾಂಗಿ ದುರ್ಗ : ಈ ಪ್ರದೇಶದಲ್ಲಿ ಪಂಚಗಣಾಧೀಶ್ವರರಲ್ಲಿ ಒಬ್ಬರಾದ ಕೋಲುಶಾಂತಸ್ವಾಮಿಗಳು ಇಲ್ಲಿನ ದುಷ್ಟರನ್ನು ಭಸ್ಮಮಾಡಿ, ಆ ಭಸ್ಮ(ಬೂದಿ)ವನ್ನು ಆಂಗಿಸಿದ್ದಕ್ಕೆ ಅಥವಾ ಸೇವಿಸಿದ್ದಕ್ಕೆ ಈ ಊರಿಗೆ 'ಭಸ್ಮಾಂಗಿ' ಎಂದು ಹೆಸರು ಬಂದಿತೆಂಬುದು ಇಲ್ಲಿನ ಜನರ ಅಭಿಪ್ರಾಯ. ಕೋಲುಶಾಂತ

ಸ್ವಾಮಿಗಳು ಇಲ್ಲಿ ತಪಸ್ಸು ಮಾಡಿ, ಈ ಪ್ರದೇಶವನ್ನು ತಪೋ ಭೂಮಿಯನ್ನಾಗಿ ಮಾಡಿದರು. ಇವರ ಗದ್ದುಗೆಯು ಇದೇ ಪ್ರದೇಶದಲ್ಲಿದೆ. ಶಿರಾದ ರಂಗಪ್ಪನಾಯಕನು ಈ ಬೆಟ್ಟದ ತಪ್ಪಲಿನಲ್ಲಿ ಭಸ್ಮಾಂಗೀಶ್ವರ ದೇವಾಲಯವನ್ನು ನಿರ್ಮಿಸಿದನೆಂದು ಮತ್ತು ಈತನ ತಲೆಯನ್ನು ಶತ್ರುಗಳು ಯುದ್ಧದಲ್ಲಿ ಕಡಿದಾಗ ಅದು ಹಾರಿಬಂದು ಭಸ್ಮಾಂಗೀಶ್ವರ ದೇವಾಲಯದಲ್ಲಿ ಸೇರಿಕೊಂಡಿತೆಂದು ಹೇಳುತ್ತಾರೆ.

ಭಸ್ಮಾಂಗಿ ಬೆಟ್ಟದಲ್ಲಿ ಬೂದಿ ಬಸಪ್ಪನಾಯಕನು ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ಈ ಪ್ರದೇಶವನ್ನು ಆಳುತ್ತಿದ್ದನು. ಅಂದಿನಿಂದ ಈ ಊರಿಗೆ 'ಭಸ್ಮಾಂಗಿ ದುರ್ಗ' ಎಂದು ಹೆಸರು ರೂಢಿಗೆ ಬಂತೆಂದು ಹೇಳುತ್ತಾರೆ. ದುಷ್ಟರನ್ನು ಸುಟ್ಟು ಭಸ್ಮ ಮಾಡಿ ಆಂಗಿ(ಸೇವಿ)ಸಿದ್ದಕ್ಕೆ 'ಭಸ್ಮಾಂಗಿ' ಎಂಬ ಹೆಸರು ಬಂದಿದೆ. ಇದಕ್ಕೆ ಯಾವುದೇ ದಾಖಲೆಗಳಲ್ಲಿ ಉಲ್ಲೇಖಗೊಂಡಿಲ್ಲದ್ದರಿಂದ ಈ ವಿಚಾರವನ್ನು ಇಲ್ಲಿ ಪರಿಗಣಿಸಲಾಗಿದೆ.

ನಿಡುಗಲ್ಲು ದುರ್ಗ : ನೈಸರ್ಗಿಕವಾಗಿ ಬೆಟ್ಟದಲ್ಲಿ ಮೂಡಿರುವ ಒಂದು ಉದ್ದವಾದ ಕಲ್ಲು. ಇದರ ವಿಶೇಷತೆಯನ್ನು ಗುರುತಿಸಿ ನಿಡಿದಾದ+ಕಲ್ಲು>ನಿಡುಕಲ್ಲು>ನಿಲುವುಕಲ್ಲು>ನೀಳವಾದ ಕಲ್ಲು> ನಿಡುಗಲ್ಲು ಎಂದು ಕರೆದಿದ್ದಾರೆ. ನಿಡುಗಲ್ಲಿಗೆ ಪ್ರಾಚೀನ ಕಾಲದಲ್ಲಿ ನೀಲವತಿ, ಕಾಲಂಜನ, ಕಾಳಾಂಜನಗಿರಿ ಎಂದು ಕರೆಯುತ್ತಿದ್ದರು.[೧೮] ಚೋಳರ ಕಾಲದಲ್ಲಿನ ಒಂದು ಶಾಸನವು ಕಾಳಾಂಜನ ಮತ್ತು ನಿಡುಗಲ್ಲು ಹೆಸರನ್ನು ಉಲ್ಲೇಖಿಸುವುದನ್ನು ಕಾಣಬಹುದು.

ಕಾಳಾಂಜನವೆಂಬುದಿರುಂ
ಗೋಳನಗಿರಿದುರ್ಗ್ಗವನ್ತದ ಭ್ರಂಕಷತಾ
ಭೀಳತರ ಚೋಳವದರು
ತ್ತಾಳತೆಯನೆ ನೋಡಿ ಧಾತ್ರಿ ನಿಡುಗಲ್ಲೆನ್ಗುಂ .....[೧೯]

'ನಿಡುಗಲ್ಲು' ಎಂಬ ಹೆಸರಿನ ಉಲ್ಲೇಖವು ಕ್ರಿ.ಶ.ಹತ್ತರಿಂದಲೂ ರೂಢಿಯಲ್ಲಿತ್ತೆಂದು ಹಲವು ಶಾಸನಗಳು ಸ್ಪಷ್ಟಪಡಿಸುತ್ತವೆ. ಜಾನಪದ ಸಾಹಿತ್ಯದಲ್ಲೂ ನಿಡುಗಲ್ಲು ದುರ್ಗದ ಹೆಸರು ಉಲ್ಲೇಖ ಗೊಂಡಿರುವುದನ್ನು ಕಾಣಬಹುದು.

ನಿಂತು ನಿಡುಗಲ್ಲು ಕಟ್ಟಿಸಿದ ಕುಂತು ಕುಂದಿರ್ಪಿ ಕಟ್ಟಿಸಿದ
ವತ್ತಿ ಆಳೋನು ಮದಕೇರಿ|ದುರುಗದ
ಮೇಲೆ ಏಳು ಕೋಟೆಗಳ ಕಟ್ಟಿಸಿದ || [೨೦]

ಲಿಖಿತ ಸಾಹಿತ್ಯ ಮತ್ತು ಮೌಖಿಕ ಸಾಹಿತ್ಯದಲ್ಲೂ 'ನಿಡುಗಲ್ಲು' ಎಂಬ ಹೆಸರನ್ನು ಉಲ್ಲೇಖಿಸಿರುವುದು ಕಾಣಬಹುದು.

ನಿಡಿದು+ಕಲ್ಲು = ನಿಡುಗಲ್ಲು ಎಂದರೆ ಎತ್ತರವಾದ ಕಲ್ಲು ಅಥವಾ ಉದ್ದವಾದಕಲ್ಲು[೨೧] ಎಂಬರ್ಥವಿದೆ. ಇಲ್ಲಿ ಪೂರ್ವಪದ ಮತ್ತು ಉತ್ತರಪದವು ಪ್ರಕೃತಿ ವಾಚಿಯಾಗಿರುವುದು ಕಂಡುಬರುತ್ತದೆ.

ಪಾವಗಡ : ಪಾವಗಡದ ಬೆಟ್ಟವು ಹಾವಿನ ಹೆಡೆಯಂತೆ ಕಾಣುವುದರಿಂದ ಇದಕ್ಕೆ 'ಪಾಮುಕೊಂಡ (ಹಾವಿನಂತಬೆಟ್ಟ) ಎಂದು ಇಲ್ಲಿನ ಜನರು ಕರೆಯುತ್ತಾರೆ. ಶಾಸನಗಳು ಸಹ ಇದೇ ಹೆಸರನ್ನು ಉಲ್ಲೇಖಿಸಿವೆ. ಬೆಟ್ಟದ ಬುಡದಲ್ಲಿರುವ ಈಶ್ವರ ದೇವಾಲಯದ ಶಾಸನ 'ಪಾಗೊಂಡೆ' ಎಂಬ ಹೆಸರಿನಿಂದ ಉಲ್ಲೇಖಿಸಿದ್ದರೆ, ಕಮ್ಮಾರ ಗುಂಡಿನ ಶಾಸನದಲ್ಲಿ ಪಾವಗೊಂಡ' ಎಂದಿದ್ದರೆ, ವೆಂಕಟಪತಿ ದೊರೆಗಳ ಪೈಂಗಳ, ನಾಮ ಶಾಸನದಲ್ಲಿ 'ಪಾಮುಕೊಂಡ' ಎಂದು ಉಲ್ಲೇಖಿಸಿದೆ.[೨೨] ಶಾಸನ ತಜ್ಞ ಲೂಯಿಸ್ ರೈಸ್ ಅವರು ಇಲ್ಲಿ ಹಾವಿನ ಚಿತ್ರವಿದ್ದ ಕಲ್ಲೊಂದು ಕಂಡುಬಂದಿದ್ದರಿಂದ ಇದಕ್ಕೆ 'ಪಾಮುಕೊಂಡ' ಎಂದು ಹೆಸರು ಬಂದಿದೆ ಎನ್ನುತ್ತಾರೆ.[೨೩] ಪಾಮು + ಕೊಂಡ ಎರಡು ಪದಗಳು ತೆಲುಗಿನ ಪದಗಳಾಗಿವೆ. ಈ ಪ್ರದೇಶವು ಆಂಧ್ರದ ಗಡಿಭಾಗದಲ್ಲಿರುವುದರಿಂದ ತೆಲುಗಿನ ಹೆಸರು ಹೊಂದಿದೆ ಎನ್ನಬಹುದು. ಪಾಮುಕೊಂಡ ಪ್ರದೇಶವನ್ನು ಮರಾಠರು ವಶಪಡಿಸಿಕೊಂಡಾಗ 'ಪಾವಗಡ' ಎಂದು ಹೆಸರನ್ನು ಪರಿವರ್ತಿಸಿದರು. 'ಗಡ' ಎಂದರೆ ಸಣ್ಣಕೋಟೆ ಎಂಬರ್ಥವಿದೆ. ಮರಾಠ ಭಾಷೆಯಲ್ಲಿ ಇದು 'ಕೋಟೆ' ಎಂಬ ಹೆಸರನ್ನು ಸೂಚಿಸುತ್ತದೆ.

ಯಲ್ಲಪ್ಪನಾಯಕನ ಹೊಸಕೋಟೆ : ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಜನವಸತಿಗಳು ಇದ್ದವೆಂದು ದಾಖಲೆಗಳಿಂದ ದೃಢಪಟ್ಟಿದೆ.[೨೪] ಯಲ್ಲಪ್ಪನಾಯಕನು ಕುಂದುರ್ಪಿಯಿಂದ ಈ ಪ್ರದೇಶಕ್ಕೆ ಯುಗಾದಿ ಹಬ್ಬಕ್ಕೆಂದು ಬಂದಿದ್ದಾಗ, ಒಂದು ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗಿದ್ದನ್ನು ನೋಡಿ, ಇದು ಗಂಡು ಭೂಮಿ ವೀರಭೂಮಿ ಎಂದು ಭಾವಿಸಿ ಒಂದು ಹೊಸದಾದ ಕೋಟೆಯನ್ನು ನಿರ್ಮಿಸಿದನು. ಅಂದಿನಿಂದ 'ಯಲ್ಲಪ್ಪನಾಯಕನ ಹೊಸಕೋಟೆ' ಎಂದು ಜನರು ಕರೆಯುತ್ತಾ ಬಂದಿದ್ದಾರೆ.

ಐತಿಹಾಸಿಕ ವ್ಯಕ್ತಿ ಯಲ್ಲಪ್ಪನಾಯಕ ಒಂದು ಪ್ರದೇಶದಲ್ಲಿ ಹೊಸದಾಗಿ ಗ್ರಾಮವನ್ನು ಸ್ಥಾಪಿಸಿ ಅದರ ಸುತ್ತಲೂ ಕೋಟೆ ಕೊತ್ತಲಗಳನ್ನು ನಿರ್ಮಿಸಿದುದಕ್ಕೆ ಆತನ ಹೆಸರೇ ಈ ಊರಿಗೆ ಉಳಿದು ಬಂದಿದೆ. ಯಲ್ಲಪ್ಪನಾಯಕ + ಹೊಸಕೋಟೆ > ಯಲ್ಲಪ್ಪನಾಯಕನ ಹೊಸಕೋಟೆ ಇಲ್ಲಿ ಯಲ್ಲಪ್ಪನಾಯಕ ಐತಿಹಾಸಿಕ ವ್ಯಕ್ತಿಯಾದರೆ, ಹೊಸಕೋಟೆಯು ನಿರ್ಮಾಣವಾಚಿಯಾಗಿದೆ.

ಬಂಗಾರನಾಯಕನ ದುರ್ಗ : ನೈಸರ್ಗಿಕವಾಗಿರುವ ಬೆಟ್ಟದಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ, ಕೋಟೆ ಕೊತ್ತಲಗಳನ್ನು ನಿರ್ಮಿಸಿದ ಬಂಗಾರನಾಯಕನು ಜನಸಮುದಾಯಗಳ ಮನಸ್ಸಿನಲ್ಲಿ ನಿಲ್ಲುವಂತೆ ಆಳ್ವಿಕೆ ಮಾಡಿದ್ದನು. ಆತನು ಆಪಾರವಾದ ಬಂಗಾರವನ್ನು ಹೊಂದಿದ್ದವನು. ಹೈದರ್‌ನು ಬಂಗಾರನಾಯಕನನ್ನು ಕುತಂತ್ರದಿಂದ ಕೊಂದು, ಆತನ ಇಡೀ ಸಂಸ್ಥಾನವನ್ನು ಧ್ವಂಸ ಮಾಡಿದ್ದನು. ಇಲ್ಲಿನ ಜನರು, ಬಂಗಾರನಾಯಕನ ಸ್ಮರಣೆಗಾಗಿ ಆತನ ಹೆಸರನ್ನು ಈ ದುರ್ಗಕ್ಕೆ ಇಡಲಾಗಿದೆ ಎಂದು ಇಲ್ಲಿನ ಜನರು ಹೇಳುತ್ತಾರೆ.

ಜನರ ಮನಸ್ಸನ್ನು ಗೆದ್ದಿದ್ದ ಬಂಗಾರನಾಯಕನು ತಾನು ಆಳಿದ ಸ್ಥಳಕ್ಕೆ ತನ್ನ ಹೆಸರನ್ನೇ ಹೊಂದಿದ್ದಾನೆ. ಈತನು ಚರಿತ್ರೆಯಲ್ಲಿ ಆಳಿಹೋದ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ. ಬಂಗಾರನಾಯಕ + ದುರ್ಗ>ಬಂಗಾರನಾಯಕನ ದುರ್ಗ, ಬಂಗಾರನಾಯಕ ಐತಿಹಾಸಿಕ ವ್ಯಕ್ತಿ ವಾಚಕವಾದರೆ ದುರ್ಗವು ನಿರ್ಮಾಣ ವಾಚಕವಾಗಿದೆ.

ದೇವರಬೆಟ್ಟ : ಚೋಳರ ಕಾಲದಲ್ಲಿ ಪ್ರಸಿದ್ಧವಾದ ರಂಗನಾಥ ದೇವಾಲವನ್ನು ಇಲ್ಲಿನ ಬೆಟ್ಟದಲ್ಲಿ ನಿರ್ಮಿಸಿದರು. ಅಲ್ಲದೆ ಗ್ರಾಮವನ್ನು ಸ್ಥಾಪಿಸಿ, ಕೋಟೆಯನ್ನು ನಿರ್ಮಿಸಿದ್ದಾರೆ. ಪ್ರಸಿದ್ಧ ರಂಗನಾಥ ದೇವರನ್ನು ಹೊಂದಿರುವ ಬೆಟ್ಟಕ್ಕೆ 'ದೇವರ ಬೆಟ್ಟ'ವೆಂದು ಕರೆಯುತ್ತಾರೆ. ಇಲ್ಲಿನ ಸುತ್ತಲ ಪಾಳೇಗಾರರಿಗೆ, ಜನಸಮುದಾಯಗಳಿಗೆ ದೇವರಬೆಟ್ಟದ ರಂಗನಾಥ ಮನೆದೇವರಾಗಿದ್ದನು. ಆ ಹಿನ್ನೆಲೆಯಲ್ಲಿ ಈ ಊರಿಗೆ 'ದೇವರ ಬೆಟ್ಟ' ಎಂದು ಕರೆಯುತ್ತಿದ್ದರು. ಅಂದಿನಿಂದಲೂ ಈ ಹೆಸರೇ ಉಳಿದುಬಂದಿದೆ ಎನ್ನುತ್ತಾರೆ. ನೈಸರ್ಗಿಕವಾಗಿರುವ ಬೆಟ್ಟದಲ್ಲಿ ದೇವಾಲಯವನ್ನು ಅಥವಾ ದೇವರನ್ನು ನೆಲೆಗೊಳಿಸಿದ್ದಕ್ಕೆ ಈ ಊರಿಗೆ ಮತ್ತು ಬೆಟ್ಟಕ್ಕೆ 'ದೇವರಬೆಟ್ಟ' ಎಂದು ಹೆಸರು ರೂಢಿಗೆ ಬಂದಿರಬಹುದು.

ದೇವರಾಯನ ದುರ್ಗ : ಈ ಪ್ರದೇಶಕ್ಕೆ 'ದೇವರಾಯನ ದುರ್ಗ'ವೆಂದು ಹೆಸರು ಬರಲು ಎರಡು ವಿಚಾರಗಳನ್ನು ಇಲ್ಲಿನ ಜನರು ಹೇಳುತ್ತಾರೆ. ೧. ದೇವರುಗಳ ಒಡೆಯ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯ ವಾಸಸ್ಥಾನವನ್ನು ಈ ದುರ್ಗವು ಹೊಂದಿರುವುದರಿಂದ 'ದೇವರಾಯನ ದುರ್ಗ'ವೆಂದು ಕರೆಯುತ್ತಾರೆ. ೨. ಮೈಸೂರು ಸಂಸ್ಥಾನದ ಚಿಕ್ಕದೇವರಾಜ ಒಡೆಯರು ಈ ದುರ್ಗದಲ್ಲಿದ್ದ ನರಸನಾಯಕನನ್ನು ಸೋಲಿಸಿ, ದುರ್ಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ನಂತರ ಇಲ್ಲಿನ ದುರ್ಗವನ್ನು ಪುನರ್ ನಿರ್ಮಾಣ ಮಾಡಿದರು. ಅಂದಿನಿಂದ ಈ ಊರಿಗೆ 'ದೇವರಾಯನ ದುರ್ಗ'ವೆಂದು ಕರೆಯುತ್ತಾರೆ. ಈ ಎರಡು ವಿಚಾರವನ್ನು ಪರಿಶೀಲಿಸಿದಾಗ ಎರಡನೇ ವಿಚಾರವು ಸರಿಯೆಂದು ಹೇಳಬಹುದು. ದಾಖಲೆಗಳಲ್ಲಿ ಕ್ರಿ.ಶ.೧೬೭೫ರಲ್ಲಿ ಚಿಕ್ಕದೇವರಾಜ ಒಡೆಯರು ಜಟಕನ ದುರ್ಗದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡು, ನರಸನಾಯಕನನ್ನು ಮರ್ಧಿಸಿದರು. ಅಂದಿನಿಂದ ಜಟಕನದುರ್ಗವು ಚಿಕ್ಕದೇವರಾಯನ ದುರ್ಗ ಎಂದು ಬದಲಾಯಿತು[೨೫] ಎಂದು ಉಲ್ಲೇಖಿತವಾಗಿದೆ.

ಪುರಾಣಕಾಲದಲ್ಲಿ ದೇವರಾಯನ ದುರ್ಗವು ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿತ್ತು. ಇದು ಕೃತ ಯುಗದಲ್ಲಿ 'ಉತ್ಕಲ ಪರ್ವತ'ವೆಂದು, ತ್ರೇತಾಯುಗದಲ್ಲಿ 'ಸಿಂಹಾದ್ರಿ'ಯೆಂದು, ದ್ವಾಪರ ಯುಗದಲ್ಲಿ 'ಸಿದ್ಧಗಿರಿ'ಯೆಂದು, ಕಲಿಯುಗದಲ್ಲಿ 'ಕರಿಗಿರಿ'ಯೆಂದು ಕರೆಯಲ್ಪಟ್ಟಿದೆ.[೨೬] ಹೊಯ್ಸಳರ ೨ನೇ ಬಲ್ಲಾಳನ ಕಾಲಕ್ಕೆ 'ಆನೆಬಿದ್ದ ಸರಿ' ಎಂಬ ಹೆಸರನ್ನು ದೇವರಾಯನ ದುರ್ಗ ಹೊಂದಿತ್ತು.[೨೭] ಪ್ರೌಢದೇವರಾಯನ ಕಾಲದಲ್ಲಿ 'ಆನೆಬಿದ್ದ ಸರಿದುರ್ಗವೆಂದು ನಂತರ ಜಟಕನದುರ್ಗವೆಂದು ಹೆಸರು ಹೊಂದಿರುವುದು ಕಾಣುತ್ತೇವೆ.[೨೮] ಚಿಕ್ಕದೇವರಾಯನ ವಶದಲ್ಲಿದ್ದ ಈಗಿನ ದೇವರಾಯನ ದುರ್ಗವು ಬಹಳ ಅಭಿವೃದ್ಧಿಯನ್ನು

ಹೊಂದಿತ್ತು. ಈತನ ಕಾಲದಲ್ಲಿಯೇ ಈ ದುರ್ಗಕ್ಕೆ 'ದೇವರಾಯನ ದುರ್ಗ' ಎಂದು ಹೆಸರು ಬಂದಿದೆ.

ಕೊರಟಗೆರೆ : ನೈಸರ್ಗಿಕವಾಗಿರುವ ಬೆಟ್ಟದಲ್ಲಿ ಸಣ್ಣ ಭೈರೇಗೌಡನು ಗಂಗಾಧರೇಶ್ವರ ದೇವಾಲಯ ನಿರ್ಮಿಸಿ ಗ್ರಾಮವನ್ನು ಸ್ಥಾಪಿಸಿ, ಬೆಟ್ಟಕ್ಕೂ ಮತ್ತು ಊರಿಗೂ ಕೋಟೆ ಕೊತ್ತಲವನ್ನು ನಿರ್ಮಿಸಿದನು. ಭೈರೇಗೌಡನಿಗೆ ನೈಸರ್ಗಿಕವಾಗಿರುವ ಬೆಟ್ಟವು 'ತೆಂಗಿನ ಚಿಪ್ಪು ಬೋರಲಾಗಿ ಹಾಕಿದಂತೆ ಕಾಣುತ್ತಿತ್ತು' ಆದುದರಿಂದ 'ಕರಟಗಿರಿ' ಎಂಬ ಹೆಸರನ್ನು ಇಟ್ಟನು. 'ಗಿರಿ'ಯನ್ನೇ ಹೊಂದಿಕೊಂಡು ಒಂದು ಕೆರೆಯನ್ನು ನಿರ್ಮಿಸಿದನು. ಅಂದಿನಿಂದ ಕರಟಕೆರೆ>ಕೊರಟಕೆರೆ>ಕೊರಟಗೆರೆ ಆಯಿತೆಂದು ಇಲ್ಲಿನ ಜನರು ಹೇಳುತ್ತಾರೆ.

'ಕರಟ' ಎಂದರೆ 'ತೆಂಗಿನ ಚಿಪ್ಪು'[೫೯] ಎಂಬರ್ಥವಿದೆ. ಇದನ್ನೆ, ಬೋರಲು ಹಾಕಿದ ತೆಂಗಿನ ಚಿಪ್ಪು' ಎಂದು ಬಳಸಿಕೊಳ್ಳಲಾಗಿದೆ. ಬೆಟ್ಟವು 'ಬೋರಲು ಹಾಕಿದ ತೆಂಗಿನ ಚಿಪ್ಪು'ವಿನ ರೀತಿ ಇರುವುದರಿಂದ ಕರಟ+ಗಿರಿ>ಕರಟಗಿರಿ>ಕೊರಟಕೆರೆ>ಕೊರಟಗೆರೆಯಾಗಿರಬಹುದೆಂದು ಊಹಿಸಬಹುದು. ಇಲ್ಲಿ ಕ>ಗ ಬದಲಾವಣೆ ಕ್ರಿಯೆ ನಡೆದಿದೆ. ಇದು ಕನ್ನಡದಲ್ಲಿ ಸಾಮಾನ್ಯ ನಿಯಮವಾಗಿದೆ.

ಹುಲಿಯೂರು ದುರ್ಗ : ಇಲ್ಲಿನ ಪ್ರದೇಶವು ದಟ್ಟ ಅರಣ್ಯಗಳಿಂದ ಕೂಡಿದ್ದರಿಂದ ಹುಲಿಗಳು ಹೆಚ್ಚು ವಾಸಿಸುತ್ತಿದ್ದವು. ಈ ಪ್ರದೇಶಕ್ಕೆ ಕೆಂಪೇಗೌಡನು ಬೇಟೆಗಾಗಿ ಬಂದು ಇಲ್ಲಿನ ಹುಲಿಗಳನ್ನು ಕೊಂದು ಹಾಕಿದನು. ನಂತರದ ದಿನಗಳಲ್ಲಿ ಈ ಪ್ರದೇಶದಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ ಈ ಗ್ರಾಮಕ್ಕೆ ಹುಲಿಯೂರು ಎಂದು ಹೆಸರಿಡುತ್ತಾನೆ. ಈ ಹುಲಿಯೂರನ್ನು ಸಂರಕ್ಷಿಸಲು ಊರಿನ ಸುತ್ತಲೂ ಬೆಟ್ಟವನ್ನು ಒಳಗೊಂಡಂತೆ ಕೋಟೆ ಕೊತ್ತಲಗಳನ್ನು ನಿರ್ಮಿಸಿ 'ಹುಲಿಯೂರು ದುರ್ಗ'ವೆಂದು ಕರೆಯುತ್ತಾನೆಂದು ಇಲ್ಲಿನ ಜನರು ಹೇಳುತ್ತಾರೆ. ಆದರೆ ಕೆಂಪೇಗೌಡನ ಕಾಲಕ್ಕಿಂತ ಹಿಂದೆಯೇ 'ಹುಲಿಯೂರು' ಎಂಬ ಹೆಸರು ರೂಢಿಯಲ್ಲಿತ್ತೆಂದು ಲಕ್ಕಶೆಟ್ಟಿಪುರ ಮತ್ತು ಉಜ್ಜನಿಗಳಲ್ಲಿರುವ ಶಾಸನಗಳು ಸ್ಪಷ್ಟಪಡಿಸುತ್ತವೆ. ನಂತರದ ದಿನಗಳಲ್ಲಿ ಇದೇ ಹುಲಿಯೂರಿಗೆ ಮತ್ತು ಪಕ್ಕದಲ್ಲಿರುವ ಬೆಟ್ಟಕ್ಕೆ ಕೆಂಪೇಗೌಡನು ಕೋಟೆಕೊತ್ತಲ(ದುರ್ಗ)ವನ್ನು ನಿರ್ಮಿಸಿದ್ದಕ್ಕೆ 'ಹುಲಿಯೂರುದುರ್ಗ'ವೆಂದಾಯಿತು.[೬೦] ಮೇಲಿನ ವಿಚಾರಗಳನ್ನು ಗಮನಿಸಿದಾಗ ಶಾಸನಗಳಲ್ಲಿ 'ಹುಲಿಯೂರು' ಮೊದಲೇ ಊರಿಗೆ ಇಟ್ಟಿರುವುದರಿಂದ ಅದಕ್ಕೆ ಕೆಂಪೇಗೌಡನು ದುರ್ಗವನ್ನು ನಿರ್ಮಿಸಿದ್ದರಿಂದ 'ಹುಲಿಯೂರು ದುರ್ಗ'ವೆಂದಾಗಿರಬಹುದು.

ಹುತ್ರಿದುರ್ಗ : ಹುತ್ರಿದುರ್ಗವನ್ನು 'ಹುತ್ತರಿ ದುರ್ಗ'ವೆಂತಲೂ ಕರೆಯುತ್ತಾರೆ. 'ಹುತ್ತರಿ' ಎಂದರೆ ಹೊಸ ಅಕ್ಕಿ[೬೧] ಎಂಬರ್ಥವಿದೆ. ಇಲ್ಲಿರುವ ಬೆಟ್ಟಕ್ಕೆ ಹುತ್ರಿಬೆಟ್ಟ ಅಥವಾ ಹುತ್ರಿದುರ್ಗವೆಂದು ಕರೆದರೆ, ಅದರ ಬುಡದಲ್ಲಿರುವ ಊರಿಗೆ 'ಸಂತೇಪೇಟೆ' ಎಂಬ ಹೆಸರಿದೆ. ಹುತ್ರಿ ಅಥವಾ ಹುತ್ತರಿ ಎಂಬ ಹೆಸರು ಹೇಗೆ ಬಂತೆಂಬುದು ಯಾವುದೇ ಮೌಖಿಕ ಅಥವಾ ಲಿಖಿತ ದಾಖಲೆಗಳಲ್ಲಿ ಮಾಹಿತಿ ದೊರೆಯುವುದಿಲ್ಲ. ಇಲ್ಲಿನ ನೈಸರ್ಗಿಕವಾಗಿರುವ ಬೆಟ್ಟಕ್ಕೆ ಕೆಂಪೇಗೌಡನು ಕೋಟೆಕೊತ್ತಲಗಳನ್ನು ನಿರ್ಮಿಸಿ ಹುತ್ರಿಬೆಟ್ಟಕ್ಕೆ 'ಹುತ್ರಿದುರ್ಗ' ಎಂದು ಹೆಸರನ್ನು ಇಡುತ್ತಾನೆ. ಅಂದಿನಿಂದಲೂ ಊರಿಗೂ ಮತ್ತು ಬೆಟ್ಟಕ್ಕೂ

ಹುತ್ರಿದುರ್ಗವೆಂದು ಕರೆಯುವುದು ರೂಢಿಯಲ್ಲಿತ್ತು. ಆದರೆ ಊರಿಗೆ ಪ್ರಸ್ತುತ ಸಂದರ್ಭದಲ್ಲಿ 'ಸಂತೇಪೇಟೆ' ಎಂದೇ ಕರೆಯುತ್ತಿದ್ದಾರೆ.

ಹಾಗಲವಾಡಿ : ಚಿಕ್ಕನಾಯಕನ ಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಪಾಳೇಗಾರ ಮುದಿಯಪ್ಪನಾಯಕನು ಬೇಟೆಗೆಂದು ಈಗಿನ ಹಾಗಲವಾಡಿ ಪ್ರದೇಶದಲ್ಲಿ ಸಾಗುತ್ತಿದ್ದನು. ಅದೇ ಸಂದರ್ಭದಲ್ಲಿ ಹಾಗಲ ಗಿಡದಡಿಯಲ್ಲಿ ಒಂದು ಮೊಲವು ನರಿಯನ್ನು ಓಡಿಸಿಕೊಂಡು ಹೋಗುವುದನ್ನು ನೋಡಿದನು. ಆತನಿಗೆ ಆಶ್ಚರ್ಯವುಂಟಾಗಿ ಈ ಪ್ರದೇಶವು ವೀರಭೂಮಿಯಾಗಿದೆ ಎಂದು ಭಾವಿಸಿ ಮರು ದಿನವೆ ಗ್ರಾಮ ಮತ್ತು ಕೋಟೆ ಕೊತ್ತಲನ್ನು ನಿರ್ಮಿಸಲು ಪ್ರಾರಂಭಿಸಿದನು. ಈ ಗ್ರಾಮಕ್ಕೆ ಹಾಗಲದಡಿಯಲ್ಲಿ ನೋಡಿದ ಘಟನೆಗೆ ಹಾಗಲದಹಳ್ಳಿ ಎಂಬ ಹೆಸರಿಟ್ಟನು. ಕೋಟೆ ಕೊತ್ತಲ ನಿರ್ಮಿಸಿದ್ದಕ್ಕೆ 'ವಾಡಿ'ಯನ್ನು ನಂತರ ಸೇರಿಸಿ ಕರೆದರು. 'ಹಾಗಲವಾಡಿ' ಎಂಬ ಹೆಸರು ಈಗಲೂ ಉಳಿದುಕೊಂಡು ಬಂದಿದೆ ಎಂದು ಹೇಳುತ್ತಾರೆ. ಆದರೆ ಲಿಖಿತ ದಾಖಲೆಗಳಲ್ಲಿ 'ಕರಿಯಪ್ಪನಾಯಕ ಮತ್ತು ಆತನ ಸಹೋದರರು ಹಾಗಲದ ಹಳ್ಳಿಯನ್ನು ಆಳ್ವಿಕೆ ಮಾಡುತ್ತಿದ್ದರು. ಮುದಿಯಪ್ಪನಾಯಕನು ರಾಜ್ಯ ವಿಸ್ತಾರದ ಸಂದರ್ಭದಲ್ಲಿ ಇದನ್ನು ವಶಪಡಿಸಿಕೊಂಡು ಕೋಟೆಕೊತ್ತಲಗಳನ್ನು ನಿರ್ಮಿಸಿದನು. ಹಾಗಲದಹಳ್ಳಿಗೆ ಹೊಸಕೋಟೆ ಕಟ್ಟಿಸಿದ ನಂತರ 'ಹಾಗಲವಾಡಿ' ಎನಿಸಿಕೊಂಡಿತು.[೩೨]

'ಹಾಗಲ' ಎಂದರೆ 'ಒಂದು ಜಾತಿಯ ಬಳ್ಳಿ ಮತ್ತು ಅದರ ಕಾಯಿ' ಇದೊಂದು ತರಕಾರಿಯಾಗಿದ್ದು, 'ವಾಡಿ'ಯೆಂದರೆ ಗೋಡೆ, ಬಿಡಾರ[೩೩] ಎಂದರ್ಥವಿದೆ. 'ವಾಡಿ' ಎಂಬ ಪದ ಮರಾಠಿ ಮೂಲವನ್ನು ಹೊಂದಿದೆ. 'ವಾಡ' ಎಂದರೆ ಓಣಿ, ಬೀದಿ ಎಂಬರ್ಥಗಳಿವೆ.

ಸಿರಾ : ಈ ಪ್ರದೇಶದಲ್ಲಿ ಸಿರಿಯಣ್ಣ ಮತ್ತು ದೇವಣ್ಣರೆಂಬ ಸೋದರರು ಹಾಲು ಹಯನಗಳನ್ನು ಮಾರಿಕೊಂಡು, ಬಂದ ಸಂಪಾದನೆಯಲ್ಲಿ ಗ್ರಾಮವೊಂದನ್ನು ನಿರ್ಮಿಸಿದರು. ಕೆಲವು ದಿನಗಳ ನಂತರ ಈ ಗ್ರಾಮದ ಕಾಡಿಗೆ ರತ್ನಗಿರಿ ರಂಗಪ್ಪನಾಯಕನು ಬೇಟೆಗಾಗಿ ಬರುತ್ತಾನೆ. ಬೇಟೆಯಾಡುವಾಗ ದಣಿವಾಗುತ್ತದೆ. ದಣಿವನ್ನು ನೀಗಿಸುತ್ತಿರುವ ಸಂದರ್ಭದಲ್ಲಿ ತಮ್ಮದೇ ಬೇಟೆ ನಾಯಿಯ ಮೇಲೆ ಮೊಲವು ಸವಾರಿ ಮಾಡುತ್ತಿರುತ್ತದೆ. ಈ ಘಟನೆಯನ್ನು ನೋಡಿದ ಪಾಳೇಗಾರನು ಈ ಪ್ರದೇಶವು ಗಂಡುಭೂಮಿಯೆಂದು ಭಾವಿಸಿ, ಕೋಟೆ ಕೊತ್ತಲ ನಿರ್ಮಿಸಲು ಇದೇ ಪ್ರದೇಶದಲ್ಲಿ ವಾಸಿಸುತ್ತಿದ್ದ ಸಿರಿಯಣ್ಣ, ದೇವಣ್ಣರ ಸಹಾಯ ಕೋರುತ್ತಾನೆ. ಇಬ್ಬರು ಪಾಳೇಗಾರನ ಕೋರಿಕೆಗೆ ಒಪ್ಪಿ ಕೋಟೆಕೊತ್ತಲ ನಿರ್ಮಿಸಲು ಸಹಾಯ ಮಾಡುತ್ತಾರೆ. ಇವರ ಸಹಾಯದ ನೆನಪಿಗಾಗಿ ರಂಗಪ್ಪನಾಯಕನು 'ದೇವಣ್ಣ ಸಿರಿಯನಾಡು' ಎಂದು ಹೆಸರಿಡುತ್ತಾನೆ. ಅದು ಮುಂದೆ 'ಸಿರಾ' ನಾಡಾಗಿ ರೂಢಿಗೆ ಬರುತ್ತದೆ ಎಂದು ಇಲ್ಲಿನ ಜನರು ಹೇಳುತ್ತಾರೆ. ಆದರೆ ಶಾಸನಗಳು ಇದಕ್ಕಿಂತ ಪ್ರಾಚೀನದಲ್ಲಿಯೇ ಸಿರಾದ ಹೆಸರು ಉಲ್ಲೇಖಗೊಳಿಸಿವೆ. ಸಿರಾ ಪ್ರದೇಶವು ಹೇಮಾವತಿಯ ನೊಳಂಬವಾಡಿಗೆ ಸೇರಿತ್ತೆಂದು ಬರಗೂರಿನ

ಶಾಸನ "ಸೀರೆನಾಡ ನಾನ್ದೂರವಿತ್ತಂ" ಎಂದು ಹೇಳಿದೆ.[೩೪] ಇನ್ನೊಂದು ಹೊಯ್ಸಳರ ಶಾಸನ "ರಾಯದುರ್ಗವೇಂಠೆ, ಸೀರೆಹ ಸೀಮೆ, ತರಿಗೆರೆಯೊಳಗಣ ಹೊಳಕಲ್ಲಿ" ಎಂದು ಉಲ್ಲೇಖಿಸಿದೆ.[೩೫] ಈ ಎರಡು ಶಾಸನಗಳು ಮೇಲಿನ ಐತಿಹ್ಯಕ್ಕಿಂತ ಹಿಂದಿನ ಕಾಲಕ್ಕೆ ಹೋಗುವುದರಿಂದ 'ಸಿರಾ'ದ ಹೆಸರು ಪ್ರಾಚೀನ ಕಾಲದಲ್ಲಿಯೇ ಇತ್ತೆಂದು ಊಹಿಸಬಹುದಾಗಿದೆ. ಎಂ.ವಿ.ಚಿತ್ರಲಿಂಗಯ್ಯನವರು ಸಿರಾವನ್ನು ಶಿಬಿರಕಂ-ಶಿವಿರಯಂ-ಸೀರಯಂ - ಸೀರ್ಯ ಎಂದು ಗುರುತಿಸಿದ್ದಾರೆ. ಪ್ರಸ್ತುತದಲ್ಲಿ ಸೀರ್ಯ, ಸೀರಾ ಶಿರಾ, ಸಿರ, ಸಿರಾ ಎಂದು ಕರೆಯುತ್ತಾ ಬಂದಿದ್ದಾರೆ.

ಈ ಮೇಲಿನ ಎಲ್ಲಾ ಸ್ಥಳನಾಮಗಳನ್ನು ಗಮನಿಸಿದರೆ ಇವು ಐತಿಹಾಸಿಕವಾಗಿ ವ್ಯಕ್ತಿಯನ್ನೋ, ಪ್ರಾದೇಶಿಕ ವೈಶಿಷ್ಟ್ಯವನ್ನೋ ಇಲ್ಲವೆ ಚಾರಿತ್ರಿಕ ಘಟನೆಯನ್ನೋ ಸೂಚಿಸುತ್ತವೆ. ಎಷ್ಟೋ ಸಂದರ್ಭದಲ್ಲಿ ಜನಪದರು ಹೇಳುವ ಈ ಐತಿಹ್ಯಗಳೆಲ್ಲ ಕೆಲವು ಬಾರಿ ಅಸತ್ಯವಾಗಿದೆ.(ಉದಾಹರಣೆಗೆ 'ಮಿಡಿಗೇಶಿ' 'ಸಿರಾ' ಊರಿನ ಬಗೆಗೆ ಇರುವ ವಿಚಾರ ನೋಡಬಹುದು) ಪ್ರಶ್ನೆಯೆಂದರೆ ಒಬ್ಬ ಚಾರಿತ್ರಿಕವಾದ ಪ್ರಮುಖ ನಾಯಕನಿಗೆ (ದೇವರಾಯನ ದುರ್ಗ, ಯಲ್ಲಪ್ಪನಾಯಕನ ಹೊಸಕೋಟೆ ಬಂಗಾರನಾಯಕನ ದುರ್ಗ) ಊರುಗಳ ಹೆಸರುಗಳನ್ನು ಬಹುತೇಕವಾಗಿ ಯಾಕೆ ಜೋಡಿಸಿರುತ್ತಾರೆ? ಅಥವಾ ಒಬ್ಬ ಸಂತನೊಂದಿಗೆ, ದೈವದೊಂದಿಗೆ (ದೇವರಬೆಟ್ಟ, ಭಸ್ಮಾಂಗಿ ಸಿದ್ಧಾಪುರ, ಬಿಜ್ಜಾವರ) ಸ್ಥಳನಾಮಗಳು ಸಂಬಂಧವನ್ನು ಹೊಂದಿರುವುದು ಹೆಚ್ಚಾಗಿ ಕರ್ನಾಟಕದಾದ್ಯಂತ ಕಂಡುಬರಲು ಕಾರಣವೇನು? ಎಂಬುದನ್ನು ಅರಿಯ ಬೇಕಾಗುತ್ತದೆ.

ರಾಜಕೀಯ ಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆರಡು ಸಮುದಾಯದ ಬದುಕನ್ನು ಯಾವಾಗಲೂ ಪ್ರಭಾವಿಸುತ್ತಲೇ ಬಂದಿವೆ. ಇವುಗಳಿಗೆ ಪ್ರತಿರೋಧ, ಸ್ಪಂದನೆಗಳಿಂದಲೇ ಜನಸಮುದಾಯ ತನ್ನ ಬದುಕಿನ ಆಚರಣೆ, ಹಾಡು, ಕತೆ ಪದ್ಧತಿಯನ್ನು ರೂಪಿಸಿಕೊಂಡಿವೆ. ಸ್ಥಳನಾಮಗಳಿಗೆ ಸಂಬಂಧಿಸಿದಂತೆ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳು ತಮ್ಮ ಅಸ್ತಿತ್ವಕ್ಕಾಗಿ ಎಷ್ಟೋ ಸ್ಥಳಗಳಲ್ಲಿ ಪ್ರಭಾವವನ್ನು ಬೀರಿ(ಅದು ಯುದ್ಧವಾಗಿರಬಹುದು ಇಲ್ಲವೆ ಅಭಿವೃದ್ಧಿ ಕಾರ್ಯಗಳ ಮೂಲಕವಾಗಿರಬಹುದು) ಅಲ್ಲಿನ ಸಮುದಾಯದ ಭಾಗವಾಗಿದ್ದಾರೆ. ಹೀಗೆ ಸಮುದಾಯದಲ್ಲಿ ಬದುಕಿನಲ್ಲಿ ಒಂದಾದ ಜನರ ಅಥವಾ ಘಟನೆಗಳ ಸ್ಮೃತಿಗಳು ಸ್ಥಳನಾಮಗಳ ಮೂಲಕವೋ, ಹಾಡು-ಕತೆಗಳ ಮೂಲಕವೋ ಅಭಿವ್ಯಕ್ತಿ ಹೊಂದಿರಬಹುದೆಂಬುದನ್ನು ಕಾಣಬಹುದಾಗಿದೆ.

೫.೨. ಕೋಟೆಗಳ ನಿರ್ಮಾಣ ಪೂರ್ವದ ಮೌಖಿಕ ಕಥನ

ಮಧ್ಯಕಾಲೀನ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಪಾಳೆಯಪಟ್ಟುಗಳ ಸ್ಥಾಪನೆಯು ಅತಿ ಮಹತ್ವವೆಂದು ಹೇಳಬಹುದು. ಅದರಲ್ಲಿ ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳು ವಿಜಯನಗರ

ಸಾಮ್ರಾಜ್ಯದ ಒಂದು ಭಾಗವಾಗಿದ್ದವು. ಆ ಸಾಮ್ರಾಜ್ಯದ ಅವನತಿಯ ನಂತರ ಈ ಸಂಸ್ಥಾನಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹವಣಿಸಿದವು. ಇಂತಹ ರಾಜಕೀಯ ಅನೈಕ್ಯತೆಯ ಕಾಲದಲ್ಲಿ ತುಮಕೂರು ಜಿಲ್ಲೆಯಾದ್ಯಂತ ಸಣ್ಣಪುಟ್ಟ ಪಾಳೇಗಾರರ ಸಂಸ್ಥಾನಗಳು ತಲೆ ಎತ್ತಿದವು. ಅವುಗಳಲ್ಲಿ ನಿಡುಗಲ್ಲು, ಹಾಗಲವಾಡಿ, ಮಧುಗಿರಿ, ಸಿರಾ, ಕೊರಟಗೆರೆ, ಹುಲಿಯೂರುದುರ್ಗ, ಯಲ್ಲಪ್ಪನಾಯಕನ ಹೊಸಕೋಟೆಯಂತಹ ಅನೇಕ ರಾಜ ಮನೆತನಗಳು ಪ್ರಸಿದ್ಧಿಗೆ ಬಂದವು. ವಿಜಯನಗರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಇವುಗಳ ಮೇಲೆ ಬಿದ್ದಿತು. ಆದರೂ ಅವರವರ ಪ್ರಾದೇಶಿಕ ಸಂಪನ್ಮೂಲಗಳಿಗನುಗುಣವಾಗಿ ಈ ಕೆಲಸವನ್ನು ಅವು ನಿರ್ವಹಿಸಿದವು. ಇಂತಹ ಪಾಳೆಯ ಪಟ್ಟುಗಳ ಸ್ಥಾಪನೆಯ (ಕೋಟೆ ನಿರ್ಮಾಣ ಪೂರ್ವದಲ್ಲಿ) ಸಂದರ್ಭದಲ್ಲಿ ಯಾವ ರೀತಿಯಲ್ಲಿ ಅಲ್ಲಿನ ಜನಸಮುದಾಯಗಳು ಆ ಪ್ರದೇಶಗಳನ್ನು ಕುರಿತಂತೆ ಹೇಗೆ ಕಂಡಿದ್ದಾರೆಂಬುದನ್ನು ಇಲ್ಲಿ ಕಾಣಬಹುದಾಗಿದೆ.

ವಿಜಯನಗರ ಕಾಲದಿಂದಲೂ ತುಮಕೂರು ಜಿಲ್ಲೆಯ ಸಂಸ್ಥಾನಗಳ ಸ್ಥಾಪನೆಯು ಅರಸರ ಅಧಿಕಾರಿಗಳಿಂದ ನೆರವೇರಿದ್ದರೂ ಅಧಿಕೃತವಾಗಿ ತಮ್ಮ ಭೌಗೋಳಿಕ ಪ್ರದೇಶವನ್ನು ಗುರುತಿಸಿಕೊಂಡು ಪಾಳೆಯಪಟ್ಟುಗಳು ಸ್ಥಾಪನೆಗೆ ನಾಂದಿ ಹಾಡಿದ್ದು ವಿಜಯನಗರದ ಅವನತಿಯ ನಂತರ. ಈ ರೀತಿ ಸ್ಥಾಪನೆಗೊಂಡ ಪಾಳೆಯಪಟ್ಟುಗಳು ಯಾವ ಕಾಲಘಟ್ಟದಲ್ಲಿ ಸ್ಥಾಪನೆಯಾದವು ಎಂಬುದನ್ನು ಲಿಖಿತ ಚರಿತ್ರೆಯು ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಲಿಖಿತ ಚರಿತ್ರೆಯಲ್ಲಿ ಶಾಸನಗಳು, ಹಸ್ತಪ್ರತಿಗಳು, ಗ್ರಂಥಗಳು ಇತ್ಯಾದಿಯಾಗಿ ಹಲವು ದಾಖಲೆಗಳ ಆಧಾರದಿಂದ ಸಂಸ್ಥಾನಗಳು ಸ್ಥಾಪನೆಯಾಗಿದ್ದಕ್ಕೆ ನಿಖರವಾದ ಕಾಲವನ್ನು ಒಳಗೊಂಡಂತೆ ವಿವರಿಸಿರುವುದು ಕಾಣುತ್ತೇವೆ. ಅಲ್ಲದೆ ಇನ್ನಿತರ ಕೆಲವು ಸಣ್ಣಪುಟ್ಟ ಪಾಳೆಯಪಟ್ಟುಗಳ ವಿವರಣೆಯನ್ನು ಒದಗಿಸಿಕೊಡುವುದಿಲ್ಲ. ಅಂತಹ ಸಂದರ್ಭದಲ್ಲಿ ಸ್ಥಳೀಯರ ಮೌಖಿಕ ವಿಚಾರವನ್ನು ಪರಿಶೀಲಿಸಿದರೆ ಸಹಜವಾಗಿಯೇ ಸಂಸ್ಥಾನ ಸ್ಥಾಪಿಸಿದ್ದಕ್ಕೆ, ಕೋಟೆ ಕೊತ್ತಲ ನಿರ್ಮಿಸಿದ್ದಕ್ಕೆ ಮಹತ್ವದ ವಿಷಯಗಳು ದೊರೆಯುತ್ತವೆ. ಮೌಖಿಕರಲ್ಲಿ ದೊರೆತ ವಿಚಾರಗಳು ಲಿಖಿತ ಚರಿತ್ರೆಗೆ ಸಮಾನ ಸ್ಪರ್ಧಿಯಾಗಿ ನಿಲ್ಲದಿದ್ದರೂ, ಮೌಖಿಕ ವಿಚಾರಗಳು ಹಲವು ಕಾರಣಗಳಿಂದ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಾಣ ಮಾಡುವುದಕ್ಕೆ ಸಹಾಯವಾಗಬಲ್ಲವು ಎಂದು ಹೇಳಬಹುದು.

ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳ ಸ್ಥಾಪನೆಯ ಹಿನ್ನೆಲೆಯ ಬಗ್ಗೆ ಲಿಖಿತ ಚರಿತ್ರೆಯಲ್ಲಿ ಕಾಣಲಾಗದ ಹಲವಾರು ವಿಚಾರಗಳನ್ನು ಇಲ್ಲಿನ ಜನಸಮುದಾಯಗಳು ಹೇಳುತ್ತವೆ. ಪರಂಪರೆಯಿಂದಲೂ ಉಳಿಸಿಕೊಂಡು ಬಂದಿರುವ ಈ ಜನಸಾಮಾನ್ಯರ ವಿಚಾರಗಳ ಕಡೆಗೆ ಗಮನಹರಿಸಿದಾಗ ವಿಶಿಷ್ಟವಾದ ರೀತಿಯಲ್ಲಿ ಜನಪದರ ನಂಬಿಕೆಗಳು ಹೊರಬೀಳುತ್ತವೆ. ಈ ನಂಬಿಕೆಗಳಿಂದಲೇ ತುಮಕೂರು ಜಿಲ್ಲೆಯ ಪಾಳೆಯಪಟ್ಟುಗಳು ಏಕೆ ಸ್ಥಾಪನೆಗೊಂಡವು ಎಂಬುದನ್ನು ಅರಿಯುವುದು ಬಹಳ ಮುಖ್ಯವಾದುದು. ಪಾಳೆಯಪಟ್ಟುಗಳ ಸ್ಥಾಪನೆಯಲ್ಲಿ ಎಲ್ಲಾ ರೀತಿಯ ವಿಷಯಗಳನ್ನು ಪೂರೈಸುವಲ್ಲಿ ಅಲ್ಲಿನ ಭೌಗೋಳಿಕ

ವಿಶೇಷ ಪ್ರಾಶಸ್ತ್ಯವನ್ನು ಹೊಂದಿರಬೇಕು. ಮೊದಲಿಗೆ ಅದು ವೀರಭೂಮಿ/ಗಂಡುಭೂಮಿ ಆಗಿರಬೇಕು. ತದನಂತರ ಅದು ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು. ಇವೆರಡು ಸರಿ ಎಂದು ಭಾವಿಸಿದಲ್ಲಿ ಆ ಸ್ಥಳದಲ್ಲಿ ಪಾಳೆಯಪಟ್ಟು ಸ್ಥಾಪಿಸಿ ಕೋಟೆಕೊತ್ತಲ ನಿರ್ಮಿಸುವುದು ವಾಡಿಕೆ. ಅಲ್ಲದೆ ರಕ್ಷಣೆ ಒದಗಿಸುವಲ್ಲಿ ಯೋಗ್ಯ ಸ್ಥಳವಾಗಿರಬೇಕೆಂಬುದು ಸಹ ಬಹಳ ಮುಖ್ಯವಾಗಿರುತ್ತದೆ.

ಮೌಖಿಕ ಕಥನಗಳು ಸಾಮಾನ್ಯವಾಗಿ ಅಲೌಕಿಕವಾದ ನಿರೂಪಣೆಯಿಂದ ಕೂಡಿರುತ್ತವೆ. ಇವು ಸಮುದಾಯದ ಬದುಕಿನ ಚೈತನ್ಯವನ್ನು ಹಾಗೂ ಧಾರ್ಮಿಕ ಶ್ರದ್ಧೆಯನ್ನೂ ಹೆಚ್ಚಿಸುವುದರಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ಕೋಟೆಗಳಿಗೆ ಸಂಬಂಧಿಸಿದ ಮೌಖಿಕ ಕಥನಗಳೂ ಕೂಡ ಹೀಗೆ ಧಾರ್ಮಿಕ ಶ್ರದ್ಧೆಯನ್ನು, ಬದುಕುವ ಉತ್ಸಾಹವನ್ನು ಹೆಚ್ಚಿಸುವಲ್ಲಿ ರಚಿತವಾದವುಗಳೇ ಆಗಿವೆ. ಆದರೆ ಮುಖ್ಯವಾಗಿ ಈ ರೀತಿ ರಚಿತವಾಗುವ ಅಲೌಕಿಕ ಮೌಖಿಕ ಕಥನಗಳ ಹಿಂದಿರುವ ಲೌಕಿಕ ಒತ್ತಡಗಳನ್ನು ನಾವು ಗಮನಿಸಬೇಕಿದೆ. ಈ ಸಮುದಾಯದ ಯಾವ ಒತ್ತಡಗಳು ಇಂತಹದ್ದೊಂದು ಕಥನಗಳ ರಚನೆಗೆ ಕಾರಣವಾಗಿದೆ ಎಂಬುದನ್ನು ಅರಿತರೆ ಒಟ್ಟು ಸಮುದಾಯದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಯ ಅರಿವು ಅರ್ಥವಾಗುತ್ತದೆ. ಹಾಗಾಗಿ ಜನಪದ ಮೌಖಿಕ ಕಥನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅವು ಎಷ್ಟೇ ಪವಾಡಗಳಂತೆ ಅತಿಮಾನುಷವಾಗಿ ಚಿತ್ರಿತವಾಗಿದ್ದರೂ ಅವುಗಳೊಂದಿಗೆ ಸಂಬಂಧ ಹೊಂದಿರುವ ಸಮುದಾಯದ ಲೌಕಿಕ ಆಶೋತ್ತರಗಳನ್ನು ಗಮನಿಸಲೇ ಬೇಕಾಗುತ್ತದೆ.

ಕೋಟೆಗಳ ನಿರ್ಮಾಣ ಪೂರ್ವದ ಘಟನೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಭಾರತದಾದ್ಯಂತ ಕೆಲವು ಕಥನ ಮಾದರಿಗಳು ಪ್ರಚಲಿತದಲ್ಲಿವೆ. ಈ ಕಥನ ಮಾದರಿಗಳು ಸಣ್ಣ-ಪುಟ್ಟ ಕೋಟೆಗಳಿಂದ ಹಿಡಿದು ಬಹುದೊಡ್ಡದಾದ ಸಾಮ್ರಾಜ್ಯಗಳವರೆಗೆ ವ್ಯಾಪಿಸಿವೆ. ಇವುಗಳಲ್ಲಿ ಕೆಲವು ಪ್ರಮುಖ ಕಥನ ಮಾದರಿಗಳೆಂದರೆ ೧. ಮೊಲವೊಂದು ನರಿಯನ್ನೋ ಅಥವಾ ನಾಯಿಯನ್ನೋ ಬೆನ್ನಟ್ಟಿಕೊಂಡು ಹೋಗುವುದು, ೨. ಹುತ್ತಕ್ಕೆ ಹಸುವೊಂದು ಹಾಲೆರೆಯುವುದು, ೩. ಕನಸಿನಲ್ಲಿ ಅಶರೀರವಾಣಿ ನುಡಿವುದು. ಈ ರೀತಿಯ ಕಥನಗಳು ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ನಿರ್ಮಾಣ ಪೂರ್ವದಲ್ಲಿ ಕಾಣಿಸಿಕೊಂಡಿರುವುದನ್ನು ಕಾಣಬಹುದು. ಈ ಕಥನ ಮಾದರಿಗಳನ್ನು ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಹುತ್ತಕ್ಕೆ ಸ್ವಯಂ ಹಾಲೆರೆಯುವ ಹಸುವಿನ ಕತೆ ಅಥವಾ ಐತಿಹ್ಯ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಪ್ರಚಲಿತದಲ್ಲಿದೆ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನವಾಗಿರುವ ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಐತಿಹ್ಯವು ಸ್ಥಳ ಪುರಾಣಗಳ ರೂಪದಲ್ಲಿ ಜನಪ್ರಿಯವಾಗಿವೆ. ಗ್ಯಾಟ್ರಿಯಾಲ ಐಶಿಂಗರ್ ಅವರು ಹುತ್ತಕ್ಕೆ ಹಾಲೆರೆಯುವ ಹಸು ಕುರಿತಾದ ಸುಮಾರು ೧೫೦ಕ್ಕೂ ಹೆಚ್ಚು ಪಠ್ಯಗಳನ್ನು

ತಮಿಳುನಾಡು, ಆಂಧ್ರ ಪ್ರದೇಶ, ಕೇರಳ, ರಾಜಸ್ಥಾನ, ಉತ್ತರ ಪ್ರದೇಶಗಳಿಂದ ವರದಿ ಮಾಡಿದ್ದಾರೆ. ಬ. ಫ್ಲಹರ್ಟಿ ಅವರು ಈ ಐತಿಹ್ಯವನ್ನು ಮನಃಶಾಸ್ತ್ರೀಯವಾಗಿ ವಿಶ್ಲೇಷಿಸುವ ಸಾಹಸ ಮಾಡಿದ್ದಾರೆ. (Eichinger ೧೯೮೭, O' Flaherty ೧೯೭೩) ಭಾರತ ದೇಶದ ವಿವಿಧ ಗೆಜೆಟಿಯರ್‌ಗಳಲ್ಲಿ, ಸೆನ್ಸಸ್ ಆಫ್ ಇಂಡಿಯಾದ ವಿವಿಧ ಸಂಪುಟಗಳಲ್ಲಿ ಈ ಐತಿಹ್ಯದ ವಿವಿಧ ಪಠ್ಯಗಳನ್ನು ಕಾಣಬಹುದು. ವಿಲಿಯಂ ಕ್ರೂಕ್ (೧೯೧೨), ಡೇವಿಡ್ ಪುಲ್ಮನ್ (೧೯೭೮) ಮೊದಲಾದ ವಿದ್ವಾಂಸರು ಪ್ರಾಸಂಗಿಕವಾಗಿ ಪ್ರಸ್ತುತ ಐತಿಹ್ಯಕ್ಕೆ ಪ್ರತಿಕ್ರಿಯಿಸಿದ್ದಾರೆ.[೬೬]

ತುಮಕೂರು ಜಿಲ್ಲೆಯ ಕೋಟೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಹಾಗಲವಾಡಿ, ಬಿಜ್ಜಾವರ, ಚಿಕ್ಕನಾಯಕನಹಳ್ಳಿ, ಯಲ್ಲಪ್ಪನಾಯಕನ ಹೊಸಕೋಟೆ, ಸಿರಾ ಕೋಟೆಗಳು ಹೀಗಿರುವ ಸ್ಥಳಗಳಲ್ಲಿ ಸ್ಥಾಪನೆಗೊಳ್ಳಲು ಇರುವ ಮುಖ್ಯ ಕಾರಣವೆಂದರೆ ಈ ಸ್ಥಳಗಳಲ್ಲಿ ಮೊಲವು ನಾಯಿಯನ್ನೋ ನರಿಯನ್ನೋ ಬೆನ್ನಟ್ಟಿಕೊಂಡು ಹೋಗಿರುವುದು ಕಂಡುಬಂದು, ಅದರಿಂದಾಗಿ ಈ ನೆಲವು ವೀರತ್ವದ ಗುಣವನ್ನು ಹೊಂದಿದೆ ಎಂದು ತಿಳಿಯಲಾಗಿದೆ. ಈ ವೀರತ್ವ ಹೊಂದಿರುವ ನೆಲದಲ್ಲಿ ಕೋಟೆಗಳನ್ನು ನಿರ್ಮಿಸುವುದರಿಂದ ಅದು ಸುಲಭವಾಗಿ, ಯಾವ ಶತ್ರುವಿನಿಂದಲೂ ಸೋಲಿಸಲಾಗದ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಗಿರುತ್ತೆಂದು ನಂಬಲಾಗಿದೆ. ಈ ನಂಬಿಕೆಯೇ ಈ ಮೇಲೆ ತಿಳಿಸಿದ ಕೋಟೆಗಳ ಸ್ಥಾಪನೆಗೆ ಕಾರಣವೆಂದು ಆಯಾ ಪ್ರದೇಶಗಳ ಜನಸಮುದಾಯಗಳು ನಂಬಿವೆ. ಪ್ರಶ್ನೆಯೆಂದರೆ ಈ ತರಹದ ಒಂದು ಘಟನೆಯೇ ಒಂದು ಕೋಟೆ ಅಥವಾ ಸಂಸ್ಥಾನ ಸ್ಥಾಪನೆಗೆ ನಿಜವಾಗಿಯೂ ಪ್ರಮುಖ ಕಾರಣವಾಗುತ್ತದೆಯೇ? ಎನ್ನುವುದು. ಏಕೆಂದರೆ ಒಂದು ಕೋಟೆ ಅಥವಾ ಸಂಸ್ಥಾನ ಸ್ಥಾಪನೆಗೆ ಈ ರೀತಿಯ ಘಟನೆಗಳಿಗಿಂತ ಸಂಘಟನಾ ಶಕ್ತಿ, ರಾಜಕೀಯ ಮುತ್ಸದ್ದಿತನ, ಶೌರ್ಯ ಮುಂತಾದವು ಮುಖ್ಯವಾಗುತ್ತವೆ. ಹಾಗಾದರೆ ಈ ರೀತಿಯ ಕಥನಗಳು ಹುಟ್ಟಿಕೊಳ್ಳಲು ಕಾರಣವೇನು? ಎಂಬುದನ್ನು ಕ್ಷೇತ್ರದಲ್ಲಿ ದೊರೆತಿರುವ ಕಥನಗಳನ್ನು ಚರ್ಚಿಸಲಾಗುವುದು.

ಮಧುಗಿರಿ ಮಹಾನಾಡ ಪ್ರಭುಗಳ ತಲೆಮಾರಿನವರು ಬಿಜ್ಜಾವರ ಕೋಟೆಯನ್ನು ಸ್ಥಾಪಿಸುವ ಮೊದಲು ಇಂಥದೇ ಮೊಲ ನಾಯಿಯ ಕಥೆಯು ಸಮುದಾಯಗಳಲ್ಲಿ ಹುಟ್ಟಿಕೊಂಡಿದೆ. ಮಹಾನಾಡ ಪ್ರಭುಗಳ ಮೊದಲಿಗನಾದ ಮಾರೇಗೌಡನು ಜಯಮಂಗಲಿ ತಟದಲ್ಲಿ ಒಂದು ಪಟ್ಟಣವನ್ನು ನಿರ್ಮಿಸಿ ಅದಕ್ಕೆ ಮುಮ್ಮಡಿ ಪಟ್ಟಣವೆಂದು ಹೆಸರಿಡುತ್ತಾನೆ. ಈತನ ಮಗನಾದ ವೀರೇಗೌಡನು ಇನ್ನಷ್ಟು ಈ ಪಟ್ಟಣವನ್ನು ಅಭಿವೃದ್ಧಿ ಮಾಡಿ ಕಾಲವಾಗುತ್ತಾನೆ. ಇವನ ಮಗ ದೊಡ್ಡೇಗೌಡನ ಕಾಲದಲ್ಲಿಯೇ ಮುಸ್ಲಿಂ ನಾಯಕರಿಂದ ಪಟ್ಟಣವೆಲ್ಲ ಸರ್ವನಾಶಹೊಂದುತ್ತದೆ. ಈ ಸಂದರ್ಭದಲ್ಲಿ ದೊಡ್ಡೇಗೌಡನ ಮಗ ಹಿರೇ ಚಿಕ್ಕಪ್ಪಗೌಡನನ್ನು ತುಂಗವಟಿಯಲ್ಲಿ ಯುದ್ಧದ ಸಮಯದಲ್ಲಿ ಬಚ್ಚಿಟ್ಟಿದ್ದರು. ಆತನು ಪ್ರಾಪ್ತ ವಯಸ್ಕನಾದ ಮೇಲೆ ಮುಮ್ಮಡಿ ಪಟ್ಟಣ ಮತ್ತೆ ಪುನರ್ ನಿರ್ಮಿಸಿ, ಮುಂದೆ ಸಂಸ್ಥಾನವನ್ನು

ವಿಸ್ತರಿಸಿ, ಭದ್ರವಾದ ಕೋಟೆ ಕೊತ್ತಲಗಳನ್ನು ಸ್ಥಾಪಿಸುವ ಅವಶ್ಯಕತೆ ಉಂಟಾಗುತ್ತದೆ. ಅದಕ್ಕಾಗಿ ಸೂಕ್ತ ಪ್ರದೇಶವನ್ನು ಹುಡುಕಲು ಕುದುರೆ ಏರಿ ಸಂಚಾರ ಮಾಡುವಾಗ ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋದ ದೃಶ್ಯ ನೋಡಿ ಆಶ್ಚರ್ಯ ಗೊಂಡನು. ಇಂತಹ ಘಟನೆ ನಡೆದ ಸ್ಥಳವು ವೀರಭೂಮಿ ಅಥವಾ ಗಂಡುಭೂಮಿಯೆಂದು ಭಾವಿಸಿ ಈಗಿರುವ ಕೋಟೆಯನ್ನು ನಿರ್ಮಾಣ ಮಾಡುತ್ತಾನೆ.

ಇಲ್ಲಿನ ಕೋಟೆಯ ಸ್ಥಾಪನೆಗೆ ಮೌಖಿಕ ಕಥನಗಳು ಹೇಳುವ ಮೊಲ-ನಾಯಿಯ ಪ್ರಸಂಗ ಮಾತ್ರ ಕಾರಣವಲ್ಲ ಎನ್ನುವುದು ಸ್ಪಷ್ಟವಾಗಿದೆ. ಏಕೆಂದರೆ ಕೋಟೆಯ ಸ್ಥಾಪನೆಗೆ ಕಾರಣವಾದ ಅಂಶವೆಂದರೆ ಹಿರೇ ಚಿಕ್ಕಪ್ಪಗೌಡನಿಗೆ ಮರಳಿ ಮುಮ್ಮಡಿ ಪಟ್ಟಣವನ್ನು ಸ್ಥಾಪಿಸುವುದಾಗಿತ್ತು. ಹಾಗೆ ಸ್ಥಾಪಿಸುವ ಸಂಸ್ಥಾನದ ಕುರಿತು ಅಲೌಕಿಕ ಹಿನ್ನೆಲೆಯನ್ನು, ಧಾರ್ಮಿಕ ಶ್ರದ್ಧೆಯನ್ನು ಮೂಡಿಸುವ ಕಾರ್ಯಗಳನ್ನು ಈ ತರಹದ ಮೊಲ-ನಾಯಿಯ ಪ್ರಸಂಗದ ಕಥನಗಳು ಮಾಡುತ್ತವೆ. ದೊಡ್ಡೇಗೌಡನ ಕಾಲದಲ್ಲಿಯೇ ಮುಸ್ಲಿಮರ ದಾಳಿಯಿಂದ ತತ್ತರಿಸಿದ ಜನಸಮುದಾಯದಲ್ಲಿ ಶೌರ್ಯದ ಚೈತನ್ಯವನ್ನು ತುಂಬಲು ಮತ್ತು ಚಿಕ್ಕಪ್ಪಗೌಡನು ನಿರ್ಮಿಸುವ ಕೋಟೆಯ ಬಗ್ಗೆ ಪ್ರಶ್ನಾತೀತ ನಿಷ್ಠೆಯನ್ನು ವ್ಯಕ್ತಪಡಿಸಲು ಜನಸಮುದಾಯಗಳನ್ನು ಈ ತರಹದ ಕಥನಗಳು ಒತ್ತಾಯಿಸುತ್ತವೆ.

ಚಿಕ್ಕನಾಯಕನಹಳ್ಳಿಯ ಕೋಟೆ ನಿರ್ಮಾಣದ ಪೂರ್ವದಲ್ಲಿ ಭೈರಪ್ಪನಾಯಕನು ಒಮ್ಮೆ ರಾಜ್ಯ ವಿಸ್ತರಣೆ ಮಾಡಬೇಕೆಂದು ಸೆಟ್ಟಿಕೆರೆಯನ್ನು ಬಿಟ್ಟು ಪ್ರಯಾಣ ಬೆಳೆಸುತ್ತಾನೆ. ಈ ರೀತಿ ಪ್ರಯಾಣ ಮಾಡುವಾಗ ಈಗಿನ ಚಿಕ್ಕನಾಯಕನಹಳ್ಳಿಯ ಪ್ರದೇಶದಲ್ಲಿ ಮೊಲವು ನಾಯಿಯನ್ನು ಓಡಿಸಿಕೊಂಡು ಹೋಗುವ ಪ್ರಸಂಗವನ್ನು ಗಮನಿಸಿ, ವೀರಭೂಮಿ/ಗಂಡುಭೂಮಿಯೆಂದು ಭಾವಿಸಿ, ತನ್ನ ಸಂಸ್ಥಾನದ ಗುರುಹಿರಿಯರ ಸಲಹೆಯನ್ನು ಕೇಳುತ್ತಾನೆ. ಅವರಿಂದ ಶುಭ ಸೂಚನೆ ಬಂದ ತಕ್ಷಣವೇ ಕೋಟೆಯನ್ನು ಚಿಕ್ಕನಾಯಕನಹಳ್ಳಿಯಲ್ಲಿ ಪ್ರಾರಂಭಿಸುತ್ತಾನೆ. ಹಾಗೆಯೇ ಹಾಗಲವಾಡಿ ಕೋಟೆಯನ್ನು ನಿರ್ಮಿಸುವ ಪೂರ್ವದಲ್ಲಿ ಹಿರಿಯ ಮುದಿಯಪ್ಪನಾಯಕನು ಸಂಸ್ಥಾನ ವಿಸ್ತರಣೆ ಮಾಡಬೇಕೆಂದು ಸೈನ್ಯದೊಂದಿಗೆ ಕುದುರೆ ಏರಿ ಪ್ರಯಾಣ ಬೆಳೆಸುತ್ತಾನೆ. ಈಗಿನ ಹಾಗಲವಾಡಿ ಪ್ರದೇಶದಲ್ಲಿ ದಣಿವಾರಿಸಿಕೊಳ್ಳಲು ಒಂದು ಮರದಡಿಯಲ್ಲಿ ತಂಗುತ್ತಾನೆ. ಇದೇ ಸಂದರ್ಭದಲ್ಲಿ ಮೊಲವು ನರಿಯನ್ನು ಹಾಗಲಗಿಡದ ಬಳ್ಳಿಯಡಿಯಲ್ಲಿ ಓಡಿಸಿಕೊಂಡು ಹೋಗುವುದನ್ನು ಕಂಡು ಆಶ್ಚರ್ಯ ಪಡುತ್ತಾನೆ. ಪಕ್ಕದಲ್ಲಿದ್ದ ಸೈನ್ಯವೆಲ್ಲವೂ ಈ ಘಟನೆಯನ್ನು ಕುತೂಹಲದಿಂದ ನೋಡಿತು. ಇದರಿಂದ ನಾಯಕನು ಈ ಪ್ರದೇಶವು ವೀರಭೂಮಿಯೆಂದು ಭಾವಿಸಿ ಕೋಟೆ ಕೊತ್ತಲಗಳನ್ನು ನಿರ್ಮಾಣ ಮಾಡಿದನು.

ಹಾಗೆಯೇ ಯಲ್ಲಪ್ಪನಾಯಕನು ಕುಂದುರ್ಪಿ(ಈಗ ಆಂಧ್ರಪ್ರದೇಶದಲ್ಲಿದೆ)ಯಿಂದ ಯುಗಾದಿ ಹಬ್ಬಕ್ಕೆಂದು ತಮ್ಮ ಸಂಬಂಧಿಕರ ಮನೆಗೆ ಬರುತ್ತಾನೆ. ಈಗಿನ ಹೊಸಕೋಟೆಯ ಬಳಿ ಮೊಲಗಳು ನಾಯಿಯ ಮೇಲೆ ಸವಾರಿ ಮಾಡುತ್ತಿದ್ದ ಪ್ರಸಂಗವನ್ನು ನೋಡುತ್ತಾನೆ. ಆತನಿಗೆ ಈ ಪ್ರದೇಶವು ವೀರಭೂಮಿಯೆಂದು

ಗೊತ್ತಾಗುತ್ತದೆ. ಆದುದರಿಂದ ಇಲ್ಲಿಯೇ ಹೊಸದಾಗಿ ಕೋಟೆ ಕೊತ್ತಲಗಳನ್ನು ನಿರ್ಮಾಣ ಮಾಡಲು ಮನಸ್ಸು ಮಾಡುತ್ತಾನೆ. ಮೇಲಿನ ಕಥನಗಳನ್ನೇ ಸಿರಾದ ಕೋಟೆಯು ಸಹ ಹೋಲುತ್ತದೆ. ರತ್ನಗಿರಿಯ ರಂಗಪ್ಪನಾಯಕನು ಬೇಟೆಗೆಂದು ಈಗಿನ ಸಿರಾ ಪ್ರದೇಶಕ್ಕೆ ಆಗಮಿಸುತ್ತಾನೆ. ನಾಯಕನು ಬೇಟೆಯಾಡಿ ಮರದಡಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುತ್ತಾನೆ. ಅದೇ ವೇಳೆಗೆ ಅವರದೇ ಬೇಟೆ ನಾಯಿಯ ಮೇಲೆ ಮೊಲವು ಸವಾರಿ ಮಾಡುತ್ತದೆ. ಇದನ್ನು ನೋಡಿದ ಪಾಳೇಗಾರನು ಈ ಪ್ರದೇಶವು ವೀರಭೂಮಿಯೆಂದು ಜೊತೆಯಲ್ಲಿ ಬಂದಿದ್ದ ಸರ್ವರಿಗೂ ಹೇಳುತ್ತಾನೆ. ಈ ಪ್ರದೇಶದಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಬೇಕೆಂದು ಈ ಪ್ರದೇಶದಲ್ಲಿ ವಾಸವಾಗಿದ್ದ ಹಿರಿಯರನ್ನು ಕೇಳಿ, ಒಪ್ಪಿಗೆ ಪಡೆದು ಕೋಟೆ ಕೊತ್ತಲ ನಿರ್ಮಾಣ ಮಾಡುತ್ತಾನೆ.

ಕೋಟೆ ಕೊತ್ತಲಗಳ ನಿರ್ಮಾಣ ಪೂರ್ವದಲ್ಲಿ ನಡೆದ ನಾಯಿ ಮತ್ತು ಮೊಲದ ಕಥನಗಳು ಒಂದು ದುರ್ಬಲ ಪ್ರಾಣಿಯು ತನಗಿಂತಲೂ ಬಲವಾದ ಪ್ರಾಣಿಯನ್ನು ಓಡಿಸಿಕೊಂಡು ಹೋಗುವ ಅಥವಾ ಆ ಪ್ರಾಣಿಯ ಮೇಲೆ ಸವಾರಿ ಮಾಡುವ ಧೈರ್ಯವು ಬರಲು ಈ ಸ್ಥಳದ ಅಥವಾ ಪ್ರದೇಶದ ಮಹಿಮೆಯೇ ಇರಬೇಕೆಂಬುದು ಕಥನಗಳ ಆಶಯವಾಗಿದೆ. ಇಂತಹ ಪ್ರದೇಶದಲ್ಲಿ ಅಪೌರುಷವಂತನು ಪೌರುಷನಾಗಬಲ್ಲ ಎಂಬ ತಿಳುವಳಿಕೆಯಾಗಿದೆ. ಜನಸಮುದಾಯಗಳು ತಾವು ವಾಸಿಸುವ ಪ್ರದೇಶಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟು ಪವಿತ್ರೀಕರಿಸುತ್ತಾರೆ.

ಇನ್ನು ಮೌಖಿಕ ಕಥನಗಳ ಎರಡನೇ ಮಾದರಿಯೆಂದರೆ ಹಸುವೊಂದು ನಿರ್ದಿಷ್ಟ ಸ್ಥಳದಲ್ಲಿ ಹಾಲನ್ನು ಕರೆಯುವುದು, ಕುರಿ, ಮೇಕೆಗಳಿಂದ ಒಂದು ಪ್ರದೇಶದಲ್ಲಿ ನೀರಿನ ಶೋಧದಿಂದ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಕಾರಣವಾಗಿರುವುದು ಮುಖ್ಯ ವಿಚಾರವಾಗಿದೆ. ಮಹಾನಾಡ ಪ್ರಭುಗಳು ಕಟ್ಟಿಸಿದ ಸಿದ್ಧಾಪುರದ ಕೋಟೆ, ಮಧುಗಿರಿ ಕೋಟೆ ಹಾಗೂ ಚನ್ನರಾಯದುರ್ಗದ ಕೋಟೆಯ ನಿರ್ಮಾಣ ಪೂರ್ವಕ್ಕೆ ಈ ಮೇಲಿನ ಘಟನೆಗಳು ಕಾರಣವಾಗಿವೆ.

ಈ ತರಹದ ಮಿತ್‌ಗಳು ಕೋಟೆಗಳಿಗೆ ಮಾತ್ರವಲ್ಲದೆ ಕರ್ನಾಟಕದ ನೂರಾರು ಸಂತರ ಚರಿತ್ರೆಯಲ್ಲೂ ಕಂಡುಬರುತ್ತವೆ. ತೋಂಟದ ಸಿದ್ಧಲಿಂಗಯತಿ, ನಾಗಲಿಂಗಸ್ವಾಮಿ, ಚೆನ್ನಬಸವೇಶ ಮುಂತಾದ ಸಂತರಿಗೆ ಸಂಬಂಧಿಸಿದಂತೆ ಹಸುವೊಂದು ಹಾಲೆರೆಯುವ ಚಿತ್ರಣವನ್ನು ವಿವರಸಲಾಗುತ್ತದೆ. ಈ ರೀತಿಯ ಕಥನಗಳು ಕೋಟೆಗಳನ್ನಾಗಲಿ ಸಂತರನ್ನಾಗಲಿ, ಪವಿತ್ರೀಕರಿಸುವ ಉದ್ದೇಶದಿಂದ ರೂಪುಗೊಂಡಿರ ಬಹುದಾಗಿದೆ. ಕುರಿ, ಮೇಕೆಗಳು ನೀರು ಶೋಧಿಸಿದ ಪ್ರಸಂಗವು ಕೋಟೆಯಲ್ಲಿ ಜೀವಿಸಬೇಕಿದ್ದ ಜನರ ಅವಶ್ಯಕತೆಗಳಲ್ಲಿ ಒಂದಾದ ನೀರಿನ ಸೌಕರ್ಯವನ್ನು ಹೊಂದಿರುವುದನ್ನು ಸೂಚಿಸುತ್ತದೆ. ಈ ಪ್ರಸಂಗದ ಕಥನಗಳು ಈ ರೀತಿ ಇವೆ. ಹಸು ಹಾಲೆರೆಯುವ ಕಥನದ ಒಂದು ಮಾದರಿ ಹೀಗಿದೆ. ಈಗಿನ ಸಿದ್ಧಾಪುರವಿರುವ ಜಾಗದಲ್ಲಿ ಹಿಂದೆ ಒಬ್ಬ ಗೌಡನು ದನಕಾಯುತ್ತಾ ಜೀವನ ಸಾಗಿಸುತ್ತಿದ್ದನು. ಆದರೆ

ಈತನು ಈ ಜಾಗದಲ್ಲಿ ಉಳಿದುಕೊಳ್ಳಲು ಅನೇಕ ಭಾರಿ ಮನೆಗಳನ್ನು ಕಟ್ಟಲು ಪ್ರಯತ್ನಿಸಿ ವಿಫಲ ಗೊಂಡಿದ್ದನು. ಒಂದು ದಿನ ದನಗಳನ್ನು ಕಾಯುತ್ತಾ ಈ ವಿಚಾರವೇ ಚಿಂತಿಸುತ್ತಾ ಕುಳಿತಿದ್ದನು. ಅದೇ ವೇಳೆಗೆ ದನಗಳ ಹಿಂಡನ್ನು ಬಿಟ್ಟು ಒಂದು ಹಸು ಹೊರಹೋಗುವುದನ್ನು ನೋಡಿ ಅದರ ಹಿಂದೆಯೇ ಹಿಂಬಾಲಿಸಿದನು. ಆ ಹಸು ಒಂದು ಬಂಡೆಯ ಮೇಲೆ ನಿಂತು ಹಾಲೆರೆಯಲು ಪ್ರಾರಂಭಿಸಿತು. ಹಾಲು ಬಂಡೆಯಿಂದ ಕೆಳಗೆ ಜಾರಿ ಋಷಿಯ ಬಾಯಲ್ಲಿ ಬೀಳುತ್ತಿತ್ತು. ಇದನ್ನು ನೋಡಿದ ಗೌಡನು ಆಶ್ಚರ್ಯದಿಂದ ನಿಂತನು. ತಕ್ಷಣವೇ ಗೌಡನು ನೋಡುವುದನ್ನು ಋಷಿಯು ಗಮನಿಸಿದನು. ಗೌಡನನ್ನು ಹತ್ತಿರಕ್ಕೆ ಕರೆದು ನೀನು ಯಾರೆಂದು ವಿಚಾರಿಸಿದನು. ಗೌಡನು ಎಲ್ಲ ವಿಚಾರವನ್ನು ಹೇಳಿ ತನಗಾಗುವ ತೊಂದರೆಯನ್ನು ಹೇಳಿದನು. ನೀನು ಕೆಲವು ದಿನಗಳವರೆಗೆ ನೆಮ್ಮದಿಯಿಂದ ಇರು. ನಂತರ ಈ ಪ್ರದೇಶದಲ್ಲಿ ಮಹಾನಾಡ ಪ್ರಭುವಾದ ಇಮ್ಮಡಿ ಚಿಕ್ಕಪ್ಪಗೌಡನು ಊರನ್ನು ಸ್ಥಾಪಿಸಿ, ಕೋಟೆಕೊತ್ತಲಗಳನ್ನು ನಿರ್ಮಾಣ ಮಾಡುತ್ತಾನೆ. ಆಗ ಎಲ್ಲವೂ ಸರಿಹೋಗುತ್ತದೆ ಎಂದು ಹೇಳಿ ಕಳುಹಿಸುತ್ತಾನೆ. ಕೆಲವು ದಿನಗಳ ನಂತರ ಋಷಿ ಹೇಳಿದ ರೀತಿಯೇ ನಡೆಯುತ್ತದೆ.

ಹಾಗೆಯೇ ಕುರಿ, ಮೇಕೆ ನೀರು ಶೋಧಿಸುವ ಕಥನ ಮಾದರಿಗಳು ಹೀಗಿವೆ. ಮಹಾನಾಡ ಪ್ರಭುವಾದ ಇಮ್ಮಡಿ ಚಿಕ್ಕಪ್ಪಗೌಡನು ಮಹತ್ವವಾದ ಕೋಟೆ ಕೊತ್ತಲಗಳನ್ನು ಸ್ಥಾಪಿಸಬೇಕೆಂದು ಸೌಲಭ್ಯವಿರುವ ಸ್ಥಳದ ಆಯ್ಕೆಗೆ ಹುಡುಕಾಟ ಪ್ರಾರಂಭಿಸುತ್ತಾನೆ. ಒಮ್ಮೆ ಈಗಿನ ಮಧುಗಿರಿ ಬೆಟ್ಟದಿಂದ ಕುರಿಗಳು ಮೇಯ್ದು ಕೆಳಕ್ಕೆ ಇಳಿದು ಬರುತ್ತಿರುತ್ತವೆ. ಈ ಕುರಿಗಳು ಬೇಸಿಗೆಯಲ್ಲಿ ನೀರಿನಿಂದ ಮೈಯನ್ನು ತೋಯಿಸಿಕೊಂಡು ಬರುವುದನ್ನು ಕಂಡ ಇಮ್ಮಡಿ ಚಿಕ್ಕಪ್ಪಗೌಡನು ಈ ಬೆಟ್ಟದಲ್ಲಿ ನೀರಿನ ಸೌಲಭ್ಯವಿದೆ. ಜೊತೆಗೆ ಕಡಿದಾದ ಬೆಟ್ಟವಾಗಿರುವುದರಿಂದ ರಕ್ಷಣೆಯಿಂದಲೂ ಮಹತ್ವದ್ದಾಗಿದೆ ಎಂದು ಭಾವಿಸಿ ಕೋಟೆ ಕಟ್ಟಿಸುತ್ತಾನೆ. ಹಾಗೆಯೇ ಚನ್ನರಾಯದುರ್ಗದ ಕೋಟೆಯನ್ನು ತನ್ನ ಎರಡನೇ ಮಗನ ಅಕಾಲಿಕ ಮರಣದ ಸ್ಮರಣೆಗಾಗಿ ಕಟ್ಟುವುದಾಗಿರುತ್ತದೆ. ಎಲ್ಲಿ ಕೋಟೆ ಕಟ್ಟಲು ಸೂಕ್ತ ಪ್ರದೇಶವಿದೆ ಎಂಬುದನ್ನು ಶೋಧಿಸಿದವರಿಗೆ ಇನಾಮು ಕೊಡುತ್ತೇನೆಂದು ಡಂಗೂರ ಹಾಕಿಸುತ್ತಾನೆ. ಒಮ್ಮೆ ಗೊಲ್ಲರ ಜಾತಿಗೆ ಸೇರಿದ ಬೋಸನಾಯಕನು ಮೇಕೆಗಳನ್ನು ಮೇಯಿಸಲು ಈಗಿನ ಚನ್ನರಾಯದುರ್ಗಕ್ಕೆ ಹೋಗಿರುತ್ತಾನೆ. ಒಂದು ಮೇಕೆಯು ಮೇಯುವ ಹಿಂಡನ್ನು ಬಿಟ್ಟು ಒಂಟಿಯಾಗಿ ಹೋಗುವುದನ್ನು ನೋಡುತ್ತಾನೆ. ಅದು ಬೆಟ್ಟದ ಕಣಿವೆಯಲ್ಲಿ ತೂರಿ ನೀರು ಕುಡಿದು ಬರುತ್ತದೆ. ಅಗ ಬೋಸನಾಯಕನಿಗೆ ತಕ್ಷಣವೇ ಚಿಕ್ಕಪ್ಪಗೌಡನ ಡಂಗೂರದ ವಿಷಯ ಜ್ಞಾಪಿಸಿಕೊಂಡು, ಅದೇ ಸಂಜೆ ಮೇಕೆಗಳನ್ನು ಹಟ್ಟಿಯಲ್ಲಿ ಕೂಡಿ, ಇಮ್ಮಡಿ ಚಿಕ್ಕಪ್ಪಗೌಡನನ್ನು ಕಾಣಲು ಹೋಗುತ್ತಾನೆ. ಬೋಸನಾಯಕನು ತನ್ನ ಮೇಕೆಯು ಶೋಧಿಸಿದ ನೀರಿನ ಸೌಲಭ್ಯ ಮತ್ತು ಬೆಟ್ಟದ ಭೌಗೋಳಿಕ ವಿಚಾರ ತಿಳಿಸುತ್ತಾನೆ. ಆಗ ಬೋಸನಾಯಕ ಹೇಳಿದ ಪ್ರದೇಶ ಶೋಧಿಸಿ, ಆ ಪ್ರದೇಶದಲ್ಲಿ ಕೋಟೆಕಟ್ಟಲು ಬಹಳ ಪ್ರಾಶಸ್ತ್ಯ ಸ್ಥಳವೆಂದು ಭಾವಿಸಿ, ಕೋಟೆ ಕೊತ್ತಲ ಕಟ್ಟುತ್ತಾನೆ. ನಂತರ ಬೋಸನಾಯಕನಿಗೆ ಇನಾಮು ಕೊಟ್ಟನೆಂದು ಜನಪದರು ಹೇಳುತ್ತಾರೆ.

ಈ ರೀತಿಯ ಕಥನಗಳನ್ನು ಪರಿಶೀಲಿಸಿದರೆ ಪಾಳೇಗಾರರನ್ನು ಜನಸಮುದಾಯಗಳು ತಮ್ಮೊಂದಿಗೆ ಸಮೀಕರಿಸುವುದಾಗಿದೆ. ಇವೆಲ್ಲವೂ ಪ್ರಭುತ್ವ ಮತ್ತು ಸಮುದಾಯಗಳ ಅಂತಃಸಂಬಂಧಗಳನ್ನು ಸೂಚಿಸುತ್ತಿವೆ ಎನ್ನಬಹುದು.

ಇದೇ ತರಹದಲ್ಲಿ ಕೋಟೆಗಳನ್ನು ಪವಿತ್ರೀಕರಿಸಲು ಹುಟ್ಟಿಕೊಂಡ ಇನ್ನೊಂದು ರೀತಿಯ ಕಥನದ ಮಾದರಿಯೆಂದರೆ ಕನಸಿನಲ್ಲಿ ಅಶರೀರವಾಣಿಯೊಂದು ಹೇಳುವುದು ಮತ್ತು ಸಂತನು ಪ್ರತ್ಯಕ್ಷನಾಗಿ ಕೋಟೆ ನಿರ್ಮಾಣ ಮಾಡಲು ಪ್ರೇರಣೆ ನೀಡುವುದಾಗಿದೆ. ಬಿಜ್ಜಾವರದ ಕೋಟೆಯ ಸ್ಥಾಪನೆಗೆ ಸಂಬಂಧಿಸಿದಂತೆ ಹಿರೇ ಚಿಕ್ಕಪ್ಪಗೌಡನು ಮುಮ್ಮಡಿ ಪಟ್ಟಣವನ್ನು ಪುನರ್ ಸ್ಥಾಪಿಸಬೇಕೆಂದು ಪ್ರಯತ್ನಿಸಿದಾಗ ರಾತ್ರಿ ಕನಸಿನಲ್ಲಿ ಬಿಜ್ಜಾ ಮಹಾದೇವಿ ಎನ್ನುವ ದೇವತೆ ಕಾಣಿಸಿಕೊಂಡು, ನೀನು ಮುಂದೆ ರಾಜ್ಯವನ್ನು ಕಟ್ಟುವ ಆಕಾಂಕ್ಷೆಯನ್ನು ಹೊಂದಿದ್ದೀಯಾ, ಆದುದರಿಂದ ಒಂದು ಸೂಕ್ತವಾದ ನಿರ್ದಿಷ್ಟ ಜಾಗ ತೋರಿಸುತ್ತೇನೆ. ನೀನು ಆ ಜಾಗದಲ್ಲಿ ಕೋಟೆ ಕೊತ್ತಲ ನಿರ್ಮಾಣ ಮಾಡಿದರೆ ನಿನ್ನ ಸಂಸ್ಥಾನವು ಚಿರಾಯುವಾಗುತ್ತದೆ ಎಂದು ಹೇಳಿ ಮಾಯವಾದಳು. ಮುಂಜಾನೆ ಎಚ್ಚರಗೊಂಡ ಹಿರೇ ಚಿಕ್ಕಪ್ಪಗೌಡನು ಸ್ಥಳವನ್ನು ಹುಡುಕುತ್ತಾ ಹೋಗುತ್ತಾನೆ. ಕೊನೆಗೆ ದೇವಿ ಕನಸಿನಲ್ಲಿ ಹೇಳಿದ ಜಾಗವನ್ನು ಪತ್ತೆ ಹಚ್ಚಿ ಕೋಟೆಯನ್ನು ನಿರ್ಮಿಸುತ್ತಾನೆ. ಬಿಜ್ಜಾದೇವಿ ಕನಸಿನಲ್ಲಿ ಬಂದು ಕೋಟೆ ಸ್ಥಾಪನೆಗೆ ಪ್ರೇರಣೆ ನೀಡಿದ್ದರಿಂದ ಹಿರೇ ಚಿಕ್ಕಪ್ಪಗೌಡ ಸ್ಥಾಪಿಸಿದ ಕೋಟೆಗೆ 'ಬಿಜ್ಜಾವರ'ದ ಕೋಟೆ ಎನ್ನುವ ಹೆಸರು ಇಡುತ್ತಾನೆ.

ಇದೇ ರೀತಿ ಮಿಡಿಗೇಶಿ ಕೋಟೆ ನಿರ್ಮಾಣ ಪೂರ್ವದ ಹಂತದಲ್ಲಿ ನಡೆದ ಒಂದು ಕಥನ ಹೀಗಿದೆ. ಪಾಕನಾಟಿ ಒಕ್ಕಲಿಗ ಜಾತಿಗೆ ಸೇರಿದ ನಾಗಿರೆಡ್ಡಿಯು ಆಂಧ್ರ ಪ್ರದೇಶದ ತಿರುಪತಿಯ ಕಡೆಯಿಂದ ವಲಸೆಯ ಸಂಚಾರದಲ್ಲಿರುತ್ತಾನೆ. ಒಂದು ರಾತ್ರಿ ನಾಗಿರೆಡ್ಡಿಯು ನಿದ್ರಾವಸ್ಥೆಯಲ್ಲಿದ್ದಾಗ ಕನಸಿನಲ್ಲಿ ಈತನ ಆರಾಧ್ಯ ದೈವನಾದ ಶ್ರೀ ವೆಂಕಟರಮಣ ಸ್ವಾಮಿಯು "ನಿನಗೆ ಅಪಾರವಾದ ದ್ರವ್ಯ ಸಿಗುವುದೆಂದು, ಆ ದ್ರವ್ಯದಿಂದಲೇ ನೀನು ಪಶ್ಚಿಮದ ಕಡೆಯಲ್ಲಿ ನಾನು ಹೇಳಿದ ಜಾಗದಲ್ಲಿ ಸಂಸ್ಥಾನವನ್ನು ಸ್ಥಾಪಿಸು ನಿನಗೆ ಒಳ್ಳೆಯದಾಗುತ್ತದೆ ಎಂದು ಹೇಳಿದನು. ನಂತರ ನಿದ್ದೆಯಿಂದೆದ್ದಾಗ ಅಲ್ಲಿ ಯಾವುದೇ ಸುಳಿವು ಇರಲಿಲ್ಲ. ಸ್ವಾಮಿಯು ಹೇಳಿದ ಪ್ರಕಾರ ದ್ರವ್ಯವು ನಾಗಿರೆಡ್ಡಿಗೆ ದೊರೆಯಿತು. ಈ ದ್ರವ್ಯವನ್ನು ತೆಗೆದುಕೊಂಡು ಪಶ್ಚಿಮದ ದಿಕ್ಕಿಗೆ ಪ್ರಯಾಣ ಮಾಡುವಾಗ ಈಗಿನ ಮಿಡಿಗೇಶಿ ಪ್ರದೇಶದಲ್ಲಿ ಸ್ವಾಮಿಯ ಸ್ಥಳದ ಕುರುಹು ದೊರೆಯಿತು. ಈ ಪ್ರದೇಶವೇ ದೇವರು ಹೇಳಿದ್ದೆಂದು ಭಾವಿಸಿ, ವೆಂಕಟರಮಣ ಸ್ವಾಮಿಯನ್ನು ಪ್ರತಿಷ್ಠಾಪಿಸಿ, ಒಂದು ಅದ್ಭುತವಾದ ಅರಮನೆಯನ್ನು ಸ್ಥಾಪಿಸಿ, ಸುತ್ತಲೂ ಕೋಟೆ ಕೊತ್ತಲಗಳನ್ನು ಕಟ್ಟಿಸಿದನು. ಹಾಗೆಯೇ ಹೊಳವನ ಹಳ್ಳಿ ಪಾಳೇಗಾರನಾದ ಸಣ್ಣ ಬೈರೇಗೌಡನಿಗೆ ಒಂದು ರಾತ್ರಿ ಕನಸಿನಲ್ಲಿ ಅಶರೀರವಾಣಿಯೊಂದು ಬಂದು "ನಿನ್ನ ಸಂಸ್ಥಾನದಿಂದ ಪಶ್ಚಿಮ ದಿಕ್ಕಿಗೆ ಅನತಿ ದೂರದಲ್ಲಿ ಗಂಗಾಧರೇಶ್ವರ ಸ್ವಾಮಿಯ ಉದ್ಭವ ಲಿಂಗವಿದೆ. ಆ ಜಾಗದಲ್ಲಿ ನೀನು ಸಂಸ್ಥಾನ

ಸ್ಥಾಪಿಸಿದರೆ ನಿನಗೆ ಒಳ್ಳೆಯದಾಗುತ್ತದೆಂದು ಹೇಳಿ ಮಾಯವಾಯಿತು. ತಕ್ಷಣ ನಿದ್ರೆಯಿಂದ ಎಚ್ಚರಗೊಂಡು ನೋಡಿದರೆ ಅಶರೀರವಾಣಿಯ ರೂಪವಿರಲಿಲ್ಲ. ಅದೇ ರೀತಿ ಹೇಳಿದ ಜಾಗಕ್ಕೆ ಹೋದಾಗ ಉದ್ಭವಲಿಂಗಕ್ಕೆ ಬೆಟ್ಟದ ಮೇಲಿಂದ ನೀರು ತೊಟ್ಟಿಕ್ಕುತ್ತಿತ್ತು. ಇದನ್ನು ನೋಡಿದ ಪಾಳೇಗಾರನು ಇದು ಅಪರೂಪದ ಸಂಗತಿ, ಆದುದರಿಂದ ಇಲ್ಲಿಯೇ ಊರನ್ನು ಸ್ಥಾಪಿಸಿ ಕೋಟೆ ಕೊತ್ತಲಗಳನ್ನು ನಿರ್ಮಿಸುತ್ತೇನೆಂದು ನಿರ್ಧರಿಸುತ್ತಾನೆ. ಅದರಂತೆ ಗಂಗಾಧರೇಶ್ವರ ಉದ್ಭವ ಲಿಂಗಕ್ಕೆ ದೇವಾಲಯ ನಿರ್ಮಿಸಿ, ಕೋಟೆ ಕೊತ್ತಲ ಕಟ್ಟಿಸುತ್ತಾನೆ.

ಈ ರೀತಿಯ ಕಥನಗಳು ರಾಜ್ಯ ಸ್ಥಾಪನೆಗೆ ಸಂತನೊಬ್ಬನ ಬೆಂಬಲವನ್ನೋ ಅಥವಾ ದೈವದ ಬೆಂಬಲವನ್ನೋ ಪಡೆಯುತ್ತಿರುವುದನ್ನು ಮತ್ತು ಆ ಶಕ್ತಿಗಳನ್ನು ನಂಬುತ್ತಿರುವುದನ್ನು ಸೂಚಿಸುತ್ತಿದೆ.

ಒಟ್ಟಾರೆಯಾಗಿ ಕೋಟೆಯ ನಿರ್ಮಾಣಕ್ಕೆ ಪೂರ್ವದಲ್ಲಿನ ಘಟನೆಗಳಿಗೆ ಸಂಬಂಧಿಸಿದಂತಹ ಈ ವಿವಿಧ ಮೌಖಿಕ ಕಥನ ಮಾದರಿಗಳು ಏನನ್ನು ಸೂಚಿಸುತ್ತಿವೆ? ಅಲೌಕಿಕ ಎನ್ನಬಹುದಾದ ಈ ಮಿತ್‌ಗಳನ್ನು ವಿಶ್ಲೇಷಣೆಗೆ ಒಳಪಡಿಸಿದರೆ ಕಂಡುಬರುವ ಸತ್ಯಗಳು ಅತ್ಯಂತ ಲೌಕಿಕ ಎನಿಸಿದವುಗಳಾಗಿವೆ. ಮೊಲ ನಾಯಿಯ ಪ್ರಸಂಗ, ಹುತ್ತಕ್ಕೆ ಹಾಲೆರವ ಪ್ರಸಂಗ, ಕನಸಿನಲ್ಲಿ ಸಂತ ಅಥವಾ ದೈವವೊಂದು ಕೋಟೆ ಸ್ಥಾಪನೆಗೆ ಪ್ರೇರಣೆ ನೀಡುವ ಪ್ರಸಂಗಗಳೆಲ್ಲವುಗಳಾಚೆ ಕೋಟೆ ಸ್ಥಾಪನೆಗೆ ಪ್ರಾದೇಶಿಕ ವೈಶಿಷ್ಟ್ಯತೆಯೇ ಕಾರಣವೆನ್ನುವುದು ಮುಖ್ಯವಾದುದು.

ಭೌಗೋಳಿಕವಾಗಿ ಕೋಟೆ ನಿರ್ಮಾಣಕ್ಕೆ ದುರ್ಗಮವಾದ ಪ್ರದೇಶವೋ, ಭಯನಕವಾದ ಕಾಡುಳ್ಳ ಪ್ರದೇಶವೋ, ನದಿಗಳ ತಟದ ಪ್ರದೇಶವೋ ಬಹಳ ಪ್ರಾಶಸ್ತ್ಯವಾದುದಾಗಿದೆ. ಮತ್ತು ತುಮಕೂರಿಗೆ ಸಂಬಂಧಿಸಿದ ಎಲ್ಲಾ ಕೋಟೆಗಳು ದುರ್ಗಮ ಪ್ರದೇಶದಲ್ಲಿ, ಹೊಳೆಯ ತಟದಲ್ಲಿ, ಭಯಾನಕ ಕಾಡುಗಳ ಪ್ರದೇಶದಲ್ಲಿ ಸ್ಥಾಪನೆಗೊಂಡಿರುವುದನ್ನು ಕಾಣಬಹುದು. ಈ ರೀತಿ ಸ್ಥಾಪನೆಗೊಂಡಿರುವುದು ಶತೃಗಳಿಂದ ರಕ್ಷಿಸಿಕೊಳ್ಳಲು ಹಾಗೂ ಸಮುದಾಯಗಳು ಸುರಕ್ಷಿತವಾಗಿ ಬದುಕಲು ಈ ತರಹದ ಅನುಕೂಲತೆಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆಯೇ ಕೋಟೆಗಳ ಸ್ಥಾಪನೆಗೆ ಪ್ರಮುಖ ಕಾರಣವೇ ಹೊರತು ಈ ಮೇಲಿನ ಮಿತ್‌ಗಳಲ್ಲ. ಹಾಗಾದರೆ ಈ ಮಿತ್‌ಗಳಲ್ಲಿನ ಸಂದೇಶವೇನು?

ಮೊಲ-ನಾಯಿನ ಪ್ರಸಂಗದ ಮೂಲಕ ಒಂದು ಚಿಕ್ಕ ಸಂಸ್ಥಾನವೂ ಪ್ರಬಲವಾದುದನ್ನು ಸೋಲಿಸುವ ಮನೋಭಾವನೆಯನ್ನೋ, ಇಲ್ಲವೇ ಸ್ಥಾಪಿಸಿದ ಕೋಟೆಯು ಯಾವುದೇ ಪ್ರಬಲ ಸಾಮ್ರಾಜ್ಯದ ಕೋಟೆಗಿಂತ ಬಲಿಷ್ಠವೆಂತಲೋ ಸಂದೇಶವನ್ನು ನೀಡುತ್ತಿದ್ದರೆ, ಕನಸಿನಲ್ಲಿ ದೈವ ಇಲ್ಲವೇ, ಸಂತರು ಪ್ರತ್ಯಕ್ಷವಾಗುವ ಪ್ರಸಂಗವು ರಾಜಕೀಯ ಪ್ರಭುತ್ವಕ್ಕೆ ಧಾರ್ಮಿಕ ಪ್ರಭುತ್ವದ ಬೆಂಬಲವನ್ನು ಸೂಚಿಸುತ್ತದೆ. ರಾಜಕೀಯ ಪ್ರಭುತ್ವದಷ್ಟೇ ಪ್ರಭಾವವನ್ನು ಸಮುದಾಯದ ಮೇಲೆ ಧಾರ್ಮಿಕ ಸಂತರು

ಹೊಂದಿದ್ದರೆನ್ನಬಹುದು. ಧಾರ್ಮಿಕ ಸಂತರು ರಾಜಕೀಯ ಪ್ರಭುತ್ವದ ಆಡಳಿತಕ್ಕೆ ಬೇಕಾದ ಲೋಕದೃಷ್ಟಿಯನ್ನು ಜನಸಮುದಾಯದ ಮೇಲೆ ಉಂಟು ಮಾಡುತ್ತಿದ್ದರು. ಕನಸಿನಲ್ಲಿ ಸಂತ ಅಥವಾ ದೈವ ಬಂದು ಹೇಳಿದ ಎನ್ನುವ ಮೂಲಕ ಆ ಸಂತರಿಗೆ ಇದ್ದ ಜನಸಮುದಾಯದ ಬೆಂಬಲವನ್ನು ಪಡೆಯಲು ರಾಜಕೀಯ ಪ್ರಭುತ್ವವು ಪ್ರಯತ್ನಿಸುತ್ತಿರುತ್ತದೆ. ಈ ಪ್ರಯತ್ನದ ಫಲವಾಗಿಯೇ ಸಮುದಾಯದಲ್ಲಿ ಈ ರೀತಿಯ ವಿವಿಧ ಮಾದರಿಯ ಕಥನಗಳು ಹುಟ್ಟಿಕೊಳ್ಳುತ್ತವೆ. ಇವು ಎಷ್ಟೇ ಅಲೌಕಿಕ ಎನ್ನುವ ರೀತಿ ರೂಪುಗೊಂಡಿದ್ದರೂ ಇದರೊಳಗೆ ಲೌಕಿಕ ಆಸೆ-ಆಕಾಂಕ್ಷೆಗಳು ಇದ್ದೇ ಇವೆ. ಕೋಟೆ ಕೊತ್ತಲ ನಿರ್ಮಾಣ ಪೂರ್ವದ ಘಟನಾವಳಿಗಳನ್ನು ಸಮುದಾಯಗಳು ವ್ಯಕ್ತಪಡಿಸುವ ಕಥನಗಳೆಲ್ಲವೂ ಹೊಸ ರೀತಿಯ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ನೆರವಾಗುತ್ತವೆ ಎನ್ನಬಹುದು.

ಒಂದೇ ರೀತಿಯ ಆಶಯವುಳ್ಳ ಮೊಲ ಮತ್ತು ನಾಯಿಯ ಕಥನಗಳ ಪಟ್ಟಿ

ಕ್ರ. ಸಂ	ಸ್ಥಳ	ಸಾಧು ಪ್ರಾಣಿ	ಬಲಿಷ್ಠ ಪ್ರಾಣಿ	ಘಟನೆ	ಮಹತ್ವ	ಪ್ರತಿಫಲ
೧.	ಹಾಗಲವಾಡಿ	ಮೊಲ	ನರಿ	ಮೊಲವು ನರಿಯನ್ನು ಓಡಿಸಿಕೊಂಡು ಹೋಗಿದ್ದು,	ವೀರಭೂಮಿ/ ಗಂಡುಭೂಮಿ	ಕೋಟೆಕೊತ್ತಲ ನಿರ್ಮಾಣ
೨.	ಬಿಜ್ಜಾವರ	ಮೊಲಗಳು	ನಾಯಿ	ಮೊಲಗಳು ನಾಯಿಯ ಮೇಲೆ ಸವಾರಿ ಮಾಡಿದ್ದು	ವೀರಭೂಮಿ/ ಗಂಡುಭೂಮಿ	ಕೋಟೆಕೊತ್ತಲ ನಿರ್ಮಾಣ
೩.	ಚಿಕ್ಕನಾಯಕನಹಳ್ಳಿ	ಮೊಲ	ನಾಯಿ	ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗಿದ್ದು,	ವೀರಭೂಮಿ/ ಗಂಡುಭೂಮಿ	ಕೋಟೆಕೊತ್ತಲ ನಿರ್ಮಾಣ
೪.	ಯಲ್ಲಪ್ಪನಾಯಕನ ಹೊಸಕೋಟೆ	ಮೊಲಗಳು	ನಾಯಿ	ಮೊಲಗಳು ನಾಯಿಯ ಮೇಲೆ ಸವಾರಿ ಮಾಡಿ ಕೊಂಡು ಹೋಗುತ್ತವೆ	ವೀರಭೂಮಿ/ ಗಂಡುಭೂಮಿ	ಕೋಟೆಕೊತ್ತಲ ನಿರ್ಮಾಣ
೫.	ಸಿರಾ	ಮೊಲ	ನಾಯಿ	ಬೇಟೆ ನಾಯಿಯ ಮೇಲೆ ಸವಾರಿ ಮಾಡಿದ್ದು,	ವೀರಭೂಮಿ/ ಗಂಡುಭೂಮಿ	ಕೋಟೆಕೊತ್ತಲ ನಿರ್ಮಾಣ

೫.೩. ಕೋಟೆಗಳ ನಿರ್ಮಾಣದ ಮೌಖಿಕ ಕಥನ

ಕೋಟೆಗಳ ನಿರ್ಮಾಣ ಪೂರ್ವದಲ್ಲಿನ ಮೌಖಿಕ ಕಥನಗಳದ್ದು ಒಂದು ಮಾದರಿಯಾದರೆ, ಕೋಟೆಗಳನ್ನು ಕಟ್ಟುವಾಗ ಇರುವ ಕಥನಗಳದ್ದು ಇನ್ನೊಂದು ಮಾದರಿ. ಕೋಟೆಗಳ ನಿರ್ಮಾಣ ಪೂರ್ವದ ಕಥನಗಳು ಸ್ಥಳೀಯ ನೆಲವನ್ನೋ ಅಥವಾ ಪ್ರದೇಶವನ್ನೋ ಪವಿತ್ರೀಕರಿಸಿದರೆ ನಿರ್ಮಾಣ ಹಂತದ ಕಥನಗಳು ಕೋಟೆ ಕಟ್ಟುವಾಗ ಕೋಟೆಯ ಪಾವಿತ್ರ್ಯವನ್ನು ಕಾಪಾಡುವುದು ಮತ್ತು ಆ ಸಂದರ್ಭದಲ್ಲಿ ಭಾಗವಹಿಸಿದ ಜನಸಮುದಾಯಗಳ ಸಂಕಷ್ಟಗಳನ್ನು ವ್ಯಕ್ತಪಡಿಸುವ ಮಾದರಿಗಳಾಗಿವೆ.

ಸಾಮಾನ್ಯವಾಗಿ ತುಮಕೂರು ಜಿಲ್ಲೆಯಾದ್ಯಂತ ಕೋಟೆಗಳನ್ನು ನಿರ್ಮಿಸುವಾಗ ಹುಟ್ಟಿಕೊಂಡಿರುವ ಕಥನಗಳು ಏಕ ರೀತಿಯಲ್ಲಿವೆ. ಕೋಟೆಯನ್ನು ಕಟ್ಟಲು ರಾಜನು ಜನರಲ್ಲಿ ಸಹಾಯ ಬೇಡಿದಾಗ ತಂದೆ-ಮಗ ಇಬ್ಬರು ತಾವು ಕೋಟೆ ಕಟ್ಟಲು ಮುಂದೆ ಬರುತ್ತಾರೆ. ಆದರೆ ಅವರೊಂದು ಷರತ್ತನ್ನು ವಿಧಿಸುತ್ತಾರೆ. ಆ ಷರತ್ತಿನ ಅನ್ವಯ ಕೋಟೆ ಕಟ್ಟುವಾಗ ಯಾವ ಹೆಂಗಸರೂ ಕಣ್ಣಿಗೆ ಕಾಣದಂತೆ ನೋಡಿಕೊಳ್ಳಬೇಕೆಂದು ಕಟ್ಟಪ್ಪಣೆಯನ್ನು ವಿಧಿಸುತ್ತಾರೆ. ಕೋಟೆಯನ್ನು ಕಟ್ಟುವುದು ಮುಗಿಯುವ ಹಂತದಲ್ಲಿದ್ದಾಗ ಹೆಂಗಸೊಬ್ಬಳು (ತಾಯಿ, ಅಕ್ಕ, ತಂಗಿ, ರಾಣಿ, ಪಾಳೇಗಾರರ ಮಗಳು, ಇತರೆ ಹೆಣ್ಣುಗಳು) ಕಣ್ಣಿಗೆ ಬಿದ್ದು, ಭಾವೋದ್ರೇಕದಿಂದ ವಯಸ್ಕನಾದ ಮಗನು ವೀರ್ಯವನ್ನು ಸ್ಖಲಿಸಿ ಶಕ್ತಿಹೀನನಾಗುತ್ತಾನೆ. ಈ ರೀತಿಯಲ್ಲಿ ವೀರ್ಯ ಸ್ಖಲನವಾಗುವಾಗ ವೀರ್ಯ ನೆಲಕ್ಕೆ ಬೀಳದಂತೆ ತಂದೆಯು ಮಣ್ಣಿನ ಗಡಿಗೆಯಲ್ಲಿ ಸಂಗ್ರಹಿಸಿ ಮರಳಿ ಮಗನಿಗೆ ಊಟದಲ್ಲಿ ಹಾಕಿ ಬಡಿಸುತ್ತಾನೆ. ಅದನ್ನು ತಿಂದ ಮಗನು ಶಕ್ತಿವಂತನಾಗಿ ಮತ್ತೆ ಕೋಟೆಕಟ್ಟಲು ನೆರವಾಗಿ ನಿರ್ದಿಷ್ಟ ಅವಧಿಯೊಳಗಡೆಯೇ ಕೋಟೆಯನ್ನು ನಿರ್ಮಾಣ ಮಾಡಿ ಪಾಳೇಗಾರರಿಂದ ಶಹಬ್ಬಾಸ್‌ಗಿರಿ ಪಡೆದು, ಗೌರವ ಸ್ವೀಕರಿಸುತ್ತಾರೆ.

ಇದೇ ಮಾದರಿಯ ಕಥನವನ್ನು ಒಳಗೊಂಡಿರುವ ಕೋಟೆಗಳು ಕೆಳಗಿನಂತಿವೆ. ಭಸ್ಮಾಂಗಿ ಕೋಟೆಯನ್ನು ಕಟ್ಟಲು ಬೂದಿಬಸಪ್ಪನಾಯಕನು ಅಲ್ಲಿನ ಜನರನ್ನು ಸಹಾಯ ಮಾಡಬೇಕೆಂದು ಕೇಳಿಕೊಂಡಾಗ ತಂದೆ-ಮಗ ಇಬ್ಬರು ತಾವು ಕಟ್ಟಿಕೊಡುತ್ತೇವೆಂದು ಮುಂದೆಬರುತ್ತಾರೆ. ಅದಕ್ಕೆ ನಾಯಕರು ನಿಮ್ಮಿಬ್ಬರಿಗೆ ಇನ್ನಷ್ಟು ಜನವನ್ನು ಬೇಕಾದರೆ ಬಳಸಿಕೊಂಡು ಕೋಟೆಕಟ್ಟಬಹುದೆಂದು ಹೇಳುತ್ತಾನೆ. ಅದಕ್ಕೆ ನಾವಿಬ್ಬರೇ ನಿಮಗೆ ಮೂರು ತಿಂಗಳಲ್ಲಿ ಕೋಟೆ ನಿರ್ಮಿಸಿಕೊಡುತ್ತೇವೆಂದು ವಚನ ಕೊಡುತ್ತಾರೆ. ಆದರೆ ತಂದೆ-ಮಗ ಇಬ್ಬರು ಒಂದು ಷರತ್ತನ್ನು ಹಾಕುತ್ತಾರೆ. ಏನೆಂದರೆ ನಾವು ಕೋಟೆಯ ನಿರ್ಮಾಣವನ್ನು ಸಂಪೂರ್ಣವಾಗಿ ಮುಗಿಸುವವರೆಗೂ ಹೆಣ್ಣಿನ ಸುಳಿವಿರಬಾರದೆಂದು ಕೇಳುತ್ತಾರೆ. ಆ ಶರತ್ತಿಗೆ ಪಾಳೇಗಾರ ಒಪ್ಪುತ್ತಾನೆ. ಮರುದಿನವೆ ಕೋಟೆಗೆ ಬೇಕಾದ ಕಲ್ಲುಗಳನ್ನು ಹೊಡೆದುಕೊಳ್ಳುತ್ತಾರೆ. ಆ ಮೇಲೆ ಕೋಟೆಯನ್ನು ಆಯಕಟ್ಟಿನ ಜಾಗಗಳಲ್ಲಿ ಕಟ್ಟುತ್ತಾ ಬರುತ್ತಾರೆ. ಕೋಟೆಯು ಮುಗಿಯುವ ಸಂದರ್ಭದಲ್ಲಿದ್ದಾಗ ಸ್ತ್ರೀಯೊಬ್ಬಳು ಕೋಟೆ ಕಟ್ಟುವ ಮಗನಿಗೆ ಕಾಣುವ ರೀತಿ ಮೂತ್ರ ಮಾಡುತ್ತಾಳೆ. ಇದನ್ನು ನೋಡಿದ ಪ್ರಾಪ್ತ ವಯಸ್ಕನಾದ ಮಗನು ಭಾವೋದ್ರೇಕದಿಂದ ವೀರ್ಯ ಸ್ಖಲನ ಮಾಡಿಕೊಳ್ಳುತ್ತಾನೆ. ಈ ರೀತಿಯಲ್ಲಿ ವೀರ್ಯ ಸ್ಖಲನವಾಗುವಾಗ ತಂದೆಯು ನೆಲಕ್ಕೆ ಬೀಳದಂತೆ ಮಣ್ಣಿನ ಗಡಿಗೆಯಲ್ಲಿ ತುಂಬಿಸಿ, ಮತ್ತೆ ಕುರಿಯ ಮಾಂಸದಡಿಗೆಯನ್ನು ಮಾಡಿ, ಅದಕ್ಕೆ ವೀರ್ಯವನ್ನು ಸುರಿದು ಕಲಸಿ, ಮಗನಿಗೆ ಊಟಕ್ಕಿಡುತ್ತಾನೆ. ಇದನ್ನು ತಿಂದ ಮಗನು ಶಕ್ತಿವಂತನಾಗಿ ಮತ್ತೆ ಕೋಟೆ ಕಟ್ಟಲು ನೆರವಾಗಿ ನಿರ್ದಿಷ್ಟ ಸಮಯಕ್ಕೆ ಕೋಟೆ ನಿರ್ಮಾಣ ಮಾಡುತ್ತಾರೆ. ತಂದೆ-ಮಗ ಕೋಟೆ ಕಟ್ಟಿದ ನೆನಪಿಗಾಗಿ ಭಸ್ಮಾಂಗಿ ದುರ್ಗದಲ್ಲಿ ಇಬ್ಬರ ಪಾದಗಳನ್ನು ನಿರ್ಮಿಸಿದ್ದಾರೆ. ಈ ಪಾದಗಳಿಗೆ ಈಗ ನಿತ್ಯಪೂಜೆ ನಡೆಯುತ್ತಿದೆ. ರತ್ನಗಿರಿಯ ಕೋಟೆಯನ್ನು ಸಹ ತಂದೆ-ಮಗ ಇಬ್ಬರೆ ಕಟ್ಟಿದರೆಂದು ಸಹ ಹೇಳುತ್ತಾರೆ.

ಇದೇ ರೀತಿಯ ವಸ್ತುವನ್ನು ಒಳಗೊಂಡಿರುವ ಕಥನ ಹೀಗಿದೆ. ನಿಡುಗಲ್ಲು ದುರ್ಗದ ಪಾಳೇಗಾರನು ದುರ್ಗದ ಕೊನೆಯ ಕೋಟೆಯ ಸುತ್ತನ್ನು ಕಟ್ಟಿಕೊಡಲು ಇಲ್ಲಿನ ಪ್ರದೇಶದ ಜನರ ಸಹಾಯವನ್ನು ಕೇಳುತ್ತಾನೆ. ಆಗ ತಂದೆ-ಮಗ ಇಬ್ಬರು ಕೋಟೆ ಕಟ್ಟುವುದಕ್ಕೆ ಒಪ್ಪಿಕೊಳ್ಳುತ್ತಾರೆ. ಆದರೆ ಅವರೊಂದು ಷರತ್ತನ್ನು ಹಾಕುತ್ತಾರೆ. ಆ ಷರತ್ತೆಂದರೆ ಕೋಟೆಯನ್ನು ಕಟ್ಟುವಾಗ ನಮಗೆ ಹೆಣ್ಣುಮಕ್ಕಳು ಕಾಣದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾರೆ. ಅದರಂತೆ ಹೆಣ್ಣು ಕಾಣದಂತೆ ನೋಡಿಕೊಳ್ಳುತ್ತೇನೆಂದು ವಚನಕೊಡುತ್ತಾನೆ. ತಂದೆ-ಮಗ ಇಬ್ಬರು ಜೊತೆಗೂಡಿ ಅರ್ಧಭಾಗದ ಕೋಟೆಯನ್ನು ನಿರ್ಮಾಣ ಮಾಡುತ್ತಾರೆ. ಇನ್ನರ್ಧ ಭಾಗದ ಕೋಟೆ ನಿರ್ಮಾಣ ಮಾಡುವಾಗ ಪಾಳೇಗಾರನ ಮಗಳು ಸ್ನಾನ ಮಾಡಿ ಕೂದಲನ್ನು ಆರಿಸಿಕೊಳ್ಳಲು ವಜ್ರದೂರು ಬಾಗಿಲ ಸ್ವಲ್ಪ ದೂರದಲ್ಲಿರುವ ದಿಬ್ಬದ ಮೇಲೆ ಕುಳಿತು ಕೊಳ್ಳುತ್ತಾಳೆ. ಕೋಟೆಯನ್ನು ಕಟ್ಟುತ್ತಿದ್ದ ಮಗನು ಇವಳ ಸೌಂದರ್ಯವನ್ನು ನೋಡಿ ಭಾವೋದ್ರೇಕದಿಂದ ವೀರ್ಯವನ್ನು ಸ್ಖಲಿಸುತ್ತಾನೆ. ತಂದೆಯು ಮಗನ ವೀರ್ಯವನ್ನು ಹಾಳಾಗದಂತೆ ಮಡಿಕೆಯಲ್ಲಿ ಸಂಗ್ರಹಿಸುತ್ತಾನೆ. ಈ ವೀರ್ಯವನ್ನು ಕುರಿಯ ಮಾಂಸದಡಿಗೆಯಲ್ಲಿ ಬೆರೆಸಿ ಮಗನಿಗೆ ಉಣಬಡಿಸುತ್ತಾನೆ. ಇದರಿಂದ ಮಗನಿಗೆ ಶಕ್ತಿಯು ಮರುಕಳಿಸುತ್ತದೆ. ಮತ್ತೆ ತಂದೆ-ಮಗ ಇಬ್ಬರು ಕೋಟೆಯ ಉಳಿದ ಭಾಗವನ್ನು ನಿರ್ಮಿಸಿಕೊಡುತ್ತಾರೆ.

ಭಸ್ಮಾಂಗಿ ಮತ್ತು ನಿಡುಗಲ್ಲು ಕೋಟೆಯ ನಿರ್ಮಾಣದಲ್ಲಿ ಹುಟ್ಟಿಕೊಂಡ ಕಥನ ಮಾದರಿಗಳಂತೆಯೇ ಚನ್ನರಾಯನ ದುರ್ಗದ ಕೋಟೆ ನಿರ್ಮಾಣ ಸಂದರ್ಭದಲ್ಲಿಯೂ ಸಹ ತಂದೆ-ಮಗ ಇಬ್ಬರೆ ಭಾಗವಹಿಸಿ ಕೋಟೆ ಕಟ್ಟುತ್ತಾರೆ. ಇಲ್ಲಿ ತನ್ನ ತಾಯಿ ಮೂತ್ರ ಮಾಡುವುದನ್ನು ಕಂಡು ಭಾವೋದ್ರೇಕದಿಂದ ವೀರ್ಯ ಸ್ಖಲನ ಮಾಡಿಕೊಳ್ಳುತ್ತಾನೆ. ಕಳೆದು ಹೋದ ಶಕ್ತಿಯನ್ನು ಮತ್ತೆ ವೀರ್ಯವನ್ನು ಸೇವಿಸುವುದರಿಂದ ಪಡೆದು ಕೋಟೆ ನಿರ್ಮಾಣ ಮಾಡುತ್ತಾರೆ.

ಹಾಗೆಯೇ ಮಧುಗಿರಿ ಕೋಟೆಯನ್ನು ತಂದೆ-ಮಗ ಸೇರಿಕೊಂಡು ನಿರ್ಮಿಸುವಾಗ ತನ್ನ ತಂಗಿ ಸ್ನಾನ ಮಾಡುವುದನ್ನು ನೋಡಿ, ತನ್ನ ದೇಹದಿಂದ ವೀರ್ಯ ಸ್ಖಲಿಸುತ್ತಾನೆ. ಹುತ್ರಿ ದುರ್ಗದಲ್ಲಿ ಕೋಟೆ ನಿರ್ಮಿಸುವಾಗ ಹೆಣ್ಣೊಬ್ಬಳು ತನ್ನ ಮಗನಿಗೆ ಹಾಲುಣಿಸುವುದನ್ನು ನೋಡಿದ ಪ್ರಾಪ್ತ ವಯಸ್ಕನಾದ ಮಗನಿಗೆ ತನ್ನ ದೇಹದಿಂದ ವೀರ್ಯ ಸ್ಖಲನವಾಗುತ್ತದೆ. ಈ ರೀತಿ ಎಲ್ಲಾ ಕಥನಗಳನ್ನು ತುಮಕೂರು ಜಿಲ್ಲೆಯ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಏಕಮಾದರಿಯಾಗಿ ಹುಟ್ಟಿಕೊಂಡವುಗಳಾಗಿವೆ. ಇವೆಲ್ಲವೂ ಒಂದೇ ಆಶಯವನ್ನು ಒಳಗೊಂಡಿವೆ. ಕೋಟೆಗಳಿರುವ ಎಲ್ಲಾ ಪ್ರದೇಶಗಳಲ್ಲಿಯೂ ತಂದೆ-ಮಗ ಸಮನಾಗಿ ಬರುತ್ತಾರೆ. ಆದರೆ ಹೆಣ್ಣು ತಾಯಿ, ತಂಗಿ, ಅಕ್ಕ, ಪಾಳೇಗಾರನ ಮಗಳು, ಸ್ತ್ರೀ ಹೀಗೆ ಕಥನದಲ್ಲಿ ಬೇರೆ ಬೇರೆಯಾಗಿ ಬರುತ್ತಾರೆ. ಈ ಕಥನಗಳಲ್ಲಿ ಪ್ರಾಪ್ತವಯಸ್ಕನಾದ ಮಗನು ಹೆಣ್ಣನ್ನು ನೋಡಿ ತನ್ನ ವೀರ್ಯಸ್ಖಲಿಸಿ ಶಕ್ತಿ ಹೀನನಾಗುವ ಚಿತ್ರಣವನ್ನು ಕಾಣಬಹುದು.

ಒಂದು ಮುಖ್ಯ ಪ್ರಶ್ನೆಯೆಂದರೆ ಯಾಕೆ ಸ್ತ್ರೀಯನ್ನು ಇಷ್ಟೊಂದು ಕೀಳಾಗಿ ಈ ಕಥನಗಳಲ್ಲಿ ಕಾಣಲಾಗಿದೆ? ಸ್ತ್ರೀಯೊಬ್ಬಳನ್ನು ಕೋಟೆ ಕಟ್ಟುವಾಗ ಕಾಣಿಸದಂತೆ ಮಾಡಲು ಕಾರಣವೇನು? ಕಂಡರೆ ಅಪಶಕುನ ಎಂಬುದು ಏನನ್ನು ಸೂಚಿಸುತ್ತದೆ? ಈ ಕಥನಗಳ ಬಗೆಗಿನ ಪ್ರಶ್ನೆಗಳಿಗೆ ಉತ್ತರವನ್ನು ಅಂದಿನ ಸಾಮಾಜಿಕ ಸ್ಥಿತಿಗತಿಯಲ್ಲಿ ಹುಡುಕಬೇಕಿದೆ.

ಮುಖ್ಯವಾಗಿ ತುಮಕೂರು ಜಿಲ್ಲೆಯಲ್ಲಿನ ಕೋಟೆಗಳೆಲ್ಲಾ ನಿರ್ಮಾಣಗೊಂಡ ಸಂದರ್ಭ ೧೫ ರಿಂದ ೧೮ನೇ ಶತಮಾನದ ಕಾಲಘಟ್ಟದಲ್ಲಿ. ಈ ಸಂದರ್ಭದಲ್ಲಿ ಕರ್ನಾಟಕದ ಸಂಸ್ಕೃತಿ ಚರಿತ್ರೆಯಲ್ಲಿಯೇ ಈ ಜಿಲ್ಲೆಯ ಎಡೆಯೂರು ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದಿತು. ೧೨ನೇ ಶತಮಾನದ ಶರಣ ಚಳುವಳಿಯಲ್ಲಿನ ಸ್ತ್ರೀ ಸಮಾನತೆ, ಜಾತ್ಯತೀತ ಮೌಲ್ಯಗಳಲ್ಲಿ ನೂರೊಂದು ವಿರಕ್ತರ ಕಾಲಘಟ್ಟದಲ್ಲಿ ಸಾಂಸ್ಥಿಕ ರೂಪದಿಂದಾಗಿ ಅಪಮೌಲ್ಯಗೊಂಡಿದ್ದವು. ಸ್ತ್ರೀಯರನ್ನು ಸಾಮಾಜಿಕವಾಗಿ ಕೀಳೆಂದು ಭಾವಿಸಲಾಯಿತು. ೧೫೬೫ರ ರಕ್ಕಸತಂಗಡಿಯ ಯುದ್ಧದಿಂದಾಗಿ ನೂರೊಂದು ವಿರಕ್ತರ ಸಂಘಟನೆಯ ಪ್ರಭಾವವೆಲ್ಲ ಚೆದುರಿ ಮಧ್ಯ ಕರ್ನಾಟಕದ ಹಂಪಿಯಿಂದ ದಕ್ಷಿಣದ ತುಮಕೂರಿನ ಎಡೆಯೂರಿಗೆ ವರ್ಗವಾಯಿತು. ಎಡೆಯೂರಿನಲ್ಲಿ ತೋಟಂದ ಸಿದ್ಧಲಿಂಗ ಯತಿಗಳ ನೇತೃತ್ವದಲ್ಲಿ ೭೭೦ ಗಣಂಗಳು ಶರಣ ಚಳುವಳಿಗೆ ಧಾರ್ಮಿಕ ರೂಪ ನೀಡುವಲ್ಲಿ ಸಂಕಲನ, ಟೀಕೆ, ಸಂಪಾದನೆ, ಸ್ಥಳ ಕಟ್ಟುಗಳಲ್ಲಿ ವಚನದ ಮೌಲ್ಯಗಳನ್ನು ಹಿಡಿದಿಡುವಲ್ಲಿ ಪ್ರಯತ್ನಿಸಿದರು. ಈ ಸಾಂಸ್ಥಿಕ ರೂಪದಿಂದಾಗಿ ಸ್ತ್ರೀ ಮತ್ತೇ ಪ್ರಾಚೀನ ವೈದಿಕ ಧರ್ಮದಂತೆಯೇ ಅಪಶಕುನದ ಮೈಲಿಗೆಯ ಸಂಕೇತವಾಗಿ ರೂಪುಗೊಂಡಳು. ಇದಕ್ಕೆ ಸಾಕ್ಷಿಯೆಂಬಂತೆ ಸಿದ್ಧಲಿಂಗಯತಿಗಳ ಪರಂಪರೆ ಶಿಷ್ಯರು ಮದುವೆಯನ್ನು ವ್ಯಕ್ತಿಯ ಸರ್ವಾಂಗೀಣ ಔನ್ನತ್ಯಕ್ಕೆ ತಡೆ ಎಂದು ಭಾವಿಸಿ ಅದನ್ನು ನಿಷೇಧಿಸಿದರು. ಈ ಸಂದರ್ಭದಲ್ಲಿ ರಚಿತವಾದ ಶೂನ್ಯ ಸಂಪಾದನೆಗಳು ಸ್ತ್ರೀ ಸಮಾನತೆಯ ಬಗೆಗಿನ ೧೨ನೇ ಶತಮಾನದ ವಚನಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಲಾರದೇ ಹೋದವು. ಒಟ್ಟಾರೆ ಈ ಎಲ್ಲಾ ಪ್ರಕ್ರಿಯೆಗಳು ತುಮಕೂರು ಜಿಲ್ಲೆಯಲ್ಲಿ ಮಾತ್ರ ವಲ್ಲದೆ ಕರ್ನಾಟಕದಾದ್ಯಂತ ಪ್ರಭಾವ ಬೀರಿ ಸಾಮಾಜಿಕವಾಗಿ ಹೆಣ್ಣನ್ನು ಕೀಳಿನ ಸಂಕೇತವೆಂದು ಸಮುದಾಯಗಳು ಪ್ರತಿಬಿಂಬಿಸಿರಬಹುದು.

ಈ ಮೇಲಿನ ಪರಿಣಾಮದಿಂದಾಗಿಯೇ ಕೋಟೆಗಳನ್ನು ನಿರ್ಮಿಸುವಾಗ ಹುಟ್ಟಿಕೊಂಡ ಕಥನಗಳಲ್ಲಿ ಹೆಣ್ಣನ್ನು ಕೀಳೆಂದು, ಅವಳು ಕೋಟೆ ಕಟ್ಟುವಾಗ ಕಾಣಿಸಿಕೊಳ್ಳಬಾರದೆಂದು ಚಿತ್ರಿಸಿರಬಹುದಾಗಿದೆ. ಇನ್ನೂ ಕೋಟೆಯ ನಿರ್ಮಾಣ ಎನ್ನುವುದು ಶತ್ರುಗಳಿಂದ ಯುದ್ಧದಲ್ಲಿ ಸಂರಕ್ಷಿಸಿಕೊಳ್ಳಲು ಕಟ್ಟಿಕೊಂಡುದಾಗಿದೆ. ಕೋಟೆ ನಿರ್ಮಾಣವು ಶತ್ರುಗಳನ್ನು ಸೋಲಿಸುವುದು, ಯುದ್ಧ ಮಾಡವುದು ಇವೆಲ್ಲ ಶೌರ್ಯದ ಸಂಕೇತಗಳಾಗಿದ್ದು ಸ್ತ್ರೀಯರಿಗಿಂತ ಪುರುಷ ಪ್ರಾಧಾನ್ಯತೆಯುಳ್ಳದ್ದಾಗಿದೆ. ಪುರುಷ ಪ್ರಾಧಾನ್ಯವಾದ ಈ ಅಂಶಗಳಿಂದಾಗಿಯೂ ಇಂತಹವುಗಳ ಬಗೆಗೆ ರಚಿತವಾಗಿರುವ ಕಥನಗಳಲ್ಲಿ ಸ್ತ್ರೀಯರನ್ನು ಶೌರ್ಯದ

ವಿರೋಧಿ ಎನ್ನುವಂತೆ ಚಿತ್ರಿಸಿರುವುದಾಗಿದೆ. ಅಲ್ಲದೆ ನಿಗ್ರಹವು ಸ್ವಸಾಮರ್ಥ್ಯವನ್ನು ಹೆಚ್ಚಿಸುತ್ತದೆಂದು ನಮ್ಮ ಪೂರ್ವಜರು ನಂಬಿದ್ದರು. ಕೋಟೆಯಂತಹ ಬಹುದೊಡ್ಡ ಕಟ್ಟಡಗಳ ನಿರ್ಮಾಣದ ಸಂದರ್ಭದಲ್ಲಿ ಕಾಮವನ್ನು ನಿಗ್ರಹಿಸಿ ಸ್ವಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಕೆಲಸ ಕಾರ್ಯಗಳಲ್ಲಿ ಸಮುದಾಯವನ್ನು ತೊಡಗಿಸುವಲ್ಲಿ ಪ್ರೇರೇಪಿಸಲು ಈ ತರಹದ ಕಥನ ಮಾದರಿಗಳು ಹುಟ್ಟಿಕೊಂಡಿರುತ್ತವೆ.

ಕೋಟೆಯ ನಿರ್ಮಾಣದ ಹಂತದಲ್ಲಿ ಹುಟ್ಟಿಕೊಂಡ ಕಥನಗಳನ್ನು ಜನಪದರು ಸಾಮಾನ್ಯವಾಗಿ ಅಭಿವ್ಯಕ್ತಿಸದೆ, ಅಸಾಮಾನ್ಯ ರೀತಿಯಲ್ಲಿ ವ್ಯಕ್ತಪಡಿಸಿರುವುದು ಮೇಲಿನ ಕಥನಗಳಿಂದ ಕಂಡುಬರುತ್ತದೆ. ಕೋಟೆ ಕೊತ್ತಲಗಳನ್ನು ನಿರ್ಮಾಣ ಮಾಡಬೇಕೆಂದರೆ ನೂರಾರು ಜನರು ಹಲವು ದಿನಗಳವರೆಗೆ ಶ್ರಮಪಡಬೇಕಾಗುತ್ತದೆ. ಆದರೆ ತಂದೆ-ಮಗ ಇಬ್ಬರು ಸೇರಿಕೊಂಡು ಒಂದು ಕೋಟೆಯನ್ನು ಮೂರೇ ತಿಂಗಳಲ್ಲಿ ಕಟ್ಟುವುದು ಆಶ್ಚರ್ಯದ ಅಸಮಾನ್ಯದ ಸಂಗತಿಯಾಗುತ್ತದೆ.

ಒಟ್ಟಾರೆಯಾಗಿ ಕೋಟೆಯ ನಿರ್ಮಾಣದ ಹಂತದಲ್ಲಿ ಹುಟ್ಟಿಕೊಂಡಿರುವ ಕಥನಗಳ ಆಶಯವನ್ನು ಈ ರೀತಿ ಪಟ್ಟಿ ಮಾಡಬಹುದು. ಒಂದು ಕೋಟೆಯನ್ನು ಇಬ್ಬರು ವ್ಯಕ್ತಿಗಳು ಮೂರು ತಿಂಗಳಲ್ಲಿ ನಿರ್ಮಿಸುವುದು, ಇಬ್ಬರು ವ್ಯಕ್ತಿಗಳು ಕೋಟೆ ಗೋಡೆಗೆ ಬಹುಗಾತ್ರದ ಕಲ್ಲುಗಳನ್ನು ಎತ್ತಿಟ್ಟು ಗೋಡೆ ಕಟ್ಟುವುದು, ಪ್ರಾಪ್ತ ವಯಸ್ಕನಾದ ಮಗನು ಹೆಣ್ಣ(ತಾಯಿ, ಅಕ್ಕ, ತಂಗಿ, ಪಾಳೇಗಾರನ ಮಗಳು, ಹೆಣ್ಣುಗಳು)ನ್ನು ನೋಡಿದ ತಕ್ಷಣವೇ ಭಾವೋದ್ರೇಕದಿಂದ ಮಡಿಕೆ ತುಂಬುವಷ್ಟು ವೀರ್ಯ ಸುರಿಸುವುದು, ಅದೇ ವೀರ್ಯವನ್ನು ಊಟದೊಂದಿಗೆ ತನ್ನ ತಂದೆಯು ಮಗನಿಗೆ ತಿನಿಸುವುದು. ಮಗನು ಪುನಃ ಸಾಮರ್ಥ್ಯ ಪಡೆದು ಕೋಟೆ ನಿರ್ಮಿಸುವಲ್ಲಿ ಭಾಗವಹಿಸುವುದು ಇಲ್ಲಿನ ಕಥನಗಳಿಂದ ಕಂಡುಬರುವ ಮುಖ್ಯ ಆಶಯಗಳಾಗಿವೆ.

ಇನ್ನು ಹಾಗಲವಾಡಿಯ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೇರೊಂದು ರೀತಿಯ ಕಥನ ಕಂಡುಬರುತ್ತದೆ. ಇಲ್ಲಿನ ಕೋಟೆ ಕಟ್ಟಲು ಮುದಿಯಪ್ಪನಾಯಕನ ಹತ್ತಿರ ಸಾಕಾಗುವಷ್ಟು ಹಣವಿರಲಿಲ್ಲ. ಆ ಸಂದರ್ಭದಲ್ಲಿ ಊರ ಹಿರಿಯರ ಸಲಹೆ ಮೇರೆಗೆ ಪಕ್ಕದ ಊರಾದ ಗುಡ್ಡೇಹಳ್ಳಿಯ ಅಜ್ಜಪ್ಪಸ್ವಾಮಿಯ ಸಹಾಯ ಬೇಡಲು ಹೋಗುತ್ತಾನೆ. ನಾಯಕನ ಮನವಿಯನ್ನು ಸ್ವೀಕರಿಸಿ, ಸಹಾಯ ಮಾಡಲು ಸ್ವಾಮಿ ಒಪ್ಪಿಕೊಳ್ಳುತ್ತಾನೆ. ಇದರಿಂದ ಸಂತೋಷಗೊಂಡ ನಾಯಕನು ಸುತ್ತಲ ಪ್ರದೇಶದಿಂದ ಕೋಟೆ ಕಟ್ಟುವಲ್ಲಿ ನುರಿತ ಕೆಲಸಗಾರರನ್ನು ಆಹ್ವಾನಿಸುತ್ತಾನೆ. ಈ ಎಲ್ಲಾ ಜನರು ಕೋಟೆ ಕಟ್ಟಲು ಆರಂಭಿಸುತ್ತಾರೆ. ಇವರಿಗೆ ಕೂಲಿ ಕೊಡಲು ಅಜ್ಜಯ್ಯಸ್ವಾಮಿ ಒಪ್ಪಿರುತ್ತಾನೆ. ಕೂಲಿ ಕೇಳಲು ಬಂದವರಿಗೆ ಹಳ್ಳದ ಹತ್ತಿರ ಹೋಗಿ ನಿಮಗೆ ಇಷ್ಟ ಬಂದಷ್ಟು ಮರಳನ್ನು ಗುಡ್ಡೆ ಮಾಡಿ ಎಂದು ಹೇಳುತ್ತಾನೆ. ಹಾಗೆ ಗುಡ್ಡೆ ಮಾಡಿದ ಮರಳ ಮೇಲೆ ತನ್ನಲ್ಲಿದ್ದ ಮಾಯದಂಡದಿಂದ ಅಜ್ಜಯ್ಯಸ್ವಾಮಿ ಮುಟ್ಟಿದಾಗ ಮರಳಗುಡ್ಡೆಯೊಳಗಡೆ ಕೆಲಸಗಾರರ ಶ್ರಮಕ್ಕೆ ತಕ್ಕಷ್ಟು ಕೂಲಿ ದೊರೆಯುತ್ತಿರುತ್ತದೆ. ಹೀಗೆ ದಿನಾಲು ಕೋಟೆ ನಿರ್ಮಾಣದ ಕೆಲಸಗಾರರಿಗೆ

ಕೂಲಿಕೊಡುತ್ತಾ ಕೋಟೆಯನ್ನು ಪೂರ್ಣವಾಗಿ ಕಟ್ಟಿಸುತ್ತಾನೆ. ಅಂದಿನಿಂದ ಹಾಗಲವಾಡಿ ಪಾಳೇಗಾರನು ಗುಡ್ಡೇನಹಳ್ಳಿಯ ಅಜ್ಜಯ್ಯ ಸ್ವಾಮಿಯನ್ನು ತಮ್ಮ ಸಂಸ್ಥಾನದ ಗುರುಗಳೆಂದು ಭಾವಿಸಿ, ನಿಕಟವಾದ ಸಂಬಂಧವನ್ನು ಇಟ್ಟುಕೊಂಡನು.

ಒಬ್ಬ ರಾಜನಿಗೆ ಬೆಂಬಲವಾಗಿ ಧಾರ್ಮಿಕ ಸಂತನಿರುವುದನ್ನು ಸಾಮಾನ್ಯವಾಗಿ ಎಲ್ಲಾ ರಾಜಕೀಯ ಮತ್ತು ಧಾರ್ಮಿಕ ಚರಿತ್ರೆಯಲ್ಲಿಯೂ ಕಂಡುಬರುತ್ತದೆ. ಈ ತರಹದ ಕಥನಗಳು ಧಾರ್ಮಿಕ ಸಂತರು ಜನಸಮುದಾಯದಲ್ಲಿ ಹೊಂದಿರುವ ಪ್ರಭಾವವನ್ನು ಹಾಗೂ ಅವರೊಂದು ಪರ್ಯಾಯ ಶಕ್ತಿಯಾಗಿ ಬೆಳೆದುಕೊಂಡಿದ್ದರೆಂಬುದನ್ನು ಸೂಚಿಸುತ್ತದೆ. ಹಾಗಲವಾಡಿ ಕೋಟೆಗೆ ಸಂಬಂಧಿಸಿದ ಇಂತಹದೇ ಕಥನ ನಾಯಕನಹಟ್ಟಿ ತಿಪ್ಪೇಸ್ವಾಮಿಯ ಜೀವನದಲ್ಲಿಯೂ ಕಂಡುಬರುತ್ತದೆ. ತಿಪ್ಪೇಸ್ವಾಮಿಯು ನಾಯಕನ ಹಟ್ಟಿ ಪಾಳೇಗಾರ ಬೋಡಿ ಮಲ್ಲಪ್ಪನಾಯಕ ಕೆರೆಕಟ್ಟುವ ಸಂದರ್ಭದಲ್ಲಿ ಅಸಹಾಯಕನಾದಾಗ ಆತನ ನೆರವಿಗೆ ಬಂದ ತಿಪ್ಪೇಸ್ವಾಮಿ ಮರಳಲ್ಲಿ ಕೆಲಸಗಾರರಿಗೆ ಶ್ರಮಕ್ಕೆ ಪ್ರತಿಫಲ ದಕ್ಕುವಂತೆ ಮಾಡಿ, ರಾಜನಿಗೆ ಸಹಾಯ ಮಾಡುತ್ತಾನೆ(ನಾಯಕನಹಟ್ಟಿ ಪ್ರದೇಶದಲ್ಲಿರುವ ಕಥನ).

ಒಬ್ಬ ಧಾರ್ಮಿಕ ಸಂತ(ಅದು ಅಜ್ಜಯ್ಯಸ್ವಾಮಿ ಅಥವಾ ಇತ್ಯಾದಿ) ರಾಜಪ್ರಭುತ್ವಕ್ಕೆ ಬೆಂಬಲ ನೀಡುವ ಮೂಲಕ ರಾಜ್ಯದಲ್ಲಿ ಅಧಿಕೃತವಾಗಿ ತನ್ನ ಪ್ರಭಾವವನ್ನು ಬೆಳಸಿಕೊಳ್ಳಲು ಸಹಾಯವಾಗುತ್ತದೆ. ಅದೇ ಹೊತ್ತಲ್ಲಿ ಇಂತಹ ಧಾರ್ಮಿಕ ಸಂತರಿಗೆ ದಾನ-ದತ್ತಿಗಳನ್ನು ನೀಡುವ ಮೂಲಕ ಅವರನ್ನು ಆರಾಧಿಸುವ ಜನಸಮುದಾಯದ ಬೆಂಬಲವನ್ನು ಪಡೆಯಲು ರಾಜಪ್ರಭುತ್ವವು ಪ್ರಯತ್ನಿಸುತ್ತಿರುತ್ತದೆ. ಹಾಗಲವಾಡಿ ಪಾಳೇಗಾರರು ಅಜ್ಜಯ್ಯ ಸ್ವಾಮಿಗೆ ತಲೆಬಾಗುವ ಮೂಲಕ ಆಡಳಿತಕ್ಕೆ ಅನುಕೂಲವಾದ ರೀತಿಯಲ್ಲಿ ಸಮುದಾಯವನ್ನು ಬಳಸಿಕೊಳ್ಳುತ್ತಾರೆ.

೫.೪. ಕೋಟೆಗಳಿಗೆ ಬಲಿಯಾದ ಮೌಖಿಕ ಕಥನ

ಜನಸಮುದಾಯಗಳು ತಮಗೆ ಅರಿವಿಲ್ಲದೆಯೇ ಕೆಲವು ನಂಬಿಕೆ ಮತ್ತು ಆಚರಣೆಗಳನ್ನು ತಮ್ಮ ದೈನಂದಿನ ಜೀವನದಲ್ಲಿ ರೂಢಿಸಿಕೊಂಡು ಬಂದಿರುವುದನ್ನು ಅವರ ಸಾಮಾಜಿಕ-ಧಾರ್ಮಿಕ ಜೀವನವನ್ನು ಗಮನಿಸಿದಾಗ ತಿಳಿದು ಬರುತ್ತದೆ. ಈ ನಂಬಿಕೆ, ಆಚರಣೆಗಳ ಹಿನ್ನೆಲೆಯಲ್ಲಿ ಕೆಲವು ಅವರದೇ ಆದ ಉದ್ದೇಶಗಳಿರುತ್ತವೆ. ಅವು ಮಾನಸಿಕ ಪ್ರಪಂಚದಲ್ಲಿನ ಧರ್ಮ-ನೀತಿ, ಭಯ, ಪರಲೋಕದ ಕಲ್ಪನೆ, ಪೂಜೆ, ಆರಾಧನೆ, ಬಲಿ ಮುಂತಾದವುಗಳು ಪ್ರಕೃತಿಯ ಬಗೆಗಿನ ಆಶ್ಚರ್ಯ ಮತ್ತು ಯೋಜನೆಗಳಿಂದಾಗಿ ರೂಪುಗೊಂಡಿರುತ್ತವೆ. ಇವರ ಬೇಕು-ಬೇಡಗಳೆರಡನ್ನೂ ಅಗೋಚರ ಶಕ್ತಿಯು ಅವಲಂಬಿಸಿರುತ್ತದೆ. ಈ ಶಕ್ತಿಯನ್ನು ಶಮನಗೊಳಿಸುವುದಕ್ಕಾಗಿ ಹಲವಾರು ಬಗೆಯ ಧಾರ್ಮಿಕ ಆಚರಣೆಗಳನ್ನು ಸಮುದಾಯಗಳು ರೂಢಿಸಿಕೊಂಡು ಬಂದಿವೆ. ಆ ರೂಢಿಯಲ್ಲಿ ಬಲಿದಾನವು ಒಂದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಸಮುದಾಯದಲ್ಲಿ ಬಲಿಗೆ ಸಂಬಂಧಿಸಿದಂತೆ ನರಬಲಿ ಮತ್ತು ಪ್ರಾಣಿಬಲಿ ಮುಖ್ಯವಾದವುಗಳು. ಪ್ರಾಣಿಯನ್ನು ಬಲಿಕೊಡುವಾಗ ದೈವವನ್ನು ಸಂತೃಪ್ತಿಗೊಳಿಸುವ ಮೂಲಕ ಎದುರಾದ ಸಂಕಷ್ಟಗಳನ್ನು ಪರಿಹರಿಸಿಕೊಳ್ಳುವ ಆಲೋಚನೆಗಳಿದ್ದರೆ, ನರಬಲಿಯನ್ನು ಕೊಡುವಾಗ ದೈವವನ್ನು ಸಂತೃಪ್ತಿಗೊಳಿಸುವುದೇ ಅಲ್ಲದೆ ಪ್ರಶ್ನಾತೀತ ನಿಷ್ಠೆಯನ್ನು ದೈವ ಅಥವಾ ಪ್ರಭುತ್ವಕ್ಕೆ ವ್ಯಕ್ತಪಡಿಸುವುದಾಗಿರುತ್ತದೆ. ಬಲಿದಾನಗಳಲ್ಲಿ 'ಧಾರ್ಮಿಕ ಬಲಿದಾನ' ಪುರೋಹಿತ ವರ್ಗದ ಶೋಷಣೆಯಾದರೆ 'ಸಹಗಮನ' ಪುರುಷ ವರ್ಗದ ಶೋಷಣೆ, 'ವೇಳವಾಳಿ' ಪ್ರಭುವರ್ಗ ಯೋಚಿಸಿದ ಶೋಷಣೆಗಳಾಗಿವೆ.[೩೭] ಇವು ಪ್ರಭುತ್ವಕ್ಕೆ ತೀವ್ರ ಪ್ರತಿಷ್ಠೆ ಯನ್ನು ತೋರುವ ಪ್ರಕಾರಗಳಾಗಿವೆ. ಸಮುದಾಯಗಳು ಈ ರೀತಿ ವ್ಯಕ್ತಪಡಿಸುವ ತೀವ್ರ ಪ್ರತಿಷ್ಠೆಯನ್ನು ಒಂದು ಆದರ್ಶ ಮೌಲ್ಯವೆಂದೇ ತಿಳಿದಿವೆ.

ಬಲಿದಾನವು ಸಾರ್ವಜನಿಕ ಒಪ್ಪಿಗೆಯಿಂದ ಪೂರ್ವ ನಿಯೋಜಿತವಾಗಿರುತ್ತದೆ. ತನ್ನನ್ನು ತಾನು ಕೊಂದುಕೊಳ್ಳುವ ಅಥವಾ ಬಲಿಕೊಟ್ಟುಕೊಳ್ಳುವ ವ್ಯಕ್ತಿಯ ಮುಂದೆ ಒಂದು ಘನ ಉದ್ದೇಶವಿರುತ್ತದೆ. ಆ ಘನ ಉದ್ದೇಶ ಕಾಲದಿಂದ ಕಾಲಕ್ಕೆ ಬೇರೆಯಾಗಬಹುದು. ಆದರೆ ಆ ಆದರ್ಶದ ಹಿಂದೆ ವ್ಯಕ್ತಿಯ ದೃಢನಿರ್ಧಾರವಿರುತ್ತದೆ.[೩೮] ಇದಕ್ಕೆ ಧಾರ್ಮಿಕ ನೆಲೆಗಟ್ಟು ಸಹ ಇರುತ್ತದೆ. ಆತ್ಮಬಲಿಯ ಘಟನೆಗಳು ಅಲೌಕಿಕವಾದ ಧಾರ್ಮಿಕ ನಂಬುಗೆಗಳಿಂದ ಪ್ರೇರಿತವಾದವುಗಳು ಎನ್ನಬಹುದಾಗಿದೆ. ಬಲಿದಾನದ ಸಂದರ್ಭದಲ್ಲಿ ಸ್ವಾರ್ಥ ಹಿತಕ್ಕಿಂತ ಸಮಾಜದ ಹಿತದೃಷ್ಟಿಯೇ ಮುಖ್ಯವಾಗಿರುತ್ತದೆ. ಆತ್ಮ ಬಲಿಯಲ್ಲಿ ಬಲಿಯಾಗುವ ವ್ಯಕ್ತಿ ತಾನೇ ತಾನಾಗಿ ಮುಂದೆ ಬಂದು ಯಾವ ಬಗೆಯ ಹಿಂಜರಿಕೆ, ದ್ವಂದ್ವಗಳೂ ಇಲ್ಲವೇನೋ ಎಂಬಂತೆ ತನ್ನನ್ನು ತಾನು ಅರ್ಪಿಸಿ ಕೊಳ್ಳುತ್ತಿದ್ದ ಎಂದು ಭಾವಿಸಲಾಗುತ್ತದೆ. ಈ ಬಗೆಯ ಬಲಿಯಲ್ಲಿ ಸಮಷ್ಟಿಯ ಶ್ರೇಯಸ್ಸಿಗಾಗಿ ತಾನು ತ್ಯಾಗ ಮಾಡುತ್ತಿದ್ದೇನೆ ಎಂಬ ನಂಬಿಕೆಯೂ ಮತ್ತು ಒಂದು ಬಗೆಯ ಮಾನಸಿಕ ತೃಪ್ತಿಯೂ ಅವನಲ್ಲಿರುತ್ತದೆ ಎಂದು ಹೇಳಲಾಗುತ್ತಿದೆ. ಇದನ್ನು ಸಮಕಾಲೀನ ಸಮಾಜ ಒಪ್ಪಿ ಅವನ ಬಲಿಯನ್ನು ವೈಭವೀಕರಿಸಿ(Glorify) ನೋಡುತ್ತಿದ್ದುದೂ ಕಾಣುತ್ತದೆ.[೩೯]

ನರಬಲಿಯನ್ನು ಖಚಿತವಾಗಿ ಧಾರ್ಮಿಕ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡೆ ಅದನ್ನು ಅಭ್ಯಾಸಿಸ ಬೇಕಾಗುತ್ತದೆ. ಆದ್ದರಿಂದ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ, ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ, ತಾನೇ ತಾನಾಗಿ ಅಥವಾ ಪರರಿಂದ ಬಲಿಯಾಗುವ ವ್ಯಕ್ತಿಯ ಸಹಜ ಸಾವಿಗೆ ಮೊದಲೇ ಮಾಡುವ ಉದ್ದೇಶಿತ ಪ್ರಾಣಹರಣ ಒಂದು ಧಾರ್ಮಿಕ ವಿಧಿಯೊಂದಿಗೆ ನಡೆದಾಗ ಅದನ್ನು ನರಬಲಿ ಎಂದು ಕರೆಯಬಹುದು. ಈ ನಿರ್ವಚನ ನರಬಲಿಯ ಹಲವಾರು ಇತಿಮಿತಿಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತದೆ.

೧. ಮೊದಲಿಗೆ ನರಬಲಿಯ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಕನಿಷ್ಟ ಒಬ್ಬರಾದರೂ ಇರಬೇಕು, ಮತ್ತು ಗರಿಷ್ಠ ಮಿತಿಯಾಗಿ ಇಡಿಯ ಸಮುದಾಯವೇ ಅದರಲ್ಲಿ ಭಾಗವಹಿಸಬಹುದು.

೨. ನರಬಲಿಯ ಒಂದು ನಿರ್ದಿಷ್ಟ ಉದ್ದೇಶ್ಯ ಇದ್ದೇ ಇರಬೇಕಾಗುತ್ತದೆ. ನಿರುದ್ದಿಶ್ಯವಾಗಿ ಒಂದು ನರಬಲಿ ನಡೆಯಲು ಸಾಧ್ಯವಿಲ್ಲ.

೩. ಬಲಿಪಶುವಾದಾತ ತನ್ನನ್ನು ತಾನೇ ಕೊಂದುಕೊಂಡು ಅರ್ಪಣೆ ಮಾಡಿ ಕೊಳ್ಳಬಹುದು ಅಥವಾ ಬೇರೊಬ್ಬನಿಂದ ಕೊಲ್ಲಲ್ಪಡಬಹುದು.

೪. ಬಲಿಪಶುವಿನ ಸಹಜ ಸಾವಿಗಿಂತ ಮೊದಲೇ ನಡೆಯುವ ಪ್ರಾಣಹರಣ ಮಾತ್ರ ನರಬಲಿಯಾಗುತ್ತದೆ. ಮತ್ತು

೫. ನರಬಲಿಯು ಯಾವಾಗಲೂ ಧಾರ್ಮಿಕ ಆಚರಣೆಯ ಒಂದು ಅಂಗವಾಗಿಯೇ ಆಚರಿಸಲ್ಪಡಬೇಕು.[೪೦]

ನರಬಲಿಯನ್ನು ಮಾಡುವಾಗ ಯಾವುದಾದರೂ ನಿರ್ದಿಷ್ಟವಾದ ಉದ್ದೇಶವನ್ನು ಇಟ್ಟುಕೊಂಡಿರ ಬೇಕಾಗುತ್ತದೆ. ಅದು ಸಮಾಜದಲ್ಲಿ ನಡೆಯುವ ಒಂದು ಘಟನೆಯ ನಿವಾರಣೆಯ ಕ್ರಮವಾಗಿ ನರಬಲಿ ಯನ್ನು ನೀಡುವುದಾಗಿರುತ್ತದೆ.

ಬಲಿಕೊಡುವ ಉದ್ದೇಶ ಕೈಗೊಳ್ಳುವ ಕೆಲಸ ಬಹುಕಾಲ ಉಳಿಯಲೇಬೇಕೆಂಬ ಆಶಯದಿಂದ ಅದಕ್ಕೆ ಶಾಂತಿ ನೀಡುವ ಉಪಕ್ರಮ ಹಿಂದಿನಿಂದಲೂ ಬೆಳೆದುಬಂದಿದೆ. ಅವುಗಳಲ್ಲಿ ಹೊಸದಾದ ಸೇತುವೆಯನ್ನೋ, ಕಟ್ಟಡವನ್ನೋ, ಅಣೆಕಟ್ಟನ್ನೋ ಕಟ್ಟಿಸಬೇಕಾದಾಗ ಆ ನಿವೇಶದಲ್ಲಿ ನೆಲೆಸಿರುವ ಶಕ್ತಿಯಿಂದ ಸ್ಥಳವನ್ನು ವಶಕ್ಕೆ ತೆಗೆದುಕೊಳ್ಳಲು ಮತ್ತು ಕಟ್ಟಿರುವ ವಾಸ್ತುವಿಗೆ ಯಾವ ವಿಧವಾದ ತೊಂದರೆಯು ಆಗದಂತೆ ಕಾಪಾಡಲೂ ಈ ಬಲಿಗಳನ್ನು ನೀಡಲಾಗುತ್ತಿತ್ತು. ಇದರ ಜೊತೆಗೆ ನರಬಲಿಯಾದ ವ್ಯಕ್ತಿಯ ಆತ್ಮಶಕ್ತಿ, ಆ ಜಾಗದಲ್ಲಿ ನೆಲೆಸಿ ಅದನ್ನು ರಕ್ಷಿಸುವುದೆಂಬ ನಂಬಿಕೆಯೂ ಇರುತ್ತಿತ್ತು. ಕೆಲವು ಬಾರಿ ಜನಾಂಗದ ಕುಲ ದೇವತೆಗೆ ಬಲಿಕೊಡುವುದರ ಮೂಲಕ ಅದನ್ನು ಅಲ್ಲಿ ನೆಲೆಸಿ ರಕ್ಷಿಸುವಂತೆ ಪ್ರಸನ್ನಗೊಳಿಸುವ ಪ್ರಯತ್ನವೂ ಇಂತಹ ಉದ್ದೇಶಗಳಲ್ಲಿ ಕಾಣಬರುತ್ತದೆ. ಹಲವಾರು ಪ್ರಾಚೀನ ನಿವೇಶನಗಳನ್ನು ಅಗೆದಾಗ ಸಿಗುವ ಅಸ್ಥಿಪಂಜರಗಳು ಇಂತಹ ಬಲಿಗಳಿಗೆ ಸಾಕ್ಷಿಯಾಗಿ ನಿಂತಿವೆ. ಇಂದಿಗೂ ಕೂಡ ಹೊಸಕಟ್ಟಡಗಳನ್ನು ಕಟ್ಟುವಾಗ ಈಶಾನ್ಯ ಮೂಲೆಯಲ್ಲಿ ವಾಸ್ತು ಪುರುಷನಿಗೆ ನರಬಲಿಯ ಬದಲಿ ಸ್ವರೂಪಗಳನ್ನು ಅರ್ಪಿಸಿಯೇ ಕಾರ್ಯಾರಂಭ ಮಾಡುವ ವಾಡಿಕೆ ಉಳಿದುಬಂದಿದೆ. ಕೆರೆ, ಅಣೆಕಟ್ಟು, ಸೇತುವೆಗಳನ್ನು ಕಟ್ಟಿದಾಗ ಅವು ಸುಭದ್ರವಾಗಿ ನಿಲ್ಲಲೆಂದು ನರಬಲಿ ನೀಡಿದರೆಂದು ಇಂದಿಗೂ ಪತ್ರಿಕೆಗಳಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ.[೪೧] ಇಂತಹ ಬಲಿಗಳು ಕೋಟೆ-ಕೊತ್ತಲಗಳ ನಿರ್ಮಾಣ ಸಂದರ್ಭದಲ್ಲಿ ನಡೆದಿವೆ ಎಂಬುದನ್ನು ಕಾಣಬಹುದು. ಈ ಬಲಿ ಪದ್ಧತಿಯು ಭಾರತೀಯ ಪರಂಪರೆಯಲ್ಲಿ ಉಳಿದುಕೊಂಡು ಬಂದಿದೆ.

ಸಾಂಪ್ರದಾಯಿಕ ಸಮಾಜವು ಪ್ರಕೃತಿಯನ್ನು ತನ್ನ ಸ್ವಾರ್ಥದ ಹಿತಕ್ಕಾಗಿ ಬಳಸಿಕೊಂಡಿರುವುದು ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ. ಆದರೆ ಸಮುದಾಯಗಳು ಇದಕ್ಕೆ ವ್ಯತಿರಿಕ್ತವಾಗಿ ಪ್ರಕೃತಿಯೇ ತಮ್ಮ ಜೀವನದ ಅವಿಭಾಜ್ಯ ಭಾಗವೆಂದು ಯಾವುದೋ ಒಂದು ಭೌತಿಕ ವಸ್ತುವಿಗೆ ಭಾವನಾತ್ಮಕವಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿರುವುದು ಕಾಣಬಹುದು. ಇದರಿಂದ ಕಂಡುಕೊಳ್ಳಬಹುದಾದ ಅಂಶವೇನೆಂದರೆ ಸಮಾಜದಲ್ಲಿ ಕೈಗೊಳ್ಳುವ ಭೌತಿಕ ಕಾರ್ಯವು ಬಹುಕಾಲ ಉಳಿಯಲೆಂದು ಜನಸಮುದಾಯಗಳು ಸಾಮಾಜಿಕ ಮೌಲ್ಯವುಳ್ಳ ತ್ಯಾಗ ಬಲಿದಾನಗಳನ್ನು ಮಾಡುತ್ತಾ ಬಂದಿವೆ. ಇಂತಹ ಬಲಿಗಳನ್ನು ಪ್ರಭುತ್ವವು ಹೊಗಳುವ ಮೂಲಕವೋ, ಸ್ಮಾರಕಗಳನ್ನು, ದಾನ-ದತ್ತಿಗಳನ್ನು, ಶಾಸನಗಳನ್ನು ಬರೆಸುವ ಮೂಲಕವೋ ಅವರನ್ನು ಸಮುದಾಯದಲ್ಲಿ ವೈಶಿಷ್ಟ್ಯ ಪೂರ್ಣವಾಗಿ ಚಿತ್ರಿಸುತ್ತದೆ. ಮತ್ತು ಇದನ್ನೊಂದು ಶ್ರೇಷ್ಠ ಜೀವನ ಮೌಲ್ಯವೆಂಬಂತೆ ಪ್ರಚುರಪಡಿಸುತ್ತದೆ. ನಮ್ಮ ಅದೆಷ್ಟೋ ಪ್ರಾಚೀನ ಕೃತಿಗಳು ಈ ರೀತಿ ಬಲಿಯಾದ ಸಮುದಾಯದ ವ್ಯಕ್ತಿಗಳನ್ನು ಶ್ರೇಷ್ಠರೆಂದು ಸ್ವರ್ಗಕ್ಕೆ ಹೋಗುವವರೆಂದು ಹೇಳುವ ಮೂಲಕ ಇಂತಹ ಮೌಲ್ಯಗಳು ಸಮುದಾಯದಲ್ಲಿ ಪ್ರಬಲವಾಗಿ ಅಧಿಕೃತವಾಗಿ ರೂಪುಗೊಳ್ಳುವುದಕ್ಕೆ ಸಹಾಯ ಮಾಡಿವೆ. ಅಲ್ಲದೆ ಬಲಿಯಾದ ವ್ಯಕ್ತಿಗೆ ಸ್ಮಾರಕ ನಿರ್ಮಿಸಿ, ಸಮಾಜದಲ್ಲಿ ಮಹಾಪುರುಷನಾಗಿಸಿ, ಆತನಿಗೆ ಅನೇಕ ಆಚರಣೆಗಳನ್ನು ಹುಟ್ಟು ಹಾಕಿರುವುದು ಕಾಣಬಹುದು.

ಬಲಿಯನ್ನು ಕೆರೆ, ಅಣೆಕಟ್ಟು, ಸೇತುವೆಗಳ ನಿರ್ಮಾಣ ಸಂದರ್ಭದಲ್ಲಿ ಕೊಡುವ ಹಾಗೆಯೇ ಕೋಟೆ ನಿರ್ಮಾಣ ಸಂದರ್ಭದಲ್ಲಿಯೂ ಬಲಿಯನ್ನು ಕೊಡುವುದು ರೂಢಿಸಿಕೊಂಡಿರಬಹುದು. ರಾಜರು-ಪಾಳೇಗಾರರು ಕೋಟೆಗಳನ್ನು ರಾಜ್ಯ ಸಂರಕ್ಷಣೆಯ ದೃಷ್ಟಿಯಿಂದ ನಿರ್ಮಿಸುತ್ತಿದ್ದರು. ಈ ಕೋಟೆಗಳನ್ನು ವಾಸ್ತುನೆಲೆಯಲ್ಲಿ ನಿರ್ಮಿಸುವಾಗ ಕಟ್ಟಿದ ಗೋಡೆ, ಇಟ್ಟ ಬಾಗಿಲು ಬಿದ್ದು ಹೋದಾಗ, ಮತ್ತೆ ಬೀಳದಂತೆ ತಡೆಯುವುದಕ್ಕೆ ಮತ್ತು ಮುಂದೆ ಎದುರಾಗುವ ತೊಂದರೆಗಳನ್ನು ಪರಿಹರಿಸುವುದಕ್ಕೆ ನರಬಲಿಯನ್ನು ಕೊಡುತ್ತಿದ್ದರು. ಇಂತಹ ಬಲಿಯಲ್ಲಿ ಹೆಚ್ಚಾಗಿ ಹೆಂಗಸರೇ, ಅದರಲ್ಲೂ ಗರ್ಭಿಣಿ ಹೆಂಗಸರನ್ನೇ ಬಳಸಿ ಕೊಳ್ಳಲಾಗುತ್ತಿತ್ತು.

ತುಮಕೂರು ಜಿಲ್ಲೆಯ ಕೋಟೆಗಳ ನಿರ್ಮಾಣದ ಸಂದರ್ಭದಲ್ಲಿ ಸ್ತ್ರೀಯರನ್ನು ಅದರಲ್ಲೂ ಗರ್ಭಿಣಿ ಸ್ತ್ರೀಯರನ್ನು ಬಲಿಕೊಟ್ಟಿರುವುದು ಇಲ್ಲಿ ದೊರೆತಿರುವ ಕಥನಗಳಿಂದ ತಿಳಿದುಕೊಳ್ಳಬಹುದಾಗಿದೆ. ಅದರಲ್ಲಿ ಪಾವಗಡ ಕೋಟೆಯ ಮೊದಲ ಎರಡು ಸುತ್ತಿನ ಕೋಟೆಗಳಿಗೆ ಮೂವರು ಗರ್ಭಿಣಿ ಸ್ತ್ರೀಯರು ಬಲಿಯಾಗಿರುವುದು ಕಂಡುಬರುತ್ತದೆ. ಇದೇ ಆಧಾರದ ಮೇಲೆ ಇಡೀ ತುಮಕೂರು ಜಿಲ್ಲೆಯ ಎಲ್ಲಾ ಕೋಟೆಯ ನಿರ್ಮಾಣ ಸಂದರ್ಭದಲ್ಲಿ ಗರ್ಭಿಣಿ ಸ್ತ್ರೀಯರನ್ನು ಬಲಿಕೊಟ್ಟಿರಬಹುದೆಂದು ಊಹಿಸ ಬಹುದಾಗಿದೆ. ಇಲ್ಲಿ ಮುಖ್ಯವಾಗಿ ಪಾವಗಡ ಕೋಟೆಗೆ ಬಲಿಯಾದ ಮೂರು ಜನ ಗರ್ಭಿಣಿ ಸ್ತ್ರೀಯರಿಗೆ

ಸಂಬಂಧಿಸಿದ ಕಥನಗಳು ದೊರೆತಿರುವುದರಿಂದ ಇವುಗಳನ್ನು ಮಾತ್ರ ನನ್ನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮಿಕ್ಕ ಕೋಟೆಗಳಲ್ಲಿಯೂ ಬಲಿಯು ನಡೆದಿರಬಹುದು. ಆದರೆ ಕ್ಷೇತ್ರಕಾರ್ಯದಲ್ಲಿ ದೊರೆತಿಲ್ಲದ ಕಾರಣ ಪಾವಗಡ ಕೋಟೆಗೆ ಬಲಿಯಾದ ಮೂರು ಕಥನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪಾವಗಡ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಬಲಿಯಾದ ಮೂವರು ಗರ್ಭಿಣಿ ಸ್ತ್ರೀಯರಲ್ಲಿ ಇಬ್ಬರು ಕೆಳವರ್ಗದ(ವಡ್ಡರು, ಕೊರಚರು) ಗರ್ಭಿಣಿ ಸ್ತ್ರೀಯರಾಗಿದ್ದು, ಇನ್ನೋರ್ವ ಗರ್ಭಿಣಿ ಸ್ತ್ರೀಯು ಮೇಲ್ವರ್ಗದ(ಬ್ರಾಹ್ಮಣ)ವರಾಗಿದ್ದಾರೆ. ಒಟ್ಟಾರೆಯಾಗಿ ಇವರೆಲ್ಲರೂ ಸ್ತ್ರೀ ಎಂಬುದು ಅದರಲ್ಲೂ ಗರ್ಭಿಣಿ ಸ್ತ್ರೀ ಎಂಬುದು ವಿಶೇಷವಾಗಿದೆ. ಈಗ ಕ್ಷೇತ್ರ ಕಾರ್ಯದಲ್ಲಿ ದೊರೆತ ಕಥನಗಳನ್ನು ವಿವರಿಸಿ, ನಂತರ ಆ ಕಥನಗಳ ತಾತ್ವಿಕತೆಯನ್ನು ಚರ್ಚಿಸಲಾಗುವುದು.

ಪಾವಗಡದ ಹೊರಸುತ್ತಿನ ಕೋಟೆಯನ್ನು ಕಟ್ಟುವುದಕ್ಕೆ ಪಾಳೇಗಾರನು ಅಲ್ಲಿನ ಜನರ ಸಹಾಯ ಬೇಡುತ್ತಾನೆ. ಅದರಂತೆ ಕೆಲಸಗಾರರು ಕೋಟೆ ಕಟ್ಟಲು ಒಪ್ಪಿ ಪ್ರಾರಂಭಿಸುತ್ತಾರೆ. ಪ್ರಾರಂಭದಲ್ಲಿ ಊರಿನ ಪೂರ್ವದಿಕ್ಕಿಗೆ ಹೆಬ್ಬಾಗಿಲನ್ನು ಇಡುತ್ತಾರೆ. ಆ ಬಾಗಿಲು ಅದೇ ರಾತ್ರಿ ಬಿದ್ದು ಹೋಗುತ್ತದೆ. ಆದರೆ ಈ ಬಾಗಿಲು ಆಯಾ ತಪ್ಪಿ ಬಿದ್ದಿರಬಹುದೆಂದು ಅಲ್ಲಿನ ಜನರು ಭಾವಿಸಿ ಮತ್ತೆ ನಿಲ್ಲಿಸುತ್ತಾರೆ. ಮತ್ತೆ ಬಿದ್ದು ಹೋಗುತ್ತದೆ. ಈ ವಿಚಾರವನ್ನು ಪಾಳೇಗಾರನಲ್ಲಿ ತಿಳಿಸಿದಾಗ, ಆತನು ಊರಿನ ಗುರು-ಹಿರಿಯರಲ್ಲಿ, ಪುರೋಹಿತರಲ್ಲಿ ಇದರ ಹಿಂದಿನ ಉದ್ದೇಶವೇನೆಂದು ಕೇಳುತ್ತಾನೆ. ಅದಕ್ಕೆ ಪುರೋಹಿತರು ಗರ್ಭಿಣಿ ಹೆಣ್ಣನ್ನು ಬಲಿಕೊಟ್ಟರೆ ಬೀಳದೆ ಭದ್ರವಾಗಿ ನಿಲ್ಲುತ್ತದೆ ಎನ್ನುತ್ತಾರೆ. ಆಗ ಪಾಳೇಗಾರನು ಮಂತ್ರಿ ಸುಬ್ಬರಾಯಪ್ಪನಿಗೆ ಗರ್ಭಿಣಿ ಹೆಣ್ಣನ್ನು ಶೋಧಿಸಿ ಕೋಟೆಯ ಬಾಗಿಲಿಗೆ ಬಲಿಕೊಡಬೇಕೆಂದು ಹೇಳುತ್ತಾನೆ. ಮಂತ್ರಿ ಸುಬ್ಬರಾಯಪ್ಪನಿಗೆ ಕೋಟೆಯ ಬಾಗಿಲಿಗೆ ಗರ್ಭಿಣಿ ಹೆಂಗಸನ್ನು ಬಲಿಕೊಡಲು ಎಲ್ಲಿ ಹುಡುಕಬೇಕೆಂದು ಯೋಚನೆಯಾಗುತ್ತದೆ.

ಮಂತ್ರಿ ಸುಬ್ಬರಾಯಪ್ಪನು ಬ್ರಾಹ್ಮಣ ಜಾತಿಗೆ ಸೇರಿದವನು. ಈತನಿಗೆ ಒಬ್ಬ ಮಗಳಿರುತ್ತಾಳೆ. ಈಕೆಯ ಹೆಸರು ಸರಸ್ವತಿ. ಈಕೆಯನ್ನು ಪೆನುಗೊಂಡೆಗೆ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತದೆ. ಸರಸ್ವತಿಯು ತನ್ನ ಮೊದಲ ಹೆರಿಗೆಗಾಗಿ ತಂದೆಯ ಮನೆಯಲ್ಲಿಯೇ ಉಳಿದುಕೊಂಡಿರುತ್ತಾಳೆ. ಮಂತ್ರಿ ಸುಬ್ಬರಾಯಪ್ಪನು ಪಾಳೇಗಾರನಿಂದ ಆಜ್ಞೆ ಪಡೆದು ಯೋಚನೆಯಿಂದ ಮನೆಗೆ ಬರುತ್ತಾನೆ. ಮನೆಗೆ ಬಂದ ತಂದೆಯು ಯೋಚನೆಯಲ್ಲಿರುವುದನ್ನು ನೋಡಿ ಸರಸ್ವತಿಯು ಏನೆಂದು ವಿಚಾರಿಸುತ್ತಾಳೆ. ಅದಕ್ಕೆ ಸುಬ್ಬರಾಯಪ್ಪನು ಕೋಟೆಯ ಬಾಗಿಲು ಬಿದ್ದು ಹೋಗುತ್ತಿದೆ. ಅದಕ್ಕೆ ಊರಿನ ಗುರು-ಹಿರಿಯರು, ಪುರೋಹಿತರು ಗರ್ಭಿಣಿ ಹೆಣ್ಣನ್ನು ಬಲಿಕೊಡಬೇಕೆಂದು ಹೇಳಿದ್ದಾರೆ. ಆ ಕೆಲಸವನ್ನು ನೆರವೇರಿಸಲು ಪಾಳೇಗಾರನು ನನಗೆ ವಹಿಸಿದ್ದಾನೆ ಎಂದು ಹೇಳುತ್ತಾನೆ. ಈ ವಿಚಾರವು ಸರಸ್ವತಿಯ ತಲೆಯಲ್ಲಿ ಮಧ್ಯರಾತ್ರಿಯವರೆಗೆ ಕಾಡುತ್ತದೆ. ಕೋಟೆಯ ಬಾಗಿಲು ಭದ್ರವಾಗಿ ಉಳಿಯಬೇಕೆಂದರೆ ಗರ್ಭಿಣಿಯನ್ನು

ಬಲಿಕೊಡಬೇಕೆಂದು ಊರಿನ ಗುರು-ಹಿರಿಯರು, ಪುರೋಹಿತರು ತೀರ್ಮಾನಿಸಿದ್ದಾರೆ. ಅದನ್ನು ನೆರವೇರಿಸುವ ಜವಾಬ್ದಾರಿಯನ್ನು ನನ್ನ ತಂದೆಗೆ ವಹಿಸಲಾಗಿದೆ. ಈ ಕೆಲಸವನ್ನು ನಾನೇ ನಿರ್ವಹಿಸಿದರೆ ನನ್ನ ತಂದೆಯ ಘನತೆಯು ಹೆಚ್ಚಾಗುತ್ತದೆ. ಹಾಗೂ ಕೋಟೆಯ ಬಾಗಿಲು ನನ್ನ ಬಲಿಯಿಂದ ಭದ್ರವಾಗಿ ನಿಂತರೆ ಈ ಪ್ರದೇಶದ ಜನತೆ ಸುರಕ್ಷಿತವಾಗಿಯೂ ಇರುತ್ತಾರೆ ಎಂದು ಭಾವಿಸಿ, ಸರಸ್ವತಿಯು ಯಾರಿಗೂ ತಿಳಿಯದ ರೀತಿ ಪೂರ್ವದಿಕ್ಕಿನ ಕೋಟೆಯ ಬಾಗಿಲ ಹತ್ತಿರ ಬಂದು ತನ್ನನ್ನು ತಾನು ಆಹುತಿ ಮಾಡಿಕೊಳ್ಳುತ್ತಾಳೆ. ಮುಂಜಾನೆ ಶವವಾಗಿ ಬಿದ್ದಿರುವ ಸರಸ್ವತಿಯ ದೇಹವನ್ನು ನೋಡಿದ ಜನರು ಮಂತ್ರಿ ಸುಬ್ಬರಾಯಪ್ಪನಿಗೆ ಸುದ್ದಿ ಮುಟ್ಟಿಸುತ್ತಾರೆ. ಈ ಘಟನೆಯನ್ನು ಕೇಳಿ, ನೋಡಿ ಬಹಳ ದುಃಖಪಡುತ್ತಾನೆ. ಪಾಳೇಗಾರನು ಮಂತ್ರಿ ಸುಬ್ಬರಾಯಪ್ಪನಿಗೆ ಸಮಾಧಾನಪಡಿಸುತ್ತಾನೆ. ಅದೇ ದಿನ ಕೋಟೆಯ ಬಾಗಿಲನ್ನು ನಿಲ್ಲಿಸುತ್ತಾರೆ. ಈ ಬಾಗಿಲು ಮತ್ತೆಂದು ಬೀಳುವುದಿಲ್ಲ. ಸರಸ್ವತಿಯು ಕೋಟೆಯ ಬಾಗಿಲು ಭದ್ರವಾಗಿ ನಿಲ್ಲಲು ಸ್ವಯಂ ಪ್ರೇರಿತವಾಗಿ ತಾನೇ ಆಹುತಿ ಮಾಡಿಕೊಂಡಿದ್ದಾಳೆ. ಈಕೆಯ ನೆನಪಿಗೋಸ್ಕರ ಇದೇ ಬಾಗಿಲ ಮೇಲೆ ಈಕೆಯನ್ನು ಹೋಲುವ ರೀತಿಯಲ್ಲಿ ಮೂರ್ತಿಯನ್ನು ಪಾಳೇಗಾರನು ಕೆತ್ತಿಸುತ್ತಾನೆ. ಆ ಮೂರ್ತಿಯನ್ನು ಈಗಲೂ ಪೆನುಗೊಂಡ ಬಾಗಿಲ ಮೇಲೆ ಇರುವುದನ್ನು ಕಾಣಬಹುದು. ಪ್ರಾರಂಭದಲ್ಲಿ ಈಕೆಗೆ ಪೂಜೆಗಳು ನಡೆಯುತ್ತಿದ್ದವು. ಕಾಲಾನಂತರ ಅವು ನಿಂತು ಹೋಗಿವೆ ಎಂದು ಇಲ್ಲಿನ ಜನರು ಹೇಳುತ್ತಾರೆ.

ಈ ಮೇಲಿನ ಕಥನವು ಕೆರೆಗೆ ಹಾರವಾದ ಭಾಗೀರಥಿಯ ಚಿತ್ರಣವನ್ನು ಹೋಲುತ್ತದೆ. ಕೆರೆಗೆ ಹಾರವಾದ ಭಾಗೀರಥಿಗೆ ಬಾಹ್ಯದಲ್ಲಿ ಒತ್ತಡವಿದೆ. ಆದರೆ ಈ ಕಥನದಲ್ಲಿನ ಸರಸ್ವತಿಗೆ ತನ್ನ ತಂದೆಗೆ ಪಾಳೆಗಾರರು ವಹಿಸಿರುವ ಜವಾಬ್ದಾರಿ ಬಿಟ್ಟರೆ ಈಕೆಗೆ ಯಾವುದೇ ಒತ್ತಡವಿರಲಿಲ್ಲ. ಆದರೂ ಆಕೆ ಸ್ವಯಂ ಇಚ್ಛೆಯಿಂದ ಬಲಿಯಾಗಿರುವುದು ವಿಶೇಷ. ಭಾಗೀರಥಿಯ ರೀತಿಯೇ ಸರಸ್ವತಿಯು ಗಂಡನ ಅನುಮತಿಗೆ ಕಾಯುವುದಿಲ್ಲ. ಭಾಗೀರಥಿ ಗಂಡನ ಮನೆಯ ಘನತೆಯನ್ನು ಉಳಿಸಿದರೆ ಸರಸ್ವತಿ ತವರು ಮನೆಯ ಘನತೆಯನ್ನು ಉಳಿಸಿದ್ದಾಳೆ. ಇಬ್ಬರಲ್ಲೂ ಸಮಾಜದ ಸಮಷ್ಟಿಯ ಉಳುವಿಗಾಗಿ ತ್ಯಾಗ ಮಾಡುವುದಾಗಿದೆ. ಈ ಮೇಲಿನ ಕಥನವನ್ನು ಪರಿಶೀಲಿಸಿದರೆ ಕೆಳವರ್ಗಗಳಂತೆ ಮೇಲ್ವರ್ಗದವರೂ (ಮಲ್ಲನಗೌಡನ ಸೊಸೆ ಭಾಗೀರಥಿ, ಕೆಂಪೇಗೌಡನ ಸೊಸೆ) ಕೆಲವು ಬಾರಿ ಭಾವತೀವ್ರತೆಯಿಂದ ಬಲಿಯಾಗುತ್ತಿದ್ದು ಕಾಣಬಹುದು. ಹಾಗೆಯೇ ಇದೇ ಪಾವಗಡದ ಹೊರಸುತ್ತಿನ ಕೋಟೆಯ ಬುರುಜಿಗೆ ಕೊರಚು ಮುತ್ಯಾಲಮ್ಮಳನ್ನು ಬಲಿಕೊಟ್ಟಿರುವ ಕಥನದ ವಿವರ ಹೀಗಿದೆ.

ಪಾವಗಡದ ಪಾಳೇಗಾರನು ರಕ್ಷಣೆಯ ದೃಷ್ಟಿಯಿಂದ ಹೊರಸುತ್ತಿನಲ್ಲಿರುವ ಕೋಟೆಗೆ ಒಂದು ಬುರುಜನ್ನು ಸ್ಥಾಪಿಸಬೇಕೆಂದು ನಿಶ್ಚಯಿಸುತ್ತಾನೆ. ಅದರಂತೆ ಅಲ್ಲಿನ ಕೆಲಸಗಾರರಿಗೆ ಬುರುಜನ್ನು ನಿರ್ಮಿಸಲು ತಿಳಿಸುತ್ತಾನೆ. ಆಜ್ಞೆಯಂತೆ ಕೋಟೆಗೆ ಹೊಂದಿಕೊಂಡಂತೆ ಈಗಿನ ಪೆನುಗೊಂಡೆ ಬಾಗಿಲ ಬಲಭಾಗದಲ್ಲಿ ಬುರುಜನ್ನು ನಿರ್ಮಿಸುತ್ತಿರುವಾಗ ಅದು ನಿಲ್ಲದೆ ಕುಸಿದು ಹೋಗುತ್ತಿತ್ತು. ಈ

ವಿಚಾರವನ್ನು ಪಾಳೇಗಾರನಿಗೆ ತಿಳಿಸುತ್ತಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಪಾಳೇಗಾರನು ಜೋಯಿಸರಲ್ಲಿ ಕೇಳಿದಾಗ 'ನೀವು ಕಟ್ಟಿದ ಬುರುಜು ನಿಲ್ಲಬೇಕೆಂದರೆ ಗರ್ಭಿಣಿ ಹೆಣ್ಣನ್ನು ಬಲಿ ಕೊಡಬೇಕು ಆಗ ಮಾತ್ರ ಬುರುಜು ಕುಸಿಯದಂತೆ ನಿಲ್ಲುತ್ತದೆಂದು ಹೇಳುತ್ತಾರೆ'. ಜೋಯಸರ ಮಾತನ್ನು ಮೀರದಂತೆ ಬೀಳುವ ಬುರುಜಿಗೆ ಬಲಿಕೊಡಲು ಪಾಳೇಗಾರನು ಗರ್ಭಿಣಿ ಹೆಣ್ಣನ್ನು ಊರಲ್ಲಿ ಹುಡುಕಿಸುತ್ತಾನೆ. ಆದರೆ ಊರಿನಲ್ಲಿ ಗರ್ಭಿಣಿ ಹೆಂಗಸು ಸಿಗುವುದಿಲ್ಲ. ಪಾಳೇಗಾರನು ಊರ ಹೊರಗಿರುವ ಕೊರಚ ಜನಾಂಗದಲ್ಲಿ ಹುಡುಕಲು ಕಳುಹಿಸುತ್ತಾನೆ. ಅಲ್ಲಿ ಮುಖಂಡನ ಸೊಸೆಯು ಗರ್ಭಿಣಿಯಿದ್ದಾಳೆಂಬುದು ಪಾಳೇಗಾರನಿಗೆ ತಿಳಿಯುತ್ತದೆ. ಕೊರಚ ಮುಖಂಡನನ್ನು ಕರೆಯಿಸಿ, ಈಗ ನಡೆದಿರುವ ಘಟನೆಯ ವಿವರವನ್ನು ತಿಳಿಸಿ, ಗರ್ಭಿಣಿ ಹೆಣ್ಣು ಕೋಟೆಗೆ ಬಲಿಯಾಗಬೇಕಿದೆ. ನೀನು ಆಕೆಯನ್ನು ಕಳುಹಿಸಬೇಕೆಂದು ಪಾಳೇಗಾರನು ಹೇಳುತ್ತಾನೆ. ಮುಖಂಡನು ಮರು ಮಾತನಾಡದೆ ಒಪ್ಪಿಗೆ ಸೂಚಿಸುತ್ತಾನೆ. ಪಾಳೇಗಾರನ ಅಪ್ಪಣೆಯ ಮೇರೆಗೆ ಮರುದಿನವೇ ಶಾಸ್ತ್ರೋಕ್ತವಾಗಿ ಕೊರಚು ಮುತ್ಯಾಲಮ್ಮಳನ್ನು ಬುರುಜಿಗೆ ಬಲಿ ಕೊಡುತ್ತಾರೆ. ಈ ಬಲಿಯಿಂದ ಮತ್ತೆ ಕಟ್ಟಿದ ಬುರುಜು ಕುಸಿಯದೇ ಭದ್ರವಾಗಿ ನಿಲ್ಲುತ್ತದೆ. ಆಗ ಪಾಳೇಗಾರನು ಕೋಟೆಯ ಬುರುಜಿಗೆ ಕೊರಚು ಹೆಣ್ಣು ಮಗಳು ಬಲಿಯಾಗಿದ್ದಾಳೆ. ಅವಳ ನೆನಪಿಗಾಗಿ ಈಕೆಯ ಹೆಸರನ್ನೇ ಇಡಬೇಕೆಂದು ಹೇಳುತ್ತಾನೆ. ಅಂದಿನಿಂದ ಈ ಬುರುಜಿಗೆ 'ಕೊರಚು ಮುತ್ಯಾಲಮ್ಮನ ಬುರುಜು' ಎಂದು ಕರೆಯುವುದು ರೂಢಿಯಿದೆ.

ಈ ಮೇಲಿನ ಕಥನದಲ್ಲಿ ಪಾಳೇಗಾರನು ಕೊರಚು ಜನಾಂಗದ ಗರ್ಭಿಣಿ ಮಹಿಳೆಯನ್ನು ಒತ್ತಾಯ ಪೂರ್ವಕವಾಗಿ ತಂದು ಬಲಿಕೊಟ್ಟಿರುವುದು ಕಂಡುಬರುತ್ತದೆ. ಇಲ್ಲಿ ಕೊರಚು ಜನಾಂಗದ ಮುಖಂಡ ಮತ್ತು ಪಾಳೇಗಾರ ಇಬ್ಬರು ಒಂದೇ ನೆಲೆಯಲ್ಲಿ ಕಂಡುಬರುತ್ತಾರೆ. ಇವರಿಬ್ಬರ ತೀವ್ರ ಸ್ಪರ್ಧೆಗೆ ಬಲಿಯಾದವಳು ಮುತ್ಯಾಲಮ್ಮ. ಮುಖ್ಯವಾಗಿ ಈ ಕಥನದಲ್ಲಿ ಪ್ರಭುತ್ವವು ತನ್ನ ಅಸ್ತಿತ್ವದ ಉಳುವಿಕೆಗಾಗಿ ಹಲವಾರು ರೀತಿಯ ತಂತ್ರಗಳನ್ನ ಉಪಯೋಗಿಸಿ ಸಮುದಾಯದ ವ್ಯಕ್ತಿಯನ್ನು ಬಲಿಕೊಟ್ಟಿರುವುದು ಕಾಣಬಹುದು. ಮೂರನೇ ಕಥನವು ಪಾವಗಡದ ಎರಡನೇ ಕೋಟೆಯ ಸುತ್ತಿನಲ್ಲಿರುವ ಬುರುಜಿಗೆ ಭೋವಿ ಜನಾಂಗದ ಕೋಟಮ್ಮ ಬಲಿಯಾಗಿದ್ದಾಳೆ. ಅದರ ಕಥನದ ವಿವರ ಹೀಗಿದೆ.

ಪಾವಗಡ ಪಾಳೇಗಾರನು ರಕ್ಷಣೆಯ ದೃಷ್ಟಿಯಿಂದ ಎರಡನೇ ಕೋಟೆಯಲ್ಲಿ ಬೃಹತ್ ಬುರುಜನ್ನು ನಿರ್ಮಿಸಬೇಕೆಂದು ನಿಶ್ಚಯಿಸುತ್ತಾನೆ. ಈ ಬುರುಜನ್ನು ನಿರ್ಮಿಸಲು ಪಾಳೇಗಾರನು ಭೋವಿ ಜನಾಂಗಕ್ಕೆ ಒಪ್ಪಿಸುತ್ತಾನೆ. ಅದರಂತೆ ಭೋವಿ ಜನಾಂಗದವರು ಬುರುಜನ್ನು ನಿರ್ಮಿಸುವಾಗ ಇದ್ದಕ್ಕಿದ್ದಂತೆ ಕಟ್ಟಿದ ಬುರುಜು ಕುಸಿಯುತ್ತದೆ. ಈ ವಿಚಾರವನ್ನು ಭೋವಿಗಳು ಪಾಳೇಗಾರನಲ್ಲಿ ತಿಳಿಸುತ್ತಾರೆ. ಈ ವಿಚಾರವನ್ನು ಕೇಳಿದ ಪಾಳೇಗಾರನಿಗೆ ಯೋಚನೆಯುಂಟಾಗುತ್ತದೆ. ಇದೇ ಯೋಚನೆಯಲ್ಲಿ ಪಾಳೇಗಾರನು ರಾತ್ರಿ ಮಲಗಿದ್ದಾಗ ಕನಸಿನಲ್ಲಿ ಮಾರಿದೇವತೆಯು ಬಂದು 'ಈಗ ಕುಸಿದು ಬೀಳುತ್ತಿರುವ ಕೋಟೆಯ

ಬುರುಜು ನಿಲ್ಲಬೇಕೆಂದರೆ, ಆ ಬುರುಜಿನಲ್ಲಿ ಒಂದು ಕೊಠಡಿಯನ್ನು ನಿರ್ಮಿಸಿ ಅದರೊಳಕ್ಕೆ ಮೊದಲ ಬಾರಿಗೆ ಗರ್ಭಧರಿಸಿದ ಹೆಣ್ಣನ್ನು ಬಿಟ್ಟು, ಆಕೆಗೆ ಬೇಕಾಗುವ ವಸ್ತುಗಳನ್ನು ಹಾಕಿ ಭದ್ರವಾಗಿ ಕೊಠಡಿಯನ್ನು ಮುಚ್ಚಿ ಬುರುಜು ನಿರ್ಮಿಸು ಕುಸಿಯುವುದಿಲ್ಲ' ಎಂದು ಹೇಳುತ್ತದೆ. ಪಾಳೇಗಾರನು ನಿದ್ದೆಯಿಂದ ಎಚ್ಚೆತ್ತಾಗ ಮಾರಿದೇವತೆ ಕಾಣಲಿಲ್ಲ. ತನ್ನ ಮನೆದೇವತೆಯು ಈ ಕೆಲಸವನ್ನು ನಿರ್ವಹಿಸು ಎಂದು ಹೇಳಿದೆ. ನಾನು ಅದರಂತೆ ನಡೆಯಲೇಬೇಕು ಇಲ್ಲವೆಂದರೆ ಕಂಟಕ ಅನುಭವಿಸಬೇಕಾಗುತ್ತದೆಂದು, ಕೋಟೆಯ ಬುರುಜಿನ ಕೊಠಡಿಯಲ್ಲಿ ಗರ್ಭಿಣಿಯನ್ನು ಸಜೀವ ಸಮಾಧಿ ಮಾಡಲು ನಿರ್ಧರಿಸುತ್ತಾನೆ. ಊರಿನಲ್ಲಿ ಮೊದಲ ಮಗುವಿನ ಗರ್ಭಿಣಿ ಹೆಣ್ಣು ದೊರೆಯದ ಕಾರಣ, ಕೋಟೆಯ ಬುರುಜನ್ನು ಕಟ್ಟಲು ಬಂದಿದ್ದ ಭೋವಿ ಜನಾಂಗದ ಮುಖಂಡನ ಳನೇ ಮಗನ ಹೆಂಡತಿಯನ್ನು ಮಾರಿದೇವತೆ ಹೇಳಿದ ರೀತಿ ಕೋಟೆಯ ಬುರುಜಿನಲ್ಲಿ ಕೊಠಡಿಯನ್ನು ನಿರ್ಮಿಸಿ, ಆಕೆಗೆ ಬೇಕಾಗುವ ಅಗತ್ಯವಸ್ತುಗಳನ್ನು ಇಟ್ಟು ಭದ್ರವಾಗಿ ಕೋಟೆಯ ಬುರುಜಿನಲ್ಲಿ ಸೇರಿಸಿ ಕಟ್ಟಲಾಗುತ್ತದೆ. ಆಗ ಬುರುಜು ಕುಸಿಯದೇ ಹಾಗೆಯೇ ನಿಲ್ಲುತ್ತದೆ.

ಸ್ವಲ್ಪ ದಿನಗಳ ನಂತರ ಈ ಬುರುಜಿನಿಂದ ಮಗು ಅಳುವುದು ಕೇಳಿಬರುತ್ತದೆ. ಇದನ್ನು ಗಮನಿಸಿದ ಜನರು ಈ ಬುರುಜಿಗೆ ಪೂಜೆ ಮಾಡಲು ಮುಂದಾಗುತ್ತಾರೆ. ಜೊತೆಗೆ ಕೋಟಮ್ಮ ಸತ್ತಿಲ್ಲ ಬದುಕಿದ್ದಾಳೆಂದೂ, ಆಕೆಗೆ ಮಗು ಸಹ ಆಗಿದೆಯೆಂದು ಭಾವಿಸಿದರು. ಬುರುಜಿನಲ್ಲಿರುವ ಕೊಠಡಿಯಿಂದ ಇದ್ದಕ್ಕಿದ್ದಂತೆ ಒಂದು ಕಿಂಡಿ ಬೀಳುತ್ತದೆ. ಇದನ್ನು ಆಶ್ಚರ್ಯದಿಂದ ಸುತ್ತಮುತ್ತಲ ಜನರು ನೋಡಲು ಬರುತ್ತಾರೆ. ಆ ಕಿಂಡಿಯಿಂದ ತಮಗೆ ಬೇಕಾದ ವಸ್ತುಗಳನ್ನು ಸಹ ಪಡೆದುಕೊಳ್ಳುತ್ತಾರೆ. ಇದು ಕೆಲವು ದಿನಗಳ ನಂತರ ಮುಚ್ಚಿ ಹೋಗುತ್ತದೆ. ಇದರಲ್ಲಿನ ಈ ರೀತಿಯ ಪವಾಡಗಳನ್ನು ನೋಡಿದ, ಕೇಳಿದ ಪಾಳೇಗಾರನು ಈಕೆಯು ಮಹಾಸಾಧ್ವಿಯಾಗಿದ್ದಾಳೆ. ಆದ್ದರಿಂದ ಈಕೆಯನ್ನು ಸರ್ವರೂ ಪೂಜಿಸಬೇಕೆಂದು ಡಂಗೂರ ಸಾರಿಸುತ್ತಾನೆ. ಈ ಹಿನ್ನೆಲೆಯಲ್ಲಿ ಬಲಿಯಾದ ಬುರುಜಿಗೆ 'ಕೋಟಮ್ಮಳ ಬುರುಜು' ಎಂದು ಕರೆಯಬೇಕೆಂದು ಪಾಳೇಗಾರನು ತಿಳಿಸುತ್ತಾನೆ. ಜೊತೆಗೆ ಪಾಳೇಗಾರನ ಮನೆದೇವರಾದ ವೇಣುಗೋಪಾಲಸ್ವಾಮಿಯ ರಥವು ಪ್ರತಿವರ್ಷ ಕೋಟಮ್ಮಳ ಬುರುಜಿನವರಗೆ ಬರಬೇಕೆಂದು ಸೂಚಿಸುತ್ತಾನೆ. ಅದರಂತೆ ವೇಣುಗೋಪಾಲಸ್ವಾಮಿಯ ರಥವು ಕೊತ್ತಲದ ಹತ್ತಿರ ಬಂದಾಗ ಕೋಟಮ್ಮಳಿಗೆ ಹಸಿರು ಸೀರೆ, ಕುಪ್ಪಸ, ಹಸಿರು ಬಳೆ ಮತ್ತು ಮಡಲಕ್ಕಿ ಕೊಡುವುದನ್ನು ರೂಢಿ ಮಾಡಿದನು. ಈ ಆಚರಣೆ ಪ್ರತಿವರ್ಷ ಈಗಲೂ ನಡೆಯುತ್ತಿದೆ.

ಈ ಮೇಲಿನ ಕಥನದಲ್ಲಿ ಪಾಳೇಗಾರನು ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಕೋಟೆಯನ್ನು ಕಟ್ಟುವ ಭೋವಿ ಜನಾಂಗದ ಹೆಣ್ಣನ್ನೇ ಬಲಿಕೊಡುವುದು ಕಂಡುಬರುತ್ತದೆ. ಕೋಟಮ್ಮಳು ಸಜೀವ ಸಮಾಧೀಕರಣವಾದ ನಂತರದಲ್ಲಿ ಈಕೆಯನ್ನು ದೈವತ್ವಕ್ಕೇರಿಸಲಾಗುತ್ತದೆ. ಇದರಿಂದ ಸಾಮಾನ್ಯ

ಮನುಷ್ಯನೂ ಜಾತಿಭೇದವಿಲ್ಲದೆ ಅತಿದೊಡ್ಡ ಸಾಧನೆ ಮಾಡಿದಾಗ ದೈವತ್ವಕ್ಕೆ ಏರಬಹುದು ಎಂಬುದಕ್ಕೆ ಈ ಮೇಲಿನ ಕಥನವೇ ಸಾಕ್ಷಿಯಾಗಿದೆ. ದೈವತ್ವಕ್ಕೇರಿದ ವ್ಯಕ್ತಿಗಳಿಗೆ ಸಮಾಜದಲ್ಲಿ ಅನೇಕ ನಂಬಿಕೆಗಳು ಹುಟ್ಟಿಕೊಂಡು ಆಚರಣೆಗಳು ರೂಢಿಬಂದವು. ಇಲ್ಲಿ ಮುಖ್ಯವಾಗಿ ಸಾಮಾನ್ಯ ಮಹಿಳೆ ತ್ಯಾಗಬಲಿದಾನ ಮಾಡಿಕೊಂಡಿದ್ದರಿಂದ ಆಕೆಯನ್ನು ಅಸಾಮಾನ್ಯ ವ್ಯಕ್ತಿಯನ್ನಾಗಿ ಸಮುದಾಯಗಳು ಗೌರವಿಸಿರುವುದನ್ನು ಕಾಣಬಹುದು.

ತುಮಕೂರು ಜಿಲ್ಲೆಯ ಪಾವಗಡದ ಕೋಟೆಗೆ ಬಲಿಯಾದವರಲ್ಲಿ ಹೆಚ್ಚಾಗಿ ಸ್ತ್ರೀಯರೆ, ಅದರಲ್ಲೂ ಗರ್ಭಿಣಿ ಸ್ತ್ರೀಯರೇ ಹೆಚ್ಚು. ಗರ್ಭಿಣಿ ಸ್ತ್ರೀಯರನ್ನು ಬಲಿಕೊಡಲು ಮುಖ್ಯವಾಗಿ ಅವರನ್ನು ಫಲವತ್ತತೆಯ, ಸೃಷ್ಟಿಯ ಸಂಕೇತವೆಂದು ಭಾವಿಸಿರುವುದೇ ಕಾರಣವಾಗಿದೆ. ಹೀಗೆ ಬಲಿಯಾಗುವುದನ್ನು ಒಂದು ಮೌಲ್ಯವೆಂದು ಸಮುದಾಯಗಳು ನಂಬಿವೆ. ಬಲಿಯಾದಂತಹ ಸ್ತ್ರೀಯು ದೇವತೆಯಾಗಿ ಪೂಜೆಗೊಳ್ಳುವ ಹಲವಾರು ಮಾದರಿಗಳು ಅಂದು ಸಮುದಾಯದಲ್ಲಿ ಇದ್ದುದರಿಂದ ಬಲಿಯಾಗುವ ಗರ್ಭಿಣಿ ಸ್ತ್ರೀಯರು ಅದೊಂದು ಪವಿತ್ರ ಕಾರ್ಯವೆಂದೇ ಭಾವಿಸಿದ್ದರು.(ಉದಾಹರಣೆಯಾಗಿ ಪಾವಗಡದ ಕೋಟೆಗೆ ಬಲಿಯಾದ ಸರಸ್ವತಿ, ಮುತ್ಯಾಲಮ್ಮ, ಕೋಟಮ್ಮರು ಇದೊಂದು ಸಮಾಜದ ಪವಿತ್ರಕಾರ್ಯವೆಂದೇ ಯಾರಿಗೂ ಪ್ರತಿಭಟಿಸದೇ ಭಾಗವಹಿಸಿದ್ದಾರೆಂದು ಹೇಳಬಹುದು) ಅಲ್ಲದೆ ಪ್ರಭುತ್ವಕ್ಕೆ ಕೋಟೆ ನಿರ್ಮಾಣದ ಸಂದರ್ಭದಲ್ಲಿ ಉಂಟಾದ ಅಡ್ಡಿ ಆತಂಕಗಳು ಗರ್ಭಿಣಿ ಸ್ತ್ರೀಯ ಬಲಿಯಿಂದ ನಿವಾರಣೆಯಾಗುತ್ತದೆ ಎಂದು ನಂಬಲಾಗಿದೆ. ಹೀಗೆ ಕೆರೆ, ಮನೆ, ಅರಮನೆ, ದೇವಾಲಯ, ಕೋಟೆಗಳ ನಿರ್ಮಾಣದಲ್ಲಿ ಬಲಿಕೊಡುವ ಪದ್ಧತಿ ತಾಂತ್ರಿಕ ವಾಮಾಚಾರದ ಭಾಗವಾಗಿ ಬೆಳೆದು, ಹೆಚ್ಚಿನ ಅಸಹಾಯಕತೆಯ ಲಾಭವನ್ನು ಅದು ಪಡೆದುಕೊಂಡಿದೆ.

ಮುಖ್ಯವಾದ ಪ್ರಶ್ನೆಯೆಂದರೆ ಕೋಟೆ ಕಟ್ಟುವಾಗ ತಂದೆ-ಮಗ ಸ್ತ್ರೀಯನ್ನು ಕಾಣದಂತೆ ಎಚ್ಚರವಹಿಸುವುದನ್ನು ಕಂಡರೆ ವೀರ್ಯ ಸ್ಖಲನದ ಮೂಲಕ ಪೌರುಷವೆಲ್ಲವೂ ಇಲ್ಲದಂತಾಗುವುದನ್ನು ಹಿಂದಿನ ಅಧ್ಯಯದಲ್ಲಿ(ಅಧ್ಯಾಯ-೫.೩) ಗಮನಿಸಿದ್ದೇವೆ. ಇಲ್ಲಿ ಸ್ತ್ರೀಯನ್ನು ಅಪಶಕುನದಂತೆಯೂ ಕೀಳೆಂದು ಭಾವಿಸಿದ್ದಾರೆ. ಅದೇ ಸ್ತ್ರೀ ಬಲಿಯಾಗುವ ಸಂದರ್ಭದಲ್ಲಿ ಪವಿತ್ರಳಾಗಿ, ದೇವತೆಯಾಗಿ, ಯಾಕೆ ಪೂಜಿತಳಾಗುತ್ತಾಳೆ? ಇದು ಪುರುಷ ಸಮಾಜದ ತಂತ್ರವಲ್ಲದೆ ಬೇರೇನೂ ಅಲ್ಲವೆನಿಸುತ್ತದೆ. ನಿರ್ಮಾಣದ ಎಲ್ಲಾ ಗೌರವವನ್ನು ತಾನೇ ಪಡೆಯುವ ಪುರುಷ, ಪ್ರಾಣತ್ಯಾಗದ ಸಂದರ್ಭದಲ್ಲಿ ಮಾತ್ರ ಸ್ತ್ರೀಯರನ್ನು ಗೌರವವಾಗಿ ಕಾಣುವ ಮೂಲಕ ಅವಳನ್ನು ಶೋಷಣೆಗೊಳಪಡಿಸುತ್ತಾನೆ. ಹಾಗಾಗಿ ಪ್ರಾಣಬಲಿ ನೀಡುವ ಸಂದರ್ಭದಲ್ಲಿ ಮಾತ್ರ ಅದು ಉನ್ನತವರ್ಗವಿರಲಿ ಅಥವಾ ಕೆಳವರ್ಗವಿರಲಿ ಸ್ತ್ರೀಯರೆಲ್ಲ ಶೋಷಣೆಗೆ ಒಳಗಾಗಿರುವುದನ್ನು ಇಲ್ಲಿನ ಕಥನಗಳಿಂದ ತಿಳಿದುಕೊಳ್ಳಬಹುದಾಗಿದೆ.

ಒಟ್ಟಾರೆಯಾಗಿ ಬಲಿಗಳು ಪ್ರಾಚೀನ ಕಾಲದಿಂದಲೂ ವಾಸ್ತುರಚನೆಯಲ್ಲಿ ನಿರ್ಮಿಸುವ ಕೋಟೆ, ಕೆರೆ, ಆಣೆಕಟ್ಟು, ಹಾಗೂ ಇನ್ನಿತರ ಕಟ್ಟಡಗಳಿಗೆ ನರಬಲಿಯನ್ನು ಕೊಟ್ಟು, ಅವುಗಳು ನಿರ್ಮಾಣವಾದ ಮೇಲೆ

ಸುಭದ್ರವಾಗಿ ನಿಲ್ಲಲೆಂದು ಆಶಿಸುವುದು ಕಂಡುಬರುತ್ತದೆ. ಇಂತಹ ನರಬಲಿಯು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ. ಹಿಂದೆ ಇದ್ದ ನರಬಲಿಯು ನಾಗರೀಕತೆಯ ವೇಳೆಗಾಗಲೇ ಸಾಕಷ್ಟು ಕಣ್ಮರೆಯಾಗಿ ಬಲಿಗೆ ಬದಲಿ ವ್ಯವಸ್ಥೆಯನ್ನು ಮಾಡಿಕೊಂಡಿರುವುದು ಕಾಣಬಹುದು. ನರಬಲಿಯೂ ಧಾರ್ಮಿಕ ವಿಧಿಯ ಒಂದು ಅಂಗವಾಗಿದ್ದುದರಿಂದ ಅದನ್ನು ಯಾವುದಾದರೂ ಸಾಂಕೇತಿಕ ಅಥವಾ ಬದಲಿ ರೂಪದಲ್ಲಿ ಆಚರಿಸುವುದು ಅನಿವಾರ್ಯವಾಗಿದೆ. ಇದರಿಂದ ನರಬಲಿಯ ಬದಲು ಒಂದೆರಡು ರಕ್ತದ ಹನಿಯನ್ನು ಚೆಲ್ಲುವಂತೆ ಮಾಡುವುದು, ಮನುಷ್ಯ ಬಲಿಯ ಬದಲಾಗಿ ಒಂದು ಪ್ರಾಣಿಯನ್ನು ಬಲಿಕೊಡುವುದು, ಅಲ್ಲದೆ ನರಬಲಿಯಂತೆ ಬೂದಿಗುಂಬಳಕ್ಕೆ ಕುಂಕುಮವಿಟ್ಟು ಹೊಡೆದು ಹಾಕುವುದು, ನಂತರವೂ ಬೂದಿಗುಂಬಳಕ್ಕೆ ಕುಂಕುಮ ಹಚ್ಚುವುದು, ಲಿಂಬೆಹಣ್ಣನ್ನು ಎರಡು ಚೂರು ಮಾಡುವುದು, ಬಾಳೆಯಹಣ್ಣನ್ನು ಕತ್ತು ಮುರಿಯುವುದು, ತೆಂಗಿನ ಕಾಯಿ ಹೊಡೆಯುವುದು ಇವೆಲ್ಲವೂ ಮನುಷ್ಯನ ತಲೆಯ ಬದಲಿ ರೂಪಗಳಾಗಿ ಸಾಂಕೇತಿಕ ರೂಪವನ್ನು ಪಡೆದಿವೆ ಎನ್ನಬಹುದಾಗಿದೆ. ಆದರೂ ಇವೆಲ್ಲವೂ ಬಲಿಗಳೆಂದೇ ಸಮಾಜವು ಅಂಗೀಕರಿಸಿದೆ. ಈ ರೀತಿ ಬದಲಾವಣೆಯಾದರೂ ಹಿಂದಿನ ಸಾಂಸ್ಕೃತಿಕ ನೆನಪುಗಳು ಒಂದು ಸಮಾಜದೊಳಗೆ ಬಂದು ರೂಪಿತವಾಗಿರುತ್ತವೆ. ಅವುಗಳನ್ನು(ನರಬಲಿ) ಗಟ್ಟಿಗೊಳಿಸು ವುದಕ್ಕಾಗಿ ಬಲಿಯ ಸಂಕೇತವೆಂಬಂತೆ ಈ ರೀತಿಯ ಬದಲಿ ವ್ಯವಸ್ಥೆಯನ್ನು ಮನುಷ್ಯ ಮತ್ತೆ ಮತ್ತೆ ರೂಢಿಸಿಕೊಳ್ಳುತ್ತಾನೆ.

೫.೫. ಕೋಟೆಗಳಲ್ಲಿ ಕಂಡುಬರುವ ಐತಿಹ್ಯಗಳು

ಐತಿಹ್ಯಗಳು ಸಾಮಾನ್ಯವಾಗಿ ಸತ್ಯಘಟನೆಯನ್ನು ಆಧರಿಸಿ ರೂಪಾಂತರ ಹೊಂದಿದ ಕಥನ ಮಾದರಿಯಾಗಿರುತ್ತವೆ. ಐತಿಹ್ಯದ ಒಂದು ವೈಶಿಷ್ಟ್ಯವೆಂದರೆ, ಅದು ಹಿಂದೆ ವಾಸ್ತವವಾಗಿ ನಡೆದ ಘಟನೆಯ ನಿರೂಪಣೆಯೇ ಹೌದೆಂಬುದಕ್ಕೆ ಕುರುಹಾಗಿ ಅದರ ನಿರೂಪಕರು(ಜನಪದರು) ಇಂದು ತೋರಿಸುತ್ತಿರುವ ಕೆಲವೊಂದು ಅವಶೇಷ, ಪಳೆಯುಳಿಕೆ, ವಸ್ತು, ಸ್ಥಳಗಳು, ಅದು ಕೆರೆಯಾಗಿರಬಹುದು. ಗುಡ್ಡವಾಗಿರಬಹುದು. ಬೆಟ್ಟವಾಗಿರಬಹುದು. ಹೆಬ್ಬಂಡೆಯಾಗಿರಬಹುದು. ಅಸಾಧಾರಣ ದಿನ್ನೆಯಾಗಿರ ಬಹುದು, ಹಿಂದಿನ ಕಾಲದ ವ್ಯಕ್ತಿಗಳು ಉಪಯೋಗಿಸುತ್ತಿದ್ದ ಉಡುಗೆ-ತೊಡುಗೆ, ಆಭರಣಗಳಾಗಿರಬಹುದು; ವೀರಪುರುಷರು ಬಳಸಿದ್ದ ಆಯುಧ-ಸಾಮಗ್ರಿಗಳಾಗಿರಬಹುದು. ಅಷ್ಟು ಮಾತ್ರವಲ್ಲ ಕೆಲವೊಂದು ಸ್ಥಳನಾಮ, ಗಾದೆ, ಒಗಟು, ಪಡೆನುಡಿ - ನುಡಿಗಟ್ಟು, ನಂಬಿಕೆ, ಆಚರಣೆ ಇತ್ಯಾದಿಗಳು ನಿರ್ದಿಷ್ಟ ಘಟನೆಗಳ (ಐತಿಹ್ಯಗಳ) ಕುರುಹುಗಳಾಗಿ ಬಳಕೆಯಲ್ಲಿರುವುದುಂಟು. ಒಟ್ಟಿನಲ್ಲಿ ಮೇಲಿನ ಕುರುಹುಗಳ ವಿವಿಧ ಹಿನ್ನೆಲೆಯಲ್ಲಿ ಬೆಳೆದುಕೊಂಡು ಬಂದಿರುವ ಪೂರ್ವದಲ್ಲಿ ನೈಜವಾಗಿ ನಡೆದಿದ್ದೇ ಎಂಬುದಾಗಿ ಅದರ ಪ್ರಸಾರಕರಲ್ಲಿ ವಿಶ್ವಾಸವಿರುವ ಘಟನೆಯ(ಗಳ) ಮೌಖಿಕ ಸಂಪ್ರದಾಯದ ಗದ್ಯ ನಿರೂಪಣೆಯೇ ಐತಿಹ್ಯ.[೨೨]

ಐತಿಹ್ಯಗಳಿಗೂ ಕಥೆಗಳಿಗೂ ವ್ಯತ್ಯಾಸವಿದೆ. ಕೋಟೆಗಳಿಗೆ ಸಂಬಂಧಿಸಿದಂತೆ ಇರುವ ಕಥೆಗಳು ಮತ್ತು ಐತಿಹ್ಯಗಳು ಸಾಕಷ್ಟಿದ್ದರೂ ಅವುಗಳಲ್ಲಿ ವ್ಯತ್ಯಾಸವಿದೆ. ಕಥೆಗಳು ಮನೋರಂಜನಾತ್ಮಕವಾಗಿರುತ್ತವೆ. ಇವುಗಳಿಗೆ ನಿರ್ದಿಷ್ಟ ಆಧಾರಗಳಿರುವುದಿಲ್ಲ. ಉದಾಹರಣೆಗೆ ಕೋಟೆಗಳಿಗೆ ಸಂಬಂಧಿಸಿದಂತೆ ಮೊಲ-ನಾಯಿಯನ್ನು ಬೆನ್ನಟ್ಟಿಕೊಂಡು ಹೋದ ಕತೆಗಳು, ಕನಸಿನಲ್ಲಿ ಕೋಟೆಕಟ್ಟಲಿಕ್ಕೆ ಸಂತ ಅಥವಾ ದೈವ ಕಾಣಿಸಿಕೊಂಡ ಬಗೆಗಳು. ಇವುಗಳಿಗೆ ಯಾವುದೇ ಆಧಾರಗಳನ್ನು ಜನಸಮುದಾಯ ತೋರುವುದಿಲ್ಲ. ಇವು ಕಾವ್ಯ ಮತ್ತು ಗದ್ಯರೂಪದಲ್ಲಿಯೂ ಇರುತ್ತವೆ. ಆದರೆ ಐತಿಹ್ಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಆಧಾರವನ್ನೋ ಕುರುಹನ್ನೋ ಸಮುದಾಯ ಇವತ್ತಿಗೂ ಉಳಿಸಿಕೊಂಡು ಬಂದಿದೆ. ಮತ್ತೆ ಇವು ನೈಜವಾಗಿ ನಡೆದ ಘಟನೆಗಳೆಂದೇ ಸಮುದಾಯಗಳು ತಲತಲಾಂತರದಿಂದಲೂ ನಂಬುತ್ತಾ ಬಂದಿವೆ.

ಐತಿಹ್ಯದಿಂದಲೂ ಮನೋರಂಜನೆ ಸಿಗುವುದುಂಟು. ಆದರೆ ಮೂಲತಃ ಐತಿಹ್ಯ ಮನೋರಂಜನೆಯ ಉದ್ದೇಶವನ್ನಿರಿಸಿಕೊಂಡು ಜನ್ಮ ತಾಳಲಿಲ್ಲ ಎಂಬಂಶವನ್ನು ತಿಳಿದಿರಬೇಕಾಗುತ್ತದೆ. ತಾವು ಕಂಡು ಕೇಳಿದ ಘಟನೆಗಳನ್ನು ನೇರವೂ, ಸರಳವೂ, ಸಂಕ್ಷಿಪ್ತವೂ ಆದ ರೀತಿಯಲ್ಲಿ ಒಬ್ಬರಿಂದೊಬ್ಬರಿಗೆ ಹೇಳುತ್ತಾ ಬಂದುದೇ ಇಂದು ಐತಿಹ್ಯವಾಗಿ ಕಂಡುಬರುತ್ತದೆ. ಆದರೆ ಇಂದು ಮೂಲ ಸ್ವರೂಪದಲ್ಲಿ ಉಳಿದು ಬಂದ ಇಂತಹ ಐತಿಹ್ಯಗಳು ಕೆಲವು ಮಾತ್ರ. ಒಬ್ಬರಿಂದೊಬ್ಬರಿಗೆ ದಾಟಿ ಬರುವ ಹಂತದಲ್ಲಿ ಆಯಾ ಪ್ರಸಾರಕರ ರಾಗ-ರಂಗುಗಳ ಪ್ರಭಾವದಿಂದಾಗಿ ಇಂದು ಐತಿಹ್ಯಗಳು ಹೊಸರೂಪವನ್ನು ಪಡೆದುಕೊಳ್ಳುತ್ತಿರುವುದು ಅಸಹಜವೇನಲ್ಲ. ಇಂದು ಒಂದು ಜನಪದ ಕಥೆಯಿಂದ ಯಾವ ರೀತಿಯ ಮನೋರಂಜನೆಯು ಲಭಿಸುತ್ತದೆಯೋ ಅದೇ ರೀತಿಯ ಇಲ್ಲವೇ ಅದಕ್ಕೆ ತೀರ ಹತ್ತಿರವಾದ ಮನೋರಂಜನೆಯು ಹೆಚ್ಚಿನ ಐತಿಹ್ಯಗಳಿಂದಲೂ ಪ್ರಾಪ್ತವಾಗುತ್ತದೆಂಬುದು ವಾಸ್ತವ ಸಂಗತಿ. ಅಂದರೆ ಮೂಲದಲ್ಲಿ ಐತಿಹ್ಯವು ಒಂದು ಸಾಹಿತ್ಯ ಪ್ರಕಾರವೆನಿಸಲು ಯೋಗ್ಯವಿರಲಿಲ್ಲ. ಅದು ವ್ಯಕ್ತಿಗಳು ಕಂಡು-ಕೇಳಿದ ಘಟನೆಗಳ ನೇರ ನಿರೂಪಣೆಯಾಗಿತ್ತಷ್ಟೇ. ಇತಿಹಾಸ-ಸಂಸ್ಕೃತಿಯ ಒಂದು ಅಂಗವಾಗಿದೆ ಎಂಬ ದೃಷ್ಟಿಯಿಂದ ಇದು ಸಂಸ್ಕೃತಿ ಪ್ರಸಾರದ ಒಂದು ಸಾಧನವೂ ಆಗಿತ್ತು, ಆಗಿದೆ. ಆದರೆ ಈಗ ಅದೊಂದು ಸಾಹಿತ್ಯ ಪ್ರಕಾರವಾಗಿಯೇ ಬೆಳೆದುನಿಂತಿದೆ.[೪೩]

ತುಮಕೂರು ಜಿಲ್ಲೆಯ ಕೋಟೆಗಳಲ್ಲಿರುವ ಹಲವಾರು ಸ್ಮಾರಕಗಳು ಐತಿಹ್ಯಗಳಿಗೆ ಪ್ರೇರಣೆಯಾಗಿವೆ. ಈ ಐತಿಹ್ಯಗಳನ್ನು ನಿಜವೆಂದೇ ನಂಬಿರುವ ಸಮುದಾಯವು ಈ ಹೊತ್ತಿಗೂ ಅದಕ್ಕೆ ಸಾಕ್ಷಿಯಾಗಿರುವ ಸ್ಮಾರಕಗಳನ್ನು ಪೂಜಿಸುತ್ತಾ, ಆರಾಧಿಸುತ್ತಾ ತನ್ನ ಸ್ಮೃತಿಯಲ್ಲಿ ಉಳಿಸಿಕೊಂಡು ರಕ್ಷಣೆಯನ್ನು ನೀಡುತ್ತಿದೆ. ಕೆಲವು ಐತಿಹ್ಯಗಳು ಸತ್ಯಕ್ಕೆ ದೂರವಾಗಿವೆ. ಉದಾಹರಣೆಗೆ ಏಳುಮಂದಿ ಅಕ್ಕಮ್ಮಂದಿರ ದೊಣೆ ಐತಿಹ್ಯ, ಕೋತಿಬಾವಿ ಐತಿಹ್ಯ ಇತ್ಯಾದಿಗಳು. ಸಮುದಾಯ ಹೇಳುವ ಕತೆಗಳಿಗೂ ಕುರುಹುಗಳಿಗೂ ಸಾಮ್ಯತೆಯಿದ್ದರೂ ಕತೆಯಲ್ಲಿ ಕಂಡುಬರುವ ರಂಜನೀಯ ಅಂಶಗಳು ಕಾಲಾಂತರದಲ್ಲಿ ಒಬ್ಬರಿಂದ

ಒಬ್ಬರಿಗೆ ಬರುವಾಗ ಪಾಠಾಂತರ ಹೊಂದಿ ಈಗಿರುವ ರೂಪ ಪಡೆದುಕೊಂಡಿವೆ.(ಈ ಎರಡು ಐತಿಹ್ಯಗಳ ವಿವರಣೆಯನ್ನು ಮುಂದೆ ಕೊಡಲಾಗಿದೆ)

ಒಟ್ಟಾರೆ ತುಮಕೂರು ಜಿಲ್ಲೆಯ ಕೋಟೆಗಳಿಗೆ ಸಂಬಂಧಿಸಿದಂತೆ ವೈವಿಧ್ಯಮಯವಾದ ಐತಿಹ್ಯಗಳು ಕಂಡುಬರುತ್ತವೆ. ಇಲ್ಲಿನ ಸಮುದಾಯಗಳು ಇಲ್ಲಿನ ಪ್ರದೇಶಗಳನ್ನು ರಾಮಯಣದ ರಾಮನಿಗೆ, ಮಹಾಭಾರತದ ಪಾಂಡವರಿಗೆ, ದೇವತೆಗಳಿಗೆ, ಋಷಿಗಳಿಗೆ, ಸಮೀಕರಿಸಿ, ಇವರ ಮಹತ್ವಗಳನ್ನು ಐತಿಹ್ಯಗಳ ರೂಪದಲ್ಲಿ ಅಭಿವ್ಯಕ್ತಿಸುವುದನ್ನು ಕಾಣಬಹುದು. ಅಧ್ಯಯನದ ದೃಷ್ಟಿಯಿಂದ

೧. ಕೋಟೆಗಳಲ್ಲಿನ ಜಲಸಂಬಂಧಿ ಐತಿಹ್ಯಗಳು

೨. ಕೋಟೆಗಳಲ್ಲಿನ ದೈವಸಂಬಂಧಿ ಐತಿಹ್ಯಗಳು

೩. ಕೋಟೆಗಳಲ್ಲಿನ ಇನ್ನಿತರ ಐತಿಹ್ಯಗಳು

ಎಂದು ವಿಭಾಗಿಸಿಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ.

೫.೫.೧. ಕೋಟೆಗಳಲ್ಲಿನ ಜಲಸಂಬಂಧಿ ಐತಿಹ್ಯಗಳು

ಯಾವುದೇ ಕೋಟೆಯ ಸ್ಥಾಪನೆ, ನಿರ್ಮಾಣವು ಆಯಾ ಪ್ರದೇಶದ ನೀರಿನೊಂದಿಗೆ ತಳುಕು ಹಾಕಿಕೊಂಡೇ ರಚನೆಗೊಂಡಿರುತ್ತದೆ. ಯಾಕೆಂದರೆ ಕೋಟೆಗಳ ನಿರ್ಮಾಣವೇ ಶತ್ರುಗಳಿಂದ ರಕ್ಷಿಸಿಕೊಳ್ಳುವುದಾಗಿದೆ. ಶತ್ರುಗಳ ದಾಳಿಯ ಸಂದರ್ಭದಲ್ಲಿ ಹಲವಾರು ದಿನ ಕೋಟೆಯೊಳಗಡೆಯೇ ಇರಬೇಕಾದ ಪರಿಸ್ಥಿತಿ ಸಮುದಾಯಕ್ಕೆ ನಿರ್ಮಾಣವಾಗುತ್ತದೆ. ಮುನ್ನೆಚ್ಚರಿಕೆಯ ಕ್ರಮವಾಗಿ ಪ್ರತಿಯೊಂದು ಕೋಟೆಗಳನ್ನು ನಿರ್ಮಿಸುವಾಗಲೂ ಅಲ್ಲಿ ನೀರು ಸಂಗ್ರಹವಾಗುವುದನ್ನು ಇಲ್ಲವೆ ನಿರಂತರವಾಗಿ ನೀರು ಹರಿಯುವುದನ್ನು ಹೊಂಡ(ದೊಣೆ)ಗಳನ್ನು ಕಟ್ಟಲಾಗುತ್ತದೆ. ತಾವು ಬದುಕುವುದಕ್ಕೆ ಅತ್ಯವಶ್ಯವಾಗಿರುವ ನೀರನ್ನು ಸಮುದಾಯಗಳು ಪ್ರಾಚೀನ ಕಾಲದಿಂದಲೂ ಪವಿತ್ರವೆಂದು ಭಾವಿಸಿ ಹಲವಾರು ಕಥೆ, ಐತಿಹ್ಯ, ಗಾದೆ ಕಟ್ಟಿ, ಅವುಗಳಲ್ಲಿ ಹಲವಾರು ಆಚರಣೆಗಳನ್ನು ನೆರವೇರಿಸುತ್ತಿವೆ.

ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಹಲವಾರು ದೊಣೆ(ಹೊಂಡ)ಗಳು, ಬಾವಿಗಳು, ಕಲ್ಯಾಣಿಗಳು ಕಂಡುಬರುತ್ತವೆ. ಇವುಗಳನ್ನು ಕಲುಷಿತಗೊಳಿಸದಂತೆ ಇಲ್ಲಿನ ನೀರನ್ನು ಪವಿತ್ರೀಕರಿಸಿ, ಇವುಗಳ ಸುತ್ತಲೂ ವೈವಿದ್ಯಮಯ ಐತಿಹ್ಯಗಳು ಸೃಷ್ಠಿಯಾಗಿ ಕಾಲದಿಂದ ಕಾಲಕ್ಕೆ ಮೌಖಿಕ ಪರಂಪರೆಯ ಕಥೆ, ನಂಬಿಕೆ, ಗಾದೆ, ಆಚರಣೆ ಮುಂತಾದವುಗಳ ಮೂಲಕ ಇನ್ನೂ ಉಳಿದುಕೊಂಡು ಬಂದಿವೆ. ಕೋಟೆಗಳಲ್ಲಿರುವ ಎಲ್ಲಾ ದೊಣೆಗಳಿಗೂ ಒಂದೊಂದು ಹೆಸರನ್ನು ಕರೆದಿರುವುದು ಮತ್ತು ಅವುಗಳ ಹಿಂದೆ ಕಥೆ, ಐತಿಹ್ಯ ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಹೀಗೆ ಇರುವ ಕೆಲವು ಐತಿಹ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ಏಳುಮಂದಿ ಅಕ್ಕಮ್ಮಂದಿರದೊಣೆ : ಇದು ಭಸ್ಮಾಂಗಿ ಕೋಟೆಯ ಶಿಖರದ ನೈರುತ್ಯ ದಿಕ್ಕಿನಲ್ಲಿದ್ದು, ಎರಡು ಬೃಹತ್ ಬಂಡೆಯ ಮಧ್ಯದಲ್ಲಿದೆ. ಈ ದೊಣೆಯು ಉತ್ತರ ದಕ್ಷಿಣವಾಗಿ ಬೆಳೆದಿದ್ದು ಉತ್ತರಕ್ಕೆ

ಇಟ್ಟಿಗೆ ಮತ್ತು ಗಾರೆಯಿಂದ ಅಡ್ಡಕಟ್ಟೆ ಕಟ್ಟಲಾಗಿದೆ. ಇದರಲ್ಲಿ ಸದಾ ನೀರು ತುಂಬಿರುತ್ತದೆ. ಈ ದೋಣೆಯ ಬಗೆಗೆ ಒಂದು ಐತಿಹ್ಯ ಹೀಗಿದೆ.

ದೇವಲೋಕದ ಏಳು ಮಂದಿ ಅಕ್ಕತಂಗಿಯರು ಲೋಕ ಸಂಚಾರ ಮಾಡುತ್ತಿರುವಾಗ ಈ ಭಸ್ಮಾಂಗಿ ಬೆಟ್ಟದ ಜಾಜಿಗಿರಿ ಹೂವನ್ನು ನೋಡಿ ಮನಸೋತು ಇದರ ವಾಸನೆಯನ್ನು ಸವಿಯಲು ಇಲ್ಲಿಗೆ ಬರುತ್ತಾರೆ. ಈ ಜಾಜಿಗಿರಿ ಗಿಡಗಳ ಪಕ್ಕದಲ್ಲಿಯೇ ಒಂದು ದೋಣೆಯಿದೆ. ಈ ದೋಣೆಯನ್ನು ಕಂಡು ಏಳು ಮಂದಿ ಅಕ್ಕತಂಗಿಯರು ಜಾಜಿಗಿರಿ ಹೂವನ್ನು ಕಟ್ಟಿಕೊಂಡು ಈಜಾಡುತ್ತಿದ್ದರೆಂದು ಹೇಳುತ್ತಾರೆ. ಅಲ್ಲದೆ ಪ್ರತಿವರ್ಷ ಜಾಜಿಗಿರಿ ಹೂವಿನ ಸಂದರ್ಭದಲ್ಲಿ ಈ ಏಳು ಜನ ಅಕ್ಕತಂಗಿಯರು ಹೂವನ್ನು ಉಡುಗೆ ಮಾಡಿಕೊಂಡು ಈಜಾಡುತ್ತಾರೆ ಎನ್ನುವ ಕಲ್ಪನೆಯಿದೆ. ಆದರೆ ಯಾರ ಕಣ್ಣಿಗೂ ಬೀಳುವುದಿಲ್ಲ ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಈ ದೋಣೆಗೆ "ಏಳು ಮಂದಿ ಅಕ್ಕಮ್ಮಂದಿರು" ಎಂಬ ಹೆಸರು ಬಂದಿದೆ ಎನ್ನುತ್ತಾರೆ. ದೇವಕನ್ನೆಯರು ಈ ದೋಣೆಯಲ್ಲಿ ಈಜಾಡಿರುವುದರಿಂದ ಇಲ್ಲಿನ ಸುತ್ತಮುತ್ತ ಸ್ತ್ರೀಯರು ಪವಿತ್ರವಾದ ದೋಣೆಯೆಂದು ಹಲವಾರು ಆಚರಣೆಗಳನ್ನು ಮಾಡುತ್ತಾರೆ.

ಅಕ್ಕತಂಗಿಯರ ದೋಣೆಗಳು : ಹುತ್ರಿದುರ್ಗದ ಶಂಕರೇಶ್ವರ ದೇವಾಲಯದ ಪೂರ್ವಭಾಗಕ್ಕೆ ಅಕ್ಕ-ತಂಗಿಯರ ದೋಣೆಗಳಿವೆ. ಈ ಅಕ್ಕತಂಗಿಯರು ಶಿವಭಕ್ತೆಯರಾಗಿ, ಪತಿವ್ರತೆಯರಾಗಿ ಬಾಳಿದ ಶರಣೆಯರು. ಒಮ್ಮೆ ದುರ್ಗವು ಶತ್ರುಗಳ ಕೈವಶವಾದಾಗ ಇವರು ಶತ್ರುಗಳ ಕೈಯಿಂದ ಪಾರಾಗಿ ತಮ್ಮ ಶೀಲವನ್ನು ಕಾಪಾಡಿಕೊಳ್ಳಲು ತಮ್ಮ ಒಡವೆಗಳನ್ನು ದೋಣೆಗಳಿಗೆ ಎಸೆದು, ತಾವು ದೋಣೆಗಳಿಗೆ ಬಿದ್ದು ಪ್ರಾಣ ಕಳೆದುಕೊಂಡರು ಎಂಬುದಾಗಿ ಸ್ಥಳ ಪುರಾಣದಿಂದ ತಿಳಿದುಬರುತ್ತದೆ. ಈ ದೋಣೆಗಳಲ್ಲಿ ಅಕ್ಕತಂಗಿಯರು ಬಿದ್ದು ಪ್ರಾಣ ಕಳೆದುಕೊಂಡಿದ್ದರಿಂದ ಇದಕ್ಕೆ 'ಅಕ್ಕತಂಗಿಯರ' ದೋಣೆಯೆಂದು ಕರೆಯುತ್ತಾರೆ.

ಕೆಂಪಲಕ್ಕಯ್ಯನ ದೋಣೆ : ಇದು ಹುತ್ರಿದುರ್ಗದ ಕುಂಭಿಯ ಭಾಗದಲ್ಲಿದೆ. ಇದು ಅಕ್ಕತಂಗಿಯರ ದೋಣೆಯ ಸ್ವಲ್ಪ ದೂರದಲ್ಲಿದೆ. ಈ ದೋಣೆಗೆ ಈ ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಂದು ಬಾರಿ ಕುರುಬನು ಕುರಿಗಳನ್ನು ದುರ್ಗಕ್ಕೆ ಮೇಯಿಸಲು ಹೋದನು. ಕುರಿಗಳಲ್ಲಿ ತನ್ನ ಅಚ್ಚುಮೆಚ್ಚಿನ ಒಂದು ಕುರಿಯನ್ನು ಈ ದೋಣೆಯಲ್ಲಿ ಮೈ ತೊಳೆಯಲು ಹೋದನು. ಕುರಿಯನ್ನು ಹಿಡಿದು ತನ್ನೆರಡು ಕಾಲು ಮಧ್ಯೆದಲ್ಲಿಟ್ಟುಕೊಂಡು ಮೈತೊಳೆಯುತ್ತಿದ್ದನು. ಆ ಕುರಿಯು ಕುರುಬನನ್ನು ಕೊಸರಿ ಮೇಲಕ್ಕೆ ಹಾರಿತು. ಇದರ ರಭಸದಿಂದ ಕೆಂಪಲಕ್ಕಯ್ಯನು ಈ ದೋಣೆಯಲ್ಲಿನ ಕಲ್ಲಿಗೆ ಬಿದ್ದನು. ಇದರಿಂದ ಈತನ ತಲೆಗೆ ಭಾರಿ ಪೆಟ್ಟು ಬಿದ್ದು ರಕ್ತಸ್ರಾವದಿಂದ ನೀರಿನಲ್ಲಿಯೇ ಸತ್ತನು. ಈತನು ಸಂಜೆ ಮನೆಗೆ ಬರದ ಕಾರಣ ರಾತ್ರಿಯಲ್ಲಿ ಬೆಳಕಿಡಿದು ಹುಡುಕಿದರು. ಈತನ ಶವವು ದೋಣೆಯಲ್ಲಿ ಬಿದ್ದಿದ್ದನ್ನು ಹೊರತೆಗೆದರು. ಅಂದಿನಿಂದ 'ಕೆಂಪಲಕ್ಕಯ್ಯ ಸತ್ತ ದೋಣೆ' ಎಂದು ಹೇಳುತ್ತಿದ್ದರು. ಅದು ನಂತರ 'ಕೆಂಪಲಕ್ಕಯ್ಯನ ದೋಣೆ' ಎಂದು ಹೆಸರಾಯಿತು.

ಸೋಮನಕಟ್ಟೆ ಕಲ್ಯಾಣಿ : ಹಾಗಲವಾಡಿಯ ದಕ್ಷಿಣ ದಿಕ್ಕಿನ ಕೋಟೆಯ ಮಧ್ಯಭಾಗದಲ್ಲಿ ಈ ಕಲ್ಯಾಣಿಯಿದೆ. ಇದಕ್ಕೆ ಸುತ್ತಲೂ ದಡ ಕುಸಿಯದಂತೆ ಕಲ್ಲಿನ ಗೋಡೆ ಅಥವಾ ಚಪ್ಪಡಿಗಳನ್ನು ಹಾಕಿ ಅದರೊಳಕ್ಕೆ ಇಳಿಯಲು ಮೆಟ್ಟಿಲುಗಳನ್ನು ಮಾಡಲಾಗಿದೆ. ಇದರಲ್ಲಿ ಮೊದಲು ನೀರು ಸದಾಯಿರುತ್ತಿತ್ತೆಂದು ಇಲ್ಲಿನ ಜನರು ಹೇಳುತ್ತಾರೆ. ಕಲ್ಯಾಣೀಯ ಪಕ್ಕದಲ್ಲಿ ಒಂದು ಜಗತಿ ಕಟ್ಟೆಯಿದೆ. ಈ ಕಟ್ಟೆಯ ಮೇಲೆ ಸೋಮುವನ್ನು ಪ್ರತಿಷ್ಠಾಪಿಸಿದ್ದರು. ಇದನ್ನು ಸ್ಥಾಪಿಸಿದ ದಿನದಿಂದಲೂ ನನಗೆ ಗರ್ಭಿಣಿಯಾದ ಹೆಣ್ಣನ್ನು ನನಗೆ ಬಲಿಕೊಡಬೇಕೆಂದು ದಿನವೂ ಪೀಡಿಸುತ್ತಿತ್ತೆಂದು ಹೇಳುತ್ತಾರೆ. ಇದಕ್ಕೆ ಊರಿನ ಜನರೆಲ್ಲ ಸೇರಿ ಇದನ್ನು ಏನಾದರೂ ಮಾಡಿ ನಾಶಪಡಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಎಲ್ಲರೂ ಸೇರಿಕೊಂಡು ಕಟ್ಟೆಯ ಮೇಲಿದ್ದ ಸೋಮುವನ್ನು ಪಕ್ಕದಲ್ಲಿದ್ದ ಕಲ್ಯಾಣಿಗೆ ಹಾಕಿದರಂತೆ. ಅಂದಿನಿಂದ ಈ ಕಲ್ಯಾಣಿಗೆ 'ಸೋಮನ ಕಟ್ಟೆಕಲ್ಯಾಣಿ'ಯೆಂದು ಕರೆಯುತ್ತಾರೆ.

ಕೋತಿಬಾವಿ : ಇದು ಹಾಗಲವಾಡಿ ಕೆರೆಯ ಮಧ್ಯದಲ್ಲಿದೆ. ಇದಕ್ಕೆ ಸಂಬಂಧಿಸಿದ ಐತಿಹ್ಯ ಹೀಗಿದೆ. ಹಾಗಲವಾಡಿ ಪಾಳೇಗಾರರ ಒಂದು ಕಾಲದಲ್ಲಿ ಭೀಕರವಾದ ಬರಗಾಲ ಬಂದಿತು. ಆಗ ಕುಡಿಯಲು ನೀರು ಮತ್ತು ತಿನ್ನಲು ಆಹಾರ ಇಲ್ಲದೆ ಜನರು ಬಹಳ ಕಷ್ಟ ಪಡುವಂತಾಯಿತು. ಇಂತಹ ಸಮಯದಲ್ಲಿ ಒಂದು ಕೋತಿಯು ಈ ಪ್ರದೇಶಕ್ಕೆ ಬಂದು ಎಲ್ಲಿ ನೋಡಿದರೂ ನೀರಿಲ್ಲದೆ ಇದ್ದುದನ್ನು ಕಂಡು ಬಹಳ ವ್ಯಥೆ ಪಟ್ಟಿತು. ತಕ್ಷಣವೇ ಕೋತಿಗೆ ಏನೋ ಹೊಳೆದಂತೆ ಕೆರೆಯ ಮೇಲಿನ(ಕೆರೆಯು ಊರಿಗೆ ಹೊಂದಿಕೊಂಡಿದೆ) ಒಂದು ಕಲ್ಲಿಗೆ ದಾರವನ್ನು ಕಟ್ಟಿತು. ಅಲ್ಲಿಂದ ಎಳೆದು ತಂದ ದಾರವನ್ನು ಕೆರೆಯ ಮಧ್ಯದಲ್ಲಿ ಬಿಟ್ಟಿತು. ಅಲ್ಲಿಂದ ಇನ್ನೊಂದು ದಾರವನ್ನು ಹಾಗಲವಾಡಿ ಕೋಟೆಯ ಹೆಬ್ಬಾಗಿಲಿಗೆ ಕಟ್ಟಿ ಅಲ್ಲಿಂದ ದಾರವನ್ನು ಎಳೆದು ತಂದಿತು. ಈ ಎರಡು ಕಡೆಯಿಂದ ತಂದ ದಾರವನ್ನು ಕೆರೆಯ ಮಧ್ಯದಲ್ಲಿ ಒಂದತ್ತಿರವಿಡಿದು ಅಲ್ಲಿ ಸ್ವಲ್ಪ ಮಣ್ಣು ತೆಗೆಯುತ್ತಿದ್ದಂತೆ ನೀರು ಚಿಮ್ಮಿತು. ಇದರಿಂದ ಬಂದ ನೀರನ್ನು ಕುಡಿದು ಕೋತಿಯು ಹೊರಟು ಹೋಯಿತು. ಇದನ್ನೆಲ್ಲಾ ಕುತೂಹಲದಿಂದ ನೋಡುತ್ತಿದ್ದ ಜನರು ನೀರು ಬಂದ ತಕ್ಷಣವೇ ಜನರಲ್ಲಿ ಸಂತೋಷ ಕಂಡಿತು. ಎಲ್ಲರೂ ನೀರನ್ನು ಕುಡಿದು ಅದಕ್ಕೆ 'ಕೋತಿ ಬಾವಿ' ಎಂದು ಹೆಸರಿಟ್ಟರೆಂದು ಹೇಳುತ್ತಾರೆ.

ವೇಶ್ಯೆಯ ಕಲ್ಯಾಣಿ : ಇದು ಚೇಳೂರು ಕೋಟೆಯ ಹೆಬ್ಬಾಗಿಲಿನಿಂದ ಸ್ವಲ್ಪ ದೂರದಲ್ಲಿದೆ. ಇದನ್ನು ಕಲ್ಲಿನ ಚಪ್ಪಡಿಯಿಂದ ನಿರ್ಮಿಸಲಾಗಿದೆ. ಅಲ್ಲದೆ ಇದು ಬಹಳ ತಾಂತ್ರಿಕವಾಗಿ ನಿರ್ಮಿಸಿದ ಕಲ್ಯಾಣಿಯಾಗಿದೆ. ಇದನ್ನು ನೋಡಲು ಪ್ರವಾಸಿಗರು ಸದಾ ಬರುತ್ತಲೇ ಇರುತ್ತಾರೆ. ಈ ಕಲ್ಯಾಣಿಗೆ 'ವೇಶ್ಯೆಯ ಕಲ್ಯಾಣಿ' ಎಂದು ಹೆಸರು ಬರಲು ಕಾರಣ ಈ ಕೆಳಗಿನಂತೆ ಹೇಳುತ್ತಾರೆ.

ಈ ಸಂಸ್ಥಾನದಲ್ಲಿ ಬಹಳ ಪ್ರಸಿದ್ಧಿ ಹೊಂದಿದ ಒಬ್ಬ ವೇಶ್ಯೆಯಿದ್ದಳು. ಇವಳು ವೇಶ್ಯೆತನದಿಂದ ಬೇಸತ್ತು, ನಾನು ಸಮಾಜಕ್ಕೆ ಏನಾದರೂ ಒಂದು ಒಳ್ಳೆ ಕಾರ್ಯ ಮಾಡಬೇಕೆಂದು ಮನಸ್ಸಿನಲ್ಲಿ

ಯಾವಾಗಲೂ ಕಾಡುತ್ತಿತ್ತು. ಆದ್ದರಿಂದ ಈ ಊರಿನಲ್ಲಿ ಒಂದು ಕಲ್ಯಾಣಿ ನಿರ್ಮಿಸಿದರೆ ಇದರ ನೀರನ್ನು ಕುಡಿಯಲು ಎಲ್ಲರೂ ಬಳಸುತ್ತಾರೆಂದು ತಿಳಿದು, ತನ್ನ ಜೀವನದಲ್ಲಿ ವೇಶ್ಯ ವೃತ್ತಿಯಿಂದ ದುಡಿದ ಸಂಪತ್ತನ್ನು ಬಳಸಿ ಒಂದೇ ರಾತ್ರಿಯಲ್ಲಿ ಈ ಕಲ್ಯಾಣಿಯನ್ನು ಕಟ್ಟಿಸಿದಳೆಂದು ತಿಳಿದುಬರುತ್ತದೆ. ಈ ಕಲ್ಯಾಣಿಯನ್ನು ನಿರ್ಮಿಸಿ, ತನ್ನ ಜೀವಮಾನ ಪಾಪಕರ್ಮಗಳನ್ನು ಕಳೆದುಕೊಂಡಳೆಂದು ಇಲ್ಲಿನವರು ಹೇಳುತ್ತಾರೆ. ಇಂಥ ಕೆಟ್ಟ ಹೆಂಗಸಿನಿಂದಲೂ ಒಂದು ಒಳ್ಳೆಯ ಕೆಲಸವಾಗಿದ್ದರಿಂದ ಈ ಕಲ್ಯಾಣಿಗೆ 'ವೇಶ್ಯೆಯ ಕಲ್ಯಾಣಿ' ಎಂದು ಹೆಸರು ಇಡುತ್ತಾರೆ. ಈಗಲೂ ಈ ಕಲ್ಯಾಣಿಯಲ್ಲಿ ಸ್ತ್ರೀಯರು ಹಲವು ಆಚರಣೆಗಳನ್ನು ನೆರವೇರಿಸುತ್ತಾರೆ.

ನಾಮದ ಚಿಲುಮೆ : ದೇವರಾಯನ ದುರ್ಗದ ಬುಡದಲ್ಲಿ ಈ ಚಿಲುಮೆಯನ್ನು ಕಾಣಬಹುದು. ಈ ಚಿಲುಮೆ ಹೇಗೆ ಮೂಡಿತು ಎಂಬುದನ್ನು ಈ ಕೆಳಗಿನಂತೆ ಹೇಳುತ್ತಾರೆ.

ಶ್ರೀ ರಾಮನು ತನ್ನ ವನವಾಸದ ಕೆಲವು ದಿನಗಳನ್ನು ಈಗಿನ ದೇವರಾಯನ ದುರ್ಗದಲ್ಲಿ ಕಳೆದನೆಂದು ಪ್ರತೀತಿಯಿದೆ. ರಾಮ, ಸೀತೆ, ಲಕ್ಷ್ಮಣರು ಮೊದಲ ರಾತ್ರಿ ಈ ಪ್ರದೇಶದಲ್ಲಿ ತಂಗಿದ್ದರು. ಬೆಳಿಗ್ಗೆ ಇವರಿಗೆ ನಾಮ ಇಟ್ಟುಕೊಳ್ಳಲು ನೀರು ಎಲ್ಲಿಯೂ ಸಿಗದಿದ್ದಾಗ ಅಲ್ಲಿಯೇ ಇದ್ದ ಬಂಡೆಗೆ ಬಾಣವನ್ನು ಬಿಟ್ಟನು. ಇದರಿಂದ ನೀರು ಮೇಲಕ್ಕೆ ಚಿಮ್ಮಿತು. ನಂತರ ನಾಮವನ್ನು ನೀರಿನಲ್ಲಿ ತೇಯ್ದು ಹಣೆಗೆ ತಿಲಕವನ್ನು ಇಟ್ಟುಕೊಂಡನು. ಈ ಚಿಲುಮೆಯು ನಾಮ ಹಚ್ಚಿಕೊಳ್ಳಲು ಸೃಷ್ಟಿಯಾದ್ದರಿಂದ ಇದಕ್ಕೆ 'ನಾಮದ ಚಿಲುಮೆ' ಎಂದು ಹೆಸರಾಯಿತೆಂದು ಇಲ್ಲಿಯವರ ನಂಬಿಕೆಯಾಗಿದೆ.

ಧನುಸ್‌ತೀರ್ಥ : ಇದು ದೇವರಾಯನ ದುರ್ಗದ ಬಂಗಲೆ ಬೆಟ್ಟದಲ್ಲಿರುವ ಒಂದು ದೊಣೆ. ಇದಕ್ಕೆ ಧನುಸ್‌ತೀರ್ಥ ಎಂದು ಹೆಸರು ಒಂದು ಕಥನ ಹೀಗಿದೆ.

ಒಂದು ಬಾರಿ ರಾಮ-ಲಕ್ಷ್ಮಣ-ಸೀತೆ ವನವಾಸದ ಸಂದರ್ಭದಲ್ಲಿ ಈ ದುರ್ಗಕ್ಕೆ ಭೇಟಿ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಸೀತೆಗೆ ಬಾಯಾರಿಕೆಯಾಯಿತು. ಈ ಪ್ರದೇಶದಲ್ಲಿ ಎಲ್ಲಿಯೂ ನೀರು ಸಿಗದಿದ್ದಾಗ ಲಕ್ಷ್ಮಣನು ಬತ್ತಳಿಕೆಯಲ್ಲಿದ್ದ ಒಂದು ಧನಸ್ಸನ್ನು ಬಳಸಿ ಈ ದೋಣೆಯನ್ನು ನಿರ್ಮಿಸಿದನೆಂದು ಇಲ್ಲಿಯವರ ನಂಬಿಕೆ. ಈ ದೊಣೆಯಿಂದ ಬಂದ ನೀರನ್ನು ಕುಡಿದು ಸೀತೆಯು ದಣಿವಾರಿಸಿಕೊಂಡಳು. ಅಂದಿನಿಂದ ಇವತ್ತಿನವರೆಗೆ ಇದನ್ನು ಧನುಸ್‌ತೀರ್ಥವೆಂದೇ ಕರೆಯುತ್ತಾರೆ. ಈ ಧನುಸ್‌ತೀರ್ಥದಲ್ಲಿ ಮೂರು ಕಾಲವು ನೀರು ಒಳಗೊಂಡಿರುತ್ತದೆ. ಧನುಷ್ಕೋಟಿ ಕ್ಷೇತ್ರದಲ್ಲಿ ಮಿಂದ ಪುಣ್ಯವೂ ಈ ಧನುಷ್ ತೀರ್ಥದಲ್ಲಿ ಮಿಂದರೆ ಬರುತ್ತದೆನ್ನುವುದು ಇಲ್ಲಿಯ ಜನರ ಭಾವನೆ.

ಪರಾಶರತೀರ್ಥ : ಇದು ದೇವರಾಯನ ದುರ್ಗದಲ್ಲಿರುವ ಒಂದು ದೊಣೆ. ಇದಕ್ಕೆ ಪರಾಶರ ತೀರ್ಥ ಅಥವಾ ಪಾವನತೀರ್ಥವೆಂದು ಕರೆಯುತ್ತಾರೆ. ಈ ದೊಣೆಗೆ ಪರಾಶರತೀರ್ಥ ಎಂದು ಹೆಸರು ಬರಲು ಒಂದು ಕಥನ ಹೀಗಿದೆ.

ಒಮ್ಮೆ ದೇವರಾಯನ ದುರ್ಗದಲ್ಲಿ ಪರಾಶರ ಮುನಿಗಳು ಬಹುಕಾಲ ಕುಳಿತು ತಪಸ್ಸು ಮಾಡಿದರಂತೆ. ಈ ತಪಸ್ಸನ್ನು ಮೆಚ್ಚಿದ ವಿಷ್ಣುವು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ರೂಪದಲ್ಲಿ ಬಂದು ದರ್ಶನ ನೀಡಿ ಇಷ್ಟಾರ್ಥಕ್ಕೆ ಸಿದ್ಧಿ ಎಂದು ಹೇಳಿ ಮಾಯವಾದರು. ಪರಾಶರು ತಪಸ್ಸು ಮಾಡಿದ್ದು, ಒಂದು ದೊಣೆಯ ದಡದಲ್ಲಿ. ಆ ದಡದಲ್ಲಿಯೇ ಶ್ರೀ ವಿಷ್ಣುವನ್ನು ನೋಡಿ ಪಾವನವಾಗಿದ್ದುದರಿಂದ ಈ ದೊಣೆಗೆ ಪಾವನತೀರ್ಥ ಅಥವಾ ಪರಾಶರತೀರ್ಥ ಎಂದು ಹೆಸರು ಪಡೆಯಿತೆಂದು ಇಲ್ಲಿನ ಜನರ ನಂಬಿಕೆ.

ಪ್ರತಿವರ್ಷವು ಶ್ರೀ ನರಸಿಂಹಸ್ವಾಮಿ ಜಾತ್ರೆಯ ದಿವಸ ಈ ದೊಣೆಯಲ್ಲಿ ಮೀಯಲು ಸಾಲು ಸಾಲಾಗಿ ನಿಂತಿರುತ್ತಾರೆ. ಈ ಪಾವನತೀರ್ಥದಲ್ಲಿ ಮಿಂದರೆ ನಮಗೂ ಪಾವನವಾಗಬಹುದೆಂದು ಈ ಜನರ ನಂಬಿಕೆಯಾಗಿದೆ.

ನರಸಿಂಹತೀರ್ಥ, ಪಾದತೀರ್ಥ : ದೇವರಾಯನ ದುರ್ಗದ ಪೂರ್ವದಿಕ್ಕಿನಲ್ಲಿ ಇವೆರಡು ದೊಣೆಗಳಿವೆ. ಈ ದೊಣೆಗಳಿಗೆ ಈ ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಂದು ಬಾರಿ ಬ್ರಹ್ಮದೇವನು ಈ ದುರ್ಗವನ್ನು ಪುಣ್ಯ ಕ್ಷೇತ್ರವಾಗಿಸಲು ಬಯಸಿದನಂತೆ. ಅದಕ್ಕಾಗಿ ಕುಂಭಿಗಿರಿ ಶಿಖರದಲ್ಲಿ ತಪಸ್ಸಿಗೆ ಕುಳಿತನಂತೆ. ಬ್ರಹ್ಮನು ಸುಮಾರು ಹತ್ತು ವರ್ಷಗಳ ಕಾಲ ತಪಸ್ಸು ಮಾಡಿದನು. ಈ ತಪಸ್ಸನ್ನು ಮೆಚ್ಚಿದ ಶ್ರೀ ನಾರಾಯಣಸ್ವಾಮಿಯು ಶ್ರೀಲಕ್ಷ್ಮೀನರಸಿಂಹ ರೂಪದಲ್ಲಿ ಗರುಡ ರೂಢನಾಗಿ ಬಂದು ಬ್ರಹ್ಮನಿಗೆ ದರ್ಶನ ಭಾಗ್ಯ ಕರುಣಿಸಿದನು. ಆಗ ಬ್ರಹ್ಮನು ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿದನು. ಆಗ ಬ್ರಹ್ಮನು ಕುಂಭಾಭಿಷೇಕ ಮಾಡಿದನು. ಈ ಕುಂಭಾಭಿಷೇಕದಿಂದ ಹರಿದ ತೀರ್ಥವು ನರಸಿಂಹತೀರ್ಥ, ಪಾದತೀರ್ಥಗಳಾಗಿ ರೂಪುಗೊಂಡವು ಎಂದು ಇಲ್ಲಿನ ಜನರು ಹೇಳುತ್ತಾರೆ.

ಚಕ್ರತೀರ್ಥ : ದೇವರಾಯನ ದುರ್ಗದ ನೆಲಪಟ್ಟಣದ ಭೋಗ ನರಸಿಂಹಸ್ವಾಮಿ ದೇವಸ್ಥಾನದ ಪಕ್ಕದ ಈ ದೊಣೆ. ಇದಕ್ಕೆ ಚಕ್ರತೀರ್ಥವೆಂದು ಕರೆಯುತ್ತಾರೆ. ಚಕ್ರತೀರ್ಥವೆಂದು ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಮ್ಮೆ ದೂರ್ವಾಸರು ಈ ಜಾಗದಲ್ಲಿ ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದರು. ಈ ತಪಸ್ಸು ಮಾಡುವಾಗ ದೂರ್ವಾಸರು ಪರಶಿವನ ದರ್ಶನಕ್ಕೆ ಹೋಗಲು ನಂದಿಕೇಶ್ವರನು ಅಡ್ಡಿಪಡಿಸಿದನೆಂದು ಹೇಳುತ್ತಾರೆ. ಆಗ ಕುಪಿತರಾದ ದೂರ್ವಾಸರು ನಂದಿಕೇಶ್ವರನಿಗೆ ಶಾಪ ನೀಡಿದರು. ಇದರಿಂದ ಎಚ್ಚೆತ್ತ ನಂದಿಕೇಶ್ವರನು ದೂರ್ವಾಸರಲ್ಲಿ ಮೋಕ್ಷಕ್ಕೆ ಮೊರೆಯಿಟ್ಟನು. ಆಗ ದೂರ್ವಾಸರು 'ನೀನು ಕರಿಗಿರಿಕ್ಷೇತ್ರ'(ದೇವರಾಯನ ದುರ್ಗ)ದಲ್ಲಿ ತಪಸ್ಸು ಮಾಡುತ್ತಿರು, ನಾನು ಒಂದು ಭಾರಿ ಬಂದು ನಿನಗೆ ಮೋಕ್ಷ ಕೊಡುತ್ತೇನೆಂದು ಹೇಳುತ್ತಾರೆ. ಅದೇ ರೀತಿ ನಂದಿಕೇಶ್ವರನು ದೇವರಾಯನ ದುರ್ಗದಲ್ಲಿ

ತಪಸ್ಸು ಮಾಡುತ್ತಾನೆ. ಸುಮಾರು ವರ್ಷಗಳ ನಂತರ ದೂರ್ವಾಸರು ಬಂದು ನಂದಿಕೇಶ್ವರನಿಗೆ ಮೋಕ್ಷ ಮಾಡಿದರು. ಈ ಸಂದರ್ಭದಲ್ಲಿ ದೂರ್ವಾಸರು ಈಗಿರುವ ಚಕ್ರತೀರ್ಥವನ್ನು ನಿರ್ಮಿಸಿ ಅದರಲ್ಲಿ ಮಿಂದು ನೆಲಪಟ್ಟಣದಲ್ಲಿ ಈಗ ಇರುವ ಭೋಗ ನರಸಿಂಹಸ್ವಾಮಿಯನ್ನು ಪ್ರತಿಷ್ಠಾಪಿಸಿದರೆಂದು ಪ್ರತೀತಿಯಿದೆ. ಅಂದಿನಿಂದ ಈ ದೊಣೆಗೆ ಚಕ್ರತೀರ್ಥವೆಂದು ಹೆಸರು ಬಂದಿತೆಂದು ಇಲ್ಲಿನ ಜನರ ನಂಬಿಕೆಯಾಗಿದೆ.

ಈ ಮೇಲಿನ ಐತಿಹ್ಯಗಳನ್ನು ಗಮನಿಸಿದರೆ ತುಮಕೂರು ಜಿಲ್ಲೆ ಕೋಟೆಯೊಳಗಿನ ನೀರಿನೊಂದಿಗೆ ಜನಸಮುದಾಯ ಹೊಂದಿರುವ ಅಂತಃಸಂಬಂಧ ಅರಿವಾಗುತ್ತದೆ. ದೊಣೆ ಅಥವಾ ಕಲ್ಯಾಣಿ ಎನ್ನುವ ಐತಿಹ್ಯ ಪಠ್ಯಗಳು ಜನಸಮುದಾಯದಲ್ಲಿ ನಡೆದಿರಬಹುದಾದ ನೈಜ ಘಟನೆಯನ್ನು ವಿವರಿಸುವುದನ್ನು ಕಾಣುತ್ತೇವೆ. ಇನ್ನು ತೀರ್ಥ ಎನ್ನುವ ಹೆಸರಿನಲ್ಲಿ ಕೊನೆಗೊಳ್ಳುವ ಐತಿಹ್ಯಗಳು(ಉದಾ : ರಾಮತೀರ್ಥ, ಧನುಸ್‌ತೀರ್ಥ, ಪರಾಶರತೀರ್ಥ ಇತ್ಯಾದಿ) ಪೌರಾಣಿಕ ಆಯಾಮವನ್ನು ಪಡೆದುಕೊಂಡಿವೆ. ಪೌರಾಣಿಕ ವಾಗಿ ನಡೆದಿವೆ ಎಂದು ಹೇಳಲಾಗುವ ಘಟನೆಗಳಿಗೆ ಕುರುಹುಗಳನ್ನು ಈಗಲೂ ತೋರಿಸುತ್ತಾರೆ. ಪ್ರಶ್ನೆಯೆಂದರೆ ಐತಿಹ್ಯಗಳು ವಾಸ್ತವವಾಗಿ ನಡೆದಿರಬಹುದಾದ ಘಟನೆಗಳನ್ನು ರಂಜನೀಯವಾಗಿ ಹೇಳಬಹುದಾದರೆ ಈ ಪೌರಾಣಿಕ ಅಂಶಗಳು ಕೋಟೆಯಲ್ಲಿರುವ ಸ್ಮಾರಕಗಳೊಂದಿಗೆ ಹೇಗೆ ನಂಟನ್ನು ಬೆಸೆದುಕೊಂಡವು? ಎನ್ನುವುದು. ಮುಖ್ಯವಾಗಿ ಪೌರಾಣಿಕ ಅಂಶಗಳನ್ನು ಒಳಗೊಂಡಿರುವ ಐತಿಹ್ಯಗಳು ಮತ್ತು ಜಲಸಂಬಂಧಿ ಸ್ಮಾರಕಗಳು ಸಮುದಾಯಗಳಿಂದ ಪೂಜೆಗೊಳ್ಳುವಂತಹವುಗಳಾಗಿವೆ. ಯಾವ ದೊಣೆ, ತೀರ್ಥ, ಕಲ್ಯಾಣಿಗಳು ಸಮುದಾಯದಿಂದ ಪೂಜೆಗೂಳ್ಳುತ್ತಿವೆಯೋ ಆ ಸ್ಮಾರಕಗಳೆಲ್ಲ ಪೌರಾಣಿಕ ಆಯಾಮವನ್ನೋ ಇಲ್ಲವೆ ದೈವ ಸಂಬಂಧವನ್ನೋ ಹೊಂದಿವೆ.(ಉದಾ : ರಾಮತೀರ್ಥ, ನಾಮ ಚಿಲುಮೆ, ಧನುಸ್‌ತೀರ್ಥ ಇತ್ಯಾದಿ) ಯಾವ ಜಲಸಂಬಂಧಿ ಸ್ಮಾರಕಗಳು ಪೂಜೆಗೊಳ್ಳುತ್ತಿಲ್ಲವೋ ಅಂತಹ ಸ್ಮಾರಕಗಳು ಹಿಂದೆ ನಡೆದಿರಬಹುದಾದ ನೈಜ ಘಟನೆಗಳನ್ನು ಉಳಿಸಿಕೊಂಡ ಐತಿಹ್ಯಗಳೆಲ್ಲ 'ದೊಣೆ'(ಹೊಂಡ) ಎನ್ನುವ ಜನಪದ ಶಬ್ದವನ್ನೇ ಹೊಂದಿರುವುದು ಹಾಗೂ ಪೌರಾಣಿಕ ಆಯಾಮ ಹೊಂದಿರುವ ಐತಿಹ್ಯಗಳೆಲ್ಲ 'ತೀರ್ಥ' ಎನ್ನುವ ಧಾರ್ಮಿಕ ಪದವನ್ನು ಹೆಚ್ಚಾಗಿ ಹೊಂದಿರುವುದು ಕೂಡ ಇದಕ್ಕೆ ಆಧಾರವಾಗಿ ಹೇಳಬಹುದಾಗಿದೆ.

ಇದೇ ರೀತಿ ಕೋಟೆಗಳಲ್ಲಿ ಕಂಡುಬರುವ ಹನುಮನ ದೊಣೆ, ಚಂದ್ರದೊಣೆ, ನವಿಲುದೊಣೆ, ಎಮ್ಮೆದೊಣೆ, ದೊಡ್ಡದೊಣೆ, ಜಲಧಿದೊಣೆ, ತಿಳಿನೀರಿನ ದೊಣೆಗಳಂತಹ ಹಲವಾರು ದೊಣೆ, ತೀರ್ಥ, ಕಲ್ಯಾಣಿಗಳಿಗೆ ಒಂದೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಇವುಗಳಿಗೆ ಒಂದೊಂದು ಹೆಸರೂ ಇದೆ. ಈ ಹೆಸರು ಬರಲು ಅವುಗಳ ಆಕಾರ, ವೈಶಿಷ್ಟ್ಯ ಮತ್ತು ಅವುಗಳೊಂದಿಗೆ ಜನಸಮುದಾಯಗಳು ನಡೆಸಿದ ಘಟನೆಗಳು ಕಾರಣವಾಗಿವೆ. ಕೆಲವು ಪುರಾಣಗಳಿಗೆ ಸಂಬಂಧಿಸಿದ ಇಲ್ಲಿನ ಐತಿಹ್ಯಗಳು ಪಾಂಡವರು

ಮತ್ತು ಶ್ರೀರಾಮಚಂದ್ರ ತಮ್ಮ ವನವಾಸಗಳ ಅವಧಿಯನ್ನು ಇಲ್ಲೇ ಕಳೆದಿದ್ದರು. ಈ ವಸ್ತುಗಳು ಅವರಿಂದಲೇ ಸ್ಥಾಪಿತವಾದವು ಎಂದು ಸಮುದಾಯಗಳು ಹೆಮ್ಮೆಯಿಂದ ಹೇಳುತ್ತವೆ. ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರದೇಶಗಳನ್ನು ರಾಮನಿಂದ, ಋಷಿಗಳಿಂದ ಹಾಗೂ ಇನ್ನಿತರೆ ದೈವಗಳಿಂದ ಪವಿತ್ರೀಕರಿಸುವುದನ್ನು ಕಾಣಬಹುದು.

೫.೫.೨. ಕೋಟೆಯಲ್ಲಿನ ದೈವಸಂಬಂಧಿ ಐತಿಹ್ಯಗಳು

ಮನುಷ್ಯನು ತಾನು ಬದುಕುವ ಪ್ರಕೃತಿಯಲ್ಲಿ ಕಂಡುಬಂದ ಹಲವಾರು ವಿಸ್ಮಯಗಳಿಗೆ ತವಕಗೊಂಡವನು. ಈ ರೀತಿಯ ತವಕವನ್ನು ಆತಂಕದಿಂದ ಎದುರಿಸುವಾಗ ಅವನ ಕಲ್ಪನೆಗೆ ಭಯಭಕ್ತಿಗಳ ನೆಲೆಯನ್ನು ಹುಡುಕಿಕೊಂಡು ಈ ಭಯಭಕ್ತಿಗಳ ನೆಲೆಯಲ್ಲಿಯೇ ರೂಪು ತಳೆದ ದೇವರು ಮತ್ತು ಅದಕ್ಕೆ ಬೇಕಾದ ಒಂದು ನೆಲೆಯನ್ನು ಕಂಡುಕೊಂಡನು. ಆ ನೆಲೆಗಳೇ ಇಂದು ದೇವಾಲಯಗಳೆನಿಸಿಕೊಂಡಿವೆ. ಹೀಗೆ ಉಗಮಗೊಂಡ ದೇವಾಲಯಗಳು ಕಾಲ ಕ್ರಮೇಣ ನಾನಾ ಬಗೆಯ ವಿನ್ಯಾಸಗಳಿಂದ ವೈವಿಧ್ಯಮಯ ಆಕಾರ ಪಡೆದಿದ್ದನ್ನು ನಮ್ಮ ಸಂಸ್ಕೃತಿಯ ವಿಕಾಸವೆಂದು ಕರೆಯಲಾಗುತ್ತಿದೆ. ಇಂತಹ ಸಾಂಸ್ಕೃತಿಕ ವಿಚಾರಗಳ ವಿಶ್ಲೇಷಣೆಗೆ ತೊಡಗಿದಾಗ ದೇವಾಲಯಗಳು ಮೂಲ ಆಕರಗಳಾಗಿ ಅಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಷಯಗಳನ್ನು ಬಿಚ್ಚಿಡುವಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ ಎಂದು ಹೇಳಬಹುದು.

ಸಾಮಾನ್ಯವಾಗಿ ಜನಸಮುದಾಯಗಳು ಧಾರ್ಮಿಕ ಶ್ರದ್ಧೆಯುಳ್ಳವಾಗಿರುತ್ತವೆ. ದೈನಂದಿನ ಬದುಕಿನ ನೂರಾರು ಸಂಕಷ್ಟ, ಸಂತಸಗಳ ಮಧ್ಯದಲ್ಲಿಯೂ ಹಲವಾರು ಪೂಜಾಚರಣೆಗಳ ಮೂಲಕ ಧಾರ್ಮಿಕ ಶ್ರದ್ಧೆಯನ್ನು ಅಭಿವ್ಯಕ್ತಪಡಿಸುತ್ತವೆ. ಈ ಅಭಿವ್ಯಕ್ತಿ ಕ್ರಮ ಬರೀ ಆಚರಣೆಗಳ ಮೂಲಕ ಮಾತ್ರ ನಡೆಯುವುದಿಲ್ಲ. ಅವು ಕಥೆ, ಹಾಡು, ಗಾದೆ, ಐತಿಹ್ಯಗಳ ಮೂಲಕವೂ ವ್ಯಕ್ತವಾಗುತ್ತಿರುವುತ್ತದೆ. ಈಗಿನ ಮಟ್ಟಿಗೆ ತುಮಕೂರು ಜಿಲ್ಲೆಯ ಕೋಟೆಯಲ್ಲಿನ ದೈವ ಸಂಬಂಧೀ ಐತಿಹ್ಯಗಳನ್ನು ಗಮನಿಸಬೇಕಿದೆ. ಈ ಐತಿಹ್ಯಗಳೆಲ್ಲ ಒಂದೊಂದು ಘಟನೆಯ ಮೂಲಕ ಹುಟ್ಟಿಕೊಂಡವುಗಳಾಗಿವೆ. ಅವಕ್ಕೆ ಆಧಾರವೆಂಬಂತೆ ಈಗಿರುವ ದೇವಾಲಯಗಳನ್ನು ತೋರಿಸಲಾಗುತ್ತದೆ.

ಈ ಐತಿಹ್ಯಗಳಲ್ಲಿ ಸತ್ಯ ಘಟನೆಗಳಿಗೆ ಪವಾಡದ ಮೆರುಗನ್ನು ನೀಡಿ ಕಟ್ಟಲಾಗಿದೆ. ಇವಕ್ಕೆ ಮುಖ್ಯವಾಗಿ ವಾಸ್ತವದಲ್ಲಿ ನಡೆದಿರಬಹುದಾದ ಘಟನೆಯನ್ನು ಅವಾಸ್ತವಿಕ ನೆಲೆಯಲ್ಲಿ ಗ್ರಹಿಸುವ ಇಲ್ಲವೆ, ಧಾರ್ಮಿಕ ಶ್ರದ್ಧೆಯಿಂದಾಗಿ ಉಂಟಾಗುವ ಅಲೌಕಿಕ ನಿರೂಪಣೆ ಕಾರಣವಾಗಿದೆ. ಈ ತರಹದ ನಿರೂಪಣೆಯಿಂದಾಗಿ ದೈವಸಂಬಂಧೀ ಐತಿಹ್ಯಗಳಲ್ಲಿ ಸತ್ಯಘಟನೆಗಳೇ ಅಲ್ಲಲ್ಲಿ ಮರೆಯಾಗಿವೆ. ಆದರೂ ಇಲ್ಲಿನ ಜನಸಮುದಾಯಗಳ ಸತ್ಯವಾದ ಘಟನೆಗಳೇ ಎಂದು ಆಧಾರ ಸಮೇತ ತೋರಿಸಿ ಅಭಿವ್ಯಕ್ತಿಸುತ್ತಾರೆ. ಅಂತಹ ಆಧಾರದೊಂದಿಗೆ ಇರುವ ದೈವಸಂಬಂಧೀ ಐತಿಹ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ವೆಂಕಟರಮಣಸ್ವಾಮಿ ದೇವಸ್ಥಾನ : ಮಧುಗಿರಿಯ ಮಹಾನಾಡ ಪ್ರಭುಗಳಾದ ಸಪ್ಪೇಗೌಡರು ಈ ದೇವಾಲಯವನ್ನು ನಿರ್ಮಿಸಿದರೆಂದು ಚರಿತ್ರೆಯಿಂದ ತಿಳಿಯಬಹುದು. ಇದು ಮಧುಗಿರಿ ಕೋಟೆಯ ಮೊದಲ ಸುತ್ತಿನ ಕೋಟೆಯ ಮಧ್ಯದಲ್ಲಿದೆ. ಇದರ ಪಕ್ಕದಲ್ಲಿಯೇ ಮಲ್ಲೇಶ್ವರಸ್ವಾಮಿ ದೇವಸ್ಥಾನವನ್ನು ಸಹ ನಿರ್ಮಿಸಲಾಗಿದೆ. ಇವೆರಡರ ಗೋಪುರಗಳು ವಿಜಯನಗರ ವಿರೂಪಾಕ್ಷದ ದೇವಾಲಯದ ಗೋಪುರದಂತೆ ಇರುವುದನ್ನು ಕಾಣಬಹುದಾಗಿದೆ. ಈಗಿನ ವೆಂಕಟರಮಣಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸುವಲ್ಲಿ ಒಂದು ಘಟನೆ ನಡೆಯಿತು. ಆ ಘಟನೆಯನ್ನು ಇಲ್ಲಿ ಜನಪದರು ಈ ರೀತಿ ಹೇಳುತ್ತಾರೆ.

ದೇವಾಲಯವನ್ನು ಕಟ್ಟಿಸಿದ ಸಪ್ಪೇಗೌಡರು ಅದಕ್ಕೆ ಒಂದು ವಿಗ್ರಹವನ್ನು ಪ್ರತಿಷ್ಠಾಪಿಸಲು ಯೋಗರಾಮನ ಮೂರ್ತಿಯನ್ನು ಮುಮ್ಮಡಿಪಟ್ಟಣದಿಂದ(ಈಗಿನ ಪುರವರ) ತರಲು ಹೋದರು. ಅಲ್ಲಿಂದ ರಾಮ, ಲಕ್ಷ್ಮಣ, ಸೀತಾ ಹಾಗೂ ವಸಿಷ್ಠರ ಮೂರ್ತಿಗಳನ್ನು ತೆಗೆದುಕೊಂಡು ಮಧುಗಿರಿಯತ್ತ ಹೊರಟರು. ಈಗಿನ ದೊಡ್ಡಹೊಸಹಳ್ಳಿ ಬಳಿ ಇರುವ ಹುಣಸೆ ತೋಪಿನಲ್ಲಿ ಆ ವಿಗ್ರಹಗಳನ್ನು ಕೆಳಗಿಟ್ಟು, ಆಯಾಸವನ್ನು ನೀಗಲು ಕುಳಿತರು. ಆಯಾಸವನ್ನು ನೀಗಿಸಿಕೊಂಡು ವಿಗ್ರಹಗಳನ್ನು ಕೈಗೆತ್ತಿಕೊಳ್ಳಲು ಹೋದಾಗ ಆ ವಿಗ್ರಹಗಳು ಹಿಂದೆ ಮುಂದೆ ಆಗಿದ್ದವು. ಇದರಿಂದ ಏನೋ ಅಪಶಕುನವಾಗಿದೆ ಎಂದು ಭಾವಿಸಿದ ಸಪ್ಪೇಗೌಡರು ಅದೇ ಜಾಗದಲ್ಲಿ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯವನ್ನು ಈಗಲೂ ಕಾಣಬಹುದಾಗಿದೆ.

ಇದೇ ಕೊರಗಿನಲ್ಲಿ ಮನೆ ಸೇರಿದ ಸಪ್ಪೇಗೌಡರು, ಮುಂದೆ ಯಾವ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಅವರಿಗೆ ತೋರದಾಯಿತು. ಒಂದು ರಾತ್ರಿ ಸಪ್ಪೇಗೌಡರ ಕನಸಿನಲ್ಲಿ ಅಶರೀರವಾಣಿಯು ಬಂದು ಈ ರೀತಿ ಹೇಳಿತು. "ನೋಡು ಸಪ್ಪೇಗೌಡ ಮಡಕಶಿರಾ(ಆಂಧ್ರಪ್ರದೇಶ) ಕೆರೆಯ ನೀರಿನ ಗರ್ಭದಲ್ಲಿ ಹೂತುಕೊಂಡಿದ್ದೇನೆ. ನೀನು ಅಲ್ಲಿಗೆ ಬಂದು ಶೋಧಿಸು ನಾನು ಕಾಣಿಸುತ್ತೇನೆ. ನೀನು ನೆಲೆಗೊಳಿಸಬೇಕೆಂಬ ಸ್ಥಳದಲ್ಲಿ ನನ್ನನ್ನು ನೆಲೆಗೊಳಿಸಿದರೆ ನಿನ್ನ ನಾಡಿನ ಇಷ್ಟಾರ್ಥಗಳನ್ನು ಸಲ್ಲಿಸುತ್ತೇನೆ" ಎಂದು ಹೇಳಿ ಮಾಯವಾಯಿತು. ಈ ಅಶರೀರವಾಣಿಯ ಉತ್ಸಾಹದಿಂದ ಮಡಕಶಿರಾದ ಕೆರೆಯನ್ನು ಶೋಧಿಸಿ ನೋಡಲು ವೆಂಕಟರಮಣಸ್ವಾಮಿ ವಿಗ್ರಹ ದೊರೆಯಿತು. ಸಪ್ಪೇಗೌಡರಿಗೆ ಇದರಿಂದ ಸಂತೋಷವಾಯಿತು. ದೊರೆತ ವೆಂಕಟರಮಣಸ್ವಾಮಿಯ ವಿಗ್ರಹವನ್ನು ಬಂಡಿಯಲ್ಲಿ ಹಾಕಿಕೊಂಡು ಬಂದು ದೇವಸ್ಥಾನದ ಗರ್ಭಗುಡಿಗೆ ಪ್ರತಿಷ್ಠಾಪಿಸಿದರು. ಅಂದಿನಿಂದ ಇಂದಿನವರೆಗೆ ಜಾತ್ರೆ, ಉತ್ಸವಗಳನ್ನು ಇಲ್ಲಿನ ಜನಸಮುದಾಯಗಳು ಆಚರಿಸಿಕೊಂಡು ಬರುತ್ತಿವೆ ಎಂಬುದು ಇಲ್ಲಿನ ಜನರ ಅಭಿಪ್ರಾಯವಾಗಿದೆ.

ಗಂಗಾಧರೇಶ್ವರ ದೇವಸ್ಥಾನ : ಈ ದೇವಸ್ಥಾನವು ಕೊರಟಗೆರೆ ಬೆಟ್ಟದ ಮಧ್ಯಭಾಗದಲ್ಲಿದೆ. ಇದನ್ನು ಹೊಳವನಹಳ್ಳಿಯ ಸಣ್ಣ ಭೈರೇಗೌಡನು ನಿರ್ಮಿಸಿದನೆಂದು ದಾಖಲೆಗಳಿಂದ ಮತ್ತು ಜನರಿಂದಲೂ ತಿಳಿದಿದೆ. ಈ ದೇವಸ್ಥಾನವನ್ನು ನಿರ್ಮಿಸಲು ಕಾರಣವೇನು ಎಂಬುದನ್ನು ಈ ರೀತಿ ಹೇಳುತ್ತಾರೆ.

ಹೊಳವನಹಳ್ಳಿಯಲ್ಲಿ ಒಂದು ಚಿಕ್ಕ ಸಂಸ್ಥಾನವನ್ನು ಸ್ಥಾಪಿಸಿಕೊಂಡು ಸಣ್ಣ ಭೈರೇಗೌಡನು ಆಳ್ವಿಕೆ ಮಾಡುತ್ತಿದ್ದನು. ಒಂದು ದಿನ ಸಂಜೆ ವೇಳೆಯಲ್ಲಿ ತನ್ನ ಮಡದಿ ನಾಗಾಂಬಿಕೆಯೊಂದಿಗೆ ವ್ಯಾಸರಿಂದ ಆಕಾರ ಹೊಂದಿದ್ದ ಉದ್ರ ಮುಖ ಹನುಮಂತನ ದರ್ಶನ ಪಡೆದು ಮನೆಗೆ ಬಂದರು. ಅಂದೇ ರಾತ್ರಿ ಸ್ವಪ್ನದಲ್ಲಿ ಅಶರೀರವಾಣಿಯೊಂದು ಬಂದು 'ನಿನ್ನ ಗ್ರಾಮದ ಪಶ್ಚಿಮ ದಿಕ್ಕಿಗೆ ಅನತಿ ದೂರದಲ್ಲಿ ಒಂದು ಬೆಟ್ಟವಿದೆ. ಅದರ ಮಧ್ಯೆ ಭಾಗದಲ್ಲಿ ಗಂಗಾಧರೇಶ್ವರ ಸ್ವಾಮಿಯ ಒಂದು ಉದ್ಭವ ಲಿಂಗವಿದೆ. ಆ ಲಿಂಗಕ್ಕೆ ಸದಾ ಗಂಗಾಮಾತೆಯು ತಂಪಾಗಿಸಿಟ್ಟಿದ್ದಾಳೆ. ಅದನ್ನೊಳಗೊಂಡಂತೆ ನೀನು ದೇವಸ್ಥಾನವನ್ನು ಕಟ್ಟಿಸು ನಿನಗೆ ಒಳ್ಳೆಯದಾಗುತ್ತದೆ' ಎಂದು ಹೇಳಿತು. ಆಗ ಭೈರೇಗೌಡನು ಸ್ವಪ್ನದಿಂದ ಎಚ್ಚೆತ್ತು ನೋಡಿದಾಗ ಯಾರು ಇರಲಿಲ್ಲ. ಇದನ್ನು ತನ್ನ ಮಡದಿಯಲ್ಲಿ ಹೇಳಿದನು. ಅದಕ್ಕೆ ಮಡದಿಯು ಸ್ವಾಮಿಯೇ ಬಂದು ಹೇಳಿದೆ. ಅದನ್ನು ನಾವು ಮೀರಬಾರದು ದಯಮಾಡಿ ಆ ಉದ್ಭವ ಲಿಂಗವನ್ನು ಶೋಧನೆ ಮಾಡಿ ದೇವಸ್ಥಾನವನ್ನು ಕಟ್ಟಿರೆಂದು ಕೇಳಿಕೊಳ್ಳುತ್ತಾಳೆ. ಅದರಿಂದ ಭೈರೇಗೌಡನು ಉದ್ಭವಲಿಂಗವಿರುವ ಜಾಗವನ್ನು ಹುಡುಕಿ ದೇವಸ್ಥಾನವನ್ನು ಕಟ್ಟಿಸಿದನು. ಅಂದಿನಿಂದಲೇ ಜಾತ್ರೆ, ಉತ್ಸವಗಳನ್ನು ನೆರವೇರಲು ಚಾಲನೆ ನೀಡಿದನು. ಈಗಲೂ ಜಾತ್ರೆ, ಉತ್ಸವಗಳು ಪ್ರತಿವರ್ಷ ಕಾರ್ತೀಕಮಾಸದಲ್ಲಿ ಜರುಗುತ್ತವೆ.

ಚೆನ್ನಕೇಶ ದೇವಾಲಯ : ಈ ದೇವಾಲಯವು ಹಾಗಲವಾಡಿ ಊರ ಮಧ್ಯಭಾಗದಲ್ಲಿದೆ. ಇದನ್ನು ಚಿಕ್ಕದಾದ ಗುಡಿಯ ರೀತಿಯಲ್ಲಿ ನಿರ್ಮಿಸಲಾಗಿದೆ. ಇದರ ಸುತ್ತಲೂ ಕೋಟೆಯ ಗೋಡೆಯನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಈ ದೇವಾಲಯ ನಿರ್ಮಾಣ ಮಾಡಲು ಕಾರಣವೇನು? ಎಂಬುದನ್ನು ಈ ರೀತಿ ಹೇಳುತ್ತಾರೆ.

ಒಂದು ಬಾರಿ ಜಂಗಮರು ಹಾಗಲವಾಡಿಯಲ್ಲಿ ತಂಗುವ ಸಂದರ್ಭ ಬರುತ್ತದೆ. ಈ ಜಂಗಮರು ಪ್ರಸಾದ ಸ್ವೀಕರಿಸುವುದಕ್ಕಿಂತ ಮುಂಚೆ ಪೂಜೆ ಮಾಡುವುದು ರೂಢಿ. ಅದರಂತೆ ಪೂಜೆಗೆ ಎಲ್ಲರೂ ಸನ್ನದ್ಧರಾದರು. ಅದೇ ವೇಳೆಗೆ ಈ ಊರಿನಲ್ಲಿ ವಿಷ್ಣು ದೇವಾಲಯಗಳಿಲ್ಲ ಎಂಬುದು ಅವರಿಗೆ ತಿಳಿಯಿತು. ಜಂಗಮರು ಪಾಳೇಗಾರರಿಗೆ "ನೋಡಿ ನಾವು ವಿಷ್ಣು ದೇವಾಲಯಗಳಿಲ್ಲದ ಊರಿನಲ್ಲಿ ಪೂಜೆ ಮಾಡುವುದು ಮತ್ತು ಪ್ರಸಾಸದ ತೆಗೆದುಕೊಳ್ಳುವುದು ನಿಷೇಧವೆಂದು ಹೇಳಿದರು. ಇದರಿಂದ ಪಾಳೇಗಾರರಿಗೆ ಬಹಳ ತೊಂದರೆಯುಂಟಾಯಿತು. ಈ ವಿಚಾರವನ್ನು ಪಾಳೇಗಾರನು ಎಲ್ಲರಲ್ಲೂ ಭಿನ್ನಯಿಸಿ "ನೋಡಿ ನಮ್ಮೂರಿಗೆ ಬಂದ ಜಂಗಮರು ಉಪವಾಸ ಮಲಗಬಾರದು ಆದ್ದರಿಂದ ಎಲ್ಲರೂ ಸೇರಿಕೊಂಡು ಒಂದು ಚೆನ್ನಕೇಶ ದೇವಾಲಯವನ್ನು ನಿರ್ಮಿಸೋಣವೆಂದು ಹೇಳಿದರು. ಅದಕ್ಕೆ ಎಲ್ಲರ ಒಪ್ಪಿಗೆಯೂ ಆಯಿತು. ಆಗಲೇ ಊರಿನ ಮಂದಿಯೆಲ್ಲಾ ಸೇರಿಕೊಂಡು ಒಂದೇ ರಾತ್ರಿಗೆ ಚೆನ್ನಕೇಶ ದೇವಾಲಯವನ್ನು ನಿರ್ಮಿಸಿದರು. ಇದರಿಂದ ಊರಿಗೆ ಬಂದ ಜಂಗಮರು ಸಂತೋಷದಿಂದ ಚೆನ್ನಕೇಶ ದೇವರಿಗೆ ಪೂಜೆ ಮಾಡಿಪ್ರಸಾದ ಸೇವಿಸಿದರೆಂದು ಪ್ರತೀತಿಯಿದೆ.

ಭಸ್ಮಾಂಗೀಶ್ವರ ದೇವಾಲಯ : ಇದು ಭಸ್ಮಾಂಗಿ ದುರ್ಗದ ಬುಡದಲ್ಲಿ ಉತ್ತರ ದಿಕ್ಕಿನ ಭಾಗದಲ್ಲಿದೆ. ಈ ದೇವಾಲಯವನ್ನು ಸಿರಾ ಸಂಸ್ಥಾನವನ್ನು ಆಳುತ್ತಿದ್ದ ರಂಗಪ್ಪನಾಯಕನು ನಿರ್ಮಿಸಿದನೆಂದು ಇಲ್ಲಿನ ಜನರ ನಂಬಿಕೆಯಾಗಿದೆ. ಅದರ ಬಗೆಗೆ ಒಂದು ಕಥನ ಹೀಗಿದೆ.

ಭಸ್ಮಾಂಗಿ ದುರ್ಗದ ಆಗ್ನೇಯ ದಿಕ್ಕಿಗೆ ಇರುವ ಚಂದ್ರಗಿರಿಯಿಂದ ಬತ್ತಲರಾಯನೆಂಬ ಒಬ್ಬ ಸನ್ಯಾಸಿಯು ಭಸ್ಮಾಂಗಿ ದುರ್ಗಕ್ಕೆ ಬಂದು ತಪಸ್ಸು ಮಾಡುತ್ತಿರುತ್ತಾನೆ. ಇದೇ ಕಾಲದಲ್ಲಿ ಸಿರಾ ಸಂಸ್ಥಾನವನ್ನು ರಂಗಪ್ಪನಾಯಕನು ಆಳ್ವಿಕೆ ಮಾಡುತ್ತಿರುತ್ತಾನೆ. ಈತನ ಗೋವುಗಳು ದಿನಾಲು ಭಸ್ಮಾಂಗಿ ಕಾವಲ್‌ಗೆ ಮೇಯಲು ಬರುತ್ತಿದ್ದವು. ಇದರಲ್ಲಿ ಒಂದು ಗೋವು ದಿನಾಲು ಹಿಂಡನ್ನು ಬಿಟ್ಟು ಬತ್ತಲರಾಯನು ತಪಸ್ಸು ಮಾಡುವ ಜಾಗದಲ್ಲಿ ಹಾಲನ್ನು ಸುರಿಸಿ ಹೋಗುತ್ತಿತ್ತು. ಈ ಗೋವು ತನ್ನ ಕರುವಿಗೆ ಹಾಲನ್ನು ಸಹ ಉಳಿಸಿಕೊಳ್ಳದೆ ಬರುತ್ತಿತ್ತು. ಇದನ್ನು ನೋಡಿದ ದನ ಕಾಯುವವರು ತಮ್ಮ ಪಾಳೇಗಾರರಲ್ಲಿ ನಡೆಯುತ್ತಿರುವ ಘಟನೆಯನ್ನು ವಿವರಿಸಿದರು. ಆಗ ಪಾಳೇಗಾರನು ಆ ಗೋವನ್ನು ಕಟ್ಟಿ ಹಾಕಲು ಹೇಳಿದನು. ಇದರಿಂದ ಪಾಳೇಗಾರನಿಗೆ ಬಹಳಷ್ಟು ತೊಂದರೆಗಳು ಉಂಟಾದವು. ಈ ವಿಚಾರವನ್ನು ಪುರೋಹಿತರಲ್ಲಿ ವಿಚಾರಿಸಿದಾಗ ತಾವು ಕಟ್ಟಿಹಾಕಿರುವ ಗೋವನ್ನು ಬಿಟ್ಟರೆ ಒಳ್ಳೆಯದಾಗುವುದೆಂದು ಹೇಳಿದರು. ನಂತರ ಪಾಳೇಗಾರನು ಗೋವನ್ನು ಬಿಟ್ಟು, ಬತ್ತಲರಾಯನಿರುವ ಸ್ಥಳಕ್ಕೆ ಹೋಗಿ ಕ್ಷಮೆಯನ್ನು ಯಾಚಿಸಿದನು. ಆ ಬತ್ತಲರಾಯನು ನೀನು ಮಾಡಿದ ತಪ್ಪಿಗಾಗಿ ಈ ದುರ್ಗದಲ್ಲಿ ಭಸ್ಮಾಂಗೀಶ್ವರ ಅಥವಾ ಭೈರವೇಶ್ವರ ದೇವಾಲಯವನ್ನು ನಿರ್ಮಿಸೆಂದು ಹೇಳಿದನು. ಅದರಂತೆ ಪಾಳೇಗಾರನು ಭಸ್ಮಾಂಗೀಶ್ವರ ದೇವಾಲಯವನ್ನು ನಿರ್ಮಿಸಿದನೆಂದು ಮತ್ತು ಅಂದಿನಿಂದ ಈ ದೇವರಿಗೆ ಪರಮಭಕ್ತನಾದನೆಂದು ಇಲ್ಲಿನ ಜನರು ಹೇಳುತ್ತಾರೆ. ರಂಗಪ್ಪನಾಯಕನು ಶತ್ರುಗಳ ಕೈಗೆ ಸಿಕ್ಕಿ ಹತನಾದಾಗ ಆತನ ತಲೆಯು ತನ್ನ ಪರಮದೈವವಾದ ಭಸ್ಮಾಂಗೀಶ್ವರ ಸ್ವಾಮಿ ಹತ್ತಿರ ಬಂದು ನೆಲೆಗೊಂಡಿತೆಂದು ಹೇಳುತ್ತಾರೆ. ಈಗಲೂ ಈ ದೇವಾಲಯದಲ್ಲಿ ಲಿಂಗ ಆಕಾರದ ಒಂದು ಕಲ್ಲಿನ ಪ್ರತಿಮೆಯಿದೆ. ಇದನ್ನೆ ಸಿರಾದ ರಂಗಪ್ಪನಾಯಕನ ತಲೆಯೆಂದು ಹೇಳುತ್ತಾರೆ.

ಕೂಗು ಬಸವಣ್ಣನ ಗುಡಿ : ಭಸ್ಮಾಂಗಿ ದುರ್ಗದ ಮಧ್ಯಭಾಗದಲ್ಲಿ ವಿಶಾಲವುಳ್ಳ ಪ್ರದೇಶವಿದೆ. ಈ ಬಸವಣ್ಣನ ಗುಡಿಯು ಇದೇ ಪ್ರದೇಶದ ಮಧ್ಯದಲ್ಲಿದೆ. ಇದರ ಸುತ್ತಲೂ ಕಲ್ಲಿನ ಗೋಡೆಯನ್ನು ಕಟ್ಟಲಾಗಿದೆ. ಈ ಬಸವಣ್ಣನ ಗುಡಿ ನಿರ್ಮಾಣಗೊಂಡಿದ್ದು ಹೇಗೆಂದು ಇಲ್ಲಿಯ ಜನರು ಈ ರೀತಿ ಹೇಳುತ್ತಾರೆ.

ಭಸ್ಮಾಂಗಿ ದುರ್ಗದ ಪಾಳೇಗಾರನು ಪ್ರೀತಿಯಿಂದ ಒಂದು ಬಸವನನ್ನು ಸಾಕಿದ್ದನು. ಇದನ್ನು ಮೇಯಲು ಸಿರಾದ ಕಾವಲ್‌ಗೆ ದಿನಾಲು ಹೊಡೆಯಲಾಗುತ್ತಿತ್ತು. ಈ ಬಸವನು ಸಿರಾದ ಕಾವಲಿನಲ್ಲಿ ಮೇಯುತ್ತಾ ಪಕ್ಕದ ಗದ್ದೆ ಹೊಲವನ್ನು ಮೇಯ್ದು ಬರುತ್ತಿತ್ತು. ಇದರಿಂದ ಇಲ್ಲಿನ ರೈತರಿಗೆ ಬಹಳ

ತೊಂದರೆಯಾಗುತ್ತಿತ್ತು. ಇಲ್ಲಿ ಮೇಯುವ ಬಸವ ಯಾವುದೆಂದು ತಿಳಿಯಲು ಎಲ್ಲರೂ ಕಾದುಕುಳಿತರು. ಕೊನೆಗೆ ಅದು ಭಸ್ಮಾಂಗಿ ದುರ್ಗದ ಪಾಳೇಗಾರನದೆಂದು ತಿಳಿಯಿತು. ಸಿರಾದ ಕಾವಲಿನ ರೈತರೆಲ್ಲರು ಕೂಡಿ ಪಾಳೇಗಾರರಲ್ಲಿ ವಿಚಾರವನ್ನು ತಿಳಿಸಿದರು. ತಕ್ಷಣವೇ ಪಾಳೇಗಾರನು ಸರಪಳಿಯಿಂದ ಬಸವನನ್ನು ಕಟ್ಟಿ ಹಾಕಿಸಿದನು. ಅದು ದಿನಾಲು ಸಿರಾದ ಕಡೆ ಮುಖ ಮಾಡಿ ಕೂಗುತ್ತಲಿತ್ತು. ನಂತರ ಬಸವನು ಇಲ್ಲಿಯೇ ಕಲ್ಲಾಯಿತೆಂದು ಹೇಳುತ್ತಾರೆ. ಇದಕ್ಕೆ ದೇವಾಲಯವನ್ನು ಕಟ್ಟಿಸಿದರೆಂದು, ಅಲ್ಲದೆ ಕಟ್ಟಿರುವ ದೇವಾಲಯದಲ್ಲಿಯೇ ಕ್ಷಾಮಕಾಲದಲ್ಲಿ ಕುಗ್ಗುವುದು, ಸುಭಿಕ್ಷ ಕಾಲದಲ್ಲಿ ಹಿಗ್ಗುವುದೆಂದು ಜನರ ನಂಬಿಕೆ ಇದೆ. ಬಸವನು ಕಲ್ಲಾದ ಮೇಲೂ ಕೆಲಕಾಲದವರೆಗೆ ಕೂಗುತ್ತಿತ್ತೆಂದು ಅದು ಸಿರಾದ ಜನರಿಗೆ ಕೇಳುತ್ತಿತ್ತೆಂದು ಇವರ ಅಭಿಪ್ರಾಯವಾಗಿದೆ. ಇಲ್ಲಿನ ಜನರು ಈ ಬಸವಣ್ಣನ ವಿಗ್ರಹಕ್ಕೆ ವಿಸ್ತಾರವಾಗಿ ದೇವಾಲಯವನ್ನು ಈಗ ನಿರ್ಮಿಸುತ್ತಿದ್ದಾರೆ.

ಕಿಚ್ಚಡಿಲಿಂಗ : ಇದು ನಿಡುಗಲ್ಲು ದುರ್ಗದ ಮೇಲಿನ ಅಂತಸ್ತಿನ ಕಾಳಹಸ್ತೇಶ್ವರ ಗರ್ಭಗುಡಿಯಲ್ಲಿದೆ. ಇದರಲ್ಲಿ ಒಂದು ಲಿಂಗವಿದ್ದು, ಇದಕ್ಕೆ 'ಕಿಚ್ಚಡಿಲಿಂಗ'ವೆಂದು ಕರೆಯುತ್ತಾರೆ. ಈ ಕಿಚ್ಚಡಿಲಿಂಗಕ್ಕೆ ಆ ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಮ್ಮೆ ರಾಮಸೀತೆ ಲಕ್ಷ್ಮಣರು ವನವಾಸ ಸಂದರ್ಭದಲ್ಲಿ ಇಲ್ಲಿ ಕೆಲವು ದಿನ ವಾಸವಾಗಿದ್ದರು. ಆ ಸಂದರ್ಭದಲ್ಲಿ ಬೆಳಗಿನ ಸಂಧ್ಯಾವಂದನೆ ಮುಗಿಸಲು ಎಲ್ಲಿಯೂ ಶಿವಲಿಂಗವು ಇಲ್ಲದ ಕಾರಣ, ಸೀತೆಯು ಪ್ರಸಾದಕ್ಕಾಗಿ ಮಾಡಿದ್ದ ಕಿಚ್ಚಡಿಯನ್ನೇ ಲಿಂಗವನ್ನಾಗಿ ಮಾಡಿ ಅದಕ್ಕೆ ರಾಮಸೀತೆ ಲಕ್ಷ್ಮಣರು ಪೂಜೆ ಮಾಡಿದರು ಎಂದು ಹೇಳುತ್ತಾರೆ. ಅಂದಿನಿಂದ ಇದಕ್ಕೆ ಕಿಚ್ಚಡಿ ಲಿಂಗೇಶ್ವರ ಎಂದು ಕರೆಯುತ್ತಾರೆ. ಈ ಲಿಂಗವು ಸಹ ಒರಟು ಒರಟಾಗಿದ್ದು, ಈ ಹಿನ್ನೆಲೆಯಲ್ಲಿ ಲಿಂಗವನ್ನು ಕಿಚ್ಚಡಿಯಿಂದಲೇ ಮಾಡಿದ ಸ್ವರೂಪದಲ್ಲಿದೆ ಎನ್ನುತ್ತಾರೆ. ಆದರೆ ಎಲ್ಲಾ ದಾಖಲೆಗಳಲ್ಲಿ ಇದನ್ನು 'ಕಾಳಹಸ್ತೇಶ್ವರ' ದೇವಾಲಯ ಎಂದು ಕರೆಯಲಾಗಿದೆ.

ಮುಖ ತಿರುಗಿದ ಬಸವ : ನಿಡುಗಲ್ಲು ದುರ್ಗದ ಮೇಲಿನ ಅಂತಸ್ತಿನ ಕಾಳಹಸ್ತೇಶ್ವರ ದೇವಾಲಯದ ಸುಖನಾಶಿಯಲ್ಲಿ ಈ ಮುಖ ತಿರುಗಿದ ಬಸವ ವಿಗ್ರಹವಿದೆ. ಇದು ದೇವಾಲಯದ ಗರ್ಭಗುಡಿಯಲ್ಲಿರುವ ಲಿಂಗಕ್ಕೆ ನೇರವಾಗಿ ಇಡಲಾಗಿದೆ. ಬಸವ ವಿಗ್ರಹವು ಮುಖ ತಿರುಗಿಸಲು ಕಾರಣವನ್ನು ಕೊಡುತ್ತಾರೆ.

ಪೂಜಾರಿಯು ಭಕ್ತನ ಆಪೇಕ್ಷೆಯ ಮೇರೆಗೆ ತಾನು ತಂದಿದ್ದ ಒಂದು ಮೂಟೆ(ಚೀಲ) ಉಂಡುಗಡಲೆಯನ್ನು ಇಲ್ಲಿನ ಎಲ್ಲಾ ವಿಗ್ರಹಗಳಿಗೆ ಒಂದರಂತೆ ಇಡಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ಪೂಜಾರಿಯು ನಿಡುಗಲ್ಲು ದುರ್ಗದ ಎಲ್ಲಾ ವಿಗ್ರಹಗಳಿಗೆ ಉಂಡುಗಡಲೆಯನ್ನು ಹಂಚುತ್ತಾನೆ. ಕೊನೆಗೆ ಒಂದು ಬಸವನಿಗೆ ಕಡಿಮೆ ಬೀಳುತ್ತದೆ. ಆಗ ಪೂಜಾರಿಯು ಭಕ್ತನ ಸಲಹೆ ಮೇರೆಗೆ ಉಂಡುಗಡಲೆಯನ್ನು ಹೊಡೆದು ಇಡುತ್ತಾನೆ. ಆಗ ಬಸವಣ್ಣನ ವಿಗ್ರಹವು ತನಗೆ ಈ ರೀತಿ ಅವಮಾನ ಮಾಡಿದರೆಂದು ತಿಳಿದು

ಮೊದಲಿದ್ದ ಮುಖವನ್ನು ಉತ್ತರಕ್ಕೆ ತಿರುಗಿಸಿ ಕೊಂಡಿತು. ಅಂದಿನಿಂದ ಈ ಬಸವನನ್ನು 'ಮುಖ ತಿರುಗಿದ ಬಸವ' ಎಂದು ಕರೆಯುತ್ತಾರೆ.

ಈ ಮೇಲಿನ ಕಥನದಿಂದ ನಿಡುಗಲ್ಲು ದುರ್ಗದಲ್ಲಿ ದೇವಾಲಯಗಳು ಮತ್ತು ವಿಗ್ರಹಗಳು ಎಷ್ಟಿದ್ದವು ಎಂಬುದನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ವಿದ್ವಾಂಸರು ನಿಡುಗಲ್ಲು ದುರ್ಗವನ್ನು 'ಎರಡನೇ ಹಂಪೆ' ಎಂದು ಕರೆಯುವುದು ಉತ್ಪ್ರೇಕ್ಷೆಯೇನಲ್ಲ.

ಗರುಡಾಂಜುನೇಯರ ಉಬ್ಬುಶಿಲ್ಪ : ಈ ಮೂರ್ತಿಯು ದೇವರಾಯನ ದುರ್ಗದ ಮಧ್ಯಭಾಗದಲ್ಲಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಈ ಮೂರ್ತಿಯ ಸುತ್ತಲೂ ಒಂದು ಚಿಕ್ಕಗುಡಿಯನ್ನು ನಿರ್ಮಿಸಲಾಗಿದೆ. ಒಂದು ಕಲ್ಲಿನಲ್ಲಿ ಕೆತ್ತಿರುವ ಗರುಡಾಂಜುನೆಯರ ಯುದ್ಧದ ಮೂರ್ತಿಯು ಒಂದು ಹಣ್ಣನ್ನು ಕೈಯಲ್ಲಿ ಹಿಡಿದಿರುವುದು ಕಾಣುತ್ತದೆ. ಈ ಹಣ್ಣನ್ನು ಹಿಡಿದಿರುವ ಗರುಡ ಮತ್ತು ಆಂಜನೇಯರ ಯುದ್ಧದ ಹಿನ್ನೆಲೆಯನ್ನು ಹೇಳುವ ಐತಿಹ್ಯ ಈ ರೀತಿಯಿದೆ.

ಒಂದು ನೇರಳೆ ಮರದಲ್ಲಿ ಒಂದೇ ಒಂದು ನೇರಳೆಹಣ್ಣು ಇತ್ತು. ಈ ಹಣ್ಣನ್ನು ಕಂಡ ಗರುಡಾ ಮತ್ತು ಆಂಜನೇಯರು ಹಣ್ಣನ್ನು ಕೀಳಲು ಇಬ್ಬರೂ ಹಾರಿದರು. ಇವರ ಪೈಪೋಟಿಯಲ್ಲಿ ಮಾಗಿದ ಹಣ್ಣು ಕೆಳಕ್ಕೆ ಗಿಡದಿಂದ ಕಳಚಿ ಬಿತ್ತು. ತಕ್ಷಣವೇ ಇವರು ಕೆಳಕ್ಕೆ ಜಿಗಿದರು. ಈ ಹಣ್ಣಿಗಾಗಿ ಮಾರಾ ಮಾರಿ ಯುದ್ಧ ನಡೆಯಿತು. ಈ ಯುದ್ಧವನ್ನು ನೋಡಲು ದೇವಾನುದೇವತೆಗಳು ಸಾಲುಗಟ್ಟಿ ನಿಂತರು. ಇವರಿಬ್ಬರ ಯುದ್ಧದಿಂದ ಏನಾದರೂ ಅನಾಹುತ ನಡೆಯುವುದೆಂದು ದೇವತೆಗಳು ರಾಮನನ್ನು ಧ್ಯಾನಿಸಿದರು. ಶ್ರೀರಾಮನು ಇಬ್ಬರಿಗೂ ದೈವಭಕ್ತನಾಗಿದ್ದರಿಂದ ರಾಮನನ್ನು ಕಂಡ ತಕ್ಷಣ ಯುದ್ಧವನ್ನು ನಿಲ್ಲಿಸಿ ವಿಚಾರವನ್ನು ತಿಳಿಸಿದರು. ಇದರಿಂದ ರಾಮನು "ಇಬ್ಬರೂ ಬಲಾಬಲಗಳಲ್ಲಿ ಯಾರಿಗೂ ಕಡಿಮೆಯಿಲ್ಲ. ಆದ್ದರಿಂದ ಯುದ್ಧವನ್ನು ಮುಂದುವರೆಸಬೇಡಿ ಎನ್ನುತ್ತಾನೆ. ಅದರಂತೆ ಇಬ್ಬರೂ ಯುದ್ಧ ನಿಲ್ಲಿಸಿ ಆ ಹಣ್ಣನ್ನು ಇಬ್ಬರೂ ಹಂಚಿ ತಿಂದರು. ಈ ಘಟನೆಯು ದೇವರಾಯನ ದುರ್ಗದಲ್ಲಿಯೇ ನಡೆದದ್ದರಿಂದ ಇಲ್ಲಿಯೇ ಶ್ರೀರಾಮನು ಸ್ಮರಣಾರ್ಥವಾಗಿ ಗರುಡಾಂಜನೇಯರ ಹಣ್ಣು ಹಿಡಿದಿರುವ ಉಬ್ಬುಶಿಲ್ಪವನ್ನು ಕೆತ್ತಿಸುತ್ತಾನೆ. ಅಂದಿನಿಂದ ಪ್ರತಿವರ್ಷವು ಉಬ್ಬುಶಿಲ್ಪಕ್ಕೆ ಹಲವು ಆಚರಣೆಗಳು ನಡೆಯುತ್ತವೆ. ಈ ಉಬ್ಬುಶಿಲ್ಪಕ್ಕೆ ಸುಲಿದ ಬಾಳೆಹಣ್ಣನ್ನು ಹಚ್ಚುವುದು, ಹಣದ ನಾಣ್ಯವನ್ನು ಹಚ್ಚುವುದು, ಕ್ಷೀರಾಭಿಷೇಕ, ಕುಂಕುಮಾರ್ಚನೆಯ ಆಚರಣೆಗಳು ನಡೆಯುತ್ತವೆ. ಇದು ಇಲ್ಲಿನ ಸುತ್ತಲ ಜನರ ಹರಕೆ, ಮೀಸಲು, ಬೇಡಿಕೆಯ ಮೇರೆಗೆ ಆಚರಣೆಯ ಭಾಗವಾಗಿ ನಡೆಯುತ್ತದೆ.

ಮರಳಿನ ಬಸವ ಮೂರ್ತಿ : ಚೇಳೂರಿನ ವೇಶ್ಯೆಯ ಕಲ್ಯಾಣಿಯ ದಕ್ಷಿಣಭಾಗಕ್ಕೆ ಮರಳಿನ ಬಸವ ಮೂರ್ತಿ ಇದೆ. ಇತ್ತೀಚಿಗೆ ಭಕ್ತಾದಿಗಳು ಬೃಹತ್ತಾದ ದೇವಸ್ಥಾನವನ್ನು ನಿರ್ಮಿಸಿದ್ದಾರೆ.

ಕಲ್ಯಾಣದಿಂದ ಬಂದ ಶರಣರು ಚೇಳೂರಿನಲ್ಲಿ ನೆಲೆಸಿದರು. ಇವರಲ್ಲಿ ಸಂಗಮೇಶ್ವರ, ಗವಿ ಸಿದ್ದೇಶ್ವರ ಪ್ರಮುಖರು. ಸಂಗಮೇಶ್ವರರ ತಪಸ್ಸಿನ ನೆಲೆ ಚೇಳೂರು. ಸಂಗಮೇಶ್ವರರು ಕೈಲಾಸ ವಾಸಿಯಾಗುವ ಕಾಲಕ್ಕೆ ಅವರ ಶಿಷ್ಯರು ಪ್ರಾರ್ಥನೆಯ ಮೇರೆಗೆ ಒಂದು ಮೂರ್ತಿಯನ್ನು ಅನುಗ್ರಹಿಸಿ, ಮೂರು ಹಿಡಿ ಮರಳಿನಲ್ಲಿ ಬಸವಮೂರ್ತಿ ಮಾಡಿ ಅದರ ಮೇಲೆ ನೂರೊಂದು ಕೊಡ ಪವಿತ್ರ ನೀರನ್ನು ಸುರಿದು ಬಸವಣ್ಣನನ್ನು ನಿರ್ಮಿಸಿದರೆಂಬ ನಂಬಿಕೆಯಿದೆ. ಅಭಿಷೇಕ, ಪೂಜೆ, ನಿತ್ಯನೇಮವಾಗತೊಡಗಿತು. ಅದರಂತೆ ಬಸವಾಕೃತಿಯೂ ಬೆಳೆಯುತ್ತಾ ಹೋಯಿತು. ಮೊದಮೊದಲು ಸಣ್ಣಗಿದ್ದ ಬಸವಣ್ಣನ ಮೂರ್ತಿ ಬರಬರುತ್ತಾ ಗರ್ಭಗುಡಿಯ ತುಂಬಾ ಬೆಳೆದು ಪೂಜೆಯ ಸಂದರ್ಭದಲ್ಲಿ ಅರ್ಚಕರು ತಿರುಗಾಡದಷ್ಟು ಬೆಳೆಯಿತೆಂದು ಹೇಳಲಾಗುತ್ತಿದೆ. ಮರಳು ಕಳುಚಿ ಬೀಳುತ್ತಿದ್ದ ಹಾಗೆ ಬಿದ್ದ ಮರಳನ್ನು ಮೇಲಿಂದ ಮೇಲೆ ಮೆತ್ತುತ್ತಾ ಹೋದುದರಿಂದ ಈ ಭವ್ಯ ಅಕೃತಿ ಬಂದಿರಬಹುದೆಂದು ಊಹಿಸಬಹುದಾಗಿದೆ.

ಈ ಮೇಲಿನ ದೈವಸಂಬಂಧೀ ಐತಿಹ್ಯಗಳನ್ನು ನೋಡಿದರೆ ಅವುಗಳ ನಿರೂಪಣೆಯಲ್ಲಿ ಕೆಲವೊಂದು ಸಮಾನ ಅಂಶಗಳನ್ನು ಗುರುತಿಸಬಹುದು. ಸಾಮಾನ್ಯವಾಗಿ ಕನಸಿನಲ್ಲಿ ದೈವವೊಂದು ಕಾಣಿಸಿಕೊಂಡು ತನ್ನನ್ನು ಪ್ರತಿಷ್ಠಾಪಿಸಿದರೆ ಒಳ್ಳೆಯದಾಗುವುದೆಂದು ಸೂಚಿಸುವುದು, ಅದರಂತೆ ಪಾಳೇಗಾರನು ಮೂರ್ತಿಯನ್ನು ಹುಡುಕಿ ತಂದು, ಅದಕ್ಕೆ ದೇವಾಲಯ ಕಟ್ಟಿ, ಪೂಜೆ, ಜಾತ್ರೋತ್ಸವದಂತಹ ಆಚರಣೆಗಳನ್ನು ಆರಂಭಿಸುವುದು, ಅಲ್ಲದೆ ಯಾವುದೋ ಒಂದು ಸ್ಥಳವನ್ನು ಪವಿತ್ರವೆಂದು ತಿಳಿದು ಅಲ್ಲಿ ದೇವಾಲಯವನ್ನು ನಿರ್ಮಿಸುವುದು. ಗೋವು ಹುತ್ತಕ್ಕೆ ಹಾಲೆರೆವುದು, ರಾಮನಿಂದ ಲಿಂಗವನ್ನು ಪ್ರತಿಷ್ಠಾಪಿಸುವುದು ಹೀಗೆ ಹಲವಾರು ಆಶಯಗಳುಳ್ಳ ಐತಿಹ್ಯಗಳನ್ನು ಕಾಣಬಹುದು. ಪ್ರಶ್ನೆಯೆಂದರೆ ಈ ರೀತಿ ಅಲೌಕಿಕವೆಂಬಂತೆ ನಿರೂಪಿತವಾಗಿರುವ ಐತಿಹ್ಯಗಳ ಸೃಷ್ಟಿಯ ಹಿಂದಿರುವ ಒತ್ತಡ ಎಂತಹುದು ಎನ್ನುವುದಾಗಿದೆ.

ಧರ್ಮ ಮತ್ತು ರಾಜಪ್ರಭುತ್ವ ಒಂದಕ್ಕೊಂದು ಪೂರಕವಾಗಿ ವರ್ತಿಸುತ್ತಿರುತ್ತವೆ. ಕನಸಿನಲ್ಲಿ ಹೇಳಿದಂತೆ ದೇವಾಲಯವನ್ನು ನಿರ್ಮಿಸುವ ಮೂಲಕ ಪಾಳೇಗಾರನು ಆ ಧಾರ್ಮಿಕ ವರ್ಗದ ಬೆಂಬಲವನ್ನು ಗಳಿಸಿಕೊಳ್ಳುತ್ತಿರುತ್ತಾನೆ. ಅದೇ ಹೊತ್ತಲ್ಲಿ ಕನಸಿನಲ್ಲಿ ದೈವವೊಂದು ಪಾಳೇಗಾರನಿಗೆ ಕಾಣುವ ಮೂಲಕ ಆತನು ಇತರ ಸಾಮಾನ್ಯರಿಗಿಂತ ವಿಶಿಷ್ಟವಾದವನು ಎನ್ನುವುದನ್ನು ಈ ರೀತಿಯ ನಿರೂಪಣೆಗಳು ಪ್ರತಿಪಾದಿಸುತ್ತಿರುತ್ತವೆ.

ವಾಸ್ತವವಾಗಿ ದೈವವೊಂದು ಕನಸಿನಲ್ಲಿ ಬಂದು ಹೇಳಿರಬೇಕೆಂದೇನೂ ಇಲ್ಲ. ಅದೆಷ್ಟೋ ಬಾರಿ ಒಂದು ಧಾರ್ಮಿಕ ವರ್ಗದ ಒತ್ತಡಕ್ಕೆ ಒಳಗಾಗಿ ದೇವಾಲಯವನ್ನು ನಿರ್ಮಿಸುವಾಗ ಅದಕ್ಕೊಂದು ಅಲೌಕಿಕ ಸಮರ್ಥನೆಯನ್ನು ನೀಡುವ ಕಾರಣಕ್ಕಾಗಿಯೇ ಇಂತಹ ದೈವಸಂಬಂಧೀ ಐತಿಹ್ಯಗಳು ಹುಟ್ಟಿಕೊಂಡಿರಬಹುದು.

ಈ ತರಹದ ಐತಿಹ್ಯಗಳೇ ಸಮುದಾಯದ ಆಚರಣೆಗೆ ಸಮರ್ಥನೆಯನ್ನು ಕೆಲವೊಂದು ಜನರಿಗೆ ವಿಶೇಷ ಹಕ್ಕುದಾರಿಕೆಯನ್ನು ದೇವಾಲಯಕ್ಕೆ ಸಂಬಂಧಿಸಿದಂತೆ ಒಳಗೊಳ್ಳಲು ಕಾರಣವಾಗಿವೆ. ಅಲ್ಲದೆ ಇವುಗಳಿಗೆ ಲಿಖಿತ ಆಕರಗಳನ್ನು ನೀಡಲಾಗುತ್ತದೆ. ಇವು ಐತಿಹ್ಯದೊಂದಿಗೇ ಬೆಳೆದು ಬಂದಿರಬಹುದು. ಇಲ್ಲವೇ ನಂತರದಲ್ಲಿ ಹುಟ್ಟಿಕೊಂಡವಾಗಿರಬಹುದು. ಸಮುದಾಯದಲ್ಲಿ ಎಷ್ಟೋ ಬಾರಿ ಯಾವ ಲಿಖಿತಾಧಾರಗಳಿಲ್ಲದೆಯೋ, ಈ ಮೌಖಿಕ ಐತಿಹ್ಯಗಳ ಆಧಾರದ ಮೇಲೆಯೋ ದೈವ ಸಂಬಂಧೀ ಆಚರಣೆಗಳು ಕ್ರಮಬದ್ಧವಾಗಿ ನಡೆಯುತ್ತಾ ಬಂದಿರುವುದನ್ನು ಗಮನಿಸಿದರೆ ದೈವ ಸಂಬಂಧೀ ಐತಿಹ್ಯಗಳ ಮಹತ್ವ ಅರಿವಾಗುತ್ತದೆ.

೫.೫.೩. ಕೋಟೆಯಲ್ಲಿನ ಇನ್ನಿತರ ಐತಿಹ್ಯಗಳು

ದೈವ ಸಂಬಂಧಿ ಐತಿಹ್ಯಗಳಲ್ಲದೆ ಕೋಟೆಯಲ್ಲಿನ ಸ್ಮಾರಕಗಳಿಗೆ ಸಂಬಂಧಿಸಿದಂತೆ ಇನ್ನಿತರ ಐತಿಹ್ಯಗಳು ಕಂಡುಬರುತ್ತವೆ. ಈ ಐತಿಹ್ಯಗಳು ಕೋಟೆಗೆ ಸಂಬಂಧಿಸಿದ ಫಿರಂಗಿ, ರೇಖಾಚಿತ್ರಗಳು, ಹಲವಾರು ಸ್ಮಾರಕಗಳು, ಉಬ್ಬುಶಿಲ್ಪಗಳು ಇತ್ಯಾದಿ ಕುರಿತು ರಚಿತವಾಗಿವೆ. ಈ ಐತಿಹ್ಯಗಳು ದೈವಸಂಬಂಧಿ ಸ್ಮಾರಕಗಳ ಹಾಗೆಯೇ ಕೆಲವು ಪೂಜೆಗೊಳ್ಳುತ್ತಿವೆ. ಕೆಲವು ಸ್ಮಾರಕಗಳು ಪೂಜೆಗೊಳ್ಳುತ್ತಿಲ್ಲ. ಆದರೆ ಅವುಗಳಷ್ಟೇ ಪ್ರಾಮುಖ್ಯತೆಯನ್ನು ಸಮುದಾಯದ ಪರಂಪರೆಯಲ್ಲಿ ಮಹತ್ವ ಪಡೆದು ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತಾ ಇಂದಿಗೂ ಉಳಿದುಕೊಂಡು ಬಂದಿವೆ. ಆದರೆ ಈ ಐತಿಹ್ಯಗಳು ದೈವ ಸಂಬಂಧೀ ಐತಿಹ್ಯಗಳ ಹಾಗೆ ಪುರಾಣೀಕೃತಗೊಳ್ಳದೆ ವಾಸ್ತವ ಘಟನೆಯ ಹಿಂದಿನ ನೈಜತೆಯನ್ನು ಉಳಿಸಿಕೊಂಡಿರುವುದು ಕಾಣಬಹುದಾಗಿದೆ. ಈ ರೀತಿಯಲ್ಲಿರುವ ಐತಿಹ್ಯಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಏಳು ಮಕ್ಕಳ ತಾಯಿ : ನಿಡುಗಲ್ಲು ದುರ್ಗದ ಶಿಖರದ ಕೆಳಗಿನ ಮೊದಲ ಅಂತಸ್ತಿನಲ್ಲಿರುವ ತಿಳಿನೀರಿನ ಕೊಳಕ್ಕೆ ಈಶಾನ್ಯ ಭಾಗದಲ್ಲಿ ಎರಡು ಫಿರಂಗಿಗಳಿವೆ. ಅವುಗಳಲ್ಲಿ ಒಂದು ಎಂಟು ಅಡಿ ಉದ್ದವಿದ್ದು, ಮತ್ತೊಂದು ಒಂದು ಅಡಿ ಉದ್ದವಿದೆ. ಇವು ಗಾಳಿಮಳೆಗೆ ಸಿಕ್ಕಿಯೂ 'ತುಕ್ಕು' ಹಿಡಿದಿಲ್ಲ. ೮ ಅಡಿ ಫಿರಂಗಿಯನ್ನು ೧೦ ಜಾಯಿಂಟುಗಳಲ್ಲಿ ೨೧ ಬಳೆಗಳಿಂದ ತಯಾರಿಸಿ ಒಂದಕ್ಕೊಂದು ಬೆಸುಗೆ ಹಾಕಿ ಕೂಡಿಸಲಾಗಿದೆ. ಈ ಫಿರಂಗಿಯನ್ನು ಅಲ್ಲಿನ ಜನರು 'ಏಳು ಮಕ್ಕಳ ತಾಯಿ' ಎಂದು ಕರೆಯುತ್ತಾರೆ.

ಈ 'ಏಳು ಮಕ್ಕಳ ತಾಯಿ' ಎಂದರೆ ಒಂದು ಭಾರಿ ನಿಡುಗಲ್ಲು ದುರ್ಗಕ್ಕೆ ಶತ್ರುಗಳು ದಾಳಿ ಮಾಡುತ್ತಾರೆ. ಚಿತ್ರದುರ್ಗದ ಓಬವ್ವನ ರೀತಿ ಈ ದುರ್ಗದ ಒಬ್ಬ ಹೆಣ್ಣು ಮಗಳು ಯಾರಿಂದಲೂ ಮೇಲೆತ್ತಿ ಫಿರಂಗಿಯನ್ನು ಸಿಡಿಸಲು ಸಾಧ್ಯವಾಗದ ಸಂದರ್ಭವನ್ನು ಕಂಡು, ತನ್ನ ದುರ್ಗವನ್ನು ಕಾಪಾಡಲು ಏಳು ಮಕ್ಕಳನ್ನು ಹೊಂದಿದ್ದ ತಾಯಿಯು ಒಂದು ದೊಡ್ಡ ಫಿರಂಗಿಯನ್ನು ಮೇಲಕ್ಕೆ ಎತ್ತಿ ಮದ್ದನ್ನು ತುಂಬಿ ಶತ್ರುಗಳ ಸೈನ್ಯವನ್ನು ಧೂಳಿಪಟ ಮಾಡಿದಳೆಂದು ಹೇಳುತ್ತಾರೆ. ಈ ಫಿರಂಗಿಯನ್ನು ಏಳು ಮಕ್ಕಳ

ತಾಯಿಯು ಮೇಲಕ್ಕೆ ಎತ್ತಿ ಹಿಡಿದು ಶತ್ರುಗಳನ್ನು ನಿರ್ನಾಮ ಮಾಡಿದ್ದಕ್ಕೆ ಅಂದಿನಿಂದ ಈ ಫಿರಂಗಿಗೆ 'ಏಳು ಮಕ್ಕಳ ತಾಯಿ' ಎಂದು ಪಾಳೇಗಾರರು ಹೆಸರಿಟ್ಟರು. ಅಂದಿನಿಂದಲೂ ಜನರು ಈ ಫಿರಂಗಿಯನ್ನು 'ಏಳು ಮಕ್ಕಳ ತಾಯಿ' ಎಂದು ವಿವರಣೆ ನೀಡುತ್ತಾರೆ.

ಮಹಾಪ್ರಧಾನ ವೀರಗಲ್ಲು : ನಿಡುಗಲ್ಲು ದುರ್ಗದ ನಾಗೇಶ್ವರ ದೇವಾಲಯದಲ್ಲಿ ಈತನ ವೀರಗಲ್ಲು ಇದೆ. ಈ ವೀರಗಲ್ಲಿನ ವೀರನ ಐತಿಹ್ಯ ಹೀಗಿದೆ.

ಒಮ್ಮೆ ನಿಡುಗಲ್ಲಿನ ಚೋಳರಾಜ ಪೆರುಮಾಳದೇವ ಹುಳುಗಲದ ಕಳಿಂಗ ಬೊಮ್ಮರಸನ ಮೇಲೆ ಯುದ್ಧಕ್ಕೆ ಹೊರಟ. ಬೊಮ್ಮರಸನಿಗೆ 'ಸಿಡಿಲ ಬೊಮ್ಮರಸ'ನೆಂಬ ಹೆಸರಿತ್ತು. ಬೊಮ್ಮರಸ ಯುದ್ಧಕ್ಕೆ ಬಂದರೆ ಸಿಡಿಲೆರಗಿದಂತೆಯೇ ಸರಿ. ಯುದ್ಧದಲ್ಲಿ ಗೆಲುವು ಯಾವಾಗಲೂ ಅವನ ಕಡೆಯೇ, ಅವನ ಅಷ್ಟು ಬಲಿಷ್ಠ, ಚೋಳರಾಜನ ಸೇನೆ ಸಾಮಾನ್ಯವಾದುದಲ್ಲ. ಅವನ ಸೇನೆಯಲ್ಲಿ ತಂತ್ರಪಾಲ, ಡಿಂಡಿಮ, ಸವನರಾಮಯ್ಯರೆಂಬ ವೀರಾಧಿವೀರರಿದ್ದರು. ಸವನರಾಮಯ್ಯ ದಂಡಾಧಿಕಾರಿ ಮತ್ತು ಮಂತ್ರವಾದಿ ಕೂಡ. ಅನೇಕ ಸಣ್ಣಪುಟ್ಟ ರಾಜರನ್ನು ಗೆದ್ದು ಅವರ ತಲೆಗಳನ್ನು ದೊರೆಗೆ ಕಾಣಿಕೆಯಾಗಿ ಕೊಟ್ಟು ಭಾಷೆಗೆ ತಪ್ಪದ ನಾಯಕರ ಗಂಡ, ಬಲ್ಲಿದರ ಗಂಡನೆಂಬ ಬಿರುದುಗಳಿದ್ದವು. ರಾಮಯ್ಯ ಯುದ್ಧದಲ್ಲಿ ಜಯಲಕ್ಷ್ಮಿಯನ್ನು ತನ್ನ ಕಡೆ ಮಾಡಿಕೊಂಡ ಸಿಡಿಲ ಬೊಮ್ಮರಸ ಸೋತು ರಣರಂಗದಿಂದ ಹಿಂದೋಡಿದನು. ರಾಮಯ್ಯ ಯುದ್ಧದಲ್ಲಿ ಮಡಿದ ವೀರನಾದ. ಈತನ ಸ್ಮರಣೆಗಾಗಿ ಒಂದು ವೀರಗಲ್ಲನ್ನು ನಿರ್ಮಿಸಿ ಮಾನ್ಯವನ್ನು ಕೊಡಿಸಿದರು.

ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದೆ. ಮೊದಲ ಹಂತದಲ್ಲಿ ವೀರನಾದ ರಾಮಯ್ಯನು ಶತ್ರುಗಳನ್ನು ಸದೆ ಬಡಿಯುತ್ತಿರುವ ದೃಶ್ಯ ಬಿಡಿಸಿದೆ. ಎರಡನೇ ಹಂತದಲ್ಲಿ ಮಡಿದ ವೀರನನ್ನು ದೇವತಾ ಸ್ತ್ರೀಯರು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಮೂರನೇ ಹಂತದಲ್ಲಿ ವೀರಸ್ವರ್ಗವನ್ನು ಸೇರಿ ತನಗಿಂತ ಹಿಂದೆ ಮಡಿದು ವೀರಸ್ವರ್ಗದಲ್ಲಿರುವ ಸಹ ವೀರನೊಂದಿಗೆ ಶಿವನ ಪೂಜೆ ಮಾಡುತ್ತಿದ್ದಾನೆ.

ಎಮ್ಮೆಲರು ಹೆಣ್ಣು ಮಗಳು : ನಿಡುಗಲ್ಲು ದುರ್ಗದ ವಜ್ರದ ಊರು ಬಾಗಿಲಲ್ಲಿ ಒಂದು ಹೆಣ್ಣಿನ ಚಿತ್ರವನ್ನು ಬಿಡಿಸಲಾಗಿದೆ. ಈ ಚಿತ್ರವನ್ನು ಇಲ್ಲಿನ ನಾಯಕ ಜನಾಂಗದವರು ನಮ್ಮ ಜಾತಿಯ ಹೆಣ್ಣು ಮಗಳು ಎಂದು ಹೇಳುತ್ತಾರೆ. ಈ ಹೆಣ್ಣಿನ ಉಬ್ಬುಶಿಲ್ಪಕ್ಕೆ ಎಮ್ಮೆಲರ ಕುಲದ ನಾಯಕ ಜನಾಂಗದವರು ಪೂಜೆಯನ್ನು ಮಾಡುತ್ತಾರೆ. ಇದಕ್ಕೆ ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಂದು ಬಾರಿ ಪಾಳೇಗಾರನು ಪಂದ್ಯವನ್ನು ನಡೆಸಲು ಇಚ್ಛಿಸುತ್ತಾನೆ. ಆ ಪಂದ್ಯವು ನಾಯಕ ಜನಾಂಗದಲ್ಲಿರುವ ಎರಡು ಬಳಿ(ಕುಲ)ಗಳಿಗೆ ಸಂಬಂಧಿಸಿರುತ್ತದೆ. ಪಂದ್ಯ ಏನೆಂದರೆ ವಜ್ರದ ಊರು

ಬಾಗಿಲನ್ನು ದಾಟಿ ಒಳಕ್ಕೆ ಹೋದಾಗ ಒಂದು ಉದ್ದನೆಯ ಕಂಬವಿದೆ. ಈ ಕಂಬವನ್ನು ಎರಡು ಕುಲಗಳಲ್ಲಿರುವ ಯಾವುದೇ ಬಲಿಷ್ಠ ವ್ಯಕ್ತಿಯು ಎತ್ತುತ್ತಾರೋ ಅವರಿಗೆ ಇನಾಮು ಕೊಡಲಾಗುತ್ತದೆ ಎಂದು ಸಾರುತ್ತಾರೆ. ಅದರಂತೆ ಎಮ್ಮೆಲರು ಕುಲದ ಒಬ್ಬ ವ್ಯಕ್ತಿಯು ಮುಂದೆ ಬಂದು ಪಾಳೇಗಾರನು ಕೊಟ್ಟ ಇಳ್ಳೇವನ್ನು ತೆಗೆದು ಕೊಳ್ಳುತ್ತಾನೆ. ಆ ವ್ಯಕ್ತಿಯು ಮನೆಯಲ್ಲಿ ಈ ವಿಚಾರವನ್ನು ಚರ್ಚಿಸುತ್ತಾನೆ. ಅದಕ್ಕೆ ಮನೆಯಲ್ಲಿ ವಿರೋಧ ವ್ಯಕ್ತವಾಗುತ್ತದೆ. ಮನೆಯಲ್ಲಿ ವಿರೋಧವನ್ನು ಸಹಿಸದೇ ತನ್ನ ತಂಗಿಯಲ್ಲಿ ಕೇಳಿ ಕೊಳ್ಳುತ್ತಾನೆ. ಆಕೆಯು ತವರಿಗೆ ಹೆರಿಗಾಗಿ ಬಂದಿರುತ್ತಾಳೆ. ಅವಳಿಗೆ ಹೆರಿಗೆಯಾಗಿ ಮೂರು ದಿವಸವಾಗಿತ್ತು. ಪಂದ್ಯದಲ್ಲಿ ಭಾಗವಹಿಸಲು ಒಪ್ಪಿಕೊಳ್ಳುತ್ತಾಳೆ.

ಎಮ್ಮೆಲರು ಮತ್ತು ಮಂದಲರಲ್ಲಿ ಪಂದ್ಯ ಏರ್ಪಟ್ಟಿತ್ತು. ಆದರೆ ಮಂದಲರಲ್ಲಿ ಯಾರು ಕಂಬವನ್ನು ಎತ್ತಲು ಸಾಧ್ಯವಾಗುವುದಿಲ್ಲ. ಎಮ್ಮೆಲರ ಹೆಣ್ಣು ಮಗಳು ಸೊಂಟಕ್ಕೆ ಬಟ್ಟೆಯನ್ನು ಕಟ್ಟಿ ಕಂಬವನ್ನು ಎತ್ತಿ ನಿಲ್ಲಿಸುತ್ತಾಳೆ. ಇದನ್ನು ಕಂಡು ಸೇರಿದವರೆಲ್ಲರೂ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಪಾಳೇಗಾರನು ಈ ಘಟನೆಯ ಸ್ಮರಣೆಗಾಗಿ ಆ ಹೆಣ್ಣು ಮಗಳ ಉಬ್ಬುಶಿಲ್ಪವನ್ನು ವಜ್ರದ ಊರು ಬಾಗಿಲ ಒಳಗಿರುವ ಮಂಟಪಕ್ಕೆ ಕೆತ್ತಿಸುತ್ತಾನೆ. ಅಂದಿನಿಂದಲೂ ಎಮ್ಮೆಲರು ಈ ಉಬ್ಬುಶಿಲ್ಪ ನಮ್ಮ ಕುಲದೇವತೆಗೆ ಸೇರಿದ್ದು ಎಂದು ಪೂಜೆ ಮಾಡುತ್ತಾ ಬಂದಿದ್ದಾರೆ. ಇದು ಈಗಲೂ ನಡೆಯುತ್ತಿದೆ.

ಸತ್ಯವಂತ ಕುಂಟೋಬಳ ನಾಯಕನ ಸಮಾಧಿ : ಈ ಸಮಾಧಿಯು ನಿಡುಗಲ್ಲು ದುರ್ಗದ ಕೆಳ ಅಂತಸ್ತಿನ ವೀರಭದ್ರಕೋಟೆಯ ಒಳಗಡೆ ಇತ್ತೆಂದು ಹೇಳುತ್ತಾರೆ. ಆದರೆ ಕೆಲವು ವರ್ಷಗಳ ಹಿಂದೆ ಈ ಸಮಾಧಿಯನ್ನು ನಿಧಿಗಳ್ಳರು ಕೆಡವಿ ಹಾಕಿದ್ದಾರೆ. ಆದರ ಅವಶೇಷಗಳನ್ನು ಸಹ ಇಲ್ಲಿ ಕಾಣಲಾಗುವುದಿಲ್ಲ. ಕುಂಟೋಬಳನಾಯಕನು ಸತ್ತ ಮೇಲೆ ಆತನ ದೇಹವನ್ನು ಸಮಾಧಿ ಮಾಡಲಾಯಿತು. ಅಂದಿನಿಂದ ಈ ಸಮಾಧಿಗೆ ಎಲ್ಲಾ ವರ್ಗದವರು ಪೂಜೆ ಮಾಡುತ್ತಿದ್ದರೆಂದು ಹೇಳುತ್ತಾರೆ.

ಸತ್ಯವಂತ ಕುಂಟೋಬಳನಾಯಕನು ದೀರ್ಘಕಾಲ ನಿಡುಗಲ್ಲಿನ ಐದು ಜನ ಪಾಳೇಗಾರರಿಗೆ ಸೇವಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಐದನೇ ಪಾಳೇಗಾರ ಹೊಟ್ಟೆಣ್ಣನಾಯಕರು. ಕುಂಟೋಬಳ ನಾಯಕನ ಕೆಲಸವೇನೆಂದರೆ ನಿಡುಗಲ್ಲು ದುರ್ಗದ ಪಾಳೇಗಾರರಿಗೆ ಮುತ್ತಿನ ಛತ್ರಿ ಹಿಡಿಯುವ ಕೆಲಸವಾಗಿತ್ತು. ನಿಡುಗಲ್ಲು ಪಾಳೇಗಾರರು ಪ್ರತಿದಿನ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಕುದುರೆಯ ಮೇಲೆ ತಿರುಪತಿಗೆ ಹೋಗಿ ಪೂಜೆ ಮಾಡಿಸಿ, ಅದೇ ರೀತಿ ವಾಪಸ್ಸು ಬರುತ್ತಿದ್ದರೆನ್ನುತ್ತಾರೆ. ಅವರ ಹಿಂದೆ ಕುಂಟೋಬಳನಾಯಕನು ಕುದುರೆಯ ಪಕ್ಕದಲ್ಲಿಯೇ ಮುತ್ತಿನ ಛತ್ರಿ ಹಿಡಿಯುತ್ತಾ ಹೋಗುತ್ತಿದ್ದನು.

ಒಮ್ಮೆ ಕುಂಟೋಬಳನಾಯಕ ಮತ್ತು ಹೊಟ್ಟಣ್ಣನಾಯಕ ಇಬ್ಬರು ತಿರುಪತಿಯಿಂದ ಪೂಜೆ ಮುಗಿಸಿಕೊಂಡು ಬರುವಾಗ ಕುಂಟೋಬಳನಾಯಕನು ಹೊಟ್ಟಣ್ಣನಾಯಕನಿಗೆ "ಸ್ವಾಮಿ ನನಗೆ ನೀವು

ಐದನೇ ದೊರೆ. ನಿಮ್ಮ ಹಿರಿಯರೆಲ್ಲ ಸ್ವರ್ಗ ಸೇರಿದರೂ ನನಗೆ ಈ ಜನ್ಮದಿಂದ ಸಾಕು ಮಾಡಿಲ್ಲ. ಏಕೆಂದೂ ನನಗೆ ಗೊತ್ತಿಲ್ಲವೆಂದು ಕೇಳುತ್ತಾನೆ." ಸತ್ಯಾತ್ಮನಾದ ಹೊಟ್ಟಣ್ಣನಾಯಕನು ತನ್ನ ದಿವ್ಯ ಆತ್ಮದಿಂದ ಈ ರೀತಿ ಹೇಳುತ್ತಾನೆ. "ನೋಡು ಈ ಜನ್ಮ ನಿನಗೆ ಸಾಕೆಂದರೆ ಒಂದು ಅವಕಾಶವಿದೆ. ಇದರಿಂದ ಮಾತ್ರ ನೀನು ಈ ಜನ್ಮವನ್ನು ಸಾಕು ಮಾಡಿಕೊಳ್ಳಬಹುದು ಎನ್ನುತ್ತಾ, ಐದು ಸಂಸ್ಥಾನದ ದೊರೆಗಳ ಹೆಣ್ಣುಮಕ್ಕಳು ನಿಡುಗಲ್ಲು ದುರ್ಗದ ಆಲದ ಬಾವಿಯಲ್ಲಿ ಗಂಗಮ್ಮನ ಪೂಜೆಯನ್ನು ಮಾಡುತ್ತಾರೆ. ಪೂಜೆಯಾದ ನಂತರ ಒಂದೊಂದು ಎಡೆಯನ್ನು ಗಂಗಮ್ಮನಿಗೆ ತೇಲಿಬಿಟ್ಟು, ನಂತರ ಒಂದೊಂದು ಎಡೆಯನ್ನು ಅಲ್ಲಿದ್ದವರಿಗೆ ಹಂಚುತ್ತಾರೆ. ಆಗ ನೀನು ಆ ಐದು ಎಡೆಗಳನ್ನು ನೀನು ಪಡೆದು ಅವನ್ನು ತಿಂದರೆ ನಿನಗೆ ಈ ಜನ್ಮ ಸಾಕಾಗುತ್ತದೆ. ಅದಕ್ಕೆ ಬರುವ ಸೋಮವಾರ ನೀನು ಆ ಸ್ಥಳಕ್ಕೆ ಹೋಗು ನಿನ್ನಾಸೆ ಈಡೇರುತ್ತದೆ."

ಅದರಂತೆ ಕುಂಟೋಬಳನಾಯಕನು ಐದು ಜನದೊರೆಯ ಹೆಣ್ಮಕ್ಕಳು ಪೂಜೆಯ ಹತ್ತಿರ ಹೋಗಿ, ಅವರು ಕೊಟ್ಟ ತಂಬಿಟ್ಟನ್ನು ತಿಂದು ಕೊನೆ ಉಸಿರೆಳೆಯುತ್ತಾನೆ. ಇದೆಲ್ಲವನ್ನು ಅರಿತಿದ್ದ ಹೊಟ್ಟಣ್ಣನಾಯಕರು ಸಾಯಂಕಾಲ ಬಂದು ಕುಂಟೋಬಳನಾಯಕನಿಗೆ ಮರು ಜೀವ ಕೊಡುತ್ತಾರೆ. ನಂತರ ಕುಂಟೋಬಳನಾಯಕನು ಹೊಟ್ಟಣ್ಣನಾಯಕರಲ್ಲಿ ಪರಿಪರಿಯಾಗಿ ಭಿನ್ನೈಯಿಸಿಕೊಂಡು ನಾನು ಐದು ಪಾಳೇಗಾರರಿಗೆ ಸೇವಕನಾಗಿದ್ದು, ಈ ಜನ್ಮದಲ್ಲಿ ನನಗೆ ನಿರಾಸಕ್ತಿ ಹೊಂದಿದ್ದೇನೆ. ದಯಮಾಡಿ ಈ ಜನ್ಮದಿಂದ ಸಾಕು ಮಾಡು ಎಂದು ಕೇಳಿಕೊಳ್ಳುತ್ತಾನೆ. ಆಗ ಹೊಟ್ಟಣ್ಣರು ಓಬಳನಾಯಕನ ದೈನ್ಯ ಸ್ಥಿತಿಯನ್ನು ನೋಡಿ ಆಸೆಯನ್ನು ಈಡೇರಿಸುತ್ತಾರೆ. ಆತನ ದೇಹವನ್ನು ಸಮಾಧಿ ಮಾಡಿ ಅಂದಿನಿಂದ ಈ ಸಮಾಧಿಗೆ ಪ್ರತಿನಿತ್ಯವು ಪೂಜೆ ಮಾಡಲು ಆಜ್ಞೆಯನ್ನು ಮಾಡುತ್ತಾನೆ. ಅಂದಿನಿಂದ ಸಮಾಧಿ ಇರುವವರೆಗೆ ಪೂಜೆ ನಡೆಯುತ್ತಿತ್ತೆಂದು ಹೇಳುತ್ತಾರೆ.

ಹೆಣ್ಣು ಮಕ್ಕಳ ಕಾಯ್ದ ವೀರರ ವೀರಗಲ್ಲು : ನಿಡುಗಲ್ಲಿನ ದೊಡ್ಡ ಊರು ಬಾಗಿಲ ಪಕ್ಕದಲ್ಲಿ ಒಂದು ವೀರಗಲ್ಲು ಇದೆ. ಇದರ ಮೇಲೆ ಒಂದು ಕಥನ ಹೀಗಿದೆ.

ಕಾಲಿಲ್ಲದ ಕುಂಟನೊಬ್ಬ(ತಿಮ್ಮ) ನಿಡುಗಲ್ಲು ದುರ್ಗದ ಊರು ಬಾಗಿಲಲ್ಲಿ ಕುಳಿತು ಪ್ರತಿದಿನ ಭಿಕ್ಷೆ ಬೇಡುತ್ತಿದ್ದ. ಭಿಕ್ಷೆಯಿಂದ ಬಂದ ಹಣದಿಂದ ತಿನ್ನುವ ಪದಾರ್ಥವನ್ನು ಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ.

ಒಮ್ಮೆ ಈ ಕುಂಟು ತಿಮ್ಮ ನಿಡುಗಲ್ಲು ದೊರೆಗಳ ಮುಮ್ಮಡಿ ಸೈನ್ಯದಲ್ಲಿ ಸೈನಿಕನಾಗಿದ್ದ. ಆ ಸಮಯದಲ್ಲಿ ದೊರೆಗಳಿಗೂ ಖಾಸಿಮ್‌ಖಾನ್ ಎಂಬ ಸರದಾರನು ಮುಮ್ಮಡಿನಾಯಕನಿಗೆ ಸೇರಿದ ದೊಡ್ಡೇರಿ ಕೋಟೆಯನ್ನು ಗೆದ್ದುಕೊಂಡ. ಮುಮ್ಮಡಿನಾಯಕನಿಗೂ ಖಾಸಿಮ್‌ಖಾನನಿಗೂ ಭಾರೀಯುದ್ಧ ನಡೆಯಿತು. ಯುದ್ಧದಲ್ಲಿ ಅನೇಕ ನಿಡುಗಲ್ಲು ವೀರರನ್ನು ಹಿಡಿದು ಖಾನ್ ಬಿಜಾಪುರಕ್ಕೆ ಕಳುಹಿಸಿದ

ಹಾಗೆ ಸೆರೆ ಹಿಡಿದವರಲ್ಲಿ ಕುಂಟನೊಬ್ಬ(ತಿಮ್ಮ). ಈತನು ಯುದ್ಧದಲ್ಲಿ ಕಾಲು ಕಳೆದು ಕೊಂಡಿದ್ದ. ಈತನು ಕಾಲಿಲ್ಲದವನು ಎಂದು ತಿಳಿದು ಅರ್ಧದಾರಿಯಲ್ಲಿಯೇ ಬಿಟ್ಟು ಹೋದರು. ಗಂಡ(ತಿಮ್ಮ) ಯುದ್ಧ ನಿಂತಿದ್ದರೂ ಮನೆಗೆ ಬಾರದ್ದನ್ನು ನೋಡಿ ಹೆಂಡತಿ ಅಗ್ನಿ ಪ್ರವೇಶ ಮಾಡಿ ಸತಿಯಾದಳು. ತಿಮ್ಮ ಮರಳಿ ಕೋಟೆಗೆ ಬಂದಾಗ ವಿಷಯ ತಿಳಿದು ಮರುಗಿದ. ದೊರೆಗಳು ತಿಮ್ಮನಿಗೆ ಮಾನ್ಯಗಳನ್ನು ಬರೆಯಿಸಿಕೊಟ್ಟರು. ಆದರೆ ಅವನ್ನು ದೇವರುಗಳಿಗೆ ಬರೆದುಕೊಟ್ಟು ಭಿಕ್ಷೆಯಿಂದ ಸಾತ್ವಿಕ ಜೀವನ ಸಾಗಿಸಿದ.

ಹೀಗಿರುವಾಗ ಮುಮ್ಮಡಿನಾಯಕನು ಹೈದರಾಲಿಯ ಬಲವಂತದಿಂದ ಚಿತ್ರದುರ್ಗ ಮದಕರಿನಾಯಕನ ಮೇಲೆ ಯುದ್ಧದಲ್ಲಿ ಭಾಗವಹಿಸಲು ಹೋದ. ಊರಿನಲ್ಲಿ ಮಕ್ಕಳು, ಹೆಂಗಸರು, ಮುದುಕರನ್ನು ಬಿಟ್ಟರೆ ಯಾರೂ ಇರಲಿಲ್ಲ. ಈ ಸಮಯದಲ್ಲಿ ದೀವಟಿಗೆ ಕಳ್ಳರ ಗುಂಪೊಂದು ತೊಂಡೇ ಬಾವಿಯ ಕಡೆಯಿಂದ ಬಂದು ಕಂಡ ಕಂಡಲ್ಲಿ ದರೋಡೆ ಸುಲಿಗೆ ಮಾಡುತ್ತಾ ನಿಡುಗಲ್ಲಿಗೆ ನುಗ್ಗಿ ಸಿಕ್ಕಿದೆಲ್ಲವನ್ನು ದೋಚಿ ಊರಿನ ಹೆಣ್ಣು ಮಕ್ಕಳನ್ನು ಸೆರೆಹಿಡಿದು ಎಳೆದುಕೊಂಡು ಹೋಗುತ್ತಿದ್ದರು.

ಇದೆಲ್ಲವನ್ನು ನೋಡಿದ ತಿಮ್ಮನಲ್ಲಿ ಕ್ಷಾತ್ರ ಹೆಚ್ಚುತ್ತಾ ಆ ಕಳ್ಳರ ಮೇಲೆ ಏಕಾಂಗಿಯಾಗಿ ಬಿದ್ದ. ಅವರ ಮೇಲೆ ಯುದ್ಧ ನಡೆಸಿ ಎಲ್ಲರನ್ನು ಹೊಡೆದೋಡಿಸಿದ. ಹೆಣ್ಣು ಮಕ್ಕಳನ್ನು ಬಿಡಿಸಿ ಅಮರನಾದ. ಯುದ್ಧದಿಂದ ಮರಳಿ ಬಂದ ದೊರೆಗಳು ಕುಂಟ ತಿಮ್ಮನ ಕಥೆಯನ್ನು ಕೇಳಿ ಅವನ ಆದರ್ಶವನ್ನು ಎಲ್ಲರೂ ದಯಪಾಲಿಸಬೇಕೆಂದು ಬಾಗಿಲಿನಲ್ಲಿ ವೀರಗಲ್ಲನ್ನು ಕಡಿಸಿ ನಿಡುಗಲ್ಲು ಊರು ಬಾಗಿಲಲ್ಲಿಯೇ ನಡೆಸಿದನು.

ಗುಂಡುಕಲ್ಲಿನ ವೀರರು : ಪಾವಗಡ ಟಾನ್ ಶ್ರೀ ಕನ್ನಿಕಾಪರಮೇಶ್ವರಿ ದೇವಾಲಯದ ಹಿಂಭಾಗ, ಗೋಪಾಲಸ್ವಾಮಿ ಮಾನ್ಯದಲ್ಲಿ ವೀರಗಾರರ ಚಿಕ್ಕ ಗುಡಿಯೊಂದಿದೆ. ಈ ಗುಡಿಗೆ ಇಂದಿಗೂ ಬೇಡ ಜನಾಂಗದವರು ಪೂಜೆ ಸಲ್ಲಿಸುತ್ತಾರೆ.

ಈ ಗುಡಿಯಲ್ಲಿ ವೀರರ ಚಿತ್ರವಾಗಲೀ ವಿಗ್ರಹಗಳಾಗಲೀ ಇಲ್ಲ. ೩ ಗುಂಡು ಕಲ್ಲುಗಳನ್ನು ಇಟ್ಟಿದ್ದಾರೆ. ಅದರಲ್ಲಿ ಒಂದು ಮಾತ್ರ ದೊಡ್ಡದು ಇನ್ನೆರಡು ಚಿಕ್ಕವು. ಇವುಗಳಲ್ಲಿ ದೊಡ್ಡದು ವಲ್ಲಮುದ್ದನಾಯಕ, ಇನ್ನೆರಡು ಕರೇರಂಗನಾಯಕ ಮತ್ತು ಮೀನನಾಯಕ.

ಈ ಮೂರು ಜನ ವೀರರೂ ದುಂಡ್ಲು ನಾಯಕರ ವಂಶಕ್ಕೆ ಸೇರಿದವರು. ಪಾವಗಡದ ಪಾಳೇಗಾರನಿಗೂ ಯಲ್ಲಪ್ಪನಾಯಕನ ಹೊಸಕೋಟೆ ಪಾಳೇಗಾರರಿಗೂ ಒಮ್ಮೆ ಯಾವುದೋ ವಿಷಯಕ್ಕೆ ದೊಂಬಿ ಕಾಳಗ ನಡೆಯಿತು. ಯುದ್ಧದಲ್ಲಿ ಪಾವಗಡದ ಪಾಳೇಗಾರರು ಗೆದ್ದರು. ಈ ಯುದ್ಧದಲ್ಲಿ ಮುದ್ದನಾಯಕ, ಕರೇರಂಗನಾಯಕ, ಮೀನನಾಯಕ ವೀರ ಮರಣವನ್ನಪ್ಪಿದರು. ಇವರಿಗಾಗಿ ಪಾಳೇಗಾರನು ಮಾನ್ಯಗಳನ್ನು ಕೊಡಿಸಿ, ಅವರಿಗಾಗಿ ಗುಡಿಯನ್ನು ಕಟ್ಟಿಸಿದನು.

ಆನೆಬಿದ್ದಜರಿ ಅಥವಾ ಆನೆಗುಂದಿ ಅಥವಾ ಗಜಾಕುಂಡ : 'ಆನೆಬಿದ್ದಜರಿ' ಜಾಗವು ಭೋಗನರಸಿಂಹಸ್ವಾಮಿ ದೇವಾಲಯದ ಹಿಂಭಾಗದಲ್ಲಿದೆ. ಇದರ ಪಕ್ಕದಲ್ಲಿ ಕಾಳಿಕಾಂಬ ದೇವಾಲಯ, ಅರಮನೆಯ ಆವರಣವನ್ನು ಒಳಗೊಂಡಿದೆ. ಈ ಪ್ರದೇಶಕ್ಕೆ ಬೆಟ್ಟದ ತುದಿಯ ಮೇಲಿಂದ ಒಂದು ಆನೆಯು ಬಿದ್ದಿದ್ದರಿಂದ ಆನೆಬಿದ್ದಜರಿ, ಆನೆಬಿದ್ದ ಸರಿ, ಆನೆಗುಂದಿ, ಗಜಾಕುಂಡ ಎಂಬ ಹಲವು ಹೆಸರುಗಳಿಂದ ಕರೆಯುತ್ತಾರೆ. ಇದೇ ಪ್ರದೇಶದಲ್ಲಿ ಬಿದ್ದ ಆನೆಯನ್ನು ಸಮಾಧಿ ಮಾಡಲಾಗಿತ್ತೆಂದು, ಆ ಸಮಾಧಿಯು ಈಗ ಸಂಪೂರ್ಣವಾಗಿ ಹಾಳಾಗಿದೆ ಎಂದು ಹೇಳುತ್ತಾರೆ. ಈ ಸ್ಥಳದ ಬಗೆಗೆ ಒಂದು ಐತಿಹ್ಯ ಹೀಗಿದೆ.

ಒಮ್ಮೆ ಬ್ರಹ್ಮನ ಸಭೆಯಲ್ಲಿ ದೇವದತ್ತ, ಧನಂಜಯ ಎಂಬ ಗಂಧರ್ವರು ಗಾನ ಮಾಡುತ್ತಿದ್ದಾಗ ಭೃಗು ಮಹರ್ಷಿಯು ಸಂತೋಷಪಟ್ಟು, ಆ ಗಾಯಕರನ್ನು ಮತ್ತೊಮ್ಮೆ ಗಾಯನ ಮಾಡಿ ಎಂದು ಕೇಳಿಕೊಳ್ಳುತ್ತಾನೆ. ಆದರೆ ಗಂಧರ್ವರು ಗರ್ವದಿಂದ ಋಷಿಯನ್ನು ಕುರಿತು ಪರಿಹಾಸ್ಯದಿಂದ ಹೀಗೆ ಹಿಯ್ಯಾಳಿಸುತ್ತಾರೆ. "ಫಲಗಳನ್ನು ತಿಂದು ಜೀವಿಸುವ ನಿನಗೆ ಗಂಧರ್ವರ ವಿದ್ಯೆಯ ವಿಷಯವೇಕೆ? ನೀನು ದಂತಹೀನನಾದ ಮುದುಕನು. ನಿನ್ನ ಉದ್ದವಾದ ನೆರೆತಿರುವ ಗಡ್ಡವನ್ನು ನೋಡಿದರೆ ನಮಗೆ ನಗು ಬರುತ್ತದೆ" ಎನ್ನುತ್ತಾರೆ. ಈ ರೀತಿಯಿಂದ ಜರಿಯಲ್ಪಟ್ಟ ಭೃಗು ಮಹರ್ಷಿಯು ಕೋಪಾವೇಶದಿಂದ "ನೀವೆಬ್ಬರೂ ಆನೆ ಮತ್ತು ಬೆಟ್ಟವಾಗಿ ಭೂಲೋಕದಲ್ಲಿ ಹುಟ್ಟಿ" ಎಂದು ಶಾಪಕೊಡುತ್ತಾನೆ. ಶಾಪಕ್ಕೆ ಗುರಿಯಾದ ಗಂಧರ್ವರು ಎಚ್ಚೆತ್ತುಕೊಂಡು ಶಾಪ ವಿಮೋಚನೆಗಾಗಿ ಋಷಿಯನ್ನು ಬೇಡಿಕೊಳ್ಳುತ್ತಾರೆ. ಆಗ ಶಾಂತರೂಪಕ್ಕೆ ಬಂದ ಮಹರ್ಷಿಯು "ಧನಂಜಯನು ಸರ್ವಕಾಲವು ಬೆಟ್ಟವಾಗಿ ಇರಬೇಕೆಂತಲೂ ದೇವದತ್ತನು ಆ ಬೆಟ್ಟದಲ್ಲಿ ಸ್ವಲ್ಪ ಕಾಲ ಆನೆಯಾಗಿ ಸಂಚರಿಸಿ, ಬೆಟ್ಟದ ಕೋಡುಗಲ್ಲಿನಿಂದ ಜಾರಿ ಬಿದ್ದು ಸತ್ತರೆ ಶಾಪ ವಿಮೋಚನೆಯಾಗುವುದೆಂದು" ಹೇಳುತ್ತಾನೆ. ಅದರಂತೆ ಧನಂಜಯನು ಈಗಿನ ದೇವರಾಯನ ದುರ್ಗದ ಬೆಟ್ಟವಾಗಿದ್ದಾನೆ. ದೇವದತ್ತನು ಶಾಪದಂತೆ ಆನೆಯಾಗಿ ಈ ಬೆಟ್ಟದಲ್ಲಿಯೇ ಅನೇಕ ವರ್ಷಗಳವರೆಗೆ ಸಂಚರಿಸಿ, ಈ ಪ್ರದೇಶದಲ್ಲಿದ್ದ ಕೆರೆ-ಕಟ್ಟೆ, ದೊಣೆಗಳನ್ನು ಒಡೆದು, ಗಿಡಮರಗಳನ್ನು ಉರುಳಿಸಿ ಜನರನ್ನು ಗಾಬರಿಗೊಳಿಸುತ್ತಾ ಇದ್ದನು. ಒಂದು ದಿನ ಉನ್ಮತ್ತನಾಗಿ ಬೆಟ್ಟದ ಪಶ್ಚಿಮದಿಕ್ಕಿನಲ್ಲಿರುವ ಗಹನವಾದ ಕೋಡುಗಲ್ಲನ್ನು ಹತ್ತಲು ಹೋಗಿ ಜಾರಿಬಿದ್ದು ಸತ್ತನು. ಆಗ ದೇವದತ್ತನಿಗೆ ಶಾಪ ವಿಮೋಚನೆಯಾಯಿತು. ಆನೆ ಬಿದ್ದ ಜಾಗಕ್ಕೆ 'ಆನೆಬಿದ್ದಜರಿ'ಯೆಂದು ಹೆಸರಾಯಿತು. ಇದೇ ಸ್ಥಳದಲ್ಲಿ ಆನೆಯನ್ನು ಸಮಾಧಿ ಮಾಡಲಾಗಿತ್ತು. ಆದರೆ ಸಮಾಧಿಯನ್ನು ನೆಲಸಮ ಮಾಡಲಾಗಿದೆ ಎಂದು ಹೇಳುತ್ತಾರೆ. ಈ ಬೆಟ್ಟಕ್ಕೆ ಗಂಧರ್ವರು ಆನೆ(ಕರಿ) ಮತ್ತು ಬೆಟ್ಟ(ಗಿರಿ) ಆಗಿ ಬಂದಿದ್ದಕ್ಕೆ 'ಕರಿಗಿರಿ' ಪ್ರದೇಶವೆಂದಾಯಿತು. ನಂತರ ಜಟಕನ ದುರ್ಗ ತದನಂತರ ದೇವರಾಯನ ದುರ್ಗವೆಂದು ಹೆಸರಾಯಿತು ಎಂದು ಹೇಳುತ್ತಾರೆ.

ಬರಗಾಲ ತರಿಸುವ ಆಂಜನೇಯ : ಭಸ್ಮಾಂಗಿ ದುರ್ಗದ ಎಮ್ಮೆದೊಣೆಯ ಮೇಲ್ಭಾಗದಲ್ಲಿ ಒಂದು ಚಿಕ್ಕ ಆಂಜನೇಯನ ಗುಡಿಯಿದೆ. ಇದರ ಒಳಗೆ ದಕ್ಷಿಣಾಭಿಮುಖವಾಗಿ ಪ್ರತಿಷ್ಠಾಪಿಸಿರುವ ಆಂಜನೇಯನ ವಿಗ್ರಹವಿದೆ. ಈ ಗುಡಿಯನ್ನು ಬಂಡೆಯಿಂದ ನಿರ್ಮಾಣ ಮಾಡಲಾಗಿದೆ.

ಪಾಳೇಗಾರರು ಭಸ್ಮಾಂಗಿ ದುರ್ಗವನ್ನು ಕಾಪಾಡುವುದಕ್ಕೆ ಒಂದು ಶ್ರೇಷ್ಠ ದೇವತೆಯನ್ನು ನಿರ್ಮಿಸಬೇಕೆಂದು ಪುರೋಹಿತರನ್ನು ಕೇಳಿದರು. ಅದಕ್ಕೆ ಪುರೋಹಿತರು ಸಮಷ್ಠಿ ಶಕ್ತಿ ಒಳಗೊಂಡಿರುವ ವಾಯುಪುತ್ರನನ್ನು ಸ್ಥಾಪಿಸಿ ಎಂದು ಹೇಳುತ್ತಾರೆ. ಅದರಂತೆ ಎಮ್ಮೆದೊಣೆಯ ಮೇಲ್ಭಾಗದಲ್ಲಿ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಒಂದು ಚಿಕ್ಕ ಗುಡಿಯನ್ನು ಕಟ್ಟುತ್ತಾರೆ. ಅದೇ ಊರಿನ ಒಬ್ಬ ಹೆಣ್ಣುಮಗಳು ಬಹಳ ಆಸೆಯಿಂದ ನಾನು ಮೊದಲಿಗೆ ಈ ದೇವರನ್ನು ಪೂಜೆ ಮಾಡಬೇಕೆಂದು ಪಾಳೇಗಾರರಲ್ಲಿ ಕೇಳಿ ಕೊಳ್ಳುತ್ತಾಳೆ. ಅದರಂತೆ ಪಾಳೇಗಾರನು ಒಪ್ಪಿಗೆ ನೀಡುತ್ತಾನೆ. ಪೂಜೆಯು ಬಹಳ ವೈಭವವಾಗಿ ನಡೆಯುತ್ತದೆ. ಪೂಜೆ ನಡೆದಂದಿನಿಂದ ಮೂರು ವರ್ಷಗಳವರೆಗೆ ಮಳೆಯಿಲ್ಲದೆ, ಬೆಳೆಯಿಲ್ಲದೆ, ಕುಡಿಯುವ ನೀರಿಗೂ ಬರಬರುತ್ತದೆ. ಇದರಿಂದ ಬೇಸತ್ತ ಪಾಳೇಗಾರನು ನಾನು ಅಂಜನೇಯನನ್ನು ಪ್ರತಿಷ್ಠಾಪಿಸಿ ಪೂಜೆಯನ್ನು ಮಾಡಿದ್ದಕ್ಕೆ ಈ ರೀತಿಯ ಬರಗಾಲ ಬಂದಿದೆ. ಆದುದರಿಂದ ಇಂದಿನಿಂದ ಯಾರು ಈ ಆಂಜನೇಯನಿಗೆ ಪೂಜೆಯನ್ನು ಮಾಡಬಾರದು ಎಂದು ನಿಷೇಧಿಸುತ್ತಾನೆ. ಅಂದಿನಿಂದ ಈ ಆಂಜನೇಯನಿಗೆ 'ಬರಗಾಲ ತರಿಸುವ ಆಂಜನೇಯ' ಎಂದು ಕರೆಯುತ್ತಾರೆ.

ಈಗಲೂ ಈ ಆಂಜನೇಯನಿಗೆ ಯಾರು ಪೂಜೆ ಮಾಡುವುದಿಲ್ಲ. ಅಲ್ಲದೆ ಅಲ್ಲಿನ ಜನರು ಯಾರಿಗೂ ಪೂಜೆ ಮಾಡಲು ಅವಕಾಶ ಕಲ್ಪಿಸಿ ಕೊಡುವುದಿಲ್ಲ. ಪೂಜೆ ಮಾಡಿದರೆ ಎಲ್ಲಿ ಮತ್ತೆ ಬರಗಾಲ ಬಂದು ಬಿಡುತ್ತದೋ ಎಂಬ ಭಯ ಅವರಿಸಿದೆ. ಆದ್ದರಿಂದ ಯಾರಿಗೂ ಪೂಜೆ ಮಾಡಲು ಬಿಡುವುದಿಲ್ಲ.

ಭಸ್ಮಾಂಗಿ ದುರ್ಗದ ಬಸವಣ್ಣನ ವಿಗ್ರಹದಡಿಯಲ್ಲಿನ ಗುಪ್ತನಿಧಿ : ಭಸ್ಮಾಂಗಿ ದುರ್ಗದ ದಕ್ಷಿಣ ದಿಕ್ಕಿಗೆ ನೀರು ಹರಿಯುವ ಒಂದು ಜಾಗವಿದೆ. ಇದನ್ನು 'ದಕ್ಷಿಣಕಾಶಿ' ಎಂದು ಕರೆಯುತ್ತಾರೆ. ದಕ್ಷಿಣ ಕಾಶಿಯ ಪಕ್ಕದಲ್ಲಿ ಒಂದು ಗವಿಯಿದೆ. ಇದರಲ್ಲಿ ಒಂದು ಮಗು ಮತ್ತು ಒಬ್ಬ ಸನ್ಯಾಸಿ ವಾಸಿಸುತ್ತಿದ್ದಾರೆ ಎನ್ನುವ ಪ್ರತೀತಿಯಿದೆ. ಇವರು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಪೂಜೆಯ ಕಾರ್ಯದಲ್ಲಿ ತೊಡಗಿರುತ್ತಾರೆ. ಇದಕ್ಕೆ ಸಾಕ್ಷಿಯೆಂಬಂತೆ ಗವಿಯಿಂದ ಊದು ಬತ್ತಿಯ ವಾಸನೆಯು ಹೊರಬಂದು ಈ ಪ್ರದೇಶದಲ್ಲಿ ಹರಡಿರುತ್ತದೆ. ಈ ಗವಿಯೊಳಕ್ಕೆ ಯಾರಾದರೂ ಹೋಗಬೇಕೆಂದರೆ ಮೊದಲಿಗೆ ನಡೆದು ಹೋಗಬೇಕು, ನಂತರ ಕೂತು ಹೆಜ್ಜೆಯ ಮೇಲೆ ದೇಹ ಜರುಗಬೇಕು. ಇನ್ನುಳಿದ ಭಾಗವನ್ನು ಮಲಗಿಕೊಂಡು ತೆವಳಬೇಕು. ಈ ಮೂರು ದಾರಿಗಳನ್ನು ಕ್ರಮಿಸಿದರೆ ಗವಿಯ ಅಂತಿಮ ಹಂತಕ್ಕೆ ಹೋಗುತ್ತೇವೆ ಎಂದು ಹೇಳುತ್ತಾರೆ.

ಗವಿಯಲ್ಲಿ ಒಂದು ದೊಡ್ಡದಾದ ತೀರ್ಪವಿದೆ(Round Botton). ಅದನ್ನು ತಿರುಗಿಸಿದರೆ ಕುಂಭಿಯ ಕೆಳ ಅಂತಸ್ತಿನಲ್ಲಿರುವ ಕೂಗು ಬಸವಣ್ಣನ ವಿಗ್ರಹವು ಪಶ್ಚಿಮ ದಿಕ್ಕಿನಿಂದ ಪೂರ್ವದಿಕ್ಕಿಗೆ ತಿರುಗುತ್ತದೆ. ಆ ಸಂದರ್ಭದಲ್ಲಿ ಬಸವಣ್ಣನ ವಿಗ್ರಹದಡಿ ಇರುವ ಅಪಾರವಾದ ಗುಪ್ತನಿಧಿಯನ್ನು ಪಡೆಯಬಹುದು ಎಂದು ಹೇಳುತ್ತಾರೆ. ಗವಿಯಲ್ಲಿ ತೀರ್ಪವನ್ನು ತಿರುಗಿಸಲು ಹೋದ ವ್ಯಕ್ತಿ ಮೇಲಕ್ಕೆ ಬರಲು ಅಸಾಧ್ಯವಾಗುತ್ತದೆ. ಆದುದರಿಂದ ಯಾರೂ ಈ ಗವಿಯಲ್ಲಿ ಇಳಿಯುವುದಿಲ್ಲ ಎನ್ನುತ್ತಾರೆ.

ಕೋಣದ ಸಹಾಯದಿಂದ ರಾಗಿಕಲ್ಲು ಬೀಸುವುದು : ಭಸ್ಮಾಂಗಿ ದುರ್ಗದ ಕೆಳ ಅಂತಸ್ತಿನ ಪ್ರದೇಶದಲ್ಲಿ ಒಂದು ಬೃಹತ್ ರಾಗಿಕಲ್ಲಿನ ತಳಭಾಗವಿದೆ. ರಾಗಿಕಲ್ಲನ್ನು ಕುರಿತು ಈ ರೀತಿ ಹೇಳುತ್ತಾರೆ.

ರಾಗಿ ಕಲ್ಲನ್ನು ಬೀಸುವವರು ಮನುಷ್ಯರು. ಆದರೆ ಭಸ್ಮಾಂಗಿ ದುರ್ಗದಲ್ಲಿರುವ ರಾಗಿಕಲ್ಲನ್ನು ಬೀಸಬೇಕೆಂದರೆ ಕೋಣವನ್ನೆ ಕಟ್ಟಬೇಕಾಗಿತ್ತು. ಒಂದು ದಿನ ಕೋಣದ ಸಹಾಯದಿಂದ ರಾಗಿಕಲ್ಲನ್ನು ಬೀಸುತ್ತಿರುವಾಗ ಸಾಯಂಕಾಲವಾದರೂ ಕೋಣಕ್ಕೆ ನೀರು ಕುಡಿಸಿರಲಿಲ್ಲ. ಅದು ಬಾಯಾರಿಕೆಯನ್ನು ತಡೆಯಲಾರದೆ ಸಿಟ್ಟಿನಿಂದ ಮೇಲಿನ ಕಲ್ಲನ್ನು ಎಳೆದು ಕೊಂಡು ಓಡಿ ಹೋಯಿತು. ಕೆಳಗಿನ ಕಲ್ಲು ಮಾತ್ರ ಅಲ್ಲೇ ಉಳಿಯಿತು. ಆದರೆ ಮೇಲಿನ ಕಲ್ಲನ್ನು ಯಾವ ಸ್ಥಳದಲ್ಲಿ ಬಿಟ್ಟಿತೋ ಎಂಬ ವಿಚಾರ ಇಂದಿನವರೆಗೂ ತಿಳಿದಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ಇರುವ ಕೆಳಗಿನ ರಾಗಿಯ ಕಲ್ಲನ್ನು ತೋರಿಸಿ ಇದನ್ನು ಕೋಣದ ಸಹಾಯದಿಂದ ಮಾತ್ರ ರಾಗಿಕಲ್ಲನ್ನು ಬೀಸುತ್ತಿದ್ದರು ಎಂದು ಹೇಳುತ್ತಾರೆ.

ಗಿಡ್ಡದ ದಳವಾಯಿ ಮತ್ತು ಗಡ್ಡದ ಮುದ್ದಯ್ಯರ ಸಮಾಧಿಗಳು : ಯಲ್ಲಪ್ಪನಾಯಕನ ಹೊಸಕೋಟೆಯ ನಿಡುಗಲ್ಲು ಊರುಬಾಗಿಲ ಸ್ವಲ್ಪ ದೂರದಲ್ಲಿ ಈ ಸಮಾಧಿಗಳಿವೆ. ಈ ಸಮಾಧಿಗಳನ್ನು ಕುರಿತ ಐತಿಹ್ಯ ಹೀಗಿದೆ.

ಯಲ್ಲಪ್ಪನಾಯಕನ ಸಹಚರರಾದ ಗಿಡ್ಡದದಳವಾಯಿ ಮತ್ತು ಗಡ್ಡದ ಮುದ್ದಯ್ಯರು ಇಡೀ ಸಂಸ್ಥಾನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಇವರು ಬಲಿಷ್ಠ ವೀರರೆಂದು ಹೆಸರು ಪಡೆದಿದ್ದರು. ಇವರನ್ನು ಮಣಿಸಿದರೆ ಸಂಸ್ಥಾನವು ಸೋತಂತೆ ಎಂಬ ವಿಚಾರವೂ ಇತ್ತು.

ಟಿಪ್ಪು ಸುಲ್ತಾನನು ಇಲ್ಲಿನ ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ಹಲವು ದಿನಗಳಿಂದ ಕಾದು ಕುಳಿತನು. ಆದರೆ ಇಬ್ಬರು ವೀರರು ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಇದಕ್ಕೆ ಟಿಪ್ಪುವು ಕುತಂತ್ರದಿಂದ ಈ ಇಬ್ಬರು ವೀರರನ್ನು ಸಾಯಿಸಬೇಕೆಂದು ನಿಶ್ಚಯಿಸಿದನು. ಒಂದು ಭಾರಿ ಇಬ್ಬರು ಇದರಿಂದ ಯುದ್ಧದ ವಿಚಾರವನ್ನು ಚರ್ಚಿಸುವಾಗ ಎರಡು ಬಲಿಷ್ಠ ನಾಯಿಗಳನ್ನು ಮೋಸದಿಂದ ಬಿಟ್ಟು ಕಚ್ಚಿಸಿ ಸಾಯಿಸಿಬಿಟ್ಟರು. ನಂತರ ಸುಲಭವಾಗಿ ಟಿಪ್ಪುಸುಲ್ತಾನನು ಸಂಸ್ಥಾನವನ್ನು ವಶಪಡಿಸಿಕೊಂಡನು. ಇದರಿಂದ ಕಪ್ಪಕಾಣಿಕೆಯನ್ನು ಕೊಡಬೇಕೆಂದು ಯಲ್ಲಪ್ಪನಾಯಕನಿಗೆ ಹಿಂದಿರುಗಿಸಿ ಹೋದನು.

ಯಲ್ಲಪ್ಪನಾಯಕನ ಸಹಚರರ ಮರಣದಿಂದ ಬೇಸರ ತಂದಿತು. ಇವರ ನೆನಪಿಗಾಗಿ ಎರಡು ಸಮಾಧಿಗಳನ್ನು ನಿರ್ಮಿಸಿದನು. ಇವರ ಕುಟುಂಬಕ್ಕೆ ಮಾನ್ಯವನ್ನು ಕೊಡಿಸಿದನು. ಅಂದಿನಿಂದ ಕುಟುಂಬ ವರ್ಗದವರು ಈಗಲೂ ಹಲವು ಆಚರಣೆಗಳೊಂದಿಗೆ ಉತ್ಸವಗಳನ್ನು ಮಾಡುತ್ತಾರೆ. ಈ ಸಮಾಧಿಯ ಅಕ್ಕಪಕ್ಕದಲ್ಲಿ ಇನ್ನೂ ಅನೇಕ ಸಮಾಧಿಗಳಿವೆ. ಇವು ಪಾಳೇಗಾರರ ಸಮಾಧಿಗಳು ಎಂದು ಸ್ಥಳೀಯರು ಹೇಳುತ್ತಾರೆ.

ಸುಂದರಿ ಚಿಕ್ಕಮಲ್ಲಮ್ಮ ರೇಖಾಚಿತ್ರ : ಮಿಡಿಗೇಶಿದುರ್ಗದ ಮಧ್ಯಭಾಗದ ಬೃಹತ್ ಬಂಡೆಗೆ ಸುಂದರಿ ಚಿಕ್ಕಮಲ್ಲಮ್ಮಳ ಚಿತ್ರವನ್ನು ಕಲ್ಲಿನಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಕೆಲವರು ಮಿಡಿಗೇಶಿಯಮ್ಮ ಎಂದು ಕರೆದರೆ, ಕೆಲವರು ಸುಂದರಿ ಚಿಕ್ಕಮಲ್ಲಮ್ಮಳ ಚಿತ್ರವೆಂದು ಹೇಳುತ್ತಾರೆ. ಆದರೆ ಈ ಚಿತ್ರವು ಸುಂದರಿ ಚಿಕ್ಕಮಲ್ಲಮ್ಮಳದೇ ಎಂದು ಹೇಳುವ ಜನರು ಹೆಚ್ಚಿರುವುದರಿಂದ ಆ ಐತಿಹ್ಯವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಅದರ ಐತಿಹ್ಯ ಹೀಗಿದೆ.

ಸೆಟ್ಟಿನಾಡು ಜನಾಂಗಕ್ಕೆ ಸೇರಿದ ಸುಂದರಿ ಚಿಕ್ಕಮಲ್ಲಮ್ಮಳು ತನ್ನ ಪತಿಯನ್ನು ಕಳೆದುಕೊಂಡು ಪರಿತಪಿಸುತ್ತಿದ್ದಳು. ಈಕೆಯನ್ನು ಮಹಮ್ಮದೀಯರು ಮುತ್ತಿಗೆಯ ಸಂದರ್ಭದಲ್ಲಿ ಬಂಧಿಸಿ ಮಿಡಿಗೇಶಿ ಕೋಟೆಯಲ್ಲಿ ತಂದು ಸೆರೆಯಿಟ್ಟರು. ಆಕೆಯು ತುಂಬ ದೈವ ಭಕ್ತಳಾಗಿದ್ದಳು. ಸುಂದರಿ ಚಿಕ್ಕಮಲ್ಲಮ್ಮಳು ಸೆರೆಯಲ್ಲಿದ್ದಾಗ ಒಂದು ದಿನ ಅಲ್ಲಿಯೇ ಇದ್ದ ಮಲ್ಲೇಶ್ವರ ಸ್ವಾಮಿಯನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಲು ಬಂಡೆಯೊಡೆದು ದೈವಕೃಪೆ ದೊರೆಯಿತು. ಇದರಿಂದ ಸುಂದರಿ ಚಿಕ್ಕಮಲ್ಲಮ್ಮಳು ಸೆರೆ ಮನೆಯಿಂದ ಹೊರಬರಲು ಅವಕಾಶವಾಯಿತು. ಅಲ್ಲಿಂದ ಚಿಕ್ಕಮಲ್ಲಮ್ಮಳು ತನ್ನ ಪತಿವ್ರತಾ ಧರ್ಮವನ್ನು ಉಳಿಸಿಕೊಳ್ಳಲು ಬೆಟ್ಟವನ್ನು ಇಳಿದು ಶಿವಾಲಯದ ಮುಂಭಾಗದಲ್ಲಿದ್ದ ಅಗ್ನಿಕುಂಡಕ್ಕೆ ಆಹುತಿಯಾದಳು. ಇಂತಹ ಸಾಧ್ವಿಯ ನೆನಪಿಗಾಗಿ ಬೆಟ್ಟದ ಮಧ್ಯ ಭಾಗದ ಬಂಡೆಯ ಮೇಲೆ ಈಶಾನ್ಯ ದಿಕ್ಕಿಗೆ ಸುಮಾರು ಎರಡು ಎತ್ತರದ ಸುಂದರಿ ಚಿಕ್ಕಮಲ್ಲಮ್ಮಳನ್ನು ಬಿಡಿಸಲಾಗಿದೆ.

ಈ ಚಿತ್ರಕ್ಕೆ ಸುತ್ತಲ ಸಮುದಾಯದವರು ಹಬ್ಬ ಮತ್ತು ಇತರೆ ದಿನಗಳಲ್ಲಿ ಪೂಜೆ, ಪುನಸ್ಕಾರಗಳನ್ನು ಮಾಡುತ್ತಾರೆ. ಈ ಚಿತ್ರವು ಯಾವುದೇ ಕ್ಷತಿಯಾಗದೆ ಉಳಿದುಕೊಂಡಿದೆ.

ಹುಲಿಯ ರೇಖಾಚಿತ್ರ : ಹುಲಿಯೂರು ದುರ್ಗದ ಕುಂಭೀಯ ಪೂರ್ವಭಾಗದಲ್ಲಿ ಒಂದು ಗುಂಡಿನ ಮೇಲೆ ಹುಲಿಯನ್ನು ಕೊಂದು ದಕ್ಷಿಣ ದಿಕ್ಕಿಗೆ ಎಳೆದೊಯ್ಯುವ ರೇಖಾ ಚಿತ್ರವಿದೆ. ಹುಲಿಯ ದೇಹದಿಂದ ಹೊರಹೋಗುವ ರಕ್ತಕ್ಕೆ ಒಂದು ಸಣ್ಣ ಕಾಲುವೆಯನ್ನು ಸಹ ಕೆತ್ತಲಾಗಿದೆ.

ಈ ದುರ್ಗವು ದಟ್ಟವಾದ ಕಾಡನ್ನು ಹೊಂದಿತ್ತು. ಇಲ್ಲಿ ಕಾಡು ಮೃಗಗಳು ಹೆಚ್ಚಾಗಿ ವಾಸಿಸುತ್ತಿದ್ದವು. ಈ ದುರ್ಗವು ಹುಲಿಗಳ ತವರೂರಾಗಿತ್ತು. ಪ್ರಾರಂಭದಲ್ಲಿ ಈ ಪ್ರದೇಶವನ್ನು ಚನ್ನಪಟ್ಟಣದ ಜಗದೇಕರಾಯನು ಆಳುತ್ತಿದ್ದನು. ನಂತರ ಮಾಗಡಿ ಇಮ್ಮಡಿ ಕೆಂಪೇಗೌಡನು ಈ ದುರ್ಗವನ್ನು

ವಶಪಡಿಸಿಕೊಂಡು, ಕೋಟೆಕೊತ್ತಲ ನಿರ್ಮಿಸಲು ಪ್ರಾರಂಭಿಸುತ್ತಾನೆ. ಒಂದು ಬಾರಿ ಮಾಗಡಿ ಇಮ್ಮಡಿ ಕೆಂಪೇಗೌಡನು ಬೆಟ್ಟವನ್ನು ಹತ್ತುವಾಗ ಹುಲಿಯು ಎದುರಾಗುತ್ತದೆ. ಇದರಿಂದ ಧೈರ್ಯಗೆಡದೆ ಹೋರಾಡಿ ತನ್ನ ಕತ್ತಿಯಿಂದ ಸಾಯಿಸುತ್ತಾನೆ. ಹುಲಿಯ ದೇಹವನ್ನು ಈ ದುರ್ಗದಲ್ಲಿ ಎಳೆದಾಡುತ್ತಾನೆ. ಈ ಘಟನೆಯ ಸಲುವಾಗಿ ಮಾಗಡಿ ಇಮ್ಮಡಿ ಕೆಂಪೇಗೌಡನು "ಹುಲಿಯನ್ನು ಕೊಂದ ರೇಖಾಚಿತ್ರವನ್ನು ದುರ್ಗದ ಕುಂಭಿಯ ಮೇಲೆ ಬಿಡಿಸಿ, ಹುಲಿಯನ್ನು ಒಳಗೊಂಡ ಪ್ರದೇಶಕ್ಕೆ, ದುರ್ಗಕ್ಕೆ ಕೋಟೆಕಟ್ಟಿಸಿ, ಊರನ್ನು ಸ್ಥಾಪಿಸಿ, ಹುಲಿಯೂರುದುರ್ಗ ಎಂದು ಹೆಸರು ಇಡುತ್ತಾನೆ. ಅಂದಿನಿಂದ ದುರ್ಗಕ್ಕೆ ಮತ್ತು ಊರಿಗೆ 'ಹುಲಿಯೂರುದುರ್ಗ' ಎಂಬ ಹೆಸರು ರೂಢಿಯಲ್ಲಿದೆ ಎಂದು ಹೇಳುತ್ತಾರೆ.

ಸಂಕೋಲೆ ಬಸವಣ್ಣನ ಗುಡಿ : ಇದು ಹುತ್ರಿದುರ್ಗದ ಬುಡದ ಊರ ಮಧ್ಯದಲ್ಲಿದೆ. ಈ ಬಸವಣ್ಣನನ್ನು ಸರಪಣಿಯಿಂದ ಕಟ್ಟಿದ ಹಾಗೆ ಶಿಲ್ಪಗಾರನು ಕೆತ್ತಿರುವನು. ಇದಕ್ಕೆ ಸಂಕೋಲೆಯನ್ನು ಹಾಕಿ ಬಿಗಿದಿರುವುದರಿಂದ ಸಂಕೋಲೆ ಬಸವಣ್ಣನೆಂದು ಕರೆಯುತ್ತಾರೆ.

ಈ ದುರ್ಗದಲ್ಲಿ ಒಂದು ಬಸವನನ್ನು ಯಾವುದೇ ತಡೆಯಿಲ್ಲದೆ ಮೇಯಲು ಬಿಡಲಾಗುತ್ತಿತ್ತು. ಹಾಗೆ ಬಿಟ್ಟಿದ್ದ ಬಸವನು ದಿನಾಲು ಇಲ್ಲಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ವಡೇಗಟ್ಟದ ಬಯಲಿನಲ್ಲಿನ ಗದ್ದೆ ಮೇಯಲು ಹೋಗುತ್ತಿತ್ತು. ಇದರಿಂದ ರೈತರ ಗದ್ದೆಯು ದಿನಾಲು ನಾಶಗೊಳ್ಳುತ್ತಿತ್ತು. ರೈತರು ಈ ರೀತಿ ಮೇಯುವುದನ್ನು ತಡೆಯುವುದಕ್ಕಾಗಿ ಕಾದು ಕುಳಿತರು. ಮೇಯಲು ಬಂದ ಬಸವನನ್ನು ಹಿಡಿದು ತಂದು ಹುತ್ರಿದುರ್ಗದ ಪಾಳೇಗಾರನಿಗೆ ನಡೆದ ವಿಚಾರವನ್ನು ಹೇಳಿದರು. ಆಗ ಪಾಳೇಗಾರನು ಕಬ್ಬಿಣದ ಸರಪಣಿಯನ್ನು ತರಿಸಿ ಬಸವನನ್ನು ಕಟ್ಟಿ ಹಾಕಿಸಿದನು. ಅದು ಕಾಲನಂತರ ಸಂಕೋಲೆ ಇದ್ದ ಹಾಗೆಯೇ ಕಲ್ಲಾಯಿತು. ಅಲ್ಲಿಂದ ಈ ಬಸವನಿಗೆ 'ಸಂಕೋಲೆ ಬಸವ' ಎಂದು ಹೆಸರಾಯಿತು. ಈ ಘಟನೆಯು ವಡೇಗಟ್ಟದ ಗೌಡನಿಂದ ನಡೆಯಿತೆಂದು ಆತನ ಕನಸಿನಲ್ಲಿ ಹೋಗಿ ಈ ರೀತಿ ಹೇಳಿತು. "ನನ್ನನ್ನು ಈ ಸ್ಥಿತಿಗೆ ತಂದ ಪ್ರಾಯಶ್ಚಿತಕ್ಕಾಗಿ ನೀವು ಪ್ರತಿವರ್ಷ ಶ್ರಾವಣದಲ್ಲಿ ವಾದ್ಯ ಸಮೇತರಾಗಿ ಬಂದು ಪೂಜೆಯನ್ನು ಮಾಡಿಕೊಂಡು ಹೋಗಬೇಕೆಂದು ಹೇಳಿತು". ಅದರಂತೆ ಪ್ರತಿವರ್ಷವೂ ಪೂಜೆಯನ್ನು ಮಾಡುತ್ತಿದ್ದಾರೆ. ಗೌಡನು ಒಂದು ಬಾರಿ ಪೂಜೆ ಮಾಡುವುದನ್ನು ತಪ್ಪಿಸಿದ್ದನು. ಅದಕ್ಕೆ ಪ್ರತಿಯಾಗಿ ಬಸವನು ಗೌಡನ ಕನಸಿನಲ್ಲಿ ಬಂದು ಅಟ್ಟಿಸಿಕೊಂಡು ತನ್ನ ಕೊಂಬಿನಿಂದ ಗುದ್ದಿತೆಂದು ಹೇಳುತ್ತಾರೆ. ಅದಕ್ಕೆ ತಪ್ಪದೆ ಶ್ರಾವಣಮಾಸದಲ್ಲಿ ಸಂಕೋಲೆ ಬಸವನಿಗೆ ಪೂಜೆಯನ್ನು ಮಾಡುತ್ತಿದ್ದಾರೆ.

ಒಟ್ಟಾರೆ ಮೇಲಿನ ದೈವ ಸಂಬಂಧೀ ಮತ್ತು ಇನ್ನಿತರ ಎಲ್ಲ ಐತಿಹ್ಯಗಳನ್ನು ಗಮನಿಸಿದರೆ ತುಮಕೂರು ಜಿಲ್ಲೆಯ ಸಮುದಾಯದ ಬದುಕು ಸ್ಥಳೀಯ ಕೋಟೆಗಳೊಂದಿಗೆ ಬಿಡಿಸಲಾರದ ನಂಟನ್ನು ಹೊಂದಿವೆ. ಈ ಐತಿಹ್ಯಗಳು ಆಯಾ ಸಂದರ್ಭದಲ್ಲಿ ಸಮುದಾಯವು ಹೊಂದಿದ ಬಿಕ್ಕಟ್ಟನ್ನು ಸಂಘರ್ಷವನ್ನು ಬದುಕಲಿಕ್ಕಾಗಿ ಮಾಡಿಕೊಂಡ ಒಪ್ಪಂದದ ಕುರುಹುಗಳಾಗಿವೆ.

ಈ ಐತಿಹ್ಯಗಳು ಬರೀ ಯಾವುದೋ ಒಂದು ಕಾಲಘಟ್ಟದಲ್ಲಿ ನಿರ್ಮಾಣಗೊಂಡಿಲ್ಲ. ಈ ನಿರ್ಮಾಣದ ಪ್ರಕ್ರಿಯೆ ನಿರಂತರವಾದುದು. ಹಲವಾರು ಐತಿಹ್ಯಗಳು ಪೌರಾಣೀಕರಣಗೊಳ್ಳಲು, ರೂಪಾಂತರ ಹೊಂದಲು ಮುಖ್ಯವಾಗಿ ಒಂದು ಜೀವಂತ ಸಮುದಾಯ ಐತಿಹ್ಯಗಳೊಂದಿಗೆ, ಕೋಟೆಗಳೊಂದಿಗೆ ಮಾಡಿದ ನಿರಂತರ ಸಂವಾದವೇ ಕಾರಣವಾಗಿದೆ. ಈ ಸಂವಾದ ಪ್ರಸ್ತುತ ಸಂದರ್ಭದಲ್ಲೂ ಇದ್ದು ಇವು ಹೀಗೆ ಮುಂದುವರಿದುಕೊಂಡು ಹೋಗುತ್ತವೆ. ಯಾವಾಗ ಸಮುದಾಯದೊಂದಿಗೆ ಕೋಟೆಗಳ ಸ್ಮಾರಕಗಳು ಸಂವಾದ ಮಾಡಲು ಸೋಲುತ್ತವೆಯೋ ಆ ಸ್ಮಾರಕಗಳ ಸ್ಮೃತಿಗಳು ಸಮುದಾಯದಿಂದ ಮರೆಯಾಗುತ್ತವೆ. ಹಾಗೆ ಮರೆಯಾದ ಸ್ಮಾರಕಗಳ ಸ್ಮೃತಿಗಳು ಕೋಟೆಯೊಳಗೆ ಆಚರಣೆಗಳಲ್ಲಿ ಯಾವುದೇ ಪ್ರಾಧಾನ್ಯತೆಯನ್ನು ವಹಿಸಿಕೊಳ್ಳದೇ ಬರೀ ಕತೆಗಳಾಗಿ ಉಳಿದುಕೊಂಡಿದೆ. ಇದರ ಮುಂದಿನ ಪ್ರಕ್ರಿಯೆಯಾಗಿ ಈ ಕತೆಗಳೂ ಮರೆತು ಹೋಗಬಹುದು. ಇವೆಲ್ಲವುಗಳನ್ನು ಹಿಡಿದಿಡುವ ಪ್ರಯತ್ನವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಒಂದು ಪ್ರದೇಶದ ಭೌಗೋಳಿಕ, ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವಾಗ ಕಂಠಸ್ಥ ಪರಂಪರೆಯಿಂದ ಸಿಗಬಹುದಾದ ಮೌಖಿಕ ಆಕರಗಳು ಚರಿತ್ರೆಯನ್ನು ನಿರ್ಮಿಸಲು ಐತಿಹ್ಯಗಳು ನೆರವಾಗಬಲ್ಲವು. ಐತಿಹ್ಯಗಳಿಂದ ಚರಿತ್ರೆಗೆ ವಿರುದ್ಧವಾದ ಮೌಖಿಕ ಚರಿತ್ರೆ ನಿರೂಪಿತವಾಗಿರುತ್ತದೆ. ಯಾವುದು ಲಿಖಿತ ಇತಿಹಾಸದಿಂದ ತಿರಸ್ಕರಿಸುವುದೋ ಅದನ್ನು ಜನಪದ ಇತಿಹಾಸ ಕಟ್ಟಿಕೊಡಲು ಪ್ರಯತ್ನಿಸುತ್ತದೆ ಎಂಬುದನ್ನು ಇಲ್ಲಿನ ಐತಿಹ್ಯಗಳ ಅಧ್ಯಯನದಿಂದ ಗುರುತಿಸಬಹುದಾಗಿದೆ. ಇಲ್ಲಿ ಅಂತ ಶಕ್ತಿಯ ಪವಾಡದ ಸ್ಥಳಮಹಿಮೆ, ಕ್ಷೇತ್ರಮಹಿಮೆ, ವಸ್ತುಮಹಿಮೆ ಬಗೆಗಿನ ಐತಿಹ್ಯಗಳ ಆಶಯದ ಹಿನ್ನೆಲೆಯನ್ನು ಗುರುತಿಸಲು ಸಾಧ್ಯವಾದರೆ ಇತಿಹಾಸದ ಪ್ರಾಥಮಿಕ ಅಲ್ಲದಿದ್ದರೂ ಆನುಷಂಗಿಕ ಆಕರ ಸಾಮಾಗ್ರಿಗಳಾಗಿ ಬಳಸಿಕೊಳ್ಳಬಹುದು ಎಂಬುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದು.

ಒಟ್ಟಾರೆಯಾಗಿ ಇತಿಹಾಸವನ್ನು ಕಟ್ಟಿಕೊಡುವುದರ ಮೂಲಕ ದಾಖಲೆಗಳಿಲ್ಲದ ಎಷ್ಟೋ ಅಂಶಗಳು ಕಂಠಸ್ಥ ಪರಂಪರೆಯ ಐತಿಹ್ಯಗಳಲ್ಲಿ ಕಾಣಸಿಗುತ್ತವೆ. ಕೋಟೆಯಲ್ಲಿನ ಸ್ಮಾರಕಗಳಾದ ದೊಣೆಗಳು, ದೇವಾಲಯಗಳು, ವೀರಗಲ್ಲುಗಳು, ಉಬ್ಬುಶಿಲ್ಪಗಳು, ರೇಖಾಚಿತ್ರಗಳು, ವಿಗ್ರಹಗಳು, ಮಂಟಪಗಳು ಸಹ ಸಿದ್ಧ ಇತಿಹಾಸದಲ್ಲಿ ಗಮನಾರ್ಹವೆನಿಸಿದಷ್ಟೇ ಐತಿಹ್ಯಗಳ ಮುಖೇನ ಅವುಗಳ ಚರಿತ್ರೆ ಇನ್ನಷ್ಟು ಸ್ಪಷ್ಟನೆ ಪಡೆಯುತ್ತವೆ. ಹೀಗಾಗಿ ಶಿಷ್ಟ ಇತಿಹಾಸದಿಂದ ದೊರೆಯಲಾರದ ಹೆಚ್ಚಿನ ಮಾಹಿತಿಯನ್ನು ಜನಪದ ಇತಿಹಾಸವಾದ ಕಂಠಸ್ಥ ಪರಂಪರೆಯಿಂದ ಒಂದು ಸಂಸ್ಥಾನದ ಇತಿಹಾಸವನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ ಎನ್ನಬಹುದು.

ಅಡಿಟಿಪ್ಪಣಿಗಳು

೧. ಶಂಬಾಜೋಷಿ, ಎಡೆಗಳು ಹೇಳುವ ಕಂನಾಡ ಕಥೆ, ಪು.೬,೭, ೧೯೪೭

೨. ಹಂಪನಾ, ಚಂದ್ರಕೊಡೆ, ಪು.೩, ೧೯೯೯

೩. ಡಾ.ವಿಶ್ವನಾಥ, ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ, ಪು.೩೭

೪. ಶ್ರೀನಿವಾಸ ಎಂ.ಡಿ., ಮಧುಗಿರಿ ಇತಿಹಾಸ, ಪು.೫

೫. ಅದೇ, ಪು.೬

೬. ಡಾ.ವಸು ಎಂ.ವಿ.(ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು.೨೨೬

೭. ಅದೇ, ಪು.೨೩೧

೮. ಕನ್ನಡ ರತ್ನಕೋಶ, ಪು.೧೯೩

೯. ಶ್ರೀನಿವಾಸ ಎಂ.ಡಿ., ಪೂರ್ವೋಕ್ತ, ಪು.೮೭

೧೦. ಕನ್ನಡ ರತ್ನಕೋಶ, ಪು.೨೭೩

೧೧. ಡಾ.ವಸು ಎಂ.ವಿ., ಪೂರ್ವೋಕ್ತ, ಪು.೨೨೬

೧೨. ಶ್ರೀನಿವಾಸ ಎಂ.ಡಿ., ಪೂರ್ವೋಕ್ತ, ಪು.೨೨೬

೧೩. ಕರ್ನಾಟಕ ಗೆಜೆಟಿಯರ್ ೩

೧೪. EC.Vol.IV, ಮೈಸೂರು ಜಿ., Ch.554

೧೫. ಡಾ.ವಸು ಎಂ.ವಿ., ಪೂರ್ವೋಕ್ತ, ಪು.೨೪೬

೧೬. EC.Vol.XII, ಮಿಡಿಗೇಶಿ-88, 91

೧೭. ಕನ್ನಡ ರತ್ನಕೋಶ, ಪು.೨೦

೧೮. ಡಾ.ವಸು ಎಂ.ವಿ., ಪೂರ್ವೋಕ್ತ, ಪು.೪೯

೧೯. EC.Vol.XII, ಪಾವಗಡ-೫೨, ಕ್ರಿ.೧೨೩೨

೨೦. ಕರಾಕೃ, ಚಿತ್ರಕಲ್ಲು ಮದಕರಿ, ಪು.೩

೨೧. ಕನ್ನಡ ರತ್ನಕೋಶ, ಪು.೧೨೭

೨೨. ಚಲುವರಾಜನ್ ವಿ.ಆರ್., ಪಾವಗಡ ತಾಲ್ಲೂಕು ದರ್ಶನ, ಪು.೧೭, ೧೯೮೭

೨೩. ಮೈಸೂರು ಗೆಜೆಟಿಯರ್, ಸಂ.೨, ಪು.೧೯೫, ೧೯೩೭

೨೪. ಶಿವತಾರಕ್ ಕೆ.ಬಿ., ತುಮಕೂರು ಜಿಲ್ಲೆಯ ಪ್ರಾಗಿತಿಹಾಸ, ಜಯಮಂಗಲಿ, ಪು.೯

೨೫. ಭಾಸ್ಕರಪ್ಪ ಸಿ.ಎನ್., ತುಮಕೂರು ಜಿಲ್ಲಾ ದರ್ಶನ, ಪು.೬೦

೨೬. ಗಾಯಿತ್ರಿಸ್ವಾಮಿ, ಪದ್ಮಶಾಲಿ ಪತ್ರಿಕೆ, ಪು.೩೭

೨೭. EC.Vol.XII, ತುಮಕೂರು-೪೫

೨೮. ಭಾಸ್ಕರಪ್ಪ ಸಿ.ಎನ್., ಪೂರ್ವೋಕ್ತ, ಪು.೬೦

೨೯. ಕನ್ನಡ ರತ್ನಕೋಶ, ಪು.೪೫

೩೦. ಸದಾಶಿವಪ್ಪ ಹು.ಪು., ಹುಲಿಯೂರುದುರ್ಗ, ಪು.೨

೩೧. ಕನ್ನಡ ರತ್ನಕೋಶ, ಪು.೨೬೮

೩೨. ಪುಟ್ಟಣ್ಣಯ್ಯ ಎಂ.ಎಸ್., ಹಾಗಲವಾಡಿ ಪಾಳೇಗಾರರು, ಪು.೧೧, ೧೨

೩೩. ಕನ್ನಡ ರತ್ನಕೋಶ, ಪು.೨೩೬

೩೪. EC.Vol.XII, ಸಿರಾ-೭, ಕ್ರಿ.ಶ.೧೧೨೬

೩೫. EC.Vol.XII, ಸಿರಾ-೮, ಕ್ರಿ.ಶ.೧೩೩೭

೩೬. ಡಾ.ಪುರುಷೋತ್ತಮ ಬಿಳಿಮಲೆ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ.೫, ಸಂ.೨, ಪು.೨, ೧೯೯೯

೩೭. ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪು.೨೫, ೧೯೮೦

೩೮. ಚಿದಾನಂದಮೂರ್ತಿ ಎಂ., ಜನ-ಜನಪದ-ಜಾನಪದ, ಪು.೪೪೭, ೨೦೦೨

೩೯. ಸತ್ಯಾನಾಥ್ ಟಿ.ಎಸ್., ನರಬಲಿ : ಒಂದು ಸಂಸ್ಕೃತಿಯ ಅಧ್ಯಯನ, ಪು.೨೭, ೧೯೭೯

೪೦. ಅದೇ, ಪು.೨೫

೪೧. ಅದೇ, ಪು.೪೧

೪೨. ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪು.೧೫, ೧೯೯೪

೪೩. ಅದೇ, ಪು.೨೫

ಅಧ್ಯಾಯ ೬

ನಂಬಿಕೆ, ಆಚರಣೆಗಳಿಂದ ಕೋಟೆ ಸ್ಮಾರಕಗಳ ಸಂರಕ್ಷಣೆ

ನಂಬಿಕೆ, ಆಚರಣೆಗಳಿಂದ ಕೋಟೆ ಸ್ಮಾರಕಗಳ ಸಂರಕ್ಷಣೆ

ಸ್ಮಾರಕಗಳ ನಿರ್ದಿಷ್ಟ ವ್ಯಕ್ತಿ ಮತ್ತು ಘಟನೆಗಳಿಗೆ ಸಂಬಂಧಿಸಿದಂತೆ ಜ್ಞಾಪಕಾರ್ಥವಾಗಿ ನಿರ್ಮಿಸಿದವುಗಳಾಗಿವೆ. ಅವುಗಳಲ್ಲಿ ದೇವಾಲಯ, ವೀರಗಲ್ಲು, ಮಾಸ್ತಿಗಲ್ಲು, ವಿಗ್ರಹಗಳು, ಕೋಟೆಕೊತ್ತಲಗಳು, ಕೆರೆ-ಕಟ್ಟೆಗಳು, ವಿಗ್ರಹಗಳು ಮುಂತಾದವುಗಳನ್ನು ಹೆಸರಿಸಬಹುದಾಗಿದೆ. ರಕ್ಷಣೆ ಎಂದರೆ ಇಂಗ್ಲೀಷ್‌ನಲ್ಲಿ Conservation ಎನ್ನುತ್ತಾರೆ. ಹೀಗೆಂದರೆ ಕಾಪಾಡುವಿಕೆ, ಜೋಪಾನ ಮಾಡುವಿಕೆ, ಪಾಲನೆ ಮಾಡುವಿಕೆ ಎಂಬರ್ಥಗಳಿವೆ. ಇನ್ನೊಂದು ರೀತಿಯಲ್ಲಿ Preservation ಎನ್ನುವುದು ಸುರಕ್ಷಿತ, ಸಂರಕ್ಷಣೆ ಮುಂತಾದ ಅರ್ಥಗಳು ಕಂಡುಬರುತ್ತವೆ. ಇಂತಹ ಸ್ಮಾರಕಗಳೆಲ್ಲವೂ ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡಿರುತ್ತವೆ ಎಂಬುದು ನಿಶ್ಚಿತ. ಇವುಗಳನ್ನು ಪರಂಪರೆಯಿಂದಲೂ ನಾಶಗೊಳಿಸದೆ ಸಂರಕ್ಷಣಾ ಕಾರ್ಯಗಳನ್ನು ಕೈಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ.

ಸ್ಮಾರಕಗಳ ಸಂರಕ್ಷಣೆಯು ಎರಡು ವಿಧದಲ್ಲಿ ನಡೆಯುತ್ತಿದೆ. ಒಂದು ಪ್ರಭುತ್ವ ಶಾಹಿ(ಪ್ರಾಚ್ಯವಸ್ತು ಸಂಗ್ರಹಾಲಯ)ಗಳಿಂದ ಸಂರಕ್ಷಣೆ ಮತ್ತೊಂದು ಜನಸಮುದಾಯಗಳಿಂದ ಸಂರಕ್ಷಣೆ. ಇವೆರಡರಿಂದಲೂ ಸ್ಮಾರಕಗಳು ಹೇಗೆ ಸಂರಕ್ಷಿತಗೊಂಡಿವೆ ಎಂಬುದನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ವಸಾಹತುಶಾಹಿ ಶಿಕ್ಷಣ ಪ್ರಭಾವದಿಂದ ಭಾರತೀಯ ಸಮಾಜದ ನವಮನ್ವಂತರ ತಂದುಕೊಟ್ಟಿರುವುದು ಕಾಣಬಹುದು. ಆದರೆ ಬಹುಮುಖಿ ಸಂಸ್ಕೃತಿಯ ನಾಡಾದ ಭಾರತವು ವಸಾಹತು ಸಂಸ್ಕೃತಿಗೆ ಬಹುಮುಖಿವಾಗಿಯೇ ಪ್ರತಿಕ್ರಿಯಿಸಿದರೆ, ಈ ಸಮಾಜದಲ್ಲಿರುವ ಏಣಿಶ್ರೇಣಿ ರಚನೆಯ ಸಂದರ್ಭದಲ್ಲಿ ಸಾಮ್ರಾಜ್ಯ ಸಂಸ್ಕೃತಿಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿ, ಕೆಳಸ್ತರದಲ್ಲಿರುವ ಪಾಳೆಯಪಟ್ಟು ಸಂಸ್ಥಾನ ಸಂಸ್ಕೃತಿಯನ್ನು ಮತ್ತು ಅವರೊಂದಿಗೆ ಇದ್ದ ಜನಸಮುದಾಯ ಸಂಸ್ಕೃತಿಯನ್ನು ನಿರ್ಲಕ್ಷ್ಯಗೊಳಿಸಿ ಅಧ್ಯಯನ ಮಾಡದೇ ಇರುವುದು ಕಂಡುಬರುತ್ತದೆ. ಇಂತಹ ಏಣಿಶ್ರೇಣಿ ಬೇಧಭಾವಗಳನ್ನು ಪಾಳೆಯಪಟ್ಟುಗಳ ಸ್ಮಾರಕಗಳ ಸಂರಕ್ಷಣೆಯಲ್ಲಿಯೂ ತೋರಿರುವುದು ಕಂಡುಬರುತ್ತದೆ.

ಆಧುನಿಕ ಅಧ್ಯಯನ ವಿಧಾನಗಳು, ಸರ್ಕಾರಗಳು ಅಥವಾ ಸರ್ಕಾರ ರಚಿಸಿರುವ ಪುರಾತತ್ವ ಇಲಾಖೆಗಳು ಇತಿಹಾಸ ಕುರುಹುಗಳ ಮುಖ್ಯ ಪ್ರದೇಶಗಳ ಕಡೆಗೆ ಗಮನಹರಿಸಿದರೆ ವಿನಃ ಸ್ಥಳೀಯ ಅಥವಾ ಅಲಕ್ಷಿತ ಸ್ಮಾರಕಗಳನ್ನು ಯಥಾವತ್ತಾಗಿ ರಕ್ಷಿಸುವುದು ತಮ್ಮ ಕರ್ತವ್ಯ ಅಲ್ಲವೆಂದು ತಿಳಿದವು. ಅಲ್ಲದೆ ಈ ಸ್ಮಾರಕಗಳು ಕಟ್ಟಿಕೊಡುವ ಸಾಂಸ್ಕೃತಿಕ ಇತಿಹಾಸದ ಕಡೆಗೆ ಗಮನ ಕೊಡಲೇ ಇಲ್ಲವೆನ್ನ

ಬಹುದು. ಇಂತಹ ಸಂದರ್ಭದಲ್ಲಿ ಸ್ಥಳೀಯ ಸ್ಮಾರಕಗಳ ರಕ್ಷಣೆಗೆ ನಿಂತಿದ್ದವರು ಆ ಪರಿಸರದ ಜನಸಮುದಾಯಗಳು. ಇವರು ಕತೆ, ಹಾಡು, ಐತಿಹ್ಯ, ನಂಬಿಕೆ, ಆಚರಣೆಗಳಲ್ಲಿ ಸ್ಮಾರಕಗಳ ಸಾಂಸ್ಕೃತಿಕ ಇತಿಹಾಸವನ್ನು ಹಿಡಿದಿಟ್ಟಿದ್ದಾರೆ. ಪ್ರಭುತ್ವಗಳು ನಿಯಂತ್ರಿಸುತ್ತಿರುವ ಸ್ಮಾರಕಗಳ ಬಗೆಗೂ ಸಹ ಜನಪದರು ಹಾಡು, ಐತಿಹ್ಯ, ನಂಬಿಕೆ, ಆಚರಣೆಗಳಲ್ಲಿ ಸ್ಮಾರಕಗಳ ಸಾಂಸ್ಕೃತಿಕ ಇತಿಹಾಸವನ್ನು ವ್ಯಕ್ತಪಡಿಸುತ್ತಾ ಅವುಗಳ ರಕ್ಷಣೆಯಲ್ಲಿಯೂ ಪಾಲ್ಗೊಂಡಿದ್ದಾರೆ(ಉದಾಹರಣೆಗೆ ಹಂಪೆಯ ಸ್ಮಾರಕಗಳು).

ಸ್ಮಾರಕಗಳು ಐತಿಹಾಸಿಕ ಪರಂಪರೆಯ ಅಮೂಲಾಗ್ರ ವಸ್ತುಗಳು. ಇವುಗಳನ್ನು ನಾಶಗೊಳಿಸದಂತೆ ಸಂರಕ್ಷಣೆ ಮಾಡುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಸ್ಮಾರಕಗಳು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬ ಧೋರಣೆಯನ್ನು ಪಾಶ್ಚಾತ್ಯ ವಿದ್ವಾಂಸರು ಹೊಂದಿದ್ದರು. ಆ ಹಿನ್ನೆಲೆಯಲ್ಲಿ ಭಾರತದಲ್ಲಿ ಸಿಗುವ ಮಹತ್ವವಾದ ಸಾಮ್ರಾಜ್ಯಗಳ ಸ್ಮಾರಕಗಳನ್ನು ಸಂರಕ್ಷಿಸಿ, ಅವುಗಳ ಅಧ್ಯಯನವನ್ನು ಕೈಗೊಂಡರು. ಈ ಧೋರಣೆಯು ಪ್ರಾರಂಭದಲ್ಲಿ ಭಾರತೀಯ ವಿದ್ವಾಂಸರು ಅನುಸರಿಸಿ ಸಕ್ರಿಯವಾಗಿ ಭಾಗವಹಿಸಿ ಪ್ರೋತ್ಸಾಹ ನೀಡಿ ಸಾಮ್ರಾಜ್ಯ ಸ್ಮಾರಕಗಳ ಸಂರಕ್ಷಣೆ, ಅಧ್ಯಯನ ಕೈಗೊಂಡರು. ಆದರೆ ಈ ರೀತಿಯ ಧೋರಣೆ ಬಹಳ ಕಾಲದವರೆಗೆ ಉಳಿಯಲಿಲ್ಲ. ಕೆಳಸ್ತರದಲ್ಲಿರುವ ಪಾಳೆಯಪಟ್ಟು ಸಂಸ್ಕೃತಿಯ ಪ್ರದೇಶಗಳನ್ನು ಸಹ ಅಧ್ಯಯನ ಮಾಡಬೇಕು ಎನ್ನುವ ಮಹಾದಾಕಾಂಕ್ಷೆ ಮೂಡಿತು. ಅದರ ಅಧ್ಯಯನವೂ ಸಹ ಇತ್ತೀಚಿನ ದಿನಗಳಲ್ಲಿ ನಡೆಯುತ್ತಲೂ ಇದೆ. ಆದರೆ ಸ್ಮಾರಕಗಳ ಸಂರಕ್ಷಣೆಯಲ್ಲಿ ಈ ರೀತಿಯ ಧೋರಣೆಯ ಬದಲಾಗಿಲ್ಲವೆಂದೇ ಹೇಳಬಹುದು.

ಪ್ರಭುತ್ವಶಾಹಿ(ಪ್ರಾಚ್ಯವಸ್ತುಸಂಗ್ರಹಾಲಯ) ವ್ಯವಸ್ಥೆಯು ಸಾಮ್ರಾಜ್ಯದ ಸ್ಮಾರಕಗಳನ್ನು ಸಂರಕ್ಷಿಸುವಾಗ ಅದು ಪ್ರದರ್ಶನದ ವಸ್ತುವನ್ನಾಗಿಸುವ, ಇದರಿಂದ ಲಾಭಗಳಿಸುವ, ನಿರ್ಜೀವ ವಸ್ತುಗಳನ್ನಾಗಿಸುವ ಕ್ರಮವನ್ನು ಅನುಸರಿಸಿರುವುದು ಕಂಡುಬರುತ್ತದೆ. ಜನಸಮುದಾಯಗಳು ಇವೆಲ್ಲವನ್ನೂ ಮೀರಿ ಭೌತಿಕ ವಸ್ತುಗಳಿಗೆ ಜೀವ ತುಂಬಿ ಅನೇಕ ಆಚರಣೆಗಳನ್ನು ನೆರವೇರಿಸಿಕೊಂಡು ತಮ್ಮದಾಗಿಸಿಕೊಳ್ಳುವ ಮೂಲಕ ಸ್ಮಾರಕಗಳ ಸಂರಕ್ಷಣೆ ಮಾಡುತ್ತಿರುವುದು ಕಾಣಬಹುದಾಗಿದೆ. ಪ್ರಾಚ್ಯವಸ್ತು ಸಂಗ್ರಹಾಲಯವು ಜನಸಮುದಾಯಗಳಿಂದ ಸ್ಮಾರಕಗಳನ್ನು ಬೇರ್ಪಡಿಸಿ, ಅವನ್ನು ಬರೀ ಭೌತಿಕ ಅವಶೇಷಗಳನ್ನಾಗಿಸಿ ಮಾರ್ಪಡಿಸಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸಾಮ್ರಾಜ್ಯಗಳ ಸ್ಮಾರಕಗಳ ಸಂರಕ್ಷಣೆಯ ನೆಪದಲ್ಲಿ ಲಾಭದಾಯಕದ ಪ್ರವೃತ್ತಿಯು ನಡೆಯುತ್ತಿದೆ ಎನ್ನಬಹುದು.

ಸ್ಮಾರಕಗಳನ್ನು ಜನಸಮುದಾಯಗಳು ಸಂರಕ್ಷಿಸುವ ಮುಖ್ಯ ಉದ್ದೇಶವೆಂದರೆ ಅವುಗಳೊಂದಿಗೆ ಅವರಿಗಿರುವ ಭಾವನಾತ್ಮಕ ಸಂಬಂಧವೇ ಕಾರಣವಾಗಿದೆ. ತಮ್ಮ ಸಂಸ್ಕೃತಿಯ ಭಾಗವೆಂದೇ ಭಾವಿಸಿ ಸ್ಮಾರಕಗಳನ್ನು ಜನಸಮುದಾಯಗಳು ಸಂರಕ್ಷಿಸುವ ಮುಖ್ಯ ಉದ್ದೇಶವೆಂದರೆ ಅವುಗಳೊಂದಿಗೆ ಅವರಿಗಿರುವ ಭಾವನಾತ್ಮಕ ಸಂಬಂಧವೇ ಕಾರಣವಾಗಿದೆ. ತಮ್ಮ ಸಂಸ್ಕೃತಿಯ ಭಾಗವೆಂದೇ ಭಾವಿಸಿ

ಸ್ಮಾರಕಗಳನ್ನು ಜನಸಮುದಾಯಗಳು ಕಾಪಾಡಿಕೊಂಡು ಬರುತ್ತಿರುವುದು ಕಾಣಬಹುದು. ಅಲ್ಲದೆ ಈ ಸ್ಮಾರಕಗಳಿಗೆ ದೈವತ್ವದ ಕಲ್ಪನೆಯನ್ನು ಆರೋಪಿಸಿ ಅವುಗಳ ಬಗೆಗೆ ಹಾಡು, ಕಥೆ, ಐತಿಹ್ಯ, ಸ್ಥಳಪುರಾಣ ವ್ಯಕ್ತಪಡಿಸುತ್ತಾ, ಕ್ರಿಯಾತ್ಮಕವಾಗಿ ಆಚರಣೆಗಳನ್ನು ನೆರವೇರಿಸುತ್ತಾ ಪ್ರಾಚೀನ ಕಾಲದಿಂದ ರೂಢಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ತಮ್ಮ ಸಂಸ್ಕೃತಿಯ ಭಾಗವೆಂದು ಭಾವಿಸಿ ಸ್ಮಾರಕಗಳನ್ನು ಜನಸಮುದಾಯಗಳು ಧಾರ್ಮಿಕ ನೆಲೆಗಟ್ಟಿನಲ್ಲಿ ಸಂರಕ್ಷಿಸಿವೆ. ಆದರೆ ಜನಸಮುದಾಯಗಳು ರಕ್ಷಿಸುವ ಸ್ಮಾರಕಗಳಿಗೆ ಪ್ರಭುತ್ವಗಳಿಂದ ರಕ್ಷಿಸಲ್ಪಟ್ಟ ಸ್ಮಾರಕಗಳಿದ್ದಂತೆ ಕಾನೂನು ಪಾಲನೆ ಇರುವುದಿಲ್ಲ. ಇಲ್ಲಿ ಸ್ಮಾರಕಗಳನ್ನು ರಕ್ಷಿಸುವ ಕಾವಲುಗಾರರೆಂದರೆ ನಂಬಿಕೆ-ಆಚರಣೆಗಳು. ಇವು ಇವರಿಗೆ ದೈವೀ ಸ್ವರೂಪ. ಇವುಗಳನ್ನು ಯಾರೂ ನಾಶಪಡಿಸಬಾರದು ಎಂಬ ಮಾನಸಿಕ ಒಪ್ಪಂದ ಹಾಗೂ ಭಯ ನಮ್ಮ ಜನಸಮುದಾಯಗಳಲ್ಲಿದೆ. ಈ ಹಿನ್ನೆಲೆಯಲ್ಲಿ ಅವರು ಯಾವ ಸ್ಮಾರಕಗಳಲ್ಲಿ ದೈವೀ ಸ್ವರೂಪವನ್ನು ಕಂಡಿರುತ್ತಾರೋ ಅಂತಹ ಸ್ಮಾರಕಗಳು ಮತ್ತೆ ಮತ್ತೆ ಜೀರ್ಣೋದ್ಧಾರ ಪಡೆಯುತ್ತಿರುವುದು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಪ್ರಭುತ್ವಶಾಹಿ ವರ್ಗಕ್ಕೆ ಸ್ಮಾರಕಗಳು ಚರಿತ್ರೆ ಹೇಳುವ ಆಕರಗಳಾದರೆ, ಜನಸಮುದಾಯ ಗಳಿಗೆ ಸಾಂಸ್ಕೃತಿಕ ಹಾಗೂ ತಮ್ಮ ರಕ್ಷಣೆಯ ಕೇಂದ್ರಗಳಾಗಿ ಕಂಡುಬರುತ್ತವೆ. ಪ್ರಾಚ್ಯವಸ್ತು ಸಂಗ್ರಹಾಲಯ ಸ್ಮಾರಕಗಳನ್ನು ಸಂರಕ್ಷಿಸುವ ಹಾಗೆಯೇ ಜನಸಮುದಾಯಗಳ ನಂಬಿಕೆ, ಆಚರಣೆಗಳ ಹಿನ್ನೆಲೆಯಲ್ಲಿ ಸ್ಮಾರಕಗಳನ್ನು ಸಂರಕ್ಷಿಸುತ್ತಿವೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳು ಮತ್ತು ಅದರೊಳಗಿರುವ ಸ್ಮಾರಕಗಳು ಅಲ್ಲಿನ ಪರಿಸರದ ಸಮುದಾಯಗಳ ನಂಬಿಕೆ, ಗಾದೆ, ಆಚರಣೆಗಳಿಂದ ಹೇಗೆ ಸಂರಕ್ಷಿತಗೊಂಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಂಬಿಕೆಗಳು

ನಾವು ದೈನಂದಿನ ಬದುಕಿನಲ್ಲಿ ಹಲವಾರು ರೀತಿಯ ನಂಬಿಕೆ, ಆಚರಣೆ ಹಾಗೂ ನಿಷೇಧಗಳನ್ನು ರೂಢಿಸಿಕೊಂಡು ಬಂದಿದ್ದೇವೆ. ಋತುಮಾನಕ್ಕೆ ತಕ್ಕಂತೆ ಆಹಾರ, ಪಾನೀಯ, ಬಟ್ಟೆ, ಹಾಗೂ ವಸತಿಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತೇವೆ. ಮಾನವ ತನ್ನ ಉಳಿವಿಗಾಗಿ ಕೆಲವೊಂದು ನಂಬಿಕೆಗಳನ್ನು ಸೃಷ್ಟಿಸಿದ್ದಾನೆ. ಹೀಗೆ ಸೃಷ್ಟಿಸಿರುವ ಮಾನವನ ಸ್ವಭಾವವಷ್ಟೇ ಅಲ್ಲದೆ, ಆತನ ಸಂಸ್ಕೃತಿಯ ಸ್ವಭಾವವೂ ಆಗಿದೆ. ಪುರಾತನ ಕಾಲದಿಂದಲೂ ಮಾನವನ ನಾಗರೀಕತೆ, ಪ್ರೌಢಜ್ಞಾನ ಮತ್ತು ಸಂಸ್ಕೃತಿಯ ಹಂತವನ್ನು ಮುಟ್ಟುವವರೆಗೆ ಮಾನವನ ಅವಿರತ ಮುನ್ನೆಡೆಯ ಹಾದಿಯಲ್ಲಿ ನಂಬಿಕೆಗಳು ಬಹುಕಾಲದಿಂದಲೂ ಬೆಳೆದುಬಂದಿವೆ. ವಾಸ್ತವವಾಗಿ ಸಂಸ್ಕೃತಿಯಿಂದ ನಂಬಿಕೆಗಳನ್ನು ಬೇರ್ಪಡಿಸಿಕೊಂಡು ನೋಡುವುದು ಕಷ್ಟ.

ಸಂಸ್ಕೃತಿಯು ತಾನು ಉತ್ತಮಗೊಳ್ಳಲು ಪ್ರಯತ್ನಿಸಿದಂತೆಲ್ಲಾ ಈ ಬಗೆಯ ನಂಬಿಕೆಗಳು ಹುಟ್ಟಿಕೊಂಡಿರಬೇಕು. ಸಂಸ್ಕೃತಿಯ ಒಂದು ಅಂಗವಾಗಿ ನಂಬಿಕೆಗಳು ಹುಟ್ಟುತ್ತವೆ. ನಂಬಿಕೆಗಳು ಆಯಾ ಸಂಸ್ಕೃತಿಯ ಮೌಲ್ಯ, ನೈತಿಕತೆ, ಆದರ್ಶ, ಆಸಕ್ತಿ, ನಿಷ್ಠೆಗಳಾಗಿರಬಹುದು. ಪ್ರತಿಸಂಸ್ಕೃತಿಯು ಒಂದು ನಂಬಿಕೆಗಳನ್ನಿಟ್ಟುಕೊಂಡಿವೆ. ಹಾಗಾಗಿ ಜೀವನಕ್ಕೂ ಮತ್ತು ನಂಬಿಕೆಗೂ ನಿಕಟವಾದ ಸಂಬಂಧವಿದ್ದು, ಅವೆರಡು ಹಾಸು ಹೊಕ್ಕಾಗಿವೆ. "ನಂಬಿಕೆ ಬೆಟ್ಟವನ್ನಾದರೂ ಕದಲಿಸಬಲ್ಲದು" ಎಂಬುದು ನಂಬಿಕೆಗಳ ಬಗೆಗಿರುವ ಪ್ರಸಿದ್ಧ ನಾಣ್ಣುಡಿಯಾಗಿದೆ.[೧]

ನಂಬಿಕೆಗಳಿಗೆ ಆಯಾ ಪ್ರಾದೇಶಿಕ, ಸಾಂಸ್ಕೃತಿಕ ಹಿನ್ನೆಲೆ ಇರುತ್ತದೆ. ಭಾರತೀಯ ಜನಪದರು ತಮ್ಮ ಜೀವನದಲ್ಲಿ ತಲತಲಾಂತರದಿಂದ ಬಂದ ಸಾಂಸ್ಕೃತಿಕವಾದ ನಂಬಿಕೆಗಳನ್ನು ಬಲವಾಗಿ ನಂಬುತ್ತಾರೆ. ಇಂತಹ ನಂಬಿಕೆಗಳಿಂದ ತುಮಕೂರು ಜಿಲ್ಲೆಯ ಸಮುದಾಯಗಳು ತಮ್ಮ ಪರಿಸರದಲ್ಲಿರುವ ಕೋಟೆಯ ಸ್ಮಾರಕಗಳನ್ನು ಹೇಗೆ ಉಳಿಸಿಕೊಂಡು ಬಂದಿವೆ ಎಂಬುದನ್ನು ಚರ್ಚಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಎಲ್ಲಾ ಕೋಟೆಗಳನ್ನು ಅಲ್ಲಿನ ಪರಿಸರದ ಜನಸಮುದಾಯಗಳು ತಮ್ಮ ಜೀವನದ ಭಾಗವನ್ನಾಗಿಸಿಕೊಂಡಿವೆ. ಕೋಟೆಯ ಸ್ಮಾರಕಗಳಲ್ಲಿ ಹಲವಾರು ಆಚರಣೆಗಳನ್ನು, ನಂಬಿಕೆಗಳನ್ನು ಕಟ್ಟಿಕೊಂಡು ಅವುಗಳನ್ನು ಶ್ರದ್ಧಾ ಪೂರ್ವಕವಾಗಿ ಒಪ್ಪಿಕೊಂಡು ಬದುಕುತ್ತಿವೆ. ಈ ಆಚರಣೆ, ನಂಬಿಕೆಗಳ ಹಿಂದೆ ಹಲವಾರು ಘಟನೆ, ವ್ಯಕ್ತಿಗಳ ಸ್ಮೃತಿಗಳೂ ಇವೆ ಎನ್ನಬಹುದು. ಕೋಟೆಗೆ ರಕ್ಷಣೆ ನೀಡಿದ ಇಲ್ಲವೆ ಕೋಟೆ ನಿರ್ಮಿಸಿದ ಹಲವಾರು ಘಟನೆಗಳನ್ನು ಸಮುದಾಯವು ತಲೆಮಾರಿನಿಂದ ತಲೆಮಾರಿಗೆ ನಂಬಿಕೆ, ಆಚರಣೆಗಳ ಮೂಲಕ ನೆನಪಿನಲ್ಲಿಟ್ಟುಕೊಳ್ಳುತ್ತಾ ಮುಂದುವರಿಸಿಕೊಂಡು ಬಂದಿವೆ.

ಇಲ್ಲಿ ವೈಚಾರಿಕವಾಗಿ ವಿಶ್ಲೇಷಿಸಿದರೆ ಕೋಟೆಗಳಿಗೆ ಸಂಬಂಧಿಸಿದ ಹಲವಾರು ನಂಬಿಕೆಗಳು ಮೌಢ್ಯತೆಯಿಂದ ಕೂಡಿವೆ ಎಂದೆನಿಸಬಹುದು. ಆದರೆ ಸಮುದಾಯಗಳ ವೈಚಾರಿಕತೆಗಿಂತ ಹೆಚ್ಚಾಗಿ ನಂಬಿಕೆಗಳಿಗೆ ಸಂಬಂಧಿಸಿದಂತೆ ಭಾವುಕತೆಯನ್ನು ಪ್ರದರ್ಶಿಸುತ್ತವೆ. ತಾವು ನಂಬಿದ, ತಮ್ಮ ನಂಬಿಕೆಗಳಿಗೆ ಪ್ರಶ್ನಾತೀತ ಶ್ರದ್ಧೆಯನ್ನು ಜನಸಮುದಾಯಗಳು ವ್ಯಕ್ತಪಡಿಸುತ್ತವೆ. ತುಮಕೂರು ಜಿಲ್ಲೆಯ ಕೋಟೆಗಳಿಗೆ ಸಂಬಂಧಿಸಿದಂತೆಯೂ ಈ ತರಹದ ಪ್ರಶ್ನಾತೀತ ಶ್ರದ್ಧೆಯನ್ನು ಸಮುದಾಯಗಳು ಹೊಂದಿರುವ ಹಲವಾರು ನಂಬಿಕೆಗಳಿವೆ. ಉದಾಹರಣೆಗೆ ಕೋಟೆಯ ಬಾಗಿಲು, ಗೋಡೆ ಬಿದ್ದು ಹೋಗುತ್ತಿದ್ದರೆ ವಿಶೇಷವಾಗಿ ಗರ್ಭಿಣಿ ಹೆಂಗಸನ್ನು ಬಲಿಕೊಟ್ಟರೆ ಬಿದ್ದು ಹೋಗುವ ಬಾಗಿಲು, ಗೋಡೆ ನಿಲ್ಲುತ್ತದೆ ಎಂದು ನಂಬಲಾಗಿದೆ. ಹಾಗೆ ನಂಬಿ ಗರ್ಭಿಣಿ ಹೆಂಗಸರನ್ನು ಬಲಿಕೊಟ್ಟ ಕಥನಗಳನ್ನು ಈಗಾಗಲೇ ಹಿಂದಿನ ಅಧ್ಯಾಯದಲ್ಲಿ(ಅಧ್ಯಾಯ-೫.೪) ಗಮನಿಸಿದ್ದೇವೆ. ವೈಚಾರಿಕವಾಗಿ ನೋಡಿದರೆ ಇದು ತಪ್ಪೆನಿಸಬಹುದು. ಆದರೆ ಜನಸಮುದಾಯಗಳು ಈ ರೀತಿಯ ವೈಚಾರಿಕ ಪ್ರಶ್ನೆಗಳನ್ನೇ ಹಾಕಿಕೊಳ್ಳಲಾರವು.

ತಾವು ನಂಬಿದವುಗಳನ್ನು ಪೂರೈಸುತ್ತಾ ಆ ಮೂಲಕ ಬದುಕುವ ಚೈತನ್ಯವನ್ನು, ಉತ್ಸಾಹವನ್ನು ಪಡೆಯುತ್ತಿರುತ್ತವೆ. ಹಾಗೆ ಬದುಕಿನ ಬಗೆಗೆ ಆಸೆಯನ್ನು ಪ್ರೀತಿಯನ್ನು ಹುಟ್ಟಿಸುವ ಹಲವಾರು ನಂಬಿಕೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಕೋಟೆಯ ನಿರ್ಮಾಣ ಸಂದರ್ಭದಲ್ಲಿ ಬಾಗಿಲು, ಗೋಡೆ ಬಿದ್ದು ಹೋಗುತ್ತಿದ್ದರೆ ಗರ್ಭಿಣಿ ಹೆಂಗಸನ್ನು ಬಲಿಕೊಟ್ಟರೆ ಬಿದ್ದು ಹೋಗುವ ಬಾಗಿಲು, ಗೋಡೆ ನಿಲ್ಲುತ್ತದೆ.

೨. ಕೋಟೆಗೆ ರಾಹು ಬಡಿಯದೆ ಇರಲಿ ಎಂದು ಪ್ರತಿ ಸಂಜೆ ಸರಗ ಚೆಲ್ಲುತ್ತಿದ್ದರು.

೩. ಕೋಟೆಯನ್ನು ನಿರ್ಮಿಸುವಾಗ ಮಹಾದ್ವಾರದ ಬಾಗಿಲಲ್ಲಿ ಆಂಜನೇಯನನ್ನು ಪ್ರತಿಷ್ಠಾಪಿಸುತ್ತಿದ್ದರು. ಕಾರಣ ಆಂಜನೇಯ ಶತ್ರುಗಳಿಂದ ಕೋಟೆಯನ್ನು ಸಂರಕ್ಷಿಸುತ್ತಾನೆನ್ನುವ ನಂಬಿಕೆ.

೪. ಕೋಟೆಯ ಗುಪ್ತ ಮಾರ್ಗವನ್ನು ನಿರ್ಮಿಸಿದ ವ್ಯಕ್ತಿಯನ್ನು ಜೀವಂತವಾಗಿ ಉಳಿಸಬಾರದು ಎನ್ನುವ ನಂಬಿಕೆಯಿತ್ತು.

೫. ದೇವರಾಯನ ದುರ್ಗದ ಕುಂಭಿಯಲ್ಲಿರುವ ದೀಪಸ್ತಂಭಕ್ಕೆ ಎಳ್ಳು, ತುಪ್ಪದಿಂದ ಜ್ಯೋತಿ ಬೆಳಗಿಸಿದರೆ ಮನದಾಸೆ ಈಡೇರುತ್ತದೆ.

೬. ದೇವರಾಯನ ದುರ್ಗ ಕುಂಭಿ ನರಸಿಂಹಸ್ವಾಮಿಗೆ ಮುಡಿಕೊಟ್ಟು, ಪುಷ್ಕರಣಿಯಲ್ಲಿ ಸ್ನಾನ ಮಾಡಿ, ನಾಮವನ್ನು ಹಾಕಿಸಿಕೊಂಡರೆ ಮನದಾಸೆ ಈಡೇರುತ್ತದೆ.

೭. ದೇವರಾಯನ ದುರ್ಗದ ಗರುಡಾಂಜನೆಯ ವಿಗ್ರಹಕ್ಕೆ ಬಾಳೆಹಣ್ಣು, ರೂಪಾಯಿ ನಾಣ್ಯ ಹಚ್ಚುವುದರಿಂದ ತಮ್ಮ ಮನದಾಸೆಯು ಈಡೇರುತ್ತದೆ.

೮. ಹುತ್ರಿ ದುರ್ಗದ ಈಶ್ವರ ದೇವಸ್ಥಾನದ ದೊಣೆಯಲ್ಲಿ ಗಂಗಮ್ಮನ ಪೂಜೆ ಮಾಡಿದರೆ ಬಂಜೆಯರಿಗೆ ಮಕ್ಕಳಾಗುತ್ತವೆ ಎನ್ನುವ ನಂಬಿಕೆಯಿದೆ.

೯. ಭಸ್ಮಾಂಗಿ ದುರ್ಗದ ಆಂಜನೇಯನನ್ನು ಪೂಜಿಸಿದರೆ ಮೂರು ವರ್ಷಗಳ ಕಾಲ ಬರಗಾಲ ಬರುತ್ತದೆ ಎನ್ನುವ ನಂಬಿಕೆಯಿದೆ.

೧೦. ನಿಡುಗಲ್ಲು ದುರ್ಗದ ಈರಣ್ಣನ ಕೋಟೆಯ ಕಡೆಗೆ ಮಿಂಚಿದರೆ ಮಳೆ ಬರುತ್ತದೆ ಎನ್ನುವ ನಂಬಿಕೆಯಿದೆ.

೧೧. ನಿಡಗಲ್ಲು ಶಿಖರದ ಬಸವಣ್ಣನ ದೀಪಸ್ತಂಭಕ್ಕೆ ಜ್ಯೋತಿ ಬೆಳಗಿಸಿದರೆ ತಮ್ಮ ಮನದಾಸೆ ಈಡೇರುತ್ತದೆ.

೧೨. ನಿಡುಗಲ್ಲು ದುರ್ಗದ ಕಾಳಹಸ್ತೇಶ್ವರ ದೇವಸ್ಥಾನದ ತಿಳಿನೀರಿನ ದೊಣೆಯಲ್ಲಿ ನಿಂಬೆಹಣ್ಣನ್ನು ಹಾಕಿದರೆ ಪರಶುರಾಮಪುರದ ಕೆರೆಯಲ್ಲಿ ತೇಲುತ್ತದೆ ಎನ್ನುವ ನಂಬಿಕೆ.

೧೩. ನಿಡುಗಲ್ಲು ದುರ್ಗದ ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಯಲ್ಲಿದ್ದಾಗ ತವರಿನ ದ್ವಾರಬಾಗಿಲಾದ ವಜ್ರದೂರು ಬಾಗಿಲು ರಾತ್ರಿ ವೇಳೆಯಲ್ಲಿ ಹಾಕಿದ ಸದ್ದು ಕೇಳಿ, ತಮ್ಮ ತಂದೆ-ತಾಯಿಯರು ಮಲಗಿದರೆಂದು ಭಾವಿಸಿ ಮಲಗುತ್ತಿದ್ದರು.

೧೪. ನಿಡುಗಲ್ಲುದುರ್ಗದ ರಾಮತೀರ್ಥಕ್ಕೆ ಹೆಂಗಸರು ಗಂಗೆ ಪೂಜೆ ಮಾಡಿದರೆ ತಮ್ಮ ಮನದಾಸೆ ಈಡೇರುತ್ತದೆ.

೧೫. ನಿಡುಗಲ್ಲು ಶಿಖರದ ಬಸವಣ್ಣ ಅಂಬಾ ಎಂದರೆ ಪ್ರಪಂಚ ಪ್ರಳಯವಾಗುತ್ತದೆ ಎನ್ನುವ ನಂಬಿಕೆಯಿದೆ.

೧೬. ನಿಡುಗಲ್ಲು ರಾಮತೀರ್ಥಕ್ಕೆ ಹೆಂಗಸರು ಇಳಿಯಬಾರದೆಂದು ನಿಷಿದ್ಧವಿದೆ.

೧೭. ನಿಡುಗಲ್ಲು ದುರ್ಗದ ರಾಮತೀರ್ಥದ ನೀರನ್ನು ರೈತರು ಬೆಳೆದ ಫಸಲಿಗೆ ರೋಗ ಬಂದರೆ ತಂದು ಚಿಮುಕಿಸಿದರೆ ರೋಗವು ನಾಶಹೊಂದಿ, ಒಳ್ಳೆಯ ಇಳುವರಿ ನೀಡುತ್ತದೆನ್ನುವ ನಂಬಿಕೆಯಿದೆ.

೧೮. ಯಲ್ಲಪ್ಪನಾಯಕ ಹೊಸಕೋಟೆಯ ಚೆನ್ನಕೇಶವ ದೇವಸ್ಥಾನದ ದೊಣೆಯಲ್ಲಿ ಸ್ತ್ರೀಯರು ಗಂಗೆಪೂಜೆ ಮಾಡಿದರೆ ಮಕ್ಕಳಾಗುತ್ತವೆ ಎನ್ನುವ ನಂಬಿಕೆಯಿದೆ.

೧೯. ಕೊರಟಗೆರೆ ಕೋಟೆಯಲ್ಲಿರುವ ಗಂಗಾಧರೇಶ್ವರ ಸ್ವಾಮಿಯ ಉದ್ಭವ ಲಿಂಗವು ಸಂಪೂರ್ಣವಾಗಿ ಮೂಡಿದರೆ ಪ್ರಪಂಚ ಪ್ರಳಯವಾಗುತ್ತದೆನ್ನುವ ನಂಬಿಕೆಯಿದೆ.

೨೦. ಪಾವಗಡ ಕೋಟೆಯ ಬಯಲಾಂಜನೇಯನ ಮುಂದಿರುವ ಕಲ್ಲನ್ನು ಮಕ್ಕಳಾಗದ ಸ್ತ್ರೀಯರು ಮೇಲೆತ್ತಿದ್ದರೆ ಮಕ್ಕಳಾಗುತ್ತದೆ ಎನ್ನುವ ನಂಬಿಕೆಯಿದೆ.

೨೧. ಚೇಳೂರು ಕೋಟೆಯ ಊರು ಬಾಗಿಲಲ್ಲಿರುವ ಕಲ್ಲು ಕೋಳಿ ಕೂಗಿ, ಕಲ್ಲು ಬಸವ ಅಂಬಾ ಎಂದರೆ ಪ್ರಪಂಚ ಪ್ರಳಯವಾಗುತ್ತದೆ ಎನ್ನುವ ನಂಬಿಕೆಯಿದೆ.

ಈ ಮೇಲಿನ ಪಟ್ಟಿಯನ್ನು ಗಮನಿಸಿದರೆ ನಿರ್ಜೀವ ಕಲ್ಲುಗಳಿಂದ ಕೂಡಿದ ಕೋಟೆಯೊಂದು ಸಮುದಾಯದಲ್ಲಿ ವಹಿಸಿರುವ ಪಾತ್ರ ಸ್ಪಷ್ಟವಾಗುತ್ತದೆ. ಹಾಗೆ ನೋಡಿದರೆ ಜನಪದರಿಗೆ ಕೋಟೆ ಎನ್ನುವುದು ನಿರ್ಜೀವ ವಸ್ತುವೇ ಅಲ್ಲ. ಕೋಟೆಯಲ್ಲಿರುವ ಸ್ಮಾರಕಗಳು, ಚಿತ್ರಗಳು, ಸುತ್ತಲಿರುವ ನಂಬಿಕೆಗಳೆಲ್ಲ ಒಬ್ಬ ಧಾರ್ಮಿಕ ಸಂತನೊಬ್ಬ ಮಾಡಿರಬಹುದಾದ ಪವಾಡಗಳಿಗೆ ಸಮವೆನಿಸುತ್ತವೆ. ಸಾಮಾನ್ಯವಾಗಿ ಧಾರ್ಮಿಕ ಸಂತರು ಸಮುದಾಯದಲ್ಲಿನ ರೋಗಿಗಳಿಗೆ, ದುರ್ಬಲರಿಗೆ, ಸ್ತ್ರೀಯರಿಗೆ

ಸಹಾಯ ಮಾಡುವ ಹಲವಾರು ಪವಾಡಗಳನ್ನು ತಮ್ಮ ಜೀವನದಲ್ಲಿ ಮಾಡಿರುತ್ತಾರೆಂದು ಚಿತ್ರಿಸಲಾಗಿದೆ. ಕೋಟೆಗಳಿಗೆ ಸಂಬಂಧಿಸಿದ ಮೇಲಿನ ಹಲವಾರು ನಂಬಿಕೆಗಳನ್ನು ಗಮನಿಸಿದರೆ ದುರ್ಬಲರು, ಸ್ತ್ರೀಯರು, ರೋಗಿಗಳು ಇನ್ನಿತರ ಜನರು ಸಹಾಯವನ್ನು, ಬದುಕುವ ಚೈತನ್ಯವನ್ನು ಪಡೆದಿರುವುದನ್ನು ಕಾಣಬಹುದು.

ಉದಾಹರಣೆಗೆ ದೇವರಾಯನ ದುರ್ಗದ ಕುಂಭಿಯಲ್ಲಿರುವ ದೀಪಸ್ತಂಭಕ್ಕೆ ಎಳ್ಳು, ತುಪ್ಪದಿಂದ ಜ್ಯೋತಿಯನ್ನು ಬೆಳಗಿಸಿದರೆ ಮತ್ತು ನಿಡುಗಲ್ಲು ದುರ್ಗದ ಶಿಖರದ ಬಸವಣ್ಣನ ದೀಪಸ್ತಂಭಕ್ಕೆ ಜ್ಯೋತಿ ಬೆಳಗಿಸಿದರೆ ಮನದಾಸೆ ಈಡೇರುತ್ತದೆನ್ನುವ ನಂಬಿಕೆ, ಪಾವಗಡ ಕೋಟೆಯ ಬಯಲಾಂಜನೇಯನ ಮುಂದಿರುವ ಕಲ್ಲನ್ನು ಮಕ್ಕಳಾಗದ ಸ್ತ್ರೀಯರು ಮೇಲಕ್ಕೆ ಎತ್ತಿದರೆ ಮಕ್ಕಳಾಗುತ್ತವೆ ಎನ್ನುವ ನಂಬಿಕೆ. ಇವೆಲ್ಲವೂ ಒಬ್ಬ ಸಂತನು ಸಮುದಾಯದಲ್ಲಿ ಮಾಡುವ ಪವಾಡಗಳನ್ನೇ ಹೋಲುತ್ತವೆ. ನಿರ್ಜೀವ ವಸ್ತುವಿನಲ್ಲಿಯೂ ಜೀವ ಚೈತನ್ಯವನ್ನು ಕಾಣುವುದು ಜನಪದರ ಲಕ್ಷಣ. ಹಾಗಾಗಿ ಕೋಟೆಯಲ್ಲಿನ ಅದೆಷ್ಟೋ ಕಲ್ಲುಗಳನ್ನು, ಗೋಡೆಯ ಚಿತ್ರಗಳನ್ನು, ಕಂಬಗಳನ್ನು ಈಗಲೂ ಧಾರ್ಮಿಕ ಸಂತರನ್ನು ನಂಬಿದಷ್ಟೇ ಬಲವಾಗಿ ಜನಪದರು ನಂಬಿ ಪೂಜಿಸುತ್ತಾ ಬದುಕಿನ ಭಾಗವಾಗಿಸಿಕೊಂಡಿದ್ದಾರೆ.

ಇಲ್ಲಿ ಕಂಡುಬರುವ ನಂಬಿಕೆಗಳಲ್ಲಿಯೂ ವೈವಿಧ್ಯತೆ ಇದೆ. 'ನಿಡುಗಲ್ಲು ದುರ್ಗದ ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಯಲ್ಲಿದ್ದಾಗ ತವರಿನ ದ್ವಾರ ಬಾಗಿಲಾದ 'ವಜ್ರದೂರು' ಬಾಗಿಲು ರಾತ್ರಿ ವೇಳೆಯಲ್ಲಿ ಹಾಕಿದ ಸದ್ದು ಕೇಳಿ ತಮ್ಮ ತಂದೆ-ತಾಯಿಯರು ಮಲಗಿದರೆಂದು ಭಾವಿಸಿ ಮಲಗುತ್ತಿದ್ದರು ಎನ್ನುವ ನಂಬಿಕೆ ತವರು ಮನೆಯ ಬಗೆಗಿನ ಪ್ರೀತಿ ಹಂಬಲವನ್ನು ಸೂಚಿಸಿದರೆ, ಕೋಟೆಯ ಗುಪ್ತಮಾರ್ಗವನ್ನು ನಿರ್ಮಿಸಿದ ವ್ಯಕ್ತಿಯನ್ನು ಜೀವಂತವಾಗಿ ಉಳಿಸಬಾರದು ಎನ್ನುವ ನಂಬಿಕೆ ಕೋಟೆಯ ರಹಸ್ಯ ಮಾರ್ಗದ ಬಗೆಗಿನ ಗುಪ್ತಮಾಹಿತಿ ಬಹಿರಂಗವಾಗಬಾರದು ಎನ್ನುವ ಆಶಯದಿಂದ ಕೂಡಿದೆ.

ಒಟ್ಟಾರೆ ಕೋಟೆಗೆ ಸಂಬಂಧಿಸಿದ ಈ ಎಲ್ಲ ನಂಬಿಕೆಗಳು ಸಮುದಾಯವೊಂದು ಉತ್ಸಾಹ ಶೀಲವಾಗಿ ಬದುಕಲು ಮಾಡಿಕೊಂಡಿರುವ ಸೃಷ್ಟಿಗಳೆನ್ನಿಸುತ್ತವೆ. ಈ ನಂಬಿಕೆಗಳನ್ನು ಆಚರಣೆಯಲ್ಲಿ ತರುವ ಮೂಲಕ ಸದ್ಯದಲ್ಲಿ ಎದುರಾದ ಸಂಕಷ್ಟ ಪರಿಸ್ಥಿತಿಯಿಂದ ಹೊರಬಂದು ಬದುಕುವ ಧೈರ್ಯವನ್ನು, ಆತ್ಮ ಸ್ಥೈರ್ಯವನ್ನು ಜನಪದರು ಪಡೆಯುತ್ತಿದ್ದರು. ನಮ್ಮ ಕಷ್ಟಗಳು ಪರಿಹಾರವಾಗುತ್ತವೆ. ನಮಗೆ ಒಳ್ಳೆಯದಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ಈ ತರಹದ ನಂಬಿಕೆಗಳು ತಲೆಮಾರಿನಿಂದ ತಲೆಮಾರಿಗೆ ಉಳಿದುಕೊಂಡು ಬಂದಿವೆ. ಈ ಹೊತ್ತಿನ ಸಂದರ್ಭದಲ್ಲಿ ಸಮುದಾಯಗಳ ನಂಬಿಕೆ, ಆಚರಣೆಗಳು ಕೋಟೆ ಮತ್ತು ಅದರೊಳಗಿರುವ ಸ್ಮಾರಕಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಗಾದೆಗಳು

ನಂಬಿಕೆಗಳಲ್ಲದೆ ಕೋಟೆಗೆ ಸಂಬಂಧಿಸಿದಂತೆ ಹಲವಾರು ಗಾದೆಗಳೂ ಕಂಡುಬರುತ್ತವೆ. ಈ ಗಾದೆಗಳು ಸಾಮಾನ್ಯವಾಗಿ ಶಬ್ದ ವೈಚಿತ್ರ್ಯದಿಂದ ಕೂಡಿದ್ದು ಇವು ಆಯಾ ಪ್ರದೇಶದ ವೈಶಿಷ್ಟ್ಯವನ್ನು ಒಳಗೊಂಡಂತೆ

ವೈವಿಧ್ಯಮಯವಾಗಿ ರಚಿತಗೊಂಡಿರುತ್ತವೆ. ಅದೆಷ್ಟೋ ಗಾದೆಗಳು ನೈಜಘಟನೆಯನ್ನು ಆಧರಿಸಿಯೋ ಇಲ್ಲವೇ ಅನುಭವದ ಆಧಾರದ ಮೇಲೆಯೋ ರಚಿತವಾಗಿರುತ್ತವೆ. ತುಮಕೂರು ಜಿಲ್ಲೆಯ ಕೋಟೆಯ ಪ್ರದೇಶಕ್ಕೆ ಸಂಬಂಧಿಸಿದಂತೆ ಗಾದೆಗಳು ಕೂಡ ಈ ಮಾತಿಗೆ ಹೊರತಾಗಿಲ್ಲ. ಗಾದೆಗಳು ಸಾಮಾನ್ಯವಾಗಿ ಬದುಕಿನ ಎಲ್ಲಾ ಆಯಾಮಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತವೆ ಮತ್ತು ಆಯಾ ಸಂಸ್ಕೃತಿಯ ಜನ ಜೀವನದ ಪ್ರತಿಬಿಂಬಗಳಾಗಿರುತ್ತವೆ. ಸಮಾಜದ ವಿಡಂಬನೆಯ ದ್ಯೋತಕವಾಗಿ ಜಾನಪದ ಸಾಹಿತ್ಯದಲ್ಲಿ ಗಾದೆಗಳು ಮತ್ತು ಒಗಟುಗಳು ಮುಖ್ಯವಾಗಿ ಸಂಸ್ಕೃತಿಯ ನೆಲೆಗಳಾಗಿ ಪರಿಣಮಿಸಿವೆ. ಗಾದೆಗಳನ್ನು ಜನಪದರು ದಿನನಿತ್ಯದಲ್ಲಿ ಬಳಸುತ್ತಾರೆ. ಈ ಗಾದೆಗಳು ವಾಚ್ಯಾರ್ಥ ಮತ್ತು ಧ್ವನ್ಯರ್ಥದಲ್ಲಿ ಬಳಕೆಗೊಂಡಿರುವುದನ್ನು ಕಾಣಬಹುದು.

ಒಂದು ದೃಷ್ಟಿಯಲ್ಲಿ ಗಾದೆಗಳು ನಾಡಿನ ಐತಿಹಾಸಿಕ, ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಪೂರಕ ಅಂಶಗಳಾಗಿವೆ. ಅಲ್ಲದೆ ಗಾದೆಗಳು ಶಿಷ್ಟ ಚರಿತ್ರೆ, ಸಂಸ್ಕೃತಿಯ ನಿರ್ವಚನದಲ್ಲಿ ಮೌಖಿಕ ಆಕರಗಳೂ ಹೌದು. ಮೌಖಿಕ ಪರಂಪರೆಯಲ್ಲಿ ಒಂದು ನಾಡಿನ ಸಂಸ್ಕೃತಿಯು ಅಡಗಿರುತ್ತದೆ. ಶಿಷ್ಟ ಚರಿತ್ರೆಗೆ ಆಕರಗಳ ಕೊರತೆ ಬಂದಾಗ ಈ ಬಗೆಯ ಮೌಖಿಕ ಕಥಾನಕಗಳು ಕೊರತೆಯ ಕೊಂಡಿಯನ್ನು ಬಿಗಿಗೊಳಿಸಬಲ್ಲವು. ಡಾ.ಆರ್ವಿಯಸ್ ಸುಂದರಂ ಹೇಳುವಂತೆ 'ಕೆಲವು ಗಾದೆಗಳು ಸ್ಥಳಪುರಾಣವನ್ನು ಒಂದು ದೇಶದ ಅಥವಾ ನಾಡಿನ ಚರಿತ್ರೆಗೆ ಸಂಬಂಧಿಸಿದ ವಿಷಯಗಳನ್ನು ಸೂಚಿಸುತ್ತವೆ.[೨] ಗಾದೆಗಳು ಚಾರಿತ್ರಿಕ ವಿಷಯಗಳ, ಸ್ಥಳ ವೈಶಿಷ್ಟ್ಯಗಳ ಉಗಮಕ್ಕೆ ಕಾರಣವಾಗಿವೆ. ಅಲ್ಲದೆ ನಾಡಿನ ಐತಿಹಾಸಿಕ, ಸಾಂಸ್ಕೃತಿಕ ಚರಿತ್ರೆಯನ್ನು ತುಂಬಿಕೊಂಡ ಪ್ರಮುಖ ಪರಿಕರಗಳಾಗಿ ನಿಲ್ಲಬಲ್ಲವು. ಇಂತಹ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯುಳ್ಳ ಗಾದೆಗಳು ತುಮಕೂರು ಜಿಲ್ಲೆಯ ಕೋಟೆಯ ಪ್ರದೇಶಕ್ಕೆ ಸಂಬಂಧಿಸಿವೆ. ಹಾಗೆ ಸಂಬಂಧಿಸಿದ ಗಾದೆಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಬಿಜ್ಜಾವರದ ಊಟ ಚೆಂದ ಮಧುಗಿರಿ ಮಾತು ಚೆಂದ ಸಿದ್ಧಾಪುರದಲ್ಲಿ ಮಲಗಲು ಚೆಂದ.

೨. ಹಾಗಲವಾಡಿಯಲ್ಲಿ ಹಾಗಲಕಾಯಿಯಷ್ಟು ಬರ ಯಾವಾಗಲೂ ಇದ್ದೇ ಇರುತ್ತದೆ.

೩. ಹಾಗಲವಾಡಿ ಒಂದು ತಲೆಮಾರಿಗೆ ಊರಾದರೆ ಇನ್ನೊಂದು ತಲೆಮಾರಿಗೆ ಹಾಳಾಗಿರುತ್ತದೆ.

೪. ಭಸ್ಮಾಂಗಿ ದುರ್ಗದ ಮನೆಗಳಲ್ಲಿ ಬೆಟ್ಟದಷ್ಟು ತಂದು ಹಾಕಿದರೂ ಅದು ಭಸ್ಮವಾಗುತ್ತದೆ.

೫. ನಿಡುಗಲ್ಲು ದುರ್ಗಕ್ಕೆ ಹೆಣ್ಣು ಕೊಡಬೇಡ, ಅರ್ಲಹಳ್ಳಿಗೆ ದನಕೊಡಬೇಡ.

೬. ನಿಡುಗಲ್ಲು ದುರ್ಗವು ಮಂಜು ಮುಸುಕಿದರೆ ಮಳೆ ತಪ್ಪುವುದಿಲ್ಲ.

೭. ಅಮರಾಪುರದ ಕೆರೆ ಹೊಡೆದು ಊರು ಹಾಳಾದರೆ ನಿಡುಗಲ್ಲು ಪಟ್ಟಣವಾಗುತ್ತೆ.

೮. ದೇವರ ಬೆಟ್ಟದಲ್ಲಿ ಹೆಣ್ಣು ಹೆಚ್ಚುವುದಿಲ್ಲ, ಗಂಡು ಬೆಳೆಯುವುದಿಲ್ಲ.

ಈ ಮೇಲಿನ ಗಾದೆಗಳನ್ನು ಗಮನಿಸಿದರೆ ಅವು ಬರೀ ಶಬ್ದ ವೈಚಿತ್ರ್ಯವಾಗಿ ಮಾತ್ರ ಇರುವುದಾಗಿ ಅನ್ನಿಸುವುದಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಗಾದೆಯ ಹಿಂದೆ ಒಂದು ಘಟನೆಯೋ ಇಲ್ಲವೆ ಪ್ರಾದೇಶಿಕ ವೈಶಿಷ್ಟ್ಯತೆಯೋ ಇರುವುದು ಕಂಡುಬರುತ್ತದೆ. ಉದಾಹರಣೆಗೆ 'ನಿಡುಗಲ್ಲು ದುರ್ಗಕ್ಕೆ ಹೆಣ್ಣು ಕೊಡಬೇಡ, ಆರ್ಲಹಳ್ಳಿಗೆ ದನಕೊಡಬೇಡ' ಎನ್ನುವ ಗಾದೆ ಹುಟ್ಟಲಿಕ್ಕ ಕಾರಣ ನಿಡುಗಲ್ಲು ದುರ್ಗದ ಊರು ಬೆಟ್ಟದಲ್ಲಿರುವುದರಿಂದ ಸ್ತ್ರೀಯನ್ನು ಮದುವೆ ಮಾಡಿಕೊಟ್ಟರೆ ಬೆಟ್ಟವನ್ನು ಹತ್ತಿ ಇಳಿಯುವುದು ಕಷ್ಟವಾಗುತ್ತದೆ. ಹಾಗೆಯೇ ಆರ್ಲಹಳ್ಳಿಯ ಜನರು ಎತ್ತು(ದನ)ಗಳನ್ನು ಹೊಲದಲ್ಲಿ ಸಾಯುವ ರೀತಿ ಕೆಲಸ ಮಾಡಿಸುವುದು ಮತ್ತು ಎತ್ತುಗಳನ್ನು ಹೊಡೆದು ಹೊಡೆದು ಸಾಯಿಸುತ್ತಿದ್ದುದಕ್ಕೆ ಈ ಗಾದೆ ಹುಟ್ಟಿಕೊಂಡಿದೆ. ಹಾಗೆಯೇ ಕೆಲವು ಗಾದೆಗಳು ಪ್ರಕೃತಿಯ ವೈಚಿತ್ರ್ಯದ ಕುರಿತು, ಕೆಲವು ನಾಶ ಮತ್ತು ಮರು ನಿರ್ಮಾಣವನ್ನು ಕುರಿತು ಹೇಳುತ್ತವೆ.

'ದೇವರ ಬೆಟ್ಟದಲ್ಲಿ ಹೆಣ್ಣು ಹೆಚ್ಚುವುದಿಲ್ಲ ಗಂಡು ಬೆಳೆಯುವುದಿಲ್ಲ'. ಈ ಗಾದೆಯ ಹಿಂದೆ ಚಾರಿತ್ರಿಕ ಘಟನೆಯಿದೆ. ರತ್ನಗಿರಿಯ ವಶದಲ್ಲಿದ್ದ ದೇವರಬೆಟ್ಟವನ್ನು ನಿಡುಗಲ್ಲು ದುರ್ಗದವರು ವಶಪಡಿಸಿಕೊಂಡರು. ಈ ಸಂದರ್ಭದಲ್ಲಿ ರತ್ನಗಿರಿಯ ಸೈನಿಕರು ದೇವರುಬೆಟ್ಟವನ್ನು ಕಾವಲು ಕಾಯುತ್ತಿದ್ದಾಗ ಎಲ್ಲರನ್ನು ನಿಡುಗಲ್ಲುದುರ್ಗದ ಸೈನಿಕರು ಸಾಮೂಹಿಕವಾಗಿ ಕೊಲೆ ಮಾಡಲಾಗಿತ್ತು. ಇದರಿಂದ ನೊಂದ ರತ್ನಗಿರಿಯ ಸ್ತ್ರೀಯರು ತಮ್ಮಲ್ಲಿದ್ದ ಮತ್ತೈದೆತನವನ್ನು ದೇವರಬೆಟ್ಟದಲ್ಲಿ ಕಿತ್ತು ಹಾಕಿ ಈ ಮೇಲಿನ ಶಾಪವನ್ನು ಹಾಕಿದ್ದರಂತೆ. ಅಲ್ಲದೆ ಇಲ್ಲಿನ ಗಾದೆಗಳ ಹಿನ್ನೆಲೆಯನ್ನು ಗಮನಿಸಿದರೆ ಒಂದು ಘಟನೆ, ಸ್ಥಳನಾಮ ಒಗಟು, ವ್ಯಕ್ತಿ, ಸಮುದಾಯ ಮತ್ತು ಐತಿಹ್ಯ, ನಂಬಿಕೆಗಳನ್ನು ಒಳಗೊಂಡಿರುತ್ತವೆ.

ಒಟ್ಟಾರೆಯಾಗಿ ತುಮಕೂರು ಜಿಲ್ಲೆಯ ಕೋಟೆಯ ಪ್ರದೇಶದ ಗಾದೆಗಳು ಪ್ರಸ್ತುತ ಸಂದರ್ಭದಲ್ಲಿ ಬರೀ ಆಡು ಮಾತುಗಳಾಗಿ ಉಳಿದಿವೆಯೇ ಹೊರತು ಗಾದೆಯಲ್ಲಿರುವಂತಹ ಜೀವನ ಪದ್ಧತಿಯಾಗಲಿ, ಆಚರಣೆಯಾಗಲಿ ಯಥಾವತ್ತಾಗಿ ಇರದೆ ಸಾಕಷ್ಟು ಬದಲಾವಣೆಯನ್ನು ಕಂಡಿವೆ. ಆದರೆ ಈ ಗಾದೆಗಳು ಮಾತ್ರ ಬಾಯಿಂದ ಬಾಯಿಗೆ ಉಳಿದುಕೊಂಡುಬಂದು ಚಾರಿತ್ರಿಕವಾದ ಯಾವುದೋ ಸಂಗತಿಯೊಂದರ ಕುರುಹುಗಳಾಗಿ ಇಂದಿಗೂ ಅಧ್ಯಯನಕಾರರ ಗಮನ ಸೆಳೆಯುತ್ತವೆ.

ಆಚರಣೆಗಳು

ಯಾವುದೇ ಧಾರ್ಮಿಕ ಆಚರಣೆಗಳು ಇದ್ದಕ್ಕಿದ್ದಂತೆ ಹುಟ್ಟಿ ನಶಿಸುವುದಿಲ್ಲ. ಹೆಚ್ಚೆಂದರೆ ಕಾಲಾನಂತರದಲ್ಲಿ ರೂಪಾಂತರಗಳನ್ನು ಪಡೆಯಬಹುದು. ಈ ಆಚರಣೆಗಳ ಹಿಂದೆ ಲೌಕಿಕ ಹಾಗೂ ಅಲೌಕಿಕ ಒತ್ತಡಗಳು ಕಾರ್ಯ ನಿರ್ವಹಿಸುತ್ತಿರುತ್ತವೆ ಎಂಬುದು ಎಲ್ಲರಿಗೆ ತಿಳಿದ ಸತ್ಯ. ಇಂಥಹ ಆಚರಣೆಗಳ ಸತ್ಯಾಸತ್ಯತೆಗಳನ್ನು ಅರಿಯುವುದು ಮುಖ್ಯ ಉದ್ದೇಶವಾದಾಗ ಮಾತ್ರ ಪ್ರಾದೇಶಿಕ ರಾಜಕೀಯಾರ್ಥಿಕ ಹಾಗೂ ಸಾಮಾಜಿಕ

ಜನಜೀವನದ ಸ್ಥಿತಿಗತಿ ತಿಳಿಯಲು ಸಾಧ್ಯವಾಗುತ್ತದೆ. ಆಚರಣೆಗಳು ಸಮುದಾಯದ ಕ್ರಿಯಾತ್ಮಕ ಪಠ್ಯಗಳಾಗಿವೆ. ಇಲ್ಲಿ ಬರೀ ಮೌಖಿಕ ಪಠ್ಯಗಳ ಹಾಗೆ ಹಾಡು-ಕತೆಗಳು ಮಾತ್ರವಿರದೆ ವಾದ್ಯದಸದ್ದು, ನೃತ್ಯ, ಸಮುದಾಯದ ಉತ್ಸಾಹ, ಮೌನಪೂಜೆ ಮುಂತಾದ ಕ್ರಿಯಾತ್ಮಕ ಅಂಶಗಳೂ ಇರುತ್ತವೆ.

ಕೋಟೆಯ ಸ್ಮಾರಕಗಳಿಗೆ ಸಂಬಂಧಿಸಿದಂತೆ ಇರುವ ಹಲವಾರು ಆಚರಣೆಗಳನ್ನು ಗಮನಿಸಿದರೆ ಅವು ಬರೀ ಆಯಾ ಕಾಲದ ಒತ್ತಡಗಳಿಂದ ಸೃಷ್ಟಿಗೊಂಡರೂ ಕಾಲಾನಂತರದಲ್ಲಿ ಹಲವಾರು ರೂಪಾಂತರಗಳನ್ನು ಹೊಂದುತ್ತಾ ಜೀವನ ಪದ್ಧತಿಗಳಾಗಿ ನೆಲೆಸಿರುತ್ತವೆ. ಈ ಆಚರಣೆಗಳಲ್ಲಿ ಕೆಲವಾರು ಸಮುದಾಯಗಳು ತಮ್ಮ ಜೀವನದ ಹಕ್ಕಾಗಿ ಈವತ್ತಿಗೂ ಕಾರ್ಯ ನಿರ್ವಹಿಸುತ್ತಾ ಬದುಕುತ್ತಿವೆ. ಯಾಕಾಗಿ ಸಮುದಾಯಗಳು ಜಾತ್ರೋತ್ಸವಗಳಂತಹ ವಿಶೇಷ ಆಚರಣೆಗಳಲ್ಲಿ ಅತ್ಯಂತ ಬೃಹತ್ ಪ್ರಮಾಣದಲ್ಲಿ ಸೇರುತ್ತವೆ? ಧಾರ್ಮಿಕ ಸಂತರ ಯಾವ ಶಕ್ತಿ ಸಮುದಾಯಗಳನ್ನು ಒಂದಡೆ ಸೇರಿಸಲು ಕಾರಣವಾಗಿದೆ? ಈ ತರಹದ ಉತ್ಸವಗಳಲ್ಲಿ ಪಾಲ್ಗೊಳ್ಳುವ ಮೂಲಕ ಸಮುದಾಯ ಏನನ್ನು ಪಡೆಯುತ್ತಿದೆ? ಈ ಪ್ರಶ್ನೆಗಳೆಲ್ಲವುಗಳನ್ನು ವಿಶ್ಲೇಷಿಸಿದರೆ ಕೋಟೆಯ ಸ್ಮಾರಕಗಳಿಗೆ ಸಂಬಂಧಿಸಿದ ಆಚರಣೆಗಳ ಉದ್ದೇಶ, ಕಾರ್ಯ ಏನೆಂಬುದು ಸ್ಪಷ್ಟವಾಗುತ್ತದೆ.

ಯಾವತ್ತಿಗೂ ಸಮುದಾಯವು ಪೂಜೆ, ಜಾತ್ರೋತ್ಸವದಂತಹ ವಿಶೇಷ ಆಚರಣೆಗಳಲ್ಲಿ ಬದುಕುವ ಚೈತನ್ಯವನ್ನು ಪಡೆಯುತ್ತವೆ. ತಮ್ಮ ವರ್ಗಕ್ಕೆ ಬಂದ ಹಕ್ಕುದಾರಿಕೆಯನ್ನು ಪೂರೈಸುತ್ತಾ ಸಮಾಜದಲ್ಲಿ ತನ್ನ ಅಸ್ಥಿತ್ವವನ್ನು ಅದು ವ್ಯಕ್ತಪಡಿಸುತ್ತಿರುತ್ತದೆ. ಸಮುದಾಯದ ವಿವಿಧ ವರ್ಗಗಳು ತಮ್ಮದೇ ಆದ ಕಾರ್ಯವನ್ನು ನಿರ್ವಹಿಸುತ್ತಾ ಆ ಮೂಲಕ ಎಲ್ಲರೂ ಒಗ್ಗಟ್ಟಾಗಿ ತಮ್ಮ ಐಡೆಂಟಿಟಿಯನ್ನು ಸಮರ್ಥಿಸಿ ಕೊಳ್ಳುತ್ತಾ ಬದುಕುತ್ತಿರುತ್ತಾರೆ. ಈ ರೀತಿ ಐಡೆಂಟಿಟಿಯನ್ನು ವ್ಯಕ್ತಪಡಿಸುವ ಕ್ರಿಯೆ ಆಚರಣೆಗಳಲ್ಲಿ ರುವ ಸಹಭಾಗಿತ್ವ ಗುಣವನ್ನು ಸೂಚಿಸುತ್ತದೆ. ಆಚರಣೆಯಲ್ಲಿನ ಯಾವುದೇ ಕಾರ್ಯವನ್ನು ಮಾಡುವಾಗ ವಿವಿಧ ವರ್ಗಗಳು ಅದನ್ನು ಒಪ್ಪಿಕೊಂಡು ಮನ್ನಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಸದ್ಯದ ಸಂದರ್ಭದಲ್ಲಿ ಆಚರಣೆಗಳು ಸಂಸ್ಕೃತೀಕರಣಗೊಳ್ಳುತ್ತಿವೆ. ಅಂದರೆ ಜನಪದ ಮೂಲವಾದ ಅದೆಷ್ಟೋ ಆಚರಣೆಗಳು ಇಂದು ಸಂಸ್ಕೃತವನ್ನೋ ಇಲ್ಲವೇ ಮೇಲ್ವರ್ಗದ ಪೂಜಾ ಪದ್ಧತಿಯನ್ನೋ ಅನುಸರಿಸುತ್ತಾ ಪರಿವರ್ತನೆ ಹೊಂದುತ್ತಿವೆ. ಇದನ್ನು ಸಮುದಾಯದ ಸಂಸ್ಕೃತೀಕರಣ ಎನ್ನುವುದಕ್ಕಿಂತ ಸಮುದಾಯದ ವಿಕಾಸ ಕ್ರಮ ಎಂದು ಕರೆಯುವುದು ಉಚಿತವೆನಿಸುತ್ತದೆ. ಏಕೆಂದರೆ ನಮ್ಮೆಲ್ಲಾ ಆಚರಣೆಗಳನ್ನು ವೈದಿಕ ವಿರೋಧಿ ಎಂದು ಪ್ರತಿಪಾದಿಸುವುದಕ್ಕಿಂತ ಯಾವೊಂದು ಆಚರಣೆ ಅಥವಾ ಸಮುದಾಯದ ಜೀವನ ಕ್ರಮವು ವಿಕಾಸ ಹೊಂದಬಹುದಾದರೂ ಬದಲಾವಣೆಯ ಸೂಚಕವಾಗಿ ಇದನ್ನು ಗ್ರಹಿಸಬೇಕಾಗುತ್ತದೆ.

ಆಚರಣೆಗಳು ಬಹುಮುಖೀ ಸಂವೇದನೆಯಿಂದ ರೂಪುಗೊಂಡಿರುತ್ತವೆ. ಇಲ್ಲಿ ಅನೇಕ ಕಾಲಘಟ್ಟಗಳು, ಅಸಂಖ್ಯಾತ ಅನುಭವಗಳ ಒಟ್ಟಿಗೆ ಕಾರ್ಯನಿರ್ವಹಿಸುತ್ತವೆ. ೧೭-೧೮-೧೭ನೇ ಶತಮಾನದಲ್ಲಿ ಸ್ಮಾರಕಗಳನ್ನು ನಿರ್ಮಿಸಿದ ಪಾಳೇಗಾರರ ಕಾಲದಿಂದಲೂ ಹಲವಾರು ಆಚರಣೆಗಳು ರೂಢಿಯಲ್ಲಿದ್ದವು. ಇವುಗಳ ಜೊತೆಗೆ ಪ್ರಸ್ತುತ ಸಂದರ್ಭದ ನಂಬಿಕೆ ಆಚರಣೆಗಳು ಸೇರಿಕೊಂಡು ಅಭಿವ್ಯಕ್ತವಾಗುತ್ತಿವೆ. ಇದಕ್ಕೆ ಮುಖ್ಯವಾಗಿ ಜೀವಂತ ಸಮುದಾಯ ಯಾವಾಗಲೂ ಈ ತರಹದ ಆಚರಣೆಗಳಿಗೆ ವರ್ತಮಾನದ ತಮ್ಮ ಬದುಕಿನ ಮೂಲಕವೇ ಪ್ರತಿಕ್ರಿಯೆ ನೀಡುವುದು ಕಾರಣವಾಗಿದೆ. ವರ್ತಮಾನದ ರಾಜಕೀಯಾರ್ಥಿಕ ಒತ್ತಡಗಳು ಆಚರಣೆಗಳನ್ನು ರೂಪಾಂತರಿಸುವುದೋ ಇಲ್ಲವೆ ಹೊಸದೊಂದು ಆಚರಣೆಗಳನ್ನು ಸೇರಿಸುವುದು ಬಿಡುವುದು ಕ್ರಿಯೆಗೆ ಕಾರಣವಾಗುತ್ತವೆ. ಪಾವಗಡದ ಪಾಳೇಗಾರರು ಕೋಟಮ್ಮ ಬಲಿಯಾದ ಕೊತ್ತಲಕ್ಕೆ ಪ್ರತಿವರ್ಷವು ವೇಣುಗೋಪಾಲಸ್ವಾಮಿಯ ತೇರನ್ನು ಹರಿಸಿ, ಹಸಿರು ಸೀರೆ, ಕುಪ್ಪಸ, ಬಳೆ, ಮಡಲಕ್ಕಿ ತುಂಬುವ ಆಚರಣೆ; ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ಆಚರಣೆ, ಕೊರಟಗೆರೆ ಗಂಗಾಧರೇಶ್ವರ ಸ್ವಾಮಿಗೆ ಕುಂಭಾಭೀಷೇಕ, ಇವೆಲ್ಲವೂ ಚಾರಿತ್ರಿಕ ಒತ್ತಡಗಳಿಂದ ಪಾಳೇಗಾರರಿಂದ ಪ್ರಾರಂಭಗೊಂಡಿದ್ದರೆ, ಹುಲಿಯೂರುದುರ್ಗದ ಆಷಾಡದಲ್ಲಿ ನಡೆಯುವ ಗಣಪತಿ ಉತ್ಸವ, ಹುತ್ರಿದುರ್ಗದಲ್ಲಿ ಶಿವರಾತ್ರಿಯ ದಿವಸ ಕುಂಭೀ ಶಂಕರ ದೇವಸ್ಥಾನದಲ್ಲಿ ನಡೆಯುವ ಪೂಜೆ, ಭಜನೆ ಕಾರ್ಯಕ್ರಮಗಳು, ನಿಡುಗಲ್ಲು ದುರ್ಗದಲ್ಲಿ ಶಿವರಾತ್ರಿಯ ದಿವಸ ಕಾಳಹಸ್ತೇಶ್ವರ ಮತ್ತು ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆಯುವ ಪೂಜೆ, ಭಜನೆ ಕಾರ್ಯಕ್ರಮಗಳು, ಹಾಗಲವಾಡಿ ಕೋಟೆಯ ಹೆಬ್ಬಾಗಿಲಲ್ಲಿ ಊರಿಗೆ ಬಂದ ಹೊಸ ಅಳಿಯಂದಿರು ಕರೆ ಕೀಳುವ ಆಚರಣೆ ಇತ್ಯಾದಿಗಳೆಲ್ಲವೂ ೨೧ನೇ ಶತಮಾನದ ರಾಜಕೀಯಾರ್ಥಿಕ ಒತ್ತಡಗಳಿಂದ ರೂಪುಗೊಂಡಂತಹ ಆಚರಣೆಗಳಾಗಿವೆ.

ಇಷ್ಟೇ ಅಲ್ಲದೆ ಆಚರಣೆಗಳೊಂದಿಗೆ ಹಾಡುಗಳು, ಡೊಳ್ಳು ಕುಣಿತಗಳು ಇನ್ನಿತರ ಕಲಾಪ್ರಕಾರಗಳು ಅಭಿವ್ಯಕ್ತಗೊಳ್ಳುತ್ತವೆ. ದೇವರಾಯನ ದುರ್ಗದ ನರಸಿಂಹಸ್ವಾಮಿ ಜಾತ್ರೋತ್ಸವದ ಸಮಯದಲ್ಲಿ ಜನಪದರು ಹಾಡುಗಳನ್ನು ಹಾಡುತ್ತಾರೆ. ಭಸ್ಮಾಂಗಿದುರ್ಗದ ಜಲಧಿ ದೋಣೆಯ ಹತ್ತಿರ ಹಲವಾರು ಆಚರಣೆಗಳ ನಡೆಯುವಾಗ ಜನಪದರು ಹಾಡುಗಳನ್ನು ಹಾಡುವುದು, ಡೊಳ್ಳು ಶಬ್ಧಕ್ಕೆ ಕುಣಿಯುವುದು ಮಾಡುತ್ತಾರೆ. ಇದೇ ರೀತಿ ನಿಡುಗಲ್ಲು ದುರ್ಗದ ರಾಮತೀರ್ಥದಲ್ಲಿ ಜಲಧಿ ಸಂದರ್ಭದಲ್ಲಿ ಕಾಡುಗೊಲ್ಲರು, ಮ್ಯಾಸಬೇಡರು ಹಲವಾರು ಹಾಡುಗಳನ್ನು ಹಾಡುತ್ತಾ ಓಲಗ ಶಬ್ಧಕ್ಕೆ ಕುಣಿಯುತ್ತಾರೆ. ಹೀಗೆ ಕೋಟೆಯ ಸ್ಮಾರಕಗಳಿಗೆ ನಡೆಯುವ ಆಚರಣೆಗಳ ಸಂದರ್ಭಗಳಲ್ಲಿ ಕೋಲಾಟದ ಪದಗಳು, ಭಜನೆ ಮೇಳಗಳು ಹಾಗೂ ಕೋಟೆಗೆ ಸಂಬಂಧಿಸಿದ ವಿವಿಧ ರೀತಿಯ ಹಾಡುಗಳನ್ನು ಹಾಡುವುದನ್ನು ಕಾಣಬಹುದು. ಹೀಗೆ ಸಮುದಾಯದೊಳಗಿನ ವಿವಿಧ ಕಲಾಪ್ರಕಾರಗಳು ಆಚರಣೆಯ ಮೂಲಕ ಅಭಿವ್ಯಕ್ತಿಗೊಳಿಸುತ್ತಿರುತ್ತವೆ.

ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಕೋಟೆಯ ಸ್ಮಾರಕಗಳಿಗೆ ಸಂಬಂಧಿಸಿದ ಪೂಜಾಚರಣೆಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಗಂಗೆಪೂಜೆ : ಪವಿತ್ರತೆಯ ಸಂಕೇತವಾದ ಗಂಗೆಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವವಾದ ಸ್ಥಾನಕೊಡಲಾಗಿದೆ. ಗಂಗೆಪೂಜೆಯನ್ನು ಪ್ರಾಚೀನಕಾಲದಿಂದಲೂ ಜನಸಮುದಾಯಗಳು ಪೂಜಿಸಿಕೊಂಡು ಬಂದಿವೆ. ಈ ಗಂಗೆಪೂಜೆ ಎರಡು ರೀತಿಯಲ್ಲಿ ನಡೆಯುತ್ತವೆ. ಒಂದು ಮಹಿಳೆಯರು ವೈಯಕ್ತಿಕ ಮನದಾಸೆ ಈಡೇರಿಸಲಿಕ್ಕೆ ಮಾಡುವುದಾದರೆ, ಇನ್ನೊಂದು ಸಮುದಾಯಗಳು ಸಾಮೂಹಿಕವಾಗಿ ಸೇರಿ ಧಾರ್ಮಿಕ ಶ್ರದ್ಧೆಯ ರೂಪದಲ್ಲಿ ನಡೆಯುವುದಾಗಿರುತ್ತದೆ. ಈ ರೀತಿಯ ಗಂಗೆಪೂಜೆಯನ್ನು ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಕಂಡುಬರುವ ದೋಣೆ(ಹೊಂಡ)ಗಳಲ್ಲಿ ಶ್ರದ್ಧಾಪೂರ್ವಕವಾಗಿ ನಡೆಯುತ್ತವೆ. ಈ ಗಂಗೆ ಪೂಜೆಯು ಹಬ್ಬ-ಹರಿದಿನಗಳಲ್ಲಿ, ಜಾತ್ರೋತ್ಸವಗಳ ಸಂದರ್ಭದಲ್ಲಿ ಮತ್ತು ಪ್ರತಿ ಸೋಮವಾರ, ಶನಿವಾರ ದಿನಗಳಲ್ಲಿ ನಡೆಯುತ್ತದೆ.

ಗಂಗೆಪೂಜೆಗೆ ಬರುವ ಹೆಣ್ಣು ಮಕ್ಕಳು ಬೆಳಗಿನ ಜಾವ ಸುಚಿರ್ಭೂತರಾಗಿ ಪೂಜೆಗೆ ಬೇಕಾದ ಸಾಮಗ್ರಿಗಳನ್ನು ತಂದು ದೋಣೆ(ಹೊಂಡ)ಯ ದಡದಲ್ಲಿ ಮರಳನ್ನು ಗುಡ್ಡೆ ಹಾಕಿ, ಬೆನಕ(ಚಿಕ್ಕಚಿಕ್ಕ ಕಲ್ಲಿನ ಚೂರು)ಗಳನ್ನು ಇಟ್ಟು ಅಲಂಕರಿಸಿ, ಅಕ್ಕಿ ಹಿಟ್ಟಿನಿಂದ ಮಾಡಿದ ಐದು ಅಥವಾ ಏಳು ತಂಬಿಟ್ಟಿನ ಎಡೆಗಳನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಪೂಜೆಯಾದ ನಂತರ ಇಟ್ಟ ಎಡೆಗಳಲ್ಲಿ ಒಂದನ್ನು ನೀರಿಗೆ ತೇಲಿಬಿಟ್ಟು ಕೈಮುಗಿದು ಇನ್ನೊಂದು ಎಡೆಯನ್ನು ಪೂಜಾಸ್ಥಳದಲ್ಲೇ ಬಿಟ್ಟು ಉಳಿದವುಗಳನ್ನು ಮನೆಗೆ ಕೊಂಡೊಯ್ಯುತ್ತಾರೆ. ಗಂಗೆಪೂಜೆಯನ್ನು ಹೆಂಗಸರು ಎರಡು ಸಂದರ್ಭದಲ್ಲಿ ನೆರವೇರಿಸುತ್ತಾರೆ. ಒಂದು ಬೇಡಿಕೆಗಿಂತ ಮುಂಚೆ ಮತ್ತು ಬೇಡಿಕೆ ಈಡೇರಿದ ನಂತರ ಮಾಡುವುದಾಗಿದೆ.

ಈ ರೀತಿಯ ಗಂಗೆಪೂಜೆಯನ್ನು ತುಮಕೂರು ಜಿಲ್ಲೆ ಕೋಟೆಯ ದೋಣೆ(ಹೊಂಡ)ಗಳಾದ ಹುತ್ರಿದುರ್ಗದ ಶಂಕರ ದೇವಸ್ಥಾನದ ದೋಣೆಯಲ್ಲಿ, ದೇವರಾಯನ ದುರ್ಗದ ಕುಂಭೀ ನರಸಿಂಹದೇವರ ಪುಷ್ಕರಣಿಯಲ್ಲಿ, ಕೊರಟಗೆರೆ ಗಂಗಾಧರೇಶ್ವರ ದೇವಸ್ಥಾನದ ಪುಷ್ಕರಣೆಯಲ್ಲಿ, ಮಿಡಿಗೇಶಿ ದುರ್ಗದ ಕನ್ನೇರಮ್ಮನ ದೋಣೆಯಲ್ಲಿ, ಭಸ್ಮಾಂಗೀ ದುರ್ಗದ ಏಳುಮಂದಿ ಅಕ್ಕಮ್ಮಂದೀರ ದೋಣೆಯಲ್ಲಿ, ಯಲ್ಲಪ್ಪನಾಯಕನ ಹೊಸಕೋಟೆಯ ಚೆನ್ನಕೇಶವ ದೇವಸ್ಥಾನದ ದೊಡ್ಡದೋಣೆಯಲ್ಲಿ, ನಿಡುಗಲ್ಲು ದುರ್ಗದ ರಾಮತೀರ್ಥ ಹಾಗೂ ಕಾಳಹಸ್ತೇಶ್ವರ ದೇವಸ್ಥಾನದ ತಿಳಿನೀರಿನ ಹೊಂಡದಲ್ಲಿ, ಚನ್ನರಾಯನ ದುರ್ಗದ ದೊಡ್ಡ ದೋಣೆಯಲ್ಲಿ ಪ್ರತಿ ಸೋಮವಾರ ಮತ್ತು ಶನಿವಾರದಂದು ತಪ್ಪದೆ ಆಚರಣೆ ನಡೆಯುತ್ತದೆ.

ಕೋಟೆಯಲ್ಲಿನ ದೋಣೆಗಳು ಮೂರು ರೀತಿಯಿಂದ ಸಂರಕ್ಷಿತಗೊಂಡಿವೆ. ಒಂದು ಪವಿತ್ರವಾದ ಗಂಗೆಯನ್ನು ಪೂಜೆ ಮಾಡುವುದರಿಂದ ಎರಡನೆಯದಾಗಿ ದುರ್ಗಕ್ಕೆ ದನಕರುಗಳನ್ನು ಮೇಯಿಸಲು ಹೋಗುವವರಿಗೆ ಕುಡಿಯಲು ನೀರು ಬೇಕಾಗಿರುವುದರಿಂದ ಮತ್ತು ಮಹಾನ್ ಪುರುಷರಾದ ಪಾಳೇಗಾರರು

ನಿರ್ಮಿಸಿರುವುದನ್ನು ಹಾಳು ಮಾಡಬಾರದೆಂಬ ಭಾವನೆಯಿಂದ ಇವುಗಳೊಂದಿಗೆ ಅಂತಃ ಸಂಬಂಧವಿಟ್ಟು ಕೊಂಡು ನೀರನ್ನು ಸಹ ಕಲುಷಿತಗೊಳಿಸದಂತೆ ಕಾಪಾಡಿಕೊಂಡು ಬರುತ್ತಿರುವುದನ್ನು ಇಂದಿಗೂ ಸಹ ಕಾಣಬಹುದಾಗಿದೆ.

ನಿಡುಗಲ್ಲು ದುರ್ಗದ ರಾಮತೀರ್ಥದಲ್ಲಿ ಜಲಧಿ ಆಚರಣೆ : ಪಾವಗಡ ತಾಲ್ಲೂಕಿನ ನಿಡುಗಲ್ಲು ದುರ್ಗದ ಬುಡದಲ್ಲಿರುವ ಪವಿತ್ರಹೊಂಡ 'ರಾಮತೀರ್ಥ'ವು ಸುತ್ತಲ ತಾಲ್ಲೂಕಿನ ಜನಸಮುದಾಯಗಳಿಗೆ ಪುಣ್ಯಕ್ಷೇತ್ರವಾಗಿದೆ. ಶುದ್ಧವಾದ ನೀರನ್ನು ಹೊಂದಿರುವ ಪವಿತ್ರವೆಂದು ಭಾವಿಸಿರುವ ಈ ಹೊಂಡಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ಮತ್ತು ಆಂಧ್ರಪ್ರದೇಶದ ಮಡಶಿರಾ, ಕುಂದಿರ್ಪಿ (ಕಲ್ಯಾಣದುರ್ಗ), ಹಾಗೂ ಪಾವಗಡ ತಾಲ್ಲೂಕಿನ ಎಲ್ಲಾ ದೇವರುಗಳನ್ನು ನಿಡುಗಲ್ಲು ರಾಮತೀರ್ಥಕ್ಕೆ ಜಲಧಿಗೆ ತೆಗೆದು ಕೊಂಡು ಬರುವ ಸಂಪ್ರದಾಯವಿದೆ.

ಮಳೆ, ಬೆಳೆ ಸಮೃದ್ಧಿಯಾದಾಗ, ಪೂಜಾರಿ ಮತ್ತು ದಾಸಯ್ಯಗಳಿಗೆ ಪಟ್ಟಕಟ್ಟುವಾಗ, ಹಬ್ಬ-ಹರಿದಿನ ಗಳಲ್ಲಿ ದೇವರುಗಳ ಒಡವೆ ಬೆಳಗಬೇಕೆಂದಾಗ, ಯಾರಾದರೂ ಭಕ್ತರು ಹರಕೆ ಮಾಡಿಕೊಂಡಾಗ ದೇವರುಗಳನ್ನು ಹೊರಡಿಸಿಕೊಂಡು ನಿಡುಗಲ್ಲು ದುರ್ಗದ ರಾಮತೀರ್ಥಕ್ಕೆ 'ಜಲಧಿ'ಗಾಗಿ ಬರುತ್ತಾರೆ.

ದೇವರುಗಳನ್ನು ರಾಮತೀರ್ಥಕ್ಕೆ ತಂದ ಕೂಡಲೇ ಹೊಂಡದ ದಡದಲ್ಲಿ ಕರಿಕಂಬಳಿ ಗದ್ದುಗೆ ಮಾಡಿ ದೇವರಿಟ್ಟು, ಒಡವೆ ವಸ್ತ್ರಗಳನ್ನು ಕೊಳದ ನೀರಿನಿಂದ ಶುದ್ಧೀಕರಿಸಿ, ಎಲ್ಲರೂ ಸ್ನಾನ ಮಾಡಿ, ದೇವರಿಗಾಗಿ ತಳಿಗೆ(ಪ್ರಸಾದ) ಮಾಡಿ, ತಾಮ್ರದ ಬಿಂದಿಗೆಯಲ್ಲಿ ಹೊಂಡದ ನೀರನ್ನು ತಂದು, ದಡದಲ್ಲಿ ೧೦೧ ಎಡೆ ಹಾಕಿ, ದೇವರುಗಳ ಜಲಧಿ ಪೂಜೆ ಮಾಡುತ್ತಾರೆ. ಪೂಜೆಯಾದನಂತರ ಕೆಲವು ಭಕ್ತಾಧಿಗಳು ಕುಣಿಯುವುದರಲ್ಲಿ ನಿರತರಾದರೆ ಇನ್ನೂ ಕೆಲವರು ಹರಿಸೇವೆ(ಭೋಜನ) ಮಾಡುವುದರ ಮೂಲಕ ತಮ್ಮ ತಮ್ಮ ಅರಿಕೆಯನ್ನು ತೀರಿಸುತ್ತಾರೆ.

ದೇವರನ್ನು ಎಬ್ಬರಿಸುವಾಗ ಹೊರಡಿಸುವಾಗ ಜೋರಾಗಿ ಉರುಮೆಯನ್ನು ಬಡಿಯುತ್ತಾರೆ. ಆಗ ಎಲ್ಲಾ ಭಕ್ತಾಧಿಗಳ ಚಪ್ಪಾಳೆ ತಟ್ಟುತ್ತಾ ಜಯಘೋಷ ಹಾಕುತ್ತಾರೆ. ಅಲ್ಲದೆ ಹೆಣ್ಣು ಮಕ್ಕಳು ದೇವರ ಮೇಲೆ ಜನಪದ ಗೀತೆಗಳನ್ನು ಹಾಡುತ್ತಾರೆ.

ಭವನಾಸಿಯಿಂದ ನೀರು ಹಾಕುವ ಆಚರಣೆ : ನಿಡುಗಲ್ಲು ದುರ್ಗದ ರಾಮತೀರ್ಥದಲ್ಲಿ ಶ್ರಾವಣಮಾಸದ ತಿಂಗಳಲ್ಲಿ 'ಭವನಾಸಿಯಿಂದ ನೀರು ಹಾಕುವ' ಆಚರಣೆಯೊಂದು ನಡೆಯುತ್ತದೆ. ಇದು ಈ ಭಾಗದ ಆಚರಣೆಗಳಲ್ಲೇ ವಿಶಿಷ್ಟವಾದದ್ದು. ರಾಮತೀರ್ಥದಲ್ಲಿನ ನೀರಿಗೆ ಇಳಿಯಲು ಹೆಂಗಸರಿಗೆ ಹಾಗೂ ಮಕ್ಕಳಿಗೆ ನಿಷೇಧವಿದೆ. ಆ ಹಿನ್ನೆಲೆಯಲ್ಲಿ ದಾಸಯ್ಯನಿಗೆ ಇಲ್ಲಿ ಮುಖ್ಯಸ್ಥಾನವಿದೆ. ರಾಮತೀರ್ಥದಲ್ಲಿನ ನೀರನ್ನು ದಾಸಯ್ಯನ ಭವನಾಸಿಯಿಂದ ಹೆಂಗಸರು ಹಾಗೂ ಮಕ್ಕಳು ತಮ್ಮ ತಲೆಯ ಮೇಲೆ

ಹಾಕಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಈ ಭಾಗದ ಜನರಲ್ಲಿದೆ. ಹಾಗಾಗಿ ಇಂದಿಗೂ ಸಹ ಈ ಆಚರಣೆ ಪ್ರಚಲಿತದಲ್ಲಿದೆ.

ನಿಡುಗಲ್ಲು ದುರ್ಗದ ರಾಮತೀರ್ಥದಲ್ಲಿ ಮಹಿಳೆಯರು ಇಳಿಯಬಾರದೆಂದು ನಿಷೇಧವಿದೆ. ಅದರಂತೆ ಹೆಂಗಸರಿಗೆ ಪರ್ಯಾಯವಾಗಿ ದಾಸಯ್ಯಗಳು ಭವನಾಸಿಯಿಂದ ರಾಮತೀರ್ಥದ ಹೊಂಡದಿಂದ ನೀರನ್ನು ದಡಕ್ಕೆ ತಂದು ಹೆಣ್ಣುಮಕ್ಕಳ ತಲೆಯ ಮೇಲೆ ಹಾಕುತ್ತಾರೆ. ಇದರಿಂದ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆಯಿದೆ. ರಾಮತೀರ್ಥವು ದೊಡ್ಡ ದೋಣೆಯಾಗಿರುವುದರಿಂದ ಚಿಕ್ಕ ಮಕ್ಕಳನ್ನು ಇಳಿಸುವುದಿಲ್ಲ. ಹೆಂಗಸರೊಂದಿಗೆ ಚಿಕ್ಕ ಮಕ್ಕಳಿಗೂ ಭವನಾಸಿಯಿಂದ ನೀರನ್ನು ಹಾಕುವುದು ರೂಢಿಯಿದೆ. ಇದರಿಂದ ಭಕ್ತಾಧಿಗಳು ಭವನಾಶಿಗೆ ಕಾಣಿಕೆಯನ್ನು ಹಾಕುತ್ತಾರೆ. ಇದು ದೇವರುಗಳ ಜಲಧಿಯ ಸಂದರ್ಭದಲ್ಲಿ ಮತ್ತು ಶ್ರಾವಣ ಮಾಸದ ತಿಂಗಳಲ್ಲಿ ನಡೆಯುತ್ತದೆ.

ಜಲಧಿ ದೋಣೆಯಲ್ಲಿನ ಆಚರಣೆಗಳು

ಜಲಧಿ ದೋಣೆಯು ಭಸ್ಮಾಂಗಿ ದುರ್ಗದ ಮಧ್ಯಭಾಗದಲ್ಲಿದೆ. ಇದರಲ್ಲಿ ಸದಾ ನೀರು ಇರುತ್ತದೆ. ಈ ದೋಣೆಯು ಸುತ್ತ ಮುತ್ತಲ ಪ್ರದೇಶದವರಿಗೆ ಪವಿತ್ರವಾದ ದೋಣೆಯಾಗಿದೆ. ಇದರಲ್ಲಿ ಜಲಧಿಯನ್ನು ಮಾಡುವುದಕ್ಕಾಗಿ ಸುತ್ತಲ ಗ್ರಾಮದ ದೇವರುಗಳನ್ನು ತರುವುದು ರೂಢಿ. ಈ ಜಲಧಿ ಆಚರಣೆಯು ಶಿವರಾತ್ರಿ ಹಬ್ಬವಾಗಿ ಒಂದು ವಾರ ಕಳೆದ ಮೇಲೆ ಮತ್ತು ಶ್ರಾವಣದ ಕಡೆ ವಾರದಲ್ಲಿ ನಡೆಯುತ್ತದೆ.

ಭಸ್ಮಾಂಗಿ ದುರ್ಗದ ಜಲಧಿ ದೋಣೆಯಲ್ಲಿ ಜಲಧಿ ಆಚರಣೆ ಮಾಡಲು ಬರುವ ಸುತ್ತಲ ದೇವರುಗಳೆಂದರೆ, ಕಿತ್ತಗಳಿಯ ಆಂಜನೇಯ, ಸಿಂಗರಾತ್ತನಹಳ್ಳಿಯ ಯಲ್ಲಮ್ಮ, ಕಾರ್ಪೆಹಳ್ಳಿಯ ಬಾಣದ ರಂಗಪ್ಪ, ಭಸ್ಮಾಂಗಿಯ ಈರಣ್ಣಸ್ವಾಮಿ, ಈರಮ್ಮ, ಯಲ್ಲಮ್ಮ, ವೀರಭದ್ರಸ್ವಾಮಿ ಮತ್ತು ಬಳೇಕಟ್ಟೆ ಈರಮ್ಮ ಮುಖ್ಯವಾಗಿವೆ. ಜಲಧಿಗಾಗಿ ಊರಿನ ಜನರೆಲ್ಲರೂ ಮನೆಗಳನ್ನು ಸುಣ್ಣಬಣ್ಣಗಳಿಂದ ಶೃಂಗರಿಸಿಟ್ಟುಕೊಂಡಿರುತ್ತಾರೆ. ಜಲಧಿಗೆ ಹೋಗುವುದಕ್ಕಿಂತ ಮುಂಚೆ ಎಲ್ಲರೂ ಸ್ನಾನ ಮಾಡಿಕೊಂಡು, ಬೆಳಿಗ್ಗೆಯೇ ದೇವರ ಉತ್ಸವ ಮೂರ್ತಿಗಳನ್ನು ತೆಗೆದುಕೊಂಡು ಅರೆ-ವಾದ್ಯಗಳೊಂದಿಗೆ ಭಸ್ಮಾಂಗಿ ದುರ್ಗದ ಜಲಧಿದೋಣೆಯ ದಡದಲ್ಲಿ ಬಂದು ಸೇರುತ್ತಾರೆ. ಜಲಧಿ ದೋಣೆಯ ದಡದಲ್ಲಿ ಕರಿಕಂಬಳಿಯ ಗದ್ದುಗೆ ಹಾಸಿ, ಅದರ ಮೇಲೆ ಅಕ್ಕಿಯನ್ನು ಚೆಲ್ಲಿ, ಎಲ್ಲಾ ದೇವರುಗಳನ್ನು ಕುಳ್ಳಿರಿಸುತ್ತಾರೆ. ಇಲ್ಲಿಂದ ಒಂದೊಂದೆ ಆಚರಣೆ ಕ್ರಮವಾಗಿ ನೆರವೇರುತ್ತವೆ.

ಒಡವೆ ಬೆಳಗುವುದು : ಜಲಧಿಗಾಗಿ ಬಂದಿರುವ ಎಲ್ಲಾ ದೇವರುಗಳ ಒಡವೆಗಳನ್ನು ಬಿಡಿಸಿಕೊಂಡು, ಅವನ್ನು ದೋಣೆಯ ನೀರಿನಿಂದ ತೊಳೆಯುತ್ತಾರೆ. ಒಡವೆಗಳನ್ನು ದೋಣೆಯಲ್ಲಿ ತೊಳೆಯುವುದಿಲ್ಲ. ಏಕೆಂದರೆ ದೋಣೆಯೊಳಗೆ ಒಡವೆ ಕಳೆದು ಹೋಗಬಹುದು ಮತ್ತು ದೋಣಿಯಲ್ಲಿನ ನೀರು

ಕಲುಶಿತವಾಗಬಹುದು ಹಾಗಾಗಿ ಮೀಸಲು ಬಿಂದಿಗೆಯಿಂದ ದೋಣಿಯಲ್ಲಿ ನೀರನ್ನು ತಂದು ದೇವರ ಒಡವೆಗಳನ್ನು ಸ್ವಚ್ಛಗೊಳಿಸಿ ಜೋಡಿಸುತ್ತಾರೆ.

ಗಂಗೆಪೂಜೆ : ಉತ್ಸವಮೂರ್ತಿ ಹಾಗೂ ಒಡವೆಗಳನ್ನು ದೋಣೆಯ ನೀರಿನಿಂದ ತೊಳೆದ ನಂತರ ಗಂಗೆಯ ಪೂಜೆ ಆರಂಭವಾಗುತ್ತದೆ. ಜಲಧಿದೋಣೆಯ ನೀರಿನ ದಡದಲ್ಲಿ ಮರಳನ್ನು ಗುಡ್ಡೆ ಹಾಕಿ, ಅದರ ಮೇಲೆ ಐದು ಬೆನಕಗಳನ್ನು ನೀರಿನಿಂದ ತೊಳೆದು ಇಡುತ್ತಾರೆ. ಅದಕ್ಕೆ ಅರಿಶಿನ-ಕುಂಕುಮ, ಬಳೆ-ಬಿಚ್ಚಾಲೆ, ಹೂವು, ಹೊಂಬಾಳೆ, ಹಸಿ ಅಕ್ಕಿಯಿಂದ ಮಾಡಿದ ತಂಬಿಟ್ಟು, ಎಲೆ-ಅಡಿಕೆ, ಬಾಳೆಹಣ್ಣು, ಬಿಳಿಬಟ್ಟೆ ಇವೆಲ್ಲವನ್ನು ಇಟ್ಟ ಮೇಲೆ ಪೂಜಾರಪ್ಪನು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಪೂಜೆಯನ್ನು ಮಾಡುತ್ತಾನೆ. ಅದೇ ರೀತಿ ಉತ್ಸವ ಮೂರ್ತಿಗಳಿಗೂ ಪೂಜೆ ಮಾಡಿ ನಂತರ ಮುತ್ತೈದೆಯರಿಗೆ ಗಂಗಮ್ಮನ ಪೂಜೆಗೆ ಇಟ್ಟಿದ್ದ ಎಡೆಯನ್ನು ಕೊಟ್ಟು ಉಳಿದವರಿಗೆ ಚರಪು(ಫಳಾರ) ಹಂಚುತ್ತಾರೆ. ಇದಾದನಂತರ ಒಬ್ಬೊಬ್ಬರಾಗಿ ಜಲಧಿಯ ನೀರನ್ನು ಪೂಜಾರಿಯಿಂದ ಹಾಕಿಸಿಕೊಳ್ಳುತ್ತಾರೆ.

ಮಣೇವು ಇಡುವುದು : ಮಣೇವು ಇಡುವುದು ಜನರಿಗೆ ಮನರಂಜನೆ ಕೊಡುವ ಒಂದು ಆಚರಣೆಯೂ ಹೌದು. ಮಣೇವನ್ನು ಮೂರು ಬಾರಿ ಅಥವಾ ಐದು ಬಾರಿ ಇಡುವ ಪದ್ಧತಿಯಿದೆ. ಮಣೇವು ಎಂದರೆ 'ಅಗಸರ ಮಡಿ ಬಟ್ಟೆಯನ್ನು ಉದ್ದವಾಗಿ ಹಾಸುತ್ತಾರೆ. ಅದರ ಮೇಲೆ ಚರಪುನ್ನು(ಫಳಾರ) ಇಡುತ್ತಾರೆ. ಬಟ್ಟೆಯ ಎರಡು ತುದಿಯಲ್ಲಿ ಇಟ್ಟಿದ್ದ ಫಳಾರನ್ನು ಯಾರು ಬಟ್ಟೆಯನ್ನು ಹಾಸಿರುತ್ತಾರೋ ಅವರು ಮುಚ್ಚುತ್ತಾರೆ. ಅದು ಅವರಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಬಟ್ಟೆಯ ಪಕ್ಕದಲ್ಲಿ ದಾಸಯ್ಯನನ್ನು ಗರುಡುಗಂಭ ಸಮೇತರಾಗಿ ನಿಲ್ಲಿಸುತ್ತಾರೆ. ಆನಂತರ ಅರೆ-ವಾದ್ಯದವರು ಬಡಿಯುವ ಶಬ್ದಕ್ಕೆ ತಕ್ಕಂತೆ ಸೇರಿದ್ದ ಕೆಲವು ಜನರು ಕುಣಿಯುತ್ತಾರೆ. ಕುಣಿಯುತ್ತಾ, ಕುಣಿಯುತ್ತಾ ಫಳಾರವನ್ನು ಜನರು ತೆಗೆದುಕೊಂಡು ತಿನ್ನುತ್ತಾರೆ. ಇದೇ ರೀತಿ ಮೂರು ಅಥವಾ ಐದು ಬಾರಿ ಮಣೇವು ಇರುತ್ತದೆ. ಮಣೇವು ಆಚರಣೆಯಲ್ಲಿ ವಿಶೇಷವಾಗಿ ಅರೆಯ ಶಬ್ದಕ್ಕೆ ಕುಣಿಯುವುದೇ ಪ್ರಧಾನವಾಗಿರುತ್ತದೆ.

ಚಾಟಿ ಹೊಡೆದುಕೊಳ್ಳುವುದು : ಜಲಧಿ ದೋಣೆಯ ಆಚರಣೆಯಲ್ಲಿ ಚಾಟಿ ಹೊಡೆದುಕೊಳ್ಳುವುದು ಒಂದು. ಮಣೇವು ಇಡುವುದು ಮುಗಿಯುವುದರೊಳಗಾಗಿಯೇ ಅರೆಯ ಶಬ್ದ ರಂಗೇರುತ್ತದೆ. ಇದರಿಂದ ಕೆಲವರಿಗೆ ದೇವರು ಮೈ ಮೇಲೆ ಬರುತ್ತಾನೆ. ಆಗ ಚಾಟಿಯನ್ನು ಕೊಡುತ್ತಾರೆ. ದೇವರು ಮೈಮೇಲೆ ಬಂದ ವ್ಯಕ್ತಿಯ ಒಂದೇ ಸಮನೆ ಚಾಟಿಯನ್ನು ಸುತ್ತ ತಿರುವಿ ತನ್ನ ಮೈಗೆ 'ಚಟಾರ್' ಎಂದು ಬಡಿದುಕೊಳ್ಳುತ್ತಾನೆ. ಈ ರೀತಿ ಮೂರು ಅಥವಾ ಐದು ಬಾರಿ ಬಡಿದುಕೊಂಡ ಮೇಲೆ ಚಾಟಿಯನ್ನು ಕಿತ್ತುಕೊಂಡು, ನಂತರ ಅಲಗನ್ನು ಕೊಡುತ್ತಾರೆ. ಆತನು ಅಲಗನ್ನು ಮುಂದೆ ಒಂದು ಬಾರಿ ತಂದು ಸಾಂಕೇತಿಕವಾಗಿ ಹೊಟ್ಟೆಗೆ ಹಾಕಿಕೊಳ್ಳುತ್ತಾನೆ. ಬಹುಶಃ ಹಿಂದೆ ಇದೊಂದು ಉಗ್ರ ಆಚರಣೆ ಇರಬಹುದು. ಆದರೆ ಇಂದು ಅಲಗನ್ನು ಹೊಟ್ಟೆಗೆ ಮುಟ್ಟಿಸಿಕೊಳ್ಳುವ ಸಾಂಕೇತಿಕ ಆಚರಣೆಯಾಗಿ ಉಳಿದುಕೊಂಡು ಬಂದಿದೆ.

ದ್ರಿಷ್ಟಿ ತೆಗೆಯುವುದು : ಜಲಧಿ ದೋಣಿಯ ಕಾರ್ಯಕ್ರಮದಲ್ಲಿ ದ್ರಿಷ್ಟಿ ತೆಗೆಯುವ ಆಚರಣೆಯು ಒಂದು ವಿಶಿಷ್ಟವಾಗಿದೆ. ದ್ರಿಷ್ಟಿ ಎಂದರೆ "ಬೆಳಗಿನಿಂದಲೂ ಹಲವಾರು ಜನರು ದೇವರನ್ನು ಕಣ್ಣಿನಿಂದ ನೋಡಿರುತ್ತಾರೆ. ಇವರಲ್ಲಿನ ಕೆಲವು ಜನರ ಕಣ್ಣುಗಳಿಂದ ದೇವರಿಗೆ ದ್ರಿಷ್ಟಿಯಾಗಿರುತ್ತದೆ ಎಂಬ ಭಾವನೆಯಾಗಿದೆ." ಹಾಗಾಗಿ ಈ ಕೆಟ್ಟ ಕಣ್ಣುಗಳಿಂದ ಆಗಿರುವ ದ್ರಿಷ್ಟಿಯನ್ನು ಹೋಗಲಾಡಿಸುವುದಕ್ಕೆ ಈ ರೀತಿ ಆಚರಣೆ ಮಾಡುತ್ತಾರೆ. ದ್ರಿಷ್ಟಿ ತೆಗೆಯಲು ಒಂದು ಮಣ್ಣಿನ ಮುಚ್ಚಳವನ್ನು ತೆಗೆದುಕೊಂಡು ಅದರಲ್ಲಿ ಕೊಬ್ಬರಿ, ಹರಳು, ತುಪ್ಪ ಬೆರಸಿ, ಅದಕ್ಕೆ ಬೆಂಕಿಯನ್ನು ಹಚ್ಚುತ್ತಾರೆ. ನಂತರ ಎಲ್ಲಾ ದೇವರ ಉತ್ಸವ ಮೂರ್ತಿಗಳ ಹತ್ತಿರ ತೆಗೆದುಕೊಂಡು ಹೋಗಿ ದೇವರಿಗೆ ದ್ರಿಷ್ಟಿ ತೆಗೆಯುತ್ತಾರೆ. ಇದರಿಂದ ಕೊನೆಯಲ್ಲಿ ದೇವರಿಗೆ ದ್ರಿಷ್ಟಿ ಹೋಗುತ್ತದೆ ಎನ್ನುವ ಭಾವನೆ ಜನರಲ್ಲಿ ಮೂಡಿರುತ್ತದೆ.

ಮಂಗಳಾರತಿ : ಯಾವುದೇ ಒಂದು ಪೂಜೆಯನ್ನು ಮುಗಿಸಬೇಕೆಂದರೆ ಮಂಗಳಾರತಿ ಇದ್ದೇ ಇರುತ್ತದೆ. ಮಂಗಳಾರತಿ ತಟ್ಟೆಯಲ್ಲಿ ಕರ್ಪೂರವನ್ನು ಹಾಕಿಕೊಂಡು ಎಲ್ಲಾ ದೇವರುಗಳಿಗೆ ಮಂಗಳಾರತಿ ಮಾಡುತ್ತಾರೆ. ಇದು ಅಂತಿಮವಾದ ಆಚರಣೆಯಾಗಿರುತ್ತದೆ. ಮಂಗಳಾರತಿ ಮುಗಿದ ಮೇಲೆ ಎಲ್ಲಾ ಉತ್ಸವಮೂರ್ತಿಗಳನ್ನು ಎಬ್ಬರಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ಅರೆ ವಾದ್ಯಗಳೊಂದಿಗೆ ಹೋಗುತ್ತಾರೆ.

ಸಂಕೋಲೆ ಬಸವಣ್ಣನ ಪೂಜೆ : ಹುತ್ರಿದುರ್ಗ ಕೋಟೆಯಲ್ಲಿರುವ ಸಂಕೋಲೆ ಬಸವಣ್ಣನಿಗೆ ವಡೇಗಟ್ಟದ ಜನರು ಸಾಮೂಹಿಕವಾಗಿ ಬಂದು ಪ್ರತಿ ಶ್ರಾವಣಮಾಸದಲ್ಲಿ ಪೂಜೆ ಮಾಡುವುದು ರೂಢಿಯಲ್ಲಿದೆ. ಈ ಪೂಜೆಯನ್ನು ಸೋಮವಾರ ದಿನದಂದು ನೆರವೇರಿಸುತ್ತಾರೆ. ಸೋಮವಾರದ ಹಿಂದಿನ ದಿವಸ ಸಂಕೋಲೆ ಬಸವಣ್ಣನ ಗುಡಿಯನ್ನು ಸುಣ್ಣ-ಬಣ್ಣದಿಂದ ಶೃಂಗರಿಸಿ, ಬಸವಣ್ಣನ ವಿಗ್ರಹವನ್ನು ತೊಳೆದು ಸ್ವಚ್ಛವಾಗಿರಿಸುತ್ತಾರೆ.

ಸೋಮವಾರ ಬೆಳಿಗ್ಗೆ ವಡೇಗಟ್ಟದಿಂದ(ಹುತ್ರಿದುರ್ಗದಿಂದ ಎರಡು ಕಿ.ಮೀ.ದೂರ) ಎಲ್ಲರೂ ಸುಚಿರ್ಭೂತರಾಗಿ ಅರೆ-ವಾದ್ಯ ಸಮೇತರಾಗಿ ಬರುತ್ತಾರೆ. ಬಸವಣ್ಣನ ಗುಡಿಯನ್ನು ಹೂವು, ತೋರಣ, ಬಾಳೆಕಂದುಗಳಿಂದ ಅಲಂಕರಿಸುತ್ತಾರೆ. ಗುಡಿಯ ಮುಂದೆ ಚಪ್ಪರ ಹಾಕಿ, ಅದಕ್ಕೂ ತೋರಣ, ಕಂದು ಕಟ್ಟುತ್ತಾರೆ. ಮೊದಲಿಗೆ ಎಲ್ಲರೂ ಸೇರಿ ತಳಿಗೆ(ಅಡುಗೆ)ಯನ್ನು ಮಾಡುತ್ತಾರೆ. ನಂತರ ತಳಿಗೆಯನ್ನು ಬಸವಣ್ಣನಿಗೆ ಎಡೆಹಾಕಿ, ನಂತರ ಪೂಜೆಯನ್ನು ಮಾಡುತ್ತಾರೆ. ಮಣೇವು ಅರೆ-ವಾದ್ಯಗಳ ಇಟ್ಟು, ಶಬ್ದಕ್ಕೆ ಕುಣಿಯುತ್ತಾರೆ. ಇದಾದ ನಂತರ ಅಡುಗೆಯನ್ನು ಎಲ್ಲರೂ ಪ್ರಸಾದವೆಂದು ಊಟ ಮಾಡುತ್ತಾರೆ. ಅಲ್ಲದೆ ಜನರು ಊರಿಗೆ ಹೋಗುವಾಗಲೂ ಅರೆ-ವಾದ್ಯಗಳೊಂದಿಗೆ ಸಾಗುತ್ತಾರೆ. ಬಸವಣ್ಣನ ಪೂಜೆಯು ವಿಶೇಷವಾಗಿ ತಳಿಗೆ ಹಾಕುವುದು ನಂತರ ಪೂಜೆ ಮಾಡುವುದೇ ಮುಖ್ಯ ಉದ್ದೇಶವಾಗಿದೆ.

ಶ್ರೀ ಕುಂಭಿ ಮಹಾಗಣಪತಿ ವಾರ್ಷಿಕ ಪೂಜಾಚರಣೆ : ಹುಲಿಯೂರು ದುರ್ಗದ ಮೂರನೇ ಕೋಟೆಯ ಬಳಿಯಿರುವ ಗಣಪತಿಯನ್ನು ಒಂದು ಬೃಹತ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಉಬ್ಬುಶಿಲ್ಪವನ್ನು

ಕೆಂಪೇಗೌಡನು ನಿರ್ಮಿಸಿರಬಹುದೆಂದು ಊಹಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಊರಿನ ಜನರು ಅದಕ್ಕೆ ದೇವಾಲಯ ನಿರ್ಮಿಸಿ ಅದಕ್ಕೆ ಪ್ರತಿನಿತ್ಯ, ವಾರ-ಮಾಸ-ವಾರ್ಷಿಕಾಚರಣೆ ಮಾಡುತ್ತಿರುವುದು ಕಂಡುಬರುತ್ತದೆ.

ಕುಂಭಿ ಗಣಪತಿಗೆ ಪ್ರತಿವರ್ಷ ಆಷಾಢಮಾಸದಲ್ಲಿ ಜಾತ್ರೆಯು ನಡೆಯುತ್ತದೆ. ಈ ಕಾರ್ಯಕ್ರಮವು ಬೆಳಗಿನ ಜಾವ ೫.೩೦ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ ೧೨.೩೦ಕ್ಕೆ ಮುಕ್ತಾಯವಾಗುತ್ತದೆ. ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸುತ್ತಲ ಎಲ್ಲಾ ಜನರು ಬಂದು ಕೆಲಸಕಾರ್ಯಗಳಲ್ಲಿ ಯಾವುದೇ ಭೇದ ಭಾವವಿಲ್ಲದೆ ಸೇರುತ್ತಾರೆ.

ಹುಲಿಯೂರು ದುರ್ಗದ ಶ್ರೀ ಜ್ಯೋತಿಕ ಮಹೇಶ್ವರಸ್ವಾಮಿ ಸೇವಾ ಸಮಿತಿಯವರು ಪೂಜಾಕಾರ್ಯ ಕ್ರಮವನ್ನು ನೆರವೇರಿಸುತ್ತಾರೆ. ಈ ದೇವಾಲಯವನ್ನು ಪ್ರಾರಂಭದಲ್ಲಿ ಸುಣ್ಣ-ಬಣ್ಣಗಳಿಂದ ಶುದ್ಧೀಕರಿಸಿರುತ್ತಾರೆ. ಪೂಜಾಕಾರ್ಯಕ್ರಮದ ದಿನ ಎಲ್ಲರೂ ಸುಚಿರ್ಭೂತರಾಗಿ ಗಣಪತಿಯನ್ನು ಮೈಲಿಗೆಯಾಗದ ನೀರಿನಿಂದ ತೊಳೆದು ಹೂವನ್ನು ಮುಡಿಸುತ್ತಾರೆ. ನಂತರ ಗಣಪತಿಯ ಮುಂದೆ ಹೋಮವನ್ನು ಪ್ರಾರಂಭಿಸುತ್ತಾರೆ. ಹೋಮದಲ್ಲಿ ಸೇವಾ ಸಮಿತಿಯವರು ಕುಳಿತು ಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಎಲ್ಲಾ ಜನರು ನೆರೆದಿರುತ್ತಾರೆ. ಕೋಟೆಯೊಳಗೆ ಅಂಗಡಿ ಮಟ್ಟುಗಳು ತುಂಬಿರುತ್ತವೆ. ಜೊತೆಗೆ ಜಾತ್ರೆಯಲ್ಲಿ ಜನಪದ ಆಟಗಳು ಅಲ್ಲಲ್ಲಿ ನಡೆಯುತ್ತಿರುತ್ತವೆ. ಕೆಲವು ಜನರು ಹೋಮದಲ್ಲಿ ಭಾಗಿಯಾಗಿದ್ದರೆ, ಕೆಲವು ಜನ ಅಂಗಡಿಗಳಲ್ಲಿ ಸಾಮಾನುಗಳನ್ನು ಖರೀದಿ ಮಾಡುತ್ತಿರುತ್ತಾರೆ.

ಗಣಪತಿಗೆ ಹೋಮದ ಆಚರಣೆ ಮುಗಿದ ನಂತರ ಗಣಪತಿಯ ಪೂಜೆಯು ನಡೆಯುತ್ತದೆ. ಮಂಗಳಾರತಿ ಮುಗಿದ ಮೇಲೆ ಜನರಿಗೆ ದಾಸೋಹದ ಕಾರ್ಯಕ್ರಮವಿರುತ್ತದೆ. ಜನರೆಲ್ಲ ಗಣಪತಿಗೆ ವೈಯಕ್ತಿಕವಾಗಿ ಪೂಜೆ ಸಲ್ಲಿಸಿ, ಪ್ರಸಾದ ಪಡೆದು ತಮ್ಮ ಊರುಗಳಿಗೆ ತೆರಳುತ್ತಾರೆ. ಗಣಪತಿಯ ಪೂಜಾ ಆಚರಣೆಯು ಬೆಳಗಿನಿಂದ ಮಧ್ಯಾಹ್ನದವರೆಗೆ ಮಾತ್ರ ನೆರವೇರುತ್ತದೆ.

ಕುಂಭೀ ಶಂಕರದೇವಾಲಯದ ಪೂಜೆ : ಹುತ್ರಿದುರ್ಗದಲ್ಲಿರುವ ಈ ದೇವಾಲಯವು ಪ್ರತಿ ಶಿವರಾತ್ರಿಯಲ್ಲಿ ವಿಶೇಷವಾಗಿ ಪೂಜೆಗೆ ಒಳಗಾಗುತ್ತದೆ. ಶಿವರಾತ್ರಿಯ ಹಿಂದಿನ ಎರಡು ದಿನದಲ್ಲಿ ದೇವಾಲಯವನ್ನು ಸುಣ್ಣ-ಬಣ್ಣದಿಂದ ಶೃಂಗರಿಸುತ್ತಾರೆ. ಹಬ್ಬದ ದಿನ ಸಾಯಂಕಾಲ ಭಕ್ತಾದಿಗಳು ಸ್ನಾನ ಮಾಡಿ ಬೆಟ್ಟದ ಕುಂಭಿಯಲ್ಲಿರುವ ಶಂಕರ ದೇವಾಲಯಕ್ಕೆ ಬರುತ್ತಾರೆ. ಎಲ್ಲರೂ ಸಾಮೂಹಿಕವಾಗಿ ಚಪ್ಪರ, ತೋರಣ, ಬಾಳೆಕಂದು ಕಟ್ಟುವುದು ಮಾಡುತ್ತಾರೆ. ರಾತ್ರಿಗೆ ಪೂಜೆಯನ್ನು ಮಾಡಿ, ಜಾಗರಣೆಯನ್ನು ಕೈಗೊಳ್ಳುತ್ತಾರೆ. ಜಾಗರಣೆಯ ಸಂದರ್ಭದಲ್ಲಿ ಭಜನೆ ಮಾಡುತ್ತಾರೆ. ಜೊತೆಗೆ ಶಿವನಾಮ ಸ್ಮರಣೆಯು ನಡೆಯುತ್ತದೆ. ಇದು ಬೆಳಗಿನವರೆಗೂ ಯಾರೂ ಮಲಗದೆ ಆಚರಿಸುತ್ತಾರೆ. ಬೆಳಗಾದಾಗ ಎಲ್ಲರೂ ಮತ್ತೊಮ್ಮೆ ದೊಣೆಯಲ್ಲಿ ಮಿಂದು ತಳಿಗೆ(ಅಡುಗೆ)ಯನ್ನು ಮಾಡುತ್ತಾರೆ. ಮೊದಲಿಗೆ ಈಶ್ವರನಿಗೆ ಎಡೆ ಹಾಕಿ,

ಪೂಜೆಯನ್ನು ಮಾಡಿ, ನಂತರ ಸಾಮೂಹಿಕವಾಗಿ ಪ್ರಸಾದವನ್ನು ಸ್ವೀಕರಿಸುತ್ತಾರೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಜಾಗರಣೆಯ ಬೆಳಗ್ಗೆ ಗಂಗಮ್ಮನ ಪೂಜೆ ಮುತ್ತೈದೆಯರಿಂದ ನಡೆಯುತ್ತದೆ.

ಕಾಳಹಸ್ತೇಶ್ವರದ ಪೂಜೆ : ಈ ದೇವಸ್ಥಾನದಲ್ಲಿ ಲಿಂಗವನ್ನು ಶ್ರೀರಾಮ ಚಂದ್ರನು ಪ್ರತಿಷ್ಠಾಪಿಸಿದನೆಂದು ಪ್ರತೀತಿಯಿದೆ. ನಿಡುಗಲ್ಲು ದುರ್ಗದ ಮಧ್ಯಭಾಗದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಇದನ್ನು ಇಲ್ಲಿನ ಜನರು ಕಿಚ್ಚಡಿಲಿಂಗವೆಂದು ಕರೆಯುತ್ತಾರೆ.

ಕಾಳಹಸ್ತೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಶಿವರಾತ್ರಿಯ ಜಾಗರಣೆಯನ್ನು ಊರಿನ ಎಲ್ಲಾ ಜನರೂ ಇಲ್ಲಿ ಬಂದು ಆಚರಿಸುತ್ತಾರೆ. ಶಿವರಾತ್ರಿಯ ಹಿಂದಿನ ಎರಡು ದಿನಗಳಲ್ಲಿ ಗುಡಿಯನ್ನು ಸುಣ್ಣ-ಬಣ್ಣದಿಂದ ಬಳಿದು ಶೃಂಗರಿಸುತ್ತಾರೆ. ಶಿವರಾತ್ರಿಯ ದಿನದ ಸಾಯಂಕಾಲ ಊರಿನ ಭಕ್ತಾದಿಗಳು ಕಾಳೇಹಸ್ತೇಶ್ವರ ದೇವಾಲಯಕ್ಕೆ ಬರುತ್ತಾರೆ. ಅಂದು ದೇವಾಲಯದಲ್ಲಿರುವ ಲಿಂಗವನ್ನು ತಿಳಿನೀರಿನ ದೊಣೆಯಿಂದ ನೀರನ್ನು ತಂದು ತೊಳೆದು, ಹೂವಿನಿಂದ ಲಿಂಗವನ್ನು ಸಿಂಗರಿಸಿ, ಪೂಜೆ ಮಾಡುತ್ತಾರೆ. ಅಂದು ಎಲ್ಲರೂ ಒಪ್ಪತ್ತು (ಜಾಗರಣೆ) ಇದ್ದು ಪೂಜೆ ಮಾಡುತ್ತಾರೆ. ನಂತರ ಬೆಳಗಿನವರೆಗೆ ಭಜನೆಯ ಹಾಡುಗಳನ್ನು ಹಾಡುತ್ತಾ ಶಿವಸ್ಮರಣೆಯನ್ನು ಮಾಡುತ್ತಾರೆ. ಬೆಳಿಗ್ಗೆ ಎಲ್ಲರೂ ಸೇರಿ ಅಡಿಗೆಯನ್ನು ಮಾಡಿ, ಲಿಂಗಕ್ಕೆ ತಳಿಗೆಯನ್ನು ಹಾಕಿ, ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸಿ ಒಪ್ಪತ್ತು (ಜಾಗರಣೆ)ಬಿಡುತ್ತಾರೆ.

ವೀರಭದ್ರಸ್ವಾಮಿ ಪೂಜೆ : ನಿಡುಗಲ್ಲುದುರ್ಗದ ಮೊದಲನೇ ಕೋಟೆಯ ಒಳಗೆಯಿರುವ ಈ ದೇವಾಲಯವು ವಿಶೇಷವಾಗಿ ಶ್ರಾವಣಮಾಸದಲ್ಲಿ ಮತ್ತು ಶಿವರಾತ್ರಿಯ ಹಬ್ಬದಲ್ಲಿ ಪೂಜೆಗೆ ಒಳಗಾಗುತ್ತದೆ. ಶ್ರಾವಣಮಾಸದಲ್ಲಿ ಶಿಖರದ ಬಸವಣ್ಣನ ಜಾತ್ರೆಯಲ್ಲಿ ಸಾಮಾನ್ಯವಾಗಿ ಎಲ್ಲರೂ ಪೂಜೆ ಮಾಡಿಸುವುದು ರೂಢಿಯಿದೆ.

ಶಿವರಾತ್ರಿಯ ಹಬ್ಬದಲ್ಲಿ ಇಲ್ಲಿ ಜಾಗರಣೆ ಮಾಡುವುದಕ್ಕಾಗಿ ಸುತ್ತಮುತ್ತಲ ಪ್ರದೇಶದ ಲಿಂಗಾಯತ ಜನಾಂಗದವರು ಇಲ್ಲಿ ಸೇರುತ್ತಾರೆ. ಅಂದು ದೇವಾಲಯವನ್ನು ಹೂವು, ತೋರಣ, ಬಾಳಕಂದುಗಳಿಂದ ಅಲಂಕರಿಸುತ್ತಾರೆ. ನಂತರ ರಾತ್ರಿಗೆ ಪೂಜೆ ನಡೆಯುತ್ತದೆ. ಎಲ್ಲರೂ ಸೇರಿ ಒಪ್ಪತ್ತು (ಜಾಗರಣೆ)ಇರುತ್ತಾರೆ. ರಾತ್ರಿಯೆಲ್ಲ ಜಾಗರಣೆಗಾಗಿ ಭಜನೆಯ ಹಾಡುಗಳನ್ನು ಹಾಡುತ್ತಾ ಶಿವಸ್ಮರಣೆಯನ್ನು ಮಾಡುತ್ತಾರೆ. ಬೆಳಿಗ್ಗೆ ಎಲ್ಲರೂ ಮತ್ತೆ ಸ್ನಾನ ಮಾಡಿ ಅಡುಗೆ ಏರ್ಪಾಡು ಮಾಡುತ್ತಾರೆ. ಸಾಮೂಹಿಕವಾಗಿ ಪೂಜೆ ಸಲ್ಲಿಸಿ ಒಪ್ಪತ್ತು ತೀರಿಸುತ್ತಾರೆ.

ಕರೆ ಕೀಳುವ ಆಚರಣೆ : ಹಾಗಲವಾಡಿ ಕೋಟೆಯ ಎರಡನೇ ಹೆಬ್ಬಾಗಿಲಿನಲ್ಲಿ ಈ ಆಚರಣೆಯನ್ನು ಕಾರಹುಣ್ಣಿಮೆ ಹಬ್ಬದ ದಿವಸ ನಡೆಸುತ್ತಾರೆ. ಈ ಗ್ರಾಮದ ಎರಡನೇ ಕೋಟೆಯ ಹೆಬ್ಬಾಗಿಲ ನಿಲುವು ಕಂಬಗಳ ಮೇಗಳ ತುದಿಗೆ ದಾರದಿಂದ ಕಟ್ಟಿದ ಕರೆ(ಭತ್ತದ ತೆನೆ)ಯನ್ನು ಇಳಿಯಬಿಟ್ಟಿರುತ್ತಾರೆ. ಈ

ಗ್ರಾಮದಲ್ಲಿ ಮದುವೆಯಾದ ಆ ವರ್ಷದ ಹೊಸ ಅಳಿಯಂದಿರು ಕರೆ ಕೀಳುವುದರ ಮೂಲಕ ಆಚರಣೆಯನ್ನು ನೆರವೇರಿಸುತ್ತಾರೆ.

ಈ ಆಚರಣೆಯನ್ನು ವೀಕ್ಷಿಸಲು ಗ್ರಾಮದ ಎಲ್ಲಾ ಜನರು ನೆರೆದಿರುತ್ತಾರೆ. ಅಳಿಯಂದಿರು ಹೆಬ್ಬಾಗಿಲ ಮುಂಭಾಗದಲ್ಲಿ ಸಾಲುಗಟ್ಟಿ ನಿಂತಿರುತ್ತಾರೆ. ಹೆಬ್ಬಾಗಿಲಿಗೆ ಇಳಿಯಬಿಟ್ಟ ಕರೆಯನ್ನು ಒಬ್ಬೊಬ್ಬರಂತೆ ಬಂದು ಎಗರಿ ಕೀಳುತ್ತಾರೆ. ಕುಳ್ಳ-ಎತ್ತರದ ವ್ಯಕ್ತಿಗಳಿಗೆ ಎತ್ತರಕ್ಕೆ ತಕ್ಕಂತೆ ಕರೆಯನ್ನು ಇಳಿಯಬಿಟ್ಟು ಕೀಳಿಸುತ್ತಾರೆ. ಕರೆಯನ್ನು ಅಳಿಯಂದಿರು ಕೀಳುತ್ತಿದ್ದರೆ, ಅವರ ಸಂಬಂಧಿಕರು ಚಪ್ಪಾಳೆಯ ಮುಖಾಂತರ ಹರ್ಷವನ್ನು ವ್ಯಕ್ತಪಡಿಸುತ್ತಾರೆ.

ಈ ಆಚರಣೆಯ ಉದ್ದೇಶವೇನೆಂದರೆ ಹೊಸದಾಗಿ ಗ್ರಾಮಕ್ಕೆ ಬರುವ ವ್ಯಕ್ತಿಯು ಈ ಆಚರಣೆಯಿಂದ ನಮ್ಮವನಾಗುತ್ತಾನೆಂಬುವ ಇಲ್ಲಿನವರ ನಂಬಿಕೆಯಾಗಿದೆ. ಈ ರೀತಿಯ ಆಚರಣೆಯು ಹಾಗೂ ಈ ಆಚರಣೆಯ ಮೂಲಕ ಆ ವ್ಯಕ್ತಿ ಗ್ರಾಮದ ಎಲ್ಲರಿಗೂ ಪರಿಚಿತನಾಗುತ್ತಾನೆ. ಪ್ರತಿವರ್ಷವು ನಡೆಯುವ ಇಂತಹ ವಿಶಿಷ್ಟ ಆಚರಣೆ ಭಾವೈಕ್ಯತೆಯ ಸಂಕೇತವೂ ಆಗಿದೆ.

ಸರಗಚೆಲ್ಲುವ ಆಚರಣೆ : ಹಾಗಲವಾಡಿ ಕೋಟೆಯ ಎರಡನೇ ಹೆಬ್ಬಾಗಿಲಿನಲ್ಲಿ ಒಂದು 'ಬುಡ್ಡೇಕಲ್ಲು' ಇದೆ. ಇದಕ್ಕೆ ಪ್ರತಿವರ್ಷ ಕಾರಹುಣ್ಣಿಮೆಯಲ್ಲಿ ಪೂಜೆ ಮಾಡುವುದು ರೂಢಿಯಲ್ಲಿದೆ. ಈ ಬುಡ್ಡೇಕಲ್ಲಿಗೆ ೧೦೧ ಬಿಂದಿಗೆ ನೀರು, ೧೦೧ ಹೂವು(ಬೇರೆ ಬೇರೆಯ ಜಾತಿಯ ಹೂವು), ೧೦೧ ನಿಂಬೆಕಾಯಿ, ಅರಿಶಿನ ಕುಂಕುಮ, ಎಡೆಗಾಗಿ ಇಟ್ಟ ತಳಿಗೆ ಬಳಸಿ ಪೂಜೆ ಮಾಡಲಾಗುತ್ತದೆ. ಪೂಜೆ ಮುಗಿದ ಮೇಲೆ ಊರಿನ ದನಕರುಗಳನ್ನು ಹೊಡೆದುಕೊಂಡು ಬಂದು ಬುಡ್ಡೇಕಲ್ಲಿಗೆ ಹಾಕಿದ ನೀರನ್ನು ದಾಟಿಸುತ್ತಾರೆ.

ಈ ಪೂಜೆಯ ನಂತರ ಮಣೆಗಾರ ಹಾಗೂ ತಳವಾರರಿಬ್ಬರೂ ಬುಡ್ಡೇಕಲ್ಲಿಗೆ ಹಾಕಿದ ಎಡೆ(ತಳಿಗೆ)ಯನ್ನು ಒಂದು ಪಾತ್ರೆಯಲ್ಲಿ ಕಲಸಿಕೊಂಡು ಕೋಟೆಯ ಸುತ್ತಲೂ ಸರಗವನ್ನು ಚೆಲ್ಲುತ್ತಾರೆ. ಇದು ಹಾಕುವಾಗ ಯಾರು ಮಾತಾಡುವುದಿಲ್ಲ. ಈ ರೀತಿ ಬುಡ್ಡೇಕಲ್ಲಿನ ಪೂಜೆ ಮತ್ತು ಸರಗ ಚೆಲ್ಲುವ ಆಚರಣೆಯನ್ನು ಊರಿನ ಜನರಿಗೆ ದನಕರುಗಳಿಗೆ ಬರುವ ದೊಡ್ಡ ಕಾಯಿಲೆಯನ್ನು ತಡೆಯುವುದಕ್ಕಾಗಿ ಮಾಡುವುದಾಗಿರುತ್ತದೆ.

ಕೊರಟಗೆರೆ ಗಂಗಾಧರೇಶ್ವರಸ್ವಾಮಿಗೆ ಕುಂಭಾಭೀಷೇಕ : ಕೊರಟಗೆರೆ ಬೆಟ್ಟದ ಮಧ್ಯಭಾಗದಲ್ಲಿ ಉದ್ಭವಲಿಂಗವಿದ್ದು, ಇದಕ್ಕೆ ರಣಭೈರೇಗೌಡನು ದ್ರಾವಿಡ ಶೈಲಿಯಲ್ಲಿ ಬೃಹತ್ತಾದ ದೇವಾಲಯವನ್ನು ನಿರ್ಮಿಸಿದನು. ಅಂದಿನಿಂದ ಪ್ರತಿ ಐದು ವರ್ಷಕ್ಕೊಮ್ಮೆ ಕುಂಭಾಭಿಷೇಕ ಮಾಡಿಸುತ್ತಿದ್ದನು. ಈ ಕುಂಭಾಭಿಷೇಕವನ್ನು ಈಗಲೂ ಇಲ್ಲಿನ ಜನರು ಆಚರಿಸಿಕೊಂಡು ಬರುತ್ತಿದ್ದಾರೆ. ಕುಂಭಾಭಿಷೇಕ ರಣಭೈರೇಗೌಡನ ಕಾಲದಲ್ಲಿ ನಡೆಯುತ್ತಿತ್ತು ಎಂಬುದಕ್ಕೆ ಯಾವುದೇ ಲಿಖಿತ ಆಧಾರಗಳಿಲ್ಲ. ಇಲ್ಲಿನ ಜನರು ಹೇಳುವ ಮಾತು ಮತ್ತು ಆಚರಿಸುವ ಆಚರಣೆಯಿಂದ ಹಿಂದಿನಿಂದಲೂ ಕುಂಭಾಭಿಷೇಕ ನಡೆಯುತ್ತಿತ್ತೆಂದು ಭಾವಿಸಬಹುದು.

ಪಾಳೇಗಾರನು ತನ್ನ ರಾಜ್ಯದಲ್ಲಿ ಬರ ಬಂದೊದಗಿದಾಗ ೧೦೦೧ ಬಿಂದಿಗೆ ನೀರನ್ನು ಜೇನುತುಪ್ಪ, ಹಸುವಿನ ತುಪ್ಪ, ದ್ರಾಕ್ಷಿ, ಬಾಳೆಹಣ್ಣು, ಹುಚ್ಚೆಳ್ಳಿನ ಎಣ್ಣೆ ಮತ್ತು ನೀರನ್ನು ಹಾಲಿನೊಂದಿಗೆ ಮಿಶ್ರಣ ಮಾಡಿ, ಲಿಂಗದ ಮೇಲೆ ಸುರಿಯುತ್ತಿದ್ದರು. ಮಳೆ ಬಂದರೆ ೧೧೧ ಬಿಂದಿಗೆ ನೀರನ್ನು ಸುರಿಯುತ್ತಿದ್ದುದು ರೂಢಿಯಿತ್ತೆಂದು ಹೇಳುತ್ತಾರೆ. ಈ ಆಚರಣೆಯು ಬ್ರಾಹ್ಮಣರ ಮುಂದಾಳತ್ವದಲ್ಲಿ ನಡೆಯುವ ಕುಂಭಾಭಿಷೇಕವು ಪ್ರತಿ ಐದು ವರ್ಷಕ್ಕೊಮ್ಮೆ ಮಳೆಗಾಲದ ಪ್ರಾರಂಭದಲ್ಲಿ ನಡೆಯುತ್ತದೆ. ಎರಡು ದಿನಗಳ ಕಾಲ ನಡೆಯುವ ಈ ಕುಂಭಾಭಿಷೇಕದಲ್ಲಿ ಸಮಸ್ತ ಗ್ರಾಮಸ್ಥರು ಜಾತಿ, ಲಿಂಗಭೇದ ಮರೆತು ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ.

ಕುಂಭಾಭಿಷೇಕದ ದಿನ ಸಮಸ್ತ ಗ್ರಾಮಸ್ಥರು ಮಡಿಯಿಂದ ಗಂಗಾಧರೇಶ್ವರ ದೇವಸ್ಥಾನದ ಹತ್ತಿರ ಸೇರುತ್ತಾರೆ. ಬೆಳಗಿನಿಂದಲೇ ಗರ್ಭಗುಡಿಯಲ್ಲಿರುವ ಲಿಂಗಕ್ಕೆ ಪುರೋಹಿತರು ಕುಂಭಾಭಿಷೇಕಕ್ಕೆ ಮಾಡಿದ ಮಿಶ್ರಣ ನೀರನ್ನು ಹಾಕುತ್ತಾರೆ. ಈ ಸಂದರ್ಭದಲ್ಲಿ ಮಂತ್ರ ಪಠಿಸುವುದು, ಯಜ್ಞ ಮಾಡುವುದು, ಹೆಣ್ಣುಮಕ್ಕಳು ದೋಣೆಯಲ್ಲಿ ಗಂಗೆಪೂಜೆ ಮಾಡುವುದು ಒಂದೇ ತೆರನಲ್ಲಿ ನಡೆಯುತ್ತದೆ. ಈ ಆಚರಣೆ ಮುಗಿದ ನಂತರ ಸರ್ವರಿಗೂ ಭೋಜನ ಏರ್ಪಾಡು ಇರುತ್ತದೆ. ಈ ಆಚರಣೆಯು ಶಿವಲಿಂಗವನ್ನು ನೀರಿನಿಂದ ತಣಿಸಿ, ಶಿವನನ್ನು ತೃಪ್ತಿಪಡಿಸಿ ಮಳೆ ತರುವುದಾಗಿದೆ.

ಕೋಟೆ ಆಂಜನೇಯನ ಪೂಜೆ : ಪ್ರತಿಕೋಟೆಯ ಬಾಗಿಲುಗಳಲ್ಲಿ ಆಂಜನೇಯ ವಿಗ್ರಹ ಅಥವಾ ಉಬ್ಬುಶಿಲ್ಪ ನಿಲ್ಲಿಸಿರುವುದು ಕಂಡುಬರುತ್ತದೆ. ಕೋಟೆಯನ್ನು ಪ್ರವೇಶಿಸುವಾಗ ಬಲಭಾಗದಲ್ಲಿ ಆಂಜನೇಯ ವಿಗ್ರಹವಿರುತ್ತದೆ. ಇದನ್ನು ದರ್ಶಿಸಿ ಒಳಪ್ರವೇಶ ಪಡೆಯಬೇಕಾಗುತ್ತದೆ. ಪಾಳೇಗಾರರು ಕೋಟೆಕೊತ್ತಲಗಳನ್ನು ನಿರ್ಮಾಣ ಮಾಡುವಾಗ ಕೋಟೆಯ ಕಾವಲಿಗಾಗಿ ಆಂಜನೇಯನ ವಿಗ್ರಹವನ್ನು ಬಾಗಿಲಲ್ಲಿಯೇ ನಿರ್ಮಿಸಿರುವುದು ಕಂಡುಬರುತ್ತದೆ. ಆಂಜನೇಯನು ಶಕ್ತಿವಂತನು, ವಾಯುಪುತ್ರನು ಈತನಂತೆ ಕೋಟೆಯು ಭದ್ರವಾಗಿರುತ್ತದೆ ಎನ್ನುವ ನಂಬಿಕೆ ಪಾಳೇಗಾರರಲ್ಲಿ ಇತ್ತು. ಜೊತೆಗೆ ಈತನು ಕೋಟೆಯ ಬಾಗಿಲಲ್ಲಿದ್ದರೆ ಶತ್ರುಗಳು ಕೋಟೆಯ ಒಳಪ್ರವೇಶಿದಂತೆ ತಡೆಯುತ್ತಾನೆ ಎಂಬ ನಂಬಿಕೆಯೂ ಇತ್ತು.

ಕೋಟೆಯಲ್ಲಿ ದೊರೆಯುವ ಬಹುತೇಕ ಆಂಜನೇಯನ ವಿಗ್ರಹಗಳು ಬೃಹತ್ ಬಂಡೆಯಲ್ಲಿ ಕೆತ್ತಿದ ಉಬ್ಬುಶಿಲ್ಪಗಳಾಗಿವೆ. ವಿಶೇಷವೆಂದರೆ ಈ ಶಿಲ್ಪಗಳನ್ನು ಪಾಳೇಗಾರನ ವೇಷದ ಶೈಲಿಯಲ್ಲಿ ಕೆತ್ತಲ್ಪಟ್ಟವುಗಳಾಗಿವೆ. ದಕ್ಷಿಣ ದಿಕ್ಕಿಗೆ ಕೆತ್ತಲ್ಪಟ್ಟಿರುವ ಬಹುತೇಕ ಉಬ್ಬುಶಿಲ್ಪಗಳಿಗೆ ದೇವಾಲಯಗಳನ್ನು ಕಟ್ಟಿಸಿ ಪೂಜಾಚರಣೆಗಳನ್ನು ಮಾಡುತ್ತಾ ಬಂದಿರುವುದು ನಾವಿಂದು ಕಾಣಬಹುದು. ಆಂಜನೇಯನನ್ನು ಪಾಳೇಗಾರನಿಗೆ ಹೋಲಿಸಿ ಕೆತ್ತಿರುವ ಈ ಶಿಲ್ಪಗಳು ತುಂಬಾ ವಿಶಿಷ್ಟವಾಗಿದೆ.

ಕೋಟೆಯ ಪ್ರದೇಶದಲ್ಲಿರುವ ಜನಸಮುದಾಯಗಳು ಆಂಜನೇಯನ ವಿಗ್ರಹ ಅಥವಾ ಉಬ್ಬುಶಿಲ್ಪಗಳಿಗೆ ಗುಡಿ ಮತ್ತು ದೇವಾಲಯಗಳನ್ನು ನಿರ್ಮಿಸಿ ಪೂಜಾಚರಣೆಯನ್ನು ನೆರವೇರಿಸುತ್ತಾ ಬಂದಿದ್ದಾರೆ. ಅವು ಯಾವ್ಯಾವ ಕೋಟೆಯಲ್ಲಿ ಆಚರಣೆಗಳು ನಡೆಯುತ್ತವೆ ಎಂಬುದನ್ನು ಒಂದೊಂದಾಗಿ ವಿವರಿಸಲಾಗಿದೆ.

ಪಾವಗಡ ಕೋಟೆಯ ಮಧುಗಿರಿ ಹೆಬ್ಬಾಗಿಲಲ್ಲಿನ ಉಬ್ಬುಶಿಲ್ಪ ಆಂಜನೇಯನಿಗೆ ಚಿಕ್ಕದಾಗಿ ಗುಡಿಯನ್ನು ಕಟ್ಟಿ ಪ್ರತಿದಿನ ಪೂಜೆ ನಡೆಯುತ್ತಿದೆ. ಅದೇ ರೀತಿ ಎರಡನೆಯ ಕೋಟೆಯ ಒಳಗಿರುವ ಉಬ್ಬುಶಿಲ್ಪದ ಆಂಜನೇಯನಿಗೆ ದೇವಾಲಯವನ್ನು ನಿರ್ಮಿಸಿ, ನಿತ್ಯಾಚರಣೆಯೊಂದಿಗೆ ಪ್ರತಿ ಶ್ರಾವಣಮಾಸ ದಲ್ಲಿ ಉತ್ಸವವನ್ನು ಆಚರಿಸುತ್ತಾರೆ. ಬೆಟ್ಟದ ಮಧ್ಯ ಭಾಗದಲ್ಲಿರುವ ಆಂಜನೇಯ ಉಬ್ಬುಶಿಲ್ಪಕ್ಕೆ ಸುತ್ತಲೂ ಗೋಡೆಯನ್ನು ಕಟ್ಟಿ ಪ್ರತಿನಿತ್ಯ ಪೂಜೆ ನೆರವೇರಿಸುತ್ತಾರೆ. ಇಲ್ಲಿನ ಗುಡಿ, ದೇವಾಲಯಗಳು ಪ್ರತಿವರ್ಷ ಜೀರ್ಣೋದ್ಧಾರ ನಡೆಯುತ್ತಾ ನಾಶಹೊಂದದೆ ಹಾಗೆ ಉಳಿದಿವೆ. ಹುಲಿಯೂರು ದುರ್ಗದ ಮಧ್ಯಭಾಗದಲ್ಲಿ ಬೃಹತ್ ಬಂಡೆಗೆ ಗಣಪತಿ ಮತ್ತು ಆಂಜನೇಯ ಉಬ್ಬಶಿಲ್ಪವನ್ನು ಕೆತ್ತಿದ್ದಾರೆ. ಇಲ್ಲಿಯೂ ಸಹ ಗುಡಿಯನ್ನು ಕಟ್ಟಿಸಿ, ಅವುಗಳನ್ನು ಸಂರಕ್ಷಣೆ ಮಾಡಲಾಗಿದೆ. ಪ್ರತಿವರ್ಷ ಆಷಾಡ ಮಾಸದಲ್ಲಿ ಉತ್ಸವ ಆಚರಣೆಗಳನ್ನು ನಡೆಸಲಾಗುತ್ತದೆ. ಚನ್ನರಾಯನ ದುರ್ಗದ ಉತ್ತರ ದಿಕ್ಕಿನ ತಪ್ಪಲಿನಲ್ಲಿ ಬೃಹತ್ ಗುಂಡಿಗೆ ಆಂಜನೇಯನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಪ್ರತಿದಿನ ಈ ಶಿಲ್ಪಕ್ಕೆ ಅಲ್ಲಿನ ಜನರು ಪೂಜೆ ಮಾಡುತ್ತಾರೆ. ದೇವರಾಯನ ದುರ್ಗದಲ್ಲಿ ಗರುಡ-ಆಂಜನೇಯರ ಯುದ್ಧದ ಉಬ್ಬುಶಿಲ್ಪವನ್ನು ಬಿಡಿಸಲಾಗಿದೆ. ಈ ಶಿಲ್ಪಕ್ಕೆ ಭಕ್ತರು ತಮ್ಮ ಬೇಡಿಕೆ ಮುಂದಿಟ್ಟು, ಅದು ಈಡೇರಿದಾಗ ಬಾಳೆಹಣ್ಣು ಮತ್ತು ರೂಪಾಯಿ ನಾಣ್ಯಗಳನ್ನು ಅಂಟಿಸುವುದು ರೂಢಿಯಲ್ಲಿದೆ. ಇದು ಹೆಚ್ಚಾಗಿ ದೇವರಾಯನ ದುರ್ಗದ ಜಾತ್ರೆಯ ಸಂದರ್ಭದಲ್ಲಿ ನಡೆಯುತ್ತದೆ. ಭಸ್ಮಾಂಗಿ ದುರ್ಗದಲ್ಲಿ ಬರಗಾಲ ತರಿಸುವ ಆಂಜನೇಯನ ವಿಗ್ರಹವಿದೆ. ಇದನ್ನು ಸ್ಥಾಪಿಸಿದ ಪ್ರಾರಂಭದಲ್ಲಿ ಹೆಣ್ಣುಮಗಳು ಪೂಜೆ ಮಾಡಿದ ಕಾರಣ ಮಳೆ ಬರದೆ ಬರಗಾಲ ಬಂದಿತು. ಆದ್ದರಿಂದ ಪಾಳೆಗಾರರು ಈ ಆಂಜನೇಯನಿಗೆ ಪೂಜೆ ಮಾಡಬಾರದು ಎಂದು ಆಜ್ಞಾಪಿಸಿದರು. ಅಂದಿನಿಂದ ಆಂಜನೇಯನಿಗೆ 'ಬರಗಾಲ ತರಿಸುವ ಆಂಜನೇಯ' ಎಂದು ಕರೆಯಲಾಗಿದೆ. ಈ ರೀತಿಯ ನಂಬಿಕೆ, ಆಚರಣೆಗಳು ಈಗಲೂ ರೂಢಿಯಲ್ಲಿರುವುದು ಕಾಣಬಹುದಾಗಿದೆ.

ಹೀಗೆ ಕೋಟೆಗಳಲ್ಲಿ ಸ್ಥಾಪಿತವಾದ ಆಂಜನೇಯನ ವಿಗ್ರಹಗಳಿಗೆ ಆ ಪ್ರಾದೇಶಿಕ ಜನರ ಇಚ್ಛೆ ಹಾಗೂ ಮನಸ್ಸಿಗನುಗುಣವಾಗಿ ಪೂಜಾಚರಣೆಗಳನ್ನು ಮಾಡುತ್ತಾ ಬಂದಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಆಂಜನೇಯನು ವಾಯುಪುತ್ರ, ಬಲಿಷ್ಠಶಕ್ತಿಯನ್ನು ಹೊಂದಿರುವವನು. ಈತನನ್ನು ನಂಬಿದರೆ ಕೈ ಬಿಡಲಾರನೆಂಬ ಉದ್ದೇಶದಿಂದ ಎಲ್ಲಾ ಸಮುದಾಯಗಳು ಆತನ ಭಕ್ತನಾಗಿರುವುದು ಕಾಣಬಹುದು. ಪಾಳೇಗಾರರು ಸಹ ತಾವು ನಿರ್ಮಿಸುವ ಕೋಟೆ ಕೊತ್ತಲಗಳು ಶತ್ರುಗಳಿಂದ ನಮ್ಮನ್ನು ಆಂಜನೇಯನು ರಕ್ಷಿಸುತ್ತಾನೆಂಬ ನಂಬಿಕೆ ಇರುವುದರಿಂದ ಆಂಜನೇಯನ ಶಿಲ್ಪಗಳಿಗೆ ಗುಡಿ, ದೇವಾಲಯಗಳನ್ನು ನಿರ್ಮಿಸಿ ಅವುಗಳನ್ನು ರಕ್ಷಿಸಿಕೊಂಡು ಬರುತ್ತಿದ್ದರು. ಹೀಗೆ ಧಾರ್ಮಿಕ ವಿಧಿ ವಿಧಾನ, ಆಚರಣೆಗಳ ಮೂಲಕ ಕೋಟೆಗಳು ಸಹ ರಕ್ಷಿಸಲ್ಪಡುತ್ತಿವೆ ಎಂಬುದು ಮೇಲ್ನೋಟಕ್ಕೆ ತಿಳಿದುಬರುವ ಸಂಗತಿಯಾಗಿದೆ.

ದೇವರಾಯನ ದುರ್ಗದ ದಾಸಯ್ಯಗಳ ಆಚರಣೆಗಳು : ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುವ ದಾಸಯ್ಯಗಳು 'ಮುದ್ರೆ' ಒತ್ತಿಸಿಕೊಂಡು ಜಾಗಟೆ, ಭವನಾಸಿ, ಜೋಳಿಗೆ, ಗರುಡಗಂಭ, ಶಂಖವನ್ನು ಹಿಡಿದುಕೊಂಡು ಜಾತ್ರೆ, ಉತ್ಸವ, ಹಬ್ಬಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರು ಮುಖ್ಯವಾಗಿ ವೈಷ್ಣವ ಮೂರ್ತಿಯನ್ನು ಪೂಜಿಸುವುದರಿಂದ, ಆ ಮೂರ್ತಿ ಉತ್ಸವಗಳಲ್ಲಿ ಹಾಜರಿರುತ್ತರೆ.

ದೇವರಾಯನ ದುರ್ಗವು ನರಸಿಂಹದೇವರ ವಾಸಸ್ಥಳವಾಗಿರುವುದರಿಂದ ಪ್ರತಿವರ್ಷ ನಡೆಯುವ ಜಾತ್ರೆ, ಉತ್ಸವಗಳಲ್ಲಿ ದಾಸಯ್ಯಗಳು ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವರೆಲ್ಲರೂ ಕೆಳವರ್ಗದ ಜನಸಮುದಾಯರೆಂಬುದು ವಿಶೇಷವಾದ ಸಂಗತಿಯಾಗಿದೆ. ದಾಸಯ್ಯಗಳು ರಥದ ಉತ್ಸವ ನಡೆಯುವಾಗ ಅದರ ಪಕ್ಕದಲ್ಲಿಯೇ ಇದ್ದು, ಜಾಗಟೆಯನ್ನು ಬಡಿದು 'ಗೋವಿಂದ' ಎನ್ನುತ್ತಾರೆ. ಅಲ್ಲದೆ ಇವರು ಕುಂಭೀನರಸಿಂಹ ಬೆಟ್ಟಕ್ಕೆ ಹತ್ತುವ ದಾರಿಯುದ್ದಕ್ಕೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ.

ಕುಂಭೀನರಸಿಂಹದೇವರ ಪಕ್ಕದಲ್ಲಿ ಒಂದು ಪುಷ್ಕರಣಿಯಿದ್ದು, ಪುಷ್ಕರಣಿಯಲ್ಲಿ ಇಲ್ಲಿಗೆ ಬಂದ ಭಕ್ತರು ನರಸಿಂಹದೇವರಿಗೆ ಮುಡಿಕೊಟ್ಟು ಮಿಂದು ದಾಸಯ್ಯಂದಿರಿಂದ ನಾಮ ಹಾಕಿಸಿಕೊಳ್ಳುವುದು ವಾಡಿಕೆ. ಇದರಲ್ಲಿ ಮಿಂದರೆ ತಮ್ಮ ಮನದಾಸೆಗಳು ಈಡೇರುತ್ತವೆ ಎಂಬ ನಂಬಿಕೆಯು ಸಾಮಾನ್ಯವಾಗಿದೆ. ಪುಷ್ಕರಣಿಯಲ್ಲಿ ಇಳಿಯಲಾಗದ ಕೆಲವು ಭಕ್ತಾಧಿಗಳು ದಾಸಯ್ಯಗಳ ಭವನಾಸಿಯಿಂದ ನೀರನ್ನು ತಲೆಗೆ ಮೇಲೆ ಹಾಕಿಸಿಕೊಳ್ಳುವುದು ರೂಢಿಯಲ್ಲಿದೆ.

ದೇವರಾಯನ ದುರ್ಗದಲ್ಲಿ ನಡೆಯುವ ಉತ್ಸವಗಳು

ಕಲ್ಯಾಣೋತ್ಸವ : ವೈಧಿಕ ಸಂಸ್ಕೃತಿಯ ಪ್ರೇರಣೆಯ ಮೇರೆಗೆ ಉಳಿದುಕೊಂಡು ಬಂದಿರುವ ಕಲ್ಯಾಣೋತ್ಸವವು ಬ್ರಾಹ್ಮಣಿಕರ ಮುಂದಾಳತ್ವದಲ್ಲೇ ನಡೆಯುತ್ತದೆ. ಈ ಆಚರಣೆಯಲ್ಲಿ ಎಲ್ಲ ವರ್ಗದ ಜನ ಸಮುದಾಯಗಳು ಭಾಗವಹಿಸುತ್ತವೆ. ಇಲ್ಲಿ ನಡೆಯುವ ಕಲ್ಯಾಣೋತ್ಸವವು ಲಕ್ಷ್ಮೀ ಮತ್ತು ನರಸಿಂಹಸ್ವಾಮಿ ಯರ ಮದುವೆ ಉತ್ಸವವಾಗಿದೆ. ಹಿಂದೂಗಳಿಗೆ ಗೋವು ಪವಿತ್ರತೆಯ ಸಂಕೇತವಾಗಿರುವುದರಿಂದ ಈ ಸಂದರ್ಭದಲ್ಲಿ ವಿಶೇಷವಾಗಿ ಗೋವಿನ ಪೂಜೆಯನ್ನು ನೆರವೇರಿಸುತ್ತಾರೆ. ಗೋವಿಗೆ ಪೂಜೆ ಸಲ್ಲಿಸುವುದರ ಮುಖ್ಯ ಉದ್ದೇಶ ಇದು ದೇವರುಗಳ ವಾಸಸ್ಥಾನ ಎಂಬ ನಂಬಿಕೆ ನಮ್ಮ ಜನರಲ್ಲಿದೆ.

ಬೆಳಿಗ್ಗೆ ೧೦ ಗಂಟೆಗೆ ಪುರೋಹಿತರು ಕಲ್ಯಾಣ ಮಂದಿರಕ್ಕೆ ಬಂದು ಹಿರಿಯರಿಂದ ಗಣಪತಿ ಪೂಜೆಯನ್ನು ಮಾಡಿಸುತ್ತಾರೆ. ಜೊತೆಗೆ ನವಗ್ರಹ ಪೂಜೆಯನ್ನು ಮಾಡಿಸುತ್ತಾರೆ. ತುಳಸೀಕಟ್ಟೆಯ ಆಕಾರದಲ್ಲಿರುವ ಅಲಂಕೃತ ಮಂಟಪದಲ್ಲಿ ಲಕ್ಷ್ಮೀದೇವಿಯ ಕಳಸವನ್ನಿರಿಸಿ ಅದಕ್ಕೆ ಜೀವಕಳೆಯನ್ನು ತುಂಬುತ್ತಾರೆ. ಉಪಸ್ಥಿತರಿರುವ ಭಕ್ತಾದಿಗಳೆಲ್ಲರೂ ಪೂಜಿಸಿ, ತೀರ್ಥ ಪ್ರಸಾದವನ್ನು ಪಡೆಯುತ್ತಾರೆ.

ಸಂಜೆ ೪ ಗಂಟೆಗೆ ಅಷ್ಟಲಕ್ಷ್ಮೀ ಪೂಜೆಗಾಗಿ ಎಲ್ಲರೂ ಕಲ್ಯಾಣ ಮಂದಿರಲ್ಲಿ ವಿಧಿವತ್ತಾಗಿ ಸಿದ್ಧತೆ ನಡೆಸುತ್ತಾರೆ. ಲಕ್ಷ್ಮೀ ಕಳಸದೊಂದಿಗೆ ಎಂಟು ಬಾಗಿಣಗಳು, ಮಂಗಳ ದ್ರವ್ಯಗಳು, ಫಲ ಪುಷ್ಪ, ಪೂಜಾ

ಸಾಮಗ್ರಿಗಳೊಂದಿಗೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ದ್ವಾರದ ಬಳಿ ಸೇರುತ್ತಾರೆ. ದ್ವಾರದ ಬಳಿಯಿರುವ ವಿಘ್ನೇಶ್ವರನಿಗೆ ಪೂಜೆಯನ್ನು ಸಲ್ಲಿಸಿ, ಮುಖ್ಯದ್ವಾರದಿಂದ ನರಸಿಂಹಸ್ವಾಮಿ ಗುಡಿಯನ್ನು ಪ್ರದಕ್ಷಿಣೆ ಮಾಡಿ ಲಕ್ಷ್ಮೀ ದೇವಸ್ಥಾನಕ್ಕೆ ಬರುತ್ತಾರೆ. ಅಲ್ಲಿರುವ ಮೂಲ ಲಕ್ಷ್ಮೀ ದೇವಿಗೆ ಅಲಂಕರಿಸುವ ವಸ್ತುಗಳನ್ನು ಫಲಪುಷ್ಪಗಳನ್ನು ಪುರೋಹಿತರಿಗೆ ನೀಡುತ್ತಾರೆ. ಹೆಣ್ಣು ಮಕ್ಕಳು ಲಕ್ಷ್ಮೀದೇವಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಎಂಟು ಮಂದಿ ಹಿರಿಯ ಮುತ್ತೈದೆಯರಿಗೆ ಪಾದಪೂಜೆ ಮಾಡಿ ಹುರಿಗಡಲೆ, ಕೊಬ್ಬರಿ, ಬೆಲ್ಲ, ಕಣದೊಂದಿಗೆ ಮಡಿಲು ತುಂಬಿ ಬಾಗಣಗಳನ್ನು ನೀಡಿ ಅವರಿಂದ ಆಶೀರ್ವಾದ ಪಡೆಯುತ್ತಾರೆ. ಶ್ರೀ ಮಹಾಲಕ್ಷ್ಮೀಗೆ ಪೂಜೆ ಸಲ್ಲಿಸಿ ಪ್ರಸಾದವನ್ನು ಸ್ವೀಕರಿಸಿ ಕಲ್ಯಾಣ ಮಂದಿರಕ್ಕೆ ಕಳಸದೊಂದಿಗೆ ಹಿಂದಿರುಗುತ್ತಾರೆ. ಕಲ್ಯಾಣ ಮಂದಿರದ ಬಾಗಿಲಿನಲ್ಲಿ ಆರತಿ ಮಾಡಿ ಇವರನ್ನು ಒಳಕ್ಕೆ ಬರಮಾಡಿಕೊಳ್ಳುತ್ತಾರೆ.

ಇದಾದ ನಂತರ ರಾತ್ರಿ ೮ ಗಂಟೆಗೆ ಎಲ್ಲರಿಗೂ ಹೋಳಿಗೆಯ ದಾಸೋಹ ಇರುತ್ತದೆ. ದಾಸೋಹ ವಾದ ಮೇಲೆ ನಂತರ ಕಲ್ಯಾಣಮಂದಿರದ ಸಭಾಂಗಣದಲ್ಲಿ ಎಲ್ಲರೂ ಸೇರುತ್ತಾರೆ. ಮುತ್ತೈದೆಯರಿಂದ ಬಳೆಶಾಸ್ತ್ರವನ್ನು ಮಾಡಿಸಿ, ವೇದಿಕೆಯ ಮುಂದೆ ಬಳೆಗಳ ಗುಚ್ಚಗಳನ್ನಿಟ್ಟು ಕನ್ಯಾದಾತರು(ಹೆಣ್ಣಿನ ಕಡೆಯವರು ಪದ್ಮಶಾಲಿ ಜಾತಿ) ಪೂಜೆ ಸಲ್ಲಿಸಿರುತ್ತಾರೆ. ಮುತ್ತೈದೆಯರಿಗೆ ಬಳೆಗಳನ್ನು ತೊಡಿಸಿ ಅರಿಶಿಣ-ಕುಂಕುಮ, ಪುಷ್ಪಗಳನ್ನು ನೀಡಿ ಆಶೀರ್ವಾದ ಪಡೆಯುತ್ತಾರೆ.

ರಾತ್ರಿ ೧೦ ಗಂಟೆಗೆ ಎಲ್ಲರೂ ದೇವಸ್ಥಾನದ ದ್ವಾರದ ಬಳಿ ಸೇರಿ, ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯ ಉತ್ಸವಮೂರ್ತಿಯನ್ನು ಛತ್ರಿ-ಚಾಮರಗಳೊಂದಿಗೆ ಕಲ್ಯಾಣ ಮಂದಿರಕ್ಕೆ ತರುತ್ತಾರೆ. ಕಲ್ಯಾಣ ಮಂದಿರದ ಬಾಗಿಲ ಬಳಿ ಆರತಿ ಮಾಡಿ, ಪೂಜೆ ಸಲ್ಲಿಸಿ, ಈಡುಗಾಯಿ ಹಾಕಿ ಜಯಕಾರದೊಂದಿಗೆ ನರಸಿಂಹಸ್ವಾಮಿ ಉತ್ಸವಮೂರ್ತಿಯನ್ನು ಮಂದಿರದ ಲಕ್ಷ್ಮೀ ವೇದಿಕೆಯ ಪಕ್ಕದಲ್ಲಿಡುತ್ತಾರೆ. ಕಲ್ಯಾಣೋತ್ಸವಕ್ಕೆ ತಂದಿರುವ ಮಂಗಳ ದ್ರವ್ಯಗಳು, ವಿವಾಹಕ್ಕೆ ಬೇಕಾಗುವ ಪಂಚೆ, ಶಲ್ಯ, ಸೀರೆ, ಕಣ, ಅರಿಶಿಣ-ಕುಂಕುಮ, ಹೂವಿನ ಹಾರಗಳು, ೩ ಜೊತೆ ಬಾಗಣಗಳ ಸಮೇತ ಮಾಂಗಲ್ಯ ಕಂಕಣ, ಜೀರಿಗೆ, ಬೆಲ್ಲ, ತಾಂಬೂಲ ಎಲ್ಲವನ್ನು ದೇವರುಗಳ ಮುಂಭಾಗದಲ್ಲಿ ಇಡುತ್ತಾರೆ.

ವಿವಾಹ ಸಂದರ್ಭದಲ್ಲಿ ನಡೆಸುವ ಕುಲದೇವರ ವರಪೂಜೆಗೆ ಇಬ್ಬರು ಬಾಲಕರನ್ನು ಪೂಜೆಗೆ ಕೂರಿಸಿ, ಕಳಸವನ್ನಿಟ್ಟು ಅಲಂಕರಿಸುತ್ತಾರೆ. ಹುರಿಗಡಲೆ, ಬೆಲ್ಲದ ಅಚ್ಚುಗಳು, ಕೊಬ್ಬರಿ ಬಟ್ಟಲು, ಖರ್ಜೂರವನ್ನು ಪ್ರಸಾದಕ್ಕಾಗಿ ಇಡಲಾಗಿರುತ್ತದೆ. ಬಟ್ಟಲು, ಅಡಿಕೆ, ವೀಳೆದೆಲೆ, ದಕ್ಷಿಣೆಗಾಗಿ ನಾಣ್ಯಗಳನ್ನು ಸಿದ್ಧವಾಗಿಟ್ಟಿರುತ್ತಾರೆ. ಕುಲದೇವರ ಹೆಸರಿನಲ್ಲಿ ಬಾಲಕರಿಂದ ಪೂಜೆ ಸಲ್ಲಿಸಿ ಎಲ್ಲಾ ದೇವಾನುದೇವತೆಗಳ ಹೆಸರಿನಲ್ಲಿ ತಾಂಬೂಲವನ್ನು ಎತ್ತಲಾಗುತ್ತದೆ. ಇದೇ ರೀತಿ ಗಂಡಿನ ಕಡೆಯವರು ವೀಳ್ಯಾವನ್ನು ದೇವರುಗಳ ಹೆಸರಿನಲ್ಲಿ ಎತ್ತುತ್ತಾರೆ. ದೇವಸ್ಥಾನದವರು ಲಕ್ಷ್ಮೀದೇವಿಗೆ ನೀಡುವ ೫ ರೂಪಾಯಿಯ

ಕಾಣಿಕೆಯನ್ನು ಅರಿಶಿಣದ ಬಟ್ಟೆಯಲ್ಲಿ ಕಟ್ಟಿ, ಪೂಜೆ ವೇದಿಕೆಯಲ್ಲಿಟ್ಟಿರುತ್ತಾರೆ. ಇದನ್ನು ದಿನನಿತ್ಯ ಪೂಜೆ ಮಾಡುವ ಸಂಪ್ರದಾಯವನ್ನು ಇಟ್ಟುಕೊಂಡಿರುವ ದಂಪತಿಗಳಿಗೆ ನೀಡಲಾಗುವುದು. ನಂತರ ಪೂಜೆ ಸಲ್ಲಿಸಿ, ಕುಲದೇವರ ಪೂಜೆಗೆ ಇಡಲಾಗಿದ್ದ ಪ್ರಸಾದವನ್ನು ಭಕ್ತಾಧಿಗಳಿಗೆ ಹಂಚಲಾಗುತ್ತದೆ.

ಕಲ್ಯಾಣ ಮಂದಿರದಿಂದ ಉತ್ಸವಮೂರ್ತಿಯನ್ನು ಭೋಗ ನರಸಿಂಹದೇವಾಲಯಕ್ಕೆ ತಂದು ವಸ್ತ್ರಾಲಂಕಾರ ಮಾಡಿಕೊಂಡು ವಾದ್ಯಗಳೊಂದಿಗೆ ಬೆಟ್ಟದ ಮೇಲ್ಭಾಗದಲ್ಲಿರುವ ಕುಂಭೀ ಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಕರೆದೊಯ್ಯು ತ್ತಾರೆ. ಈ ಸಂದರ್ಭದಲ್ಲಿ ದೇವಸ್ಥಾನದ ಮಂಟಪದ ಮುಖ್ಯದ್ವಾರದಲ್ಲಿ ಬೀರಕ್ಕಿ (ಬಿಳಿ ಅಕ್ಕಿ)ಯನ್ನು ಬೀರುತ್ತಾರೆ. ನಂತರ ಉತ್ಸವ ಮೂರ್ತಿಯನ್ನು ಮಂಟಪದಲ್ಲಿಡುತ್ತಾರೆ. ಈ ಕಾರ್ಯಕ್ರಮ ನಡೆಯುವಾಗಲೇ ಮದುವೆ ಶಾಸ್ತ್ರದ ರೀತಿಯಲ್ಲಿ ಅರಿಶಿಣ ಕುಟ್ಟುವುದು, ಗೋಧಿಯನ್ನು ಬೀಸುವುದು, ಕೇರುವುದು ಇತರೆ ಸಂಪ್ರದಾಯಕವಾದ ಕಾರ್ಯಗಳನ್ನು ಮುತ್ತೈದೆಯರಿಂದ ಮಾಡಿಸುತ್ತಾರೆ.

ಒಂದೆಡೆ ನರಸಿಂಹಸ್ವಾಮಿಯನ್ನು ಮತ್ತೊಂದೆಡೆ ಲಕ್ಷ್ಮೀದೇವಿ ಮತ್ತು ಭೂದೇವಿ ಇದ್ದು, ಇವರ ಮಧ್ಯೆ ತೆರೆಯನ್ನು ಇಟ್ಟು ಜೀರಿಗೆ ಬೆಲ್ಲವನ್ನು ತಲೆ ಮೇಲೆ ಹಾಕಿಸಿ, ಹಾರಗಳನ್ನು ಬದಲಾಯಿಸಿ ಕಂಕಣ ಕಟ್ಟಿ ಧಾರೆ ಎರೆಯುತ್ತಾರೆ. ನೆರೆದಿರುವ ಭಕ್ತಾಧಿಗಳೆಲ್ಲರೂ ಶ್ರೀದೇವಿ-ಭೂದೇವಿಯರ ಸಹಿತ ನರಸಿಂಹಸ್ವಾಮಿ ಯವರಿಗೆ ಧಾರೆ ಎರೆದು ಅಕ್ಷತೆ ಮತ್ತು ಹೂಗಳನ್ನು ಹಾಕಿ ನಮಸ್ಕರಿಸುತ್ತಾರೆ. ನಂತರ ಮಾಂಗಲ್ಯ ಧಾರಣೆಯನ್ನು ಮಂಗಳ ದ್ರವ್ಯಗಳೊಂದಿಗೆ ಎಲ್ಲರಿಂದಲೂ ಪೂಜಿಸಿ, ಲಕ್ಷ್ಮೀ ಮತ್ತು ಭೂದೇವಿಗೆ ಧಾರಣೆ ಮಾಡುತ್ತಾರೆ. ಶಾಸ್ತ್ರೋಕ್ತವಾಗಿ ಕಲ್ಯಾಣೋತ್ಸವ ಮುಗಿದ ನಂತರ ಬೆಟ್ಟದ ಕೆಳಗಿನ ಭೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಹಿಂದಿರುಗುತ್ತಾರೆ. ಈ ಕಲ್ಯಾಣೋತ್ಸವಕ್ಕೆ ಭಕ್ತಾಧಿಗಳು ಕುಟುಂಬ ಸಮೇತ ಆಗಮಿಸಿ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ.

ರಥೋತ್ಸವ : ದೇವರಾಯನ ದುರ್ಗದ ನರಸಿಂಹಸ್ವಾಮಿಯ ರಥೋತ್ಸವವು ಪ್ರತಿವರ್ಷ ಪುಬ್ಬ ನಕ್ಷತ್ರದಲ್ಲಿ ಸರ್ವಜನಾಂಗದವರು ಸೇರಿಕೊಂಡು ನೆರವೇರಿಸುತ್ತಾರೆ. ಮೊದಲು ನರಸಿಂಹಸ್ವಾಮಿಗೆ ಅಭಿಷೇಕ ವಿಶೇಷ ಪೂಜೆಗಳನ್ನು ಹಮ್ಮಿಕೊಂಡಿರುತ್ತಾರೆ. ಉತ್ಸವ ಮೂರ್ತಿಯನ್ನು ವಿಧಿವತ್ತಾಗಿ ಮಂಗಳವಾದ್ಯ, ಛತ್ರಿ-ಛಾಮರಗಳೊಂದಿಗೆ ತಂದು ಮಧ್ಯಾಹ್ನ ಒಂದು ಘಂಟೆಗೆ ರಥದಲ್ಲಿಡುತ್ತಾರೆ. ಇದಕ್ಕೆ ಶುಭಸೂಚನೆಯಂತೆ ರಥದ ಮೇಲ್ಭಾಗದಲ್ಲಿ ಗರುಡನ ಪ್ರದಕ್ಷಿಣೆಯಾದ ನಂತರ ರಥವನ್ನು ಮುಂದಕ್ಕೆ ಎಳೆಯುತ್ತಾರೆ. ಈ ಸಂದರ್ಭದಲ್ಲಿ ಜನಪದರು ನರಸಿಂಹಸ್ವಾಮಿಯನ್ನು ಕುರಿತು ಹಾಡುಗಳನ್ನು ಹಾಡುತ್ತಾರೆ.

ಅಗಲ ಅಗಲದ ಬೆಟ್ಟ ಅಗಲಾದುರುಗದ ಬೆಟ್ಟ
ಅಗಲಾಕೆ ಬೆಳೆದ್ಯಾವ್ವೆ ಜಾಲಾರ | ಮರದಾಡಿ
ಭೋಗ ನರಸಿಮ್ಮ ಕುಳಿತಾನೆ ||
ದುರ್ಗಾದ ಗಿರಿತುಂಬ ವನರಾಜಿ ತುಂಬೈತೆ

ಸ್ವರ್ಗಾನೆ ಭೂಮಿಗೆ ಇಳಿದೈತೆ | ನರಸಿಂಹ
ಬ್ಯಾಗೆನೆ ತಾ ಬಂದು ನೆಲೆಗೊಂಡ ||
ಎದ್ದೇಳೋ ನರಸಿಮ್ಮ ಎಷ್ಟೊತ್ತು ಸುಖನಿದ್ದೆ
ಜಲವೆಂಜಲಾದಾವ್ಯೋ ಪಕ್ಷಿಮುಟ್ಟಿ | ನರಸಿಂಹ
ಹಣ್ಣೆಂಜಲಾದಾವೋ ಗಿಳಿ ಉಂಡು ||
ಅಂದಕ್ಕಿಟ್ಟನು ನಾಮ ಚಂದಕ್ಕಿಟ್ಟನು ನಾಮ
ದಾಸಯ್ಯನಾಗಿ ತಿರುಗ್ಯಾನು | ನರಸಿಂಮ್ಮ
ದಾಸಯ್ಯನಲ್ಲ ಮನೆಸ್ವಾಮಿ ||

ಈ ರೀತಿ ವರ್ಣಿಸುತ್ತಾ, ತೇರನ್ನು ಎಳೆಯುವಾಗ ಧವನಸಿಕ್ಕಿಸಿದ ಬಾಳೆಹಣ್ಣು ಎಸೆಯುವುದು ಜೊತೆಗೆ ಕಡ್ಲೇಕಾಯಿ, ಹುಣಸೆ ಹಣ್ಣು, ಹೂವು, ವೀಳ್ಯದೆಲೆ ಎಸೆಯುವುದೂ ರೂಢಿಯಿದೆ. ತೇರನ್ನು ಎಳೆಯುವಾಗ ಎರಡು ಕಡೆ ಹಗ್ಗವನ್ನು ಹಾಕಿಕೊಂಡು ಎಲ್ಲಾ ಭಕ್ತರು ಸೇರಿಕೊಂಡು ನರಸಿಂಹಸ್ವಾಮಿಯ ನಾಮಸ್ಮರಣೆಯನ್ನು ಜೋರಾಗಿ ಕೂಗಿಕೊಂಡು ಎಳೆಯುತ್ತಾರೆ. ದೇವರಾಯನ ದುರ್ಗದ ನರಸಿಂಹಸ್ವಾಮಿ ತೇರನ್ನು ವರ್ಣಿಸುವ ಒಂದು ಹಾಡು ಹೀಗಿದೆ.

ತೇರು ಕಟ್ಟೋಣ ಬನ್ನಿ ತೆಂಗಿನ ಹಗ್ಗವ ಹಾಕಿ
ಹೊಂಬಾಳೆ ತನ್ನೀ ಕಳಸಾಕೆ | ದುರುಗದ
ನರಸಿಮ್ಮಾನ ತೇರ ಹರಿಸ್ಯಾಕೆ ||

ರಥವನ್ನು ಮಧ್ಯಾಹ್ನ ಒಂದು ಘಂಟೆಗೆ ನರಸಿಂಹಸ್ವಾಮಿ ದೇವಸ್ಥಾನ ಮುಂಭಾಗದಿಂದ ರಥದ ಬೀದಿಯವರೆಗೆ ಎಳೆಯುತ್ತಾರೆ. ನಂತರ ಎಲ್ಲಾ ಜನರು ಪೂಜೆಗಳನ್ನು ಮಾಡಿಸಿಕೊಳ್ಳುತ್ತಾರೆ. ಹರಕೆಯಿದ್ದವರು ಹರಕೆಯನ್ನು ಸಲ್ಲಿಸುತ್ತಾರೆ. ಇದೇ ವೇಳೆಗೆ ಮುಡಿ ನೀಡುವುದು, ಭಜನೆ ಮಾಡುವುದು, ದಿಂಡುರುಳು ಇಕ್ಕುವುದು, ತೇರಿಗೆ ಧವನ ಸಿಗಿಸಿದ ಬಾಳೆಹಣ್ಣು ಎಸೆಯುವುದು, ಎದುರು ಸೇವೆ ಸಲ್ಲಿಸುವುದು, ಪಾನಕ ಹೆಸರು ಬೇಳೆ ಹಂಚುವುದು, ಅನ್ನದಾನ ಮಾಡುವುದು ನಡೆಯುತ್ತದೆ.

ಈ ಜಾತ್ರೆಯಲ್ಲಿ ಒಂದು ವಿಶೇಷವೆಂದರೆ ಭಕ್ತಾದಿಗಳು ಮಾಂಸದಡಿಗೆಯನ್ನು ಮಾಡಿ ಎಲ್ಲರಿಗೂ ಹಾಕುವುದು. ಅಲ್ಲಲ್ಲಿ ಗುಂಪು ಗುಂಪಾಗಿ ಗುಡಾರಗಳನ್ನು ಹಾಕಿಕೊಂಡು ಬೆಳಗಿನಿಂದಲೇ ಮಾಂಸದಡಿಗೆಗೆ ಏರ್ಪಾಡು ಮಾಡುತ್ತಾರೆ. ರಥೋತ್ಸವ ಮುಗಿದ ಮೇಲೆ ಅನ್ನಸಂತರ್ಪಣೆ ನಡೆಯುತ್ತದೆ.

ಉತ್ಸವಮೂರ್ತಿಯನ್ನು ಕೂರಿಸಿದ ರಥವನ್ನು ರಾತ್ರಿ ಒಂಬತ್ತು ಗಂಟೆಗೆ ನರಸಿಂಹಸ್ವಾಮಿ ದೇವಸ್ಥಾನದ ಹತ್ತಿರಕ್ಕೆ ಎಳೆಯುತ್ತಾರೆ. ಆಗಲೂ ಭಕ್ತಾದಿಗಳು ಹಲವಾರು ಹರಕೆಗಳನ್ನು ನೆರವೇರಿಸಿಕೊಳ್ಳುತ್ತಾರೆ. ರಥ ಎಳೆದ ಮೇಲೆ ಪೂಜೆ ಮಾಡಿ ಉತ್ಸವಮೂರ್ತಿಯನ್ನು ಗರ್ಭಗುಡಿಗೆ ತಂದಿಡುತ್ತಾರೆ. ದುರ್ಗದಲ್ಲಿ ರಾತ್ರಿಯೆಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ವಸಂತೋತ್ಸವ : ದೇವರಾಯನ ದುರ್ಗದಲ್ಲಿ ಲಕ್ಷ್ಮೀ ಮತ್ತು ನರಸಿಂಹಸ್ವಾಮಿಯ ಕಲ್ಯಾಣೋತ್ಸವ ರಥೋತ್ಸವ ಮುಗಿದ ಮೇಲೆ ಕೊನೆಯ ದಿವಸ ವಸಂತೋತ್ಸವನ್ನು ಆಚರಿಸುವರು. ಈ ಉತ್ಸವದಲ್ಲಿ ಒಬ್ಬರಿಗೊಬ್ಬರು ಓಕಳಿಯಾಡುವುದು ಮುಖ್ಯ ಉದ್ದೇಶವಾಗಿದೆ.

ವಸಂತೋತ್ಸವ ನಡೆಯುವ ದಿವಸ ದೇವರನ್ನು ಮೆರವಣಿಗೆಗೆ ತಂದು ಎಲ್ಲರೂ ಪೂಜೆ ಪುನಸ್ಕಾರಗಳನ್ನು ಮಾಡಿಸುತ್ತಾರೆ. ಇದಾದ ನಂತರ ಓಕಳಿ ಸಂಪ್ರದಾಯವನ್ನು ಪ್ರಾರಂಭಿಸುತ್ತಾರೆ. ಇಲ್ಲಿ ನೆರೆದಿರುವ ಎಲ್ಲಾ ಭಕ್ತಧಿಗಳೂ ತಮ್ಮಲ್ಲಿರುವ ಬಣ್ಣವನ್ನು ಮೇಲಕ್ಕೆ ಎರಚುತ್ತಾ ತಮಗೆ ಸಿಕ್ಕವರಿಗೆ ಬಳಿಯುತ್ತಾ ಕುಣಿಯುತ್ತಾರೆ. ಇದರ ಮಧ್ಯದಲ್ಲಿಯೇ ಹಾಡುಗಳನ್ನು ಹಾಡುತ್ತಾ ಕೇಕೆ ಹಾಕುತ್ತಾರೆ. ಕೊನೆಗೆ ಓಕಳಿ ಸಂಪ್ರದಾಯ ಮುಗಿಸಿ ದೇವರಿಗೆ ಪೂಜೆ ಮಾಡಿ, ದೇವಾಲಯಗಳಿಗೆ ಗುಡಿದುಂಬಿಸುತ್ತಾರೆ. ನಂತರ ಎಲ್ಲಾ ಭಕ್ತಾಧಿಗಳಿಗೂ ದಾಸೋಹವನ್ನು ಏರ್ಪಡಿಸಿರುತ್ತಾರೆ.

ಕೊರಟಗೆರೆ ಗಂಗಾಧರೇಶ್ವರ ಸ್ವಾಮಿಯ ರಥೋತ್ಸವ : ಪ್ರತಿವರ್ಷ ಫಾಲ್ಗುಣ ಮಾಸದ ಶಿವರಾತ್ರಿಯ ದಿವಸ ಈ ರಥೋತ್ಸವ ನಡೆಯುತ್ತದೆ. ಶಿವರಾತ್ರಿಯ ಹಿಂದಿನ ದಿವಸ ಎಲ್ಲರೂ ಜಾಗರಣೆ ಮಾಡುತ್ತಾರೆ. ಅಂದು ಗಂಗಾಧರೇಶ್ವರ ಮೆರವಣಿಗೆ ಮೂರ್ತಿಯನ್ನು ಪಟ್ಟಣದಿಂದ ಬೆಟ್ಟದಲ್ಲಿರುವ ಗಂಗಾಧರೇಶ್ವರ ದೇವಸ್ಥಾನಕ್ಕೆ ಪಲ್ಲಕ್ಕಿಯಲ್ಲಿ ಇರಿಸಿ, ಡೊಳ್ಳು, ನಗಾರಿ, ಕರಡಿ ವಾದ್ಯ, ಓಲಗ ಚಾಮರಗಳಿಂದೊಡಗೂಡಿದ ಸಕಲ ವೈಭವಗಳೊಂದಿಗೆ ಕರೆತರುತ್ತಾರೆ.

ರಥೋತ್ಸವದ ಸಂದರ್ಭದಲ್ಲಿ ಗಂಗಾಧರೇಶ್ವರ ಸ್ವಾಮಿಗೂ ಮತ್ತು ಗಂಗೆ, ಗೌರಿಗೂ ವಿವಾಹ ಮಾಡಿಸುವುದು ಒಂದು ವಿಶೇಷವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಿವರಾತ್ರಿಯ ಹಿಂದಿನ ದಿನ ಪ್ರಥಮಶಾಸ್ತ್ರವೆಂದು ಆಚರಿಸುತ್ತಾರೆ. ಈ ಮದುವೆಯಲ್ಲಿ ಬ್ರಾಹ್ಮಣರು ಹೆಣ್ಣಿನ ಕಡೆ ಇದ್ದರೆ, ಮೇದರು ಗಂಡಿನ ಕಡೆ ಇರುತ್ತಾರೆ. ಪ್ರಥಮ ಶಾಸ್ತ್ರದಲ್ಲಿನ ಆಚರಣೆಗಳನ್ನು ಮದುವೆಯಲ್ಲಿ ನಡೆಯುವ ಎಲ್ಲಾ ಆಚರಣೆಗಳ ರೀತಿಯೇ ನೆರವೇರಿಸುತ್ತಾರೆ. ಶಿವರಾತ್ರಿಯ ದಿವಸದ ಬೆಳಿಗ್ಗೆ ೪ ರಿಂದ ೫ ಗಂಟೆಯ ಒಳಗೆ ಎಲ್ಲಾ ಜನರು ಸೇರಿಕೊಂಡು ಗಂಗಾಧರೇಶ್ವರ ಸ್ವಾಮಿಗೂ ಮತ್ತು ಗಂಗೆ, ಗೌರಿಗೂ ಮುಹೂರ್ತ ಮಾಡುತ್ತಾರೆ. ನಂತರ ಅರಿಶಿಣದ ಅಕ್ಕಿ ಹಾಕಿ, ಹಾಲು ಹೊಯ್ದು ನಮಸ್ಕರಿಸಿ ಎಲ್ಲರೂ ಪ್ರಸಾದವನ್ನು ಸ್ವೀಕರಿಸುತ್ತಾರೆ.

ಮಧ್ಯಾಹ್ನ ಹನ್ನೆರಡು ಗಂಟೆಗೆ ಮೆರವಣಿಗೆ ಮೂರ್ತಿಯನ್ನು ಬೆಟ್ಟದಲ್ಲಿರುವ ಗಂಗಾಧರೇಶ್ವರ ದೇವಸ್ಥಾನದಿಂದ ಕೋಟೆ ಮಾರಮ್ಮನ ದೇವಸ್ಥಾನದ ಹತ್ತಿರವಿರುವ ಶೃಂಗರಿಸಿದ ರಥದ ಹತ್ತಿರಕ್ಕೆ ತರುತ್ತಾರೆ. ಮೂರ್ತಿಯನ್ನು ರಥದಲ್ಲಿ ಕೂರಿಸುವಾಗ ಎಲ್ಲರೂ ಸಾಮೂಹಿಕವಾಗಿ ಚಪ್ಪಾಳೆ ಹೊಡೆಯುತ್ತಾ ಕೇಕೆ ಹಾಕುತ್ತಾರೆ. ಜೊತೆಗೆ ವಾದ್ಯಗಳ ಶಬ್ದವೂ ಜೋರಾಗುತ್ತದೆ. ಮೆರವಣಿಗೆ ಮೂರ್ತಿಯನ್ನು ರಥದಲ್ಲಿ ಕೂರಿಸಿದ ನಂತರ ಪೂಜೆ ನಡೆಯುತ್ತದೆ. ಶಿವರಾತ್ರಿಯ ಹಬ್ಬಕ್ಕೆ ಉಪವಾಸ ಮಾಡಿದ್ದವರು

ಮತ್ತು ಊರಿನ ಎಲ್ಲಾ ಜನರು ಸೇರಿಕೊಂಡು ರಥದ ಹಗ್ಗವನ್ನು ಹಿಡಿದುಕೊಳ್ಳುತ್ತಾರೆ. ಅದೇ ವೇಳೆಗೆ ರಥದ ಮೇಲೆ ಗರುಡವು ಎಲ್ಲಿಂದಲೋ ಬಂದು ಹಾರಾಡುತ್ತದೆ. ಇದನ್ನು ಕಂಡ ಕೂಡಲೇ ಕೇಕೆ ಹಾಕುತ್ತಾ, ದೇವರ ಸ್ಮರಣೆ ಗೈಯುತ್ತಾ, ರಥವನ್ನು ಕೋಟೆ ಮಾರಮ್ಮನ ಗುಡಿಯಿಂದ ಮೇದರ ಕೇರಿಯವರೆಗೆ ಎಳೆಯುತ್ತಾರೆ. ನೋಡುತ್ತಿದ್ದ ಜನರು ಧವನ ಪತ್ರೆಯನ್ನು ಬಾಳೆಹಣ್ಣಿಗೆ ಸಿಕ್ಕಿಸಿ ರಥದ ಕಳಸಕ್ಕೆ ಎಸೆಯುತ್ತಾರೆ. ಜೊತೆಗೆ ಬೆಲ್ಲದ ಉಂಡೆ, ಮಂಡಕ್ಕಿ, ಹೂವುಗಳನ್ನು ರಥಕ್ಕೆ ಎಸೆದು ಕೈಮುಗಿಯುತ್ತಾರೆ. ಇದಾದ ನಂತರ ಉಪವಾಸ ಇದ್ದ ಜನರು ತಮ್ಮ ತಮ್ಮ ಮನೆಗಳಿಗೆ ಹೋಗಿ ಉಪವಾಸವನ್ನು ಬಿಡುತ್ತಾರೆ. ಹಲವು ಮಂದಿ ರಥದಲ್ಲಿರುವ ಉತ್ಸವ ಮೂರ್ತಿಗೆ ಪೂಜೆಯನ್ನು ಮಾಡಿಸುತ್ತಾರೆ. ಮತ್ತೇ ರಥದ ಉತ್ಸವವು ರಾತ್ರಿ ಒಂಬತ್ತು ಗಂಟೆಗೆ ಪ್ರಾರಂಭವಾಗುತ್ತದೆ. ಮೇದರಕೇರಿಯಲ್ಲಿ ಮೆರವಣಿಗೆ ಮಾಡಿದ ನಂತರ ರಾತ್ರಿ ಒಂಬತ್ತು ಗಂಟೆಗೆ ಗಂಗಾಧರೇಶ್ವರಸ್ವಾಮಿಯ ರಥವನ್ನು ಮೇದರ ಕೇರಿಯಿಂದ ಕೋಟೆ ಮಾರಮ್ಮ ಗುಡಿಯ ಹತ್ತಿರಕ್ಕೆ ಎಳೆಯುತ್ತಾರೆ. ರಥವನ್ನು ಎಳೆಯುವಾಗ ಮತ್ತೆ ಬಾಳಹಣ್ಣಿಗೆ ಧವನ ಪತ್ರೆಯನ್ನು ಸಿಕ್ಕಿಸಿಕೊಂಡು ರಥದ ಕಳಸಕ್ಕೆ ಎಸೆಯುತ್ತಾ ಕೈಮುಗಿಯುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಮನದಾಸೆ ಈಡೇರುತ್ತದೆಂಬುದು ಇಲ್ಲಿನ ಜನರ ನಂಬಿಕೆಯಾಗಿದೆ.

ರಥದಲ್ಲಿ ಕೂರಿಸಿದ್ದ ಉತ್ಸವ ಮೂರ್ತಿಯನ್ನು ಪಟ್ಟಣದಲ್ಲಿರುವ ಗುಡಿಗೆ ತರುತ್ತಾರೆ. ರಥೋತ್ಸವದ ಜಾತ್ರೆಗೆ ಗಂಗಾಧರೇಶ್ವರಸ್ವಾಮಿಗೂ ಗಂಗೆ, ಗೌರಿಯರಿಗೂ ಉತ್ಸವಮೂರ್ತಿಯಿಡುವ ಗುಡಿಯಲ್ಲಿ ಪ್ರಸ್ಥ ನೆರವೇರಿಸುತ್ತಾರೆ. ಮರುದಿನ ಮೂರು ಉತ್ಸವ ಮೂರ್ತಿಗಳಿಗೆ ಪೂಜೆಯನ್ನು ಮಾಡುತ್ತಾರೆ.

ಈ ರಥೋತ್ಸವದ ಸಂದರ್ಭದಲ್ಲಿ ಸಮುದಾಯಗಳು ನೆರವೇರಿಸುವ ಮುಖ್ಯ ಆಚರಣೆಗಳೆಂದರೆ ಗಂಗೆ ಪೂಜೆ ಮಾಡುವುದು, ರಥಕ್ಕೆ ಧವಸ ಸಿಕ್ಕಿಸಿದ ಬಾಳೆಹಣ್ಣು ಎಸೆಯುವುದು, ಮಂಡೆ ಬೋಳಿಸಿಕೊಂಡು ದೊಡ್ಡ ದೋಣೆಯಲ್ಲಿ ಮೀಯುವುದು ವಿಶೇಷವಾಗಿದೆ. ಇದೆಲ್ಲ ಆಚರಣೆಗಳಿಂದ ಇಲ್ಲಿನ ಸ್ಮಾರಕಗಳು ಪವಿತ್ರಗೊಂಡು ಹಾಳಾಗದೆ ಸಂರಕ್ಷಿತಗೊಂಡಿವೆ.

ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆ : ಸಮಷ್ಠಿ ಪ್ರಜ್ಞೆಯ ಆಚರಣೆಗಳ ಸಾಂಸ್ಕೃತಿಕ ವೈಶಿಷ್ಟ್ಯಗಳೇ ಜಾತ್ರೆಗಳು. ಜಾತ್ರೆಗಳು ಸ್ಥಳದಿಂದ ಸ್ಥಳಕ್ಕೆ, ಜನವರ್ಗದಿಂದ ಜನವರ್ಗಕ್ಕೆ, ಹಲವಾರು ರೀತಿಗಳಲ್ಲಿ ಭಿನ್ನವಾಗಿ ಆಚರಿಸಲ್ಪಡುತ್ತವೆ. ಇಂತಹ ಜಾತ್ರೆಗಳ ವೈಶಿಷ್ಟ್ಯ ಹಾಗೂ ಸಾಂಸ್ಕೃತಿಕ ರಾಯಭಾರತ್ವಕ್ಕೆ ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆ ಹೆಸರಿಸಬಹುದು. ಇಲ್ಲಿ ಜರುಗುವ ಜಾತ್ರೆಯು ಸ್ಥಳನಾಮದ ಹೆಸರಿನಿಂದಲೂ ಮತ್ತು ದೈವದ ಹೆಸರಿನಿಂದಲೂ ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲದವರೆಗೂ ರೂಢಿಯಲ್ಲಿದೆ.

ನಿಡುಗಲ್ಲು ದುರ್ಗದ ಶಿಖರದ ಬಸವನ ಗುಡಿಯನ್ನು ಕ್ರಿ.ಶ.೧೬೫೩ರಲ್ಲಿ ಹೊಟ್ಟೆಣ್ಣ ನಾಯಕ ಎಂಬುವನು ಕಟ್ಟಿಸಿದನು. ಇದನ್ನು ಇವನ ಮಗ ತಿಮ್ಮಣ್ಣನಾಯಕನು ಕ್ರಿ.ಶ.೧೬೭೦ರಲ್ಲಿ ಜೀರ್ಣೋದ್ಧಾರ

ಮಾಡಿಸಿದನು.[೩] ನಿಡುಗಲ್ಲು ದುರ್ಗವು ಹಲವಾರು ಸಾಂಸ್ಕೃತಿಕ ವೈಶಿಷ್ಟ್ಯಗಳಿಗೆ ಕಾರಣವಾಗಿದ್ದ ಪ್ರದೇಶದಲ್ಲಿ "ಚನ್ನಪ್ಪ ಕವಿಯು" ಕ್ರಿ.ಶ.೧೭೦೦ರಲ್ಲಿ ವಾಸವಾಗಿದ್ದನು. ಈತನು 'ಶರಣ ಲೀಲಾಮೃತ' ಕಾಲಾಜ್ಞಾನ ಮತ್ತು ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ ಎಂಬ ಕೃತಿಗಳನ್ನು ರಚಿಸಿದ್ದಾನೆ.[೪] ಚನ್ನಪ್ಪ ಕವಿಯು ನಿಡುಗಲ್ಲು ದುರ್ಗದಲ್ಲಿ ವಾಸಮಾಡುತ್ತಿದ್ದಾಗ ವಿಶಿಷ್ಟವಾಗಿ ನಡೆಯುವ ಜಾತ್ರೆಯಾದ ಶಿಖರದ ಬಸವಣ್ಣನ ಜಾತ್ರೆಯನ್ನು ಕಣ್ಣಾರೆ ನೋಡಿ, ಸಂತೋಷ ಪಟ್ಟು "ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ"ಯನ್ನು ರಚಿಸಿದ್ದಾನೆ.

ಚನ್ನಪ್ಪ ಕವಿಯು ಸುತ್ತಲ ಜನರನ್ನು ಯಾವ ರೀತಿ ಶಿಖರದ ಬಸವನ ಜಾತ್ರೆಗೆ ಆಹ್ವಾನಿಸುತ್ತಿದ್ದನು ಎಂಬುದನ್ನು ತಾರಾವಳಿಯಲ್ಲಿ ಉಲ್ಲೇಖಿಸಲಾಗಿದೆ.

ನೋಡ ಹೋಗುವ ಬನ್ನಿರೆ ಶ್ರೀ ಬಸವನ
ನೋಡ ಹೋಗುವ ಬನ್ನಿರೆ |
ನೋಡ ಹೋಗುವ ಬನ್ನಿ ನಿಡುಗಲ್ಲು ದುರ್ಗದ
ರೂಢೀಶ ಶಿಖರದ ಬಸವನ ಜಾತ್ರೆಯ || ಪಲ್ಲವಿ||[೫]

ನಿಡುಗಲ್ಲುದುರ್ಗದ ಶಿಖರದ ಬಸವನ ಜಾತ್ರೆಗೆ ನೋಡಲು ಎಲ್ಲರೂ ಹೋಗೋಣ ಬನ್ನಿ ಎಂದು ಕರೆಯುತ್ತಾ, ಮುಂದೆ ನಿಡುಗಲ್ಲು ದುರ್ಗದ ಇಡೀ ಸಾಂಸ್ಕೃತಿಕ ಚರಿತ್ರೆ ಬಿಚ್ಚಿಸುತ್ತಾ, ಇಲ್ಲಿ ಪ್ರತಿಷ್ಠಾಪಿಸಲಾಗಿರುವ ಹಲವು ದೇವಾಲಯಗಳಿಗೆ ಭೇಟಿ ನೀಡಿ, ವಿಶೇಷ ಪೂಜೆ ಮಾಡಲು ಬನ್ನಿ ಎಂದು ಸೂಚಿಸುತ್ತಾನೆ.

....
ನಡದು ಬಸವನಡಿ ನೋಡಿ ಶರಣು ಮಾಡಿ
ಒಡದು ಕಾಯಿಗಳ ನೊಪ್ಪಿಸಿ ತಮ್ಮ ಹರಕೆಯ
ಪೊಡಮಟ್ಟು ದೇವ ಪ್ರಸಾದವ ಕೈಗೊಂಡು
ನಡಿದುರ್ಗ ಘನದೇಶಗಳ ಕಾಣಿಪುದ ನೋಡಿ
ಒಡಗೂಡ ಸಕಲ ಸಜ್ಜನರೆಲ್ಲ ಒಂದಾಗಿ
ಕಡುವೇಗ ಬಂದು ಕಾಳಹಸ್ತೇಶ್ವರ ದೇವ
ನಡಿಗೆಲ್ಲ ಎರಗುವರು............
ನೋಡ ಹೋಗುವ ಬನ್ನಿರೆ ನಿಡುಗಲ್ಲು ದುರ್ಗದ
ರೂಢೀಶ ಶಿಖರದ ಬಸವನ ಜಾತ್ರೆಯ"[೬]

ಚನ್ನಪ್ಪ ಕವಿಯು ನಿಡುಗಲ್ಲು ದುರ್ಗದ ಜಾತ್ರೆಯನ್ನು ನೋಡಲು ಸುತ್ತಮುತ್ತಲ ಜನರನ್ನು ಬನ್ನಿರೆಂದು ಹೇಳುತ್ತಾನೆ. ಈ ದುರ್ಗದಲ್ಲಿ ಜಾತ್ರೆಯೇ ಅಲ್ಲದೆ ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ಒಳಗೊಂಡಿರುವ ಪ್ರದೇಶ. ಈ ಪ್ರದೇಶವನ್ನು ನೊಳಂಬ, ಚೋಳ, ಹೊಯ್ಸಳ, ನಾಯಕರು, ಪಾಳೇಗಾರರು ಆಳ್ವಿಕೆ ಮಾಡಿದ್ದಾರೆ. ಇವರ ವೈಭವದ ಕುರುಹುಗಳಾದ ಅನೇಕ ದೇವಾಯಗಳು, ಕಲ್ಯಾಣಿಗಳು ಇನ್ನಿತರೆ ಸ್ಮಾರಕಗಳನ್ನು "ಶಿಖರದ ಬಸವನ ಜಾತ್ರೆಯ ಸಂದರ್ಭದಲ್ಲಿ ನೋಡಬಹುದು. ಆದ್ದರಿಂದ ನಿಡುಗಲ್ಲು ದುರ್ಗ ಶಿಖರದ ಬಸವನ ಜಾತ್ರೆಯ ನೋಡ ಹೋಗುವ ಬನ್ನಿರೆ" ಎಂದು ಕರೆಯುತ್ತಾನೆ. ಒಟ್ಟಿನಲ್ಲಿ ನಿಡುಗಲ್ಲು ದುರ್ಗದ ಶಿಖರದ ಜಾತ್ರೆಯು ಚನ್ನಪ್ಪ ಕವಿಯ ಕಾಲದಲ್ಲಿ ವಿಜೃಂಭಣೆಯಾಗಿ ನಡೆಯುತ್ತಿತ್ತೆಂದು ಈತನ ತಾರಾವಳಿಯಿಂದ ತಿಳಿದುಬರುತ್ತದೆ.

ಈಗಲೂ ಸಹ ಪ್ರತಿವರ್ಷ ಶ್ರಾವಣಮಾಸದಲ್ಲಿ ನಿಡುಗಲ್ಲು ದುರ್ಗದ ಶಿಖರದ ಬಸವಣ್ಣನ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಸುತ್ತಮುತ್ತಲ ಜನರು ಪ್ರವಾಹದಂತೆ ಬಂದು ಸೇರುತ್ತಾರೆ. ಅದರಲ್ಲೂ ಕಡೆ ಶನಿವಾರ, ಕಡೆ ಸೋಮವಾರ ಜಾತ್ರೆಗೆ ರಂಗು ಬರುತ್ತದೆ. ಜನರು ರಾಮತೀರ್ಥದಲ್ಲಿ ಮೀಯುವುದು, ಹೆಂಗಸರು ಮತ್ತು ಮಕ್ಕಳು ತೀರ್ಥದ ದಡದಲ್ಲಿ ದಾಸಯ್ಯಗಳಿಂದ ಭವನಾಶಿಯಿಂದ ನೀರನ್ನು ಹಾಕಿಸಿಕೊಳ್ಳುವುದು. ಗಂಗಮ್ಮನ ಪೂಜೆ ಹಾಗೂ ನಾಗಪೂಜೆ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ನಂತರ ಬೆಟ್ಟವನ್ನು ಏರುವವರು ಒಬ್ಬರಾಗಿ ಮೇಲೇರುತ್ತಾ ದಾರಿಯಲ್ಲಿ ಸಿಗುವ ದೇವರುಗಳಿಗೆ ಕೈ ಮುಗಿಯುವುದು, ಪೂಜೆ ಮಾಡಿಸುವುದು ನಡೆಯುತ್ತದೆ. ಬೆಟ್ಟದ ಮಧ್ಯ ಭಾಗದಲ್ಲಿರುವ ತಿಳಿನೀರಿನ ದೊಣೆಯಲ್ಲಿ ಮತ್ತೆ ಮಿಂದು ಕಾಳಹಸ್ತೇಶ್ವರ ದೇವರಿಗೆ ಕೈಮುಗಿದು, ಕುಂಭಿಯ ಭಾಗಕ್ಕೆ ಹೋಗಿ ಬೃಹತ್ ಕಲ್ಲಿನ ಮೇಲೆ ಸ್ಥಾಪಿಸಿರುವ ಶಿಖರದ ಬಸವಣ್ಣನ ದರ್ಶನವನ್ನು ಪಡೆಯುತ್ತಾರೆ.

ವ್ಯವಸ್ಥಿತ ಪ್ರದಕ್ಷಿಣೆಗಾಗಿ ಕಬ್ಬಿಣದ ಸರಳುಗಳನ್ನು ನಿರ್ಮಿಸಿದ್ದಾರೆ. ಪ್ರದಕ್ಷಿಣೆಯ ನಂತರ ಭಕ್ತಾದಿಗಳು ಗರುಡ ಗಂಭಕ್ಕೆ ಎಳ್ಳೆಣ್ಣೆಯ ದೀಪವನ್ನು ಹಚ್ಚಿ ತಮ್ಮ ಅರಕೆಯನ್ನು ತೀರಿಸುತ್ತಾರೆ. ನಂತರ ರಾಮತೀರ್ಥಕ್ಕೆ ಬಂದ ಭಕ್ತಾಧಿಗಳು ಭೋಜನ ಮಾಡಿ ತಮ್ಮ ಊರುಗಳಿಗೆ ತೆರಳುತ್ತಾರೆ. ಹೀಗೆ ತಮ್ಮ ಊರುಗಳಿಗೆ ಹೋಗುವಾಗ ರಾಮತೀರ್ಥದ ನೀರನ್ನು ಬೆಳೆಗಳಿಗೆ, ದನಕರುಗಳಿಗೆ, ಮನೆಗೆ ಹಾಕಲು ಕೊಂಡೊಯ್ಯುತ್ತಾರೆ. ಈ ನೀರನ್ನು ಹಾಕುವುದರಿಂದ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂಬ ಭಾವನೆ ಇಲ್ಲಿನ ಜನರಲ್ಲಿದೆ.

ಹೀಗೆ ನಿಡಗಲ್ಲು ದುರ್ಗದ ಶಿಖರದ ಬಸವಣ್ಣನ ಜಾತ್ರೆಗೆ ಭಕ್ತಾಧಿಗಳು ಇಂದಿಗೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಪುರಾತತ್ವ ಇಲಾಖೆಯವರು ರಕ್ಷಿಸಲಾಗದ ಇಂತಹ ಎಷ್ಟೋ ಸ್ಮಾರಕಗಳು ಧಾರ್ಮಿಕ ಆಚರಣೆಗಳನ್ನು ಆಚರಿಸುವ ಜನಸಾಮಾನ್ಯರಿಂದ ರಕ್ಷಿಸಲ್ಪಡುತ್ತಿವೆ ಎಂಬುದನ್ನು ನಾವು ಅಲ್ಲಗೆಳೆಯುವಂತಿಲ್ಲ.

ಯಲ್ಲಪ್ಪ ನಾಯಕನ ಹೊಸಕೋಟೆಯಲ್ಲಿನ ದಸರಾ ಮೆರವಣಿಗೆ : ಯಲ್ಲಪ್ಪನಾಯಕನ ವಂಶಸ್ತರು ಪರಂಪರಾಗತವಾಗಿ ಉಳಿಸಿಕೊಂಡು ಬಂದಿರುವ ನವರಾತ್ರಿಯ ದಸರಾ ಮೆರವಣಿಗೆಯು ಪ್ರತಿವರ್ಷವೂ ನೆರವೇರುತ್ತದೆ. ದಸರಾ ಮೆರವಣಿಗೆಯ ಸಂದರ್ಭದಲ್ಲಿ ಆಯುಧ ಪೂಜೆ ದಿನ ತಮ್ಮ ಹಿರಿಯರು ಬಳಸಿದ ಆಯುಧಗಳನ್ನು, ಉಡುಗೆ-ತೊಡುಗೆಗಳನ್ನು ನೀರಿನಲ್ಲಿ ತೊಳೆದು ಸಾಯಂಕಾಲ ಎಲ್ಲವನ್ನು ಒಂದು ಕಡೆ ಇಟ್ಟು ಪೂಜೆ ಮಾಡುತ್ತಾರೆ. ನಂತರ ಕುದುರೆಯ ಮೆರವಣಿಗೆ ನಡೆಯುತ್ತದೆ. ಇದರಲ್ಲಿ ಈಗ ಇರುವ ಯಲ್ಲಪ್ಪನಾಯಕನು ಕುದುರೆಯ ಮೇಲೆ ಕತ್ತಿ ಹಿಡಿದು ಕುಳಿತು ಮೆರವಣಿಗೆಯಲ್ಲಿ ಬರುತ್ತಾನೆ.

ವಿಜಯ ದಶಮಿಯ ದಿವಸ ಸಾಯಂಕಾಲ ನಾಲ್ಕುಗಂಟೆಗೆ ರಾಜವಂಶಸ್ಥರಾದ ಶ್ರೀ ಯಲ್ಲಪ್ಪನಾಯಕರನ್ನು ರಾಜಮರ್ಯಾದೆಗಳಿಂದ ನಗರದಲ್ಲಿ ಮೆರವಣಿಗೆಯ ಮುಖಾಂತರ ಕರೆದೊಯ್ಯುತ್ತಾರೆ. ದೊರೆಗೆ ಶೃಂಗರಿಸಿದ ಕತ್ತಿಯನ್ನು ಕೊಟ್ಟಿರುತ್ತಾರೆ. ಆತನ ಪಕ್ಕೆಗಳಲ್ಲಿ ಎರಡು ಬಿಳಿ ಛತ್ರಿಕೆಗಳಿರುತ್ತವೆ. ಜೊತೆಗೆ ಕತ್ತಿಯನ್ನು ಹಿಡಿದವರು ಪಕ್ಕೆಗಳಲ್ಲಿ ಸಾಗುತ್ತಿರುತ್ತಾರೆ.(ಮೊದಲಿಗೆ ಕಾಲುನಡುಗೆಯಲ್ಲಿ ಆಂಜನೇಯನ ಗುಡಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ) ಮೆರವಣಿಗೆಯಲ್ಲಿ ದೊರೆಯು ಮುಂದೆ ಸಾಗುತ್ತಿದ್ದರೆ, ಈ ನಗರದ ಇನ್ನಿತರೆ ದೇವರುಗಳು ಹಿಂದೆ ಬರುತ್ತವೆ. ಮೆರವಣಿಗೆಯನ್ನು ಮಾಡುತ್ತಾ ಸಂಜೆ ಹೊತ್ತಿಗೆ ಬನ್ನಿಮರದ ಹತ್ತಿರ ಬರುತ್ತಾರೆ. ದೊರೆಯಾದ ಯಲ್ಲಪ್ಪನಾಯಕರಿಂದ ಬನ್ನಿಪೂಜೆ ನಡೆಯುತ್ತದೆ. ತದನಂತರ ಅಲ್ಲಿ ನೆರದಿದ್ದ ಊರಿನ ಗ್ರಾಮಸ್ಥರು, ಬೇರೆ ಊರಿನಿಂದ ಬಂದ ಸಾವಿರಾರು ಭಕ್ತರು ಪೂಜೆ ಮಾಡಿ ಬನ್ನಿ ಸೊಪ್ಪು ಪಡೆಯುತ್ತಾರೆ.

ಇದಾದ ನಂತರ ದೊರೆಯಿಂದ ಅಂಬು ಹೊಡೆಯುವ ಕಾರ್ಯಕ್ರಮವಿರುತ್ತದೆ. ಅಂಬುಹೊಡೆಯಲು ಬನ್ನಿಮರಕ್ಕೆ ಚಪ್ಪರ ಹಾಕಿರುತ್ತಾರೆ. ದೊರೆಯು ಬಿಲ್ಲು ಬಾಣಗಳನ್ನು ಹಿಡಿದು ನಾಲ್ಕು ದಿಕ್ಕಿಗೂ ಒಂದೊಂದರಂತೆ ಬಾಣಗಳನ್ನು ಬಿಡುತ್ತಾನೆ. ತದನಂತರ ನೆತ್ತೀಯ ಮೇಲಕ್ಕೆ ಒಂದು ಬಾಣ ಬಿಟ್ಟು ಶಾಸ್ತ್ರವನ್ನು ಪೂರೈಸುತ್ತಾನೆ. ಆಗ ಎಲ್ಲರೂ ದೊರೆ ಜೊತೆಗೂಡಿ ಮತ್ತೆ ಮೆರವಣಿಗೆಗೆ ಸಾಗುತ್ತದೆ. ಮೆರವಣಿಗೆಯ ಸಂದರ್ಭದಲ್ಲಿ ಊರಿನ ಹೆಣ್ಣು ಮಕ್ಕಳು ಆರತಿ ಮಾಡುತ್ತಾರೆ. ಮೆರವಣಿಗೆಯು ಮುಗಿದ ಮೇಲೆ ಎಲ್ಲಾ ದೇವರುಗಳು ತಮ್ಮ ದೇವಸ್ಥಾನಗಳಿಗೆ ಹೋಗುತ್ತವೆ. ನಂತರ ಮೆರವಣಿಗೆಯೊಂದಿಗೆ ಪಾಳೇಗಾರನು ಮನೆಯನ್ನು ತಲುಪುತ್ತಾನೆ. ಈ ಉತ್ಸವದಲ್ಲಿ ಊರಿನ ಸಮಸ್ತ ಪ್ರಜೆಗಳು ಮತ್ತು ಸುತ್ತಮುತ್ತಲಿನ ಪ್ರಜೆಗಳು ಪಾಲ್ಗೊಂಡು ಉತ್ಸವವನ್ನು ಯಶಸ್ವಿಯಾಗಿ ನೆರವೇರಿಸುತ್ತಾರೆ.

ಹೊಸಕೋಟೆಯ ಬೆಟ್ಟದ ಚೆನ್ನಕೇಶವ ಸ್ವಾಮಿಯ ಉತ್ಸವ : ಯಲ್ಲಪ್ಪನಾಯಕನ ಹೊಸಕೋಟೆ ಬೆಟ್ಟದ ತುದಿಯಲ್ಲಿ ನಾಯಕರು ಸ್ಥಾಪಿಸಿದ ಶ್ರೀ ಚೆನ್ನಕೇಶವ ಸ್ವಾಮಿಯ ದೇವಸ್ಥಾನವಿದೆ. ಇಲ್ಲಿರುವ ಸ್ವಾಮಿಗೆ ಪ್ರತಿವರ್ಷ ಕಾರ್ತೀಕ ಮಾಸದ ಸೋಮವಾರ ಉತ್ಸವ ನಡೆಯುತ್ತದೆ. ಈ ಉತ್ಸವವನ್ನು ಪಾಳೇಗಾರರನ್ನು ಒಳಗೊಂಡಂತೆ ಸುತ್ತಲಿನ ಸಮಸ್ತ ಜನರು ಭಾಗವಹಿಸಿ ಪೂಜೆಯನ್ನು ಮಾಡುತ್ತಾರೆ.

ಕಾರ್ತೀಕ ಮಾಸದ ಸೋಮವಾರದ ದಿವಸ ಬೆಳಗಿನಜಾವ ಭಕ್ತಾದಿಗಳು ಬೆಟ್ಟಕ್ಕೆ ಬರುತ್ತಾರೆ. ಚೆನ್ನಕೇಶವ ವಿಗ್ರಹವನ್ನು ಅಲ್ಲಿಯೇ ಇರುವ ದೊಣೆಯ ನೀರಿನಿಂದ ಶುಚಿಗೊಳಿಸುತ್ತಾರೆ. ಪಾಳೇಗಾರರ ವಂಶಸ್ಥರು ಈ ಉತ್ಸವದಲ್ಲಿ ಭಾಗವಹಿಸುವುದು ವಿಶೇಷವಾಗಿರುತ್ತದೆ. ಇದರಿಂದ ಮೊದಲಿಗೆ ಚೆನ್ನಕೇಶವ ವಿಗ್ರಹಕ್ಕೆ ಅಭಿಷೇಕ ನೆರವೇರುತ್ತದೆ. ಇದಾದ ನಂತರ ಗುಡಿಯ ಮುಂದೆ ಹೋಮ ಸುಡಲು ಪ್ರಾರಂಭಿಸುತ್ತಾರೆ. ಹೋಮ ಮಾಡುವಾಗ ಪಾಳೇಗಾರರ ವಂಶಸ್ಥರು ಕುಳಿತುಕೊಳ್ಳುತ್ತಾರೆ. ಇವರಿಂದಲೇ ಗಂಗೆ ಪೂಜೆ ನಡೆಯುತ್ತದೆ. ನಂತರ ನೆರೆದಿದ್ದ ಸಮಸ್ತ ಭಕ್ತಾಧಿಗಳು ಗಂಗೆ ಪೂಜೆ ಮಾಡುತ್ತಾರೆ. ವಿಶೇಷವಾಗಿ ಮಕ್ಕಳ ಭಾಗ್ಯವಿಲ್ಲದ ಹೆಣ್ಣುಮಕ್ಕಳು ಗಂಗೆಪೂಜೆ ಮಾಡುವುದು ಕಂಡುಬರುತ್ತದೆ.

ಎಲ್ಲಾ ಭಕ್ತಾಧಿಗಳು ದೊಣೆಯಲ್ಲಿ ಮಿಂದು ಚೆನ್ನಕೇಶವ ಸ್ವಾಮಿಯ ದರ್ಶನ ಕೈಗೊಳ್ಳುತ್ತಾರೆ. ಕಾಯಿ, ಹಣ್ಣು, ಕರ್ಪೂರಗಳನ್ನು ಕೊಟ್ಟು ಪೂಜೆ ಮಾಡಿಸುತ್ತಾರೆ. ಇದಾದ ನಂತರ ಸರ್ವರಿಗೂ ಅನ್ನದಾಸೋಹ ಏರ್ಪಡಿಸುತ್ತಾರೆ. ರಾತ್ರಿಗೆ ಬೆಟ್ಟದಲ್ಲಿಯೇ ಸರ್ವರೂ ಉಳಿದುಕೊಳ್ಳುತ್ತಾರೆ. ರಾತ್ರಿಯೆಲ್ಲ ಭಜನೆಗಳು, ಮಹಾಭಾರತದ ವಿರಾಟಪರ್ವ ಓದುವುದು, ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ.

ಈ ಉತ್ಸವದಲ್ಲಿ ಒಂದು ವಿಶೇಷವೆಂದರೆ ಹೆಣ್ಣು ಮಕ್ಕಳು ಮುಂಜಾನೆಯಿಂದ ಸಾಯಂಕಾಲದವರೆಗೆ ಗಂಗೆಪೂಜೆ ಮಾಡುತ್ತಲೇ ಇರುತ್ತಾರೆ. ಜೊತೆಗೆ ಇಲ್ಲಿನ ಗಂಗಾಜಲವನ್ನು ಪವಿತ್ರವೆಂದು ಭಾವಿಸಿ ಹೊಲಗಳಲ್ಲಿನ ಬೆಳೆಗಳಿಗೆ ರೋಗ ರುಜಿನಗಳು ಬಂದಿದ್ದರೆ ಈ ನೀರನ್ನು ಚಿಮುಕಿಸಿದರೆ ರೋಗಗಳು ನಿವಾರಣೆಯಾಗಿ, ಉತ್ತಮ ಬೆಳೆ ಪಡೆಯಬಹುದು ಎಂಬ ನಂಬಿಕೆಯಿಂದ ಇಲ್ಲಿನವರು ನೀರನ್ನು ಕೊಂಡೊಯ್ಯುತ್ತಾರೆ.

ಹೀಗೆ ಇನ್ನು ಹಲವು ಕೋಟೆಗಳಲ್ಲಿ ಹಲವಾರು ಆಚರಣೆಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಈ ರೀತಿ ಇವೆ. ಪಾವಗಡ ವೇಣುಗೋಪಾಲಸ್ವಾಮಿಯ ಉತ್ಸವ, ಕೋಟೆ ಆಂಜನೇಯನ ಉತ್ಸವ, ನಿಡುಗಲ್ಲು ದುರ್ಗದ ನರಸಿಂಹಸ್ವಾಮಿಯ ಉತ್ಸವ (ಇದು ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಸಮುದಾಯಗಳಿಂದ ಉತ್ಸವ ನಡೆಯುತ್ತದೆ.), ದೇವರಬೆಟ್ಟದ ಶ್ರೀರಂಗನಾಥಸ್ವಾಮಿಯ ಉತ್ಸವ, ಬಂಗಾರನಾಯಕನ ದುರ್ಗದ ಕಂಬದ ರಾಯನ ಉತ್ಸವ, ಮಿಡಿಗೇಶಿಯ ವೆಂಕಟರಮಣಸ್ವಾಮಿ ಉತ್ಸವ, ಬೆಟ್ಟದ ಕೋಟೆಯ ಕನ್ನೇರಮ್ಮ ದೊಣೆಯಲ್ಲಿ ನಡೆಯುವ ಜಲಧಿ ಆಚರಣೆ, ಬಿಜ್ಜಾವರದಲ್ಲಿ ನಡೆಯುವ ಬಿಜ್ಜಾದೇವಿಯ ಉತ್ಸವ, ಮಧುಗಿರಿಯಲ್ಲಿ ನಡೆಯುವ ಮಲ್ಲೇಶ್ವರಸ್ವಾಮಿಯ ಉತ್ಸವ, ವೆಂಕಟರಮಣ ಸ್ವಾಮಿಯ ಉತ್ಸವ, ದೇವರಾಯನದುರ್ಗದ ಕುಂಭಿಯಲ್ಲಿರುವ ಗರುಡಗಂಭಕ್ಕೆ ನಡೆಯುವ ಆಚರಣೆಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಎಲ್ಲಾ ಉತ್ಸವಾಚರಣೆಗಳು ನಡೆಯುವ ಸ್ಮಾರಕಗಳು ಪ್ರತಿವರ್ಷ ಅಭಿವೃದ್ಧಿ ಹೊಂದಿ ಸಂರಕ್ಷಿತ ಹೊಂದಿರುವುದು ಕಾಣಬಹುದು.

ಈ ಮೇಲಿನ ಗಾದೆ, ನಂಬಿಕೆ, ಪೂಜಾಚರಣೆಗಳನ್ನು ಗಮನಿಸಿದಾಗ ಕೋಟೆಯ ಸ್ಮಾರಕಗಳನ್ನು ಅಲ್ಲಿನ ಪರಿಸರದ ಜನಸಮುದಾಯಗಳು ಸ್ಮಾರಕಗಳಲ್ಲಿ ತಮ್ಮ ಜೀವನದ ಭಾಗವನ್ನಾಗಿಸಿಕೊಂಡಿವೆ ಎನ್ನಬಹುದು. ನಂಬಿಕೆ, ಆಚರಣೆಗಳನ್ನು ಶ್ರದ್ಧಾಪೂರ್ವಕವಾಗಿ ನೆರವೇರಿಸಿಕೊಂಡು, ಭಾವನಾತ್ಮಕವಾಗಿ ಒಪ್ಪಿಕೊಂಡು ಬದುಕುತ್ತಿವೆ. ಈ ಹಿನ್ನೆಲೆಯಲ್ಲಿ ಕೋಟೆಯಲ್ಲಿನ ಸ್ಮಾರಕಗಳು ಸಮುದಾಯಗಳಿಂದ ಬಳಸಿ, ಅಭಿವೃದ್ಧಿ ಪಡಿಸುತ್ತಾ, ಪವಿತ್ರೀಕರಿಸುತ್ತಾ ಸಂರಕ್ಷಿತಗೊಂಡಿವೆ. ಅಲ್ಲದೆ ಅಪವಾದವೆಂಬಂತೆ ಸಮುದಾಯಗಳಿಂದ ಬಳಕೆಯಾಗದೆ ಇರುವ ಎಷ್ಟೋ ಸ್ಮಾರಕಗಳು ನಾಶದ ಸ್ಥಿತಿಯೂ ತಲುಪಿವೆ. ಆಚರಣೆಗಳ ಸಂದರ್ಭದಲ್ಲಿಯು ಸುಣ್ಣಬಣ್ಣಗಳಿಂದ, ಎಣ್ಣೆ-ಮಜ್ಜನದಿಂದ ಸ್ಮಾರಕಗಳು ಹಿಂದಿನ ಅಸಲಿ ಸ್ವರೂಪವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ. ಸ್ಮಾರಕಗಳ ಸ್ಥಾಪನೆಯ ಸಂದರ್ಭದಲ್ಲಿ ನಿಧಿಯನ್ನಿಟ್ಟಿರುತ್ತಾರೆ ಎನ್ನುವ ತಪ್ಪುಕಲ್ಪನೆಯಿಂದ ನಿಧಿಗಳ್ಳರು ಸ್ಮಾರಕಗಳನ್ನು ನಾಶಮಾಡುತ್ತಿದ್ದಾರೆ.

ಒಟ್ಟಾರೆಯಾಗಿ ಸಮುದಾಯಗಳು ಕೋಟೆಯ ಸ್ಮಾರಕಗಳಿಗೆ ಜೀವ ತುಂಬಿ, ಅವುಗಳನ್ನು ಅಭಿವೃದ್ಧಿ ಪಡಿಸುತ್ತಾ ಪರಂಪರೆಯಿಂದಲೂ ತಮ್ಮ ಜೀವನದ ಭಾಗವನ್ನಾಗಿಸಿಕೊಂಡು ಸಂರಕ್ಷಿಸುತ್ತಾ ಬಂದಿವೆ. ಅಲ್ಲದೆ ಪ್ರಾಚ್ಯವಸ್ತುಸಂಗ್ರಹಾಲಯದವರು ಸ್ಮಾರಕಗಳ ಬಗೆಗೆ ತೋರುವ ಕಾಳಜಿಗಿಂತ ಭಿನ್ನವಾದ ಕಾಳಜಿಯನ್ನು ಜನಪದರು ಹೊಂದಿದ್ದಾರೆಂಬುದು ಸತ್ಯ. ಪುರಾತತ್ವ ಇಲಾಖೆಯವರು ಸಂರಕ್ಷಿಸಲಾಗದ ಎಷ್ಟೋ ಸ್ಮಾರಕಗಳನ್ನು ಜನಪದರು ರಕ್ಷಿಸಿಕೊಂಡು ಬಂದಿರುವುದನ್ನು ನಾವಿಂದು ಮರೆಯುವಂತಿಲ್ಲ.

ಅಡಿಟಿಪ್ಪಣಿಗಳು

೧. ಮಂಜುನಾಥ ಬೇವಿನಕಟ್ಟಿ, **ಜನಪದ ನಂಬಿಕೆಗಳು**, ಪು.೧೩, ೧೯೯೬

೨. ಆರ್ವಿಯಸ್ ಸುಂದರಂ, **ಜನಪದ ಸಾಹಿತ್ಯದ ಮೂಲತತ್ವಗಳು**, ಪು.೫೦-೫೧, ೧೯೭೬

೩. EC VOL.XII, ಪಾವಗಡ-೪೬

೪. ಪರಮಶಿವಮೂರ್ತಿ ಡಿ.ವಿ., **ಸಂಶೋಧನಾ ಸಿರಿ**, ಪು.೧೭, ೧೯೯೬

೫. ವೀರಣ್ಣ ರಾಜೂರ(ಸಂ), **ವೀರಶೈವ ತಾರಾವಳಿ ಸಂಪುಟ**, ಪು.೮೩, ೧೯೯೪

೬. ಅದೇ, ಪು.೯೭

ಅಧ್ಯಾಯ ೭

ಸಮಾರೋಪ

ಸಮಾರೋಪ

ಇದುವರೆಗೂ ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ಜಾನಪದೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೋಟೆಯ ಪರಿಸರದಲ್ಲಿ ಬದುಕುವ ಜನಸಮುದಾಯಗಳಿಂದ ದೊರೆಯುವ ಜಾನಪದೀಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಾನೀಯವಾದ ಮೌಖಿಕ ಇತಿಹಾಸದ ಕಥನವನ್ನು ರೂಪಿಸಲು ಯತ್ನಿಸಿದ್ದೇನೆ. ಇತಿಹಾಸ ಪ್ರಸಿದ್ಧ ಕೋಟೆಗಳ ಕುರಿತು ಲಿಖಿತ ರೂಪಗಳಿಗಿಂತ ಮೌಖಿಕ ರೂಪದಲ್ಲಿ ಜನಪದರು ತಮ್ಮ ಪರಂಪರೆಯ ನೆನಪುಗಳನ್ನು ಅಭಿವ್ಯಕ್ತಿಗೊಳಿಸಿರುವುದು ಕಾಣಬಹುದಾಗಿದೆ. ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಾಂಸ್ಕೃತಿಕ ಸಂಬಂಧವನ್ನು ಇಟ್ಟುಕೊಂಡು ಅವುಗಳಲ್ಲಿ ಅಪಾರವಾದ ನಂಬಿಕೆ, ಆಚರಣೆಗಳನ್ನು ಹೇಗೆ ನೆರವೇರಿಸಿಕೊಂಡು ಬಂದಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ. ಅಲ್ಲದೆ ಕಥೆ, ಹಾಡು, ಗಾದೆ, ಸ್ಥಳಪುರಾಣಗಳು ನೀಡುತ್ತಿರುವ ಮಾಹಿತಿಗಳು ಜನಪ್ರಿಯ ಚರಿತ್ರೆಗಿಂತ ವಿಭಿನ್ನ ಅರ್ಥವನ್ನು ಕಟ್ಟಿಕೊಡುತ್ತಿವೆ. ಇಂಥ ಮಾಹಿತಿಗಳನ್ನು ಹೊಸ ಕಾಲದ ಚಿಂತನೆ ಕ್ರಮಗಳಿಂದ ವಿಶ್ಲೇಷಿಸಲಾಗಿದೆ.

ಕೋಟೆ ಕೊತ್ತಲಗಳ ಅಧ್ಯಯನವೆಂದರೆ ಚರಿತ್ರೆ ಮತ್ತು ಪುರಾತತ್ವದ ಅಧ್ಯಯನವೆಂದರ್ಥ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಚರಿತ್ರೆ ಮತ್ತು ಪುರಾತತ್ವ ಅಂಶಗಳನ್ನು ಇಟ್ಟುಕೊಂಡು ಕೋಟೆಯ ಪರಿಸರದಲ್ಲಿ ಬದುಕುವ ಜನಸಮುದಾಯಗಳು ಹೇಳುವ ಮೌಖಿಕ ಅಂಶಗಳಿಂದ ಕ್ರಿಯಾತ್ಮಕ ನೆಲೆಯಲ್ಲಿ ಆಚರಿಸುವ ಆಚರಣೆಗಳ ಹಿನ್ನೆಲೆಯಲ್ಲಿ ಜಾನಪದೀಯ ಅಧ್ಯಯನ ಮಾಡಲಾಗಿದೆ. ಈ ಜನಸಮುದಾಯಗಳು ಕೋಟೆಗಳ ಬಗೆಗಿನ ಗ್ರಹಿಕೆಯ ಆಧಾರದ ಮೇಲೆ ಹಾಗೂ ಅವರ ಕ್ರಿಯಾತ್ಮಕ ಆಚರಣೆಗಳನ್ನು ಅಂತರಶಿಸ್ತೀಯ ನೆಲೆಯಲ್ಲಿ ನೋಡಲಾಗಿದೆ. ಆ ಕಾಲದ ಪಾಳೇಗಾರರ ಸಾಂಸ್ಕೃತಿಕ ಚರಿತ್ರೆಯನ್ನು ಹೇಳುವುದರೊಂದಿಗೆ, ಅಂದಿನ ಕಾಲದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಅಲ್ಲದೆ ಸಮಕಾಲೀನ ಸಂದರ್ಭದಲ್ಲಿ ಸಮುದಾಯಗಳ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳು ಹೀಗಿವೆ.

೧. ೧೯ನೇ ಶತಮಾನದ ರಾಷ್ಟ್ರೀಯ ಚರಿತ್ರೆ ಎನ್ನುವ ಪರಿಕಲ್ಪನೆಯಿಂದ ವಿಭಿನ್ನವಾಗಿ ಭಾರತೀಯರು ಚರಿತ್ರೆಯನ್ನು ಕಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಜಾನಪದೀಯ ಮಾದರಿಗಳ ಮೂಲಕ ಕೋಟೆ ಕೊತ್ತಲಗಳ ನಿರ್ವಚನವನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

೨. ಮೌಖಿಕ ಪರಂಪರೆಯ ಈ ಆಕರಗಳಿಂದ ತಾತ್ವಿಕವಾದ ಒಂದು ಪ್ರಮೇಯವನ್ನು ಸೃಷ್ಟಿಸಿ, ಆ ಹಿನ್ನೆಲೆಯಲ್ಲಿ ದೇಶೀಯ ಜ್ಞಾನ ಮಾದರಿಗಳು ಹೇಗೆ ಚರಿತ್ರೆಯನ್ನು ವಿಸ್ತರಿಸುತ್ತವೆ ಎನ್ನುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೩. ಮೊಲ-ನಾಯಿ ತರಹದ ಅನೇಕ ಜನಪದ ಕಥನಗಳ ಹಿಂದಿನ ತಾತ್ವಿಕತೆಯನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲಿದೆ ಯಥಾಸ್ಥಿತಿವಾದಕ್ಕಿಂತ ಭಿನ್ನವಾದ ಆಶಯಗಳನ್ನು ಈ ಕಥನಗಳು ಹೊಂದಿವೆ. ಈ ತರಹದ ಕಥನಗಳಿಂದ ಸಂಸ್ಕೃತೀಕರಣ ಪ್ರಕ್ರಿಯೆ ಮತ್ತು ಪ್ರತಿನಿರ್ಮಾಣದ ನೆಲೆಗಳನ್ನು ಗುರುತಿಸಲಾಗಿದೆ.

೪. ಕೋಟೆ ಕೊತ್ತಲಗಳ ಅಧ್ಯಯನದ ಸಂದರ್ಭದಲ್ಲಿ ಚರಿತ್ರಕಾರರು ಇದುವರೆಗೂ ಲಿಖಿತ ಆಕರಗಳಾದ ಶಾಸನ, ನಾಣ್ಯ, ಸ್ಮಾರಕ, ವಿದೇಶಿ ಬರಹ, ಸಾಹಿತ್ಯ ಬರಹ ಇತ್ಯಾದಿಗಳನ್ನು ಮುಖ್ಯ ಆಕರಗಳಾಗಿ ಬಳಸಿ ಚರಿತ್ರೆ ನಿರ್ಮಾಣ ಮಾಡುತ್ತಿದ್ದರು. ಅದರಷ್ಟೇ ಪ್ರಾಮುಖ್ಯತೆ ಸ್ಥಳೀಯವಾಗಿ ದೊರೆಯುವ ಮೌಖಿಕ ಚರಿತ್ರೆಗೂ ಇದೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೫. ಲಿಖಿತ ಚರಿತ್ರೆ ಮತ್ತು ಮೌಖಿಕ ಚರಿತ್ರೆಗಳ ವೈರುಧ್ಯಗಳನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಲಿಖಿತ ಚರಿತ್ರೆಯ ಆಕರಗಳು ಪ್ರಭುತ್ವ ಪರವಾದ ನಿಲುವನ್ನು ಹೊಂದಿದ್ದರೆ, ಜನಸಮುದಾಯದ ಕಥನಗಳು ಅದಕ್ಕೆ ವಿರೋಧವಾದ ನಿಲುವನ್ನು ಹೊಂದಿವೆ. ಈ ಎರಡು ಸಂಗತಿಗಳನ್ನು ಮುಖಾಮುಖಿ ಮಾಡಿದಾಗ ಬೇರೊಂದು ತಾತ್ವಿಕ ಸಂಗತಿ ಕಂಡುಬರುತ್ತದೆ. ಈ ಅಧ್ಯಯನದಲ್ಲಿ ಮೌಖಿಕ ಚರಿತ್ರೆಯ ಆಕರಗಳು ಲಿಖಿತ ಚರಿತ್ರೆಯ ಆಕರಗಳನ್ನು ಪರಸ್ಪರ ಮುಖಾಮುಖಿಗೊಳಿಸಿ ಅವುಗಳ ಹಿಂದಿನ ತಾತ್ವಿಕತೆಯನ್ನು ಗುರುತಿಸಲಾಗಿದೆ.

೬. ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ ನಂತರ ಕರ್ನಾಟಕದಲ್ಲಿ ಪ್ರಭುತ್ವ ವಿಕೇಂದ್ರೀಕರಣ ಉಂಟಾಯಿತು. ಈ ಹಿನ್ನೆಲೆಯಲ್ಲಿ ಆಯಾ ಪ್ರಾಂತ್ಯಗಳಲ್ಲಿದ್ದ ಅಧಿಕಾರಿಗಳಿಗೆ ಹಾಗೂ ಪಾಳೇಗಾರರಾಗಿದ್ದವರಿಗೆ ಅಧಿಕಾರ ಲಭ್ಯವಾಯಿತು. ಈ ಪಾಳೇಗಾರರು ಹೆಚ್ಚು ಸಮುದಾಯಕ್ಕೆ ಹತ್ತಿರವಾಗಿದ್ದವರು. ಈ ಕಾರಣಕ್ಕಾಗಿ ಇವರ ಜೀವನ ಮತ್ತು ಸಾಧನೆಗಳನ್ನು ಜನಪದರು ಕಥನವಾಗಿಸಿದ್ದಾರೆ. ಪ್ರಸ್ತುತ ತುಮಕೂರು ಜಿಲ್ಲೆಯ ಬಯಲು ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ಪಾಳೇಗಾರರು ಮತ್ತು ಅವರಿಂದ ಕಟ್ಟಲ್ಪಟ್ಟ ಕೋಟೆಗಳು ಸಮುದಾಯದ ಸಂಬಂಧ ಇತ್ಯಾದಿಗಳನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

೭. ಕೋಟೆಗಳಿಗೆ ಸಂಬಂಧಪಟ್ಟಂತೆ ಇರುವ ಮೌಖಿಕ ಕಥನಗಳನ್ನು ಮುಖ್ಯವಾಗಿ ಬಲಿಪದ್ಧತಿಗಳನ್ನು ತಾತ್ವಿಕ ಚರ್ಚೆಗೆ ಒಳಪಡಿಸಿ, ಇವುಗಳ ಹಿಂದಿನ ಉದ್ದೇಶ ಮತ್ತು ಸ್ವರೂಪಗಳನ್ನು ಗುರುತಿಸಲಾಗಿದೆ.

೮. ಆಧುನಿಕ ಶಿಕ್ಷಣ ಪ್ರಭಾವದಿಂದ ಚರಿತ್ರೆಯಲ್ಲಿನ ಸ್ಮಾರಕಗಳನ್ನು ಸಂರಕ್ಷಿಸಲು ಪ್ರಾಚ್ಯವಸ್ತು ಸಂಗ್ರಹಾಲಯ ಮಾಡಿ, ಸ್ಮಾರಕಗಳನ್ನು ಪ್ರದರ್ಶನದ ವಸ್ತುವನ್ನಾಗಿಸಿತು. ಆದರೆ ಜನಪದರು ತಮ್ಮ ಸುತ್ತಮುತ್ತ ಇರುವ ಸ್ಮಾರಕಗಳೊಟ್ಟಿಗೆ ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡು ಬಂದಿದ್ದಾರೆ. ಈ ಕಾರಣದಿಂದ ಚರಿತ್ರೆಯ ಪಳೆಯುಳಿಕೆಗಳನ್ನು ಒಂದು ಭೌತಿಕ ವಸ್ತುಗಳನ್ನಾಗಿ ಅಷ್ಟೇ ನೋಡದೆ ತಮ್ಮ ನಂಬಿಕೆ, ಆಚರಣೆಗಳ ಮೂಲಕ ಅವನ್ನು ಜೀವಂತ ವಸ್ತುವಾಗಿಸಿದ್ದಾರೆ. ಇದೂ ಸಹ ಪ್ರಾಚ್ಯವಸ್ತು ಸಂರಕ್ಷಣೆಯ ಒಂದು ಮುಖ್ಯವಾದ ಅಂಶವಾಗಿದ ಎಂಬುದನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಒಟ್ಟಾರೆಯಾಗಿ ಮೌಖಿಕ ಆಕರಗಳ ಮೂಲಕ ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಸ್ಥಾಪನೆ, ನಿರ್ಮಾಣ, ಕೋಟೆಗೆ ಬಲಿ, ಸ್ಮಾರಕಗಳಲ್ಲಿ ನಡೆಯುವ ನಂಬಿಕೆ, ಆಚರಣೆಗಳು ಹೀಗೆ ಹಲವು ವಿಚಾರ ಗಳನ್ನು ಒಳಗೊಂಡಂತೆ ಚರ್ಚಿಸಲಾಗಿದೆ. ಇಲ್ಲಿನ ಕಥನಗಳಲ್ಲಿ ಬರುವ ಘಟನೆಗಳು ಯಾವ ಕಾಲದಲ್ಲಿ ಪ್ರಾರಂಭಗೊಂಡವು ಎಂಬುದನ್ನು ಖಚಿತವಾಗಿ ಹೇಳಲಾಗದಿದ್ದರೂ, ಹೇಗೆ ಜನಪದರು ಈ ಕೋಟೆ ಕೊತ್ತಲಗಳನ್ನು ತಮ್ಮ ಕಥನವಾಗಿಸಿಕೊಂಡು ಚರಿತ್ರೆಯನ್ನು ಕಟ್ಟುತ್ತಾರೆ ಎಂಬುದು ತಿಳಿಯುತ್ತದೆ. ಪ್ರಸ್ತುತ ಕೋಟೆ ಕೊತ್ತಲಗಳ ಜಾನಪದೀಯ ಅಧ್ಯಯನವು ಚರಿತ್ರೆಯ ಬೇರೊಂದು ಆಯಾಮವನ್ನು ನಿರೂಪಿಸುತ್ತಿರುವುದು ವಿಶಿಷ್ಟವಾಗಿದೆ. ಹೀಗಾಗಿ ಜನಪದರ ಈ ಕಥನಗಳು ಚರಿತ್ರೆಯ ಮತ್ತೊಂದು ಅರಿವಿಗೆ ಅಗತ್ಯವಾಗಿವೆ ಎನ್ನಬಹುದು.

ಅನುಬಂಧಗಳು

೧. ನಿಡುಗಲ್ಲು ಮುಮ್ಮಡಿ ಹೊಟ್ಟೆಣ್ಣನಾಯಕನ ಹಾಡು

೨. ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ

೩. ಪಾವಗಡ ಕೋಟೆ ಲಾವಣಿ

೪. ಸಿರಾ ರಂಗಪ್ಪರಾಜರ ಯುದ್ಧದ ಲಾವಣಿ

೫. ಸೀರ್ಯಾದ ರಂಗಣ್ಣನಾಯಕನ ಲಾವಣಿ

೬. ವಕ್ಯಗಳ ವಿವರ

೭. ಪರಾಮರ್ಶನ ಗ್ರಂಥಗಳು

೮. ದೇವರಾಯನ ದುರ್ಗದ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವ ಆಹ್ವಾನ ಪತ್ರಿಕೆ

೯. ಛಾಯಾಚಿತ್ರಗಳು

ಅನುಬಂಧ ೧

ನಿಡುಗಲ್ಲು ಮುಮ್ಮಡಿ ಹೊಟ್ಟೆಣ್ಣನಾಯಕನ ಹಾಡು

ರನ್ನಾದ ಕೋಲನ್ನಾ ಕೋಲೆ
ಸಿರಿಗಂಧಾದಿ ಕೋಲನ್ನಾ ಕೋಲೆ ||ಪಲ್ಲವಿ||

ಏಳುತಲಿ ಎದ್ದು ನಾವ್ಯಾರ ನೆನೆದೇವು
ಬಾಳೀಯ ಹಣ್ಣು ಪಳವಳೀಗೆ ಪಾಂಡವರ ||ರನ್ನಾದಿ||

ಬಾಳೀಯ ಹಣ್ಣು ಪಳವಳಿಗೆ ಪಾಂಡವರ
ವೀರರ ಹೆಸರೇ ನೆನೆದೇವು ||ರನ್ನಾದ||

ಹೊತ್ತುಲುಂಟಿ ನಾವೆದ್ದು ಮತ್ಯಾರ ನೆನದೇವು
ಉತ್ತುತ್ತಿ ಹಣ್ಣು ಪಳವಳಿರಾಯ ||ರನ್ನಾದಿ||

ಉತ್ತುತ್ತಿ ಹಣ್ಣು ಪಳವಳಿಗೆ ಪಾಂಡವರ
ಎದ್ದೊಮ್ಮೆ ರಥವಾ ನೆನೆದೇವೋ ||ರನ್ನಾದ||

ಕಬ್ಬಿಣದ ಉಯ್ಯಾಲೆ ಜಗ್ಗಾಲೆ ಆಡುತಾವೆ
ಇಬ್ಬರು ತೂಗಿದರೆ ಕದಲಾವೂ ||ರನ್ನದ||

ಇಬ್ಬರು ತೂಗಿದರೆ ಕದಲಾವೆ ಕನಕಮ್ಮ
ಹೆಬ್ಬುಲಿ ಮಗನ ಪಡೆದಲ್ಲೆ ||ರನ್ನಾದ||

ಮಾಣಿಕ್ಯದ ಉಯ್ಯಾಲೆ ನೋಡಂಗೆ ಕೆತ್ತವರೆ
ನಾಲೋರು ತೊಗಿದರೆ ಕದಲಾವೊ ||ರನ್ನಾದ||

ನಾಲೋರು ತೂಗಿದರೆ ಕದಲಾವೆ ಕನಕಮ್ಮ
ದೇವೇಂದ್ರರ ಮಗನ ಪಡೆದಲ್ಲೆ ||ರನ್ನಾದಿ||

ಸಣ್ಣ ಮಗನೆ ಮುಮ್ಮೊಡಿ ಸಣ್ಣಂಗಿ ತೊಟ್ಟವನೆ
ಕೆನ್ನೆಗೆ ಬಿಟ್ಟವನೆ ಜಳಪೀಯ ||ರನ್ನಾದ||

ಕೆನ್ನೆಗೆ ಬಿಟ್ಟವನೆ ಜಳಪೀಯ ಕನಕಮ್ಮನ
ಸಣ್ಣ ಮಗನೇನೆ ಮರುಗಾವು ||ರನ್ನಾದ||

ಅಸುಮಗನೆ ಮಮ್ಮೊಡಿ ಹಸುರಂಗಿ ತೊಟ್ಟವನೆ
ಬಿಸುಲೀಗೆ ಬಿಟ್ಟವನೆ ಕಚಗಾಳ ||ರನ್ನಾದ||

ಬಿಸುಲೀಗೆ ಬಿಟ್ಟವನೆ ಕಚಗಾಳ ತಮ್ಮನ
ಕಾವಲಿಗಿಟ್ಟವನೆ ದುರುಗಾವ ||ರನ್ನಾದ||

ಹಕ್ಕಿ ಹಾರದ ಕೋಟೆ ಪಕ್ಷಿ ತೂರದ ಕೋಟೆ
ರಕ್ಕಸನ ಕೋಟೆ ರಣಕೋಟೆ ||ರನ್ನಾದ||

ರಕ್ಕಸನ ಕೋಟೆ ರಣಕೋಟೆ ನಿಡುಗಲ್ಲು
ಒಕ್ಕು ಹೋಗೋನ ಹೆಸರೇನೆ ||ರನ್ನಾದ||

ಕಾಗೆ ತೂರುದ ಕೋಟೆ, ಗೂಬೆ ಕೂರದ ಕೋಟೆ
ರಾವಳನ ಕೋಟೆ ರಣಕೋಟೆ ||ರನ್ನಾದ||

ರಾವಳನ ಕೋಟೆ ರಣಕೋಟೆ ನಿಡುಗಲ್ಲು
ಓದಿ ಹೇಳೋನ ಹೆಸರೇನೆ ||ರನ್ನಾದ||

ಕೋಟೆ ಆರಾಳುದ್ದ ಕೊತ್ತಲ ಮೂರಾಳುದ್ದ
ಕೋಟೆಯ ಹೆಸರೇ ಗಡಿಯಂಕ ||ರನ್ನಾದ||

ಕೋಟೆಯ ಹೆಸರೇ ಗಡಿಯಂಕ ಮುಮ್ಮಡಣ್ಣನ
ಅಂಗೀಯ ಹೆಸರೇ ಲಿಂಗವಂತ ಮುಮ್ಮಡಣ್ಣನ
ವಲ್ಲೀಯ ಹೆಸರೇ ವಲ್ಯಾಣಿ ||ರನ್ನಾದ||

ವಲ್ಲೀಯ ಹೆಸರೇ ವಲ್ಯಾಣಿ ಮುಮ್ಮಡಣ್ಣನ
ದಟ್ಟೀಯ ಹೆಸರೇ ದಳವಾಯಿ||ರನ್ನಾದ||

ದಟ್ಟೀಯ ಹೆಸರೇ ದಳವಾಯಿ ಮುಮ್ಮಡಣ್ಣನ
ಸಳ್ಳಣ್ಣನ ಹೆಸರೇ ಜಯಭೀಮ ||ರನ್ನಾದ||

ಸಳ್ಳಣ್ಣನ ಹೆಸರೇ ಜಯ ಭೀಮ ಮುಮ್ಮಡಣ್ಣನ
ಬಾಕೀನ ಹೆಸರೇ ಬಲವಂತ ||ರನ್ನಾದ||

ಬಾಕೀನ ಹೆಸರೇ ಬಲವಂತ ಮುಮ್ಮಡಣ್ಣನ
ಕತ್ತೀಯ ಹೆಸರೇ ಕಲಿಬೀರ ||ರನ್ನಾದ||

ಕತ್ತೀಯ ಹೆಸರೇ ಕಲಿಬೀರ ಮುಮ್ಮಡಣ್ಣನ
ಆದ್ದೇದ ಹೆಸರೇ ಹನುಮಂತ ||ರನ್ನಾದ||

ಆದ್ದೇದ ಹೆಸರೇ ಹನುಮಂತ ಮುಮ್ಮಡಣ್ಣನ
ಮೆಟ್ಟಿನ ಹೆಸರೇ ಮದಕೇರಿ ||ರನ್ನಾದ||

ಮೆಟ್ಟೀನ ಹೆಸರೇ ಮದಕೇರಿ ಮುಮ್ಮಡಣ್ಣನ
ಪಾಗೀನ ಹೆಸರೇ ಪರಧಾನಿ ||ರನ್ನಾದ||

ಪಾಗೀನ ಹೆಸರೇ ಪರಧಾನಿ ಮುಮ್ಮಡಣ್ಣನ
ಅಂಗೀಯ ಹೆಸರೇ ಛಲದಂಕ ||ರನ್ನಾದ||

ಏಳಪ್ಪ ಮುಮ್ಮಡಿ ಎಷ್ಟೊತ್ತು ಮಲಗಿದ್ದಿ
ವಾಲೆ ಬಂದವ್ವೆ ಸದರೀಗೆ ||ರನ್ನಾದ||

ವಾಲೆ ಬಂದವ್ವೆ ಸದರೀಗೆ ಮುಮ್ಮಡಣ್ಣನ
ತುರುಕ ವಾಲಿ ಬರಿದವ್ವೆ ನೋಡೇಳು ||ರನ್ನಾದ||

ಹರಿವ ನೀರಿನಾಕೆ ಹವಳದುಂಗುರನಾಕೆ
ಹರತಿ ಮುಮ್ಮಡಿಯ ಬರಹೇಳೆ ||ರನ್ನಾದ||

ಹರತಿ ಮುಮ್ಮಡಿಯ ಬರಹೇಳೆ ತುರುಕರು
ಬರುವಲ್ಲಿಗೋಲೆ ಬರೆದಾಕೊ ||ರನ್ನಾದ||

ಉದ್ದನ್ ನೀರಿನಾಕೆ ಮುದ್ದಿನುಂಗುರನಾಕಿ
ಎದ್ದು ಬರಹೇಳೆ ಚೆಲುವಾನ ||ರನ್ನಾದ||
ಇದ್ದಲ್ಲಿಗೋಲೆ ಬರದಾಕೋ ||ರನ್ನಾದ||

ಉದ್ದನ್ ನೀರಿನಾಕಿ ಮುತ್ತಿನುಂಗುರನಾಕಿ
ಹರತಿ ವೀರನಿಗೇಳು ಚಲುವಾಗೆ ||ರನ್ನಾದ||

ಹರತಿ ವೀರನಿಗೇಳು ಚಲುವ ಮುಮ್ಮಡಿಗೆ
ಜಲ್ದೀಲಿ ಓಲೆ ಬರೆದಾಕೋ ||ರನ್ನಾದ||

ಹೋದಂತ ಓಲೆಗಳ ಕಾಲಲ್ಲಿ ವರಸೀದ
ಹೋಗಬೇಕೆಂದ ಜಗಳಾಕೆ ||ರನ್ನಾದ||

ಹೋಗಬೇಕೆಂದ ಜಗಳಾಕೆ ಮಂಗ ಪೋಟಿ
ಹಳದಾಗಾದ್ದೇವ ತೊಳೆಯೆಂದ ||ರನ್ನಾದ||

ಓದಿದಂಥ ಓಲೆಗಳ ಕಾಲಲ್ಲಿ ವರಸೀದ
ಚೌಳೂರು ತಂಕ ನಡಿಯೆಂದ ||ರನ್ನಾದ||

ಚೌಳೂರು ತಂಕ ನಡಿಯೆಂದ ಪರಸರಾಂಪುರದ
ಹಳದಾಗಾದ್ದೇವ ತೊಳೆಯೆಂದ ||ರನ್ನಾದ||

ಗುದ್ದಲಿಯ ತರಸಿದ ದಿಬ್ಬವ ಸರಿಮಾಡಿಸಿ
ದೊಡ್ಡ ಫಿರಂಗಿಯ ನಿಲಿಸಂದ ||ರನ್ನಾದ||

ದೊಡ್ಡ ಫಿರಂಗಿಯ ನಿಲಿಸಂದ ಹೊಸಕೋಟೆ
ದಿಡ್ಡಿ ಬಾಗಿಲ ನೋಡಿ ಹೊಡೆಯೆಂದ ||ರನ್ನಾದ||

ಹಾರೆಯ ತರಿಸಿದ ಹಾದಿಯ ಸಮಮಾಡಿಸಿದ
ಘೋರ ಫಿರಂಗಿಯ ನಿಲಿಸಂದ ||ರನ್ನಾದ||

ಘೋರ ಫಿರಂಗಿಯ ನಿಲಿಸಂದ ಪಾಗೊಂಡೆ
ಘೋರ್ ಬಾಗಿಲನೋಡಿ ಹೊಡಿಯೆಂದ ||ರನ್ನಾದ||

ಹಾರಕದ ಹೊಲದಾಗೆ ಆರೆಮ್ಮೆ ಮೆಯ್ಯಾವು
ಆರೆಮ್ಮೆ ನಮಗೆ ಋಣವಿಲ್ಲ ||ರನ್ನಾದ||

ಆರೆಮ್ಮೆ ನಮಗೆ ಋಣವಿಲ್ಲ ತುರುಕರು
ಆದ್ದೇಕು ನಮಗೂ ಋಣವೈತೆ ||ರನ್ನಾದ||

ಸಜ್ಜೇಯ ಹೊಲದಾಗೆ ಹತ್ತೆಮ್ಮೆ ಮೇಯ್ಯೊವು
ಹತ್ತೆಮ್ಮೆಗೆ ನಮಗೆ ಋಣವಿಲ್ಲ ||ರನ್ನಾದ||

ಹತ್ತೆಮ್ಮೆಗೆ ನಮಗೆ ಋಣವಿಲ್ಲ ತುರುಕರು
ಕತ್ತೀಗೆ ನಮಗೆ ಋಣವೈತೆ ||ರನ್ನಾದ||

ಗಡ್ಡಾದ ತುರುಕಾರು ದುಡ್ಡೀಗೆ ತರವಲ್ಲ
ಜಜ್ಜುಗಲ್ಲಾಗೆ ಒಲೆಯೂಡಿ ||ರನ್ನಾದ||

ಜಜ್ಜುಗಲ್ಲಾಗೆ ಒಲೆಯೂಡಿ ಅಡಿಗೆ ಮಾಡಿದ್ದು
ಮೋಸ ಮುಮ್ಮಡಿಗೆ ತಿಳಿಯಾವೂ ||ರನ್ನಾದ||

ಕೀಸೀನ ತುರುಕಾರು ಕಾಸೀಗೆ ತರವಲ್ಲ
ಸೀಮೆಗಲ್ಲಾಗೆ ಒಲೆಯೂಡಿ ||ರನ್ನಾದ||

ಸೀಮೆ ಗಲ್ಲಾಗೆ ಒಲೆಯೂಡಿ ಅಡಿಗೆ ಮಾಡಿ
ಬುದ್ಧಿ ಮುಮ್ಮಡಿಗೆ ತಿಳಿಯಾವೂ ||ರನ್ನಾದ||

ಮೀಸುಳ್ಳ ತುರುಕಾರು ಕಾಸೀಗೆ ತರವಲ್ಲ
ಸಾಪುಗಲ್ಲಾಗೆ ಒಲೆಯೂಡಿ ||ರನ್ನಾದ||

ಸಾಪುಗಲ್ಲಾಗೆ ಒಲೆಯೂಡಿ ಅಡಿಗೆ ಮಾಡಿ
ಭಾಷೆ ಮುಮ್ಮಡಿಗೆ ತಿಳಿಯಾವೂ ||ರನ್ನಾದ||

ಪಾಗೊಂಡೆ ಊರು ಬಾಗಿಲು ಕಳ್ಳೆ ಊರು ಬಾಗಿಲು
ಕಳ್ಳೆ ಮುರಿದರೆ ಕಳ್ಳೆ ಸಿಗುತಾವೂ ||ರನ್ನಾದ||

ಕಳ್ಳೇ ಮುರಿದರೆ ಕಳ್ಳೆ ಸಿಗುತಾವೂ ಪಾಗೊಂಡೆ
ಕಳ್ಳರು ಬರುತಾರೊ ಜಗಳಾಕೆ ||ರನ್ನಾದ||

ಸೀರ್ಯಾದ ಊರು ಬಾಗಿಲು ಚಿನ್ನಾದುರು ಬಾಗಿಲು
ಚಿನ್ನ ಮುರಿದರೆ ಚಿನ್ನ ಸಿಗುತಾವೂ ||ರನ್ನಾದ||

ಚಿನ್ನ ಮುರಿದರೆ ಚಿನ್ನ ಸಿಗುತಾವೊ ಸೀರ್ಯಾದ
ಚನ್ನಿಗರು ಬರುತಾರೋ ಜಗಳಾಕೆ ||ರನ್ನಾದ||

ನಿಡುಗಲ್ಲು ಊರು ಬಾಗಿಲು ಮುತ್ತಿನೂರ ಬಾಗಿಲು
ಮುತ್ತು ಮುರಿದರೆ ಮುತ್ತು ಸಿಗುತಾವೊ ||ರನ್ನಾದ||

ಮುತ್ತು ಮುರಿದರೆ ಮುತ್ತು ಸಿಗುತಾವೊ ನಿಡುಗಲ್ಲು
ಚನ್ನಿಗರೊರಟಾರೂ ಜಗಳಾಕೆ ||ರನ್ನಾದ||

ಈಟೀಟಿ ಹುಡುಗಾರು ಸೀಟಿ ಸಳ್ಳಣ್ಣಗಾರರು
ಮೇಲೆದ್ದು ಪ್ರಾಯದ ಹುಡುಗಾರು ||ರನ್ನಾದ||

ಮೇಲೆದ್ದು ಪ್ರಾಯದ ಹುಡುಗರು ನಿಡುಗಲ್ಲು ಹುಡುಗರು
ಹೋದಾರೆ ಪ್ಯಾಟಿ ಶಿವಲೆಗ್ಗೆ ||ರನ್ನಾದ||

ದೊಡ್ಡ ದೊಡ್ಡ ಹುಡುಗಾರು ಚಡ್ಡಿ ಚಲ್ಲಣಗಾರು
ಮೇಲೆದ್ದು ಪ್ರಾಯದ ಹುಡುಗಾರು ||ರನ್ನಾದ||

ಮೇಲೆದ್ದು ಪ್ರಾಯದ ಹುಡುಗಾರು ನಿಡುಗಲ್ಲುಡುಗರು
ಹೊಕ್ಕಾರೆ ಪ್ಯಾಟಿ ಪುಡಿ ಪುಡಿ ||ರನ್ನಾದ||

ಕೆಂಭತ್ತಿನ ಅನ್ನ ಕೆಂದಾವಿನ ಹಾಲು ಕೆನೆ ಮೊಸರು
ಉಣ್ಣೋಳು ಮುಮ್ಮಡಿ ಹಗಲೂಟ ||ರನ್ನಾದ||

ಇನ್ನೇನುಂಡೇನಮ್ಮ ಇನ್ನೇನ್ ಉಟ್ಟೇನಮ್ಮ
ಅಂಗೈಲಿ ಹರಿನಾಮ ನಡಿಗ್ಯಾವೂ ||ರನ್ನಾದ||

ಸಣ್ಣಕ್ಕಿ ಭೋನ ಸರಳೆಮ್ಮೆ ಕೆನೆ ಮೊಸರು
ಉಹ್ಣೋಳು ಮುಮ್ಮಡಿ ಹಸದೀಯ ||ರನ್ನಾದ||

ಇನ್ನೇನುಂಡೇನಮ್ಮ ಇನ್ನೇನುಟ್ಟೇನಮ್ಮ
ಹಣೆಯಲ್ಲಿ ಸಿರಿಗಂಧ ಬೆವರೇವು ||ರನ್ನಾದ||

ಹಣೆಯಲ್ಲಿ ಸಿರಿಗಂಧ ಬೆವರಿದರೆ ದೇವರ ಬೆಟ್ಟ
ರಂಗಯ್ಯ ನಮ್ಮೇಲೆ ದಯವಿಡುಲಿ ||ರನ್ನಾದ||

ಅಪ್ಪಾ ಮುಮ್ಮಡಿ ತುಪ್ಪದಾಗುಣ್ಣೋವಾಗ
ಉಪ್ಪು ಚಲ್ಲಿದರೂ ತುರುಕಾರು ||ರನ್ನಾದ||

ಉಪ್ಪು ಚಲ್ಲಿದರೂ ತುರುಕಾರು ತಿಮ್ಮೋಜಮ್ಮ
ಉಪ್ಪಾದರು ಸಾಕು ಕೊಡುನೀರು ||ರನ್ನಾದ||

ಅಪ್ಪ ಮುಮ್ಮಡಿ ಎದ್ದು ಬರುವಾಗ
ಮಣ್ಣ ಸೆಲ್ಯಾರೂ ತುರುಕಾರು ||ರನ್ನಾದ||

ಮಣ್ಣು ಸೆಲ್ಯಾರೂ ತುರುಕಾರು ತಿಮ್ಮೊಜಮ್ಮ
ಮಣ್ಣಾದರು ಸಾಕು ಕೊಡು ನೀರು ||ರನ್ನಾದ||

ಆಯಾಕರಸೀಕೆರೆ ಸಹಾಯಕ ಮಂಗಳವಾಡ
ಸೋದರ ಬಲವುಳ್ಳ ನಿಡುಗಲ್ಲು ||ರನ್ನಾದ||

ಸೋದರ ಬಲವುಳ್ಳ ನಿಡುಗಲ್ಲು ಊರ್ಮುಂದೆ
ಆನೆ ಮುಮ್ಮಡಿ ಇಳಿದಾನೋ ||ರನ್ನಾದ||

ಅಂದಕೆ ಅರಸೀಕೆರೆ ಚೆಂದಕೆ ಮಂಗಳವಾಡ
ಚಂದ್ರ ಬಲವುಳ್ಳ ನಿಡುಗಲ್ಲು ||ರನ್ನಾದ||

ಚಂದ್ರ ಬಲವುಳ್ಳ ನಿಡುಗಲ್ಲು ಊರ್ಮುಂದೆ
ಅಂದಲ ಮುಮ್ಮಡಿ ಅಲ್ಲಿಳಿದಾನೋ ||ರನ್ನಾದ||

ಕೋಟೆ ಸುತ್ತಾ ಮುತ್ತಾ ಯಾತರ ಬೆಳಕಮ್ಮ
ಭೂಪ ಮುಮ್ಮಡಿ ಬರುತಾನೆ ||ರನ್ನಾದ||

ಭೂಪ ಮುಮ್ಮಡಿ ಬರುತಾನೆ ನಿಡುಗಲ್ಲು
ಶೋಕವ ದೂರ ಮಾಡುತಾನೆ ||ರನ್ನಾದ||

ಹೊತ್ತು ಹುಟ್ಟೊ ಹೊತ್ತಿಗೆ ಹತ್ತೀತಮ್ಮ ದೇವರ ಬೆಟ್ಟ
ಹತ್ತ ಕಾಲೇಣಿ ಹಾಕಿ ಕಡೆದೇಕೋ ನಿಡುಗಲ್ಲು ||ರನ್ನಾದ||

ಹತ್ತ ಕಾಲೇಣಿ ಹಾಕಿ ಕಡೆದೇಕೋ ನಿಡುಗಲ್ಲು
ಮುತ್ತೀನ ತುರಾಯ ಹುಡುಗಾರು ||ರನ್ನಾದ||

ಅತ್ತೊಮ್ಮೆ ಹಂದಿಕುಂಟೆ ಮತ್ತೆ ಮೇಲ್ನೋಡು
ಮುಗದಾಡ್ಲಬೆಟ್ಟ ||ರನ್ನಾದ||

ಮತ್ತೆ ಮುಗದಾಡ್ಲಬೆಟ್ಟ ಬರುವಾಗ
ಮುತ್ತೈದೆಯ ಬಳೆಯ ಹೊಡೆದಾರೂ ||ರನ್ನಾದ||

ರಾಗೀಯ ಕಣಜ ಕಿತ್ತು ರಾಗಿಯಾಕೆ ಇಡ್ಯಾಡೇವು
ನಾಳೆ ನಮ್ಮ ತುರುಗ ಉರುಳ್ಯಾವೊ ||ರನ್ನಾದ||

ಅಕ್ಕಿ ಕಣಜ ಕಿತ್ತು ಮಕ್ಕಳಿಗೀಡ್ಯಾಡೇಳು
ಮತ್ತೆ ನಮ್ಮ ದುರುಗ ಉಳಿಯಾವು ||ರನ್ನಾದ||

ಮತ್ತೇ ನಮ್ಮ ದುರುಗ ಉಳೀಯಾವು ಮಕ್ಕಳಿರಾ
ಇನ್ನಾದರು ನೀವು ಉಳಿಯೀರಿ ||ರನ್ನಾದ||

ನಿಂಬೀಯ ಹಣ್ಣಿನಂಗೆ ಬಂದಾರೆ ಕುಮಾರರು
ಚಂದುರಾದಾದ್ದೇವು ನೀಲುಲಾಕಿ ||ರನ್ನಾದ||

ಚಂದುರುದಾದ್ದೇವು ನೀಲುಲಾಕಿ ಕನಕಮ್ಮನ
ಕಂದನಿಗೆ ಸಲಾಮು ಕೊಡುತಾರೊ ||ರನ್ನಾದ||

ಇಲ್ಲಿ ಕೊಡೊ ಸಲಾಮು ಅಲ್ಲಿ ಕೊಡಿರೊ ಮಕ್ಕಳಿರಾ
ಬಲ್ಲಿದು ಪರುಸುರಾಂಪುರದ ಬಯಲಾಗೆ ||ರನ್ನಾದ||

ಬಲ್ಲಿದು ಪರಸುರಾಂಪುರದ ಬಯಲಾಗೆ ಮಕ್ಕಳಿರಾ
ಅಲ್ಲೆತೆ ನಿಮ್ಮ ಫಲ ಬಿರುದು ||ರನ್ನಾದ||

ಬಾಳೆಯ ಹಣ್ಣಿನಂಗೆ ಬಂದರು ಕುಮಾರರು
ತುರುಗದಾದ್ದೇವಾ ನಿಲುವಾಕಿ ||ರನ್ನಾದ||

ತೊಳೆದ ಆದ್ದೇವ ನಿಲುಲಾಕಿ ಕನಕಮ್ಮನ
ಬಾಲನಿಗೆ ಸಲಾಮು ಕೊಡುತಾರೋ ||ರನ್ನಾದ||

ಇಲ್ಲಿ ಕೊಡೊ ಸಲಾಮು ಅಲ್ಲಿ ಕೊಡಿರೊ ಮಕ್ಕಳಿರಾ
ಬಲ್ಲಿದು ಪರಸುರಾಂಪುರದ ಬಯಲಾಗೆ ||ರನ್ನಾದ||

ಬಲ್ಲಿದು ಪರಸುರಾಂಪುರದ ಬಯಲಾಗೆ ಮಕ್ಕಳಿರಾ
ಅಲ್ಲೈತೆ ನಿಮ್ಮ ಫಲ ಬಿರುದು ||ರನ್ನಾದ||

ಹಾಲಿನಂತ ದುರುಗಾಕ್ಕೆ ಹಾವಳಿಗೆ ಬಂತಮ್ಮ
ಆನೆ ಮುಂದೊಬ್ಬ ದಳವಾಯಿ ||ರನ್ನಾದ||

ಹಾಲಿನಂತ ದುರುಗಾಕ್ಕೆ ಹಾವಳಿಗೆ ಬಂತಮ್ಮ
ಆನೆ ಹಿಂದೊಬ್ಬ ದಳವಾಯಿ ||ರನ್ನಾದ||

ಆನೆ ಹಿಂದೊಬ್ಬ ದಳವಾಯಿ ದೋಣಿಕೆಂಚ
ಆವುಳಿಕೆ ತಂದ ದುರುಗಾಕೆ ||ರನ್ನಾದ||

ಮುತ್ತಿನಂತ ದುರುಗಾಕೆ ಮುಚ್ಚಳಿಕೆ ಬಂತಮ್ಮ
ಎದ್ದು ನಿಲ್ಲಪ್ಪ ದಳವಾಯಿ ||ರನ್ನಾದ||

ಎತ್ತಿನಿಂದೊಬ್ಬ ದಳವಾಯಿ ದೋಣಿ ಕೆಂಚ
ಮುಚ್ಚಳಿಕೆ ತಂದ ದುರುಗಾಕೆ ||ರನ್ನಾದ||

ಓಬಳ ಪುರವಾಗಿ ಜೋಳಿಗೆ ಹೊನ್ನಾಗಿ
ನಾಳಿ ಹೊಟ್ಟೆಪ್ಪ ದೊರೆಯಾಗಿ ||ರನ್ನಾದ||

ನಾಳೆ ಹೊಟ್ಟೆಪ್ಪ ದೊರೆಯಾಗಿ ಬಂದರೆ
ಹೂವಿ ನಾರುತಿಯ ಬೆಳಗ್ಯಾವು ||ರನ್ನಾದ||

ರಂಗ ಸುಂದುರುವಾಗಿ ಬಿಂದೀಗೆ ಹೊನ್ನಾಗಿ
ನಾಳೆ ಹೊಟ್ಟೆಣ್ಣ ದೊರೆಯಾಗಿ ||ರನ್ನಾದ||

ನಾಳೆ ಹೊಟ್ಟೆಣ್ಣ ದೊರೆಯಾಗಿ ಬಂದರೆ
ಮಂಗಳಾರತಿಯ ಬೆಳಗ್ಯಾವು ||ರನ್ನಾದ||

ಕೃಪೆ : ಡಾ.ಚಿತ್ತಯ್ಯ ಪೂಜಾರ್
(ಜೋಳಿಗೆ ಹೊನ್ನು)

ಅನುಬಂಧ ೨

ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ

ನೋಡ ಹೋಗುವ ಬನ್ನಿರೆ ಶ್ರೀ ಬಸವನ
ನೋಡ ಹೋಗುವ ಬನ್ನಿರೆ|
ನೋಡ ಹೋಗುವ ಬನ್ನಿ ನಿಡುಗಲ್ಲದುರ್ಗದ
ರೂಢೀಶ ಶಿಖರದ ಬಸವನ ಜಾತ್ರೆಯ ||ಪಲ್ಲ||

೧

ಶ್ರೀ ಗಿರಿಗೆಣೆಯಾದ ಶೃಂಗಾರ ಪುರವದು
ನಾಗಭೂಷಣನ ನಾಟಕದ ಮಂದಿರವದು
ಯೋಗಿ ಜನರ ಮೆಟ್ಟು ಇಳೆಗೆ ಸುಸ್ಥಲವದು
ಪೂಗಣೆಯನ ತಾತಪುರಹರನ [ನ] ರ್ಚಿಸಿ
ನೀಗಿ ದೋಷಗಳ ನಿರ್ಮಲವಾದ ಸ್ಥಲವದು
ಭಾಗೀರಥಿಯು ಗಂಗೆ ಬದಿಯಲ್ಲೆ ಹರಿವದು
ಆಗರ ಅಡಕೆ ಮಾಮರ ತೆಂಗು ಬಾಳೆಯು
ಪೂಗ ಪುನ್ನಾಗ ಚಂಪಕ ದ್ರಾಕ್ಷೆ ಕರ್ಜೂರ
ನಾಗವಲ್ಲಿಯು ನಂದ್ಯಾವರ್ತ ಮಲ್ಲಿಗೆ ಜಾಜಿ
ಸಾಗರ ಸಕಲ ವನದ ಮಧ್ಯದೇಶದಿಂ
ಈಗ ಇಂದ್ರನ ಅಮರಾವತಿಯ ಪಟ್ಟಣದಂತೆ
ಆಗುವ ಅರ್ತಿ ಉತ್ಸಾಹ ಮದಿವೆ ಮುಂಜ್ಜಿ
ಬೇಗ ದಿಂದಿರುಹುದು ಭಕ್ತಿಯ ರಸ
ಸಾಗರ ಒಪ್ಪಿಹುದು| ಮುಕ್ತಿಮಯವಾಗಿ| ಬಲ್ಲವರಿಗದು
ಆ ಗಿರಿಯೊಳು ಶ್ರೀಗುರುವರಮೂರ್ತಿ ಶಿಖರದಬಸವನ||
ನೋಡ ಹೋಗುವ ಬನ್ನಿರೆ....

೨

ಭೂಮಿಯೊಳು ಪೆಸರಾದ ಭೂಚಕ್ರವರ್ತಿಗಳು
ಕಾಮಿಸಿದಂಥ ಕಾರಣದ ಪಟ್ಟಣದೊಳು
ಸ್ವಾಮೇಶಸ್ವಾಮಿ ಮಳೆಯ ಮಲ್ಲಿಕಾರ್ಜುನ
ಭೀಮೇಶ ಬಿರಿದು ಬಿಂಕದ ನಾಗನಾಥನು
ರಾಮೇಶರಾಜರ ಸಾರ್ವಾಡೇಶ ಕಾಶಿಯನಾಥ
ಸ್ವಾಮಿ ವೀರೇಶ ಸೊಗಸು ಪೇಟೆ ಬಸವೇಶ
ಆ ಮಹಾ ಭೈರವ ರೂಢೀಶ ನಗರೇಶ
ಕಾಮನ ವರಪಿತ ಕಂಬದೊಳ್ ಒಡದಾತ

ರಾಮನ ತಾಯಿ ರೇಣುಕಿ ದುರ್ಗಿ ಮಹಂಕಾಳಿ
ಭೂಮಿಯೊಳಧಿಕ ಭೂಭುಜ ಬಲಶಕ್ತೇರು
ರಾಮರ ಜೀವ ಸಂಜೀವರು ವರಮುನ್ನ
ಕಾಮಿಸಿದಂಥ ಕಾಳಹಸ್ತೇಶ್ವರನಿಹ
ಭೂಮೆಲ್ಲಾ ಶಿವಮಯವು| ಪುಣ್ಯಕ್ಷೇತ್ರ
ಕಾಮಿತ ಫಲಮಯವು| ಬಲ್ಲವರಿಗೆ
ಸ್ವಾಮಿ ಈಶನ ದಯವು| ಆ ಪುರದೊಳು
ಪ್ರೇಮದಿ ನೆಲೆಸಿದ ಶಿಖರದ ಬಸವನ||
ನೋಡಹೋಗುವ ಬನ್ನಿರೆ....

೩

ವೀರಚೋಳನು ಕರವೂರ ಚೋಳನು ತುಂಗ
ಮಾರಹರನ ಭಕ್ತ ಮನುಚೋಳ ಕರಿಕಾಲ
ಧೀರ ಚೋಳನು ದಿವ್ಯರಾಜೇಂದ್ರ ಸತ್ಯೇಂದ್ರ
ಸಾರಸಹೃದಯ ಚೆನ್ನೆಯ ಚೋಳ ನಿಡಿಚೋಳ
ದಾರುಣಿ ಧರ್ಮ ಚೋಳರು ಆಳ್ದಪುರದೊಳು
ಸಾರ ಸದ್ಗುಣರು ಸದ್ಭಕ್ತ ಸಂಪನ್ನರು
ಧಾರುಣಿ ಸುರರು ಧರ್ಮರು ದಾನಪಾಲರು
ಕಾರಣಿಕರು ಕನಕಾದ್ರಿ ಗಂಭೀರರು
ದಾರರು ಧರ್ಮಶೀಲರು ಶೀಲವ್ರತಿಗಳು
ಮಾರಾರಿಭಕ್ತಿ ಮನ್ಮಥ ರೂಪು ಯುಕ್ತಿಸಂ
ಪೂರರು ಇರುತಿಹರು| ದುರಿತ [ಘನ]
ದೂರರು ಇರುತಿಹರು| ಕರ್ಮಗಳ ಸಂ
ಹಾರರು ಇರುತಿಹರು ಆಪುರದ
ಶ್ರೀ ಗಿರಿಯೊಳು ನೆಲಸಿದ ದೊರೆ ಚೆನ್ನಬಸವನ||
ನೋಡ ಹೋಗುವ ಬನ್ನಿರೆ....

೪

ಪುರಹರನಿರುವ ಪುಣ್ಯಕ್ಷೇತ್ರ ನಿಡುಗಲ್ಲ
ಪುರಸುತ್ತ ಮಾರಿ ಮಸಣಿ ದುರ್ಗಿ ಭೈರವಿ
ಗಿರಿಸುತ್ತ ಕಾವಲಾಗಿರಲು ನದಿಗಳು
ಧರೆಗೆ ಕಲಿಯು ಹೆಚ್ಚಿ ಧರ್ಮವಳಿಸುವಂಥ
ಕರಾಪಾತಕರ ಕೈಯಿಂದ ಕರ್ಮ ಹೊದ್ದದ ಹಾಗೆ
ಧರೆಯೊಳು ದುರಿತ ದೋಷವು ಮೀರಿಬಂದರೆ
ಪರಿಹರಿಸುವ ವೀರ ಪ್ರತ್ಯಕ್ಷ ರಣಶೂರ
ಹಿರಿದು ಕಾಶಿಗೆ ಸಮ ಹೊಳಲು ಧರೆನಾಮ
ಸುರಕ್ರತುಗಳ ಕರ್ಮ ಸುಜನರ ಜಪನಾಮ
ಧರಣೇಶ ಧರ್ಮ ಸಕಲ ಪ್ರಜೆ ಪರಿವಾರ
ಪರಶಿವ ಭಕ್ತರಾಗಿರುವಂಥ ಸ್ಥಲವದು

ಹಿರಿದು ಕಲ್ಯಾಣ ಪಟ್ಟಣವದು ವಸವಂತ
ಬರುವಂಥ ದಿನಕೆ ಅದು ಸದ್ಭಕ್ತರು
ಇರುವಂಥ ಸ್ಥಲವು ಅದು| ಸಕಲ ಪಾಪ
ಹರಿವಂಥ ಗಿರಿಯು ಅದು| ಆ ಗಿರಿಯೊಳು
ಇರುವಂಥ ಶಿಖರದ ಬಸವನ||
ನೋಡ ಹೋಗುವ ಬನ್ನಿರೆ

೫

ಅಡಿಯಂಚೆಗಮನೇರು ಅತಿ ಚೆಲ್ವನಾರೇರು
ತೊಡೆಮಿಂಚು ಚೋರ ತುರುಬು ತೊಂಡೆದುಟಿಯರು
ನಡುಸಣ್ಣ ನಾರೇರು ನಾಯಕಿ ಪ್ರೌಢೆಯರು
ಕುಡಿತೆಗಣ್ಣ ಬಾಲೇರು ಕೋಮಲಾಂಗನೆಯರು
ಜಡಿವ ಕುಚದ ಭಾರನಡೆಯೊಂದೆ ಸಡಗರ
ಬೆಡಗಿನ ಬೆಲೆವೆಣ್ಣುಗಳೊಂದು ದೆಸೆಯಲ್ಲಿ
ಕಡುಬೂಣ ಕಮಲ ಮುಖಿರೊಂದು ದೆಸೆಯಲ್ಲಿ
ನಡದು ಬಸವನಡಿ ನೋಡಿ ಶರಣು ಮಾಡಿ
ಒಡದು ಕಾಯಿಗಳ ನೊಪ್ಪಿಸಿ ತಮ್ಮ ಹರಕೆಯ
ಪೊಡಮಟ್ಟು ದೇವಪ್ರಸಾದವ ಕೈಗೊಂಡು
ನಡಿದುರ್ಗ ಘನದೇಶಗಳ ಕಾಣಪುದ ನೋಡಿ
ಒಡಗೂಡ ಸಕಲ ಸಜ್ಜನರೆಲ್ಲ ಒಂದಾಗಿ
ಕಡುವೇಗ ಬಂದು ಕಾಳಹಸ್ತೇಶ್ವರ ದೇವ
ನಡಿಗೆಲ್ಲ ಎರಗುವರು ಹೊರಟು ಕೊಳ
ತಡಿಯಲ್ಲಿ ಸಲಿಸುವರು ಇಂಥ ಹರುಷದಿ
ಮೃಡಭಕ್ತ ಚನ್ನಪ್ಪದೇವರ ಸಲಹುವ
ಕಡುರಮ್ಯ ಕಾಳಂಜನಗಿರಿ ಬಸವನ||
ನೋಡ ಹೋಗುವ ಬನ್ನಿರೆ

ನೋಡ ಹೋಗುವ ಬನ್ನಿರೆ ನಿಡುಗಲ್ಲು ದುರ್ಗದ
ರೂಢೀಶ ಶಿಖರದ ಬಸವನ ಜಾತ್ರೆಯ
ನೋಡ ಹೋಗುವ ಬನ್ನಿರೆ||

ಕೃಪೆ : ವೀರಣ್ಣ ರಾಜೂರ(ಸಂ), ವೀರಶೈವ ತಾರಾವಳಿ ಸಂಪುಟ
ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪

ಅನುಬಂಧ ೬

ಪಾವಗಡ ಕೋಟೆಯ ಲಾವಣಿ

ಪಾಗೊಂಡೆ ಅಂಬೋದು ಏಳು ಸುತ್ತಿನ ಕೋಟೆ
ಹೊರಕೋಟೆ ಬಳಸಿ ಬಯವಾದ ಕಂದಕದ ಸಾಲು
ನೀರು ಗಿಂಡಿಗಳು ವೀದಿಗಳು ವಿಪ್ನ ಮಾರ್ಗಗಳು
ತಲೆ ಎತ್ತಿ ನಿಂತಿರುವ ಬತ್ತೇರಿ ಬುರುಜುಗಳ ಸಾಲು
ಎದೆ ಬಿರಿವೆತ್ತರದ ಕೊತ್ತಲಗಳು ಹುಲಿ ಮುಖಗಳು

ಅಂಬುಗಿಂಡಿ, ಪೆಟಲಗಿಂಡಿ, ಕಳ್ಳ ಗಿಂಡಿಗಳು
ಎಣಿಸಲಾರದ ಲೆಕ್ಕ
ಬಲುಶೂರಕಟ್ಟಿದ ಕೋಟೆ, ಬಲುಘಟ್ಟಿ ಕೋಟೆ

ನಿಂಚಿ ಮೊದಲದಣ್ಣ ಅಂಬರಕೀಡಾಡುತ್ತಾ
ಮಡುದ ಸಾರಿಯರೆಲ್ಲಾ ಕೋಟೆ ಕಾಯುತ್ತಾರೆ
ಹಕ್ಕಿ ಹಾರದ ಕೋಟೆ ಜೀರಂಗಿ ಜೀರ್ ಅನದ ಕೋಟೆ
ಎದೆ ಬಿರಿವ ಫಿರಂಗಿಗಳ ಕೋಟೆ
ವಂಟಿಸುವ ಗುರಿ ಬಾಣಗಳು ಆ ಲಕ್ಷವಿಲ್ಲಿ
ಕಾಳಗದ ಹುಲೀ ಮುಖವುಯದೆವೊಡೆವ ಫಿರಂಗಿ ಸಾಲು

ಮೇಲೆ ಕೋಟೆಗಳ ಸಾಲು, ಕೆಳಗೆ ಕೋಟೆಗಳ ಸಾಲು
ಆಕಾಶದೆತ್ತರದ ಅಗಸೆ ಬಾಗಿಲು
ಅಂದಚಂದದಿ ಕಡೆದ ಅರವತ್ತು ಮಳದ
ಮುಚ್ಚು ಬಾಗಿಲು, ಹೆಜ್ಜೆ, ಜಯೆ ಗಂಟೆ

ಅವವಡಿಸಿದಾ ಬಾಗಿಲು ಗಂಡು ಗಂಡೆದೆಯವರು
ತಳ್ಳಲಾಗದ ತೆರೆಯಲಾಗದ ಬಾಗಿಲು
ಭದ್ರಪಡಿಸಿದರೆ ಬ್ರಹ್ಮ ತೆಗೆಯದ ಬಾಗಿಲು
ಮದ್ದಗಿರಿ ಬಾಗಿಲು, ಪೆನುಗೊಂಡೆ ಬಾಗಿಲು
ನಿಡುಗಲ್ಲು ಬಾಗಿಲು, ಜಿನಗಾರು ಬಾಗಿಲು
ಸಂತೆ ಬಾಗಿಲ ಪತ್ತೆ ಬಾಗಿಲು
ಯರಗುಂಟೆ ಬಾಗಿಲು, ಅಬ್ಬೂರ್ ಬಾಗಿಲು
ಆಂಜನೇಯನ ಬಾಗಿಲು ಪಪ್ಪಮ್ಮನಾ ಬಾಗಿಲು
ಕೊನೇರಿ ಬಾಗಿಲು, ಗೋಪಾಲಸ್ವಾಮಿ ಬಾಗಿಲು

ಬಾಗಿಲು ಬಾಗಿಲು ಬಲು ಬಾಗಿಲು
ಗಂಡು ಗಂಡೆದೆಯವರು ತೆರೆಯಲಾಗದ ಬಾಗಿಲು

ಪಾಗೊಂಡೆ ದೊರೆಗಳಗೊಂದರಮನೆ
ಹೆಂಡರಿಗೊಂದರಮನೆ
ನೂರು ಕಂಬಗಳ ಪಡಸಾಲೆ ಬಲು ಚಿತ್ರಗಳ
ಬಿಡಿಸಿದಾ ಗೋಡೆಗಳು ಬಾರಿ ಕನ್ನಡಿಗಳ ಗೋಡೆ
ಹಾಸುಗಲ್ಲುಗಳ ನೆಲ ರತ್ನ ಚಿತ್ರದ ನೆಲೆ
ಹತ್ತು ಗಂಬಗಳ ಪಡಸಾಲೆ ....

ಸಂಗ್ರಹ : ಚಲುವರಾಜನ್ ವಿ.ಆರ್
(ಅಪ್ರಕಟಿತ)

* * *

ಅನುಬಂಧ ೪

ಸಿರಾ ರಂಗಪ್ಪರಾಜರ ಯುದ್ಧದ ಲಾವಣಿ

ಶಿರೇವು ಎಂಬೋದೊಂದೇರ ಗುಮ್ಮಟ ಕಾಣೊ|
ಕೊಡಲಿಲ್ಲ ಕೋಟೆ ಹೋಗಲಿಲ್ಲ ರನ್ನದ ಕೋಲಾನೆ ಕೋಲೆನ್ನ ಕೋಲೆ||
ಕೊಡಲಿಲ್ಲ ಕೋಟೆ ಹೋಗಲಿಲ್ಲ ತಿಮ್ಮೋಜಮ್ಮ|
ಅರಮನೆ ಬಾವೀಗೆ ಬಿದ್ದಾಳೊ ರನ್ನದ ಕೋಲಾನೆ ಕೋಲೆನ್ನ ಕೋಲೆ ||೧||

ಶೀರೇದೂರ ಮುಂದೆ ಶಿರಿಗಂಧದ ಮರವುಟ್ಟಿ|
ನಿಡಗಲ್ಲಿಗೆ ಬೇರು ಹರಿದಾವು ರನ್ನದ ಕೋಲಾನೆ||
ನಿಡಗಲ್ಲಿಗೆ ಬೇರು ಹರಿದಾವು ರತ್ನಗಿರಿಯ|
ಕೊನೆಪೇಟೇಗೆ ನೆರಳ ತಿರುಗ್ಯಾವು ರನ್ನದ ಕೋಲಾನೆ ||೨||

ಕೊನೆಪೇಟೆಗೆ ನೆರಳೂ ತಿರುಗಿದ ಕಾರಣದಿಂದ|
ಯೀರಣ್ಣನಿಟ್ಟ ಈಬೂತಿ ರನ್ನದ ಕೋಲಾನೆ||
ಯೀರಣ್ಣನಿಟ್ಟ ಈಬೂತಿ ಕಾರಣದಿಂದ|
ರಂಗಣ್ಣನಿಟ್ಟ ತಿಲಕವೂ ರನ್ನದ ಕೋಲಾನೆ ||೩||

ರಂಗಣ್ಣ ಕೆಂಗಣ್ಣವರಿಬ್ಬರು ಭಾವಮೈದರು|
ದಾಯದ ಪಗಡೇಯನಾಡ್ಯರೊ ರನ್ನದ||
ದಾಯದ ಪಗಡೆಯ ನಾಡ್ಯಾರೊ ಒಂದಿನ|
ದೊಡ್ಡೋರನೆಲ್ಲ ಕರಿಶ್ಯಾರೊ ರನ್ನದ ||೪||

ದೊಡ್ಡ ದೊಡ್ಡೋರ್ನೆಲ್ಲಾ ಕರಸಿ ಮಾತನಾಡಿ|
ನೀ ಸೋತರ್ನಿನ್ನ ದುರ್ಗ ಬಿಡಬೇಕೊ ರನ್ನದ||
ನೀನೂನು ಸೋತರೆ ನಿಂದುರ್ಗ ಬಿಡಬೇಕೊ|
ನಾ ಸೋತರ್ತಂತಂಗಿ ಕೊಡುವೇನೂ ರನ್ನದ||೫||

ನಾನೂನೆ ಸೋತರೆ ನಂತಂಗಿ ಸರ್ಜಮ್ಮ|
ಲಗ್ನ ಮಾಡುವೆನೊ ರನ್ನದ||
ಲಗ್ನ ಮಾಡುವ ನಿಂಗೆ ನೀನೂನು ಸೋತರೆ|
ವಿದುರ್ಗವೆನಗೆ ಕೊಡಬೇಕೋ ರನ್ನದ||೬||

ರಂಗಣ್ಣ ಕೆಂಗಣ್ಣರಿಬ್ಬರು ಭಾವಮೈದರು|
ಲೆತ್ತದ ಪಗಡೇಯನಾಡ್ಯಾರೊ ರನ್ನದ||
ಲೆತ್ತದ ಪಗಡೇಯನಾಡ್ಯಾರೊ ಒಂದಿನ|
ಶೆಟ್ಟೀ ಸಾವಕಾರ್ನ ಕರಿಶ್ಯಾರೊ ರನ್ನದ ||೭||

ಶೆಟ್ಟೀ ಸಾವಕಾರ್ನ ಕರೆಸೀ ಮಾತನಾಡಿ|
ನಾ ಸೋತರ್ನಂದುರ್ಗ ಬಿಡವೆನು ರನ್ನದ||
ನಾನೂನೆ ಸೋತರೆ ನಂದುರ್ಗ ಬಿಡುವೇನು|
ನೀ ಸೋತರ್ನಿಂತಂಗಿ ಕೊಡಬೇಕೋ ರನ್ನದ ||೮||

ಶೆಟ್ಟೀ ಸಾಮಂತರ್ನ ಕರಸೀ ಮಾತನಾಡಿ|
ಶಿಕ್ಕ ಶೀರೆವಾಗೆ ನ್ಯಾಯವ ಕೂಗ್ಯಾರೊ ರನ್ನದ||
ಶಿಕ್ಕ ಶೀರೇದಾಗೆ ಗಾರೆಯ ಚಾವಡಿಯೊಳಗೆ|
ಅಡೆವ್ರೋ ದಾಯದ ಪಗಡೆಯ ರನ್ನದ ||೯||

ರಾಯಾ ಶೀರೇದ ಬಾರೀ ಚಾವಡಿಯೊಳಗೆ|
ಕೂಡೆವ್ರೋ ಲೆತ್ತದ ಪಗಡೆಯ ರನ್ನದ||
ಜಾಡೀಯ ತರಿಶವ್ರ ಜಮಖಾನ ಹಾಕವ್ರೆ|
ಊಡೆವ್ರೋ ದಾಯದ ಪಗಡೆಯ ರನ್ನದ||೧೦||

ಲೆತ್ತವಾಡೂದಾಗ ರಂಗಣ್ಣ ಸೋತಾನು|
ತನ್ನ ಮುಂಗೈಯಯ ಕಡಕೊಂಡು ರನ್ನದ||
ತನ್ನ ಮುಂಗೆ ತಾನು ಕಡಕೊಂಡು ರಂಗಣ್ಣ|
ತನ್ನ ಅರಮನಗೆ ಹೋದಾನು ರನ್ನದ ||೧೧||

ತನ್ನ ಅರಮನೆಗೆ ತಾ ಹೋದಾನು ತಂತಂಗಿ|
ಸರ್ಜಮ್ನ ತಾನು ಕರೆದಾನು ರನ್ನದ||
ಸರ್ಜಮ್ನ ತಾನು ಕರೆದಾನು ಯೀಪರಿ|
ತಂಗೀಯ ಕೊಡೆ ಹೇಳ್ಯಾನೊ ರನ್ನದ ||೧೨||

ನೀಕೇಳೆ ಸರ್ಜಮ್ಮ ನೀಕೇಳೇ ತಂಗಮ್ಮ|
ನಾನು ಯೇಳೋದ ನೀ ಕೇಳೇ ತಂಗೆಮ್ಮ||
ನಾನು ಯೇಳೋದ ನೀ ಕೇಳೇ ರನ್ನದ|
ತಂಗಿ ಸರ್ಜಮ್ಮ ತಾ ಕರೆಯೂತಲಿಂತೆಂದ||೧೩||

ನಿನ್ನ ಮೈನೀರ ಹಿಡಿಯಮ್ಮ ರನ್ನದ
ಅಣ್ಣಾನ್ನೇಳದ ಮಾತ ತಂಗೀನೆ ಕೇಳಿನ್ನು|
ಚಿನ್ನದ ಗಿಂಡೀಯ ಬೆಳಿಗ್ಯಾಲೊ ರನ್ನದ||
ಚಿನ್ನದ ಗಿಂಡಿಯ ಬೆಳಗಿನ್ನು ಆಗಲೆ|
ತನ್ನ ಮೈನೀರ ತಾ ಹಿಡಿದಾಲೊ ರನ್ನದ ||೧೪||

ತನ್ನ ಮೈನೀರ ತಾ ಹಿಡಿದಿನ್ನು ಅಣ್ಣಗೆ|
ಬುದ್ಧೀಯ ಯೇಳ್ತಾಳೊ ರನ್ನದ||
ನೀ ಕೇಳೊ ಅಣ್ಣಯ್ಯ ನೀ ಕೇಳೊ ಸೋದರನೆ|
ನನ್ನ ಮೈನೀರನಾ ಯಿಡಿದೀನಿ ರನ್ನದ ||೧೫||

ನನ್ನ ಮೈನೀರ್ಯಾಕೊ ನೀ ಹೇಳೊ ನನ್ನಣ್ಣ|
ಚಿನ್ನದ ಗಿಂಡೀಲಿ ಯಿಡಿದೀನಿ ರನ್ನದ||
ಚಿನ್ನದ ಗಿಂಡೀಲಿ ಯಿಡದೀನಿ ಇದು ಕೊಂಡು
ಇನ್ನಾರಿಗೇಣ ಮಾಡುವೆ ರನ್ನದ ||೧೬||

ತಂಗಿ ಕೇಳಿದ ಮಾತ ಅಣ್ಣನು ಕೇಳದೆ|
ಪೂವಲ ಕೆಂಗಯ್ನ ಕರೆಶ್ಯಾನೊ ರನ್ನದ||
ಪೂವಲ ಕೆಂಗಯ್ನ ಕರೆಸಿನ್ನು ಯಿಂತೆಂದ|
ಮಾವಯ್ಯ ನೀಕೇಳೊ ಯನ್ನ ಮಾತ ರನ್ನದ ||೧೭||

ನೀ ಕೇಳೊ ಕೆಂಗಯ್ಯ ನೀ ಕೇಳೊ ಬಾವಯ್ಯ|
ಗಂಗೆಯ ತೀರ್ತವ ತಂದಿವ್ನಿ(ದಿಲ್ಲಿ ಪಾಚ್ಚಾನ ತೀರ್ತವ) ರನ್ನದ||

ಗಂಗೆಯ ತೀರ್ಥವ ತಂದಿವ್ನಿ ಬಾವಯ್ಯ|
ಸಲಿಸೂವೆ ಬಾರೊ ಕೆಂಗಯ್ಯ ||೧೮||

ಅಂಗಂದೆ ಮಾತನ್ನು ಕೆಂಗಯ್ಯ ಕೇಳಿನ್ನು|
ವೊಗೆವ್ನೆ ಸ್ನಾನದ ಮನೆಗೆ ರನ್ನದ||
ಸ್ನಾನಾವ ಮಾಡ್ಯಾನೊ ಮಡಿಯನ್ನ ಉಟ್ಟಾನೊ|
ಸೂರೀನಿಗೆದುರಾಗಿ ನಿಂತಾನೊ ರನ್ನದ ||೧೯||

ಸೂರೀನಿಗೆದುರಾಗಿ ನಿಂತಂತ ಬಾವಗೆ|
ಬಿಡುತಾನೊ ಗಂಗೆಯ ತೀರ್ಥವ ರನ್ನದ||
ಬಿಟ್ಟಂತ ತೀರ್ಥವ ಕಣ್ಣಿಗೊತ್ತಿಕೊಂಡು
ತನ್ನ ಬಾಯಾಕೆ ಬಿಟಕೊಂಡ ರನ್ನದ ||೨೦||

ತನ್ನ ಬಾಯಾಕೆ ತಾನು ಬಿಟಕೊಂಡು ಕೆಂಗಯ್ಯ|
ಮಂಡಿಗೆ ಕೈ ವರಿಶ್ಯಾನು ರನ್ನದ||
ಮಂಡಿಗೆ ನಿಂತು ಪೇಳ್ಯಾನೊ ರನ್ನದ
ನೀ ಕೇಳೊ ಕೆಂಗಯ್ಯ ನೀ ಕೇಳೊ ಕೆಂಗಣ್ಣ ||೨೧||

ಉಚ್ಚೆಯ ಕುಡಿದಲತ್ಗೆಣ್ಣ ಕೊಡಬೋದೆ ರನ್ನದ||
ಇಚ್ಛೆಯ ಮಾತಿಗೆ ಉಚ್ಚೆಯ ಕುಡಿದಂತ|
ಲತ್ತೆಗೆಣ್ಣ ಕೊಡಬೋದೆಯೇಳೊ ರನ್ನದ
ಅಂಗಂದ ಮಾತಿಗೆ ಪೊವಲ ಕೆಂಗಯ್ಯ ||೨೨||

ತನ್ನ ಮುಂಗೈ ತಾನು ಕಡಕೊಂಡ ರನ್ನದ||
ಕರಕರನಲ್ಲ ಕಡಿದು ಬಿರಿಬಿರಿ ಗುತ್ನಬಿಟ್ಟು|
ತನ್ನ ಮುಂಗೈಯ ತಾನು ಕಡಕೊಂತ ರನ್ನದ
ತನ್ನ ಮುಂಗೈ ತಾನು ಕಡಕೊಂಡು ಕೆಂಗಯ್ಯ ||೨೩||

ಪೋದಾನು(ಡಿಲ್ಲಿ) ಬಿಜಾಪುರಕೆ ರನ್ನದ||
ಬಿಜಾಪುರಕ್ಹೋಗಿ ಅರಮನೆಯ ಬಾಗಿಲಲಿ|
ನಿಂತವನೊ ಪೂವಲ ಕೆಂಗಯ್ಯ
ನಿಂತಂತ ಕೆಂಗಯ್ಯ ಮುಕ ನೋಡಿ ಪಾಚ್ಶಾನು ||೨೪||

"ಯಾವ ರಾಜ್ಯದ ದೊರೆಯಪ್ಪ ನೀನು ರನ್ನದ||
ಯಾವೂರ ದೊರೆಯಪ್ಪ ಯಾಕಿಲ್ಲಿ ಬಂದಿದ್ದಿ|
ಯೇನಾಗಬೇಕು ನಮ್ಮಿಂದ" ರನ್ನದ
ಯಾವೂರಿಗೂ ದೊರೆಯಲ್ಲ ಯಾವೂರಿಗರಸಲ್ಲ ||೨೫||

ಶೀರೇದ ರಂಗನ ಸೊಕ್ಕ ಮುರಿಯೆ ರನ್ನದ||
ಶೀರೇದ ರಂಗನ ಸೊಕ್ಕ ಮುರಿಯೆ ಬಂದೆನು|
ಉಚ್ಚೇಯ ಕುಡಿಸೀದನದರಿಂದ ರನ್ನದ
ದಂಡನ್ನ ತಕ್ಕೊಂಡು ನೀವಿನ್ನು ಬಂದರೆ|
ಕೋಟೆಗೆ ದಾರೀಯ ತೋರಿಶೇನು ರನ್ನದ ||೨೬||

ಕೋಟೆಗೆ ದಾರೀಯ ತೋರ್ಶೇನು ರಂಗನ|
ಅರಮನೆಯ ಲೂಟಿ ವೊಡಿಶೇನು ರನ್ನದ
ಪಾಚ್ಶಾನು ಈ ಮಾತ ಕೇಳಿನ್ನು ತಲೆದೂಗಿ|
ಹೊರಟನು ದಂಡ ಕಟ್ಕೊಂಡು ರನ್ನದ ||೨೭||

ಹೊರಟನು ದಂಡ ಕಟ್ಕೊಂಡು ಶೀರೇದ|
ಕೋಟೆಗೆ ಮುತ್ತಿಗೆ ಹಾಕಾಕಿ ರನ್ನದ
ಆನೆಯ ಐನೂರು ಕುದುರೆಯ ಸಾವಿರ|
ಕಾಲಾಳು ಐವತ್ತು ಸಾವಿರ ರನ್ನದ ||೨೮||

ಇಷ್ಟೂನೆ ಬಂದೆಲ್ಲ ಗುಮ್ನಳ್ಳಿ ಅಡ್ಡೇಣಿ
ನೊಳಗೆ ಮುತ್ತಿನ ಡೇರೆ ಹೊಡಿಸಿದ ರನ್ನದ
ಮೀಸೆಯ ತುರುಕರು ಕಾಸೀಗೆ ತರವಲ್ಲ|
ಕಾಶಿಕಲ್ಲಾಗೆ ವಲೆಯೂಡೆ ರಂಗಗೆ ||೨೯||

ಮೋಸದ ಬುದ್ದಿಯ ತಿಳಿಯಾದು ರನ್ನದ
ಗುಡ್ಡದ ತುರುಕರು ದುಡ್ಡಿಗೆ ತರವಲ್ಲ|
ಅಡ್ಡಗಲ್ಲಾಗೆ ವಲೆಯೂಡೆ ರನ್ನದ||
ಅಡ್ಡಗಲ್ಲಾಗಿ ವಲೆಯೂಡೆ ರಂಗೆಗ ||೩೦||

ತುರುಕರ ಬುದ್ದಿ ತಿಳಿಯಾದು ರನ್ನದ
ಹರಿವ ನೀರಿನಾಗೆ ಹರಳಿನುಂಗುರ ಹಾಕಿ|
ಹರ್ತಿರಂಗಾಗೆ ಬುದ್ದಿ ತಿಳಿಯಾದು ರನ್ನದ||
ಹತ್ತಲಾರದ ಕೋಟೆ ಹತ್ಯಾರೊ ತುರಕರು ||೩೧||

ಹತ್ತಿ ಮತ್ತಿಳಿಯದರಿಯಾರು ರನ್ನದ
ಹತ್ತಿ ಮತ್ತಿಳಿಯದರಿಯಾರು ತುರುಕರು|
ರೊಟ್ಟಿಗೆ ಬಾಯಿ ಬಿಡುತ್ತಾರೊ ರನ್ನದ||
ರೊಟ್ಟಿಗೆ ಬಾಯಿ ಬಿಡುತಾರೊ ರನ್ನದ ||೩೨||

ಕಟ್ಟಿಕೊಂಡಲುತಾರೊ ತುರುಕಾರು ರನ್ನದ
ಎರಲಾರದ ಗುಡ್ಡ ಏರ್ಯಾರೊ ತುರುಕರು|
ಎರಿ ಮತ್ತಿಳಿಯದರಿಯಾರು ರನ್ನದ|
ಎರಿ ಮತ್ತಿಳಿಯದರಿಯಾರು ತುರುಕರು||೩೩||

ನೀರಿಗೆ ಬಾಯಿ ಬಿಡತಾರೊ ರನ್ನದ
ಚಿಕ್ಕ ಚಿಕ್ಕ ವುಡುಗಾರು ಚೀಟಿ ಸಲ್ಡಾದೋರು|
ಎಲ್ಲೊ ರಂಗಣ್ಣ ನಿನಮಂದಿ ರನ್ನದ||
ಸಣ್ಣ ಸಣ್ಣ ವುಡುಗಾರು ಸಡ್ಡಿ ಸಲ್ಲಣದೋರು ||೩೪||

ತುದಿಗಾಲ ಪಾಪಾಸಿನೋರು ರನ್ನದ
ಕೋರೆ ರುಮಾಲಿನೋರು ಈಟಿಯವರೆ ಸೇರು|
ಎಲ್ಲೊ ರಂಗಣ್ಣ ನಿನಮಂದಿ ರನ್ನದ|
ಎಲ್ಲೊ ರಂಗಣ್ಣ ನಿನಮಂದಿ ವೋದರು ||೩೫||

ಕುಲ್ಲ ತುರುಕರನ ತಡೆವರಿಲ್ಲ ರನ್ನದ
ಕೋಲು ವೊಯ್ಯಾನ ಬನ್ನಿ ಕೊನೆಯ ಗುಡ್ಡದ ಮ್ಯಾಗೆ|
ಜೇನಂಗಿ ಮರದ ನೆರಳಾಗೆ ರನ್ನದ||
ಸಣ್ಣಕ್ಕಿ ಸರಿಬಾನ ಸಣ್ಣೆಮ್ಮ ನೊರೆಹಾಲು| ||೩೬||

ಕಣ್ಣೀಳು ಸೀರೇದ ರಣಸರ್ಜ ರನ್ನದ
ಉಣ್ಣೀಳು ಸೀರೇದ ರಣಸರ್ಜನೆಂದರೆ|

ಅಂಗೈಲಿ ನಾಮ ನಡಿಗ್ಯಾವೊ ರನ್ನದ|
ಅಂಗೈಲಿ ನಾಮ ನಡಿಗ್ಯಾವಂಬಲಿಗರೆ ||೩೭||

ರಂಗಗೆ ನಮ್ಮಾಲೆ ದಯವಿಲ್ಲ ರನ್ನದ
ಅಪ್ಪಾ ರಂಗಣ್ಣ ತುಪ್ಪದೋಗುರುಣ್ಣುವಾಗ|
ಉಪ್ಪು ಚೆಲ್ಯಾರೊ ತುರುಕಾರು ರನ್ನದ||
ಅಣ್ಣ ರಂಗಣ್ಣ ಎಣ್ಣೋಗರುಣ್ಣುವಾಗ ||೩೮||

ಮಣ್ಣು ಚೆಲ್ಯಾರೊ ತುರುಕಾರು ರನ್ನದ
ಅಪ್ಪ ರಂಗಣ್ಣನ ವೊಪ್ಪಾಗದ ತೇಜಿಗಳು|
ಅಪ್ಪು ಮಡ್ಡಿ ತಿಂದು ಮದವೇರಿ ರನ್ನದ||
ತುರುಕಾರ ಕತ್ತಿಬಾಯಿಗೆ ರುಣವಾದುವು ರನ್ನದ ||೩೯||

ಅಣ್ಣ ರಂಗಣ್ಣನ ಬಣ್ಣದ ತೇಜಿಗಳು|
ಹಾಲುಮಡ್ಡಿ ತಿಂದು ಮದವೇರಿ ತುರುಕಾರ||
ಚೂರಿಯ ಬಾಯಿಗೆ ಹತವಾಗಿ ರನ್ನದ
ಅಕ್ಕಾ ತಿಮ್ಮೋಜಮ್ಮ ತುಪ್ಪಾದೋಗರವಿಕ್ಕಿ ||೪೦||

ವೊಪ್ಪಾದ ಮಕ್ಕಾಳ ಕಳಿಶ್ಯಾಳೊ ರನ್ನದ||
ವೊಪ್ಪಾದ ಮಕ್ಕಾಳ ಕಳಿಶ್ಯಾಳೊ ಗುಮ್ಮನಳ್ಳಿ|
ಅಡ್ನೇಣಿನಾಗೆ ಶಿವಲಗ್ಗೆ ನಡೆದಾವೊ ರನ್ನದ
ಹಾಲೂ ಅನ್ನವನಿಕ್ಕಿ ಬಾಲಾರ ಮಕ್ಕಳ್ನ ||೪೧||

ಯುದ್ಧಕ್ಕೆ ತಿಮ್ಮವ್ವ ಕಳಿಶ್ಯಾಳೊ ರನ್ನದ||
ಯಾರಾರ ಕಳಿಸ್ಯಾಳೊ ತಾಯಿ ತಿಮ್ಮೋಜಮ್ಮ|
ಉಪ್ಪರಿಗೆ ಹತ್ತಿ ನೋಡ್ಯಾಳೋ ರನ್ನದ
ಉಪ್ಪರಿಗೆನೇರಿ ನೋಡ್ಯಾಳೊ ಬಾಲರ್ನ ||೪೨||

ಕಾಲಿಡಿದು ನೆಲಕ ವೊಗೆವೋದ ರನ್ನದ||
ಕಾಲಿಡಿದು ನೊಗೆವೋದ ಕಂಡಿನ್ನು ತಿಮ್ಮವ್ವ|
ಬಾಲಾ ರಂಗೈಯನ ಕರಿಶ್ಯಾಳೊ
ಬಾಲಾ ರಂಗೈಯನ ಕರಿಶ್ಯಾಳೊ ತಿಮ್ಮವ್ವ ||೪೩||

ರಂಗಣ್ಣ ನೀಕೇಳೊ ರಂಗಣ್ಣಾ ನೋಡೊ ರನ್ನದ||
ರಂಗಣ್ಣ ನೀನೋಡೊ ಗುಮ್ಮನಳ್ಳೀ ಅಡ್ನೇಣಿನಾಗೆ|
ಪುತ್ತರನ ತಲೆಯ ತೆಗೆದಾರೋ
ನೀಕೇಳೊ ರಂಗಣ್ಣಾ ನೀ ಕೇಳೊ ರಂಗಪ್ಪ ||೪೪||

ಪುತ್ತರ ತಲೆಯ ತೆಗೆದಾರೊ ರನ್ನದ||
ಪುತ್ತರ ತಲೆಯ ತೆಗೆದಾರು ನೀನಿನ್ನು|
ಒಪ್ಪದಿ ಕುಳಿತಿರುವ ಬುದ್ದಿ ತರವಲ್ಲ ರನ್ನದ
ತಾಯಿ ಯೇಳಿದ ಮಾತ ಮಗನಿನ್ನು ಕೇಳೀಗ ||೪೫||

ವೋದಾನು ರಣದ ವೊಳಿಯಾಕೆ ರನ್ನದ||
ವೋದಾನು ರಣದ ವೊಳಿಯಾಕೆ ತಾನಿನ್ನು|
ಕಾದುತ್ತ ಜಗಳವ ಮಾಡ್ಯಾನೊ ರನ್ನದ
ಹಿಂದಲ ದಂಡಿನಿಂದ ಮುಂದಲ ದಂಡಿಗೆಗಿರಿ ||೪೬||

ಮುಂದೆ ಹೋಗೋನ ತಲೆಯೆಗರಿ ರನ್ನದ||
ಮುಂದಲ ದಂಡಿನಿಂದ ಹಿಂದಲ ದಂಡಿಗೆಗಿರಿ|
ಹಿಂದೆ ಹೋಗೋನ ತಲೆ ಯಗರಿ ರನ್ನದ
ಸಣ್ಣ ಮಲ್ಲಿಗೆ ತರಿಸಿ ಮುಂದಿಗೆ ಚೆಲಿನ್ನು ||೪೭||

ವೊಂದಿ ಮಾಡೆಂದ ಜಗಳವ ರನ್ನದ||
ವೊಂದಿ ಮಾಡೆಂದ ಜಗಳವ ಅಂಪೆಯ|
ವೊಳಿಯಾಗೆ ದೇಹವ ತೊಳೆಯೆಂದ ರನ್ನದ
ದುಂಡು ಮಲ್ಲಿಗೆ ತರಿಸಿ ದಂಡಿಗೆ ಚೆಲ್ಲಿನ್ನು ||೪೮||

ವೊಂದಿ ಮಾಡೆಂದ ಜಗಳವ ಅಂಪೆಯ|
ವೊಳಿಯಾಗೆ ದೇಹದ ತೊಳೆಯೆಂದ ರನ್ನದ
ಅಪ್ಪರಂಗಣ್ಣನ ವೊಪ್ಪಾದ ಸೂಳೇರು|
ಅಪ್ಪಡೀ ಗೊನೆಯ ಯಿಡಕೊಂಡು ರನ್ನದ ||೪೯||

ಅಪ್ಪಡೀ ಗೊನೆಯ ಯಿಡಕೊಂಡು ಶೀರೇದ|
ವೊಪ್ಪದ ಸೋಪಾನವಿಳಿದಾರೊ ರನ್ನದ
ಅಣ್ಣ ರಂಗಣ್ಣನ ಬಣ್ಣಾದ ಸೂಳೇರು
ಅಣ್ಣಡಿಕೆಗೊನೆಯ ಯಿಡಕೊಂಡು ರನ್ನದ ||೫೦||

ಅಣ್ಣಡಿಕೆ ಗೊನೆಯ ಯಿಡಿಕೊಂಡು ಶೀರೇದ|
ಚಿನ್ನದ ಸೋಪಾನವಿಳಿದಾರೊ ರನ್ನದ
ಆರು ಸಾವಿರ ಕುದುರೆ ಏಳು ಸಾವಿರದಾನೆ|
ಹತ್ತು ಸಾವಿರದ ಕಾಲಾಳು ರನ್ನದ ||೫೧||

ವೊರಟಾವೊ ಶೀರೇದ ರಣಸರ್ಜ ರಂಗಣ್ಣ|
ನೊಡನೆ ತುರುಕರ ರಣಕೀಗ ರನ್ನದ
ಶೀರೇದ ರಂಗಣ್ಣ ಗುಮ್ಮನಳ್ಳಡ್ಡೇಣಿನಾಗೆ|
ತುರುಕಾರ ಕೂಡೆ ರಣ ಮಾಡಿ ರನ್ನದ ||೫೨||

ತುರುಕಾರ ತಲೆಗಳ ಚೆಂಡಾಡಿ ಶೀರೇದ|
ಕೋಟೆಗೆಸೆದಾನೊ ತಲೆಗಳಾ ರನ್ನದೆ
ಅಕ್ಕ ಸಿಕ್ಕಾದ ತುರುಕಾರು ದಕ್ಕದಲಿಯೀಗಲೆ|
ಅಪ್ಪ ರಂಗಣ್ಣನ ಕತ್ತಿಗೆ ಗುರಿಯಾಗಿ ರನ್ನದ ||೫೩||

ಅಪ್ಪ ರಂಗಣ್ಣನ ಕತ್ತಿಗೆ ಗುರಿಯಾಗಿ|
ರಕ್ತವ ಕಾರ ರುಣವಾಗಿ ರನ್ನದ ||೫೪||

* * * * * * * * * * * *

ದುರ್ಗದ ಕೆಂಗಣ್ಣ ದಂಡು ಹೋಯಿತೆಂದು|
ಕೈಮುಗಿದು ಪಾಚ್ಚಾಗೆ ಹೇಳ್ಯಾನೊ ರನ್ನದ||
ಕೈಯೆತ್ತಿ ಮುಗಿಯಲು ಆಗಲೆ ಪಾಚ್ಚಾನು|
ಸಾಗಿದ ಮಕ್ಕಳ ಕಳಿಶ್ಯಾನೊ ರನ್ನದ ||೫೫||

* * * * * * * * * * * * *

ಆಯಿತವಾರದ ದಿನ ಆಳುಂಬೊ ವೊತ್ತಿಗೆ|
ವುಟ್ಟಿತು ಶೀರೇದ ಗನಕೋಟೆ ರನ್ನದ||

ವುಟ್ಟಿತು ಶೀರೆದ ಕೋಟೆಯು ವುಟ್ಟಿದೇಳು|
ವಿನಕೆ ಶಿವಲಗ್ಗೆಯಾಯಿತೊ ರನ್ನದ ||೫೬||

ವುಟ್ಟಿದೇಳು ದಿನಕೆ ಶಿವಲಗ್ಗೆಯಾಗಲು|
ಕೆಟ್ಟಿ ತುರುಕರು ರಂಗಯ್ಯನ ರನ್ನದ|
ಕೆಟ್ಟಿ ತುರುಕರು ರಂಗಯ್ನ ಮುಂಡವ|
ಕಡಿದು ಕೋಟೆಗೆಸೆದಾರೊ ರನ್ನದ ||೫೭||

ಅಮ್ಮನೆ ಗುಂಡಿಗೆಯೊಡೆದು ರನ್ನದ||
ಅಮ್ಮನೆ ಗುಂಡಿಗೆಯೊಡೆದು ರಂಗನ ತಾಯಿ|
ತಿಮ್ಮೋಜಮ್ಮ ಬಾವಿಗೆ ಬಿದ್ದಾಳೋ ರನ್ನದ
ತಾಯಿ ಬಿದ್ದುದ ನೋಡಿ ತಂಗಿ ಸರ್ಜಮ್ಮನು ||೫೮||

ತಮ್ಮ ಸರ್ಜನ ತಬ್ಬಿಕೊಂಡು ರನ್ನದ||
ತಮ್ಮ ಸರ್ಜನ ತಬ್ಕೊಂಡು ಅರಮನೆ|
ಶಿಕ್ಕ ಬಾವೀಗೆ ಬಿದ್ದಾಳೊ ರನ್ನದ
ಅಟ್ಟೀಯು ಆಳಾಗಿ ಪಟ್ಟಣವೆ ಡಿಮಗುಟ್ಟೆ ||೫೯||

ಪಾಚ್ಛಾನು ಕೆಂಗನ ಕರಿಶ್ಯಾನೊ ರನ್ನದ||
ಪಾಚ್ಛಾನು ಪೂವನ ಕೆಂಗಯ್ಯ ಕರೆಸಿನ್ನು|
ಕೋಟೆಯ ವಶಮಾಡ್ಕೊಂಡ ರನ್ನದ
ಆನೆಯ ಕೊಟ್ಟನು ಒಂಟೆಯ ಕೊಟ್ಟನು ||೬೦||

ಕಾಲಾಳು ಮೇಲಾಳು ಸಹವಾಗಿ ರನ್ನದ||
ಕಾಲಾಳು ಮೇಲಾಳು ಸಹವಾಗಿ ಕೊಟ್ಟಿನ್ನು|
ದುರ್ಗಕ್ಕೆ ತಾನು ಕಳಿವಾನೊ ರನ್ನದ ||೬೧||

* ಈ ಸ್ಥಳದಲ್ಲಿ ಯುದ್ಧ ಮಾಡಿದ ಬಗೆಯು ಸಿಕ್ಕಿಲ್ಲ, ಯಾರು ಹೇಳಿದರು ಇಲ್ಲಿ ತೇಲಿಸಿಬಿಡುತ್ತಾರೆ.

* ತರೀಕೆರೆ ಹನುಮಪ್ಪ ನಾಯಕನು ಬಿಜಾಪುರದ ರಣದುಲ್ಲಾಖಾನನ ಸಹಾಯದಿಂದ ಶಿರಾ ಕೋಟೆಗೆ ಮುತ್ತಿಗೆ ಹಾಕಿ ಲಡಾಯಿ ಮಾಡಿ, ಗೆಲ್ಲದೆ ಪಿತೂರಿಯಿಂದ ರಂಗಪ್ಪ ರಾಜನನ್ನು ಭೇಟಿಗೆ ಕರೆಸಿ ಮೋಸದಿಂದ ಕೊಂದನೆಂದು ಇತಿಹಾಸವು ಹೇಳುತ್ತದೆ.

ಕೃಪೆ : ಕಲ್ಪಸಿರಿ,
೬೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನ, ತುಮಕೂರು, ೨೦೦೨

ಅನುಬಂಧ ೫

ಸೀರ್‍ಯಾದ ರಂಗಣ್ಣನಾಯಕನ ಲಾವಣಿ

ಹುಟ್ಟಿತು ಹುಟ್ಟಿತು ಕೋಟೆ

ಸೀರ್‍ಯಾದೇರಿ ಮೇಲೆ ಸಿರಿಗಂಧದ ಮರಹುಟ್ಟಿ
ನಡುಗಲ್ಲಿಗೆ ಬೇರು ಹರಿದಾವು| ಸೀರ್‍ಯಾದ
ಕೊನೆ ಪೇಟ್ಯಾಗೆ ನೆರಳು ತಿರುಗ್ಯಾವೆ||

ಹುಟ್ಟಿತು ಹುಟ್ಟಿತು ಕೋಟೆ
ಹುಟ್ಟೀತು ಸೀರ್‍ಯಾದ ಪೇಟೆ
ಅಕ್ಕಿ ಇಟ್ಟೇಲಿ ನೆಲಗಾರೆ| ಕೊಟ್ಟಯಿತೆ
ಸಿಕ್ಕ ಸೀರ್‍ಯಾದ ಕೊನೆ ಪೇಟ್ಗೆ||

ಮೂಡಿತು ಮೂಡಿತು ಕೋಟೆ
ಮೂಡಿತು ಸಿರ್‍ಯಾದ ಪೇಟೆ
ಗೋದಿ ಇಟ್ಟೇಲಿ ನೆಲಗಾರೆ| ಕೊಟ್ಟಯಿತೆ
ರಾಯ ಸೀರ್‍ಯಾದ ಕೊನೆಪೇಟ್ಗೆ||

ಹುಟ್ಟಿತು ಹುಟ್ಟಿತು ಜಗ್ಗನ್ನೆ ಜರಿಗಿತು ಕೋಟೆ
ಹುಟ್ಟಿತು ಕೋಟೆ ರಣಕೋಟೆ| ತಿಮ್ಮಾಜಮ್ಮ
ಒಪ್ಪದ ಮಗನ ಬಸುರಾಲಿ||

ಮೂಡಿತು ಮೂಡಿತು ಕೋಟೆ ಜಾಗನೆ ಜರಿಗಿತು ಕೋಟೆ
ಮೂಡೀತು ಕೋಟೆ ರಣಕೋಟೆ| ತಿಮ್ಮಾಜಮ್ಮ
ಮೋಹದ ಮಗನ ಬಸುರಾಲಿ||

ಆಡ್ಯಾರೆ ಲೆತ್ತ ಪಗಡೇಯ

ಸಜ್ಜೇಯ ಅನ್ನ ಮುಗ್ಗಂದು ಉಣ್ಣಾಳು
ಮುದ್ದು ರಂಗಣ್ಣನ ಬಸುರಾಲಿ| ತಿಮ್ಮಾಜಮ್ಮ
ಮುಂಜರಗ ಹಾಸಿ ಮನಿಗ್ಯವ್ಳೆ||

ಜೋಳದ ಅನ್ನ ಕಾಯೆಂದು ಉಣ್ಯಾಳು
ಬಾಲ ರಂಗಣ್ಣನ ಬಸುರಾಲಿ ತಿಮ್ಮಾಜಮ್ಮ
ಮೇಲ ಜರ್ಗನಾಕಿ ಮನಿಗ್ಯಾಳೆ||

ಸೀರ್‍ಯಾದ ರಂಗಣ್ಣ ಕುವ್ವರ್‍ದ ಕೆಂಗಣ್ಣ
ಅವರಿಬ್ಬರು ಕೂಡಿ ಒಳಮಾತು| ಆಡಿಕೊಂಡು
ಆಡಬೇಕೆ ಲೆತ್ತ ಪಗಡೇಯ||

ನಾನು ಸೋತರೆ ನನ್ನ ತಂಗಿ ಕೊಡುತೀನಿ
ನೀನು ಸೋತ್ರೆ ಮೇಲು ದುರುಗಾವ| ಕೊಡಬೇಕೆಂದು
ಆಡ್ಯಾರೆ ಲೆತ್ತ ಪಗಡೇಯ||

ಮೂರು ಕಯ್ಯ ಸೋತಾನೆ ರಂಗಣ್ಣ

ಮೂರು ಮೂರು ಕಯ್ಯ ಆಡ್ಯಾನೆ ರಂಗಣ್ಣ
ಮೂರು ಮೂರು ಕಯ್ಯ ಸೋತಾನೆ| ರಂಗಣ್ಣ
ಆಡ್ಯಾನೆ ಕೆಂಗಣ್ಣ||

ಮೂರು ಮೂರು ಕಯ್ಯ ಗೆದ್ದಾನೆ
ಮೂರು ಮೂರು ಕಯ್ಯ ಗೆದ್ದು| ಏನೆಂದಾನೆ
ನಡಿಯೊ ತನ್ನ ಅರಮನೆಗೆ||

ಕರಕರನೆ ಹಲ್ಲ ಕಡಿದ ಬಿರಬಿರನೆ ಕಣ್ಣ ಬಿಟ್ಟ
ತನ್ನ ಮುಂಗಯ್ಯ ತನ್ನ ಸಿಡಿದೆದ್ದ| ರಂಗಣ್ಣ
ನಡೆದಾನೆ ತನ್ನ ಅರಮನೆಗೆ||

ತಂಗಿ ಸರ್ಜವ್ವ ಕರೆದಾನೆ
ತಂಗಿ ಸರ್ಜವ್ವ ಕರೆದು ಏನೇಳ್ಯಾನೆ
ತೊಳೆಯಮ್ಮ ನಿನ್ನ ವೈಯ್ಯಿನೀರ||

ಕಾಶಿರಾಮೇಶ್ವರನ ತೀರ್ಥವ ತಂದಿದ್ದೀನಿ
ಬಾರೋ ಕೆಂಗಣ್ಣ ಕುಡಿಯೆಂದು||

ಕಾಶಿರಾಮೇಶ್ವರನ ತೀರುತವೆ ಅಂದಿನ್ನ
ಮೂರು ಮೂರು ಭಗಸೆ ಕುಡಿದಾನೆ| ಕೆಂಗಣ್ಣ
ತನ್ನ ಮಂಡೆಗೆ ತಾನೆ ಕುಡಿದು ವರಸೆದ್ದ||

ಉಚ್ಚೆ ಕುಡಿದಾನೆ ಮೋರೆ ತತ್ತಗಿನ್ನ ಕಡೆ
ಲಚ್ಚಾಣಗೇಡಿ ರಣಗೇಡಿ| ಕೆಂಗಣ್ಣ
ಎದ್ದನು ಸಭೆಯ ಕಡೆಗೆ||

ಕರಿ ಕರಿಯ ಹಲ್ಲ ಕಡಿದ ಬಿರಬಿರನೆ ಕಣ್ಣ ಬಿಟ್ಟ
ತನ್ನ ಮುಂಗಯ್ಯ ತಾನು ಸಿಡಿದೆದ್ದ| ಕೆಂಗಣ್ಣ
ನಡೆದಾನೆ ತನ್ನ ಅರಮನೆಗೆ|

ಸೀರ್‍ಯಾದ ರಂಗಣ್ಣ ಸೊಕ್ಕು ನಾನೆಂಗೆ ಮುರಿಯಾಲಿ

ಅಕ್ಕ ನಮಗೆ ಸಿಕ್ಕೇನು ಸೀರ್‍ಯಾದ ರಂಗಪ್ಪ
ರೊಕ್ಕ ಹೆಚ್ಚಾವೆ ದಿನ ದಿನಕೆ| ಸೀರ್‍ಯಾದ ರಂಗಪ್ಪ
ಸೊಕ್ಕು ನಾನೆಂಗೆ ಮರಿಯಾಲೆ||

ತಂಗಿಯ ಮಗ ಸಣ್ಣೋನು ಸೀರ್‍ಯಾದ ರಂಗಣ್ಣ
ಹೊನ್ನು ಹೆಚ್ಚಾವೆ ದಿನ ದಿನಕೆ| ಸೀರ್‍ಯಾದ ರಂಗನ್ನ
ಹೊಮ್ಮು ನಾನೆಂಗೆ ಮುರಿಯಾಲೆ||

ಪೆನುಗೊಂಡೆ ಬಾಬಯ್ಗೆ ಪನಿವಾರ

ಉಪ್ಪರಿಗ್ಗೆ ಹಾಕ್ಯಾವೆ ಹತ್ತು ಕಾಲೇಣಿಯ
ಹತ್ತು ಬಗೆಸೊನ್ನ ತಗುದಾನೆ। ಕೆಂಗಣ್ಣ
ಅಗಸಾಲರ ಮನೆಗೆ ನಡೆದಾನೆ। (ನಡೆದು) ಏನೇಳ್ಯಾನೆ॥
ಮುತ್ತೀನ ತುರಾಯ ಮಾಡಬೇಕು॥

ವಾವುಗ್ಗೆ ಹಾಕ್ಯಾವೆ ಆರು ಕಾಲೇಣಿಯ
ಆರು ಬಗೆಸೊನ್ನ ತಗುದಾನೆ। ಕೆಂಗಣ್ಣ
ಅಗೆಸಾಲೇರ ಮನೆಗೆ ನಡೆದಾನೆ॥

ಅಗಸಾಲೆರ ಮನೆಗೆ ನಡೆದು ಏನೇಳ್ಯಾನೆ
ಹವಳ್ದ ತುರಾಯಿ ಮಾಡ್ಬೇಕು।

ಒಡೆಕಾಯ ತಕ್ಕೊಂಡು ಹಿಡಿಧೂಪ ಹಿಡಿಕೊಂಡು
ನಡೆದಾನೆ ಸೂರ್ಯನಿಗೆ ಇದಿರಾಗಿ। ಕೆಂಗಣ್ಣ
ಆಗ ಬಾಬಯ್ನ ಬೆಸಗೊಂಡ॥

ಎಲ್ಲಾರ ದೇವರಿಗೆ ಎಣ್ಣೆಯ ದೀವಿಗೆ
ಅಲ್ಲಿ ತುರುಕರ ಪೆನಗೊಂಡೆ। ಬಾಬಯ್ಗೆ
ನೀರ ದೀವಿಗೆ ಉರಿದಾವು॥

ಎಲ್ಲ ದೇವರಿಗೆ ನೆಲ್ಲಕ್ಕಿ ಪನಿವಾರ
ಅಲ್ಲಿ ತುರುಕರ ಪೆನಗೊಂಡೆ। ಬಾಬಯ್ಯಗೆ
ಬೆಳ್ಳೀಯ ಕೊಟ್ಟ ಪನಿವಾರ॥

ತುರುಕರು ದಂಡೆದ್ದು ಬರುತಾರೆ

ಉಕ್ಕೋ ಮರಳಾಗೆ ಕತ್ತಿ ನಿಲಿಸಿದಂಗೆ
ತುರುಕಾರ ದಂಡೆದ್ದು ಬರುತಾರೆ॥

ಕಾದ ಮರಳಾಗೆ ಸೂರ್ಯ ನಿಲ್ಲಿಸಿದಂಗೆ
ಸಾಬ್ರು ದಂಡೆದ್ದು ಬರುತಾರೆ॥

ಗಡ್ಡದ ತುರುಕರ ದುಡ್ಡೀಕೆ ತರನಲ್ಲಾ
ಒಟ್ಟು ಗಲ್ಲಾಗೆ ವಲೆಹೂಡಿ। ತುರುಕರ
ಬುದ್ಧಿ ರಂಗಣ್ಗೆ ತಿಳಿಯಾವೆ॥

ಮೀಸೇಯ ತುರುಕರು ಕಾಸೀಗೆ ತರನಲ್ಲಾ
ಸಾಪಗಲ್ಲಾಗೆ ವಲೆಹೂಡಿ। ತುರುಕರ
ಭಾಷೆ ರಂಗಣ್ಗೆ ತಿಳಿಯಾವೆ॥

ಏರೀಯ ಹಿಂದೆ ಬೋರಂಬೋವೇನಮ್ಮ
ಊರ ಕಮ್ಮಾರ ವಲೆಹೂಡಿ। ತುರುಕರ
ಹಾದ್ಯೇವ್ಕೆ ಹದನ ಕೊಡುತಾರೇ॥

ಉದ್ದನ್ನ ನೀರಾಗೆ ಮುದ್ದಿನ ಉಂಗುರ ಹಾಕಿ
ಎದ್ದು ರಂಗಣ್ಣನ ಬರಹೇಳೋ| ತುರುಕರು
ಮಧ್ಯಾನಕೆ ವಾಲೆ ಬರುದರು||

ಹರಿಯೋ ನೀರಿನಾಗೆ ಹವುಳದ ಉಂಗುರ ಹಾಕಿ
ದೊರೆಯೆ ರಂಗಣ್ಣನ ಬರಹೇಳೋ| ತುರುಕರು
ಸರುವತ್ತಿಗೆ ವಾಲೆ ಬರುದಾರು||

ತುರುಕರ ಕಾಜಗ ಬಂದಾವೆ ಕರೆಯಾಕೆ

ಎದ್ದೋಳು ರಂಗಣ್ಣ ಎಷ್ಟೋತ್ತು ಮಲಗಿದಿ
ಆನೆ ಬಂದಾವೆ ಸದರೀಗೆ| ತುರುಕರ
ಕಾಜಗ ಬಂದಾವೆ ಕರೆಯಾಕೆ||

ಎದ್ದನೆ ರಂಗಣ್ಣ ಎಳಮೀಸೆ ತಿರುವುತ
ಗಗ್ಗರದ ಕಾಲ ಕುಣಿಸುತ| ರಂಗಣ್ಣ
ಎದ್ದನು ಸೂರ್ಯನ ಇದರೀಗೆ||

ಏರೀಯ ಹಿಂದಲ ಬಾಲ ಬದನೇಕಾಯ
ಬೋರನ್ನ ಬಿಟ್ಟು ಮೆಣಸಿಟ್ಟು| ತಾಳಲು
ಬಾಲನ ಕರೆಕೊಂಡು ಉಣಸರ್ಜ||

ಅಣ್ಣ ರಂಗಣ್ಣ ಎಣ್ಣೋಗರುಂಬುವಾಗ
ಮಣ್ಣು ಸೆಲ್ಯಾರೆ ತುರುಕರು| ತಿಮ್ಮಾಜಮ್ಮ
ಎಣ್ಣೋಗರ ಸಾಕು ಕೊಡುನೀರ||

ಅಪ್ಪ ರಂಗಣ್ಣ ತುಪ್ಪೋಗರುಣ್ಣುವಾಗ
ಉಪ್ಪು ಸೆಲ್ಯಾರ ತುರುಕರು| ತಿಮ್ಮಾಜಮ್ಮ
ತುಪ್ಪೋಗರ ಸಾಕು ಕೊಡು ನೀರ||

ಇನ್ನೇನ ಉಂಡೆ ನಮ್ಮ ಇನ್ನೇನು ಹುಟ್ಟನಮ್ಮ
ಅಂಗೈಯಾಗೆ ನಾಮ ನಡಿಗ್ಯಾವು| ಅಂಬಲಿಗೆರೆಯ
ರಂಗಯ್ಯ ನಮ್ಮೇಲೆ ದಯವಿಲ್ಲಾ||

ಈಗೇನ ಉಂಡೆನಮ್ಮ ಈಗೇನು ಹುಟ್ಟಿನಮ್ಮ
ಆಕೈಯಾಗೆ ನಾಮ ನಡಿಗ್ಯಾವು| ಅಂಬಲಿಗೆರೆಯ
ಸ್ವಾಮಿ ನಮ್ಮೇಲೆ ದಯವಿಲ್ಲಾ||

ಅಂಬಲಿಗೆರೆ ರಂಗಯ್ಯ ನಮ್ಮೇಲೆ ದಯವಿರಲಿ

ಅಂಬಲಿಗೆರೆ ರಂಗಪ್ಪ ಸೆಂಬುತೋರಣ ಕಟ್ಟಿ
ನಿಂಬೇಯ ಹಣ್ಣು ಗುದಿಗಟ್ಟಿ| ಅಂಬಲಿಗೆರೆಯ
ರಂಗಯ್ಯ ನಮ್ಮೇಲೆ ದಯವಿರಲಿ||

ತಾವರೆಗೆರೆ ರಂಗಯ್ಯ ತಣಿಗೆ ತೋರಣ ಕಟ್ಟಿ
ಬಾಳೇಯ ಹಣ್ಣ ಗುದಿಗಟ್ಟಿ| ಲಂಬಲಿಗೆರೆಯ
ಸ್ವಾಮಿ ನಮ್ಮೇಲೆ ದಯವಿರಲಿ||

ರಾಗೀ ಕೀಳಿಸುವೆ ರಾಜ್ಯವಕೆ ಹರಡಿಸುವೆ
ನಾಳೆ ನನ್ನ ದುರುಗ ಉಳಿದರೆ| ಮಕ್ಕಳಿರಾ
ಮುತ್ತೀನ ಪೆಂಡೇವ ಕಳಿವ್ಯಾನೆ||

ಅಕ್ಕಿ ಕೀಳಿಸುವೆ ಒಕ್ಕಲಿಗೆ ಅಳಿಸುವೆ
ಮತ್ತೆ ನನ್ನ ದುರುಗ ಉಳಿದರೆ| ಮಕ್ಕಳಿರಾ
ಮುತ್ತೀನ ಪೆಂಡೇವ ಕಳಿವ್ಯಾನೆ||

ಉಪ್ಪರಿಗೆ ಒಳಗೆ ಹತ್ತು ಕುಮ್ಮಟನಿಟ್ಟು
ಇಟ್ಟ ಹರಿನಾಮ ಬೆವರುತ| ರಂಗಣ್ಣ
ಕೊಪ್ಪ ಮಾಡಿಸ್ಥ ಮಡದಿಗೆ||

ಕೊಪ್ಪ ನೋಡಿದರೆ ಕೊಪ್ಪೆಂದೆ ಐತೂಕ
ಸಕ್ಕ ಭೂಶುರನ ಎಡೆವೊತ್ತಿ| ಮುಡಿವೊತ್ತಿ
ಕೊಪ್ಪ ನರಸೋಜಿ ಹಿಡಿದರೆ||

ವ್ಯಾವುರ್‍ಗೆವೊಳ್ಗೆ ಆರು ಕುಮ್ಮಟನಿಟ್ಟು
ನೀಲಿ ಹರಿನಾಮ ಬೆವರುತ| ರಂಗಣ್ಣ
ವಾಲೆ ಮಾಡಿಸ್ದ ಮಡದೀಗೆ||

ವಾಲೆ ನೋಡಿದರೆ ವಾಲೊಂದೆ ಐತೂಕ
ನಾಗಭೂಶುರನ ಎಡೆವೊತ್ತಿ| ಮುಡಿವೊತ್ತಿ
ವಾಲೆ ನರಸೋಜಿ ಹಿಡಿದಾರೆ|

ಹತ್ತು ವರಹಕೊಟ್ಟು ಕೊಪ್ಪೊನೆ ಮಾಡಿಸ್ದೆ
ಕೊಪ್ಪ ನರಸೀ ಕಿವಿಗೆ ಬಲು ಚೆಂದ| ರಂಗಣ್ಣ
ಪಟ್ಟಿ ಸಾಲಾಗೆ ಅಳುತ್ತಾನೆ||

ಆರುವರಹ ಕೊಟ್ಟು ವಾಲೇಯ ಮಾಡಿಸ್ದೆ
ವಾಲೆ ನರಸೀ ಕಿವಿಗೆ ಬಲುಚೆಂದ| ರಂಗಣ್ಣ
ಸಾಮ ಸಾಲಾಗೆ ಅಳುತ್ತಾನೆ||

ಅರಸಿ ಎನ್ನರಸಿ ಅಳಬೇಡ

ತಂಗಿನಣ್ಣು ತಂದು ತಂಗಿ ಮಡಲಿಗೆ ಕಟ್ಟಿ
ತಂಗಿ ಸರ್ಜಮ್ಮ ಅಳದೀರೆ| ತುರುಕರ ಕೂಟೆ
ಮೂರೆ ಮಾತಾಡಿ ಬರುತೀನಿ||

ಮಾವಿನಹಣ್ಣು ತಂದು ತಾಯಿ ಮಡಲಿಗೆ ಕಟ್ಟಿ
ತಾಯಿ ತಿಮ್ಮಾಜಮ್ಮ ಅಳದೀರೆ| ತುರಕರ ಕೂಟೆ
ಮೂರೇ ಮಾತಾಡಿ ಬರುತೀನಿ||

ಹಳಸಿನಣ್ಣು ತಂದು ಅರಸಿ ಮಡಲಿಗೆ ಕಟ್ಟಿ
ಅರಸಿ ಎನ್ನರಸಿ ಅಳಬೇಡ| ತುರುಕರ ಕೂಟೆ
ಒಂದೇ ಮಾತಾಡಿ ಬರುತೀನಿ||

ಅಣ್ಣ ರಂಗಣ್ಣ ಇನ್ನ ಸೆಲ್ವನೆಂದು
ನೋಡ ಬಂದವ್ರೆ ದೊರೆಗಳು| ರಂಗಣ್ಣನ
ಕಾಯಿ ಹೊಂಬಾಳೆ ವನದಾಗೆ||

ಅಪ್ಪ ರಂಗಣ್ಣ ಮತ್ತೆ ಸೆಲ್ವನೆಂದು
ಒಪ್ಪ ಬಂದವ್ರೆ ದೊರೆಗಳು| ರಂಗಣ್ಣ
ಅಕ್ಕಿ ಹೊಂಬಾಳೆ ವನದಾಗೆ||

ಅಣ್ಣ ರಂಗಣ್ಣನ ಬಣ್ಣಾದ ಸೋಜಿಗಳು
ಸೊಕ್ಕು ಮಡ್ಡಿ ತಿಂದಿ ಮದವೇರಿ| ಬರುತವೆ
ಸೊಪ್ಪು ಮಾರೋಳೆ ಕಡೆಗೇಳಿ||

ಹತ್ತಾಳು ಕೈಸೆರೆಯ ಹಿಡಿದಾರು

ಚಿಕ್ಕಗುಮ್ಮನಹಳ್ಳಿ ಕಟ್ಟೇ ಏರೀಮೇಲೆ
ಕುಪ್ಪಿಸಿ ಕುದ್ರೆ ಕುಣಿಸೋನೆ| (ಕುಣಿಸೋ) ರಂಗಣ್ಣನ
ಹತ್ತಾಳು ಕೈ ಸೆರೆಯ ಹಿಡಿದಾರು||

ಕೈ ಸೆರೆಯ ಹಿಡಿದಾರೆ ಮೈ ಸೆರೆಯ ಬಿಡಸ್ಯಾರೆ
ದಿಗಿಲೆಂಬೋ ಕಾಳೆ ಹಿಡಿಸ್ಯಾರೆ| ತಿಮ್ಮಾಜಮ್ನ
ಮಗನ ಕಾಳಗವೆ ಗೆಲ್ಲಲೆಂದು|

ರಾಯಗುಮ್ಮನಹಳ್ಳಿ ಗಾರೆ ಏರೀಮೇಲೆ
ಹಾರುಸಿ ಕುದ್ರೆ ಕುಣಿಸೋನೆ| (ಕುಣಿಸೋ) ರಂಗಣ್ಣನ
ಆರಾಳು ಕೈ ಸೆರೆಯ ಹಿಡಿದಾರು||

ಕೈ ಸೆರೆಯ ಹಿಡಿದಾರೆ ಮೈಸೆರೆಯ ಬಿಡಿಸ್ಯಾರೆ
ದಿಗಿಲೆಂಬೋ ಕಾಳಿ ಹಿಡಿಸ್ಯಾರೆ| ತಿಮ್ಮಾಜಮ್ನ
ಮಗನ ಕಾಳುಗವೆ ಗೆಲಲ್ಲೆಂದು||

ಚಿಕ್ಕಗುಮ್ಮನಹಳ್ಳಿ ಕಟ್ಟೆ ಏರೀಮೇಲೆ
ಕುಪ್ಪಳಿಸಿ ಕುದ್ರೆ ಕುಣಿಸೋನೆ| ಚಂದ್ರಗಾವಿ
ಹಚ್ಚಡ ಬೀಸ್ಕವಳ ಕರೆಯೆಂದ||

ರಾಯಗುಮ್ಮನಹಳ್ಳಿ ಗಾರೆ ಏರೀ ಮೇಲೆ
ಹಾರುಸಿ ಕುದ್ರೆ ಕುಣಿಸೋನೆ| ಚಂದ್ರಗಾವಿ
ಪಾವುಡ ಬೀಸವಳ ಕರೆಯೆಂದ||

ಎಲ್ಲೋ ರಂಗಣ್ಣ ನಿನಮಂದಿ

ಈಟೀಟು ಹುಡುಗರು ಚೀಟ ಚಲ್ಲಣದೋರು
ಎಲ್ಲೋ ರಂಗಣ್ಣ ನಿನಮಂದಿ| ಸೀರ್‍ಯಾದ
ಸಣ್ಣ ಮರಳಾಗೆ ಶಿವಲೆಗ್ಗಿ||

ಮುತುಕದ ಮರದಡಿಯ ಮುತ್ತು ರಾಶಿ ಹೊಯ್ದು
ಮುತ್ತು ಚೆಲ್ಲೆಂದ ಸಭೆಗಳಿಗೆ| ಗುಮ್ಮನಹಳ್ಳಿ
ಹೊಕ್ಕು ಮಾಡೆಂದ ಜಗಳಾವ||

ಅಣ್ಣೆ ಮರದಡಿಯ ಹೊನ್ನು ರಾಶಿ ಹೊಯ್ದು
ಹೊನ್ನು ಚೆಲ್ಲೆಂದ ಸಭೆಗಳಿಗೆ| ಗುಮ್ಮನಹಳ್ಳಿ
ಹೋಗಿ ಮಾಡೆಂದ ಜಗಳಾವ||

ಜಗಳಾವ ಮಾಡೆಂದ ತಲೆನೂರ ತಾರೆಂದ
ಜಗಲೂರ ತನಕ ನಡೆಯೆಂದ| ಹಂಪೇಯ
ಹೊಳೆಯಾಗೆ ಆಯುದವ ತೊಳೆಯೆಂದ||

ರಂಗಣ್ಣನ ಶಿರಬಿತ್ತು ಸಿರ್‍ಯಾದ ನಡುಪೇಟ್ಗೆ

ಆನೆ ಬಿತ್ತು ಅಂಕ್ಕುಸ್ತಾಕೆ ಕುದ್ರೆ ಬಿತ್ತು ಲಾಯಾಕೆ
ಸಿಂತೆ ಬಿತ್ತು ಕಂಚಿ ಹೊಳೆಯಾಕೆ| ರಂಗಣ್ಣನ
ಶಿರಬಿತ್ತು ಸೀರ್‍ಯಾದ ನಡುಪೇಟ್ಗೆ||

ಅಣ್ಣ ರಂಗಣ್ಣನ ಒಣ್ಣಾದ ಸೂಳೇರು
ಹಣ್ಣಡಿಕೆ ಗೊನೆಯ ಹಿಡಕೊಂಡು| ಸೀರ್‍ಯಾದ
ಬಣ್ಣದ ಸೋಪಾನ ಇಳಿದಾರೆ||

ಅಪ್ಪ ರಂಗಣ್ಣನ ಒಪ್ಪಾದ ಸೂಳೇರು
ಸಿಕ್ಕಡಿಕೆ ಗೊನೆಯ ಹಿಡಿಕೊಂಡು| ಸೀರ್‍ಯಾದ
ಮುತ್ತಿನ ಸೋಪಾನ ಇಳಿದಾರೆ||

ತುರುಕರ ಸೂರಿ ಬಾಯಿಗೆ ಋಣವಾದ

ಏರೀಯ ಹಿಂದೆ ಆರ್‍ವೆಮ್ಮೆ ಮೆಯ್ಕಿತಾವೇ
ಆರೆಮ್ಮೆ ರಂಗಣ್ಗೆ ಋಣವಿಲ್ಲಾ| ತುರುಕರ
ಸೂರಿ ಬಾಯಿಗೆ ಋಣವಾದ||

ಕಟ್ಟೆಯ ಹಿಂದೆ ಹತ್ತೆಮ್ಮೆ ಮೆಯ್ಕಿತಾವೇ
ಹತ್ತೆಮ್ಮೆ ರಂಗಣ್ಗೆ ಋಣವಿಲ್ಲಾ| ತುರುಕರ
ಕತ್ತಿ ಬಾಯಿಗೆ ಋಣವಾದ||

ತಾಯಿ ಅಳುತಾಳೆ ಆನೆಗೆ ಇನ್ನಾರ ತರಲೆಂದು

ಆನೆ ಸಾಲಿಗೆ ಹೋದಾಳು ತಿಮ್ಮಾಜಮ್ಮ
ತೋಳುನಲ್ಲಾಡಿ ಅಳುತಾಳೆ| ರಂಗಣ್ಣನ
ಆನೀಗೆ ಇನ್ನಾರ ತರಲೆಂದು||

ಒಂಟೆ ಸಾಲಿಗೆ ಹೋದಾಳು ತಿಮ್ಮಾಜಮ್ಮ
ಸೊಂಟನಲ್ಲಾಡಿ ಅಳುತಾಳೆ| ರಂಗಣ್ಣನ
ಒಂಟಿಗೆ ಇನಾರ ತರಲೆಂದು||

ದೊಡ್ಡೋಡೆದಾಗ ದೊಡ್ಡ ಮುತ್ತ ತಕ್ಕೊಂಡು
ಒಡ್ಡಗಲ್ಲಿಟ್ಟು ಹೊಡೆಸ್ಯಾರೇ| ರಂಗಣ್ಣನ
ವರ್‍ತಿ ಬಾವ್ಯಾಕೆ ಸುರಿದಾರೆ||

ಸಣ್ಣೋಡೆದಾಗ ಸಣ್ಣ ಮುತ್ತ ತಕ್ಕೊಂಡು
ವಾಡೆಗಲ್ಲಿಟ್ಟು ಹೊಡೆಸ್ಯಾರೇ| ರಂಗಣ್ಣನ
ವರ್‍ತಿ ಬಾವ್ಯಾಕೆ ಸುರಿದಾರೆ||

ಸಂಪಾದನೆ : ಕ.ರಾ.ಕೃ, ಪಾಳೆಗಾರರ ಪದಗಳು

ಅನುಬಂಧ ೬

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಜಾತಿ	ಊರು
೧.	ಹನುಮಜ್ಜಿ	೬೦	ಕೂಲಿ	ಮಾದಿಗ	ನ್ಯಾಯದಗುಂಟೆ (ನಿಡುಗಲ್ಲು)
೨.	ಶಿವಾನಂದ ಎನ್.ಸಿ.	೪೦	ವ್ಯವಸಾಯ	ನಾಯಕ	ನಿಡುಗಲ್ಲು
೩.	ಹನುಮಂತರಾಯ	೩೦	ವ್ಯವಸಾಯ	ನಾಯಕ	ನಿಡುಗಲ್ಲು
೪.	ಚಿತ್ರಯ್ಯ ಪೂಜಾರ್	೩೫	ಅರೆಕಾಲಿಕ ಉಪನ್ಯಾಸಕ	ಗೊಲ್ಲ	ದವಡಬೆಟ್ಟ(ನಿಡುಗಲ್ಲು)
೫.	ಹನುಮಂತರಾಯಪ್ಪ	೫೬	ವ್ಯವಸಾಯ	ನಾಯಕ	ನಿಡುಗಲ್ಲು
೬.	ಚಿತ್ತಣ್ಣ	೬೭	ವ್ಯವಸಾಯ	ಗೊಲ್ಲ	ಚಿಕ್ಕತಿಮ್ಮನ ಹಟ್ಟಿ, (ನಿಡುಗಲ್ಲು)
೭.	ಚಲುವರಾಜನ್ ವಿ.ಆರ್.	೬೫	ಸಿನಿಮಾ ಮಂದಿರದ ಮಾಲೀಕರು	ಬ್ರಾಹ್ಮಣ	ಪಾವಗಡ
೮.	ದೊಡ್ಡೇಟ ನಾಯಕ	೬೦	ರಾಜಕೀಯ	ನಾಯಕ	ಪಾವಗಡ
೯.	ನಾಗರತ್ನಮ್ಮ	೩೮	ಉಪನ್ಯಾಸಕರು	ನಾಯಕ	ಬೆಂಗಳೂರು(ಪಾವಗಡ)
೧೦.	ಯಲ್ಲಪ್ಪನಾಯಕ	೫೮	ಸಿನಿಮಾ ಮಂದಿರದ ಮಾಲೀಕರು	ನಾಯಕ	ವೈ.ಎನ್.ಹೊಸಕೋಟೆ
೧೧.	ಹನುಮಂತಯ್ಯ	೬೪	ನಿವೃತ್ತ ಶಿಕ್ಷಕರು	ಕುರುಬ	ವೈ.ಎನ್.ಹೊಸಕೋಟೆ
೧೨.	ಸಣ್ಣನಾಗಪ್ಪ	೪೮	ಉಪನ್ಯಾಸಕರು	ಗೊಲ್ಲ	ಪಾವಗಡ(ವೈ.ಎನ್. ಹೊಸಕೋಟೆ)
೧೩.	ಮದ್ದೆ ಮಾಧವರೆಡ್ಡಿ	೩೭	ಶಿಕ್ಷಕರು	ಒಕ್ಕಲಿಗ	ಬಂಗಾರನಾಯಕನ ದುರ್ಗ
೧೪.	ಶಿವಣ್ಣ	೪೦	ಮೇಕೆ ಕಾಯುವುದು	ನಾಯಕ	ಬಂಗಾರನಾಯಕನ ದುರ್ಗ
೧೫.	ನರಸಪ್ಪ	೪೮	ವ್ಯವಸಾಯ	ನಾಯಕ	ಬಂಗಾರನಾಯಕನ ದುರ್ಗ
೧೬.	ದೊಡ್ಡಜ್ಜ	೭೬	ವ್ಯವಸಾಯ	ಒಕ್ಕಲಿಗ	ದೇವರಬೆಟ್ಟ

೧೭.	ಬೊಮ್ಮಕ್ಕ	೫೮	ವ್ಯವಸಾಯ	ಒಕ್ಕಲಿಗ	ದೇವರಬೆಟ್ಟ
೧೮.	ಪೂಜಾರದಾಸಪ್ಪ	೫೪	ವ್ಯವಸಾಯ	ನಾಯಕ	ತುಮಕುಂಟೆ(ದೇವರಬೆಟ್ಟ)
೧೯.	ಶರುವಪ್ಪ	೬೭	ವ್ಯವಸಾಯ	ನಾಯಕ	ಮುಗದಾಳಬೆಟ್ಟ(ದೇವರಬೆಟ್ಟ)
೨೦.	ಮಂಜುನಾಥ	೪೮	ಅಂಗಡಿ ವ್ಯಾಪಾರಿ	ಬ್ರಾಹ್ಮಣ	ಮಿಡಿಗೇಶಿ
೨೧.	ತಿಪ್ಪೇಸ್ವಾಮಿ	೩೩	ಅರೆಕಾಲಿಕ ಉಪನ್ಯಾಸಕರು	ನಾಯಕ	ಮಿಡಿಗೇಶಿ
೨೨.	ಮರಿಬಸಪ್ಪ	೪೮	ಉಪನ್ಯಾಸಕರು	ಲಿಂಗಾಯತ	ಮಿಡಿಗೇಶಿ
೨೩.	ರಾಮಾಂಜಿನಯ್ಯ	೪೮	ಆಯುರ್ವೇದ ವೈದ್ಯರು	ಬಲಿಜಿಗ	ಬೇಡತ್ತೂರು(ಮಿಡಿಗೇಶಿ)
೨೪.	ಶಿವಣ್ಣ	೩೦	ಶಿಕ್ಷಕರು	ಕುಂಬಾರ	ರೆಡ್ಡಿಹಳ್ಳಿ(ಮಿಡಿಗೇಶಿ)
೨೫.	ನೀರಗಂಟಿ ಮುದ್ದಪ್ಪ	೬೦	ಪೇಯಿಂಟಿಂಗ್	ನಾಯಕ	ಮಿಡಿಗೇಶಿ
೨೬.	ನಾರಾಯಣ ಭಟ್ಟ	೪೩	ಪೂಜಾರಿಕೆ	ಬ್ರಾಹ್ಮಣ	ಮಧುಗಿರಿ
೨೭.	ಶ್ರೀನಿವಾಸ.ಎಂ.ಡಿ.	೬೨	ನಿವೃತ್ತ ಶಿಕ್ಷಕರು	ಬಲಿಜಿಗ	ಮಧುಗಿರಿ
೨೮.	ಮ.ಲ.ನ.ಮೂರ್ತಿ	೫೨	ಪ್ರಾಧ್ಯಾಪಕರು	ಒಕ್ಕಲಿಗ	ಮಧುಗಿರಿ
೨೯.	ಮಹಾದೇವಪ್ಪ	೫೫	ಪ್ರಾಧ್ಯಾಪಕರು	ಲಿಂಗಾಯತ	ಮಧುಗಿರಿ
೩೦.	ಕಾವಲಮ್ಮ	೩೭	ಪ್ರವಾಚಕರು	ನಾಯಕರು	ಬೆಂಗಳೂರು(ಮಧುಗಿರಿ)
೩೧.	ನಾಗಭೂಷಣ ಕೆ.	೩೦	ಅರೆಕಾಲಿಕ ಉಪನ್ಯಾಸಕ	ಒಕ್ಕಲಿಗ	ಆರ್.ಎನ್.ರೊಪ್ಪ (ಮಧುಗಿರಿ)
೩೨.	ರಘು	೩೬	ಅರೆಕಾಲಿಕ ಉಪನ್ಯಾಸಕ	ಒಕ್ಕಲಿಗ	ಚನ್ನರಾಯನದುರ್ಗ
೩೩.	ಪೂಜಾರ ಚಿಕ್ಕೀರಣ್ಣ	೬೨	ಕುರಿಕಾಯುವುದು	ಗೊಲ್ಲ	ಕಾಟಗಾನಹಟ್ಟಿ (ಚನ್ನರಾಯನದುರ್ಗ)
೩೪.	ಶಿವಣ್ಣ	೩೨	ವ್ಯವಸಾಯ	ಗೊಲ್ಲ	ಕಾಟಗಾನಹಟ್ಟಿ (ಚನ್ನರಾಯನದುರ್ಗ)
೩೫.	ಪೂಜಾರಿ ಚಿತ್ತಯ್ಯ	೬೮	ವ್ಯವಸಾಯ	ಗೊಲ್ಲ	ಕಾಟಗಾನಹಟ್ಟಿ (ಚನ್ನರಾಯನದುರ್ಗ)
೩೬.	ದಾಸಪ್ಪ	೪೮	ವ್ಯವಸಾಯ	ಒಕ್ಕಲಿಗ	ಬಿಜ್ಜಾವರ
೩೭.	ಬಸವರಾಜಪ್ಪ	೫೪	ವ್ಯವಸಾಯ	ಲಿಂಗಾಯತ	ಸಿದ್ದಾಪುರ
೩೮.	ರವಿ	೪೨	ವ್ಯವಸಾಯ	ಗೊಲ್ಲ	ಭಸ್ಮಾಂಗಿ
೩೯.	ಶಿವಣ್ಣ	೩೫	ಕೂಲಿ	ನಾಯಕ	ಭಸ್ಮಾಂಗಿ

೪೦.	ಲಕ್ಕಪ್ಪ	೬೦	ಬಡಿಗೆ	ವಾಲ್ಮೀಕಿ	ಭಸ್ಮಾಂಗಿ
೪೧.	ಯೆಂಚಾರಪ್ಪ	೭೦	ಪೂಜಾರಿಕೆ	ಗೊಲ್ಲ	ಭಸ್ಮಾಂಗಿ
೪೨.	ಚಿಕ್ಕಣ್ಣ ಯೆಣ್ಣೆಕಟ್ಟೆ	೪೩	ಪ್ರವಾಚಕರು	ಕುರುಬ	ಸಿರಾ
೪೩.	ಆನಂದ	೩೨	ಕೂಲಿ	ಶೆಟ್ಟಿ ಬಣಜಿಗ	ಸಿರಾ
೪೪.	ಪೈಲವಾನ್ ರಂಗಣ್ಣ	೭೦	ಕೂಲಿ	ಶೆಟ್ಟಿ ಬಣಜಿಗ	ಸಿರಾ
೪೫.	ಧರ್ಮಪ್ಪ	೬೪	ವ್ಯವಸಾಯ	ನಾಯಕ	ಸಿರಾ
೪೬.	ಬಸವರಾಜ	೩೦	ಅರೆಕಾಲಿಕ ಉಪನ್ಯಾಸಕ	ಲಿಂಗಾಯತ	ಸಿರಾ
೪೭.	ಮುನಿಯಪ್ಪ	೬೨	ಜಾನಪದ ಹಾಡುಗಾರ	ಕ್ಷೌರಿಕ	ಕೊರಟಗೆರೆ
೪೮.	ಪದ್ಮನಾಭ ಎಸ್.	೪೨	ಶಿಕ್ಷಕರು	ಲಿಂಗಾಯತ	ಕೊರಟಗೆರೆ
೪೯.	ಈರಪ್ಪ	೫೪	ಮೇಕೆ ಕಾಯುವುದು	ಕುರುಬ	ಕೊರಟಗೆರೆ
೫೦.	ಶಿವಮ್ಮ	೪೮	ಮೇಕೆ ಕಾಯುವುದು	ನಾಯಕ	ಕೊರಟಗೆರೆ
೫೧.	ನರಸಿಂಹಭಟ್ಟರು	೪೭	ಪೂಜಾರಿಕೆ	ಬ್ರಾಹ್ಮಣ	ದೇವರಾಯನ ದುರ್ಗ
೫೨.	ವೆಂಕಟೇಶ್	೪೬	ವ್ಯವಸಾಯ	ನಾಯಕ	ದೇವರಾಯನ ದುರ್ಗ
೫೩.	ಅರುಣಿ	೩೮	ಸ.ನಿರ್ದೇಶಕರು (ICHR)	ಲಿಂಗಾಯತ	ಬೆಂಗಳೂರು(ದೇವರಾಯನ ದುರ್ಗ)
೫೪.	ಕವಿತಾ ಕೃಷ್ಣ	೬೧	ನಿವೃತ್ತ ಶಿಕ್ಷಕರು	ಶೆಟ್ಟಿ ಬಣಜಿಗ	ಕ್ಯಾತ್ಸಂದ್ರ(ದೇ.ದುರ್ಗ)
೫೫.	ಲಕ್ಷ್ಮೀಪತಿ	೩೦	ವ್ಯವಸಾಯ	ಒಕ್ಕಲಿಗ	ದೇವರಾಯನ ದುರ್ಗ
೫೬.	ಕೆಂಪನರಸಯ್ಯ	೭೦	ವ್ಯವಸಾಯ	ಒಕ್ಕಲಿಗ,	ಬುಕ್ಕಾಪಟ್ಟ(ದೇವರಾಯನದುರ್ಗ)
೫೭.	ಕರಿಯಪ್ಪ	೬೬	ವ್ಯವಸಾಯ	ಬಲಿಜಿಗ	ಹಾಗಲವಾಡಿ
೫೮.	ಮೂಡ್ಲಗಿರಿಯಪ್ಪ ಟಿ.	೬೯	ವೈದ್ಯರು	ಲಿಂಗಾಯತ	ಹೊಸಕೆರೆ(ಹಾಗಲವಾಡಿ)
೫೯.	ಕೃಷ್ಣಮೂರ್ತಿ	೫೦	ವ್ಯವಸಾಯ	ಒಕ್ಕಲಿಗ	ಹಾಗಲವಾಡಿ
೬೦.	ಯೋಗೀಶ್ವರಪ್ಪ	೪೩	ಪ್ರಾಧ್ಯಾಪಕರು	ಲಿಂಗಾಯತ	ತುಮಕೂರು(ಹಾಗಲವಾಡಿ)
೬೧.	ಸದಾಶಿವಪ್ಪ ಹು.ಪು,	೪೫	ವ್ಯವಸಾಯ	ಬಲಿಜಿಗ	ಹುಲಿಯೂರು ದುರ್ಗ
೬೨.	ನರಸಿಂಹ ಮೂರ್ತಿ	೩೭	ರೇಷ್ಮೆ ಇಲಾಖೆ	ನಾಯಕ	ಹುಲಿಯೂರು ದುರ್ಗ
೬೩.	ಬೀರಪ್ಪ ಕೆ.	೪೮	ಶಿಕ್ಷಕರು	ಕುರುಬ	ಹುತ್ರಿದುರ್ಗ
೬೪.	ಅರುವಣ್ಣ	೮೦	ವ್ಯವಸಾಯ	ಕುರುಬ	ಹುತ್ರಿದುರ್ಗ

ಅನುಬಂಧ ೭

ಗ್ರಂಥ ಋಣ

೦೧. ಅಂಬಳಿಕೆ ಹಿರಿಯಣ್ಣ, **ಜಾನಪದ ಕೆಲವು ವಿಚಾರಗಳು,** ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೪

೦೨. ಆರ್ವಿಯಸ್ ಸುಂದರಂ **ಜನಪದ ಸಾಹಿತ್ಯದ ಮೂಲತತ್ವಗಳು,** ಅರ್ಕಾವತಿ ಪ್ರಕಾಶನ, ಮೈಸೂರು, ೧೯೭೬

೦೩. ಕರೀಂಖಾನ್ ಎಸ್.ಕೆ.(ಸಂ), **ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೦೪. ಕಲಬುರ್ಗಿ.ಎಂ.ಎಂ(ಸಂ) **ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ,** ಶ್ರೀಮುರುಘಮಠ, ಧಾರವಾಡ, ೧೯೭೭

೦೫. ಕಲಬುರ್ಗಿ.ಎಂ.ಎಂ., **ಸಮಾಧಿ -ಬಲಿದಾನ -ವೀರಮರಣ ಸ್ಮಾರಕಗಳು,** ಐಬಿಚ್ ಪ್ರಕಾಶನ, ಬೆಂಗಳೂರು, ೧೯೮೦

೦೬. ಕಲಬುರ್ಗಿ ಎಂ.ಎಂ., **ಮಾರ್ಗ-೨,** ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫.

೦೭. ಕಲಬುರ್ಗಿ.ಎಂ.ಎಂ., ವೀರಣ್ಣ ರಾಜೂರ(ಸಂ), **ಹೊಸಕುಮಾರ ರಾಮನ ಸಾಂಗತ್ಯ,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೦

೦೮. ಕ್ಯಾತನಹಳ್ಳಿ ರಾಮಣ್ಣ, **ಜಾನಪದ ವಿಹಾರ(ಸಂಪುಟ-೭),** ದಿನಕರ ಪ್ರಕಾಶನ, ಬೆಂಗಳೂರು, ೧೯೮೫

೦೯. ಕುಲಕರ್ಣಿನಾರಂ(ಅನು), **ಯಾಜ್ಞ ವಲ್ಕಸ್ಮೃತಿ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೮೦

೧೦. ಕೃಷ್ಣಭಟ್ ಕೆ.(ಅನು), **ಕೌಟಿಲ್ಯನ ಅರ್ಥಶಾಸ್ತ್ರ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೭೨

೧೧. ಕೃಷ್ಣಮೂರ್ತಿ ಪಿ.ವಿ., ವಸಂತ ಲಕ್ಷ್ಮಿ ಕೆ.(ಸಂ) **ಸೂರ್ಯಕೀರ್ತಿ(ಸೂರ್ಯನಾಥ ಕಾಮತ್ ರ ಅಭಿನಂದನ ಸಮಿತಿ),** ಬೆಂಗಳೂರು, ೨೦೦೦

೧೨. ಕೃಷ್ಣಸ್ವಾಮಿ ಕ.ರಾ., **ಪಾಳೇಗಾರರ ಪದಗಳು,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೬೩.

೧೩. ಕೃಷ್ಣಸ್ವಾಮಿ ಕ.ರಾ., **ಚಿತ್ರದುರ್ಗದ ಇತಿಹಾಸ ಹೇಳುವ ಕೋಟೆ,** ಜಾನಪದ ಅಕಾಡೆಮಿ, ಬೆಂಗಳೂರು, ೧೯೭೫

೧೪. ಕೃಷ್ಣಸ್ವಾಮಿ ಕ.ರಾ., **ಚಿತ್ರಕಲ್ಲು ಮದಕರಿ,** ಜನಪದ ಅಕಾಡೆಮಿ, ಬೆಂಗಳೂರು, ೧೯೭೫

೧೫. ಕೃಷ್ಣಸ್ವಾಮಿ ಕ.ರಾ., **ನಾಡಪ್ರಭು ಕೆಂಪೇಗೌಡ,** ಜನಪದ ಅಕಾಡೆಮಿ, ಬೆಂಗಳೂರು, ೧೯೮೬

೧೬. ಕೊಟ್ರೇಶ್ ಎಂ., **ಕೋಟೆ ಕೊತ್ತಲಗಳು ಒಂದು ಅಧ್ಯಯನ(ಬಳ್ಳಾರಿ ಜಿಲ್ಲೆ),** ಕನ್ನಡ ವಿಶ್ವವಿದ್ಯಾಲಯ, (ಪಿಎಚ್.ಡಿ.ಪ್ರಬಂಧ ಅಪ್ರಕಟಿತ), ಹಂಪಿ, ೨೦೦೨

೧೭. ಗುರುನಾಥ ಜೋಶಿ, **ಕನ್ನಡ-ಕನ್ನಡ-ಶಬ್ದಕೋಶ,** ಸಂಕೇಶ್ವರ ಮತ್ತು ಕಂಪನಿ, ಗದಗ, ೧೯೯೦.

೧೮. ಚಂದ್ರಶೇಖರದಾಮ್ಲೆ, **ಜಾತ್ರೆಗಳ ಒಂದು ಜಾನಪದೀಯ ಅಧ್ಯಯನ,** ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ, ಎಂ.ಜಿ.ಎಂ.ಕಾಲೇಜು ಆವರಣ, ಉಡುಪಿ, ೧೯೯೫

೧೯. ಚಲುವರಾಜನ್ ವಿ.ಆರ್. **ಪಾವಗಡ ತಾಲ್ಲೂಕು ದರ್ಶನ,** ಐಬಿಎಚ್ ಪ್ರಕಾಶನ, ಬೆಂಗಳೂರು. ೧೯೮೭

೨೦. ಚಲುವರಾಜು, **ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೧. ಚನ್ನಬಸಪ್ಪ ಗೊ.ರು., ಬೈರಮಂಗಲ ರಾಮೇಗೌಡ, ಚಕ್ಕರೆ ಶಿವಶಂಕರ್ **ಜಾನಪದ ದರ್ಶನ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೯೪

೨೨. ಚನ್ನಬಸಪ್ಪ ಎಸ್.ಪಾಟೀಲ, **ಕರ್ನಾಟಕದ ಕೋಟೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

೨೩. ಚಿಕ್ಕಣ್ಣ ಯೆಣ್ಣೆಕಟ್ಟೆ, **ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ,** ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಕಾಳಿದಾಸ ನಗರ, ಸಿರಾ, ೨೦೦೧

೨೪. ಚಿತ್ತಯ್ಯ ಪೂಜಾರ್, **ನಿಡುಗಲ್ಲು : ಒಂದು ಸಾಂಸ್ಕೃತಿಕ ಅಧ್ಯಯನ**(ಪಿಎಚ್.ಡಿ.ಪ್ರಬಂಧ ಅಪ್ರಕಟಿತ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೧

೨೫. ಚಿತ್ತಯ್ಯ ಪೂಜಾರ್, **ಜೋಳಿಗೆ ಹೊನ್ನು** , ತಗಳವಾಡಿ ಪ್ರಕಾಶನ, ಕುವೆಂಪುನಗರ, ಮೈಸೂರು, ೨೦೦೩.

೨೬. ಚಿದಾನಂದಮೂರ್ತಿ ಎಂ., **ಸಂಶೋಧನೆ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೬೭

೨೭. ಚಿದಾನಂದಮೂರ್ತಿ ಎಂ., **ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು,** ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೫

೨೮. ಚಿದಾನಂದಮೂರ್ತಿ ಎಂ., **ಗ್ರಾಮೀಣ,** ಮಲ್ಲಿಗೆ ಗ್ರಂಥ ಮಾಲೆ-೩೧, ಬೆಂಗಳೂರು, ೧೯೭೭

೨೯. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೩೦. ಚಿದಾನಂದಮೂರ್ತಿ ಎಂ., **ಹೊಸತು ಹೊಸತು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮

೩೧. ಚಿದಾನಂದಮೂರ್ತಿ ಎಂ., **ಜನ-ಜನಪದ-ಜಾನಪದ**, ಸ್ವಪ್ನ ಬುಕ್ ಹೌಸ್ , ಬೆಂಗಳೂರು, ೨೦೦೨

೩೨. ಚೆನ್ನಣ್ಣ ವಾಲೀಕಾರ, **ಜಾನಪದ ಲೋಕ**, ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ, ೧೯೯೩

೩೩. ಚನ್ನಣ್ಣ ವಾಲೀಕಾರ, **ಹೈದ್ರಾಬಾದ-ಕರ್ನಾಟಕ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ**, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೯೮.

೩೪. ಜಗನ್ನಾಥ ಹೆಬ್ಬಾಳೆ, **ಜಾತ್ರೆಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೧೯೯೭

೩೫. ಜವರೇಗೌಡ ದೇ., **ಬೆಂಗಳೂರು ಕೆಂಪೇಗೌಡ**, ಶ್ರೀ ರಾಮಚಂದ್ರ ಬುಕ್ ಡಿಪೋ, ಮೈಸೂರು, ೧೯೫೨.

೩೬. ಜವರೇಗೌಡ ದೇ., **ಜಾನಪದ ಅಧ್ಯಯನ**, ತಳಕು ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು, ೧೯೯೧

೩೭. ತಂಬಡ ವಿಜಯ ಪೂಣಚ್ಚ, **ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩೮. ತಪಸ್ವೀ ಕುಮಾರ್ ನಂ., **ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೩೯. ದಾಸೇಗೌಡ.ಜಿ.ವಿ. **ನಮ್ಮ ಜಾನಪದ ನಂಬಿಕೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩

೪೦. ದಾಸೇಗೌಡ ಜಿ.ವಿ., **ಕನ್ನಡದ ಐತಿಹ್ಯಗಳು**, ಪ್ರಕಾಶಕರು, ಜಿ.ಟಿ.ಸರೋಜಾ, ಮಂಡ್ಯ, ೧೯೭೮

೪೧. ದೇವರ ಕೊಂಡಾರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು - ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೪

೪೨. ದೇವಿರಪ್ಪ ಎಚ್. ಮತ್ತು ಪದ್ಮನಾಭಶರ್ಮ ಎಂ.ಸಿ. **ಅನಂತನಾಥ ಪುರಾಣ(ಜನ್ನ ಕವಿ)**,

ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೪

೪೩. ದೇವಿರಪ್ಪ ಎಚ್.(ಸಂ), **ರಾಮನಾಥ ಚರಿತ್ರೆ ಸಂಪುಟ ೨.ಮತ್ತು ೩**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೪

೪೪. ದೇವೇಂದ್ರ ಕುಮಾರ ಹಕಾರಿ, **ಹಬ್ಬ ಮತ್ತು ಆಚರಣೆಗಳು ಸ್ವರೂಪ, ವ್ಯಾಪ್ತಿ (ಜಾನಪದ ಸಾಹಿತ್ಯ ದರ್ಶನ ಭಾಗ-೧೦)**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

೪೫. ನಾಯಕ ಹಾ.ಮಾ., **ಜಾನಪದ ಸ್ವರೂಪ**, ತಳುಕು ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು ೧೯೭೧

೪೬. ನಾರಾಯಣಚಾರ್ ಕೆ. **ಮಧುಗಿರಿ ಚರಿತ್ರೆ**, ವಿ.ಬಿ.ಸಿದ್ಧಯ್ಯ ಅಂಡ್ ಸನ್ಸ್ , ಬೆಂಗಳೂರು, ೧೯೪೫

೪೭. ಪರಮಶಿವಯ್ಯ ಜೀ.ಶಂ. **ಜನಪದ ಸಾಹಿತ್ಯ ಸಮೀಕ್ಷೆ**, ಮೋಹನ ಪ್ರಕಾಶನ, ಕೃಷ್ಣಮೂರ್ತಿ ಪುರಂ, ಮೈಸೂರು, ೧೯೬೭

೪೮. ಪರಶಿವಮೂರ್ತಿ ಡಿ.ವಿ., **ಸಂಶೋಧನಾ ಸಿರಿ**, ಗುರುನಿಧಿ ಪ್ರಕಾಶನ, ಬೆಂಗಳೂರು, ೧೯೯೬

೪೯. ಪಾಟೀಲ ಎಸ್.ಸಿ., **ಆಚರಣೆಯಲ್ಲಿ ಜನಪದ ವಾಸ್ತು ಶಿಲ್ಪಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೫೦. ಪಾಲ್ತಾಡಿ ರಾಮಕೃಷ್ಣ ಆಚಾರ್, **ಜಾನಪದ ಸ್ಪಂದನ**, ಸುಪ್ರಿಯ ಪ್ರಕಾಶನ, ಮಾಡಾವು, ೧೯೯೦.

೫೧. ಪುಟ್ಟಣ್ಣ ಎಂ.ಎಸ್., **ಚಿತ್ರದುರ್ಗ ಪಾಳೇಗಾರರು**, ಬೆಂಗಳೂರು, ೧೯೨೩

೫೨. ಪುಟ್ಟಣ್ಣ ಎಂ.ಎಸ್., **ಹಾಗಲವಾಡಿ ಪಾಳೇಗಾರರು**, ಬೆಂಗಳೂರು, ೧೯೩೧

೫೩. ಪುರುಷೋತ್ತಮ ಬಿಳಿಮಲೆ, **ಕರಾವಳಿ ಜಾನಪದ**, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೦

೫೪. ಪುರುಷೋತ್ತಮ ಬಿಳಿಮಲೆ, ಚಲುವರಾಜು, **ಹಂಪಿ ಜಾನಪದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೫೫. ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು**, ಆನಂದ ಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೧೯೯೭

೫೬. ಬಂಜಗೆರೆ ಜಯಪ್ರಕಾಶ್, **ಕನ್ನಡ ರಾಷ್ಟ್ರೀಯತೆ**, ಕ್ರಾಂತಿ ಪ್ರಕಾಶನ, ೩ನೇ ಹಂತ, ವಿಜಯನಗರ, ಬೆಂಗಳೂರು, ೨೦೦೦

೫೭. ಬಸವರಾಜ ಎಚ್.ಎಂ., **ಗುಡೇಕೋಟೆ - ಒಂದು ಚಾರಿತ್ರಿಕ ಅಧ್ಯಯನ**(ಎಂಫಿಲ್ ಅಪ್ರಕಟಿತ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೫೮. ಬಸವರಾಜು ಕೆ.ಆರ್., ಎಸ್.ಪರಶಿವಮೂರ್ತಿ, **ಮಹಾನಾಡ ಪ್ರಭುಗಳು**, ನೊಳಂಬ ವೀರಶೈವ ಸಂಘ, ಬೆಂಗಳೂರು, ೧೯೯೫

೫೯. ಬಸವರಾಜ ಕಲ್ಗುಡಿ, **ಮಹಾಸತಿ ಆಚರಣೆ-ಒಂದು ಅಧ್ಯಯನ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೫.

೬೦. ಬೆಟಗೇರಿ ಕೃಷ್ಣಶರ್ಮ, **ಕರ್ನಾಟಕ ಜನಜೀವನ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧

೬೧. ಬೋರಲಿಂಗಯ್ಯ ಹಿ.ಚಿ., **ಉಜ್ಜಿನಿ ಚೌಡಮ್ಮ**, ದಿನಕರ ಪ್ರಕಾಶನ, ಬೆಂಗಳೂರು, ೧೯೭೮

೬೨. ಭಟ್ ಜಿ.ಎಸ್.(ಸಂ), **ಜಾನಪದ ೧೯೯೧**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩

೬೩. ಭಾಸ್ಕರಪ್ಪ ಸಿ.ಎನ್. ಮತ್ತು ನಾಗಣ್ಣ, **ತುಮಕೂರು ಜಿಲ್ಲಾ ದರ್ಶನ**, ಟೈಮ್ಸ್ ಪಬ್ಲಿಕೇಶನ್, ತುಮಕೂರು, ೧೯೮೭

೬೪. ಭೀಮಕವಿ, **ಬಸವ ಪುರಾಣ**, ಲಿಂಗಾಯತ ವಿದ್ಯಾ ಅಭಿವೃದ್ಧಿ ಸಂಸ್ಥೆ, ಧಾರವಾಡ, ೧೯೬೪

೬೫. ಮಂಜುನಾಥ ಬೇವಿನಕಟ್ಟಿ, **ಜನಪದ ನಂಬಿಕೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೬೬. ಮದ್ದೇವು ಮಾಧವರೆಡ್ಡಿ, **ಇತಿಹಾಸದ ಹೊಸಬೆಳಕು ಬಂಗಾರನಾಯಕನ ದುರ್ಗ**, ದೊಡ್ಡೇನಹಳ್ಳಿ, ಬಸವರಾಜು, ಪಾವಗಡ(ತಾ), ೨೦೦೨

೬೭. ಮಹಾದೇವಯ್ಯ ಟಿ.ಆರ್., **ಗುಬ್ಬಿ ತಾಲ್ಲೂಕು ದರ್ಶನ**, ಐಬಿಚ್ ಪ್ರಕಾಶನ, ಬೆಂಗಳೂರು, ೧೯೮೪.

೬೮. ಮೀರಾಸಾಬಿಹಳ್ಳಿ ಶಿವಣ್ಣ, **ದುರುಗ ಜಾನಪದ**, ಶಕ್ತಿಮುದ್ರಣ ಮತ್ತು ಪ್ರಕಾಶನ, ರಾಜಾಜಿನಗರ, ಬೆಂಗಳೂರು, ೧೯೯೯.

೬೯. ಮುದ್ದೇಬಿಹಾಳ್ ಆರ್.ಸಿ., **ಬೇಡನಾಯಕರ ಪಾಡು**, ರಂಗನಗೌಡ ಎಚ್.ಪಾಟೀಲ, ಅಂಜಲ, ಬಿಜಾಪುರ(ಜಿ) ೧೯೯೪.

೭೦. ಮೊಗಳ್ಳಿ ಗಣೇಶ(ಸಂ), **ದಲಿತ ಚಿಂತನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೭೧. ಯೋಗಿಶ್ವರಪ್ಪ ಡಿ.ಎನ್., **ಹಾಗಲವಾಡಿ ನಾಯಕರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೭೨. ರಂಗರಾಜನ್ ಎಲ್.ಎನ್.(ಸಂ), **ಕೌಟಿಲ್ಯನ ಅರ್ಥಶಾಸ್ತ್ರ(ಇಂಗ್ಲೀಷ್ ಕೃತಿ)**, ಪೆಂಗ್ವಿನ್ ಪುಸ್ತಕಾಲಯ, ಹೊಸ ದೆಹಲಿ, ೧೯೬೭.

೭೩. ರಹಮತ್ ತರೀಕೆರೆ, **ಕರ್ನಾಟಕದ ಸೂಫಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೧೯೯೮

೭೪. ರಾಜಶೇಖರ್ ಪಿ.ಕೆ., **ಪಿರಿಯಪಟ್ಟಣದ ಕಾಳಗ**, ಹೊನ್ನಾರು ಜನಪದ ಗಾಯಕರು, ಮೈಸೂರು, ೧೯೯೦

೭೫. ರಾಜೇಂದ್ರ ಡಿ.ಕೆ., **ನಮ್ಮ ಸುತ್ತಿನ ನಂಬಿಕೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೩

೭೬. ರಾಮಚಂದ್ರೇಗೌಡ ಹಿ.ಶಿ., **ಜಾನಪದ ಅಂತರಂಗ**, ಮಾನವಿ ಪ್ರಕಾಶನ, ಮೈಸೂರು, ೧೯೮೭

೭೭. ರಾಮಶೇಷನ್ ನೀ.ಕೃ., **ಕರ್ನಾಟಕದ ಕೋಟೆ ಕೊತ್ತಲಗಳು**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೦

೭೮. ರಾಮಶೇಷನ್ ನೀ.ಕೃ., **ಮಧುಗಿರಿ**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೪

೭೯. ರಾಮೇಗೌಡ, **ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು**, ಚಿತ್ರಕೂಟ, ಮೈಸೂರು, ೧೯೯೨.

೮೦. ಲಕ್ಕಪ್ಪಗೌಡ(ಸಂ).ಎಚ್.ಜೆ., **ಜಾನಪದ ಕೈಪಿಡಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭

೮೧. ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ.ಎಂ.ವಿ(ಸಂ) **ಹುಲ್ಲೂರು ಶ್ರೀ ಜೋಯಿಸರ ಐತಿಹಾಸಿಕ ಲೇಖನಗಳು**, ಚಿತ್ರದುರ್ಗ, ೧೯೭೬

೮೨. ಲಕ್ಷ್ಮಣ್ ತೆಲಗಾವಿ(ಸಂ), **ಹರತಿಸಿರಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭

೮೩. ಲಿಂಗಯ್ಯ ಡಿ., **ಕರ್ನಾಟಕ ಜನಪದ ಕಾವ್ಯಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೮೪. ಲಿಂಗಯ್ಯ ಡಿ., ಸಂಧಾರೆಡ್ಡಿ.ಕೆ.ಆರ್., **ಜಾನಪದ ಸಾಹಿತ್ಯ ಮತ್ತು ಸ್ವರೂಪ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೭

೮೫. ವಸು.ಎಂ.ವಿ(ಸಂ) , **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೮೬. ವಿದ್ವಾನ್ ಅಶ್ವತಯ್ಯ, **ಕುಣಿಗಲ್ಲು ತಾಲ್ಲೂಕು ದರ್ಶನ**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೭

೮೭. ವಿಶ್ವನಾಥ್, **ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ**, ದೇವಿ ಪ್ರಕಾಶನ, ಮೈಸೂರು, ೨೦೦೦

೮೮. ವಿರೂಪಾಕ್ಷ ಪಂಡಿತ, **ಚೆನ್ನಬಸವ ಪುರಾಣ**, ಲಿಂಗಾಯತ ವಿದ್ಯಾ ಅಭಿವೃದ್ಧಿ ಸಂಸ್ಥೆ, ಧಾರವಾಡ, ೧೯೩೪.

೮೯. ವಿವೇಕ ರೈ ಬಿ.ಎ., **ಅನ್ವಯಿಕ ಜಾನಪದ**, ಜನಪ್ರಿಯ ಪುಸ್ತಕ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫

೯೦. ವೀರಣ್ಣ ದಂಡೆ, **ಕನ್ನಡ ಜಾನಪದ ಪ್ರಜ್ಞೆ**, ಕವಿಮಾರ್ಗ ಪ್ರಕಾಶನ, ಕಲಬುರ್ಗಿ, ೧೯೯೩

೯೧. ವೀರಣ್ಣದಂಡೆ, **ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳು ಆಶಯ ಮತ್ತು ಮಾದರಿಗಳು**, ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು, ೨೦೦೩

೯೨. ವೀರಣ್ಣ ರಾಜೂರ(ಸಂ), **ವೀರಶೈವ ತಾರಾವಳಿ ಸಂಪುಟ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ, ಸಂಸ್ಥಾನ ಮಠ, ಗದಗ, ೧೯೯೪

೯೩. ವೀರನಾಯಕ ಎಚ್.ವಿ., **ಗುಮ್ಮಳ್ಳಿ ಕದನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೩

೯೪. ವೃಷಬೇಂದ್ರಸ್ವಾಮಿ ಎಸ್.ಎಂ., **ಪುರಾಣ-ಐತಿಹ್ಯ-ದಂತಕಥೆ ಸಾಹಿತ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೯೫. ವೆಂಕಟರತ್ನಂ ಎ.ವಿ., **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

೯೬. ವೆಂಕಟರತ್ನಂ ಎ.ವಿ., **ಚಿಕ್ಕನಾಯಕನಹಳ್ಳಿ ಪಾಳೇಗಾರರು**, ಸರ್ವೋದಯ ಪಥ, ೧೯೩೧.

೯೭. ವೆಂಕಟೇಶ್ ಇಂದ್ವಾಡಿ ರಾ., **ಮಂಟೇಸ್ವಾಮಿ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೯೮. ವೆಂಕಟೇಶ ಇಂದ್ವಾಡಿ(ಸಂ), **ದೇವಚಂದ್ರನ ರಾಜಾವಳಿ ಕಥೆ - ಸಾಂಸ್ಕೃತಿಕಕ ಮುಖಾಮುಖಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

೯೯. ಶಂಕರನಾರಾಯಣ ತೀ.ನಂ., **ಕಾಡುಗೊಲ್ಲರ ಸಂಬಿಕೆಗಳು ಸಂಪ್ರದಾಯಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೨

೧೦೦. ಶಂಬಾ ಜೋಷಿ, ಎಡೆಗಲು ಹೇಳುವ ಕಂನಾಡಕಥೆ, ಮಾಧವ ಬಲ್ಲಾಳ ಬಂಧಗಳು, ಧಾರವಾಡ, ೧೯೪೭

೧೦೧. ಶರ್ಮಾ ಶೀ.ತಾ(ಸಂ), ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೯

೧೦೨. ಶಿರೂರು ಬಿ.ವ್ಹಿ., ಸಂಶೋಧನ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೧೯೯೨

೧೦೩. ಶಿವಕುಮಾರಸ್ವಾಮಿ ಸಿ.ಎಸ್(ಸಂ), ಕರ್ನಾಟಕ ಜಾತ್ರೆಗಳು, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ, ೧೯೯೮.

೧೦೪. ಶಿವತಾರಕ್ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೧೦೫. ಶ್ರೀಕಂಠಯ್ಯ, ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೩

೧೦೬. ಶ್ರೀನಿವಾಸ ಎಂ.ಡಿ., ಮಧುಗಿರಿ ಇತಿಹಾಸ, ಸುಧಾಪ್ರಕಾಶನ, ಮಧುಗಿರಿ, ೧೯೮೭

೧೦೭. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೧೦೮. ಸತ್ಯನಾಥ್ ಟಿ.ಎಸ್. ನರಬಲಿ-ಒಂದು ಸಂಸ್ಕೃತಿಯ ಅಧ್ಯಯನ, ಸಂಸ್ಕೃತಿ ವಿಕಾಸ ಮಾಲೆ, ಶ್ರೀರಾಂಪುರಂ, ಬೆಂಗಳೂರು, ೧೯೭೯

೧೦೯. ಸದಾಶಿವಪ್ಪ ಹು.ಪು. ಹುಲಿಯೂರು ದುರ್ಗ, ಎಸ್.ಪುಟ್ಟಣ್ಣಯ್ಯ, ಹುಲಿಯೂರು ದುರ್ಗ, ತುಮಕೂರು(ಜಿ), ೧೯೭೮

೧೧೦. ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭

೧೧೧. ಸುಂಕಾಪುರ ಎಸ್.ಎಸ್., ಜಾನಪದ ಸಾಹಿತ್ಯದರ್ಶನ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦

೧೧೨. ಸುಜಾತ ಮಲ್ಲಾನಗೌಡ, ರಾಯಚೂರು ಮತ್ತು ಕೊಪ್ಪಳ ಕೋಟೆಗಳು - ಒಂದು ಅಧ್ಯಯನ(ಪಿಎಚ್.ಡಿ. ಪ್ರಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೧೩. ಸುಬ್ಬಣ್ಣ ರೈ.ಎ., ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಮುಂಬಯಿ ವಿಶ್ವವಿದ್ಯಾಲಯ, ಮಾರೆ ಜೂನಿಯರ್ ಛೇಂಬರ್, ಮಾಣಿ, ಮುಂಬೈ, ೧೯೯೪

೧೧೪. ಸುರೇಶ್ ಕೆ.ಎಂ., **ಕರ್ನಾಟಕ ದೇವಾಲಯಗಳ ಕೋಶ - ಕೊಪ್ಪಳ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೧೫. ಸುಶೀಲ ಪಿ.ಉಪಾಧ್ಯಾಯ, **ದಕ್ಷಿಣ ಭಾರತದ ಜಾನಪದ**, ರಾಷ್ಟ್ರಕವಿ ಗೋವಿಂದ ಪೈ, ಸಂಶೋಧನಾ ಕೇಂದ್ರ, ಉಡುಪಿ, ೧೯೯೮

೧೧೬. ಸೋಮಶೇಖರ ಇಮ್ರಾಪುರ, **ನಮ್ಮ ಜಾನಪದ ಸಮೀಕ್ಷೆ**, ಚೇತನಾ ಪ್ರಕಾಶನ, ಧಾರವಾಡ, ೧೯೭೯

೧೧೭. ಷೇಕ್ ಆಲಿ, **ಕರ್ನಾಟಕ ಚರಿತ್ರೆ ಸಂಪುಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೧೮. ಹಂಪನಾ, **ಚಂದ್ರಕೊಡೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೧೯. ಹಿರೇಮಠ ಆರ್.ಸಿ.(ಸಂ), **ಮೋಹನ ತರಂಗಿಣಿ(ಕನಕದಾಸರು)**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩.

೧೨೦. ಹಿರೇಮಠ ಎಸ್.ಎಸ್., **ಜಾತ್ರೆಗಳು**, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩.

ಗೆಜೆಟಿಯರ್, ವಿಶ್ವಕೋಶ ಮತ್ತು ಪತ್ರಿಕೆಗಳು

೧. ರೈಸ್ ಬಿ.ಎಲ್., **ಮೈಸೂರು ಗೆಜೆಟಿಯರ್** , ಸಂ.II, ಮೈಸೂರು ಸರ್ಕಾರ, ಮೈಸೂರು, ೧೮೯೭.

೨. ಕಾಮತ್ ಎಸ್.ಯು., **ಕರ್ನಾಟಕ ರಾಜ್ಯ ಗೆಜೆಟಿಯರ್**, ಭಾಗ-೨ ಮತ್ತು ೩, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೪, ೧೯೮೬

೩. ಮೆಕಂಜಿ, **ಮೆಮೋರೀಸ್ ಆಫ್ ದಿ ನಾರ್ತನ್ ಪರಗಣಾಸ್ ಆಫ್ ಮೈಸೂರ್ ಸರ್ವೇಯಿಡ್** , ೧೮೦೦-೧೮೦೨-೧೮೦೩.

೪. ಅಭಿಶಂಕರ್ ಕೆ., **ಮೈಸೂರು ಗೆಜೆಟಿಯರ್**, ತುಮಕೂರು ಡಿಸ್ಟ್ರಿಕ್ಟ್ , ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೬೯.

೫. ಹಯವದನರಾವ್ ಸಿ(ಸಂ), **ಮೈಸೂರು ಗೆಜೆಟಿಯರ್**-೧,೨,೩,೪,೫,, ಬಿ.ಆರ್ ಪಬ್ಲೀಷ್, ದೆಹಲಿ.

೬. **ಎಫಿಗ್ರಾಫಿಯ ಕರ್ನಾಟಕ**, IV, XI ಮತ್ತು XII ಸಂಪುಟಗಳು

೭. **ಆನ್ಯುಯಲ್ ರಿಪೋರ್ಟ್ ಆಫ್ ಮೈಸೂರು**, ಆರ್ಕೀಯಾಲಜಿಕಲ್ ಡಿಪಾರ್ಟ್‌ಮೆಂಟ್

೮. ಪ್ರಾನ್ಸಿಸ್ ಬುಖನಾನ್, **ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರ ಮತ್ತು ಮಲಬಾರ್**, ಲಂಡನ್, ೧೮೦೭(ಸಂ)-೨

೯. ನಾಯಕ ಹಾ.ಮಾ(ಸಂ), **ಕರ್ನಾಟಕ ವಿಷಯ ವಿಶ್ವಕೋಶ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೯.

೧೦. ನಾಯಕ ಹಾ.ಮಾ., ಕನ್ನಡ ವಿಶ್ವಕೋಶ ಸಂ-೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨.

೧೧. ಚಂದ್ರಶೇಖರ ಕಂಬಾರ, ಕರ್ನಾಟಕ ಜಾನಪದ ವಿಶ್ವಕೋಶ, ಸಂ.೧-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೧೨. ಜಯ ಮಂಗಲಿ, ೭೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು, ೨೦೦೨

೧೩. ಕಲ್ಪಸಿರಿ, ೭೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು, ೨೦೦೨

೧೪. ಚೆನ್ನುಡಿ, ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನ, ಗುಬ್ಬಿ(ತುಮಕೂರು)

೧೫. ತುಂಬೆ, ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು

೧೬. ಆಗ್ನೇಯ ವಾಣಿ, ಕೊರಟಗೆರೆವಾರ್ತೆ ಸಂಚಿಕೆ, ಕೊರಟಗೆರೆ

೧೭. ಕೊರಟಗೆರೆ ವಾರ್ತೆ, ಪದ್ಮನಾಭ ಎಸ್.(ಸಂ), ಕೊರಟಗೆರೆ

೧೮. ವಾಲ್ಮೀಕಿ ವಾಣಿ, ಮಾಸಿಕ ಪತ್ರಿಕೆ, ಸಂಚಿಕೆ ೭, ಸಂ.೪, ಜನವರಿ ೨೦೦೧, ಚಿತ್ರದುರ್ಗ

೧೯. ವಾಙ್ಮಯ ಇತಿಹಾಸ, ಕನ್ನಡ ಪ್ರಭ, ಜೂನ್ ೧೫, ೧೯೮೯(ಚಲುವರಾಜನ್ .ವಿ.ಆರ್)

೨೦. ಪದ್ಮಶಾಲಿ ಪತ್ರಿಕೆ, ಮಾಸಿಕ; ಚಾಮರಾಜಪೇಟೆ, ಬೆಂಗಳೂರು(ಗಾಯತ್ರಿ).

೨೧. ನಾಯಕವಾಣಿ, ವಾರಪತ್ರಿಕೆ, ಪಾವಗಡ

೨೨. ದಿಕ್ಸೂಚಿ, ಮಾತಾಡುವ ಕೋಟೆಗಳು : ಫೆಬ್ರವರಿ, ೧೯೯೪(ಚನ್ನಬಸಪ್ಪ ಎಸ್.ಪಾಟೀಲ್)

೨೩. ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೨೪. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ೧೯೩೨, ಬೆಂಗಳೂರು

೨೫. ಪ್ರಬುದ್ಧ ಕರ್ನಾಟಕ, ಸಂಪುಟ ೨೪, ಸಂಚಿಕೆ ೧, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೨.

೨೬. ಕನ್ನಡ ಅಧ್ಯಯನ, ಗಾಳಿಸಂಚಿಕೆ, ಸಂಪುಟ ೫, ಸಂಚಿಕೆ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೭. ಸಾಧನೆ, ಸಂಪುಟ ೧೫, ಸಂಚಿಕೆ ೧, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೬

ಅನುಬಂಧ ೮

ದೇವರಾಯನ ದುರ್ಗದ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವ ಆಹ್ವಾನ ಪತ್ರಿಕೆ

|| ಶುಭಮಸ್ತು ||

|| ಶ್ರೀ ಲಕ್ಷ್ಮೀಸ್ತನಕಸ್ತೂರಿಲಾಂಛನಮತವಕ್ಷಸೇ || || ಶ್ರೀಮತ್ಕರಗಿರಿಶಾಯ ನಾರಸಿಂಹಾಯ ಮಂಗಳಂ ||

ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವ ಸಮಿತಿ (ರಿ).

155, 4ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018. ದೂರವಾಣಿ : 6611412

ಶ್ರೀಮತ್ಕರಗಿರಿ ಕ್ಷೇತ್ರವೆಂದು ಪುರಾಣ ಪ್ರಸಿದ್ಧವಾದ ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿಯ ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವವನ್ನು ಶ್ರೀ ಚಿತ್ರಭಾನುನಾಮ ಸಂವತ್ಸರದ ಫಾಲ್ಗುಣ ಶುಕ್ಲ ಪಕ್ಷ, ದ್ವಾದಶಿ ಶನಿವಾರ ದಿನಾಂಕ **15-3-2003**, ಈ ಶುಭ ದಿನ ರಾತ್ರಿ 3 ಘಂಟೆಗೆ ಸಲ್ಲುವ ಶುಭ ಬ್ರಾಹ್ಮೀ ಮುಹೂರ್ತದಲ್ಲಿ ಪದ್ಮಶಾಲಿ ವಂಶಸ್ಥರಿಂದ ನಡೆಸಲ್ಪಡುತ್ತದೆ. ತಾವುಗಳು ಈ ಸತ್ಕಾರ್ಯಕ್ಕೆ ಸಕುಟುಂಬ ಪರಿವಾರ ಸಮೇತರಾಗಿ ಶ್ರೀ ಕ್ಷೇತ್ರಕ್ಕೆ ಆಗಮಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಕಾರ್ಯಕ್ರಮಗಳು

ದಿನಾಂಕ 15-3-2003, ಶನಿವಾರ

ಬೆಳಿಗ್ಗೆ 5 ಘಂಟೆಗೆ : ಗೋಪೂಜೆ ಸಂಜೆ 5 ಘಂಟೆಗೆ : ಶ್ರೀ ಮಹಾಲಕ್ಷ್ಮೀ ಪೂಜೆ

ಶಾಂಡಿಲ್ಯ ಮಹರ್ಷಿ ಗೋತ್ರೋದ್ಭವರಾದ ಮಾಚಾರ್ಲು ಶ್ರೀ ಎನ್. ರಾಮಚಂದ್ರಪ್ಪ ಶ್ರೀಮತಿ ಇಂದಿರಮ್ಮ ಮತ್ತು ಮಕ್ಕಳು, ಚಾಮರಾಜಪೇಟೆ, ಬೆಂಗಳೂರು-560 018.

ಕಲ್ಯಾಣೋತ್ಸವ

ರಾತ್ರಿ 9-30ಕ್ಕೆ : ಮುತ್ತೈದೆಯರ ಬಳೆಶಾಸ್ತ್ರ, ವರಪೂಜೆ, ತಾಂಬೂಲ ವಿನಿಯೋಗ

ರಾತ್ರಿ 10-30 ಕ್ಕೆ : ಮಹಾಲಕ್ಷ್ಮಿಯನ್ನು ಕುಂಬಿ ನರಸಿಂಹಸ್ವಾಮಿ (ಯೋಗ ನರಸಿಂಹಸ್ವಾಮಿ)ಯವರ ಸನ್ನಿಧಿಗೆ ಮೆರವಣಿಗೆಯಲ್ಲಿ ಕರೆದೊಯ್ಯುವುದು.

ಸ್ವಾಮಿಯವರ ಕಾಶಿಯಾತ್ರೆ, ಕಲ್ಯಾಣೋತ್ಸವ, ಮಹಾಮಂಗಳಾರತಿ

ಗಡ್ಡಂ ಶ್ರೀಮತಿ ಪದ್ಮ ಮತ್ತು ಶ್ರೀ ಜಿ. ರಾಮು ಮತ್ತು ಮಕ್ಕಳು

ಶ್ರೀನಿವಾಸ ಹ್ಯಾಂಡಿಕ್ರಾಫ್ಟ್ ಎಂಪೋರಿಯಂ, ರಾಜ ಮಾರ್ಕೆಟ್, ಬೆಂಗಳೂರು-2.

ನಿವಾಸ : ನಂ.51/28, 20ನೇ ಮುಖ್ಯರಸ್ತೆ, 20ನೇ ಅಡ್ಡರಸ್ತೆ, ಮಾರೇನಹಳ್ಳಿ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-560 040.

ಹೂವಿನ ಅಲಂಕಾರ

ಶ್ರೀವತ್ಸ ಗೋತ್ರೋದ್ಭವರಾದ ಗೋಲ್ಲು ಶ್ರೀ ಎಂ.ಆರ್. ರಾಜಣ್ಣ

ಶ್ರೀಮತಿ ನಾಗರತ್ನಮ್ಮ ಮತ್ತು ಮಕ್ಕಳು, ಇವರ ಸೇವಾರ್ಥ

ಮನವರ್ತಿಪೇಟೆ ಬೆಂಗಳೂರು-560 053.

ಪ್ರಸಾದ ವಿನಿಯೋಗ

ಭೃಗು ಮಹರ್ಷಿ ಗೋತ್ರೋದ್ಭವರಾದ ಪ್ರಾಣನಾಥಂ ಶ್ರೀ ಕೆ.ಜಿ. ಲಕ್ಷ್ಮೀನಾರಾಯಣಪ್ಪ

ಜಂಟಿ ಕಾರ್ಯದರ್ಶಿ, ಅಖಿಲ ಭಾರತ ಪದ್ಮಶಾಲಿ ಸಂಘಂ, ಹೈದರಾಬಾದ್.

ಶ್ರೀಮತಿ ಭಾನುಮತಿ, ವೈಷ್ಣವಿ ನಿವಾಸ, 46, 'ಬಿ' ಬೀದಿ, ಕೋಟೆ, ಬೆಂಗಳೂರು-560 002.

ಆರವಂಟಿಗೆ

ದಿನಾಂಕ **17-3-2003**, ಸೋಮವಾರ, ಬೆಳಿಗ್ಗೆ 10-30 ಘಂಟೆಗೆ

ಗುಜ್ಜಾರಿ ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಮಕ್ಕಳು

366, 57ನೇ 'ಬಿ' ಅಡ್ಡರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.

ಬ್ರಹ್ಮರಥೋತ್ಸವ

ಪುಬ್ಬ ನಕ್ಷತ್ರದಲ್ಲಿ ಮಧ್ಯಾಹ್ನ 1 ಘಂಟೆಗೆ ಕರ್ನಾಟಕ ಸರ್ಕಾರದವರಿಂದ

ಅನ್ನಸಂತರ್ಪಣೆ

ಶ್ರೀವತ್ಸ ಗೋತ್ರೋದ್ಭವರಾದ ಗೋಲ್ಲು ಶ್ರೀ ಕೆ.ಎಸ್. ಶ್ರೀನಿವಾಸಮೂರ್ತಿ

ಶ್ರೀಮತಿ ಚಂದ್ರಲೇಖ ಮತ್ತು ಮಕ್ಕಳು, ಇವರ ಸೇವಾರ್ಥ

672, 10ನೇ 'ಡಿ' ಮುಖ್ಯರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.

ವಸಂತೋತ್ಸವ

ದಿನಾಂಕ **19-3-2003**, ಬುಧವಾರ, ಮಧ್ಯಾಹ್ನ 11 ಘಂಟೆಗೆ

ವಸಿಷ್ಠ ಮಹರ್ಷಿ ಗೋತ್ರೋದ್ಭವರಾದ

ಶ್ರೀಮತಿ ಚಿಂದುಲ ಶ್ರೀವಲ್ಲಿ ಶ್ರೀ ಮಲ್ಲಿಕಾರ್ಜುನ,

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತುಮಕೂರು.

2004ನೇ ಸಾಲಿನ ಕಲ್ಯಾಣೋತ್ಸವವು

ತಾಂಡ್ರ ಶ್ರೀಮತಿ ವಸಂತಕುಮಾರಿ ಶ್ರೀ ಆರ್. ರಾಧಾಕೃಷ್ಣ ಮತ್ತು ಮಕ್ಕಳು

961, 2ನೇ ಮುಖ್ಯರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10. ಇವರಿಂದ

ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವ ಸಮಿತಿ ಪರವಾಗಿ


ಪ್ರಾಣನಾಥಂ ಕೆ. ನರಸಿಂಹಯ್ಯ ಅಧ್ಯಕ್ಷರು	ಪ್ರಾಣನಾಥಂ ಕೆ.ಎಲ್. ಶ್ರೀರಂಗಯ್ಯ ಗೌ॥ ಕಾರ್ಯದರ್ಶಿ
ಪ್ರಾಣನಾಥಂ ಕೆ.ಜಿ. ಲಕ್ಷ್ಮೀನಾರಾಯಣಪ್ಪ ಖಜಾಂಚಿ	ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ವಿ.ಸೂ. : ಬೆಂಗಳೂರು ಬಸ್ ನಿಲ್ದಾಣದಿಂದ ಬೆಳಗ್ಗೆ 7 ಘಂಟೆಗೆ ದೇವರಾಯನದುರ್ಗಕ್ಕೆ ಬಸ್ ಹೊರಡುವುದು. ತುಮಕೂರಿನಿಂದ ಬಸ್ಸುಗಳ ಸೌಕರ್ಯವಿದೆ.

ಛಾಯಚಿತ್ರಗಳ ವಿವರ



೧. ಮಧುಗಿರಿ ಕೋಟೆ : ಎರಡನೇ ಕೋಟೆಯ ದಕ್ಷಿಣ ದಿಕ್ಕಿನ ಮುಖ್ಯ ಪ್ರವೇಶದ್ವಾರ



೨. ಮಧುಗಿರಿ ಕೋಟೆ : ಬೆಟ್ಟದ ಮಧ್ಯ ಭಾಗದಲ್ಲಿರುವ ಕಣಜಗಳು ಮತ್ತು ಎತ್ತರ ಪ್ರದೇಶದಲ್ಲಿರುವ ಬತೇರಿ.



೩. ಮಧುಗಿರಿ ಕೋಟೆ : ಬೆಟ್ಟದ ಮಧ್ಯ ಭಾಗದಲ್ಲಿರುವ ಗೋಲಾಕಾರದ ತುಪ್ಪದ ಕಣಜ ಮತ್ತು ಚಿಕ್ಕ ಆಂಜನೇಯಗುಡಿ.



೪. ಮಧುಗಿರಿ ಕೋಟೆ : ಮೊದಲನೇ ಕೋಟೆಯೊಳಗಿರುವ ಮಲ್ಲೇಶ್ವರ ದೇವಾಲಯ ಮತ್ತು ಗರುಡಗಂಬ.



೫. ಚನ್ನರಾಯನ ದುರ್ಗದ ಕೋಟೆಯ ವಿಹಂಗಮ ನೋಟ.



೬. ಚನ್ನರಾಯನ ದುರ್ಗದ ಬೃಹತ್ ಧಾನ್ಯ ಸಂಗ್ರಹದ ಕಣಜಗಳು.



೭. ಮಿಡಿಗೇಶಿ ಕೋಟೆಯ ವಿಹಂಗಮ ನೋಟ



೮. ಮಿಡಿಗೇಶಿ ಕೋಟೆ : ಬೆಟ್ಟದ ತುದಿಯಲ್ಲಿರುವ ವೃತ್ತಾಕಾರದ ತುಪ್ಪದ ಕಣಜಗಳು



೯. ಮಿಡಿಗೇಶಿ ಕೋಟೆ : ಬೆಟ್ಟದ ಬುಡದಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯ.



೧೦. ಹಾಗಲವಾಡಿ ಕೋಟೆ : ಊರ ಮಧ್ಯದಲ್ಲಿರುವ ಮುದ್ದುವೀರಸ್ವಾಮಿ ಗದ್ದುಗೆ.



೧೧. ಹಾಗಲವಾಡಿ ಕೋಟೆ : ಮೊದಲನೇ ಕೋಟೆಯ ಗೋಡೆ
ಕಲ್ಲುಗಳಿಗೆ ಕೆತ್ತಿರುವ ಉಬ್ಬುಶಿಲ್ಪಗಳು.



೧೨. ಹಾಗಲವಾಡಿ ಕೋಟೆ : ಸೋಮನಕಟ್ಟೆ ಕಲ್ಯಾಣಿ



೧೩. ಸಿರಾ ಕೋಟೆ : ಕೋಟೆಯ ಮೂರನೆಯ ಹೆಬ್ಬಾಗಿಲು



೧೪. ಸಿರಾ ಕೋಟೆ : ಉತ್ತರ ದಿಕ್ಕಿಗಿರುವ ದಿಡ್ಡಿಬಾಗಿಲು ಮತ್ತು ಒಂದು ಕೊತ್ತಲ




೧೫. ನಿಡುಗಲ್ಲು ಕೋಟೆ : ವಜ್ರದೂರು ಬಾಗಿಲು



೧೬. ನಿಡುಗಲ್ಲು ಕೋಟೆ : ವಜ್ರದೂರು ಬಾಗಿಲ ಮಂಟಪದ ಕಟ್ಟಡದಲ್ಲಿನ ಲಜ್ಜಾಗೌರಿ ಚಿತ್ರ.
ಇದಕ್ಕೆ ನಾಯಕ ಜಾತಿಯ ಎಮ್ಮೆಲರು ತಮ್ಮ ಹೆಣ್ಣು ಮಗಳೆಂದು ಪೂಜಿಸುತ್ತಾರೆ.



೧೨. ನಿಡುಗಲ್ಲು ಕೋಟೆ : ಬೆಟ್ಟದ ಮಧ್ಯದ ಅಂತಸ್ತಿನಲ್ಲಿರುವ ಬೃಹತ್ತಾದ ಫಿರಂಗಿಗಳು
ಇವಕ್ಕೆ 'ಏಳು ಮಕ್ಕಳ ತಾಯಿ' ಎಂದು ಕರೆಯುತ್ತಾರೆ.





೧೯. ನಿಡುಗಲ್ಲು ಕೋಟೆ : ರಾಮನಿಂದ ಸ್ಥಾಪಿತವಾದ ಕಿಚ್ಚಡಿ ಲಿಂಗೇಶ್ವರ(ಕಾಳೇ ಹಸ್ತೇಶ್ವರ)



೨೦. ನಿಡುಗಲ್ಲು ಕೋಟೆ : ಕಿಚ್ಚಡಿ ಲಿಂಗದೆದುರು ಇರುವ 'ಮುಖ ತಿರುಗಿದ ಬಸವ'



೨೧. ನಿಡುಗಲ್ಲು ಕೋಟೆ : ಪೂರ್ವದಿಕ್ಕಿಗಿರುವ ಪಾವಗಡದ ಊರುಬಾಗಿಲು



೨೨. ನಿಡುಗಲ್ಲು ಕೋಟೆ : ಚನ್ನರಾಯನ ಕೋಟೆ ಸುತ್ತಿನಲ್ಲಿರುವ
ದುರ್ಗಾಧಿಪತಿಗಳ ಅರಮನೆ ಅವಶೇಷ.



೨೩. ಕೊರಟಗೆರೆ ಕೋಟೆ : ಬೆಟ್ಟದ ತುದಿಗೇರುವ ಪಕ್ಕೆಗಳಲ್ಲಿರುವ ಕೋಟೆಗೋಡೆಯ ಅವಶೇಷ.



೨೪. ಕೊರಟಗೆರೆ ಕೋಟೆ :



೨೫. ಕೊರಟಗೆರೆ ಕೋಟೆ : ಉದ್ಭವಲಿಂಗವಿರುವ ಗಂಗಾಧರೇಶ್ವರ ದೇವಸ್ಥಾನ.





೨೭. ಪಾವಗಡ ಕೋಟೆ : ಕೋಟಮ್ಮಳು ಬಲಿಯಾಗಿರುವ ಎರಡನೇ ಕೋಟೆಯ ಒಂದು ಕೊತ್ತಲ.(ಕೋಟಮ್ಮಳ ಕೊತ್ತಲ ಅಥವಾ ತೇರು ಕೊತ್ತಲ)



೨೮. ಪಾವಗಡ ಕೋಟೆ : ಮೂರನೇ ಕೋಟೆಯ ದ್ವಾರದ ಎರಡು ಬೃಹತ್ ಕೊತ್ತಲಗಳು.



೨೯. ದೇವರ ಬೆಟ್ಟದ ಕೋಟೆ : ಮುಖ್ಯದ್ವಾರ ಬಾಗಿಲು.



೩೦. ದೇವರಬೆಟ್ಟದ ಕೋಟೆ : ಕಡೇಗಾಪುವಿನ ಒಳಗಿರುವ ಗೋಪುರ.
ಇದರ ತುದಿಯಲ್ಲಿ ಆಳುವವರ ಧ್ವಜ ಹಾರಿಸುತ್ತಿದ್ದರು.



೩೧. ಯಲ್ಲಪ್ಪನಾಯಕನ ಹೊಸಕೋಟೆ : ಅಲ್ಲಲ್ಲಿ ಉಳಿದಿರುವ ಕೋಟೆಯ ಅವಶೇಷಗಳು.



೩೨. ಯಲ್ಲಪ್ಪನಾಯಕನ ಹೊಸಕೋಟೆ : ಚನ್ನಕೇಶವ ದೇವಾಲಯ.



೩೩. ಹುತ್ರಿ ದುರ್ಗದ ಕೋಟೆ : ಬಾಳೆಕಟ್ಟೆ ಊರು ಬಾಗಿಲು.



೩೪. ಹುತ್ರಿ ದುರ್ಗದ ಕೋಟೆ : ಮೈಸೂರು ಊರು ಬಾಗಿಲು ಮತ್ತು ಒಂದು ಕೊತ್ತಲ.



೩೫. ಹುತ್ರಿ ದುರ್ಗದ ಕೋಟೆ : ಕುಂಭಿ ಶಂಕರದೇವಸ್ಥಾನ ಮತ್ತು
ಅದರ ಮುಂದಿರುವ ಶಂಕರ ದೇವಸ್ಥಾನದ ದೊಣೆ.



೩೬. ಹುಲಿಯೂರು ದುರ್ಗದ ಕೋಟೆ : ಹೊರಸುತ್ತಿನ ಕೋಟೆಯ ಒಂದು ಕೊತ್ತಲ.



೩೭. ಹುಲಿಯೂರು ದುರ್ಗದ ಕೋಟೆ : ಮೂರನೇ ಪ್ರವೇಶದ್ವಾರ



೩೮. ಹುಲಿಯೂರು ದುರ್ಗದ ಕೋಟೆ : ಬೃಹತ್ ಗುಂಡಿನಲ್ಲಿರುವ ಗಣಪತಿಯ ಉಬ್ಬುಶಿಲ್ಪ.



೩೯. ಭಸ್ಮಾಂಗಿ ಕೋಟೆ : ಕೊತ್ತಲಕ್ಕೆ ಫಿರಂಗಿಗಳನ್ನು ಸಾಗಿಸಲು ಇರುವ ಇಳಿಜಾರಾದ ರಸ್ತೆ.




೪೦. ಭಸ್ಮಾಂಗಿ ಕೋಟೆ : ಬೆಟ್ಟದ ಮಧ್ಯಭಾಗದಲ್ಲಿರುವ
[illegible]




೪೧. ಭಸ್ಮಾಂಗಿ ಕೋಟೆ : ಕೋಟೆ ನಿರ್ಮಿಸಿದ ತಂದೆ-ಮಗನ ಪಾದಗಳು.



೪೨. ದೇವರಾಯನ ದುರ್ಗದ ಕೋಟೆ : ಯೋಗ ನರಸಿಂಹಸ್ವಾಮಿ ದೇವಾಲಯದ ಮುಂದಿರುವ ದೊಣೆ. ಇದರಲ್ಲಿ ಹಲವಾರು ಆಚರಣೆಗಳು ನಡೆಯುತ್ತವೆ.



೪೩. ದೇವರಾಯನ ದುರ್ಗದ ಕೋಟೆ : ಭೋಗ ನರಸಿಂಹಸ್ವಾಮಿ ದೇವಸ್ಥಾನದ ಗೋಪುರಗಳು



೪೪. ದೇವರಾಯನ ದುರ್ಗದ ಕೋಟೆ : ಕಲ್ಯಾಣೋತ್ಸವದಲ್ಲಿ ಕುಲದೇವರ ಪೂಜೆ ನಡೆಯುವ ಸಂದರ್ಭ




೪೫. ದೇವರಾಯನ ದುರ್ಗದ ಕೋಟೆ :

ಕಲ್ಯಾಣೋತ್ಸವದಲ್ಲಿ ಬೆಟ್ಟದ ಮೇಲ್ಭಾಗದಲ್ಲಿನ ಮುಖ್ಯದ್ವಾರದಲ್ಲಿ ಬೀರಕ್ಕಿ ಬೀರುವುದು.




೪೬. ದೇವಾರಾಯನ ದುರ್ಗದ :


ಲಕ್ಷ್ಮೀನರಸಿಂಹಸ್ವಾಮಿಯ ಕಲ್ಯಾಣೋತ್ಸವದ ಸಂದರ್ಭ.



೪೭. ಯಲ್ಲಪ್ಪನಾಯಕನ ಹೊಸಕೋಟೆ: ದಸರಾ ಮೆರವಣಿಗೆಯಲ್ಲಿ ಪಾಳೆಯಗಾರ ವಂಶಸ್ಥರಾದ ಯಲ್ಲಪ್ಪನಾಯಕರನ್ನು ಆಯುಧಗಳಿಡಿದು ಕರೆದೊಯ್ಯುತ್ತಿರುವುದು.



೪೮. ಯಲ್ಲಪ್ಪನಾಯಕನ ಹೊಸಕೋಟೆ : ರಾಜಾ ಯಲ್ಲಪ್ಪನಾಯಕರ ಸಮಾಧಿಸ್ಥಳದ ಗುಡಿ



೪೯. ಯಲ್ಲಪ್ಪನಾಯಕನ ಹೊಸಕೋಟೆ : ಯಲ್ಲಪ್ಪನಾಯಕ ವಂಶಸ್ಥರ ಸಮಾಧಿಗಳು.